" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

# ಕರ್ನಾಟಕ ವಿಧಾನ ಪರಿಷತ್ತು

## ವಿಷಯಾನುಕ್ರಮಣಿಕೆ

ದಿನಾಂಕ:11ನೇ ಅಕ್ಟೋಬರ್, 2019
ಶುಕ್ರವಾರ

01. ನೂತನ ಸಚಿವರ ಪರಿಚಯ

02. ಸಭೆಯ ಮುಂದಿಡಲಾದ ಕಾಗದ ಪತ್ರಗಳು.

03. ವಿತ್ತೀಯ ಕಾರ್ಯಕಲಾಪ

04. ವರದಿಗಳನ್ನೊಪ್ಪಿಸುವುದು

05. ನಿಯಮ 68ರ ಮೇರೆಗೆ ಸಾರ್ವಜನಿಕ ಮಹತ್ವದ ವಿಷಯದ ಮೇಲಿನ ಮುಂದುವರೆದ ಚರ್ಚೆ.

ರಾಜ್ಯದಲ್ಲಿ ಭಾರಿ ಮಳೆ ಮತ್ತು ಪ್ರವಾಹದಿಂದಾಗಿ ಉಂಟಾಗಿರುವ ಅನಾಹುತದಿಂದ ಸಂಕಷ್ಟಕ್ಕೀಡಾಗಿರುವ ಜನರಿಗೆ ಪರಿಹಾರ ಒದಗಿಸುವಲ್ಲಿ ಸರ್ಕಾರವು ವಿಫಲವಾಗಿರುವ ಬಗ್ಗೆ.

ಶ್ರೀ ಪ್ರಕಾಶ್ ಕೆ.ರಾಥೋಡ್
ಶ್ರೀ ಎಸ್.ಆರ್.ಪಾಟೀಲ್ (ವಿರೋಧ ಪಕ್ಷದ ನಾಯಕರು)
ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾ ನಾಯಕರು)

06. ವಿಶೇಷ ಪ್ರಸ್ತಾವಗಳು

ಅ) ಪದವಿಪೂರ್ವ ಕಾಲೇಜುಗಳ ಉಪನ್ಯಾಸಕರ ಹುದ್ದೆಗಾಗಿ ನಡೆದ ನೇಮಕಾತಿ ಪರೀಕ್ಷೆಗಾಗಿ ಸಿದ್ಧಪಡಿಸಿದ ಕೀ ಉತ್ತರಗಳಲ್ಲಿ ತಪ್ಪುಗಳು ಬಂದಿರುವ ಬಗ್ಗೆ.

ಶ್ರೀ ಕೆ.ಟಿ.ಶ್ರೀಕಂಠೇಗೌಡ
ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾ ನಾಯಕರು)

ಆ) ಪಹಣಿಯಲ್ಲಿ ನಮೂದಿಸಿದ ಬೆಳೆಯನ್ನು ಖರೀದಿಸುವ ಸರ್ಕಾರದ ನಿಯಮಗಳ ಕುರಿತು.

ಶ್ರೀ ವಿಜಯಸಿಂಗ್
ಶ್ರೀ ಎಸ್.ಆರ್.ಪಾಟೀಲ್ (ವಿರೋಧ ಪಕ್ಷದ ನಾಯಕರು)
ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾ ನಾಯಕರು)

ಇ) ಉತ್ತರ ಕನ್ನಡ ಜಿಲ್ಲೆ 2006 ನಂತರ ನೇಮಕಗೊಂಡ ಶಾಲಾ ಶಿಕ್ಷಕರಿಗೆ ಮತ್ತು ಶಿಕ್ಷಕೇತರ ಸಿಬ್ಬಂದಿಗಳಿಗೆ ಎನ್.ಪಿ.ಎಸ್. ಪಿಂಚಣಿ ಯೋಜನೆ ಜಾರಿಗೊಳಿಸುವ ಬಗ್ಗೆ.

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಶ್ರೀ ಎಸ್.ವ್ಹಿ.ಸಂಕನೂರ
ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾ ನಾಯಕರು)

ಈ) ಇತ್ತೀಚೆಗೆ ಅಸಂಖ್ಯಾತ ಜನರು ಸೈಬರ್ ಮೂಲದ ಹಣ ಕಳವು ಮತ್ತು ವಂಚನೆಗೆ ಒಳಗಾಗುತ್ತಿರುವ ಬಗ್ಗೆ.

ಶ್ರೀ ಅಪ್ಪಾಜಿಗೌಡ
ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾ ನಾಯಕರು)

07. ಪ್ರಕಟಣೆಗಳು

08. ನಿಯಮ 68ರ ಮೇರೆಗೆ ಸಾರ್ವಜನಿಕ ಮಹತ್ವದ ವಿಷಯದ ಮೇಲಿನ ಮುಂದುವರೆದ ಚರ್ಚೆ.

ರಾಜ್ಯದಲ್ಲಿ ಭಾರಿ ಮಳೆ ಮತ್ತು ಪ್ರವಾಹದಿಂದಾಗಿ ಉಂಟಾಗಿರುವ ಅನಾಹುತದಿಂದ ಸಂಕಷ್ಟಕ್ಕೀಡಾಗಿರುವ ಜನರಿಗೆ ಪರಿಹಾರ ಒದಗಿಸುವಲ್ಲಿ ಸರ್ಕಾರವು ವಿಫಲವಾಗಿರುವ ಬಗ್ಗೆ.

ಶ್ರೀ ಎನ್.ಎಸ್.ಬೋಸ್‌ರಾಜು
ಶ್ರೀ ಕೆ.ಟಿ.ಶ್ರೀಕಂಠೇಗೌಡ
ಶ್ರೀ ಸಿ.ಟಿ.ರವಿ (ಪ್ರವಾಸೋದ್ಯಮ ಸಚಿವರು)
ಶ್ರೀ ಎಂ.ಪಿ.ಸುನೀಲ್ ಸುಬ್ರಮಣಿ
ಶ್ರೀ ಬಸವರಾಜ ಪಾಟೀಲ್ ಇಟಗಿ
ಶ್ರೀ ಆರ್.ಅಶೋಕ್(ಕಂದಾಯ ಸಚಿವರು)
ಶ್ರೀ ಕವಟಗಿಮಠ ಮಹಂತೇಶ ಮಲ್ಲಿಕಾರ್ಜುನ
ಶ್ರೀ ಸಿ.ಸಿ.ಪಾಟೀಲ್(ಗಣಿ ಮತ್ತು ಭೂ ವಿಜ್ಞಾನ ಸಚಿವರು)
ಶ್ರೀ ಆರ್. ಬಿ.ತಿಮ್ಮಾಪೂರ
ಶ್ರೀ ಎನ್. ರವಿಕುಮಾರ್
ಡಾ॥ಜಯಮಾಲ
ಶ್ರೀ ಕೆ.ಎ.ತಿಪ್ಪೇಸ್ವಾಮಿ

09. ವಿಶೇಷ ಪ್ರಸ್ತಾವನೆ ಅಡಿಯಲ್ಲಿ ಪ್ರಸ್ತಾಪಿಸಲ್ಪಟ್ಟ ವಿಷಯಕ್ಕೆ ಸಚಿವರ ಲಿಖಿತ ಹೇಳಿಕೆ.

**ಅ) ವಿಶ್ವ ಜಾಗತಿಕ ವಸತಿ ರಹಿತರ ದಿನಾಚರಣೆ ಅಂಗವಾಗಿ ವಸತಿಗೃಹ ಮತ್ತು ಪ್ರಯಾಣಿಕರ ತಂಗುದಾಣ ನಿರ್ಮಾಣ ಕುರಿತು.**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು)**

**ಆ) ಮಂಗಳೂರು ಮಹಾನಗರ ಪಾಲಿಕೆ ಚುನಾಯಿತ ಆಡಳಿತ ಮಂಡಳಿ ಮುಕ್ತಾಯಗೊಂಡಿರುವ ಹಿನ್ನಲೆಯಲ್ಲಿ ಅಭಿವೃದ್ಧಿ ಕಾಮಗಾರಿಗಳು ಸ್ಥಗಿತಗೊಂಡಿರುವ ಬಗ್ಗೆ.**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು)**

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**10. ಪ್ರಕಟಣೆಗಳು**

**11. ನಿಯಮ 68ರ ಮೇರೆಗೆ ಸಾರ್ವಜನಿಕ ಮಹತ್ವದ ವಿಷಯದ ಮೇಲಿನ ಮುಂದುವರೆದ ಚರ್ಚೆ.**

**ರಾಜ್ಯದಲ್ಲಿ ಭಾರಿ ಮಳೆ ಮತ್ತು ಪ್ರವಾಹದಿಂದಾಗಿ ಉಂಟಾಗಿರುವ ಅನಾಹುತದಿಂದ ಸಂಕಷ್ಟಕ್ಕೀಡಾಗಿರುವ ಜನರಿಗೆ ಪರಿಹಾರ ಒದಗಿಸುವಲ್ಲಿ ಸರ್ಕಾರವು ವಿಫಲವಾಗಿರುವ ಬಗ್ಗೆ.**

ಶ್ರೀ ತಿಪ್ಪಣ್ಣ ಕಮಕನೂರ  
ಶ್ರೀ ಮರಿತಿಬ್ಬೇಗೌಡ  
ಶ್ರೀ ಘೋಟ್ನೇಕರ್ ಶ್ರೀಕಾಂತ ಲಕ್ಷಣ  
ಶ್ರೀ ಎಂ.ಕೆ.ಪ್ರಾಣೇಶ್  
ಶ್ರೀ ಹೆಚ್.ಎಂ.ರಮೇಶ್ ಗೌಡ

**<u>12. ವಿಶೇಷ ಪ್ರಸ್ತಾವದ ಅಡಿಯಲ್ಲಿ ಪ್ರಸ್ತಾಪಿಸಲ್ಪಟ್ಟ ವಿಷಯಕ್ಕೆ ಸಂಬಂಧಪಟ್ಟ ಸಚಿವರ ಹೇಳಿಕೆ</u>**

**ಮಂಗಳೂರು ಮಹಾನಗರ ಪಾಲಿಕೆಗೆ ಚುನಾವಣೆ ನಡೆಸುವ ಬಗ್ಗೆ.**

ಶ್ರೀ ಆರ್.ಅಶೋಕ್ (ಕಂದಾಯ ಸಚಿವರು)

**13. ನಿಯಮ 68ರ ಮೇರೆಗೆ ಸಾರ್ವಜನಿಕ ಮಹತ್ವದ ವಿಷಯದ ಮೇಲಿನ ಮುಂದುವರೆದ ಚರ್ಚೆ.**

**ರಾಜ್ಯದಲ್ಲಿ ಭಾರಿ ಮಳೆ ಮತ್ತು ಪ್ರವಾಹದಿಂದಾಗಿ ಉಂಟಾಗಿರುವ ಅನಾಹುತದಿಂದ ಸಂಕಷ್ಟಕ್ಕೀಡಾಗಿರುವ ಜನರಿಗೆ ಪರಿಹಾರ ಒದಗಿಸುವಲ್ಲಿ ಸರ್ಕಾರವು ವಿಫಲವಾಗಿರುವ ಬಗ್ಗೆ.**

ಶ್ರೀಮತಿ ವೀಣಾ ಅಚ್ಚಯ್ಯ  
ಶ್ರೀ ಎಂ.ಅಪ್ಪಾಜಿಗೌಡ  
ಶ್ರೀಮತಿ ಜಯಮ್ಮ  
ಶ್ರೀ ಅಲ್ಲಂ ವೀರಭದ್ರಪ್ಪ  
ಶ್ರೀ ನಿರಾಣಿ ಹಣಮಂತ್ ರುದ್ರಪ್ಪ  
ಶ್ರೀ ಎಂ.ನಾರಾಯಣಸ್ವಾಮಿ  
ಶ್ರೀ ಪಿ.ಆರ್.ರಮೇಶ್  
ಶ್ರೀ ಯು.ಬಿ.ವೆಂಕಟೇಶ್  
ಶ್ರೀ ಕೆ.ಸಿ.ಕೊಂಡಯ್ಯ  
ಶ್ರೀ ಅರವಿಂದ ಕುಮಾರ್ ಅರಳಿ  
ಶ್ರೀ ಆರ್.ಧರ್ಮಸೇನ  
ಶ್ರೀ ಎಂ.ಸಿ.ವೇಣುಗೋಪಾಲ್

“ ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು ”

**ಕರ್ನಾಟಕ ವಿಧಾನ ಪರಿಷತ್ತು**

**ಶುಕ್ರವಾರ 11ನೇ ಅಕ್ಟೋಬರ್, 2019**

**ಸದನವು ವಿಧಾನಸೌಧದಲ್ಲಿರುವ ವಿಧಾನ ಪರಿಷತ್ತಿನ ಸಭಾಂಗಣದಲ್ಲಿ**
**ಪೂರ್ವಾಹ್ನ: 11 ಗಂಟೆ 03 ನಿಮಿಷಕ್ಕೆ ಸಮಾವೇಶಗೊಂಡಿತು.**

**ಸಭಾಪತಿ (ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ) ಯವರು**
**ಪೀಠದಲ್ಲಿ ಉಪಸ್ಥಿತರಿದ್ದರು.**

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

(138) 11.10.2019-11.10-LL-RN

**1.ನೂತನ ಸಚಿವರ ಪರಿಚಯ**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು):–** ಮಾನ್ಯ ಸಭಾಪತಿಯವರೇ, ನಮ್ಮ ಸಚಿವ ಸಂಪುಟದ ಸಚಿವರಾದ ಶ್ರೀ ಸಿ.ಟಿ. ರವಿ(ಪ್ರವಾಸೋದ್ಯಮ, ಕನ್ನಡ ಮತ್ತು ಸಂಸ್ಕೃತಿ ಹಾಗೂ ಸಕ್ಕರೆ ಸಚಿವರು) ಯವರನ್ನು ಸದನಕ್ಕೆ ಪರಿಚಯಿಸುತ್ತಿದ್ದೇನೆ.

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"**

## 2. ಸಭೆಯ ಮುಂದಿಡಲಾದ ಕಾಗದ ಪತ್ರಗಳು

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾ ನಾಯಕರು)(ಮುಖ್ಯಮಂತ್ರಿಗಳ ಪರವಾಗಿ):–** ಮಾನ್ಯ ಸಭಾಪತಿಯವರೇ,

ಅ) ಭಾರತ ಸಂವಿಧಾನದ 151(2)ನೇ ಅನುಚ್ಛೇದದ ಮೇರೆಗೆ, ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರು 31ನೇ ಮಾರ್ಚ್, 2018ಕ್ಕೆ ಕೊನೆಗೊಂಡ ವರ್ಷಕ್ಕೆ ನೀಡಿರುವ ಪಂಚಾಯತ್ ರಾಜ್ ಸಂಸ್ಥೆಗಳ ಮತ್ತು ನಗರ ಸ್ಥಳೀಯ ಸಂಸ್ಥೆಗಳ ಮೇಲಿನ ವಾರ್ಷಿಕ ತಾಂತ್ರಿಕ ಪರಿಶೀಲನಾ ವರದಿಯನ್ನು,

ಆ) ಭಾರತ ಸಂವಿಧಾನದ 151(2) ಅನುಚ್ಛೇದದ ಮೇರೆಗೆ, ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರು 31ನೇ ಮಾರ್ಚ್, 2018ಕ್ಕೆ ಕೊನೆಗೊಂಡ ವರ್ಷಕ್ಕೆ ನೀಡಿರುವ ರಾಜ್ಯ ಸರ್ಕಾರದ ಹಣಕಾಸಿನ ವ್ಯವಹಾರಗಳ ಲೆಕ್ಕಪರಿಶೋಧನಾ(ಸಂಖ್ಯೆ–2) ವರದಿಯನ್ನು,

ಇ) ಭಾರತ ಸಂವಿಧಾನದ 151(2)ನೇ ಅನುಚ್ಛೇದದ ಮೇರೆಗೆ, ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರು 31ನೇ ಮಾರ್ಚ್, 2018ಕ್ಕೆ ಕೊನೆಗೊಂಡ ವರ್ಷಕ್ಕೆ ನೀಡಿರುವ ಸಾಮಾನ್ಯ ಹಾಗೂ ಸಾಮಾಜಿಕ ವಲಯದ (ಸಂಖ್ಯೆ–4) ವರದಿಯನ್ನು ಸಭೆಯ ಮುಂದಿಡುತ್ತಿದ್ದೇನೆ.

**ಸಭಾಪತಿಯವರು:–** ಮಂಡಿಸಲಾಯಿತು.

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

## 3. ವಿತ್ತೀಯ ಕಾರ್ಯಕಲಾಪ

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾ ನಾಯಕರು)(ಮುಖ್ಯಮಂತ್ರಿಗಳ ಪರವಾಗಿ):–** ಮಾನ್ಯ ಸಭಾಪತಿಯವರೇ, 2019–20ನೇ ಸಾಲಿನ ರಾಜ್ಯ ಹಣಕಾಸಿನ ಮಧ್ಯವಾರ್ಷಿಕ ಪರಿಶೀಲನಾ ವರದಿಯನ್ನು ಒಪ್ಪಿಸುತ್ತಿದ್ದೇನೆ.

**ಸಭಾಪತಿಯವರು:–** ಮಂಡಿಸಲಾಯಿತು.

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

## 4. ವರದಿಗಳನ್ನೊಪ್ಪಿಸುವುದು

**ಅ) ಶ್ರೀಮತಿ ಎಸ್. ವೀಣಾ ಅಚ್ಚಯ್ಯ(ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, 2018–19ನೇ ಸಾಲಿನ ಕರ್ನಾಟಕ ವಿಧಾನ ಮಂಡಲದ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಮಿತಿಯ ಸದಸ್ಯೆಯಾದ ನಾನು ಸಮಿತಿಯ 35ನೇ ವರದಿಯನ್ನು ಸಭೆಯ ಮುಂದೆ ಮಂಡಿಸುತ್ತಿದ್ದೇನೆ.

**ಆ) ಶ್ರೀ ಎನ್.ಎಸ್. ಭೋಸರಾಜು(ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ವಿಧಾನ ಮಂಡಲದ ಅಧೀನ ಶಾಸನ ರಚನಾ ಸಮಿತಿಯ ಸದಸ್ಯನಾದ ನಾನು 2018–19ನೇ ಸಾಲಿನ ಸಮಿತಿಯ 47ನೇ ವರದಿ(42ನೇ ವರದಿಯ ಅನುಸರಣಾ ವರದಿ)ಯನ್ನು ಸಭೆಯ ಮುಂದೆ ಮಂಡಿಸುತ್ತಿದ್ದೇನೆ.

**ಸಭಾಪತಿಯವರು:–** ಮಂಡಿಸಲಾಯಿತು.

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಸಭಾಪತಿಯವರು:–** ಈಗ ನಿಯಮ 68ರಡಿ ಚರ್ಚೆ. ಮೊದಲನೆಯದಾಗಿ, ಶ್ರೀ ಪ್ರಕಾಶ್ ಕೆ. ರಾಥೋಡ್‌ರವರದು.

**ಶ್ರೀ ಎಸ್.ವ್ಹಿ. ಸಂಕನೂರ:–** ಮಾನ್ಯ ಸಭಾಪತಿಯವರೇ, ನಿಯಮ 330 (ಎ)...

**ಶ್ರೀ ಕೆ.ಟಿ. ಶ್ರೀಕಂಠೇಗೌಡ:–** ಮಾನ್ಯ ಸಭಾಪತಿಯವರೇ, ನಿಯಮ 330(ಎ) ಶೂನ್ಯ ವೇಳೆ...

**ಸಭಾಪತಿಯವರು:–** ಕಡತ ಬಂದಿರುವುದಿಲ್ಲ. ಆದುದರಿಂದ, ಕಡತ ಬಂದ ನಂತರ ಅದಕ್ಕೆ ಅವಕಾಶ ಕೊಡುತ್ತೇನೆ.

**ಶ್ರೀ ಪ್ರಕಾಶ್ ಕೆ. ರಾಥೋಡ್:–** ಮಾನ್ಯ ಸಭಾಪತಿಯವರೇ...

**ಶ್ರೀ ಎಸ್.ಆರ್. ಪಾಟೀಲ್:–** ಮಾನ್ಯ ಸಭಾಪತಿಯವರೇ, ಇದನ್ನು ಮೊದಲು ಮುಗಿಸಿಬಿಡೋಣ. Special Mentions 2–3 ಇದ್ದು ಅದನ್ನು ನಂತರ ತಾವು ತೆಗೆದುಕೊಂಡರೆ ನಮ್ಮ ಅಭ್ಯಂತರವೇನೂ ಇಲ್ಲ.

**ಸಭಾಪತಿಯವರು:–** ಅದಕ್ಕಾಗಿಯೇ ಮೊದಲು ಈ ವಿಷಯವನ್ನು ತೆಗೆದುಕೊಳ್ಳೋಣ.

**ಶ್ರೀ ಪ್ರಕಾಶ್ ಕೆ. ರಾಥೋಡ್:–** ಮಾನ್ಯ ಸಭಾಪತಿಯವರೇ, ನಿಯಮ 68 ರಡಿಯಲ್ಲಿ ಚರ್ಚೆಗೆ ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ಧನ್ಯವಾದಗಳನ್ನು ತಿಳಿಸುತ್ತಾ, ಮೊಟ್ಟಮೊದಲನೆಯದಾಗಿ, ಸಂವಿಧಾನದ ಆರ್ಟಿಕಲ್ 19 ರ ಪ್ರಕಾರ 'Freedom of Speech and Expression' ಒಂದು ಗಮನದಲ್ಲಿಟ್ಟುಕೊಂಡು ತಾವು, ನಮ್ಮ ಮಾಧ್ಯಮ ಸ್ನೇಹಿತರಿಗೆ ಸದನದ ಕಲಾಪವನ್ನು ಚಿತ್ರೀಕರಿಸಲು ಅವಕಾಶ ಮಾಡಿಕೊಟ್ಟಿರುವುದಕ್ಕೆ ತಮಗೆ ನಾನು ಧನ್ಯವಾದಗಳನ್ನು ಅರ್ಪಿಸುತ್ತೇನೆ. ಆದರೆ, ಕೆಳಮನೆಯಲ್ಲಿ ಮಾನ್ಯ ಸ್ಪೀಕರ್‌ರವರು ಮಾಧ್ಯಮದವರಿಗೆ ಯಾವ ನಿರ್ಬಂಧವನ್ನು ಮಾಡಿದ್ದಾರೆ, ಅವರಿಗೆ ಜ್ಞಾನೋದಯವಾಗಿ ಈ ಕಲಾಪಗಳನ್ನು ನೇರವಾಗಿ ದೃಶ್ಯ ಮಾಧ್ಯಮದಿಂದ ಕೊಡುವುದಕ್ಕೆ ಅವಕಾಶ ಮಾಡಿಕೊಡಲಿ ಎಂದು ತಮ್ಮ ಮೂಲಕ ಪ್ರಾರ್ಥನೆ ಮಾಡುತ್ತೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾ ನಾಯಕರು):–** ಮಾನ್ಯ ಸಭಾಪತಿಯವರೇ, ಕೆಳಮನೆಯ ಸ್ಪೀಕರ್‌ರವರ ವಿಚಾರವನ್ನು ದಯಮಾಡಿ ಇಲ್ಲಿ ಉಲ್ಲೇಖ ಮಾಡಬಾರದೆಂದು ತಮ್ಮಲ್ಲಿ ವಿನಂತಿ ಮಾಡುತ್ತೇನೆ.

**ಶ್ರೀ ಪ್ರಕಾಶ್ ಕೆ. ರಾಥೋಡ್:–** ಮಾನ್ಯ ಸಭಾಪತಿಯವರೇ, ನಾನು ಕೇವಲ ವಿನಂತಿ ಮಾಡುತ್ತಿದ್ದೇನಷ್ಟೇ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ವಿನಂತಿ ಮಾಡಿದರೂ ಸಹ ಅದು ಉಲ್ಲೇಖ ಅಗತ್ಯವಿಲ್ಲವೆಂದು ಅನ್ನಿಸುತ್ತದೆ.

**ಶ್ರೀ ಪ್ರಕಾಶ್ ಕೆ. ರಾಥೋಡ್:–** ಮಾನ್ಯ ಸಭಾಪತಿಯವರೇ, ನಾನು...

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ಕೆಳಮನೆಯಲ್ಲಿ ಯಾವ ನಿರ್ಧಾರ ಮಾಡಿದ್ದಾರೆ ಅದನ್ನು ಕೆಳಮನೆಯವರು ನಿಭಾಯಿಸುತ್ತಾರೆ. ಮೇಲ್ಮನೆಯಲ್ಲಿ ಮಾಡಿರುವಂತಹ ನಿರ್ಧಾರಗಳನ್ನು

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ನಾವು ನಿಭಾಯಿಸುತ್ತೇವೆ. ಆದುದರಿಂದ, ವಿನಾಕಾರಣ ಕೆಳಮನೆಯ ನಿರ್ಧಾರಗಳನ್ನು ಮೇಲ್ಮನೆಯಲ್ಲಿ ಪ್ರಸ್ತಾಪ ಮಾಡುವುದು ಸರಿಯಲ್ಲ.

**ಶ್ರೀ ಪ್ರಕಾಶ್ ಕೆ. ರಾಥೋಡ್:-** ಮಾನ್ಯ ಸಭಾಪತಿಯವರೇ, ನಾನು ಅವರಿಗೆ ವಿನಂತಿ ಮಾಡುತ್ತಿದ್ದೇನೆ, ಮಾನ್ಯ ಸಭಾ ನಾಯಕರ ಪರವಾಗಿಯೂ ಸಹ ನಾನು ವಿನಂತಿ ಮಾಡುತ್ತಿದ್ದೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ವಿನಂತಿ ಮಾಡಿರಬಹುದು..

**(ಗೊಂದಲ)**

**ಶ್ರೀ ಐವನ್ ಡಿ'ಸೋಜಾ:-** ಮಾನ್ಯ ಸಭಾಪತಿಯವರೇ, ಈ ರೀತಿಯ...

**(ಗೊಂದಲ)**

**ಶ್ರೀ ಎಸ್.ಆರ್. ಪಾಟೀಲ್:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಕೆಳಮನೆಯಲ್ಲಿಯೂ ಸಹ ಇದೇ ರೀತಿ ಮಾಡಿದರೆ ಒಳ್ಳೆಯದೆಂದು ತಮ್ಮ ವಿಚಾರವನ್ನು ಸಭಾಪತಿಯವರಿಗೆ ಹೇಳಿದ್ದಾರಷ್ಟೇ.

**(ಗೊಂದಲ)**

**ಶ್ರೀ ಐವನ್ ಡಿ'ಸೋಜಾ:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಹೇಳಿರುವುದರಲ್ಲಿ ತಪ್ಪೇನಿದೆ?

**(ಗೊಂದಲ)**

**ಶ್ರೀ ಎಸ್.ಆರ್. ಪಾಟೀಲ್:-** ಮಾನ್ಯ ಸಭಾಪತಿಯವರೇ, ಕೆಳಮನೆಯ ನಿರ್ಧಾರಗಳನ್ನು ಮೇಲ್ಮನೆಯಲ್ಲಿ ಪ್ರಸ್ತಾಪ ಮಾಡದೇ ಇರುವುದು ಒಳ್ಳೆಯದೆಂದು ಮಾನ್ಯ ಸಭಾ ನಾಯಕರು ಹೇಳುತ್ತಿದ್ದಾರೆ. ಆ ರೀತಿ ನಮಗೆ ನಿರ್ಬಂಧ ಹಾಕುವುದಕ್ಕೆ ಆಗುವುದಿಲ್ಲ.

**(ಗೊಂದಲ)**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ಆ ವಿಚಾರವನ್ನು ಕೆಳಮನೆಯವರು ಹೇಳುತ್ತಾರೆ.

**(ಗೊಂದಲ)**

**ಶ್ರೀ ಎಸ್.ಆರ್. ಪಾಟೀಲ್:-** ಮಾನ್ಯ ಸಭಾಪತಿಯವರೇ, ಆರ್ಟಿಕಲ್ 19 ರ ಪ್ರಕಾರ Freedom of Speech and Expression.

**(ಗೊಂದಲ)**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ಕೆಳಮನೆಯ ನಿರ್ಧಾರಗಳನ್ನು ಮೇಲ್ಮನೆಯಲ್ಲಿ ಪ್ರಶ್ನೆ ಮಾಡುವುದಕ್ಕೆ ಅವಕಾಶವಿರುವುದಿಲ್ಲ.

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**(ಗೊಂದಲ)**

**ಶ್ರೀ ಎಸ್.ಆರ್. ಪಾಟೀಲ್:–** ಮಾನ್ಯ ಸಭಾಪತಿಯವರೇ, ಮಾನ್ಯ ಸಭಾಧ್ಯಕ್ಷರ ಹೆಸರು ಈ ಸದನದಲ್ಲಿ ಉಲ್ಲೇಖ ಮಾಡಬಾರದೆಂದು ಹೇಳುವುದು ಸರಿ. ಆದರೆ, ಕೆಳಮನೆಯಲ್ಲಿಯೂ ಸಹ ಇದೇ ರೀತಿ...

**(ಗೊಂದಲ)**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ನಾನು ಹೇಳುತ್ತಿರುವುದೇನೆಂದರೆ, ಕೆಳಮನೆಯ ಸ್ಪೀಕರ್‌ರವರ ನಿರ್ಧಾರಗಳನ್ನು ಮೇಲ್ಮನೆಯಲ್ಲಿ ಪ್ರಶ್ನೆ ಮಾಡುವಂತಹ ಅಧಿಕಾರವಿರುವುದಿಲ್ಲ.

**(ಗೊಂದಲ)**

**ಶ್ರೀ ಎಸ್.ಆರ್. ಪಾಟೀಲ್:–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಆ ನಿರ್ಧಾರವನ್ನು ಪ್ರಶ್ನೆ ಮಾಡಿರುವುದಿಲ್ಲ. ಅದು suggestions ಅಷ್ಟೇ.

**(ಗೊಂದಲ)**

**ಶ್ರೀ ಪ್ರಕಾಶ್ ಕೆ. ರಾಥೋಡ್:–** ಮಾನ್ಯ ಸಭಾಪತಿಯವರೇ, ನಾನು ಸ್ಪೀಕರ್‌ರವರ ನಿರ್ಧಾರವನ್ನು ಪ್ರಶ್ನೆ ಮಾಡಿರುವುದಿಲ್ಲ.

**ಶ್ರೀ ಎಸ್.ಆರ್. ಪಾಟೀಲ್:–** ಮಾನ್ಯ ಸಭಾಪತಿಯವರೇ, Hon'ble Member has not questioned. It is only a suggestion. Every Member has got inherent right. ನಾನು ಸಂವಿಧಾನವನ್ನು ಅಧ್ಯಯನ ಮಾಡಿದ್ದೇನೆ. ಸುಮಾರು 22 ವರ್ಷಗಳಾಯಿತು ನಾನು ಈ ಸದನಕ್ಕೆ ಬಂದು. ಸ್ಪೀಕರ್ ಬಗ್ಗೆ ಅಲ್ಲದೇ, ಕೆಳಮನೆಯಲ್ಲಿಯೂ ಸಹ ಈ ಸತ್ಸಂಪ್ರದಾಯ ಅನುಸರಿಸಿದರೆ ಒಳ್ಳೆಯದೆಂದು ಹೇಳಿದ್ದಾರಷ್ಟೇ.

**(ಗೊಂದಲ)**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಕೆಳಮನೆಯವರು...

**(ಗೊಂದಲ)**

**(ಮುಂದುವರೆದಿದೆ...)**

(138)11.10.2019/11.20/ವೈಎಲ್–ವಿಕೆ (ಸಭಾಪತಿಯವರ ಉಪಸ್ಥಿತಿ)

**ಶ್ರೀ ಐವನ್ ಡಿ'ಸೋಜಾ(ನಾಮನಿರ್ದೇಶನ ಹೊಂದಿದವರು):–** ಮಾನ್ಯ ಸಭಾಪತಿಯವರೇ, ಕೋರ್ಟ್‌ನಲ್ಲಿ ನಡೆಯುವಂಥ ಕಲಾಪವನ್ನು ನೇರವಾಗಿ ಪ್ರಸಾರ ಮಾಡುವುದಕ್ಕೆ ಅವಕಾಶ ಇರುವಾಗ. . . .

**ಸಭಾಪತಿಯವರು:–** ಮಾನ್ಯ ಪ್ರಕಾಶ್ ಕೆ.ರಾಥೋಡ್ ತಮ್ಮ ಮಾತು ಮುಗಿಯಿತೇ?

**ಶ್ರೀ ಪ್ರಕಾಶ್ ಕೆ.ರಾಥೋಡ್:–** ಮಾನ್ಯ ಸಭಾಪತಿಯವರೇ, ಇಲ್ಲ.

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಸಭಾಪತಿಯವರು:–** ಹಾಗಾದರೆ, ಮಾತನಾಡಿ.

(ಗೊಂದಲ)

**ಸಭಾಪತಿಯವರು:–** ಮಾನ್ಯ ಪ್ರಕಾಶ್ ಕೆ.ರಾಥೋಡ್ ಮಾತನಾಡಿರುವುದು ಬಿಟ್ಟು, ಬೇರೆ ಯಾವ ಸದಸ್ಯರು ಮಾತನಾಡಿರುವುದು ಕಡತಕ್ಕೆ ಹೋಗುವುದಿಲ್ಲ.

(ಗೊಂದಲ)

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ(ಶಿಕ್ಷಕರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಈ ಹಿಂದೆ ಒಂದು ಸಲ ಕೆಳಮನೆಯಲ್ಲಿದ್ದಂತಹ ಸಭಾಧ್ಯಕ್ಷರು ಮೇಲ್ಮನೆಯನ್ನು ರದ್ದು ಮಾಡಬೇಕೆನ್ನುವ ಮಾತನ್ನು ಹೇಳಿದ್ದರು. ಮಾಧ್ಯಮದವರನ್ನು ಬಿಡುವುದು ಸಂಪ್ರದಾಯ. ಆದ್ದರಿಂದ ಅದನ್ನು ಕೆಳಮನೆಯಲ್ಲಿ ಮಾಡಬೇಕೆಂದು ವಿನಂತಿ ಮಾಡಿಕೊಂಡಿದ್ದಾರೆ.

**ಶ್ರೀ ಶರಣಪ್ಪ ಮಟ್ಟೂರು:–** ಮಾನ್ಯ ಸಭಾಪತಿಯವರೇ, ಒಂದು ನಿಮಿಷ.

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:–** ಮಾನ್ಯ ಸಭಾಪತಿಯವರೇ, ಮಾನ್ಯ ಶರಣಪ್ಪ ಮಟ್ಟೂರುರವರಿಗೆ ನಾನು ಮಾತನಾಡುವುದಕ್ಕೆ ಬಿಡುವುದಕ್ಕೆ ಹೇಳಿ, ಮೊದಲು ನನ್ನ ಮಾತನ್ನು ಮುಗಿಸುತ್ತೇನೆ. ಈಗಾಗಲೇ ಮಾನ್ಯ ಸದಸ್ಯರಾದ ಪ್ರಕಾಶ್ ಕೆ.ರಾಥೋಡ್‌ರವರು ಹೇಳಿದ ಹಾಗೆ ಮಾತಿನಲ್ಲಿ ಹೆಚ್ಚು ಕಡಿಮೆಯಾದರೆ ಅದನ್ನು ಕಡತದಿಂದ ತೆಗೆದು ಹಾಕಿ.

**ಸಭಾಪತಿಯವರು:–** ಆಯಿತು.

(ಗೊಂದಲ)

**ಶ್ರೀ ಶರಣಪ್ಪ ಮಟ್ಟೂರು:–** ಮಾನ್ಯ ಬಸವರಾಜ ಶಿವಲಿಂಗಪ್ಪ ಹೊರಟ್ಟಿಯವರೇ, ಒಂದು ನಿಮಿಷ.

**ಸಭಾಪತಿಯವರು:–** ಯಾವುದೂ ರೆಕಾರ್ಡ್‌ಗೆ ಹೋಗುವುದಿಲ್ಲ.

**ಶ್ರೀ ಶರಣಪ್ಪ ಮಟ್ಟೂರು:–** ಮಾನ್ಯ ಸಭಾಪತಿಯವರೇ, ಬಹಳ ಮುಖ್ಯವಾದ ವಿಷಯ ಇದೆ ಹೇಳುತ್ತೇನೆ.

**ಸಭಾಪತಿಯವರು:–** ಆಗುವುದಿಲ್ಲ. ಮುಖ್ಯವಾದ ವಿಚಾರವೇನು ಇಲ್ಲ.

(ಗೊಂದಲ)

**ಶ್ರೀ ಶರಣಪ್ಪ ಮಟ್ಟೂರು:–** ಮಾನ್ಯ ಸಭಾಪತಿಯವರೇ, ಬಹಳ ಮುಖ್ಯವಾದ ವಿಷಯ. ಮಾನ್ಯ ಬಸವರಾಜ ಶಿವಲಿಂಗಪ್ಪ ಹೊರಟ್ಟಿಯವರು ಮಾತನಾಡುತ್ತಿರುವ ವಿಚಾರ ಬಹಳ ಗಂಭೀರವಾಗಿದೆ.

(ಗೊಂದಲ)

**ಸಭಾಪತಿಯವರು:–** ಕೆಳಮನೆ ವಿಚಾರಗಳನ್ನು ಇಲ್ಲಿ ಚರ್ಚೆ ಮಾಡುವುದಕ್ಕೆ ಆಗುವುದಿಲ್ಲ.

(ಗೊಂದಲ)

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:–** ಮಾನ್ಯ ಶರಣಪ್ಪ ಮಟ್ಟೂರುರವರೇ, ಒಂದು ನಿಮಿಷ. ನಿಮಗೆ ಅವಕಾಶ ನೀಡಿದಾಗ ಮಾತನಾಡಿ. ಮಾನ್ಯ ಸಭಾಪತಿಯವರೇ,...

(ಗೊಂದಲ)

**ಸಭಾಪತಿಯವರು:–** ಆ ವಿಚಾರ ಬಿಡಿ.

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:–** ಮಾನ್ಯ ಸಭಾಪತಿಯವರೇ, ಒಂದು ನಿಮಿಷ. ಮಾತನಾಡಿರುವುದನ್ನು ಬೆಳೆಸುವುದಕ್ಕೆ ಹೋಗುವುದು ಬೇಡ.

**ಸಭಾಪತಿಯವರು:–** ಆಯಿತು.

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:–** ಮಾನ್ಯ ಸಭಾಪತಿಯವರೇ, ಅವರು ಮಾತನಾಡಿದ್ದರಲ್ಲಿ ಸದುದ್ದೇಶ ಇದೆ. ದುರುದ್ದೇಶ ಇಲ್ಲ. ಮಾತನಾಡುವಾಗ ಬಳಕೆಯಲ್ಲಿ ಹೆಚ್ಚು ಕಡಿಮೆ ಆದಾಗ ಆ ಪದವನ್ನು ತೆಗೆಯುವ ಅಧಿಕಾರ ತಮಗೆ ಇರುತ್ತದೆ. ಆಗ ಆ ಪದವನ್ನು ಕಡತದಿಂದ ತೆಗೆಸಿ. ಆದರೆ, ಪ್ರಜಾಪ್ರಭುತ್ವದಲ್ಲಿ ಈ ರೀತಿ...

**ಸಭಾಪತಿಯವರು:–** ಮಾತನಾಡುವುದೆಲ್ಲವನ್ನು ಮಾತನಾಡಿ ನಂತರ ತೆಗೆಯುವುದು ಅಧಿಕಾರವಾಗುವುದಿಲ್ಲ.

(ಗೊಂದಲ)

ಮತ್ತೆ ಇದನ್ನು ಎಳೆಯುವುದಕ್ಕೆ ಹೋಗುವುದು ಬೇಡ. ಆ ವಿಚಾರ ಮುಗಿಯಿತು.

**ಶ್ರೀ ಗೋವಿಂದ ಕಾರಜೋಳ(ಉಪ ಮುಖ್ಯಮಂತ್ರಿ):–** ಮಾನ್ಯ ಸಭಾಪತಿಯವರೇ, ಮಾನ್ಯ ಪ್ರಕಾಶ್ ಕೆ.ರಾಥೋಡ್‌ರವರು ಮಾತನಾಡಿದ ವಿಚಾರದ ಬಗ್ಗೆ ನಮ್ಮ ಅಭ್ಯಂತರವೇನೂ ಇಲ್ಲ. ಆದರೆ, ಅವರು ಕೆಳಮನೆ ಸ್ಪೀಕರ್‌ರವರಿಗೆ ಜ್ಞಾನೋದಯವಾಗಲಿ ಎಂಬ ಮಾತನ್ನು ಹೇಳಿದ್ದಾರೆ. ಅದನ್ನು ದಯವಿಟ್ಟು ಕಡತದಿಂದ ತೆಗೆಸಿ.

**ಸಭಾಪತಿಯವರು:–** ಆಗಲಿ. ನೋಡುತ್ತೇನೆ.

**ಶ್ರೀ ಎಸ್.ಆರ್.ಪಾಟೀಲ್(ವಿರೋಧ ಪಕ್ಷದ ನಾಯಕರು):–** ಮಾನ್ಯ ಸಭಾಪತಿಯವರೇ, ಕೆಳಮನೆಯಲ್ಲಿಯೂ ಈ ಸಂಪ್ರದಾಯ ಮುಂದುವರೆಸಬೇಕು.

(ಗೊಂದಲ)

ಒಂದು ನಿಮಿಷ. ಡಾ|| ಬಾಬಾ ಸಾಹೇಬ್ ಅಂಬೇಡ್ಕರ್‌ರವರು ಮಾಧ್ಯಮದವರಿಗೆ ಸಂವಿಧಾನಬದ್ಧವಾಗಿ ನೀಡಿರುವಂಥ ಮೂಲಭೂತ ಹಕ್ಕನ್ನು ಮೇಲ್ಮನೆಯಲ್ಲಿ ಮೊಟಕುಗೊಳಿಸದೇ ಇರುವುದಕ್ಕೆ ತಮಗೆ ಅಭಿನಂದನೆಯನ್ನು ಸಲ್ಲಿಸುತ್ತೇನೆ. ಅದನ್ನು ತತ್ಸಂಬದ್ಧವಾಗಿ ಕೆಳಮನೆಯಲ್ಲಿಯೂ...

**ಸಭಾಪತಿಯವರು:–** ಸಾಮಾನ್ಯವಾಗಿ ಯಾರೂ ಅದರ ಬಗ್ಗೆ ಸಮರ್ಥನೆ ಮಾಡುವುದಕ್ಕೆ ಈ ಸದನದಲ್ಲಿ ಅವಕಾಶ ಇಲ್ಲ. ಅವರ ವಿಚಾರವನ್ನು ಪ್ರಸ್ತಾಪ ಮಾಡುವಂತಿಲ್ಲ.

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ವಿಚಾರದ ಪ್ರಶ್ನೆ ಅಲ್ಲ. ಒಂದು ನಿಮಿಷ ನಾನು ಹೇಳುವುದನ್ನು ಕೇಳಿ. ಆಗಲಿ, ಸ್ಪೀಕರ್ ಎನ್ನುವಂಥ ಹೆಸರು ಏನು ಬಂದಿದೆ ಅದನ್ನು ನೀವು expunge ಮಾಡಿ. ಅದಕ್ಕೆ ನನ್ನ ಆಕ್ಷೇಪಣೆ ಇಲ್ಲ. ಆದರೆ, ಇಂತಹ ಸತ್ಸಂಪ್ರದಾಯ, ಸಂವಿಧಾನದ ಮೂಲಭೂತ ಹಕ್ಕನ್ನು ಎತ್ತಿ ಹಿಡಿಯುವಂಥ ಕಾರ್ಯ ಕೆಳಮನೆಯಲ್ಲಿಯೂ ಸಹ ನಡೆಯಲಿ ಎಂದು ಮಾನ್ಯ ಸದಸ್ಯರು ಸಲಹೆ ಮಾಡಿದ್ದಾರೆ. So, it should go into the record.

(ಗೊಂದಲ)

**ಸಭಾಪತಿಯವರು:-** ಮಾನ್ಯ ಪ್ರಕಾಶ್ ಕೆ.ರಾಥೋಡ್‌ರವರೇ, ತಮ್ಮ ಮಾತನ್ನು ಮುಂದುವರೆಸಿ.

**ಶ್ರೀ ಪ್ರಕಾಶ್ ಕೆ.ರಾಥೋಡ್:-** ಮಾನ್ಯ ಸಭಾಪತಿಯವರೇ, ನಾನು ಹೇಳುವುದಕ್ಕೆ ಇಚ್ಛಿಸುವುದೇನೆಂದರೆ, ಕಾಂಗ್ರೆಸ್ ಪಕ್ಷದಿಂದ ನಮ್ಮ ಬದ್ಧತೆ ಏನೆಂಬುದನ್ನು ನಾವು ತೋರಿಸಿದ್ದೇವೆ. ಏನೆಂದು ಹೇಳಿದ್ದೇವೆಂದರೆ, ಇವತ್ತಿನ ಯುಗಮಾನದಲ್ಲಿ ಮಾಹಿತಿ ತಂತ್ರಜ್ಞಾನ ಇಷ್ಟೊಂದು ಬೆಳೆದು ನಿಂತಿದೆ.

**ಸಭಾಪತಿಯವರು:-** ನೋಡಿ ಆ ವಿಚಾರ ಬೇಡ.

ಶ್ರೀ ಪ್ರಕಾಶ್ ಕೆ.ರಾಥೋಡ್:- ಮಾನ್ಯ ಸಭಾಪತಿಯವರೇ, ನಾವು ನಮ್ಮ ಬದ್ಧತೆಯನ್ನು ತೋರಿಸಿದ್ದೇವೆ. ತಾವೂ ದಯವಿಟ್ಟು...

**ಸಭಾಪತಿಯವರು:-** ನೋಡಿ ಉತ್ತರ ಕರ್ನಾಟಕದ ಬಗ್ಗೆ ಮಾತನಾಡಲು ಅವಕಾಶ ನೀಡಲಾಗಿದೆ.

(ಗೊಂದಲ)

**ಶ್ರೀ ಲಹರ್ ಸಿಂಗ್ ಸಿರೋಯಾ(ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಮಾನ್ಯ ಪ್ರಕಾಶ್ ಕೆ.ರಾಥೋಡ್‌ರವರೇ, ಒಂದು ನಿಮಿಷ, ಮೊನ್ನೆ ಮಾಧ್ಯಮದವರು

(ಗೊಂದಲ)

**ಸಭಾಪತಿಯವರು:-** ಮಾನ್ಯ ಲಹರ್ ಸಿಂಗ್ ಸಿರೋಯಾರವರೇ ಕುಳಿತುಕೊಳ್ಳಿ. ಮಾನ್ಯ ಪ್ರಕಾಶ್ ಕೆ.ರಾಥೋಡ್‌ರವರೇ ಮಾತನಾಡಿ.

(ಗೊಂದಲ)

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**5. ನಿಯಮ 68ರ ಮೇರೆಗೆ ಮುಂದುವರೆದ ಚರ್ಚೆ**

ರಾಜ್ಯದಲ್ಲಿ ಭಾರಿ ಮಳೆ ಮತ್ತು ಪ್ರವಾಹಗಳಿಂದ ಉಂಟಾಗಿರುವ ಅನಾಹುತದಿಂದ ಸಂಕಷ್ಟಕ್ಕೀಡಾಗಿರುವ ಜನರಿಗೆ ಪರಿಹಾರ ಒದಗಿಸುವುದರಲ್ಲಿ ಸರ್ಕಾರವು ವಿಫಲವಾಗಿರುವ ಬಗ್ಗೆ ಮುಂದುವರೆದ ಚರ್ಚೆ.

**" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"**

**ಶ್ರೀ ಪ್ರಕಾಶ್ ಕೆ.ರಾಥೋಡ್(ನಾಮನಿರ್ದೇಶನ ಹೊಂದಿದವರು):–** ಮಾನ್ಯ ಸಭಾಪತಿಯವರೇ, ಇದರ ಮಧ್ಯೆ ನಿನ್ನೆಯಿಂದ ನಮ್ಮ ಮಾನ್ಯ ಸಭಾನಾಯಕರಾದ ಕೋಟ ಶ್ರೀನಿವಾಸ್ ಪೂಜಾರಿಯವರು, ಮಾನ್ಯ ಐವನ್ ಡಿ'ಸೋಜಾರವರು, ಮಾನ್ಯ ಎಂ.ಕೆ.ಪ್ರಾಣೇಶ್‌ರವರು ನಾವೆಲ್ಲರೂ ಉಂಟಾಗಿರುವಂತಹ ಪ್ರವಾಹದ ಬಗ್ಗೆ ಸಾಕಷ್ಟು ಚರ್ಚೆ ಮಾಡಿದ್ದೇವೆ. ಈ ಪ್ರವಾಹದ ವಿಚಾರವಾಗಿ ನಿನ್ನೆಯಿಂದ ನಾವೆಲ್ಲರೂ ಸರ್ಕಾರಕ್ಕೆ ಏನು ಸಲಹೆಯನ್ನು ನೀಡಬಹುದು ಎನ್ನುವುದನ್ನು ಚರ್ಚೆ ಮಾಡುತ್ತಿದ್ದೇವೆ. ನಿನ್ನೆ ರಾತ್ರಿಯಿಂದ ಇವತ್ತಿನವರೆಗೂ ಉತ್ತರ ಕರ್ನಾಟಕದಲ್ಲಿ ಅಕಾಲಿಕ ಮಳೆ ಆಗಿದೆ. ವಿಶೇಷವಾಗಿ ಸಿಡಿಲು ಬಡಿದು ನಾಲ್ಕು ಜನರ ದುರ್ಮರಣವಾಗಿದೆ. ಕುರಿ ಕಾಯುತ್ತಿದ್ದ ಬಸಪ್ಪ ಹಡಗಲ್, ಕಡುಬೂರು ಗ್ರಾಮದ ಸಿದ್ದಪ್ಪ ನರಿಮೋಳಿ ಮತ್ತು ಮಂಜುನಾಥ್ ಗುರಪ್ಪ ಎಂಬುವವರು ನಿನ್ನೆ ರಾತ್ರಿಯ ಧಾರಾಕಾರದ ಮಳೆಯಿಂದ ಸಿಡಿಲು ಬಡಿದು ಮರಣ ಹೊಂದಿದ್ದಾರೆ. ಅದರ ಜೊತೆಗೆ 25 ಕುರಿಗಳು ಸಹ ಸತ್ತಿವೆ. ನಾನು ತಮ್ಮ ಮೂಲಕ ಸರ್ಕಾರಕ್ಕೆ ಹೇಳುವುದೇನೆಂದರೆ, ಪ್ರವಾಹದ ಬಗ್ಗೆ ಚರ್ಚೆ ಮಾಡುತ್ತಿದ್ದೇವೆ. ಉತ್ತರ ಕರ್ನಾಟಕದ ಸಾಕಷ್ಟು ಜಿಲ್ಲೆಗಳಲ್ಲಿ ಮಳೆ ಬರುತ್ತಿರುವುದನ್ನು ನೋಡುತ್ತಿದ್ದೇವೆ. ಗುಲ್ಬರ್ಗಾ, ರಾಯಚೂರು, ಹಾವೇರಿ, ಬೆಳಗಾವಿ ಜಿಲ್ಲೆಗಳಲ್ಲಿ ಇವತ್ತಿಗೂ ಮಳೆಯಾಗುತ್ತಿದ್ದು, ಸರ್ಕಾರದ ಜೊತೆ ನಾವು ಚರ್ಚೆ ಮಾಡುತ್ತಿದ್ದೇವೆ. ನಮ್ಮ ಬೇಡಿಕೆಗಳು ಸಹ ಸರ್ಕಾರದ ಜೊತೆ ವಿಫಲವಾಗಿದ್ದು, ಅದರ ಬಗ್ಗೆ ಪ್ರಸ್ತಾಪ ಮಾಡುತ್ತಿದ್ದೇವೆ. ತಾವು ಈ ವಿಚಾರವನ್ನು ಗಮನದಲ್ಲಿಟ್ಟುಕೊಳ್ಳಬೇಕು. ಮೊಟ್ಟಮೊದಲನೆಯದಾಗಿ ಈ ನಾಲ್ಕು ಜನರಿಗೆ ಸಂತಾಪ ಸೂಚಿಸುತ್ತಾ, ಸರ್ಕಾರದ ನಿಯಮದ ಪ್ರಕಾರ ಆ ನಾಲ್ಕು ಜನರಿಗೆ ಎಷ್ಟು ಹಣವನ್ನು ಬಿಡುಗಡೆ ಮಾಡಬೇಕು. ಮಾನ್ಯ ಸಚಿವರುಗಳು ಆ ಹಣವನ್ನು ಬಿಡುಗಡೆ ಮಾಡುವ ಕ್ರಮವನ್ನು ಕೂಡಲೇ ಮಾಡಬೇಕು. ಅದರ ಜೊತೆಗೆ 25 ಕುರಿಗಳು ಸತ್ತಿವೆ ಎಂದು ಹೇಳಿದ್ದಾರೆ. ಜಾನುವಾರುಗಳ ವಿಚಾರವನ್ನು ಗಮನದಲ್ಲಿಟ್ಟುಕೊಂಡು ಸೂಕ್ತವಾದಂಥ ಚರ್ಚೆ ಮಾಡಬೇಕೆಂದು ತಮ್ಮ ಮೂಲಕ ಸರ್ಕಾರಕ್ಕೆ ಸೂಚಿಸುತ್ತೇನೆ. ಬಹುಶಃ 105 ವರ್ಷಗಳಿಂದ ಇಷ್ಟು ದೊಡ್ಡ ಪ್ರಮಾಣದ ಮಳೆ ನಾವು ನೋಡಿಲ್ಲ. 105 ವರ್ಷಗಳ ಹಿಂದೆ ಆಗಿದ್ದಂತಹ ಮಳೆಯನ್ನು ಈ ವರ್ಷ ನೋಡಿದ್ದೇವೆ. ಇಂತಹ ಭೀಕರವಾದ ಪ್ರವಾಹದಿಂದ 2½ ಲಕ್ಷಗಳಷ್ಟು ಮನೆಗಳು ಹಾನಿಗೊಳಗಾಗಿವೆ. 90 ಜನ ಮೃತಪಟ್ಟಿದ್ದಾರೆ. ತಮಗೆಲ್ಲಾ ಗೊತ್ತಿರುವ ಹಾಗೆ, ಈ ವಿಷಯವನ್ನು ಈಗಾಗಲೇ ಪ್ರಸ್ತಾಪ ಮಾಡಲಾಗಿದೆ. 103 ತಾಲ್ಲೂಕು ಮತ್ತು 22 ಜಿಲ್ಲೆಗಳಲ್ಲಿ ವಿಶೇಷವಾಗಿ ಬೆಳಗಾವಿ, ಬಾಗಲಕೋಟೆ, ಗದಗ, ಬಿಜಾಪುರ, ಧಾರವಾಡ, ಕೊಪ್ಪಳ, ರಾಯಚೂರು, ಯಾದಗಿರಿ, ಕಲಬುರ್ಗಿ, ಬಳ್ಳಾರಿ, ಹಾವೇರಿ, ಉತ್ತರ ಕರ್ನಾಟಕ, ದಕ್ಷಿಣ ಕರ್ನಾಟಕ, ಉಡುಪಿ, ಶಿವಮೊಗ್ಗ, ಚಿಕ್ಕಮಗಳೂರು, ಹಾಸನ, ಕೊಡಗು, ಮೈಸೂರು, ಚಾಮರಾಜನಗರ ಜಿಲ್ಲೆಗಳಲ್ಲಿ ಇಂತಹ ತೀವ್ರವಾದ ಪ್ರವಾಹವನ್ನು ನಾವು 105 ವರ್ಷಗಳಿಂದ ನೋಡಿಲ್ಲ. ಪ್ರವಾಹದಿಂದ ಹಾನಿಯಾದವರಿಗೆ ಇವತ್ತು ಪರಿಹಾರ ನೀಡಬೇಕೆಂದು ನಾವು ಸರ್ಕಾರಕ್ಕೆ ಒತ್ತಾಯ ಮಾಡುತ್ತಿದ್ದೇವೆ. ಬಹುಶಃ ಪ್ರವಾಹ ಬಂದು ಸುಮಾರು 65 ರಿಂದ 75 ದಿವಸವಾಗಿದೆ. ಇದಕ್ಕೆ ಸರ್ಕಾರ

ಸ್ಪಂದಿಸುವುದಕ್ಕೆ ಏನಾಗಿದೆ? ನಿನ್ನೆ ಅನುದಾನ ಬಿಡುಗಡೆ ಮಾಡಿದ್ದಾರೆ. ನಾನು ಎಲ್ಲವನ್ನೂ ಪ್ರಸ್ತಾಪಿಸುತ್ತಾ, ಸಮಯವನ್ನು ವ್ಯರ್ಥ ಮಾಡುವುದಕ್ಕೆ ಹೋಗುವುದಿಲ್ಲ. ಇಲ್ಲಿಯವರೆಗೂ ಘೋಷಣೆ ಮಾಡಿರುವಂತಹ ಅನುದಾನ 2949 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಲಾಗಿದೆ ಎಂದು ಸರ್ಕಾರ ವರದಿ ನೀಡಿದೆ. ಅತಿವೃಷ್ಠಿಯಿಂದಾಗಿ ಮೊದಲನೇ ಕಂತಿನಲ್ಲಿ ಪ್ರತಿ ಕುಟುಂಬಕ್ಕೆ 10 ಸಾವಿರ ರೂಪಾಯಿಗಳಂತೆ ಬಿಡುಗಡೆ ಮಾಡಿದ್ದಾರೆ. ಅಕ್ಟೋಬರ್ 5ನೇ ತಾರೀಖಿನವರೆಗೂ 2,03,633 ಕುಟುಂಬಗಳಿಗೆ 203 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿ ಪರಿಹಾರ ವಿತರಿಸಲಾಗಿದೆ. ಮನೆಗಳನ್ನು ಕಳೆದುಕೊಂಡ 43,611 ಕುಟುಂಬಗಳಿಗೆ 137.00 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದಾರೆ. ಪೂರ್ಣ ಹಾನಿಯಾಗಿರುವ ಮನೆಗಳ ಸಂಖ್ಯೆ 10 ಸಾವಿರ ಇದೆ ಎಂದು ಇಲ್ಲಿಯೇ ನಿನ್ನೆ ಕಂದಾಯ ಸಚಿವರು ಹೇಳಿಕೆ ನೀಡಿದ್ದಾರೆ. ಇಷ್ಟೊಂದು ಮನೆಗಳು ಹಾನಿಗೊಳಗಾಗಿದ್ದರೂ ಸಹ ಕೇವಲ 5176 ಕುಟುಂಬಗಳಿಗೆ 49 ಕೋಟಿ ರೂಪಾಯಿಗಳನ್ನು ಮಾತ್ರ ಬಿಡುಗಡೆ ಮಾಡಿದ್ದಾರೆ. ಇದು ಸರ್ಕಾರಕ್ಕೆ ಶೋಭೆ ತರುತ್ತದೆಯೇ ಎಂದು ಸರ್ಕಾರಕ್ಕೆ ಪ್ರಶ್ನೆ ಮಾಡುವುದಕ್ಕೆ ಇಚ್ಛಿಸುತ್ತೇನೆ. 2 ಲಕ್ಷಗಳಷ್ಟು ಮನೆಗಳು ಹಾನಿಗೊಳಗಾದಾಗ ಸುಮಾರು 70 ದಿವಸಗಳಲ್ಲಿ ಕೇವಲ 5 ಸಾವಿರ ಮನೆಗಳಿಗೆ ಪರಿಹಾರ ನೀಡುತ್ತೇವೆ ಎಂದರೆ ಹೇಗೆ? 2 ಲಕ್ಷ ಮನೆಗಳಿಗೆ ಇನ್ನೂ ಏತಕ್ಕೆ ಪರಿಹಾರ ತಲುಪಿಲ್ಲ? ಯಾವುದೇ ರೀತಿಯ ಕ್ರಮವನ್ನು ಸರ್ಕಾರ ತೆಗೆದುಕೊಂಡಿಲ್ಲ. ಮನೆ ಇಲ್ಲದೇ ಸಂತ್ರಸ್ತರು ಹೊರಗಿದ್ದಾರೆ, ಗಂಜಿ ಕೇಂದ್ರದಲ್ಲಿ ಜೀವನ ಸಾಗಿಸುತ್ತಿದ್ದಾರೆ. ಮನೆಗೆ ಹೋಗುವುದಕ್ಕೆ ಆಗುತ್ತಿಲ್ಲ, ಅವರುಗಳಿಗೆ ತಿನ್ನುವುದಕ್ಕೆ ಆಹಾರ ಸಿಗುತ್ತಿಲ್ಲ, ವ್ಯವಸಾಯ ಮಾಡುವುದಕ್ಕೂ ಅವಕಾಶ ಸಿಗುತ್ತಿಲ್ಲ. ಸರ್ಕಾರ ನಿದ್ದೆ ಮಾಡುತ್ತಿದೆಯೇ ಎಂದು ನಾವು ಕೇಳಬೇಕಾಗಿದೆ. ಕೇವಲ 5 ಸಾವಿರ ಮನೆಗಳಿಗೆ ಹಣವನ್ನು ಬಿಡುಗಡೆ ಮಾಡಿ,...

**ಸಭಾಪತಿಯವರು:–** ಮಾನ್ಯ ಪ್ರಕಾಶ್ ಕೆ.ರಾಥೋಡ್‌ರವರೇ, ಒಂದು ನಿಮಿಷ. ಇನ್ನೂ 29 ಜನ ಮಾತನಾಡಬೇಕಾಗಿದೆ.

**ಶ್ರೀ ಪ್ರಕಾಶ್ ಕೆ.ರಾಥೋಡ್:–** ಮಾನ್ಯ ಸಭಾಪತಿಯವರೇ, ಆಯಿತು ಆದಷ್ಟು ಬೇಗ ನನ್ನ ಮಾತನ್ನು ಮುಗಿಸುತ್ತೇನೆ.

**ಸಭಾಪತಿಯವರು:–** ಆದಷ್ಟು ಬೇಗ ಎಂದರೆ 5 ನಿಮಿಷ ಅಷ್ಟೇ. ಈಗಾಗಲೇ 5 ನಿಮಿಷವಾಗಿದೆ. ಎಲ್ಲರಿಗೂ ಅವಕಾಶ ನೀಡಬೇಕೇ, ಬೇಡವೇ ಎಂಬುದಷ್ಟೇ ನನ್ನ ಪ್ರಶ್ನೆ.

**ಶ್ರೀ ಪ್ರಕಾಶ್ ಕೆ.ರಾಥೋಡ್:–** ಮಾನ್ಯ ಸಭಾಪತಿಯವರೇ, ಆದಷ್ಟು ಬೇಗ ನನ್ನ ಮಾತನ್ನು ಮುಗಿಸುತ್ತೇನೆ. ದಯವಿಟ್ಟು ಇದರಲ್ಲಿ ಸಮಯದ ನಿರ್ಬಂಧ ಮಾಡಬಾರದು, ಏಕೆಂದರೆ ನಮಗೆ ಸರ್ಕಾರವನ್ನು ಎಚ್ಚರಿಸುವುದಕ್ಕೆ ಅವಕಾಶ ಸಿಗುವುದು ಈ ಸಂದರ್ಭದಲ್ಲಿ ಮಾತ್ರ.

(ಮುಂದು) . . .



"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

(139)/11.10.2019/11.30/ಎಸ್‌ಕೆ-ವಿಕೆ

**(ಸಭಾಪತಿಯವರ ಉಪಸ್ಥಿತಿ)**

**ಶ್ರೀ ಪ್ರಕಾಶ್ ಕೆ. ರಾಥೋಡ್ (ಮುಂದು):-** ಮಾನ್ಯ ಸಭಾಪತಿಯವರೇ, ತಾವು ನಮಗೆ ಮಾತನಾಡಲು ಸಮಯಾವಕಾಶವನ್ನು ಕಡಿಮೆ ಮಾಡಿದರೆ, ಸದನವನ್ನು ...

**ಸಭಾಪತಿಯವರು:-** ಮಾನ್ಯ ವಿರೋಧ ಪಕ್ಷದ ನಾಯಕರೇ,..

**ಶ್ರೀ ಪ್ರಕಾಶ್ ಕೆ.ರಾಥೋಡ್:-** ಮಾನ್ಯ ಸಭಾಪತಿಯವರೇ, ನಾನು ಇವತ್ತು ತಮ್ಮ ಮೂಲಕ ಸರ್ಕಾರಕ್ಕೆ ಒತ್ತಾಯ ಮಾಡುವುದೇನೆಂದರೆ, ಈ ಅಧಿವೇಶನವನ್ನು ಮೂರು ದಿವಸಕ್ಕೆ ಮಾತ್ರವಲ್ಲ. ಅಧಿವೇಶನವನ್ನು ಹದಿನೈದು ದಿವಸಗಳ ವಿಸ್ತರಣೆ ಮಾಡಿ. ನಮಗೆ ಇಲ್ಲಿ ಚರ್ಚೆ ಮಾಡುವುದಕ್ಕೆ ಅವಕಾಶ ಮಾಡಿಕೊಡಿ.

**ಸಭಾಪತಿಯವರು:-** ಸುಮಾರು ಇಪ್ಪತ್ತೊಂಭತ್ತು ಜನ ಸದಸ್ಯರು ಮಾತನಾಡುವವರಿದ್ದಾರೆ. ಮಾನ್ಯ ಸದಸ್ಯರು ಮಾತನಾಡಲು ಎಷ್ಟು ನಿಮಿಷ ಅವಕಾಶ ಕೊಡಬೇಕೆಂಬುದನ್ನು ಹೇಳಿ.

**ಶ್ರೀ ಎಸ್. ಆರ್. ಪಾಟೀಲ್(ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರ ಕಳಕಳಿ ಏನಿದೆ.

**ಸಭಾಪತಿಯವರು:-** ನನಗೆ ಕಳಕಳಿ ಬಗ್ಗೆ ಗೊತ್ತಿದೆ ಹಾಗೂ ನನಗೂ ಕೂಡ ಕಳಕಳಿ ಇದೆ. ಆದರೆ ನಾನು ತಮ್ಮನ್ನು ಕೇಳುವುದೇನೆಂದರೆ, ನಾಳೆ ಅಧಿವೇಶನ ಮುಗಿಯುತ್ತದೆ ಅಥವಾ ಮುಂದುವರೆಯಬಹುದು. ಅದು ಮುಂದಿನ ವಿಷಯ. ಆದರೆ ಈಗ ಮಾತನಾಡಲು 29 ಜನ ಸದಸ್ಯರಿದ್ದಾರೆ. ಅವರಿಗೆ ಮಾತನಾಡಲು ಎಷ್ಟೆಷ್ಟು ನಿಮಿಷಗಳ ಸಮಯವನ್ನು ಕೊಡಬಹುದೆಂಬ ತಮ್ಮ ಅನಿಸಿಕೆಯನ್ನು ಹೇಳಿ.

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಎಸ್. ಆರ್. ಪಾಟೀಲ್:–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರೆಲ್ಲರೂ ಮಾತನಾಡುವುದಕ್ಕೆ ತಲಾ ಹತ್ತು ನಿಮಷಗಳ ಸಮಯವನ್ನು ಕೊಡಿ.

**ಶ್ರೀ ಕೆ.ಟಿ. ಶ್ರೀಕಂಠೇಗೌಡ (ಪದವೀಧರರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಮೂರು ಪಕ್ಷಗಳಿಗೂ ಇಂತಿಷ್ಟು ಸಮಯವನ್ನು ನಿಗಧಿ ಮಾಡಿ.

**ಶ್ರೀ ಎಸ್. ಆರ್. ಪಾಟೀಲ್:–** ಮಾನ್ಯ ಸಭಾಪತಿಯವರೇ, He has come from Bijapur district. It is flood affected area. ಅದಕ್ಕೆ ನಾನು ಹೇಳುವುದೇನೆಂದರೆ, ಪ್ರತಿ ಸದಸ್ಯರುಗಳಿಗೆ ಮಾತನಾಡುವುದಕ್ಕೆ ಕನಿಷ್ಠ ಹತ್ತು ನಿಮಿಷವಾದರೂ ಅವಕಾಶ ಕೊಡಬೇಕು. ಅಷ್ಟರಲ್ಲಿ to the point ಮಾತನಾಡಿ.

**(ಗೊಂದಲ)**

**ಶ್ರೀ ಕೆ. ಗೋವಿಂದರಾಜು (ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಯಾರು ಮಧ್ಯೆದಲ್ಲಿ ಮಾತನಾಡದೇ ಇದ್ದರೆ ಹತ್ತು ನಿಮಿಷ ಸಾಕಾಗುತ್ತದೆ.

**ಶ್ರೀ ಎಸ್. ಆರ್. ಪಾಟೀಲ್:–** ಮಾನ್ಯ ಸಭಾಪತಿಯವರೇ, ಮೂರು ದಿನ ಅಧಿವೇಶನ ನಡೆಸುತ್ತಿರುವುದರಿಂದ ನಮಗೆ ಸಮಸ್ಯೆಯಾಗಿದೆ.

**ಶ್ರೀ ಪ್ರಕಾಶ್ ಕೆ.ರಾಥೋಡ್:–** ಮಾನ್ಯ ಸಭಾಪತಿಯವರೇ, ಸರ್ಕಾರ ಬಿಡುಗಡೆ ಮಾಡಿದೆ ಎಂದು ಹೇಳಿದರೆ, ಆ ಪ್ರಕಾರ ಅದನ್ನು 2949 ಕೋಟಿ ಬಿಡುಗಡೆ ಮಾಡಿದೆ ಎನ್ನುತ್ತಾರೆ. ಆದರೆ ಇವತ್ತಿನವರೆಗೂ ಸುಮಾರು 352 ಕೋಟಿ ರೂಪಾಯಿಗಳು ಮಾತ್ರ ಬಿಡುಗಡೆಯಾಗಿದೆಂಬುದು ಸರ್ಕಾರದ ಮಾಹಿತಿ. ಇವತ್ತು ಜನರಿಗೆ ಒಂದು ಲಕ್ಷ ಕೋಟಿ ಹಾನಿಯಾಗಿದೆ ಎಂದು ನಾವು ಹೇಳುತ್ತಿದ್ದೇವೆ. ಆದರೆ 65 ರಿಂದ 75 ದಿವಸಗಳ ನಡುವೆ ಸರ್ಕಾರ ಸುಮಾರು 352 ಕೋಟಿ ಬಿಡುಗಡೆ ಮಾಡಿದೆ.

**ಶ್ರೀ ಸಿ.ಟಿ. ರವಿ (ಪ್ರವಾಸೋದ್ಯಮ ಸಚಿವರು):–** ಮಾನ್ಯ ಸಭಾಪತಿಯವರೇ ಮಾನ್ಯ ಸದಸ್ಯರು ಒಂದು ಲಕ್ಷ ಕೋಟಿ ಎಂದು ಹೇಳಿದ್ದಾರೆ. ಅವರು ನಮ್ಮ ರಾಜ್ಯಕ್ಕೆ ಅರಿವಿಲ್ಲದೇ ಇರುವಂತಹ ಮಾಹಿತಿ ಎಂದು ಹೇಳುತ್ತಿದ್ದಾರೆ. ಒಂದು ಲಕ್ಷ ಕೋಟಿ ಯಾವ್ಯಾವ ಬಾಬ್ತುಗಳಲ್ಲಿ ಎಂಬುದರ ಬಗ್ಗೆ ಬೆಳಕು ಚೆಲ್ಲಿದರೆ, ನಾವು ಸ್ವಲ್ಪ ಪುನೀತರಾಗುತ್ತೇವೆ ಮತ್ತು ಅವರಿಂದ ನಾವು ಅವರಿಂದ ಜ್ಞಾನೋದಯ ಪಡೆದುಕೊಳ್ಳುತ್ತೇವೆ.

**(ಗೊಂದಲ)**

**ಶ್ರೀ ಯು.ಬಿ. ವೆಂಕಟೇಶ್ (ನಾಮ ನಿರ್ದೇಶಿತರು):–** ನಮ್ಮಲ್ಲಿ ವರದಿ ರೆಡಿ ಇದೆ.

**(ಗೊಂದಲ)**

“ ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

**ಶ್ರೀ ಸಿ.ಟಿ. ರವಿ:–** ಮಾನ್ಯ ಸಭಾಪತಿಯವರೇ, ಈ ಸದನದಲ್ಲಿ ನಾವು ಮೇಲ್ಪಂಕ್ತಿಗಳಿಂದ ನಿರೀಕ್ಷೆ ಮಾಡುತ್ತೇವೆ. **(ಗೊಂದಲ)**

**ಶ್ರೀ ಸಿ.ಟಿ. ರವಿ:–** ಮಾನ್ಯ ಸಭಾಪತಿಯವರ ಮೂಲಕ ನಾವು ನಮ್ರತೆಯಿಂದ ಕೇಳುವುದೇನೆಂದರೆ, ಒಂದು ಲಕ್ಷ ಕೋಟಿ ರೂಪಾಯಿಯನ್ನು ಏನು ಕೇಳಿದರು. ನಾನು ಅದನ್ನು ಅಲ್ಲಗಳೆಯುತ್ತಿಲ್ಲ. ಯಾವ್ಯಾವ ಬಾಬ್ತುಗಳಲ್ಲಿ ಎಷ್ಟೆಷ್ಟು ಇದೆ ಎಂಬುದರ ಬಗ್ಗೆ ಬೆಳಕು ಚೆಲ್ಲಲಿ.

**(ಗೊಂದಲ)**

**ಶ್ರೀ ಹೆಚ್.ಎಂ. ರೇವಣ್ಣ (ವಿಧಾನಸಭಾ ಕ್ಷೇತ್ರ):–** ಸುಮಾರು 32 ಸಾವಿರ ಕೋಟಿ ಎಂದು ಸರ್ಕಾರದವರೇ ಹೇಳಿದ್ದಾರೆ.

**(ಗೊಂದಲ)**

**ಶ್ರೀ ಸಿ.ಟಿ. ರವಿ:–** ಮಾನ್ಯ ಸಭಾಪತಿಯವರೇ, ನಾನು ಯಾವುದನ್ನು ಅಲ್ಲಗಳೆದಿಲ್ಲ. ಇಷ್ಟು ಜನ ಸದಸ್ಯರು ಮೈಮೇಲೆ ಬೀಳುವ ಅವಶ್ಯಕತೆಯಿಲ್ಲ. ಒಂದು ಲಕ್ಷ ಕೋಟಿ ಬಗ್ಗೆ ಬೆಳಕು ಚೆಲ್ಲಲಿ ಎಂದು ನಾನು ಹೇಳುತ್ತಿದ್ದೇನೆ.

**ಶ್ರೀ ಹೆಚ್.ಎಂ. ರೇವಣ್ಣ:–** ಅದನ್ನು ಹೇಳುವುದಕ್ಕೆ ಬಿಡಿ.

**(ಗೊಂದಲ)**

**ಸಭಾಪತಿಯವರು:–** ಮಾನ್ಯ ಸಭಾನಾಯಕರೇ, ಅವರು ಮಾತನಾಡುವುದನ್ನು ಪೂರ್ತಿಗೊಳಿಸಲಿ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು):–** ಮಾನ್ಯ ಸಭಾಪತಿಯವರೇ, ತಾವು ಬೆಳಕನ್ನು ಚೆಲ್ಲುತ್ತಿದ್ದಾರೆ. ನಾವು ವಿಚಾರವನ್ನು ಕೇಳುತ್ತಿದ್ದೇವೆ. ಒಂದು ಲಕ್ಷ ಕೋಟಿಯಷ್ಟು ಹೆಚ್ಚಿಗೆ ನಷ್ಟವಾಗಿದೆ ಎಂದು ಹೇಳಿದ್ದಾರೆ. ನಮ್ಮ ಮಂತ್ರಿಗಳು ಯಾವ್ಯಾವ ವಿಚಾರದಲ್ಲಿ ನಷ್ಟವಾಗಿದೆ ಎಂಬುದರ ಅಂಕಿ–ಅಂಶಗಳ ಬಗ್ಗೆ ಹೇಳಲಿ. ನಾವು ಅದನ್ನು ಅರ್ಥ ಮಾಡಿಕೊಳ್ಳುತ್ತೇವೆಂದು ಹೇಳಿದ್ದಾರೆ.

**(ಗೊಂದಲ)**

**ಶ್ರೀ ಎಸ್. ಆರ್. ಪಾಟೀಲ್:–** ಮಾನ್ಯ ಸಭಾ ನಾಯಕರೇ ತಮಗೆ ಸ್ವಲ್ಪ ತಾಳ್ಮೆ ಇರಲಿ. We will throw light on all subjects. ನಾವು ಏನು ಮಾತನಾಡುತ್ತೇವೆಯೋ ಅದಕ್ಕೆ commit ಆಗಿಯೇ ಮಾತನಾಡುತ್ತೇವೆ.

**(ಗೊಂದಲ)**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ನಮ್ಮಲ್ಲಿ ತಾಳ್ಮೆ ಇದೆ. ಅದನ್ನು ವಿರೋಧಪಕ್ಷದವರ ಕಡೆಯವರಿಗೆ ಹೇಳಿ. ವಿರೋಧ ಪಕ್ಷದ ಕಛೇರಿಯಲ್ಲಿ ಬಿಡುಗಡೆ ಮಾಡಿ.

**(ಗೊಂದಲ)**

“ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

**ಶ್ರೀ ಎಸ್. ಆರ್. ಪಾಟೀಲ್:–** ಮಾನ್ಯ ಸಭಾಪತಿಯವರೇ, ನಾವು ಏನೇ ಮಾತನಾಡಿದರೂ, ಅದನ್ನು ಸ್ಪಷ್ಟವಾಗಿ ಮಾತನಾಡುತ್ತೇವೆ. (ಗೊಂದಲ) ಉದಾಹರಣೆಗೆ ಹೇಳಬೇಕೆಂದರೆ, ಮಾನ್ಯ ಯಡಿಯೂರಪ್ಪನವರು ಹೇಳಿದ್ದಾರೆ...

**(ಗೊಂದಲ)**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ವಿರೋಧ ಪಕ್ಷದವರು ಬೆಳಕು ಚೆಲ್ಲುವುದಕ್ಕೆ ಬಂದವರೋ ಅಥವಾ ವಾದ ಮಾಡುವುದಕ್ಕೆ ಬಂದವರೋ?

**(ಗೊಂದಲ)**

**Sri S.R.PATIL:-** You throw light on this statement.

**(ಗೊಂದಲ)**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ವಿರೋಧ ಪಕ್ಷದವರು ಹೇಳುವು ವಿಷಯವನ್ನು ಗೌರವದಿಂದ ಸ್ವೀಕಾರ ಮಾಡಿದ್ದೇವೆ. ನಿಮ್ಮ ಎಲ್ಲಾ ಅಭಿಪ್ರಾಯಗಳನ್ನು ಗೌರವಿಸುತ್ತೇವೆ.

**(ಗೊಂದಲ)**

**ಶ್ರೀ ಎಸ್. ಆರ್. ಪಾಟೀಲ್:–** ಮಾನ್ಯ ಸಭಾಪತಿಯವರೇ, ತಾವು ಇದಕ್ಕೆ intervene ಆಗಬೇಡಿ. ಸಮಯ ಬಹಳ ಕಡಿಮೆ ಇದೆ. ತಮಗೆ ಬೇರೆ ಬೇರೆ ಇರುವ ಹಾಗೇ ಕಾಣುತ್ತದೆ. ಇದು ಈ ರಾಜ್ಯದ ಶಕ್ತಿ ಸೌಧ. ಇಲ್ಲಿ ಹೆಚ್ಚು ಜನ ಸದಸ್ಯರು ಚರ್ಚೆ ಮಾಡಬೇಕು. ಜನರ ಸಮಸ್ಯೆಗಳನ್ನು ಎಳೆ ಎಳೆಯಾಗಿ ಬಿಚ್ಚಿ ಚರ್ಚೆ ಮಾಡಬೇಕು ಮತ್ತು ಸಮಸ್ಯೆಗಳನ್ನು ಬಗೆಹರಿಸಬೇಕೆಂದು ಹೇಳಿ ಅಧಿವೇಶನವನ್ನು ಕರೆದಿದ್ದಾರೆ. ನಾವು ಇಲ್ಲಿ ಯಾವ ಪುರುಷಾರ್ಥಕ್ಕಾಗಿ ಶಾಸಕರಾಗಿದ್ದೇವೆ. ಅದಕ್ಕೆ ತಾವು ಮೂರು ದಿವಸಗಳ ಕಾಲ ಸಮಯವನ್ನು ಇಟ್ಟಿದ್ದೀರಿ. ಮಾನ್ಯ ಸಭಾಪತಿಯವರು ಐದು ನಿಮಿಷಗಳಷ್ಟೇ ಮಾತನಾಡಿ ಎಂದು ಹೇಳಿದರು ಆದರೆ ನಾವು ಹತ್ತು ನಿಮಿಷ ಮಾತನಾಡುವುದಕ್ಕೆ ಅವಕಾಶ ಕೊಡಬೇಕೆಂದು ಮನವಿ ಮಾಡಿಕೊಂಡಿದ್ದೇವೆ. ಇದಕ್ಕೆ ಯಾರು ಕಾರಣ? ಇದಕ್ಕೆ ತಾವೇ ಕಾರಣ.

**(ಗೊಂದಲ)**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ಹಿಂದೆ ಇದ್ದ ಸರ್ಕಾರದವರು ಸದನವನ್ನು ಯಾವ ರೀತಿ ನಡೆಸಿದ್ದಾರೆ ಎಂಬುದನ್ನು ನಾವು ನೋಡಿದ್ದೇವೆ.

**(ಗೊಂದಲ)**

" ತಿದ್ದುಪಡಿಯಾಗದ ಪ್ರತಿ/ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಎಸ್. ಆರ್. ಪಾಟೀಲ್:–** ಮಾನ್ಯ ಸಭಾಪತಿಯವರೇ, ನೆರೆ ಸಂತ್ರಸ್ತರ ಬಗ್ಗೆ ಚರ್ಚೆ ಮಾಡಬೇಕು. ನೆರೆ ಸಂತ್ರಸ್ತರ ನೆರವಿನ ಕಾರ್ಯ ನಡೆಯುತ್ತಿರುವುದರಿಂದ ಬೆಳಗಾವಿಯಲ್ಲಿ ಅಧಿವೇಶನ ನಡೆಸಲು ಸಾಧ್ಯವಿಲ್ಲವೆಂದು ಸರ್ಕಾರದವರು ಹೇಳಿದ್ದಾರೆ.

**(ಗೊಂದಲ)**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ವಿರೋಧ ಪಕ್ಷದಲ್ಲಿದ್ದಾಗ ತಾವು ಎಷ್ಟು ಪ್ರಾಮುಖ್ಯತೆಯನ್ನು ಕೊಟ್ಟಿದ್ದೀರಿ ಎಂಬುದನ್ನು ನಾವು ನೋಡಿದ್ದೇವೆ.

**(ಗೊಂದಲ)**

**ಶ್ರೀ ಎಸ್. ಆರ್. ಪಾಟೀಲ್:–** ಮಾನ್ಯ ಸಭಾಪತಿಯವರೇ, ಸದನದಲ್ಲಿ ಅಧಿಕಾರಿಗಳು ಇದ್ದಾರೆ. ಅಧಿವೇಶನವನ್ನು ಮೂರು ದಿವಸ ಏತಕ್ಕೆ ಇಟ್ಟುಕೊಂಡಿದ್ದೀರಾ? ಮೂವತ್ತು ದಿವಸಗಳ ಕಾಲ ಮಾಡಬೇಕಾಗಿತ್ತು. ಕೊನೆ ಪಕ್ಷ ಹದಿನೈದು ದಿವಸಗಳ ಕಾಲ ಅಧಿವೇಶನವನ್ನು ಇಟ್ಟುಕೊಳ್ಳಬಹುದಾಗಿತ್ತು.

**(ಗೊಂದಲ)**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ತಮ್ಮ ಬೇಡಿಕೆ ಏನಿದೆ?

**(ಗೊಂದಲ)**

**ಶ್ರೀ ಎಸ್. ಆರ್. ಪಾಟೀಲ್:–** ಇಲ್ಲಿ ಚರ್ಚೆಯಾಗಬೇಕು.

**(ಗೊಂದಲ)**

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ (ಶಿಕ್ಷಕರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಒಂದು ನಿಮಿಷ. ಮಾನ್ಯ ಸದಸ್ಯರು ಮಾತನಾಡುತ್ತಾರೆ, ಆದರೆ ತಾವು ಉತ್ತರ ಕೊಡುವುದಕ್ಕೆ ಅಧಿಕಾರ ಇರುತ್ತದೆ. ಈ ಹಿಂದೆ ತಾವು ವಿರೋಧ ಪಕ್ಷದಲ್ಲಿದ್ದಾಗ ಇಲ್ಲಿ ಬಂದು ಶಂಖ ಹೊಡೆದಿದ್ದೀರಿ. ಮಾನ್ಯ ಸದಸ್ಯರ ಮಾತನ್ನು ತಾವು ಸುಮ್ಮನೆ ಕೇಳಿಕೊಂಡು, ಅದಕ್ಕೆ ಉತ್ತರವನ್ನು ಕೊಡಿ. ಮಾನ್ಯ ಸದಸ್ಯರ ಮಾತನಾಡುವಾಗ ಸಚಿವರು ಏಕೆ ಎದ್ದುನಿಂತುಕೊಳ್ಳುತ್ತಾರೆ?

**(ಗೊಂದಲ)**

**ಶ್ರೀ ಅರುಣ ಶಹಾಪುರ (ಶಿಕ್ಷಕರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಮಾನ್ಯ ಬಸವರಾಜ ಹೊರಟ್ಟಿಯವರು ಬಹಳ ಚೆನ್ನಾಗಿ ಹೇಳಿದ್ದಾರೆ. ನಾವು ವಿರೋಧ ಪಕ್ಷದಲ್ಲಿದ್ದಾಗ ಶಂಖವನ್ನು ಹೊಡೆದಿದ್ದೇವೆ. ಈಗ ತಮಗೆ ಅವಕಾಶ ಸಿಕ್ಕಿದೆ. ತಾವು ಶಂಖವನ್ನು ಹೊಡೆಯಿರಿ. ಇದನ್ನು ಯಾರು ಬೇಡ ಎನ್ನುವುದಿಲ್ಲ. ಆದರೆ ಮಾನ್ಯ ಸಚಿವರಾದ ಸಿ.ಟಿ. ರವಿಯವರು ಕೇಳಿರುವುದೇನೆಂದರೆ, ಮಾನ್ಯ ಸದಸ್ಯರು ಚೆನ್ನಾಗಿ ಮಾತನಾಡುತ್ತಿದ್ದಾರೆ. ಆದರೆ ಆ ಒಂದು ಲಕ್ಷ ಕೋಟಿ ಬಗ್ಗೆ ಬಾಬ್ತು ಬಗ್ಗೆ ವಿವರಗಳನ್ನು ಕೊಡಿ ಎಂದು ಹೇಳುತ್ತಿದ್ದಾರೆ.

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**(ಗೊಂದಲ)**

**ಶ್ರೀ ಯು.ಬಿ. ವೆಂಕಟೇಶ್ (ನಾಮ ನಿರ್ದೇಶಿತರು):–** ನಾವು ಕೊಡುವುದಕ್ಕೆ ತಯಾರಿದ್ದೇವೆ.

**(ಗೊಂದಲ)**

**ಸಭಾಪತಿಯವರು:–** ದಯವಿಟ್ಟು ಮಾನ್ಯ ಸದಸ್ಯರೆಲ್ಲರೂ ಕುಳಿತುಕೊಳ್ಳಿ. ಪ್ರಕಾಶ್ ಕೆ. ರಾಥೋಡ್‌ರವರೇ ಮಾತನಾಡಿ.

**(ಗೊಂದಲ)**

**ಶ್ರೀ ಪ್ರಕಾಶ್ ಕೆ. ರಾಥೋಡ್:–** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರಾದ ಸಿ.ಟಿ. ರವಿಯವರು ಒಂದು ಲಕ್ಷ ಕೋಟಿ ನಾಶ ಹೇಗಾಯಿತು ಎಂದು ಕೇಳುತ್ತಾರೆ? ನಾವು ಇವತ್ತು ಕರ್ನಾಟಕ ಕಾಂಗ್ರೆಸ್ ಪ್ರದೇಶ ಸಮಿತಿಯಿಂದ ಎಂಟು ತಂಡಗಳನ್ನು ಮಾಡಿದ್ದೇವೆ. ಆ ತಂಡದವರು ವರದಿಯನ್ನು ತಯಾರು ಮಾಡಿರುವುದು ನಮ್ಮ ಬಳಿ ಇದೆ. ಒಂದು ಲಕ್ಷ ಕೋಟಿಗಿಂತ ಹೆಚ್ಚು ಆಸ್ತಿ–ಪಾಸ್ತಿ ಬೆಳೆಗಳು ನಾಶವಾಗಿರುವ ದಾಖಲೆಗಳ ಪ್ರತಿಯನ್ನು ಮಾನ್ಯ ಸಭಾ ನಾಯಕರಿಗೂ, ಮಾನ್ಯ ಸಿ.ಟಿ. ರವಿಯವರಿಗೂ ಕೊಡುತ್ತೇನೆ. ಮಾನ್ಯ ಸಚಿವರೇ ಸರ್ಕಾರದವರು ಏನು ಹೇಳಿದ್ದಾರೆಂದರೆ ಮೊಟ್ಟಮೊದಲನೇಯದಾಗಿ, ಐವತ್ತು ಸಾವಿರ ಕೋಟಿಗಳಷ್ಟು ಹಾನಿಯಾಗಿದೆ ಎಂದು ಮುಖ್ಯಮಂತ್ರಿಗಳು ಹೇಳಿದರು. ತಾವು ಅದನ್ನು ನೋಡಿಕೊಂಡು ಮೂವತ್ತೆಂಟು ಸಾವಿರ ಕೋಟಿ ಮತ್ತೆ ಮೂವತ್ತೈದು ಸಾವಿರ ಕೋಟಿ ಎಂದು ಮಾಡಿದ್ದೀರಿ. ಕೇಂದ್ರ ಸರ್ಕಾರಕ್ಕೆ ನೀಡಿರುವ ವರದಿಯಲ್ಲಿ ಮೂವತ್ತೆಂಟು ಸಾವಿರ ಕೋಟಿಯಷ್ಟು ಹಾನಿಯಾಗಿದೆ ಎಂದು ಸರ್ಕಾರದಿಂದ ವರದಿ ಕಳುಹಿಸಿದ್ದೀರಿ. ಅದು ಕಡಿಮೆ ಏಕಾಗಿದೆ ಎಂದು ನಾನು ತಮಗೆ ಕನಿಷ್ಠವಾಗಿ ಹೇಳುತ್ತಿದ್ದೇನೆ. ಸುಮಾರು ಏಳು ಲಕ್ಷ ಜನರು ಮನೆಗಳನ್ನು ಕಳೆದುಕೊಂಡಿದ್ದಾರೆ. 1,465 Rehabilitation Centres ನ್ನು ಮಾಡಿದ್ದಾರೆ.

**ಶ್ರೀ ಎಂ.ಕೆ. ಪ್ರಾಣೇಶ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಮಾಹಿತಿ ಯಾವುದು ಎಂಬುದನ್ನು ಹೇಳಲಿ.

**ಶ್ರೀ ಪ್ರಕಾಶ್ ಕೆ. ರಾಥೋಡ್:–** ಮಾನ್ಯ ಸಭಾಪತಿಯವರೇ, ಸರ್ಕಾರ ನೀಡಿರುವಂತಹ ಮಾಹಿತಿ. ಅದರ ಬಗ್ಗೆ ನಾನು ಹೇಳುತ್ತೇನೆ. ಮಾನ್ಯ ಪ್ರಾಣೇಶ್‌ರವರೇ ತಮಗೂ ಒಂದು ಪ್ರತಿಯನ್ನು ಕಳುಹಿಸಿಕೊಡುತ್ತೇನೆ. ತಾವು ಸ್ವಲ್ಪ ಜಾಸ್ತಿ ಮಾಡಿ.

**(ಗೊಂದಲ)**

**ಶ್ರೀ ಪ್ರಕಾಶ್ ಕೆ. ರಾಥೋಡ್:–** ಮಾನ್ಯ ಸಭಾಪತಿಯವರೇ, ನಮ್ಮ ಸಮೀಕ್ಷೆಯ ಪ್ರಕಾರ ನಾವು ಏನು ಮಾಡಿದ್ದೇವೆಂಬುದರ ಬಗ್ಗೆ ತಮಗೂ ಮತ್ತು ಸದನದ ಗಮನಕ್ಕೂ ಹಾಗೂ ರಾಜ್ಯದ ಜನರಿಗೂ ತಿಳಿಸುತ್ತಿದ್ದೇವೆ.

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಇದರಲ್ಲಿ 4.6 ಲಕ್ಷ ಜನರು ಮನೆಗಳನ್ನು ಕಳೆದುಕೊಂಡಿದ್ದಾರೆ. ಇದು ಸರ್ಕಾರದ ವರದಿ. ಆದರೆ ಇದು ನಮ್ಮ ವರದಿಯಲ್ಲ. ಕೃಷಿ ಮತ್ತು ತೋಟಗಾರಿಕೆಯ ಬೆಳೆ ಹಾಗೂ ಸುಮಾರು 7.9 ಲಕ್ಷ ಹೆಕ್ಟೇರ್ ಜಮೀನು ನಾಶವಾಗಿದೆ.

(ಮುಂದು...)

(140)11.10.2019,11.40,ಟಿಸಿಹೆಚ್–ಬಿಎನ್ಎಸ್

**(ಸಭಾಪತಿಯವರ ಉಪಸ್ಥಿತಿ)**

**ಶ್ರೀ ಪ್ರಕಾಶ್ ಕೆ.ರಾಥೋಡ್(ನಾಮನಿರ್ದೇಶಿತರು) (ಮುಂದು):–** ಎರಡು ಲಕ್ಷದ ಮೂವತ್ತೇಳು ಸಾವಿರ ಮನೆಗಳು ನಾಶ ಆಗಿವೆ. 1.70 ಲಕ್ಷ ಮನೆಗಳು ಸಂಪೂರ್ಣವಾಗಿ ಬಿದ್ದುಹೋಗಿವೆ. ವಿಶೇಷವಾಗಿ 7.28 ಲಕ್ಷ ಹೆಕ್ಟೇರ್ ಬೆಳೆ ನಷ್ಟ ಆಗಿದೆ, 5000 ಹೆಕ್ಟೇರ್ ಲ್ಯಾಂಡ್ ಸ್ಲೈಡ್ ಆಗಿದೆ, ಮೂವತ್ತೈದು ಸಾವಿರ ಕಿಲೋ ಮೀಟರ್ ರಸ್ತೆಗೆ ಡ್ಯಾಮೇಜ್ ಆಗಿದೆ. 2828 ಬ್ರಿಡ್ಜ್‌ಗಳು ಕಲ್‌ವರ್ಟ್‌ಗಳಲ್ಲಿ ಬಿದ್ದು ಡ್ಯಾಮೇಜ್ ಆಗಿವೆ. 57,000 electricity pole ಗಳು uproot ಆಗಿ ಬಿದ್ದು ಹೋಗಿವೆ. 14,076 ಪವರ್ ಟ್ರಾನ್ಸ್‌ಫಾರ್ಮರ್‌ಗಳು ಬಿದ್ದು ಡ್ಯಾಮೇಜ್ ಆಗಿವೆ.

**ಶ್ರೀ ಸಿ.ಸಿ.ಪಾಟೀಲ್ (ಮಾನ್ಯ ಗಣಿ ಮತ್ತು ಭೂವಿಜ್ಞಾನ, ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ ಸಚಿವರು):–** ಮಾನ್ಯ ಸಭಾಪತಿಯವರೇ, ಒಂದು ನಿಮಿಷ. ಶ್ರೀ ಪ್ರಕಾಶ್ ಕೆ.ರಾಥೋಡ್ ರವರೇ, ನಿಮ್ಮಿಂದ ನನಗೆ ಮಾಹಿತಿ ಬೇಕಾಗಿದೆ.

**ಶ್ರೀ ಪ್ರಕಾಶ್ ಕೆ.ರಾಥೋಡ್:–** ಮಾನ್ಯ ಸಭಾಪತಿಯವರೇ, ನಾನು yield ಆಗುವುದಿಲ್ಲ. ನನಗೆ ಅವರು ಹೆಚ್ಚು ಸಮಯಾವಕಾಶ ಕೊಟ್ಟಿಲ್ಲ. ದಯವಿಟ್ಟು ನನಗೆ ಸಮಯ ಕೊಡಿಸಿ ನಾನು ಕುಳಿತುಕೊಳ್ಳುತ್ತೇನೆ.

**ಶ್ರೀ ಸಿ.ಸಿ.ಪಾಟೀಲ್:–** ಮಾನ್ಯ ಸಭಾಪತಿಯವರೇ, 35 ಸಾವಿರ ಕಿಲೋಮೀಟರ್ ರಸ್ತೆ ಡ್ಯಾಮೇಜ್ ಆಗಿದೆ ಎಂದು ಹೇಳುತ್ತಿದ್ದಾರೆ. ಹಾಗಾದರೆ, ರಾಜ್ಯದಲ್ಲಿ ಎಷ್ಟು ಹೆದ್ದಾರಿಗಳಿವೆ ಎಂದು ನನಗೆ ಮಾಹಿತಿ ಬೇಕಾಗಿದೆ.

(ಗೊಂದಲ)

**ಶ್ರೀ ಪ್ರಕಾಶ್ ಕೆ.ರಾಥೋಡ್:–** ಮಾನ್ಯ ಸಭಾಪತಿಯವರೇ, ಎಲ್ಲಾ ಮಾಹಿತಿ ಈ ವರದಿಯಲ್ಲಿ ಇದೆ. ಸಾಯಂಕಾಲದವರೆಗೆ ಸಮಯ ಕೊಡಿಸಿ, ನಾನು ಎಲ್ಲಾ ಹೇಳುತ್ತೇನೆ.

**ಶ್ರೀ ಪ್ರಾಣೇಶ್ ಎಂ.ಕೆ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ನಮಗೂ ಮಾಹಿತಿ ಬೇಕು...

(ಗೊಂದಲ)

**ಶ್ರೀ ಎಸ್.ಆರ್.ಪಾಟೀಲ್:–** ಮಾನ್ಯ ಸಭಾಪತಿಯವರೇ, ಶ್ರೀ ಪ್ರಕಾಶ್ ಕೆ.ರಾಥೋಡ್‌ರವರೇ, ಏನೂ ನಷ್ಟ ಆಗಿಲ್ಲ. ರಸ್ತೆ ಡ್ಯಾಮೇಜ್ ಆಗಿಲ್ಲ, ಕಲ್‌ವರ್ಟ್ ಹೋಗಿಲ್ಲ, ಬ್ರಿಡ್ಜ್‌ಗಳು ಹೋಗಿಲ್ಲ ಮತ್ತು ಯಾವ ಮನೆಗಳು



" ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಕೊಚ್ಚಿಕೊಂಡು ಹೋಗಿಲ್ಲ, ಯಾವ ಬೆಳೆ ಕೂಡ ನಷ್ಟ ಆಗಿಲ್ಲ ಎಂದು ಹೇಳಿಬಿಡಿ, ಆಗ ಅವರಿಗೆ ಸಮಾಧಾನವಾಗುತ್ತದೆ.

(ಗೊಂದಲ)

**ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ (ಸರ್ಕಾರದ ಮುಖ್ಯ ಸಚೇತಕರು):–** ಮಾನ್ಯ ಸಭಾಪತಿಯವರೇ, ಅವರು ವಾಸ್ತವ ಸಂಗತಿ ಹೇಳಲಿ.

**ಶ್ರೀ ಪ್ರಕಾಶ್ ಕೆ.ರಾಥೋಡ್ :–** ಮಾನ್ಯ ಸಭಾಪತಿಯವರೇ, ವಾಸ್ತವವೇ ಇರುವುದು. ತಾವು ದಯವಿಟ್ಟು ಗಮನದಲ್ಲಿಟ್ಟುಕೊಳ್ಳಬೇಕೆಂದು ಮಾನ್ಯ ಆಡಳಿತ ಪಕ್ಷದ ಎಲ್ಲಾ ಹಿರಿಯ ಸದಸ್ಯರಲ್ಲಿ ನಾನು ಮನವಿ ಮಾಡುತ್ತೇನೆ. ನಾವು ಅಂಕಿ–ಅಂಶಗಳ ಸಹಿತ . . .

**ಸಭಾಪತಿಯವರು:–** ಮಾನ್ಯ ಸಭಾ ನಾಯಕರೇ, ನೋಡಿ, ಸದನ ಇನ್ನೂ ನಡೆಯುತ್ತಿದೆ. ಮಧ್ಯದಲ್ಲಿ ಈ ರೀತಿ obstruct ಮಾಡುತ್ತಿದ್ದರೆ, ಏನೂ ಮಾತನಾಡುವುದಕ್ಕೆ ಆಗುವುದಿಲ್ಲ. ವಿರೋಧ ಪಕ್ಷದವರು ಮಾತನಾಡುತ್ತಿದ್ದಾರೆ, ಅವರು ಮಾತನಾಡಿದ ನಂತರ ನೀವು ಉತ್ತರ ಕೊಡಿ.

**ಶ್ರೀ ಪ್ರಕಾಶ್ ಕೆ.ರಾಥೋಡ್:–** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಏನು 1 ಲಕ್ಷ ಕೋಟಿ ರೂಪಾಯಿಗಳು ಹೇಗಾಯಿತು ಎಂದು ಕೇಳಿದರು, ಅದಕ್ಕೆ ನಾನು ವಿವರಣೆಯನ್ನು ಕೊಡುತ್ತಿದ್ದೇನೆ. ಅದಕ್ಕಾಗಿ ನನ್ನ ಸಮಯದಲ್ಲಿ ಪರಿಗಣನೆ ಮಾಡಬಾರದು. 3724 ಪವರ್ ಲೈನ್‌ಗಳು ಡ್ಯಾಮೇಜ್ ಆಗಿವೆ. ಮಾನ್ಯ ಪ್ರಾಣೇಶ್ ಎಂ.ಕೆ. ರವರೇ, ಸಾವಿರಾರು ಎಕರೆ ಕಾಫಿ ಎಸ್ಟೇಟ್ ನಾಶವಾಗಿದೆ.

**ಶ್ರೀ ಪ್ರಾಣೇಶ್ ಎಂ.ಕೆ.:–** ಮಾನ್ಯ ಸಭಾಪತಿಯವರೇ, ಎಷ್ಟು ಸಾವಿರ ಎಕರೆ ಕಾಫಿ ಎಸ್ಟೇಟ್ ನಾಶವಾಗಿದೆ ಎಂದು ಅವರು ಹೇಳಬೇಕು.

**ಶ್ರೀ ಪ್ರಕಾಶ್ ಕೆ.ರಾಥೋಡ್:–** ಮಾನ್ಯ ಸಭಾಪತಿಯವರೇ, ಅದರ ಮಾಹಿತಿ ಈಗ ನನ್ನ ಹತ್ತಿರ ಇಲ್ಲ, ನನ್ನ ಬಳಿ ಮಾಹಿತಿ ಇದ್ದುದನ್ನು ಹೇಳುತ್ತಿದ್ದೇನೆ. ಇಲ್ಲದುದನ್ನು ಇಲ್ಲವೆಂದು ಹೇಳುತ್ತೇನೆ. ನಮ್ಮ ಪಕ್ಷದಿಂದ ಈಗಾಗಲೇ ನಾವೇನು ವರದಿ ಸಿದ್ಧಪಡಿಸಿದ್ದೇವೆ, ಇದನ್ನು ಮಾನ್ಯ ಪ್ರಧಾನ ಮಂತ್ರಿಯವರಿಗೂ ಕಳುಹಿಸಿದ್ದೇವೆ. ಮಾನ್ಯ ರಾಜ್ಯಪಾಲರಿಗೂ ಕಳುಹಿಸಿದ್ದೇವೆ. ಕರ್ನಾಟಕ ಸರ್ಕಾರಕ್ಕೂ ಕೂಡ ಕಳುಹಿಸಿದ್ದೇವೆ. ದುರಾದೃಷ್ಟಾವಶಾತ್ ಏನಾಯಿತು ಎಂದರೆ, ನಮ್ಮ ಪಕ್ಷದ ನಾಯಕರಾದಂಥ ಸನ್ಮಾನ್ಯ ಸಿದ್ದರಾಮಯ್ಯನವರು ಮತ್ತು ನಾವು, ಮಾನ್ಯ ಪ್ರಧಾನ ಮಂತ್ರಿಗಳನ್ನು ಭೇಟಿಯಾಗಲು ಅಧಿಕೃತವಾಗಿ ಸಮಯವನ್ನು ಕೇಳಿದ್ದೆವು. ಅವರು ಚಂದ್ರಾಯಾನ–2 ಉಡಾವಣೆ ಮಾಡಿದಂಥ ಸಂದರ್ಭದಲ್ಲಿ ವೀಕ್ಷಣೆ ಮಾಡಲು ಬೆಂಗಳೂರಿಗೆ ಬಂದಿದ್ದಾಗ, ನಮ್ಮ ಪಕ್ಷದಿಂದ ಅಧಿಕೃತವಾಗಿ ಸಮಯವನ್ನು ಕೇಳಿದ್ದೆವು. ಆದರೆ, ಅವರು ನಮಗೆ ಸಮಯ ಕೊಡಲಿಲ್ಲ. ನಮಗೆ ಸಮಯ ಕೊಡಿಸಿ ಎಂದು ಮಾನ್ಯ ರಾಜ್ಯಪಾಲರ ಬಳಿ ಹೋದೆವು. ರಾಜ್ಯ ಸರ್ಕಾರಕ್ಕೆ ಈ ಎಲ್ಲಾ ಮಾಹಿತಿ ಕಳುಹಿಸುವಂತೆ

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಅವರಿಗೂ ಕೂಡ ಮನವಿ ಮಾಡಿದ್ದೇವೆ. ರಾಜ್ಯ ಸರ್ಕಾರಕ್ಕೂ ಕೂಡ ನಾವು ಮನವಿ ಮಾಡಿದ್ದೇವೆ. ಇದು ನಮ್ಮ ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿಯ ಅಧಿಕೃತವಾದಂಥ ವರದಿ. ಈ ವರದಿಯಲ್ಲಿ 8 ಜನ ಹಿರಿಯ ನಾಯಕರು, ಪ್ರವಾಹ ಪೀಡಿತ ಪ್ರದೇಶಕ್ಕೆ ತೆರಳಿದ್ದರು. ಅದರಲ್ಲಿ ಮಾನ್ಯ ಆರ್.ವಿ.ದೇಶಪಾಂಡೆ, ಮಾನ್ಯ ಎಚ್.ಕೆ.ಪಾಟೀಲ್, ಮಾನ್ಯ ಈಶ್ವರ ಬಿ.ಖಂಡ್ರೆ ಹಾಗೂ ಇತರೆ ನಾಯಕರು ಪ್ರವಾಹ ವೀಕ್ಷಣೆ ಕೈಗೊಂಡು ವರದಿ ನೀಡಿದ್ದಾರೆ.

**ಸಭಾಪತಿಯವರು:–** ಶ್ರೀ ಪ್ರಕಾಶ್ ಕೆ.ರಾಥೋಡ್‌ರವರೇ, ತಾವು ಬೇಗ ಮಾತನಾಡಿ ಮುಗಿಸಿ.

**ಶ್ರೀ ಪ್ರಕಾಶ್ ಕೆ.ರಾಥೋಡ್:–** ಮಾನ್ಯ ಸಭಾಪತಿಯವರೇ, ಆಯಿತು. ನಿನ್ನೆ ದಿವಸ ಮಾನ್ಯ ಐವನ್ ಡಿ’ಸೋಜಾರವರು ಹೇಳಿದ್ದಾರೆ ಹಾಗೂ ನಮ್ಮ ರಾಷ್ಟೀಯ ನಾಯಕರು ಇದನ್ನು ‘ರಾಷ್ಟ್ರೀಯ ವಿಪತ್ತು’ ಎಂದು ಘೋಷಣೆ ಮಾಡಿ ಎಂದು ಹೇಳಿದ್ದಾರೆ. ಆದರೆ ಇಲ್ಲಿಯವರೆಗೂ ಘೋಷಣೆ ಮಾಡಿಲ್ಲ. ನಿನ್ನೆ ಮತ್ತು ಇವತ್ತು ಕೂಡ ಹೇಳಿದ್ದೇವೆ, ಮಾನ್ಯ ಪ್ರಧಾನ ಮಂತ್ರಿಯವರು ಒಂದು ದಿವಸವೂ ಸಾಮಾಜಿಕ ಜಾಲ ತಾಣದಲ್ಲಿ ಇದರ ಬಗ್ಗೆ ಟ್ವೀಟ್ ಮಾಡಿಲ್ಲ. ನಮ್ಮ ರಾಜ್ಯದ ಬಗ್ಗೆ ಅವರು ಎಲ್ಲೂ ಅಧಿಕೃತವಾದ ಮಾಹಿತಿ ಕೊಟ್ಟಿಲ್ಲ. ಅದಕ್ಕೆ ನಾನು ಇವತ್ತು ಹೇಳುವುದೇನೆಂದರೆ, ಪ್ರಧಾನ ಮಂತ್ರಿಗಳಾದ ಸನ್ಮಾನ್ಯ ನರೇಂದ್ರ ಮೋದಿಯವರು ಮತ್ತು ಕೇಂದ್ರ ಮಂತ್ರಿಮಂಡಲದ ಸದಸ್ಯರು ಕರ್ನಾಟಕಕ್ಕೆ ಮಲತಾಯಿ ಧೋರಣೆ ಮಾಡುತ್ತಿದ್ದಾರೆ. ನಮ್ಮ ಜನರ ಸಂಕಷ್ಟಕ್ಕೆ ಅವರು ಸ್ಪಂದಿಸುತ್ತಿಲ್ಲವೆಂದು ನಾನು ಇವತ್ತು ತಮ್ಮ ಮೂಲಕ ಹೇಳುವುದಕ್ಕೆ ಇಚ್ಛೆಪಡುತ್ತಿದ್ದೇನೆ.

**ಸಭಾಪತಿಯವರು:–** ಈಗ ನಿಯಮ 330 ಎ, ಶ್ರೀ ಕೆ.ಟಿ.ಶ್ರೀಕಂಠೇಗೌಡ ರವರು ಮಾತನಾಡಲಿ.

**ಶ್ರೀ ಪ್ರಕಾಶ್ ಕೆ.ರಾಥೋಡ್:–** ಮಾನ್ಯ ಸಭಾಪತಿಯವರೇ, ಏನಿದು, ನಾನು ಮಾನ್ಯ ಪ್ರಾಣೇಶ್.ಎಂ.ಕೆ.ರವರಿಗೆ ರಿಪ್ಲೈ ಮಾಡುತ್ತಿದ್ದೇನೆ.

**ಸಭಾಪತಿಯವರು:–** ಅದು ಹಾಗೆಯೆ ಇರುವುದು.

**ಶ್ರೀ ಕೆ.ಟಿ.ಶ್ರೀಕಂಠೇಗೌಡ (ಪದವಿಧರರ ಕ್ಷೇತ್ರ):–** ನಿಯಮ 330 ಎ . . .

(ಗೊಂದಲ)

**ಶ್ರೀ ಪ್ರಕಾಶ್ ಕೆ.ರಾಥೋಡ್:–** ಮಾನ್ಯ ಸಭಾಪತಿಯವರೇ, ಏನು ಸರ್, ನನ್ನ ಮಾತು ಇನ್ನೂ ಮುಗಿದಿಲ್ಲ.

**ಸಭಾಪತಿಯವರು:–** ಮಾನ್ಯ ಶ್ರೀ ಪ್ರಕಾಶ್ ಕೆ.ರಾಥೋಡ್ ರವರೇ, ತಾವು 10 ನಿಮಿಷ ಮಾತನಾಡುತ್ತೇನೆಂದು ಹೇಳಿದಿರಿ. ಅರ್ಧ ಗಂಟೆ ಸಮಯ ಆಯಿತು.

**ಶ್ರೀ ಪ್ರಕಾಶ್ ಕೆ.ರಾಥೋಡ್:–** ಮಾನ್ಯ ಸಭಾಪತಿಯವರೇ, ನಾನು ಕನ್‌ಕ್ಲೂಡ್ ಮಾಡುತ್ತೇನೆ. ಆದರೆ, ಆಡಳಿತ ಪಕ್ಷದವರೇ objection ಮಾಡುತ್ತಿದ್ದಾರೆ, ಅದಕ್ಕೆ ನಾನೇನು ಮಾಡಲಿ. ಮಾನ್ಯ ಸಚಿವರೇ ಅದರ ಬಗ್ಗೆ ಬೆಳಕು ಚೆಲ್ಲಿ ಎಂದು ಹೇಳಿದ್ದಾರೆ. ನನಗೆ ಮಾತನಾಡಲು ಇನ್ನೂ 10 ನಿಮಿಷ ಅವಕಾಶ ಕೊಡಬೇಕು.

“ ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು ”

(ಗೊಂದಲ)

**ಸಭಾಪತಿಯವರು:–** ಮಾನ್ಯ ಪ್ರಕಾಶ್ ಕೆ.ರಾಥೋಡ್ ರವರೇ, 2 ನಿಮಿಷದಲ್ಲಿ ಮಾತನಾಡಿ ಮುಗಿಸಿ.

**ಶ್ರೀ ಪ್ರಕಾಶ್ ಕೆ.ರಾಥೋಡ್:–** ಮಾನ್ಯ ಸಭಾಪತಿಯವರೇ, 5 ನಿಮಿಷ ಮಾತನಾಡುತ್ತೇನೆ. ಈಗ ಕಾಂಗ್ರೆಸ್ ಪಕ್ಷದಿಂದ ಈ ಸದನದ ಮೂಲಕ ನಾವು ಏನು ಹೇಳುತ್ತಿದ್ದೇವೆಂದರೆ, ಸರ್ಕಾರದಿಂದ ನೆರೆ ಸಂತ್ರಸ್ತರಿಗೆ ಪ್ರತಿ ಮನೆಗೆ 5 ಲಕ್ಷ ರೂಪಾಯಿಗಳ ಪರಿಹಾರ ಕೊಡುತ್ತೇವೆಂದು ಘೋಷಣೆ ಮಾಡಿದ್ದಾರೆ. ನಾವು ನೆರೆ ಸಂತ್ರಸ್ತರಿಗೆ 10 ಲಕ್ಷ ರೂಪಾಯಿಗಳ ಪರಿಹಾರ ಕೊಡಬೇಕೆಂದು ಡಿಮಾಂಡ್ ಮಾಡುತ್ತಿದ್ದೇವೆ. ದಯವಿಟ್ಟು ತಾವು ಅದನ್ನು ಪರಿಗಣನೆ ಮಾಡಬೇಕೆಂದು ಹೇಳುತ್ತಿದ್ದೇವೆ. ಇದರ ಜೊತೆಗೆ ಸ್ವಲ್ಪ ಮನೆಗಳು ನೀರಿನಲ್ಲಿ ಮುಳುಗಿವೆ, ಕೆಳಗೆ ಬಿದ್ದಿಲ್ಲ, ಅದಕ್ಕೂ ಕೂಡ 10 ಲಕ್ಷ ರೂಪಾಯಿಗಳ ಪರಿಹಾರ ಕೊಡಬೇಕೆಂದು ನಾವು ಕೇಳುತ್ತಿದ್ದೇವೆ. ವಿಶೇಷವಾಗಿ ಕಾಫಿ, ಅರೆಕಾನಟ್, ಕೊಕೊನಟ್, ಪೆಪ್ಪರ್ ಮತ್ತು ಇನ್ನಿತರೆ spices ಬೆಳೆಗಳಿಗೆ ಪರಿಹಾರ ಕೊಡಬೇಕು. ಮಾನ್ಯ ಪ್ರಾಣೇಶ್ ರವರೇ, ಆ ಬೆಳೆಗಳು ತಮ್ಮ ಭಾಗದಲ್ಲಿ ನಷ್ಟ ಆಗಿದೆ. ಈ ನಷ್ಟವಾಗಿರತಕ್ಕಂಥದ್ದು ಒಂದೇ ವರ್ಷಕ್ಕೆ ಬರುವುದಿಲ್ಲ. 10–12 ವರ್ಷಗಳಿಗೆ ಈ ಬೆಳೆಗಳು ಬರುತ್ತದೆ. ಇವುಗಳಿಗೆ ಶಾಶ್ವತವಾದ ಪರಿಹಾರವನ್ನು ಸರ್ಕಾರ ಕೊಡಬೇಕು. ಇವರಿಗೂ ಕೂಡ 10 ಲಕ್ಷ ರೂಪಾಯಿಗಳ ಪರಿಹಾರ ಕೊಡಬೇಕೆಂದು ನಾನು ಮಾನ್ಯ ಪ್ರಾಣೇಶ್ ರವರ ಪರವಾಗಿ ಸರ್ಕಾರಕ್ಕೆ ಒತ್ತಾಯ ಮಾಡುತ್ತಿದ್ದೇನೆ.

ಮಾನ್ಯ ಸಭಾಪತಿಯವರೇ, ತಮ್ಮ ಮಲೆನಾಡು ಪ್ರದೇಶಗಳಲ್ಲಿ ಕೂಡ ಇವೆಲ್ಲಾ ಹಾನಿಯಾಗಿದೆ. ಕರಾವಳಿ ಪ್ರದೇಶದಲ್ಲೂ ಕೂಡ ಪ್ರವಾಹದಿಂದ ಹಾನಿ ಆಗಿದೆ. ಕೋಸ್ಟಲ್ ಏರಿಯಾಗಳಾದ ಉಡುಪಿ ಹಾಗೂ ಇನ್ನಿತರೆ ಪ್ರದೇಶಗಳಲ್ಲಿ ಹಾನಿ ಆಗಿದೆ. ವಿಶೇಷವಾಗಿ, ಪಶು ಸಂಗೋಪನೆಗೆ ಹಾನಿಯಾಗಿದೆ. ಸಾಕಷ್ಟು ಪ್ರಾಣಿಗಳು ಸತ್ತಿವೆ. ಅದು ಹಸು ಇರಬಹುದು, ಕುರಿ ಇರಬಹುದು, piggery ಇರಬಹುದು, ಎತ್ತು, ಎಮ್ಮೆಗಳಿರಬಹುದು, poultry ಇರಬಹುದು, ಇವೆಲ್ಲಾ ಸತ್ತು ಏನು ನಷ್ಟ ಆಗಿದೆ, ಅದಕ್ಕಾಗಿ ಯಾರು ಹಸುಗಳನ್ನು ಕಳೆದುಕೊಂಡಿದ್ದಾರೊ, ಯಾರು ಕುರಿಗಳನ್ನು ಕಳೆದುಕೊಂಡಿದ್ದಾರೊ, ಯಾರು ಕೋಳಿಗಳನ್ನು ಕಳೆದುಕೊಂಡಿದ್ದಾರೊ ಅವರಿಗೆ ತಾವು ವಿಶೇಷವಾಗಿ ಒಂದು ಪಶುವಿಗೆ 10,000 ರೂಪಾಯಿಗಳಂತೆ ಪರಿಹಾರ ಕೊಡಬೇಕೆಂದು ನಾವು ಮನವಿ ಮಾಡುತ್ತೇವೆ. ಒಂದು ಎಕರೆ ಬೆಳೆ ನಷ್ಟಕ್ಕೆ 50,000 ರೂಪಾಯಿಗಳಂತೆ ಒಂದು ಹೆಕ್ಟೇರ್‌ಗೆ 1.25 ಲಕ್ಷ ರೂಪಾಯಿಗಳ ಪರಿಹಾರ ಕೊಡಬೇಕೆಂದು ನಾವು ಡಿಮಾಂಡ್ ಮಾಡುತ್ತಿದ್ದೇವೆ. ನರೇಗಾ ಯೋಜನೆಯಡಿಯಲ್ಲಿ ಕೆಲಸ ಆಗುತ್ತಿದೆ, ವಿಶೇಷವಾಗಿ ನೆರೆ ಪರಿಹಾರದಲ್ಲಿ ಬಂದಂಥವರಿಗೆ ತಾವು ಪರಿಹಾರವನ್ನು ಕೊಡಬೇಕು. ನಿರಂತರವಾಗಿ 100 ದಿನಗಳ ಕಾಲ ಕೆಲಸ ಸಿಗಬೇಕು, ಅದನ್ನು ನಿಲ್ಲಿಸಬಾರದು. 100 ಕ್ಕೂ ಹೆಚ್ಚು ದಿನಗಳ ಕಾಲ ಕೆಲಸ ಕೊಡಬೇಕು. ಕೃಷಿ ಕಾರ್ಮಿಕರು, ರೈತರು ಇವರೆಲ್ಲಾ ಚಿಕ್ಕ ಚಿಕ್ಕ ಮನೆಗಳಲ್ಲಿ ಅರಣ್ಯ ಭೂಮಿಗಳಲ್ಲಿ ವಾಸವಾಗಿದ್ದಾರೆ, ಮಾನವೀಯತೆ ದೃಷ್ಟಿಯಿಂದ ಆ ಅರಣ್ಯ ಭೂಮಿಗಳಲ್ಲಿ ಇದ್ದಂಥವರಿಗೆ

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮನೆಗಳನ್ನು ಕಟ್ಟಿಕೊಳ್ಳುವುದಕ್ಕೆ ಅವಕಾಶ ಕೊಟ್ಟು ಹಕ್ಕುಪತ್ರವನ್ನು ಕೊಡಬೇಕೆಂದು ತಮ್ಮ ಮೂಲಕ ವಿನಂತಿ ಮಾಡುತ್ತಿದ್ದೇನೆ. ಇದರ ಜೊತೆಗೆ ವಿಶೇಷವಾಗಿ, ಬಿಜಾಪುರ ಜಿಲ್ಲೆಗೆ ಹಿಂದೆ ಕೂಡ ನೆರೆ ಸಂತ್ರಸ್ತರಿಗೆ ಪರಿಹಾರ ಕೊಟ್ಟಿದ್ದಿರಿ. ಆ ಸಮಯದಲ್ಲಿ ನಾವು ಮನೆಗಳನ್ನು ಕಟ್ಟಿಸಿದ್ದೇವೆ. 22 ಸಾವಿರ ರೂಪಾಯಿಗಳನ್ನು ಆ ಸಮಯದಲ್ಲಿ ಕೊಟ್ಟಿದ್ದೇವೆ, ಅದನ್ನು ಗಣನೆಗೆ ತೆಗೆದುಕೊಂಡು ಈಗ ಪರಿಹಾರ ಕೊಡುತ್ತಿಲ್ಲ. ಅದಕ್ಕೆ ದಯವಿಟ್ಟು ತಾವು ನಿಲ್ಲಿಸಬೇಕು. ಹಿಂದೆ ಕೊಟ್ಟಿರತಕ್ಕಂಥ ಪರಿಹಾರವನ್ನು ಪರಿಗಣಿಸಿ, ಈಗ ಕೊಡದಿರಬಾರದೆಂದು ನಾನು ಹೇಳುತ್ತೇನೆ. ಆಮೇಲೆ ಕೆಲವರು ಸ್ಥಳಾಂತರ ಆಗಿರುತ್ತಾರೆ. ವಿಶೇಷವಾಗಿ ಬೆಳಗಾವಿ ಜಿಲ್ಲೆಯಲ್ಲಿ ಸಾಕಷ್ಟು ಹಳ್ಳಿಗಳು ಮುಳುಗಡೆಯಾಗಿ ಅಲ್ಲಿನ ಜನರು ಸ್ಥಳಾಂತರಗೊಂಡಿದ್ದಾರೆ. ಅದಕ್ಕೆ ಶಾಶ್ವತ ಪರಿಹಾರ ಕೊಡುವಂಥ ಹಳ್ಳಿಗಳನ್ನು ತಾವು ಸ್ಥಳಾಂತರ ಮಾಡಬೇಕಾಗಿದೆ. ಮಾನ್ಯ ಸಿ.ಟಿ.ರವಿಯವರೇ, ಏಕೆ ಒಂದು ಲಕ್ಷ ಕೋಟಿ ರೂಪಾಯಿಗಳಷ್ಟು ಹಣ ಬೇಕಾಗುತ್ತದೆ ಎಂದು ಹೇಳುತ್ತಿದ್ದೇನೆಂದರೆ, ತಾವು ಊರುಗಳನ್ನು ಸ್ಥಳಾಂತರ ಮಾಡಬೇಕಾಗಿದೆ, ಅದು ಅಷ್ಟು ಸುಲಭದ ಕೆಲಸ ಅಲ್ಲ. ನಮ್ಮ ಬಿಜಾಪುರ ಜಿಲ್ಲೆಯಲ್ಲಿ 191 ಹಳ್ಳಿಗಳಿಗೆ ಕನಿಷ್ಠ ಐವತ್ತು ಸಾವಿರ ಕೋಟಿ ರೂಪಾಯಿಗಳು ಬೇಕಾಗಿದೆ. ಇವತ್ತು ಎಷ್ಟು ಹಳ್ಳಿಗಳು ಮುಳುಗಡೆಯಾಗಿವೆ ಅವುಗಳಿಗೆ ಶಾಶ್ವತವಾಗಿ ಸರ್ಕಾರ ಪರಿಹಾರ ಕೊಡಬೇಕು. ಅದಕ್ಕೆ ನಾವು ಒಂದು ಲಕ್ಷ ಕೋಟಿ ರೂಪಾಯಿಗಳ ಪರಿಹಾರ ಕೊಡಬೇಕೆಂದು ಹೇಳುತ್ತಿದ್ದೇವೆ. ಅದಕ್ಕೆ ನಾವು ಸುಮ್ಮನೆ ಇದನ್ನು . . .

(ಗೊಂದಲ)

**ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ (ಸರ್ಕಾರದ ಮುಖ್ಯ ಸಚೇತಕರು):-** ಮಾನ್ಯ ಸಭಾಪತಿಯವರೇ, please do not mind.

(ಗೊಂದಲ)

**ಶ್ರೀ ಪ್ರಕಾಶ್ ಕೆ.ರಾಥೋಡ್:-** ಮಾನ್ಯ ಸಭಾಪತಿಯವರೇ, ತಾವು ಮತ್ತೆ ನನಗೆ ಸಮಯ ಕೊಡುವುದಿಲ್ಲ. ಹಾಗಾಗಿ, ಮಾನ್ಯ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ ರವರಿಗೆ ಅವಕಾಶ ಕೊಟ್ಟಾಗ ಮಾತನಾಡಬಹುದಾಗಿದೆ.

(ಗೊಂದಲ)

**ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ:-** ಮಾನ್ಯ ಸಭಾಪತಿಯವರೇ, ಒಂದು ನಿಮಿಷ. 'ಕಾಂಗ್ರೆಸ್ ನಡಿಗೆ ಕೃಷ್ಣೆಯ ಕಡೆಗೆ' ಎಂದು ಹೇಳಿದ್ದಾರೆ. ಹಾಗಾಗಿ, ಕಳೆದ 5 ವರ್ಷದಲ್ಲಿ ಪುನರ್ವಸತಿಗಾಗಿ ಎಷ್ಟು ಸಾವಿರ ಕೋಟಿ ಕೊಡಲಾಗಿದೆ ಎಂದು ಮಾನ್ಯ ರಾಥೋಡ್‌ರವರು ದಯವಿಟ್ಟು ಹೇಳಬೇಕು.

**ಶ್ರೀ ಹೆಚ್.ಎಂ.ರೇವಣ್ಣ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ನೀರಾವರಿಗೆ ಎಷ್ಟು ಕೊಟ್ಟಿದ್ದೇವೆ ಎಂದು ಲೆಕ್ಕ ಇದೆ. (ಗೊಂದಲ) ಅದಕ್ಕೂ ನೆರೆಗೂ ಏನು ಸಂಬಂಧ ಇದೆ.

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಶ್ರೀ ಪ್ರಕಾಶ್ ಕೆ.ರಾಥೋಡ್:–** ಮಾನ್ಯ ಸಭಾಪತಿಯವರೇ, ನಾನು ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನರವರ ಗಮನಕ್ಕೆ ತರಬಯಸುವುದೇನೆಂದರೆ, ಕರ್ನಾಟಕದಲ್ಲಿ ನಮ್ಮ ಸರ್ಕಾರ ಅಧಿಕಾರದಲ್ಲಿದ್ದಾಗ ನಾವೇನು ವಾಗ್ದಾನ ಮಾಡಿದ್ದೇವೆ, ಅದರಂತೆ ಐವತ್ತು ಸಾವಿರ ಕೋಟಿ ರೂಪಾಯಿಗಳನ್ನು ನೀರಾವರಿಗೆ ಬಿಡುಗಡೆ ಮಾಡಿದ್ದೇವೆ. ಐವತ್ತು ಸಾವಿರ ಕೋಟಿ ರೂಪಾಯಿಗಳ ಕೆಲಸಗಳನ್ನು ಮಾಡಿದ್ದೇವೆ. ಹಿಂದಿನ ಸರ್ಕಾರದಲ್ಲಿ ಬಿಜಾಪುರ ಜಿಲ್ಲೆ ಮತ್ತು ಬೆಳಗಾಂ ಜಿಲ್ಲೆಗಳಲ್ಲಿ ಸಂಪೂರ್ಣ ಕೆಲಸ ಆಗುವುದನ್ನು ನಾವೇ ನೋಡಿದ್ದೇವೆ. ಇವತ್ತು ನಾನು ಸರ್ಕಾರಕ್ಕೆ ವಿನಂತಿ ಮಾಡುವುದೇನೆಂದರೆ, ಒಂದು ಎಕ್ಸ್‌ಪರ್ಟ್ ಕಮಿಟಿ ರಚನೆ ಮಾಡಬೇಕು. ಇತ್ತೀಚಿನ ದಿನಗಳಲ್ಲಿ ನಮ್ಮ ದೇಶದಲ್ಲಿ, ನಮ್ಮ ರಾಜ್ಯದಲ್ಲಿ, ನಮ್ಮ ಉತ್ತರ ಕರ್ನಾಟಕ ಭಾಗದಲ್ಲಿ ಮಳೆ ಬಹಳ ನಿರಂತರವಾಗಿ ಬರುತ್ತಿರುವುದನ್ನು ನಾವೆಲ್ಲಾ ನೋಡುತ್ತಿದೇವೆ.

**(ಮುಂದು...)**

**<u>(141)11.10.2019/11.50/ಎಂ.ಎಂ–ಬಿ.ಎನ್.ಎಸ್</u>**

(ಸಭಾಪತಿಯವರ ಉಪಸ್ಥಿತಿ)

**ಶ್ರೀ ಪ್ರಕಾಶ್ ಕೆ. ರಾಥೋಡ್ (ಮುಂದು):–**
ವರ್ಷಾನುಗಟ್ಟಲೆ ಪ್ರವಾಹ ಆಗುತ್ತಿದೆ. ಆದರೆ ಪ್ರವಾಹವನ್ನು ಶಾಶ್ವತವಾಗಿ ಪರಿಹಾರ ಮಾಡಬೇಕು, ಏಕೆ ಇಷ್ಟು ವಿಕೋಪಕ್ಕೆ ಆಗುತ್ತಿದೆ, environmental hazards ಏನಿದೆ, ಇದರ ಬಗ್ಗೆ ತಜ್ಞರ ಸಮಿತಿ ಮಾಡಿ ಅದನ್ನು ಅಧ್ಯಯನ ಮಾಡಿ ಅದಕ್ಕೆ ಶಾಶ್ವತವಾದ ಪರಿಹಾರವನ್ನು ಕೊಡಬೇಕು. ಅದಕ್ಕೆ ಒಂದು ಲಕ್ಷ ಕೋಟಿ ರೂಪಾಯಿಗಿಂತ ಜಾಸ್ತಿ ತಮಗೆ ಹಣ ಬಿಡುಗಡೆಯಾಗುತ್ತದೆ. ಸಾಕಷ್ಟು ಜನರು ಪ್ರವಾಹದಲ್ಲಿ ಸಿಲುಕಿದ್ದಾರೆ. ಅವರು ತಮ್ಮ ರೇಷನ್ ಕಾರ್ಡ್, ಕೆಲವು ದಾಖಲೆಗಳನ್ನು ಕಳೆದುಕೊಂಡಿದ್ದಾರೆ. ಮಕ್ಕಳು ತಮ್ಮ ಸಮವಸ್ತ್ರಗಳನ್ನು, ಪಠ್ಯಪುಸ್ತಕಗಳನ್ನು ಕಳೆದುಕೊಂಡಿದ್ದಾರೆ. ಅವರಿಗೆ ಕೇವಲ 10,000 ರೂಪಾಯಿಯನ್ನು ಕೊಡುತ್ತಿದ್ದಾರೆ ಅದು ಸಾಕಾಗುವುದಿಲ್ಲ. ಯಾರು ಭೂದಾಖಲೆಗಳನ್ನು ಕಳೆದುಕೊಂಡಿದ್ದಾರೆ ಅವರಿಗೆ duplicate land records ಅನ್ನು ಮಾಡಿ ಅದನ್ನು ಒರಿಜಿನಲ್ ಎಂದು ಟ್ರೀಟ್ ಮಾಡಬೇಕೆಂದು ಸರ್ಕಾರ ಸೂಚನೆ ಕೊಡಬೇಕೆಂದು ಹೇಳುತ್ತಿದ್ದೇನೆ. ಆಧಾರ್ ಕಾರ್ಡ್‌ಗಳನ್ನು ಕಳೆದುಕೊಂಡಿದ್ದಾರೆ, ಅರಣ್ಯ ಹಕ್ಕುಗಳನ್ನು ಕಳೆದುಕೊಂಡಿದ್ದಾರೆ, ವಿದ್ಯಾಭ್ಯಾಸದ ಸರ್ಟಿಫಿಕೇಟುಗಳನ್ನು, ಡ್ರೈವಿಂಗ್ ಲೈಸೆನ್ಸ್‌ಗಳನ್ನು ಕಳೆದುಕೊಂಡಿದ್ದಾರೆ. ಈ ರೀತಿಯ ಹಲವಾರು ತೊಂದರೆಯಲ್ಲಿ ಉತ್ತರ ಕರ್ನಾಟಕದ ಜನರು ಕುಳಿತಿದ್ದಾರೆ.

**ಸಭಾಪತಿಯವರು:–** ಮಾನ್ಯ ಪ್ರಕಾಶ್ ರಾಥೋಡ್‌ರವರೇ, ಬೇಗ ಮುಗಿಸಿ.

**ಶ್ರೀ ಪ್ರಕಾಶ್ ಕೆ. ರಾಥೋಡ್:–** ಮಾನ್ಯ ಸಭಾಪತಿಯವರೆ, ಕನ್‌ಕ್ಲೂಡ್ ಮಾಡುತ್ತಿದ್ದೇನೆ. ನಮ್ಮ ರಾಜ್ಯದಲ್ಲಿ ಇಷ್ಟೆಲ್ಲಾ ಹಾನಿಯಾಗಿದೆ, ಇಂದಿಗೂ ಅಲ್ಲಿ ಮಳೆ ಬರುತ್ತಿದೆ, ನಿದ್ರೆ ಮಾಡುತ್ತಿರುವ ಸರ್ಕಾರವನ್ನು ಎಚ್ಚರಗೊಳಿಸಬೇಕಾಗಿದೆ. ಅವರು ವಿಶೇಷವಾಗಿ ಕೇಂದ್ರಸರ್ಕಾರಕ್ಕೆ, ಪ್ರಧಾನಮಂತ್ರಿಯವರಾದ ಮಾನ್ಯ ನರೇಂದ್ರ

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮೋದಿಯವರಿಗೆ ಮನವರಿಕೆ ಮಾಡಬೇಕು. 25 ಸಂಸದರಿದ್ದಾರೆ, ತಮ್ಮದೇ ಸರ್ಕಾರವಿದೆ, ಆದರೂ ರಾಜ್ಯ ಸರ್ಕಾರಕ್ಕೆ ಇವತ್ತಿನವರೆಗೂ ಒಂದು ಟೈಂ ತೆಗೆದುಕೊಳ್ಳುವುದಕ್ಕೆ ಆಗಿಲ್ಲ. ಕೇಂದ್ರ ಸರ್ಕಾರಕ್ಕೆ ನಾವು ಕೋ–ಆಪರೇಟ್ ಮಾಡುವುದಕ್ಕೆ ತಯಾರಿದ್ದೇವೆ. ವಿರೋಧಪಕ್ಷದವರಾದ ನಾವೆಲ್ಲರೂ ತಮಗೆ ಸಹಕಾರ ಕೊಡುವುದಕ್ಕೆ ತಯಾರಿದ್ದೇವೆ. ತಾವು ನಮ್ಮನ್ನು ಪ್ರಧಾನಮಂತ್ರಿಯವರ ಬಳಿಗೆ ಕರೆದುಕೊಂಡು ಹೋಗಿ. ನಿಮಗೆ ಅವರ ಜೊತೆ ಮಾತನಾಡುವುದಕ್ಕೆ ಧೈರ್ಯವಿಲ್ಲ, ನಾವು ಧೈರ್ಯದಿಂದ ಮಾತನಾಡುತ್ತೇವೆ. ನಿಮಗೆ ಸಮಯವನ್ನಾದರೂ ಕೊಡಿ ಅಥವಾ ನಮ್ಮನ್ನು ಜೊತೆಗಾದರೂ ಕರೆದುಕೊಂಡು ಹೋಗಿ. ದಯವಿಟ್ಟು ಇದರಲ್ಲಿ ರಾಜಕೀಯ ಮಾಡಬೇಡಿ, ಮಾನವೀಯತೆಯ ದೃಷ್ಟಿಯಿಂದ, ನಿದ್ರೆ ಮಾಡುತ್ತಿರುವ ಕೇಂದ್ರ ಸರ್ಕಾರವನ್ನು ಎಚ್ಚರಗೊಳಿಸಿ ನೆರೆ ಸಂತ್ರಸ್ತರು ಜೀವನ ಮಾಡಲು ಅವಕಾಶ ಮಾಡಿಕೊಡಬೇಕೆಂದು ಹೇಳಬಯಸುತ್ತೇನೆ. ಇನ್ನೂ ಹಲವಾರು ಯೋಜನೆಗಳಿವೆ. ತಮ್ಮ ಮುಖಾಂತರ ಮಾನ್ಯ ಸಭಾನಾಯಕರಿಗೆ ಮತ್ತು ಮಾನ್ಯ ಸದಸ್ಯರಾದ ಪ್ರಾಣೇಶ್‌ರವರಿಗೆ ಏಕೆ ಒಂದು ಲಕ್ಷ ಕೋಟಿ ರೂಪಾಯಿ ಬೇಕಾಗಿದೆ ಎಂದರೆ ಇದಕ್ಕೆ ಒಂದು ಹೇಳಿ ಈ ಪುಸ್ತಕವನ್ನು ಕೊಡಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ. ಹಾಗೆಯೇ ಮಾನ್ಯ ಸಚಿವರಾದ ಶ್ರೀ ಸಿ.ಟಿ. ರವಿಯವರಿಗೆ ಈ ಪುಸ್ತಕವನ್ನು ಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ನನಗೆ ಇಷ್ಟು ಮಾತನಾಡಲು ಅವಕಾಶ ಕೊಟ್ಟ ತಮಗೆ ವಂದಿಸುತ್ತಾ ನನ್ನ ಮಾತುಗಳನ್ನು ಮುಗಿಸುತ್ತೇನೆ.

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

## 6. ವಿಶೇಷ ಪ್ರಸ್ತಾವನೆಗಳು (ನಿಯಮ 330ಎ)

**ಅ) ವಿಷಯ:–** ಪದವಿಪೂರ್ವ ಕಾಲೇಜುಗಳ ಉಪನ್ಯಾಸಕರ ಹುದ್ದೆಗಾಗಿ ನಡೆದ ನೇಮಕಾತಿ ಪರೀಕ್ಷೆಗಾಗಿ ಸಿದ್ದಪಡಿಸಿದ ಕೀ ಉತ್ತರಗಳಲ್ಲಿ ತಪ್ಪುಗಳು ಬಂದಿರುವ ಬಗ್ಗೆ.

– – – –

**ಶ್ರೀ ಕೆ.ಟಿ. ಶ್ರೀಕಂಠೇಗೌಡ (ಪದವೀಧರರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ರಾಜ್ಯ ಸರ್ಕಾರಿ ಪದವಿ ಪೂರ್ವ ಕಾಲೇಜುಗಳ ಉಪನ್ಯಾಸಕರ ಹುದ್ದೆಗಾಗಿ ನಡೆದ ನೇಮಕಾತಿಯ ಪರೀಕ್ಷೆಗಾಗಿ ಸಿದ್ದಪಡಿಸಿದ "ಕೀ ಉತ್ತರ"ಗಳಲ್ಲಿ ತಪ್ಪುಗಳು ಕಂಡು ಬಂದಿದ್ದು, ನೇಮಕಾತಿಯ ನಿರೀಕ್ಷಣೆಯಲ್ಲಿದ್ದ ಅಭ್ಯರ್ಥಿಗಳಲ್ಲಿ ಸಹಜವಾಗಿ ಆತಂಕವನ್ನುಂಟು ಮಾಡಿದೆ.

3ನೇ ಬಾರಿ "ಕೀ ಉತ್ತರಗಳನ್ನು ಪ್ರಕಟಿಸಿದ ನಂತರವೂ ಇತಿಹಾಸ ವಿಷಯದಲ್ಲಿ 16, ಕನ್ನಡದಲ್ಲಿ 10 ಹಾಗೂ ಸಮಾಜಶಾಸ್ತ್ರದಲ್ಲಿ 8 ತಪ್ಪುಗಳು ಉಳಿದಿವೆ. ಕನ್ನಡ ವಿಷಯದಲ್ಲಿ 1 ಪ್ರಶ್ನೆಗೆ ಎರಡೆರಡು ಉತ್ತರಗಳು ಸಮಾಜಶಾಸ್ತ್ರದಲ್ಲಿ 1 ಪ್ರಶ್ನೆಗೆ 4 ಉತ್ತರಗಳು ಕೊಟ್ಟಿರುವುದು, ಪ್ರಶ್ನೆಗೆ ಉತ್ತರಿಸದ ಅಭ್ಯರ್ಥಿಗಳಿಗೂ ಗ್ರೇಸ್ ಅಂಕಗಳನ್ನು ನೀಡಿರುವುದು ಇತಿಹಾಸದಲ್ಲಿಯೆ ಕಾಣದಂತಹ ದೊಡ್ಡ ವಿಪರ್ಯಾಸವಾಗಿದೆ.

ಸದರಿ ಕೀ ಉತ್ತರಗಳ ಬಗ್ಗೆ ವಿಶ್ರಾಂತ ಕುಲಪತಿಗಳಾದ ಡಾ॥ ಮಲ್ಲಿಕಾಘಂಟಿ, ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ಶ್ರೀ ಮನುಬಳಿಗಾರ್‌ರವರು ಕೇಂದ್ರ ಸಾಹಿತ್ಯ ಅಕಾಡೆಮಿಯ ಪ್ರಶಸ್ತಿ ಪುರಸ್ಕೃತರಾದ ಶ್ರೀ ದೇವನೂರು ಮಹಾದೇವ್ ಹಾಗೂ ರಾಘವೇಂದ್ರ ಪಾಟೀಲ್‌ರವರುಗಳು ಹಾಗೂ ಇತಿಹಾಸ ತಜ್ಞರು ಮತ್ತು ಸಮಾಜಶಾಸ್ತ್ರ ತಜ್ಞರುಗಳು ಈ ಕೀ ಉತ್ತರಗಳ ಬಗ್ಗೆ ತೀವ್ರವಾದ ಆಕ್ಷೇಪಣೆಗಳನ್ನು ವ್ಯಕ್ತಪಡಿಸಿ ಸ್ಪಷ್ಟೀಕರಣ ಪತ್ರವನ್ನು ನೀಡಿರುತ್ತಾರೆ.

ಆದ್ದರಿಂದ ಈ ವಿಷಯದ ಬಗ್ಗೆ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರಾದ ಶ್ರೀ ಸುರೇಶ್ ಕುಮಾರ್‌ರವರ ಗಮನ ಹರಿಸಿ "ಕೀ ಉತ್ತರಗಳ" ಲೋಪಗಳನ್ನು ಸರಿಪಡಿಸಿ ಸೂಕ್ತ ಉತ್ತರಗಳ ಬಗ್ಗೆ ತಜ್ಞರಿಂದ ಪರಿಷ್ಕರಿಸಿ ಪ್ರಕಟಿಸಿದ ಅನಂತರ ನೇಮಕಾತಿಯ ಪ್ರಕ್ರಿಯೆಯನ್ನು ಮುಂದುವರಿಸಿ ಅರ್ಹ ಅಭ್ಯರ್ಥಿಗಳು ಇಲಾಖೆಗೆ ಆಯ್ಕೆಯಾಗಲು ತಾವುಗಳು ಅನುವು ಮಾಡಿಕೊಡಬೇಕಾಗಿ ಈ ಮೂಲಕ ಕೋರುತ್ತೇನೆ. ಬಹಳ ಆಶ್ಚರ್ಯಕರವೇನೆಂದರೆ, ಒಂದು ಪ್ರಶ್ನೆಗೆ ಎ,ಬಿ,ಸಿ,ಡಿ, ಎಂದು ಉತ್ತರಗಳು ಇರುತ್ತದೆ, ನಾಲ್ಕು ಉತ್ತರಗಳೂ ಸರಿ ಎಂದು ಹೇಳಿದ್ದಾರೆ. ಈ ರೀತಿಯ ಸ್ಥಿತಿಯನ್ನು ನಾವು ಎಂದೂ ಕಂಡಿರಲಿಲ್ಲ, ಸರ್ಕಾರ ಕೂಡಲೇ ಈ ಅನ್ಯಾಯವನ್ನು ಸರಿಪಡಿಸುವ ದಿಸೆಯಲ್ಲಿ ಮುಂದಾಗಬೇಕು, ಮನಸ್ಸಿಗೆ ಬಂದವರಿಗೆ ಗ್ರೇಸ್ ಅಂಕ ಕೊಟ್ಟಿರುವುದನ್ನು ತಡೆಯಬೇಕು, ಯಾರು ಸಮರ್ಥ ಅಭ್ಯರ್ಥಿಗಳಿದ್ದಾರೆ ಅವರಿಗೆ ಮಾತ್ರ ಅವಕಾಶ ಕೊಡಬೇಕೆಂಬ ನಿಯಮವನ್ನು ಜಾರಿಗೆ ತರಬೇಕು ಎಂದು ಆಗ್ರಹಿಸುತ್ತೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು):–** ಮಾನ್ಯ ಸಭಾಪತಿಯವರೇ, ಗೌರವಾನ್ವಿತ ಸದಸ್ಯರಾದ ಶ್ರೀಕಂಠೇಗೌಡರು ನಿಯಮ 330ಎ ಅಡಿಯಲ್ಲಿ ಸಲ್ಲಿಸಿದ ವಿಶೇಷ ಪ್ರಸ್ತಾವನೆಯ ಬಗ್ಗೆ ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರಿಂದ ನಾಳೆ ಉತ್ತರವನ್ನು ನೀಡುತ್ತೇವೆ.

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಆ) ವಿಷಯ:–** ಪಹಣಿಯಲ್ಲಿ ನಮೂದಿಸಿದ ಬೆಳೆಯನ್ನು ಖರೀದಿಸುವ ಸರ್ಕಾರದ ನಿಯಮಗಳ ಕುರಿತು.

– – – –

**ಶ್ರೀ ವಿಜಯಸಿಂಗ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ದಿನಾಂಕ 10–10–2019ರಂದು ವಿಜಯ ಕರ್ನಾಟಕ, ಬೀದರ್ ವರದಿಯಲ್ಲಿ ಪ್ರಕಟಗೊಂಡಿರುವಂತೆ, ಪಹಣಿಯಲ್ಲಿ ನಮೂದಿಸಿದ ಬೆಳೆಯನ್ನು ಮಾತ್ರ ಖರೀದಿಸುವ ಸರ್ಕಾರದ ನಿಯಮಕ್ಕೆ ರೈತರು ವಿರೋಧ ವ್ಯಕ್ತಪಡಿಸಿದ್ದಾರೆ. ಕನಿಷ್ಠ ಬೆಂಬಲ ಬೆಲೆ ಅಡಿಯಲ್ಲಿ ಉದ್ದು ಮತ್ತು ಹೆಸರು ಕಾಳು ಮಾರಾಟಕ್ಕಾಗಿ ನೋಂದಣಿ ಮಾಡಲು ಪಹಣಿ ಹಾಗೂ ಆಧಾರ್ ಕಾರ್ಡ್‌ನೊಂದಿಗೆ ತೆರಳುತ್ತಿರುವ ರೈತರಿಗೆ ತಾಂತ್ರಿಕ ಸಮಸ್ಯೆ ಎದುರಾಗುತ್ತಿದೆ. ರೈತರ ಪಹಣಿಯಲ್ಲಿ ತಮ್ಮ ಜಮೀನಿನಲ್ಲಿ ಬೆಳೆದ ಬೆಳೆಯ ಮಾಹಿತಿ ಸಮರ್ಪಕವಾಗಿ ನಮೂದಾಗದೇ ಇರುವುದರಿಂದ ರೈತರು ಸಮಸ್ಯೆ ಎದುರಿಸುತ್ತಿದ್ದಾರೆ.

ಬೀದರ್ ಜಿಲ್ಲೆಯಲ್ಲಿ 30 ಉದ್ದು ಮತ್ತು ಹೆಸರು ಕಾಳು ಖರೀದಿ ಕೇಂದ್ರಗಳು ಇವೆ. ಇನ್ನೂ 74 ಖರೀದಿ ಕೇಂದ್ರಗಳನ್ನು ಆರಂಭಿಸಲು ಮನವಿ ಮಾಡಿರುತ್ತಾರೆ.

ಆದ್ದರಿಂದ ರೈತರು ಬೆಳೆದಿರುವ ಉದ್ದು ಮತ್ತು ಹೆಸರು ಕಾಳು ಕನಿಷ್ಠ ಬೆಂಬಲ ಬೆಲೆಯ ಅಡಿಯಲ್ಲಿ ಖರೀದಿಸಬೇಕು, ಖರೀದಿಯ ಮಿತಿಯನ್ನು ಹೆಚ್ಚಿಸಬೇಕು ಎಂದು ಮಾನ್ಯ ಸಚಿವರಲ್ಲಿ ಕೇಳಿಕೊಳ್ಳುತ್ತೇನೆ.

**ಶ್ರೀ ಸಿ.ಸಿ. ಪಾಟೀಲ್ (ಗಣಿ ಮತ್ತು ಭೂ ವಿಜ್ಞಾನ ಸಚಿವರು):–** ಮಾನ್ಯ ಸಭಾಪತಿಯವರೇ, ಹೆಸರು ಕಾಳು ಬೆಂಬಲ ಬೆಲೆಗೆ ಖರೀದಿ ಆದೇಶವಾಗಿದೆ. ನಿರ್ದಿಷ್ಟವಾಗಿ ಯಾವ ಜಿಲ್ಲೆ ಎಂದು ಹೇಳಿ.

**ಶ್ರೀ ವಿಜಯ್ ಸಿಂಗ್:–** ಬೀದರ್ ಜಿಲ್ಲೆ.

**ಶ್ರೀ ಸಿ.ಸಿ. ಪಾಟೀಲ್:–** ಆಗಲಿ ಮಾಡಿಸಿಕೊಡುತ್ತೇವೆ.

**ಶ್ರೀ ಎಸ್.ಆರ್. ಪಾಟೀಲ್ (ವಿರೋಧ ಪಕ್ಷದ ನಾಯಕರು):–** ಮಾನ್ಯ ಸಚಿವರೇ, ಅವರು ಪಹಣಿಯಲ್ಲಿ ನಮೂದಿಸಿದ ಬೆಳೆಯನ್ನು ಮಾತ್ರ ಖರೀದಿಸುವ ಬೆಳೆಗಳ ಬಗ್ಗೆ ಕೇಳಿದ್ದಾರೆ. ಪಹಣಿಯಲ್ಲಿ ರೈತರು ಯಾವ ಬೆಳೆಗಳನ್ನು ಬೆಳೆದಿದ್ದಾರೆ ಎನ್ನುವುದನ್ನು ತಿಳಿಸಿರುತ್ತಾರೆ. ಅಂದರೆ, ಜೋಳ, ಗೋಧಿ, ಅಕ್ಕಿ, ಶೇಂಗಾ ಅದರಲ್ಲಿ ಯಾವುದನ್ನು mention ಮಾಡಿದ್ದಾರೆ ಅದನ್ನು ಮಾತ್ರ ಖರೀದಿ ಮಾಡುತ್ತೇವೆಂದು ಎಂದಿರುವ ವಿಚಾರವನ್ನು ವ್ಯಕ್ತಪಡಿಸಿದ್ದಾರೆ. ಇಲ್ಲಿ ಬೆಂಬಲ ಬೆಲೆಯ ಪ್ರಶ್ನೆ ಬರುವುದಿಲ್ಲ. ದಯಮಾಡಿ ಸಂಬಂಧಪಟ್ಟ ಸಚಿವರಿಂದ ಉತ್ತರ ಕೊಡಿಸಿ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು):–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಶ್ರೀ ವಿಜಯ್ ಸಿಂಗ್‌ರವರು ಉಲ್ಲೇಖಿಸಿದ ನಿಯಮ 330ಎ ಅಡಿಯಲ್ಲಿ ಮಾಡಿದ ಪ್ರಸ್ತಾವನೆಗೆ ಮಾನ್ಯ ಉಪಮುಖ್ಯಮಂತ್ರಿಯವರು ಮತ್ತು ಮಾನ್ಯ ಸಾರಿಗೆ ಮತ್ತು ಕೃಷಿ ಸಚಿವರಿಂದ ನಾಳೆ ಉತ್ತರ ಕೊಡಿಸುತ್ತೇನೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಇ) **ವಿಷಯ:–** ಉತ್ತರ ಕನ್ನಡ ಜಿಲ್ಲೆ 2006ರ ನಂತರ ನೇಮಕಗೊಂಡ ಶಾಲಾ ಶಿಕ್ಷಕರಿಗೆ ಮತ್ತು ಶಿಕ್ಷಕೇತರ ಸಿಬ್ಬಂದಿಗಳಿಗೆ ಎನ್.ಪಿ.ಎಸ್. ಪಿಂಚಣಿ ಯೋಜನೆ ಜಾರಿಗೊಳಿಸುವ ಬಗ್ಗೆ.

– – – –

**ಶ್ರೀ ಎಸ್.ವ್ಹಿ. ಸಂಕನೂರ(ಪದವೀಧರರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ರಾಜ್ಯದ ಪ್ರಮುಖ ಪತ್ರಿಕೆಗಳಾದ ವಿಜಯವಾಣಿ, ವಿಜಯ ಕರ್ನಾಟಕ, ಕನ್ನಡ ಪ್ರಭ, ಪ್ರಜಾವಾಣಿ, ಸಂಯುಕ್ತ ಕರ್ನಾಟಕ, ಮುಂತಾದ ದಿನ ಪತ್ರಿಕೆಗಳಲ್ಲಿ ವರದಿಯಾಗಿರುವಂತೆ– ಕಾರವಾರ ಜಿಲ್ಲೆಯ ನೂರಾರು ಶಾಲಾ ಕಾಲೇಜುಗಳ ಶಿಕ್ಷಕ ಹಾಗೂ ಶಿಕ್ಷಕೇತರ ಸಿಬ್ಬಂದಿಯವರು 2006ರ ನಂತರ ನೇಮಕಗೊಂಡ ಸಿಬ್ಬಂದಿಗೆ ಯಾವ ಪಿಂಚಣಿ ವ್ಯವಸ್ಥೆ ಇರುವುದಿಲ್ಲ. ಹಾಗಾಗಿ ನಿವೃತ್ತಿ ನಂತರದ ಜೀವನವನ್ನು ಸಾಗಿಸುವುದು ಬಹಳ ಕಷ್ಟಕರವಾಗುತ್ತದೆ. ಆದ್ದರಿಂದ ಸರಕಾರಿ ನೌಕರರಿಗೆ ನೀಡಿದಂತೆ ಎನ್.ಪಿ.ಎಸ್. ಪಿಂಚಣಿ ಯೋಜನೆಯನ್ನು ತಮಗೂ ನೀಡಬೇಕು ಎಂಬ ಪ್ರಮುಖ ಬೇಡಿಕೆಗಳನ್ನು ಮುಂದಿಟ್ಟುಕೊಂಡು ದಿನಾಂಕ 9–10–2019ರಿಂದ ಕಾರವಾರ ಜಿಲ್ಲಾಧಿಕಾರಿಗಳ ಕಛೇರಿಯ ಎದುರು ಅನಿರ್ದಿಷ್ಟಾವಧಿ ಹಾಗೂ ಅಹೋ ರಾತ್ರಿ ಧರಣಿ ಹಮ್ಮಿಕೊಂಡಿರುವರುವರು.

ಸಂಘದ ಇನ್ನುಳಿದ ಬೇಡಿಕೆಗಳಾದ ಕಾಲ್ಪನಿಕ ವೇತನಕ್ಕೆ ಸಂಬಂಧಿಸಿದಂತೆ, ಹಿರಿಯ ವಿಧಾನ ಪರಿಷತ್ ಸದಸ್ಯರಾದ ಮಾನ್ಯ ಶ್ರೀ ಬಸವರಾಜ ಹೊರಟ್ಟಿಯವರು ಸರಕಾರಕ್ಕೆ ಸಲ್ಲಿಸಿದ ವರದಿಯನ್ನು ಸಂಪೂರ್ಣವಾಗಿ ಯಥಾವತ್ತಾಗಿ ಜಾರಿ ಮಾಡಬೇಕು ಮತ್ತು ಶಿಕ್ಷಕರ ಕುಟುಂಬಕ್ಕೆ ಆರೋಗ್ಯ ವಿಮೆ ಜಾರಿಗೆ ನೀಡುವುದು, ಇದೂ ಅಲ್ಲದೇ ಅನೇಕ ವರ್ಷಗಳಿಂದ ಸೇವೆ ಸಲ್ಲಿಸುತ್ತಿರುವ ‘ಡಿ’ ದರ್ಜೆ ನೌಕರರನ್ನು ಖಾಯಂಗೊಳಿಸಿ ವೇತನ ಬಿಡುಗಡೆಗೊಳಿಸುವುದು ಹಾಗೂ ಪ್ರತೀ ವರ್ಗಕ್ಕೆ ಇರುವ ವಿದ್ಯಾರ್ಥಿ ಹಾಗೂ ಶಿಕ್ಷಕರ ಅನುಪಾತ ಕಡಿಮೆ ಮಾಡಬೇಕು ಎಂದು ಮಾನ್ಯ ಮುಖ್ಯಮಂತ್ರಿಗಳು ಹಾಗೂ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರನ್ನು ಆಗ್ರಹಿಸಿದ್ದಾರೆ. ಎನ್.ಪಿ.ಎಸ್. ಪಿಂಚಣಿ ಯೋಜನೆಗೆ ಸಂಬಂಧಿಸಿದಂತೆ ಸರಕಾರದ ಗಮನಕ್ಕೆ ನಾನು ತರಬಯಸುವುದೇನೆಂದರೆ ಈಗಾಗಲೇ ಮಹಾರಾಷ್ಟ್ರ, ಕೇರಳ, ಒರಿಸ್ಸಾ, ಆಂಧ್ರಪ್ರದೇಶ ಹಾಗೂ ತಮಿಳುನಾಡು ಸರಕಾರಗಳು ಅನುದಾನಿತ ಸಿಬ್ಬಂದಿಗಳ ಪಿಂಚಣಿ ವಂತಿಕೆಯನ್ನು ಸರಕಾರವೇ ಭರಿಸುವುದರ ಮೂಲಕ ಎನ್.ಪಿ.ಎಸ್. ಯೋಜನೆಯನ್ನು ಜಾರಿ ಮಾಡಿರುತ್ತಾರೆ. ಆದ್ದರಿಂದ ಕರ್ನಾಟಕ ಸರಕಾರವೂ ಕೂಡ ಬೇರೆ ರಾಜ್ಯಗಳಂತೆ ಎನ್.ಪಿ.ಎಸ್. ಪಿಂಚಣಿ ಯೋಜನೆ ಜಾರಿಗೆ ತರಲು ಒತ್ತಾಯಿಸುವೆನು. ಅದರಂತೆ ಕಾಲ್ಪನಿಕ ವೇತನ ಸಮಸ್ಯೆ ಹಾಗೂ ಸಂಘದವರ ಇನ್ನಿತರ ಬೇಡಿಕೆಗಳನ್ನು ಈಡೇರಿಸಲು ಸರ್ಕಾರಕ್ಕೆ ಈ ಮೂಲಕ ನಾನು ಆಗ್ರಹಿಸುತ್ತೇನೆ.

“ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು):–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಶ್ರೀ ಎಸ್.ವ್ಹಿ. ಸಂಕನೂರರವರು ನಿಯಮ 330ಎ ಅಡಿಯಲ್ಲಿ ಪ್ರಸ್ತಾಪಿಸಿದ ಪ್ರಸ್ತಾವನೆಗೆ ಮಾನ್ಯ ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರಿಂದ ಉತ್ತರ ಕೊಡಿಸುತ್ತೇನೆ.

(ಮುಂದು . . .

(142) 11–10–2019 /12–00/ಕೆಹೆಚ್–ಕೆಎಸ್ 34

**(ಸಭಾಪತಿಯವರ ಉಪಸ್ಥಿತಿ)**

ಈ) ಇತ್ತೀಚೆಗೆ ಅಸಂಖ್ಯಾತ ಜನರು ಸೈಬರ್ ಮೂಲದ ಹಣ ಕಳವು ಮತ್ತು ವಂಚನೆಗೆ ಒಳಗಾಗುತ್ತಿರುವ ಬಗ್ಗೆ

***

**ಶ್ರೀ ಎನ್. ಅಪ್ಪಾಜಿಗೌಡ:–** ಮಾನ್ಯ ಸಭಾಪತಿಯವರೇ, ಅವಕಾಶಕ್ಕಾಗಿ ವಂದಿಸುತ್ತಾ, ರಾಜ್ಯದಲ್ಲಿ ಇತ್ತೀಚೆಗೆ ಅಸಂಖ್ಯಾತ ಜನರು ಸೈಬರ್ ಮೂಲದ ಹಣ ಕಳವು ಮತ್ತು ವಂಚನೆಗೆ ಒಳಗಾಗುತ್ತಿರುವ ಬಗ್ಗೆ ನಿಯಮ "330 ಎ" ಮೇರೆಗೆ ಅತಿ ಮಹತ್ತರವಾದ ವಿಷಯವನ್ನು ಪ್ರಸ್ತಾಪಿಸಲು ಇಚ್ಚಿಸುತ್ತೇನೆ.

ರಾಜ್ಯದಲ್ಲಿ ಇತ್ತೀಚೆಗೆ ಅಸಂಖ್ಯಾತ ಜನರು ಸೈಬರ್ ಮೂಲದ ಹಣ ಕಳವು ಮತ್ತು ವಂಚನೆಗೆ ಒಳಗಾಗುತ್ತಿದ್ದಾರೆ. ವಂಚನೆಗೆ ಒಳಗಾದ ಜನರ ಪೈಕಿ ವೃದ್ಧರು ಹಾಗೂ ಅವಿದ್ಯಾವಂತರೇ ಹೆಚ್ಚು. ಸರ್ಕಾರವು ಜನರನ್ನು ಆಧುನಿಕ ಬ್ಯಾಂಕಿಂಗ್ ವ್ಯವಸ್ಥೆಯ ಬಳಕೆಯನ್ನು ಮಾಡಲು ಉತ್ತೇಜಿಸುತ್ತಿರುವಾಗ, ಆ ಮುಗ್ಧ ಜನರು ಕಷ್ಟಪಟ್ಟು ದುಡಿದಂತಹ ಹಣವನ್ನು ಕಾಪಾಡುವ ಜವಾಬ್ದಾರಿ ಸರ್ಕಾರದ್ದೇ ಆಗಿರುತ್ತದೆ. ಈ ನಿಟ್ಟಿನಲ್ಲಿ ಮಾನ್ಯ ಗೃಹ ಸಚಿವರು ನಮ್ಮ ರಾಜ್ಯದಲ್ಲಿ ಸೈಬರ್ ಕ್ರೈಮ್ ಹಣ ವಂಚನೆ ಮತ್ತು ಕಳವುಗಳ ಬಗ್ಗೆ ಕಳೆದ 3 ವರ್ಷಗಳಲ್ಲಿ ದಾಖಲಾದ ಪ್ರಕರಣಗಳು, ಅದರಲ್ಲಿ ಜನರು ಮೋಸಗೊಂಡ ಹಣದ ಮೊತ್ತ, ಈ ಪ್ರಕರಣಗಳ ಪೈಕಿ ಎಷ್ಟು ಪ್ರಕರಣಗಳ ಬಗ್ಗೆ ಚಾರ್ಜ್‌ಶೀಟ್ ಆಗಿವೆ, ಎಷ್ಟು ಹಣ ರಿಕವರಿ ಆಗಿದೆ, ಎಷ್ಟು ಆರೋಪಿಗಳನ್ನು ಗುರುತಿಸಿದೆ (ಚಾರ್ಜ್‌ಶೀಟ್ ಮತ್ತು ಎಫ್.ಐ.ಆರ್. ಪ್ರಕಾರ) ಹಾಗೂ ಈ ಆರೋಪಿಗಳ ಪೈಕಿ ಎಷ್ಟು ಜನರನ್ನು ದಸ್ತಗಿರಿ ಮಾಡಲಾಗಿದೆ ಮತ್ತು ಇತರೆ ಅವಶ್ಯಕ ಮಾಹಿತಿಗಳನ್ನು ಈ ಸದನಕ್ಕೆ ತಿಳಿಯಪಡಿಸಿ, ಸರ್ಕಾರವು ಈ ರೀತಿಯ ಸೈಬರ್ ಮೂಲದ ಹಣ ವಂಚನೆ ಹಾಗೂ ಕಳವುಗಳನ್ನು ತಡೆಯಲು ಮತ್ತು ಈಗಾಗಲೇ ದಾಖಲಾದ ಪ್ರಕರಣಗಳ ಪತ್ತೆಗೆ ತೆಗೆದುಕೊಂಡಿರುವ ಕ್ರಮಗಳ ಬಗ್ಗೆ ಅಥವಾ ಕೈಗೊಳ್ಳಲಿರುವ ಕ್ರಮಗಳ ಬಗ್ಗೆ ನಿಯಮ "330 ಎ" ಮೇರೆಗೆ ಚರ್ಚಿಸಲು ತಮ್ಮಲ್ಲಿ ನಮ್ರತೆಯಿಂದ ವಿನಂತಿಸುತ್ತೇನೆ.

" ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾ ನಾಯಕರು):–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಶ್ರೀ ಅಪ್ಪಾಜಿಗೌಡರವರು ಮಾಡಿರುವಂತಹ ವಿಶೇಷ ಪ್ರಸ್ತಾವನೆಯು ಬಹಳ ಗಂಭೀರವಾದ ಪ್ರಕರಣವಾಗಿದ್ದು ಮಾನ್ಯ ಗೃಹ ಸಚಿವರಿಂದ ಉತ್ತರವನ್ನು ಒದಗಿಸುತ್ತೇನೆ.

## 7. ಪ್ರಕಟಣೆಗಳು

**ಸಭಾಪತಿಯವರು:–** ಅ) ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಹಾಗೂ ನಡವಳಿಕೆಯ **ನಿಯಮ 9ರ ಮೇರೆಗೆ** ಮಾನ್ಯ ಸಭಾಪತಿಯವರ ಮತ್ತು ಉಪ ಸಭಾಪತಿಯವರ ಗೈರು ಹಾಜರಿಯಲ್ಲಿ ಸಭಾಪತಿಯವರ ಸ್ಥಾನದಲ್ಲಿ ಪದಧಾರಣ ಮಾಡಲು ಈ ಮುಂದಿನ ಸದಸ್ಯರುಗಳನ್ನು ನಾಮನಿರ್ದೇಶನ ಮಾಡಲಾಗಿದೆ.

1. ಶ್ರೀ ಕೆ.ಸಿ.ಕೊಂಡಯ್ಯ
2. ಶ್ರೀ ಅಲ್ಲಂ ವೀರಭದ್ರಪ್ಪ
3. ಡಾ॥ ತೇಜಸ್ವಿನಿ ಗೌಡ
4. ಶ್ರೀ ಕೆ.ಟಿ. ಶ್ರೀಕಂಠೇಗೌಡ

**ಆ)** ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಹಾಗೂ ನಡವಳಿಕೆಯ **ನಿಯಮ 222ರ ಮೇರೆಗೆ** 139ನೇ ಅಧಿವೇಶನದಲ್ಲಿ ಕಾರ್ಯಕಲಾಪಗಳ ಸಲಹಾ ಸಮಿತಿಯನ್ನು ಈ ಮುಂದಿನಂತೆ ರಚಿಸಲಾಗಿದೆ.

| | | |
|---|---|---|
| 1. ಶ್ರೀ ಎಸ್.ಎಲ್.ಧರ್ಮೇಗೌಡ | – | ಮಾನ್ಯ ಉಪ ಸಭಾಪತಿಯವರು |
| 2. ಶ್ರೀ ಕೋಟ ಶ್ರೀನಿವಾಸ ಪೂಜಾರಿ | – | ಮಾನ್ಯ ಸಭಾನಾಯಕರು ಹಾಗೂ ಮುಜರಾಯಿ, ಮೀನುಗಾರಿಕೆ ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರು |
| 3. ಶ್ರೀ ಎಸ್.ಆರ್. ಪಾಟೀಲ್ | – | ವಿಧಾನ ಪರಿಷತ್ತಿನ ಮಾನ್ಯ ವಿರೋಧ ಪಕ್ಷದ ನಾಯಕರು |
| 4. ಶ್ರೀ ಕವಟಗಿಮಠ ಮಹಾಂತೇಶ್ ಮಲ್ಲಿಕಾರ್ಜುನ | – | ವಿಧಾನ ಪರಿಷತ್ತಿನ ಮಾನ್ಯ ಸರ್ಕಾರಿ ಮುಖ್ಯ ಸಚೇತಕರು |
| 5. ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ | – | ವಿಧಾನ ಪರಿಷತ್ತಿನ ಸದಸ್ಯರು |
| 6. ಶ್ರೀ ಆಯನೂರು ಮಂಜುನಾಥ್ | – | ವಿಧಾನ ಪರಿಷತ್ತಿನ ಸದಸ್ಯರು |
| 7. ಡಾ॥ ವೈ.ಎ. ನಾರಾಯಣಸ್ವಾಮಿ | – | ವಿಧಾನ ಪರಿಷತ್ತಿನ ಸದಸ್ಯರು |
| 8. ಶ್ರೀ ಆರ್. ಚೌಡರೆಡ್ಡಿ ತೂಪಲ್ಲಿ | – | ವಿಧಾನ ಪರಿಷತ್ತಿನ ಸದಸ್ಯರು |

### ವಿಶೇಷ ಆಹ್ವಾನಿತರು

| | | |
|---|---|---|
| 9. ಶ್ರೀ ಬಿ.ಎಸ್.ಯಡಿಯೂರಪ್ಪ | – | ಮಾನ್ಯ ಮುಖ್ಯಮಂತ್ರಿಗಳು |
| 10. ಶ್ರೀ ಜೆ.ಸಿ. ಮಾಧುಸ್ವಾಮಿ | – | ಮಾನ್ಯ ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ |

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಹಾಗೂ ಸಣ್ಣ ನೀರಾವರಿ ಸಚಿವರು

ಮಾನ್ಯ ಸಭಾಪತಿಯವರು ಕಾರ್ಯಕಲಾಪಗಳ ಸಲಹಾ ಸಮಿತಿಯ ಅಧ್ಯಕ್ಷರಾಗಿರುತ್ತಾರೆ.

**ಶ್ರೀ ಕೆ.ಟಿ.ಶ್ರೀಕಂಠೇಗೌಡ (ಪದವೀಧರರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ನಮ್ಮ ಜೆ.ಡಿ.ಎಸ್. ಪಕ್ಷದವರು ಮಾತನಾಡುವುದಕ್ಕೆ ತಾವು ಅವಕಾಶವನ್ನೇ ಕೊಟ್ಟಿಲ್ಲ. ಕಾಂಗ್ರೆಸ್ ಮತ್ತು ಆಡಳಿತ ಪಕ್ಷಕ್ಕೆ ಅವಕಾಶವನ್ನು ಕೊಟ್ಟಿದ್ದೀರಿ. ನಮ್ಮ ಜೆ.ಡಿ.ಎಸ್. ಪಕ್ಷವನ್ನು ಏನಾದರೂ ಮರೆತುಬಿಟ್ಟಿದ್ದೀರಾ?

**ಸಭಾಪತಿಯವರು:-** ಮಾನ್ಯ ಸದಸ್ಯರಾದ ಶ್ರೀಕಂಠೇಗೌಡರವರೇ, ಮುಂದಿನ ಅವಕಾಶವನ್ನು ತಮಗೆ ನೀಡಲಾಗುವುದು.

**8. ನಿಯಮ 68ರ ಮೇರೆಗೆ ಮುಂದುವರೆದ ಚರ್ಚೆ**

**ವಿಷಯ: ರಾಜ್ಯದಲ್ಲಿ ಭಾರಿ ಮಳೆ ಮತ್ತು ಪ್ರವಾಹದಿಂದಾಗಿ ಉಂಟಾಗಿರುವ ಅನಾಹುತದಿಂದ ಸಂಕಷ್ಟಕ್ಕೀಡಾಗಿರುವ ಜನರಿಗೆ ಪರಿಹಾರ ಒದಗಿಸುವಲ್ಲಿ ಸರ್ಕಾರವು ವಿಫಲವಾಗಿರುವ ಬಗ್ಗೆ.**

* * *

**ಶ್ರೀ ಎನ್.ಎಸ್.ಬೋಸ್‌ರಾಜು (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ನಿಯಮ 68ರ ಮೇಲೆ ಚರ್ಚೆ ಮಾಡುವುದಕ್ಕೆ ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ಧನ್ಯವಾದಗಳನ್ನು ಆರ್ಪಿಸುತ್ತೇನೆ. ಈಗಾಗಲೇ ನಮ್ಮ ವಿರೋಧಪಕ್ಷದ ನಾಯಕರು ಮತ್ತು ಮಾನ್ಯ ಸಚಿವರು ಮಾತನಾಡಿರುವಂತೆ ಆಗಸ್ಟ್ 3 ರಿಂದ 10ನೇ ತಾರೀಖಿನವರೆಗೂ ರಾಜ್ಯದಲ್ಲಿ ಅದರಲ್ಲೂ ಮುಖ್ಯವಾಗಿ ಉತ್ತರ ಕರ್ನಾಟಕದಲ್ಲಿ ಇತಿಹಾಸದಲ್ಲಿಯೇ ಅತಿ ಹೆಚ್ಚು ಮಳೆ ಆಗಿರುವಂತಹ ಸಂದರ್ಭವಿರುವುದರಿಂದ 22 ಜಿಲ್ಲೆಗಳಲ್ಲಿ 34 ತಾಲ್ಲೂಕುಗಳನ್ನು ಒಳಪಟ್ಟಿರುವಂತಹ ಪ್ರದೇಶಗಳಲ್ಲಿ ಸಾಕಷ್ಟು ತೊಂದರೆಯಾಗಿರುವಂತಹದ್ದು, ಅದರಲ್ಲಿ ಇದೇ ಮೊದಲನೇ ಬಾರಿಗೆ 90 ಜನರು, ಅನೇಕ ಜಾನುವಾರುಗಳು ಸತ್ತಿದ್ದು, ಮತ್ತು ಮನೆಗಳು ಪೂರ್ತಿಯಾಗಿ ನೆಲಸಮವಾಗಿರುವಂತಹದ್ದು, ಬೆಳೆ ನಾಶವಾಗಿರುವಂತಹದ್ದು ಆಗಿದ್ದು, severe damages to various public property such as roads, bridges, PHC (Primary Health Centre) buildings, anganwadis, school buildings ಮತ್ತು ಇನ್ನು ಸಾಕಷ್ಟು ನಷ್ಟವನ್ನು ಅನುಭವಿಸಿರುವಂತಹದ್ದು ಆಗಿದೆ. ಇದರಿಂದ 7 ಲಕ್ಷ ಜನರ ಮೇಲೆ ಪರಿಣಾಮವಾಗಿರುವಂತಹದ್ದು ಮತ್ತು ನಷ್ಟವನ್ನು ಅನುಭವಿಸಿರುವಂತಹದ್ದು ಆಗಿದೆ. ಅದರಲ್ಲಿ 2 ಲಕ್ಷಕ್ಕೂ ಮೀರಿ house loss ಆಗಿರುವಂತಹದ್ದು, 1.65 ಲಕ್ಷ ಮನೆಗಳು ಪೂರ್ತಿಯಾಗಿ ಬಿದ್ದುಹೋಗಿರುವಂತಹದ್ದು, ಅದೇ ರೀತಿ 13 ಲಕ್ಷ ಎಕರೆ ಜಮೀನು soil erosion ಆಗಿರುವಂತಹದ್ದು, ಅನೇಕ

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಸಂದರ್ಭದಲ್ಲಿ ಹೆಚ್ಚಿನ ಮಳೆ ಬಂದಿರುವುದರಿಂದ ಮತ್ತು ನಾಲೆ ಹಳ್ಳಗಳು ತುಂಬಿರುವಂತಹ ಸಂದರ್ಭದಲ್ಲಿ ಶಾಲೆಗಳು 4 ಅಡಿ ಯಿಂದ 6 ಅಡಿ ಆಳದಲ್ಲಿ ಕೊಚ್ಚಿಕೊಂಡು ಹೋಗಿರುವಂತಹದ್ದು ಆಗಿದೆ.

**(ಈ ಹಂತದಲ್ಲಿ ವೈಸ್ ಚೇರ್ಮನ್ ಶ್ರೀ ಕೆ.ಸಿ. ಕೊಂಡಯ್ಯನವರು ಸಭಾಪತಿಯವರ ಪೀಠವನ್ನು ಅಲಂಕರಿಸಿದರು.)**

ಇದನ್ನೆಲ್ಲಾ ದುರಸ್ತಿಪಡಿಸಿ ವ್ಯವಸಾಯ ಮಾಡಬೇಕಾದರೆ ಕನಿಷ್ಠ 5–6 ವರ್ಷಗಳ ಕಾಲ ಸಮಯ ಬೇಕಾಗುತ್ತದೆ. ಇವತ್ತಿನ ದಿವಸ ಇದನ್ನು ಗುರುತಿಸುವಂತಹ ಪ್ರಯತ್ನವನ್ನು ಮಾಡಬೇಕಾಗಿದೆ. ಅದೇ ರೀತಿ 60 ಸಾವಿರ electrical poles, 15 ಸಾವಿರ ಟ್ರಾನ್ಸ್‌ಫಾರ್ಮರ್ಸ್, ಅನೇಕ ರೀತಿಯ ಲೈನ್ಸ್‌ಗಳು ಹಾಳಾಗಿದ್ದು, ರೈತರಿಗೆ ತುಂಬಾ ತೊಂದರೆಯಾಗಿರುವಂತಹದ್ದನ್ನು ಎಲ್ಲರೂ ಗಮನಿಸಿ, ಇದರ ಬಗ್ಗೆ ವರದಿಯನ್ನು ನೀಡಲಾಗಿದೆ. ಇದರ ಜೊತೆಯಲ್ಲಿ ಉತ್ತರ ಕರ್ನಾಟಕದಲ್ಲಿ ಕೃಷ್ಣಾ ನದಿ, ಭೀಮಾ ನದಿ ಮತ್ತು ತುಂಗಾಭದ್ರಾ ನದಿಯ ಮೂಲಕ ಅನೇಕ ರೈತರು ತಮ್ಮದೇ lift irrigation system ಅನ್ನು ಮಾಡಿಕೊಂಡಿದ್ದಾರೆ. ಇನ್ನು ತುಂಗಾಭದ್ರಾ ನದಿಯ ಹೊಸಪೇಟೆಯಿಂದ ಹಿಡಿದು ಮಂತ್ರಾಲಯಕ್ಕೆ ಹೋಗುವಂತಹ ರಾಯಚೂರು–ಕೊಪ್ಪಳ ಜಿಲ್ಲೆಯಲ್ಲಿ, ಹಾಗೆಯೇ ಕೃಷ್ಣಾ ಮತ್ತು ಭೀಮಾ ನದಿಯ ಮೂಲಕ ಸಾವಿರಾರು lift irrigation schemes ಇದೆ. ಅದರಲ್ಲಿ ಹಲವು Government lift irrigation schemes ಇವೆ. ಆ ಭಾಗದ machinery and jack wells ಎಲ್ಲವೂ ನದಿಯಲ್ಲಿ ಕೊಚ್ಚಿಕೊಂಡು ಹೋಗಿರುವಂತಹದ್ದು ಆಗಿದೆ. ರೈತರಿಗೆ ಆಗಿರುವಂತಹ ನಷ್ಟದ ಬಗ್ಗೆ ಅಧಿಕಾರಿಗಳು ಅಂದಾಜು ಮಾಡುವಂತಹ ಪ್ರಯತ್ನವನ್ನು ಮಾಡಿಲ್ಲ. ಈ ವಿಷಯದ ಬಗ್ಗೆಯೂ ಕೂಡ ಸರ್ಕಾರ ಗಮನವನ್ನು ಹರಿಸಬೇಕು. ಈ ದಿಸೆಯಲ್ಲಿ ಅತಿ ಮುಖ್ಯವಾಗಿ ನಮ್ಮ ಎಲ್ಲಾ ವಿರೋಧ ಪಕ್ಷದ ನಾಯಕರು ಮತ್ತು ಮಾನ್ಯ ಸದಸ್ಯರು ಇದರ ಬಗ್ಗೆ ಮಾತನಾಡಿದ್ದಾರೆ. ಆಲಮಟ್ಟಿ ಮತ್ತು ನಾರಾಯಣಪುರದಿಂದ 6 ಲಕ್ಷ ಕ್ಯೂಸೆಕ್ಸ್ ನೀರು ಹರಿದು ಬಂದಿದೆ ಎಂದು ಮಾತನಾಡುತ್ತಿದ್ದಾರೆ. ಭೀಮಾ ನದಿಯು ರಾಯಚೂರಿನ ಕಾಡಲೂರು ಹಳ್ಳಿಯ ಹತ್ತಿರ ಕೃಷ್ಣಾ ನದಿಗೆ ಸೇರುತ್ತದೆ. ಇದು ಗುಲ್ಬರ್ಗಾ–ಯಾದಗಿರಿ ಜಿಲ್ಲೆಯಲ್ಲಿಯೂ ಬರುತ್ತದೆ. 3 ಲಕ್ಷ ಕ್ಯೂಸೆಕ್ಸ್ ನೀರು ಹರಿದು ಬಂದಿರುವ ಬಗ್ಗೆ ರೆಕಾರ್ಡ್ ಆಗಿದೆ. 6 ಲಕ್ಷ ಆಲಮಟ್ಟಿ ಜಲಾಶಯದಿಂದ ನಾರಾಯಣಪುರ ಜಲಾಶಯದ ಮೂಲಕ ಮುಂದುವರೆದು ಈ ರಾಯಚೂರು ಭಾಗದಲ್ಲಿ ಕಾಡಲೂರು ಹಳ್ಳಿಯ ಹತ್ತಿರ 3 ಲಕ್ಷ ಕ್ಯೂಸೆಕ್ಸ್ ನೀರು ಹರಿದು ಬಂದು ಸೇರಿರುವುದರಿಂದ, ಇವತ್ತಿನ ದಿವಸ 9 ಲಕ್ಷ ಕ್ಯೂಸೆಕ್ಸ್ ನೀರು ಹರಿದು ಬಂದಿದೆ ಎಂದು ರೆಕಾರ್ಡ್ ಮಾಡಿರುವಂತಹದ್ದು ಆಗಿದೆ. About 9 lakh cusecs of water, ರಾಯಚೂರು ಭಾಗದಿಂದ ಕೆಳಗಿನ Jurala project ಗೆ ಹೋಗಿದೆ. ಇದು ಅತಿ ಹೆಚ್ಚಾಗಿರುವಂತಹದ್ದು. ಈ ಭಾಗದಲ್ಲಿ 2005 ರಲ್ಲಿ ಪ್ರವಾಹ ಆಗಿರುವುದನ್ನು ಸ್ವತಃ ನಾವು ನೋಡಿದ್ದೇವೆ. 2009ನೇ ಸಾಲಿನಲ್ಲಿ ಕೃಷ್ಣಾ ನದಿ ಮತ್ತು ಭೀಮಾ ನದಿಯಿಂದ ಬಂದಿರುವಂತಹ ಪ್ರವಾಹ ಸಹಿತ ನಾವು ನೋಡಿದ್ದೇವೆ. ಹಾಗಾಗಿ ರಾಯಚೂರು ಭಾಗದಲ್ಲಿ ಅತಿ ಹೆಚ್ಚು

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಡ್ಯಾಮೇಜ್ ಆಗಿರುವುದನ್ನು ನಾವು ಗುರುತಿಸಬೇಕಾಗುತ್ತದೆ. ತುಂಗಾಭದ್ರಾ ನದಿಗೆ 2 ಲಕ್ಷ ಕ್ಯೂಸೆಕ್ಸ್ ನೀರು ಹರಿದು ಬಂದಿದೆ. 3 ನದಿಗಳಿಂದ ರಾಯಚೂರು ಜಿಲ್ಲೆಗೆ ತುಂಬಾ ಪರಿಣಾಮ ಬೀರಿದೆ. ತುಂಗಾಭದ್ರಾ, ಕೃಷ್ಣಾ ಮತ್ತು ಭೀಮಾ ಈ 3 ನದಿಗಳಿಂದ ರಾಯಚೂರು ಜಿಲ್ಲೆಯ ಎಲ್ಲಾ ಭಾಗದಲ್ಲಿ ಇವತ್ತಿನ ದಿವಸ ತೊಂದರೆಯಾಗಿರುವುದನ್ನು ತಾವು ಗುರುತಿಸಬೇಕು. ಈ ದಿಸೆಯಲ್ಲಿ ರಾಯಚೂರು ಜಿಲ್ಲೆಯ ಆಡಳಿತದವರು 32 ಕೋಟಿ ರೂಪಾಯಿಗಳನ್ನು NDRF (National Disaster Response Fund) norms ಪ್ರಕಾರ ಬರೆದು ಕಳುಹಿಸಿದ್ದಾರೆ. ಇದನ್ನು reconsider ಮಾಡಿ ಎಂದು ಹೇಳಿದರೆ ಇವತ್ತಿನವರೆಗೂ ಈ ಸರ್ಕಾರದಿಂದ ನೇಮಕವಾಗಿರುವ ಜಿಲ್ಲಾ ಉಸ್ತುವಾರಿ ಸಚಿವರು ಬಂದಿರುವುದಿಲ್ಲ. ಜಿಲ್ಲಾ ಉಸ್ತುವಾರಿ ಸಚಿವರು ಆಗುವುದಕ್ಕೆ ಮೊದಲು ಬೇರೆ ಬೇರೆ ಮಂತ್ರಿಗಳು ಬಂದು ಹೋಗಿದ್ದಾರೆ. ಯಾರೂ ಸಹ ಜನಪ್ರತಿನಿಧಿಗಳನ್ನು ಮತ್ತು ಅಧಿಕಾರಿಗಳನ್ನು ಕರೆದು ಮಾತನಾಡಿರುವುದಿಲ್ಲ, ಎಲ್ಲೋ ಒಂದು ಕಡೆಗೆ ಟ್ರ್ಯಾಕ್ಟರ್‌ನಲ್ಲಿ ಹೋಗಿ ನೋಡಿ ಫೋಟೋ ತೆಗೆಸಿಕೊಂಡು ಹೋಗಿದ್ದಾರೆ. ಇವತ್ತಿನವರೆಗೂ ಜಿಲ್ಲಾ ಉಸ್ತುವಾರಿ ಸಚಿವರಾಗಿರುವಂತಹವರು ರಾಯಚೂರು ಜಿಲ್ಲೆಗೆ ಭೇಟಿ ಕೊಟ್ಟಿಲ್ಲ. ಅಲ್ಲಿನ ಅಧಿಕಾರಿಗಳು ಮತ್ತು ಜನಪ್ರತಿನಿಧಿಗಳ ಜೊತೆಯಲ್ಲಿ ಮಾತನಾಡಿಲ್ಲ. ಅಲ್ಲಿರುವ ದೂರುಗಳ ಬಗ್ಗೆ ಯಾರಿಗೆ ಹೇಳಬೇಕೆಂದು ಗೊತ್ತಿಲ್ಲ. ಹೀಗಾಗಿ ರಾಯಚೂರು ಜಿಲ್ಲೆಯಲ್ಲಿ ವಿಚಿತ್ರವಾದ ಪರಿಸ್ಥಿತಿ ಉದ್ಭವವಾಗಿದೆ. ಇದರ ಬಗ್ಗೆ ಸಚಿವರ ಗಮನಕ್ಕೂ ತಂದಿದ್ದೇವೆ. ಈಗಾಗಲೇ ಮಾನ್ಯ ಶ್ರೀರಾಮುಲುರವರು ಜಿಲ್ಲಾ ಉಸ್ತುವಾರಿ ಸಚಿವರಾಗಿದ್ದಾರೆ. ಜಿಲ್ಲಾ ಉಸ್ತುವಾರಿ ಸಚಿವರು ಆಗುವುದಕ್ಕಿಂತ ಮೊದಲು ಮಾನ್ಯ ಶ್ರೀರಾಮುಲುರವರು ರಾಯಚೂರು ಜಿಲ್ಲೆಗೆ ಭೇಟಿ ನೀಡಿದ್ದರು. ರಾಯಚೂರು ಜಿಲ್ಲೆಗೆ ಬಂದು ಬಿಜಾಪುರದ ಪ್ರದೇಶಕ್ಕೆ ಟ್ರ್ಯಾಕ್ಟರ್‌ನಲ್ಲಿ ಹೋಗಿದ್ದರು. ಇದಕ್ಕೆ ಸಂಬಂಧಿಸಿದಂತೆ ಜನಪ್ರತಿನಿಧಿಗಳನ್ನು ಕರೆದಿಲ್ಲ ಮತ್ತು ನಮ್ಮ ಜೊತೆಯಲ್ಲಿ ಮಾತನಾಡಿಲ್ಲ. ಜಿಲ್ಲಾ ಉಸ್ತುವಾರಿ ಸಚಿವರಾದ ಮೇಲೆ ಇದುವರೆಗೂ ರಾಯಚೂರು ಜಿಲ್ಲೆಗೆ ಭೇಟಿ ನೀಡಿಲ್ಲ.

(ಮುಂದು)

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**(143) 11/10/2019/12:10/ಎಸ್‌ಪಿಆರ್/ಕೆಎಸ್**

**(ವೈಸ್ ಛೇರ್ಮನ್‌ರವರ ಉಪಸ್ಥಿತಿ)**

**ಶ್ರೀ ಎನ್.ಎಸ್.ಬೋಸ್‌ರಾಜು(ಮುಂದು):–**

ಜಿಲ್ಲಾ ಉಸ್ತುವಾರಿ ಸಚಿವರು ಇದೇ ತಿಂಗಳ 15ನೇ ತಾರೀಖಿನಂದು ಜಿಲ್ಲೆಗೆ ಭೇಟಿ ನೀಡುತ್ತಾರೆ ಎಂಬ ಮಾಹಿತಿಯು ಬಂದಿದೆ.

**ಶ್ರೀ ಬಿ.ಶ್ರೀರಾಮುಲು (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):–** ಮಾನ್ಯ ಸಭಾಪತಿಯವರೇ, ನಾನು ಜಿಲ್ಲಾ ಉಸ್ತುವಾರಿ ಮಂತ್ರಿಯಾಗುವ ಮುನ್ನವೇ ಈ ಹಿಂದೆ ಎರಡು ಬಾರಿ ಜಿಲ್ಲೆಗೆ ಭೇಟಿ ನೀಡಿದ್ದೇನೆ. ಆದರೆ ಮಾನ್ಯ ಬೋಸ್‌ರಾಜು ರವರನ್ನು ಭೇಟಿ ಮಾಡಿ ಸಭೆ ನಡೆಸಿಲ್ಲ.

**ಶ್ರೀ ಎನ್.ಎಸ್.ಬೋಸ್‌ರಾಜು (ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಮಾನ್ಯ ಉಸ್ತುವಾರಿ ಮಂತ್ರಿಗಳು ನಮ್ಮ ಜಿಲ್ಲೆಗೆ ಎರಡು ಬಾರಿ ಭೇಟಿ ನೀಡಿದ್ದನ್ನು ನಾನು ಇಲ್ಲಿ ಪ್ರಸ್ತಾಪಿಸಿದ್ದೇನೆ. ಮಾನ್ಯ ಮಂತ್ರಿಗಳು ಗುರ್ಜಾಪುರ ಗ್ರಾಮಕ್ಕೆ ಭೇಟಿ ನೀಡಿದ್ದ ಸಂಗತಿಯು ನನಗೆ ತಿಳಿದಿದೆ. ಇದುವರೆವಿಗೂ ನಮ್ಮ ವಿರೋಧ ಪಕ್ಷದ ನಾಯಕರು, ಮಾನ್ಯ ಉಸ್ತುವಾರಿ ಮಂತ್ರಿಗಳು ಅಥವಾ ಅಲ್ಲಿನ ಅಧಿಕಾರಿಗಳು ಯಾರೇ ಆಗಲೀ ಆರು ಲಕ್ಷ ಕ್ಯೂಸೆಕ್ಸ್ ನೀರು ಬಿಡಲಾಗಿತ್ತು ಎಂಬುದಾಗಿ ಹೇಳುತ್ತಿದ್ದಾರೆ.

**ಶ್ರೀ ಎಸ್.ಆರ್.ಪಾಟೀಲ್ (ವಿರೋಧ ಪಕ್ಷದ ನಾಯಕರು):–** ಮಾನ್ಯ ಸಭಾಪತಿಯವರೇ, ಮಾನ್ಯ ಶ್ರೀರಾಮುಲುರವರು ಸದರಿ ಜಿಲ್ಲೆಯ ಉಸ್ತುವಾರಿ ಮಂತ್ರಿಗಳಾಗಿದ್ದಾರೆ. ಅವರು ಒಂದು ರೀತಿಯ care taker ಇದ್ದ ಹಾಗೆ. ಹೀಗಾಗಿ ಅವರು ಜಿಲ್ಲೆಗೆ ಭೇಟಿ ನೀಡಿದಾಗ ಎಲ್ಲಾ ರೀತಿಯ ಜನಪ್ರತಿನಿಧಿಗಳೊಂದಿಗೆ ಸಭೆಯನ್ನು ನಡೆಸಬೇಕು. ನಮ್ಮ ಜಿಲ್ಲೆಗೆ ಮಾನ್ಯ ಗೋವಿಂದ ಕಾರಜೋಳ ರವರು ಜಿಲ್ಲಾ ಉಸ್ತುವಾರಿ ಮಂತ್ರಿಗಳಾಗಿದ್ದಾರೆ. ಅವರು ನಮ್ಮ ಜಿಲ್ಲೆಯ ಎಲ್ಲಾ ಜನಪ್ರತಿನಿಧಿಗಳೊಂದಿಗೆ ಎರಡು ಬಾರಿ ಸಭೆಯನ್ನು ನಡೆಸಿದ್ದಾರೆ. ಹೀಗಾಗಿ ನಾವು ಯಾವುದೇ ರೀತಿಯ ಆರೋಪ ಮಾಡುವುದಿಲ್ಲ. It is the prime duty of Hon'ble district in-charge minister. ಮಾನ್ಯ ಉಸ್ತುವಾರಿ ಮಂತ್ರಿಗಳು ಜಿಲ್ಲೆಗೆ ಭೇಟಿ ನೀಡಿದಾಗ ಯಾವುದೇ ಪಕ್ಷದಿಂದ ಆಯ್ಕೆಗೊಂಡಿದ್ದರು ಎಲ್ಲಾ ಜನಪ್ರತಿನಿಧಿಗಳೊಂದಿಗೆ ಸಭೆಯನ್ನು ನಡೆಸಬೇಕು.

**ಶ್ರೀ ಹೆಚ್.ಎಂ.ರೇವಣ್ಣ:–** ಮಾನ್ಯ ಸಭಾಪತಿಯವರೇ, ಮಾನ್ಯ ಉಸ್ತುವಾರಿ ಮಂತ್ರಿಗಳು ಜಿಲ್ಲೆಗೆ ಬಂದಿದ್ದರೂ ಸಹ ನೆರೆ ಪೀಡಿತ ಪ್ರದೇಶಗಳಿಗೆ ಭೇಟಿ ನೀಡಲು ಸಾಧ್ಯವಾಗಿರುವುದಿಲ್ಲವೆಂದು ಹೇಳುವುದು ಸರಿಯಲ್ಲ. It is not correct.

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ಜಿಲ್ಲಾ ಉಸ್ತುವಾರಿ ಮಂತ್ರಿಗಳು ಎಲ್ಲಾ ಜನಪ್ರತಿನಿಧಿಗಳ ಸಭೆ ಕರೆಸಿ, ಅವರ ಅಹವಾಲುಗಳನ್ನು ಕೇಳಿ, ಜಿಲ್ಲಾಧಿಕಾರಿಗಳ ಸಮಕ್ಷಮ ಸಮಸ್ಯೆಗಳನ್ನು ಬಗೆಹರಿಸುವ ನಿಟ್ಟಿನಲ್ಲಿ ಪ್ರಯತ್ನ ಮಾಡಬೇಕು.

**ಶ್ರೀ ಎನ್.ಎಸ್.ಬೋಸ್‌ರಾಜು:-** ಮಾನ್ಯ ಸಭಾಪತಿಯವರೇ, ನೆರೆ ಹಾವಳಿಯಿಂದಾಗಿ ಕಾಲುವೆಗಳಲ್ಲಿ ಹೂಳು ತುಂಬಿಕೊಂಡಿರುವುದರಿಂದ ಈಗ ಮಳೆಗಾಲವಾದರೂ ಸಹ ಕಾಲುವೆಗಳಲ್ಲಿ ನೀರು ಬರುತ್ತಿಲ್ಲ. ಆದ್ದರಿಂದ ಕಾಲುವೆ ಮೂಲಕ ನೀರು ಹರಿಸುವ ಬಗ್ಗೆ ಈಗಾಗಲೇ ಮಾನ್ಯ ಉಸ್ತುವಾರಿ ಮಂತ್ರಿಗಳೊಂದಿಗೆ ಮಾತನಾಡಿದ್ದೇವೆ. ಮಾನ್ಯ ಜಿಲ್ಲಾ ಉಸ್ತುವಾರಿ ಮಂತ್ರಿಗಳು ನಮ್ಮ ಜೊತೆಗೆ ಬಹಳ ಸನ್ನಿಹಿತರಾಗಿದ್ದಾರೆ. ಹೀಗಾಗಿ ಯಾವುದೇ ರೀತಿಯಾದ ತೊಂದರೆಯಿಲ್ಲ. ಮಾನ್ಯ ಮಂತ್ರಿಗಳೂ ಸಹ ನಮ್ಮ ಮನವಿಗೆ ತಕ್ಷಣವೇ ಸ್ಪಂದಿಸಿ, ಕೆಲಸಗಳನ್ನು ಮಾಡಿಸಿಕೊಡುವುದಾಗಿ ಹೇಳುತ್ತಾರೆ. ನಮ್ಮ ಹಾಗೂ ಅವರ ಸಂಬಂಧ ಕಳೆದ 42 ವರ್ಷಗಳಿಂದ ಇದೆ. ಇತರೆ ಮಾನ್ಯ ಸದಸ್ಯರುಗಳು ಹೇಳುವ ಹಾಗೆ ನಮಗೆ ಬಹಳ ಖಾರವಾದ ರೀತಿಯಲ್ಲಿ ಮಾತನಾಡುವುದಕ್ಕೆ ಬರುವುದಿಲ್ಲ. ನಾವು ಕಲ್ಯಾಣ ಕರ್ನಾಟಕ ಪ್ರದೇಶದಿಂದ ಬಂದವರು. ನಾವು ಹಾಗೂ ಜಿಲ್ಲಾ ಉಸ್ತುವಾರಿ ಮಂತ್ರಿಗಳು ಯಾವಾಗಲೂ ಒಂದೇ ಆಗಿರಬೇಕಾಗುತ್ತದೆ. ಮಾನ್ಯ ಜಿಲ್ಲಾ ಉಸ್ತುವಾರಿ ಮಂತ್ರಿಗಳು ನಾನು ಪ್ರಸ್ತಾಪಿಸಿದ ಅಂಶಗಳ ಬಗ್ಗೆ ಹೆಚ್ಚು ಗಮನ ನೀಡಬೇಕಾಗುತ್ತದೆ. ಇಲ್ಲಿಯವರೆಗೆ ಈ ವಿಚಾರದ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು, ಸಭಾನಾಯಕರಿಗೆ ಆದಿಯಾಗಿ ಎಲ್ಲರಿಗೂ ವಿಷಯ ತಿಳಿದಿದೆ. ಎಲ್ಲರೂ ಸಹ ಆರು ಲಕ್ಷ ಕ್ಯೂಸೆಕ್ಸ್ ನೀರು ಆಲಮಟ್ಟಿ ಜಲಾಶಯದಿಂದ ಎಂಬುದಾಗಿ ಹೇಳುತ್ತಿದ್ದಾರೆ. ಆದರೆ ಆಲಮಟ್ಟಿ ಜಲಾಶಯದ ಕಡೆಗೆ ನಾರಾಯಣಪುರ ಆಣೆಕಟ್ಟು ಇದೆ. ಇದು downstream ನಲ್ಲಿದ್ದು, ಇಲ್ಲಿನ ಕಾಡಲೂರು ಎಂಬ ಪ್ರದೇಶದಲ್ಲಿ ಭೀಮಾ ನದಿಯು ಬಂದು ಸೇರುತ್ತದೆ. ಸದರಿ ಪ್ರದೇಶಕ್ಕೆ ಮಾನ್ಯ ಉಸ್ತುವಾರಿ ಮಂತ್ರಿಗಳು ಟ್ರ್ಯಾಕ್ಟರ್‌ನಲ್ಲಿ ಪ್ರಯಾಣ ಮಾಡಿದ್ದಾರೆ. ಮೂರು ಲಕ್ಷ ಕ್ಯೂಸೆಕ್ಸ್ ನೀರು ಎಂಬುದಾಗಿ ದಾಖಲಿಸಿದ್ದಾರೆ. ಮೊದಲಿನ ಆರು ಲಕ್ಷ ಕ್ಯೂಸೆಕ್ಸ್ ನೀರು ಹಾಗೂ ಈಗಿನ ಮೂರು ಲಕ್ಷ ಕ್ಯೂಸೆಕ್ಸ್ ನೀರು ಒಟ್ಟಾರೆಯಾಗಿ 9 ಲಕ್ಷ ಕ್ಯೂಸೆಕ್ಸ್ ಪ್ರಮಾಣದ ನೀರು ಅಲ್ಲಿದೆ. ನಾನು, ಮಾನ್ಯ ವಿರೋಧ ಪಕ್ಷದ ನಾಯಕರು, ಮಾನ್ಯ ಶ್ರೀ ಬಸವರಾಜ್ ಪಾಟೀಲ್ ಇಟಗಿ ಹಾಗೂ ಇನ್ನಿತರೆ ಜನಪ್ರತಿನಿಧಿಗಳು ಸದರಿ ಪ್ರದೇಶಕ್ಕೆ ಭೇಟಿ ನೀಡಿದಾಗ, ಅಲ್ಲಿನ ಸ್ಥಳೀಯರು ಯಾವ ರೀತಿಯಾಗಿ ಪ್ರತಿಕ್ರಿಯಿಸಿದ್ದಾರೆ ಎನ್ನುವುದರ ಮಾಹಿತಿಯನ್ನೊಳಗೊಂಡ ವರದಿಯೊಂದನ್ನು ದಾಖಲಿಸಿ, ಈ ವಿಷಯದ ಬಗ್ಗೆ ಜಿಲ್ಲಾಧಿಕಾರಿಗಳೊಂದಿಗೆ ಈಗಾಗಲೇ ನಾವು ಮಾತನಾಡಿದ್ದೇವೆ. ಕೃಷ್ಣಾ, ಭೀಮಾ ನದಿಗಳಿಂದ ರಾಯಚೂರು ಜಿಲ್ಲೆಗೆ ಅತೀ ಹೆಚ್ಚಿನ ಪ್ರಮಾಣದಲ್ಲಿ ನಷ್ಟವುಂಟಾಗಿದೆ. ಅಲ್ಲಿ 342 ಕೋಟಿ ರೂಪಾಯಿಗಳಷ್ಟು ನಷ್ಟವುಂಟಾಗಿದೆ ಎಂದು ಅಂದಾಜು ಮಾಡಲಾಗಿದೆ. ಆದರೆ, ನಾವು ತಯಾರಿಸಿರುವ ವರದಿಯನ್ವಯ ನಷ್ಟದ

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಅಂದಾಜು 500 ಕೋಟಿ ರೂಪಾಯಿಗಳಿಗಿಂತಲೂ ಹೆಚ್ಚು ಆಗಿದೆ. ಈ ವಿಷಯದಲ್ಲಿ ಸರ್ಕಾರವು ಅಧಿಕಾರಿಗಳಿಗೆ ಮನವರಿಕೆ ಮಾಡಿಕೊಡಬೇಕು. ಪ್ರಸ್ತುತ ರಾಯಚೂರು ಜಿಲ್ಲೆಗೆ ಹೊಸ ಜಿಲ್ಲಾಧಿಕಾರಿಯನ್ನು ನಿಯೋಜಿಸಲಾಗಿದೆ. ನೆರೆ ಹಾವಳಿಯಂತಹ ಪರಿಸ್ಥಿತಿಯಲ್ಲಿ ಜಿಲ್ಲಾಧಿಕಾರಿಗಳ ಬದಲಾವಣೆ ಮಾಡಲಾಗಿದೆ. ಮೊದಲಿನ ಜಿಲ್ಲಾಧಿಕಾರಿಗಳು ನೆರೆ ಪ್ರದೇಶಗಳಿಗೆ ಭೇಟಿ ನೀಡಿ, ಅಲ್ಲಿನ ಪರಿಸ್ಥಿತಿಯನ್ನು ಅಧ್ಯಯನ ಮಾಡಿ ನಷ್ಟದ ಅಂದಾಜನ್ನು ತಯಾರಿಸಿದ್ದರು. ಆದರೆ ಹೊಸದಾಗಿ ನಿಯೋಜನೆಗೊಂಡ ಜಿಲ್ಲಾಧಿಕಾರಿಗಳು ಅಲ್ಲಿನ ಪರಿಸ್ಥಿತಿಯನ್ನು ತಿಳಿಯಲು ಒಂದು–ಒಂದೂವರೆ ತಿಂಗಳುಗಳ ಸಮಯ ಬೇಕಾಗುತ್ತದೆ. ಇತ್ತೀಚೆಗೆ ಪರಿಹಾರ ಕಾಮಗಾರಿಗಳಿಗೆ ಸಂಬಂಧಪಟ್ಟಂತೆ action plan ತಯಾರಿಸಿದ್ದರೆ, ಅದಕ್ಕೆ thumb ಬಂದಿಲ್ಲ ಎಂಬುದಾಗಿ ಅಲ್ಲಿನ ಅಧಿಕಾರಿಗಳು ಹೇಳುತ್ತಾರೆ. ಇಂತಹ ಪರಿಸ್ಥಿತಿಯು ನಮ್ಮ ಜಿಲ್ಲೆಯಲ್ಲಿ ನಿರ್ಮಾಣವಾಗಿದೆ. ಮಾನ್ಯ ಉಸ್ತುವಾರಿ ಮಂತ್ರಿಗಳು ಇದೇ ತಿಂಗಳ 15 ನೇ ತಾರೀಖಿನಂದು ನಮ್ಮ ಜಿಲ್ಲೆಗೆ ಭೇಟಿ ನೀಡುವುದಾಗಿ ತಿಳಿಸಿದ್ದಾರೆ. ಆಗ ಈ ವಿಷಯದ ಬಗ್ಗೆ ಚರ್ಚೆಯನ್ನು ಮಾಡೋಣ. ಈ ವಿಷಯದ ಬಗ್ಗೆ ಸರ್ಕಾರವು ಮರುಪರಿಶೀಲನೆ ಮಾಡಬೇಕು. ತುಂಗಭದ್ರಾ, ಭೀಮಾ ಹಾಗೂ ಕೃಷ್ಣಾ ನದಿಗಳ ದಂಡೆಗೆ ಮತ್ತು ರೈತರಿಗೆ ಆಗಿರುವ ನಷ್ಟವನ್ನು ಸರ್ಕಾರದವರು ಅಂದಾಜಿಸಬೇಕು. ಆ ಭಾಗದ ಏತ ನೀರಾವರಿಯು ಪೂರ್ಣ ಪ್ರಮಾಣದಲ್ಲಿ ಕೊಚ್ಚಿಕೊಂಡುಹೋಗಿದೆ. ಮತ್ತೆ ಅಲ್ಲಿ ಏತ ನೀರಾವರಿಗಳನ್ನು ನಿರ್ಮಿಸಲು ಸರ್ಕಾರವು 6–8 ಕೋಟಿ ರೂಪಾಯಿಗಳಷ್ಟು ಹಣವನ್ನು ಖರ್ಚು ಮಾಡಿದೆ. ಮೊದಲಾಪುರ ಮತ್ತು ದದ್ದಲ ಎಂಬಂತಹ ಪ್ರದೇಶಗಳಲ್ಲಿ ಏತ ನೀರಾವರಿಗಳನ್ನು ಮಾಡಲಾಗಿದ್ದು, ಅವುಗಳೆಲ್ಲವೂ ನೆರೆ ಹಾವಳಿಯಿಂದಾಗಿ ಕೊಚ್ಚಿಕೊಂಡು ಹೋಗಿವೆ. ಆದರೆ ಇವತ್ತಿನ ದಿವಸ ಇಂತಹ ನಷ್ಟಗಳ ಬಗ್ಗೆ ಯಾರೂ ಸಹ ಅಂದಾಜು ಮಾಡಿಲ್ಲ. ಈ ಎಲ್ಲಾ ನಷ್ಟಗಳನ್ನು ಲೆಕ್ಕ ಹಾಕಿದರೆ, ಸರ್ಕಾರವು ತಿಳಿಸಿದ 3,500–3,800 ಕೋಟಿ ರೂಪಾಯಿಗಳಿಗೂ ಹೆಚ್ಚು ಆಗುತ್ತದೆ. ಇತ್ತೀಚೆಗೆ ಮಾನ್ಯ ಉಸ್ತುವಾರಿ ಮಂತ್ರಿಗಳು ಬಳ್ಳಾರಿ ಜಿಲ್ಲೆಯಿಂದ ರಾಜ್ಯ ಹೆದ್ದಾರಿ ಸಂಖ್ಯೆ 21 ರ ಮುಖಾಂತರ ಅಂದರೆ ಗಿಣಿಗಾರ–ರಾಯಚೂರು ರಸ್ತೆಯ ಮೂಲಕ ಅಲ್ಲಿಗೆ ಬಂದಿದ್ದರು. ಪ್ರಸ್ತುತ ಸದರಿ ರಸ್ತೆಯ ಪರಿಸ್ಥಿತಿ ಹೇಗಿದೆ ಎನ್ನುವುದನ್ನು ಮಾನ್ಯ ಮಂತ್ರಿಗಳು ಈಗಾಗಲೇ ನೋಡಿದ್ದಾರೆ. ಮಾನ್ಯ ಶ್ರೀರಾಮುಲು ರವರು ಜಿಲ್ಲಾ ಉಸ್ತುವಾರಿ ಮಂತ್ರಿಯಾಗಿ ನಿಯೋಜನೆಗೊಳ್ಳುವ ಮುನ್ನವೇ ನಮ್ಮ ಜಿಲ್ಲೆಗೆ ಭೇಟಿ ನೀಡಿದ್ದರು. ಉಸ್ತುವಾರಿ ಮಂತ್ರಿಗಳು ಹೆಲಿಕ್ಯಾಪ್ಟರ್ ಮೂಲಕ ನಮ್ಮ ಜಿಲ್ಲೆಗೆ ಬಂದಿಲ್ಲ. ಈ ಮೊದಲು ಬಳ್ಳಾರಿಯಿಂದ 60–75 ನಿಮಿಷದ ಅವಧಿಯೊಳಗೆ ರಾಯಚೂರು ಜಿಲ್ಲೆಗೆ ಬರುತ್ತಿದ್ದರು. ಆದರೆ ಇವತ್ತಿನ ಪರಿಸ್ಥಿತಿಯಲ್ಲಿ ಅದೇ ರಸ್ತೆಯಲ್ಲಿ ಪ್ರಯಾಣ ಮಾಡಲು ಕನಿಷ್ಠ ಮೂರು ಗಂಟೆಗಳ ಸಮಯ ಹಿಡಿಯುತ್ತದೆ. ನಾನೂ ಸಹ ಇತ್ತೀಚೆಗೆ ಬಳ್ಳಾರಿ ಜಿಲ್ಲೆಯಿಂದ ಅದೇ ರಸ್ತೆಯ ಮೂಲಕವೇ ಪ್ರಯಾಣ ಮಾಡಿದ್ದೇನೆ. ಈ ಹಿಂದೆ ಮಾನ್ಯ ಎಸ್.ಎಂ.ಕೃಷ್ಣ ರವರು ಮುಖ್ಯಮಂತ್ರಿಗಳು ಹಾಗೂ ದಿವಂಗತ ಧರ್ಮಸಿಂಗ್‌ರವರು ಲೋಕೋಪಯೋಗಿ ಇಲಾಖೆಯ ಮಂತ್ರಿಗಳಾಗಿದ್ದ ಸಂದರ್ಭದಲ್ಲಿ KSHIP-1

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

(Karnataka State Highways Improvement Project) ಯೋಜನೆಯಡಿ 2002–04 ರ ಸಾಲಿನಲ್ಲಿ ಒಂದು ಕಿಲೋಮೀಟರ್‌ಗೆ ಒಂದು ಕೋಟಿ ರೂಪಾಯಿಗಳನ್ನು ಖರ್ಚು ಮಾಡಿ ಬಹಳ ಸುಂದರವಾಗಿ ತಯಾರಿಸಿದ್ದ ರಸ್ತೆ ಅದಾಗಿತ್ತು. ಆದರೆ ಇವತ್ತಿನ ದಿವಸ ನೆರೆ ಹಾವಳಿಯಿಂದ ಸದರಿ ರಸ್ತೆಯು ಪ್ರಯಾಣಕ್ಕೆ ಯೋಗ್ಯವಲ್ಲದಂತಹ ಪರಿಸ್ಥಿತಿಯುಂಟಾಗಿದೆ.

**ಶ್ರೀ ಬಿ.ಶ್ರೀರಾಮುಲು:–** ಮಾನ್ಯ ಸಭಾಪತಿಯವರೇ, ಅಲ್ಲಿ ರಾಷ್ಟ್ರೀಯ ಹೆದ್ದಾರಿಯ ಕಾಮಗಾರಿಯು ಚಾಲ್ತಿಯಲ್ಲಿದೆ. ಈ ಸಂಗತಿಯು ಮಾನ್ಯ ಸದಸ್ಯರಿಗೆ ತಿಳಿದಿದೆ. ಬೀದರ್ ಜಿಲ್ಲೆಯಿಂದ ಪ್ರಾರಂಭಗೊಂಡು ರಾಯಚೂರು, ಬಳ್ಳಾರಿ ಜಿಲ್ಲೆಗಳ ಮುಖಾಂತರವಾಗಿ ಹಿರಿಯೂರು ಮೂಲಕ ಶ್ರೀರಂಗಪಟ್ಟಣಕ್ಕೆ ಸದರಿ ರಸ್ತೆಯು ಹಾದು ಹೋಗುತ್ತದೆ.

**ಶ್ರೀ ಎನ್.ಎಸ್.ಬೋಸ್‌ರಾಜು:–** ಮಾನ್ಯ ಸಭಾಪತಿಯವರೇ, ತಾವು ಹೇಳುತ್ತಿರುವ ರಸ್ತೆಯು ರಾಯಚೂರು ಜಿಲ್ಲೆ ಹಾಗೂ ಮಾನ್ವಿ ತಾಲ್ಲೂಕಿಗೆ ಸಂಪರ್ಕ ನೀಡುವುದಿಲ್ಲ. ಇದರ ಬದಲಾಗಿ ಸದರಿ ರಸ್ತೆಯು ಲಿಂಗಸುಗೂರು ಹಾಗೂ ಸಿಂಧನೂರು ತಾಲ್ಲೂಕುಗಳ ಮುಖಾಂತರ ಹಾದು ಹೋಗುತ್ತದೆ. ಮಾನ್ಯ ಮಂತ್ರಿಗಳು ಹೇಳುತ್ತಿರುವ ರಸ್ತೆ ವಿಷಯವು ನನಗೆ ತಿಳಿದಿದೆ.

**ಶ್ರೀ ಬಸವರಾಜ್ ಪಾಟೀಲ್ ಇಟಗಿ:–** ಮಾನ್ಯ ಸಭಾಪತಿಯವರೇ, ಅಲ್ಲಿನ ಮತ್ತೊಂದು ರಸ್ತೆಯು ಕಲಬುರಗಿ, ಯಾದಗಿರಿ, ರಾಯಚೂರು ಜಿಲ್ಲೆಗಳ ಮುಖಾಂತರ ಹಾದು ಹೋಗಿ ಗುತ್ತಿಗೆ ತಲುಪುತ್ತದೆ. ಮತ್ತೊಂದು ಮಾರ್ಗದಲ್ಲಿ ಆಲೂರು ಮುಖಾಂತರ ಬಳ್ಳಾರಿ ಜಿಲ್ಲೆಗೆ ಸಂಪರ್ಕ ನೀಡಿ, ಮುಂದೆ ಸಾಗುತ್ತದೆ.

**ಶ್ರೀ ಎನ್.ಎಸ್.ಬೋಸ್‌ರಾಜು:–** ಮಾನ್ಯ ಸಭಾಪತಿಯವರೇ, ಮಾನ್ಯ ಉಸ್ತುವಾರಿ ಮಂತ್ರಿಗಳು ಹಾಗೂ ಮಾನ್ಯ ಸದಸ್ಯರು ಹೇಳುತ್ತಿರುವ ಎರಡೂ ರಸ್ತೆಗಳು ಬೇರೆಯಾಗಿವೆ. ರಾಜ್ಯ ಹೆದ್ದಾರಿ ಸಂಖ್ಯೆ 20 ಮತ್ತು 23 ಗಳು ರಾಯಚೂರು ಜಿಲ್ಲೆಯಿಂದ ಬಾಗಲಕೋಟೆ ಜಿಲ್ಲೆ ಮುಖಾಂತರ ಸಾಗಿ ಬೆಳಗಾವಿ ಜಿಲ್ಲೆಯ ಬಾಚಿ ಪ್ರದೇಶಕ್ಕೆ ಸಂಪರ್ಕವನ್ನು ಕಲ್ಪಿಸುತ್ತವೆ. ಇದು 380 ಕಿಲೋಮೀಟರ್‌ಗಳ ರಸ್ತೆಯಾಗಿದ್ದು, ಸದರಿ ರಸ್ತೆಯೂ ಲಿಂಗಸೂಗೂರು ಮುಖಾಂತರ ಹಾದು ಹೋಗುತ್ತದೆ ಹಾಗೂ ಇದೂ ಸಹ ಸಂಪೂರ್ಣವಾಗಿ ಹಾಳಾಗಿ ಹೋಗಿದೆ. ಅದೇ ರೀತಿಯಾಗಿ ಬಳ್ಳಾರಿ ಜಿಲ್ಲೆಯಿಂದ ರಾಯಚೂರು ಜಿಲ್ಲೆಗೆ ಸಂಪರ್ಕ ಕಲ್ಪಿಸುವ ರಸ್ತೆಯೂ ಸಹ ಹಾಳಾಗಿ ಹೋಗಿದೆ. ಈ ಎರಡೂ ರಸ್ತೆಗಳನ್ನು ತಕ್ಷಣದಲ್ಲಿಯೇ ದುರಸ್ತಿ ಮಾಡಬೇಕು. ಸದರಿ ರಸ್ತೆಗಳ ದುರಸ್ತಿ ಬಗ್ಗೆ ಲೋಕೋಪಯೋಗಿ ಇಲಾಖೆಯ ಅಧಿಕಾರಿಗಳನ್ನು ಸಂಪರ್ಕಿಸಿದಾಗ, ಅವರುಗಳು ಸದರಿ ರಸ್ತೆಗಳ ದುರಸ್ತಿಗಾಗಿ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಇಲಾಖೆಯ ಬಳಿ ಅನುದಾನವಿಲ್ಲ ಎಂಬುದಾಗಿ ತಿಳಿಸುತ್ತಾರೆ. ಹೀಗಾಗಿ ಸರ್ಕಾರವು ಪ್ರಸ್ತುತ ವಿಷಯದಲ್ಲಿ ತಕ್ಷಣವೇ ಗಮನಹರಿಸಬೇಕು. ಮೊದಲ ಹಂತದ 200 ಕೋಟಿ ರೂಪಾಯಿಗಳ ನೆರೆ ಪರಿಹಾರ ಘೋಷಣೆ ಮಾಡಿದಾಗ, ರಾಯಚೂರು ಜಿಲ್ಲೆಗೆ ಕನಿಷ್ಠ ಒಂದು ರೂಪಾಯಿಗಳ ಅನುದಾನವನ್ನು ಬಿಡುಗಡೆ ಮಾಡಿರಲಿಲ್ಲ. ಆಗ ನಾವು ಜನಪ್ರತಿನಿಧಿಗಳು ಪತ್ರಿಕಾ ಗೋಷ್ಠಿಯನ್ನು ಕರೆದು, ಗಲಾಟೆ ಮಾಡಿ, ಒತ್ತಡ ಹೇರಿ, ಮುಷ್ಕರ ಹೂಡಿದ ತಕ್ಷಣವೇ ಎರಡು ಕೋಟಿ ರೂಪಾಯಿಗಳ ಅನುದಾನವನ್ನು ಬಿಡುಗಡೆ ಮಾಡಿದರು. ಇದು ಎರಡನೇ ಹಂತದಲ್ಲಿ ಬಿಡುಗಡೆ ಮಾಡಿದ ಹಣವಾಗಿತ್ತು. ಮುಂದುವರೆದು, ನಂತರದಲ್ಲಿ ರಾಯಚೂರು ಜಿಲ್ಲೆಗೆ ಐದು ಕೋಟಿ ರೂಪಾಯಿಗಳ ಪರಿಹಾರವನ್ನು ಸರ್ಕಾರವು ಬಿಡುಗಡೆ ಮಾಡಿದೆ. ನನಗೆ ಬಂದ ಮಾಹಿತಿಯನ್ವಯ, ಒಟ್ಟಾರೆಯಾಗಿ ರಾಯಚೂರು ಜಿಲ್ಲೆಗೆ ನೆರೆ ಪರಿಹಾರಕ್ಕಾಗಿ ಏಳು ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಲಾಗಿದೆ. ಸ್ಥಳೀಯ ಜಿಲ್ಲಾ ಕೇಂದ್ರದಿಂದ ನೆರೆ ಪರಿಹಾರ ರೂಪದಲ್ಲಿ 9 ಕೋಟಿ ರೂಪಾಯಿಗಳನ್ನು ನೀಡಲಾಗಿದೆ. ಆದರೆ ಈ ಹಣ ಬೇರೆ ಸ್ವರೂಪದ್ದಾಗಿದೆ. ಪ್ರಸ್ತುತ ಸರ್ಕಾರವು ಅಧಿಕಾರಕ್ಕೆ ಬಂದಮೇಲೆ ನೆರೆ ಪರಿಹಾರಕ್ಕಾಗಿ ಕೇವಲ ಏಳು ಕೋಟಿ ರೂಪಾಯಿಗಳ ಅನುದಾನವನ್ನು ಮಾತ್ರವೇ ನೀಡಿದೆ. ದಯಮಾಡಿ ಸರ್ಕಾರವು ಈ ವಿಚಾರದಲ್ಲಿ ಹೆಚ್ಚಿನ ಗಮನಹರಿಸಿ, ತಾರತಮ್ಯವನ್ನು ಸರಿಪಡಿಸಬೇಕು. ಮಾನ್ಯ ಉಸ್ತುವಾರಿ ಮಂತ್ರಿಗಳು ಜಿಲ್ಲೆಗೆ ಭೇಟಿ ನೀಡಿದ ಸಂದರ್ಭದಲ್ಲಿ ಸಮಯ ಅವಕಾಶ ದೊರೆತಾಗ, ನಾವು ಅವರನ್ನು ನೆರೆ ಪೀಡಿತ ಪ್ರದೇಶಗಳಿಗೆ ಕರೆದುಕೊಂಡು ಹೋಗುತ್ತೇವೆ. ಇತ್ತೀಚೆಗೆ ಮಾನ್ಯ ಸಿದ್ಧರಾಮಯ್ಯನವರೊಂದಿಗೆ ನಮ್ಮ ಜಿಲ್ಲೆಯ ಎಲ್ಲಾ ಜನಪ್ರತಿನಿಧಿಗಳು ಲಿಂಗಸುಗೂರು ತಾಲ್ಲೂಕಿನ ಶೀರೇಹಳ್ಳಿ ಎಂಬ ಗ್ರಾಮಕ್ಕೆ ಹೋಗಿದ್ದೇವು. ಸದರಿ ಪ್ರದೇಶದಲ್ಲಿರುವ ಸೇತುವೆಯು ಹಾಳಾಗಿದ್ದು, ಇದುವರೆವಿಗೂ ಸಹ ಅದನ್ನು ಸರ್ಕಾರವು ಸರಿಪಡಿಸಿರುವುದಿಲ್ಲ. ಹೀಗಾಗಿ ಸೇತುವೆಯ ಒಂದು ಭಾಗದ ಜನರು ಅಲ್ಲಿಯೇ ಹಾಗೂ ಮತ್ತೊಂದು ಭಾಗದ ಜನರು ಇಲ್ಲಿಯೇ ಇರುತ್ತಾರೆ. ಹಾಳಾಗಿ ಹೋದ ಸೇತುವೆಯಿಂದ ಎರಡೂ ಭಾಗದ ಗ್ರಾಮದ ಜನರು ಸಂಪರ್ಕವನ್ನು ಸಾಧಿಸಲು ಆಗುತ್ತಿಲ್ಲ. ಆದೇ ರೀತಿಯಾಗಿ ಮಾನ್ವಿ ತಾಲ್ಲೂಕಿನಿಂದ ಐದು ಕಿಲೋಮೀಟರ್ ದೂರ ವ್ಯಾಪ್ತಿಯಲ್ಲಿರುವ ಮುಷ್ಟೂರು ಎಂಬ ಗ್ರಾಮದಲ್ಲಿರುವ ಸೇತುವೆಯೂ ಸಹ ಸಂಪೂರ್ಣವಾಗಿ ಹಾಳಾಗಿ ಹೋಗಿದೆ. ಸದರಿ ಸೇತುವೆಯನ್ನು ನಾನು ಈ ಹಿಂದೆ ಶಾಸಕನಾಗಿದ್ದಾಗ ನಿರ್ಮಾಣ ಮಾಡಲಾಗಿತ್ತು. ಸದರಿ ಸೇತುವೆಯ ಕುಸಿತದಿಂದಾಗಿ ಎರಡೂ ಭಾಗದ ಜನರು ಸಂಪರ್ಕವನ್ನು ಸಾಧಿಸಲಾಗುತ್ತಿಲ್ಲ. ಕನಿಷ್ಠ ಪಕ್ಷ ಹಾಳಾಗಿ ಹೋಗಿರುವ ಸೇತುವೆಗಳನ್ನು ದುರಸ್ತಿ ಪಡಿಸಲು ಕೋರಿದಾಗ, ಲೋಕೋಪಯೋಗಿ ಇಲಾಖಾಧಿಕಾರಿಗಳು ಅನುದಾನದ ಕೊರತೆ ಇದೆ, ಇವುಗಳ ನಷ್ಟದ ಅಂದಾಜು ಮಾಡಿ ಕಳುಹಿಸಿಕೊಡಲಾಗಿದೆ ಎಂಬುದಾಗಿ ತಿಳಿಸುತ್ತಾರೆ. ಆ ಸಂದರ್ಭದಲ್ಲಿ ಮಾನ್ಯ ವಿರೋಧ ಪಕ್ಷದ ನಾಯಕರೂ ಸಹ ಉಪಸ್ಥಿತರಿದ್ದರು. ಇವುಗಳೆಲ್ಲವೂ ದಾಖಲೆಯಲ್ಲಿವೆ. ಹಾಳಾಗಿ ಹೋದ ಸೇತುವೆಗಳನ್ನು ತಕ್ಷಣವೇ ದುರಸ್ತಿ ಮಾಡಬೇಕು. ಯಾವುದೇ ಪಕ್ಷದ ಸರ್ಕಾರವು ಆಡಳಿತದಲ್ಲಿರಲಿ,

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಹೊಸದಾಗಿ ಸೇತುವೆಗಳ ನಿರ್ಮಾಣ ಕಾರ್ಯವು ಕಷ್ಟಸಾಧ್ಯವಾಗಿರುತ್ತದೆ. ದುರಸ್ತಿ ಕಾರ್ಯದಿಂದಾಗಿ ಅಲ್ಲಿನ ಸ್ಥಳೀಯರಿಗೆ ಓಡಾಡಲು ಅನುಕೂಲ ಮಾಡಿಕೊಡುವ ಪ್ರಯತ್ನವನ್ನು ಸರ್ಕಾರವು ಮಾಡಬೇಕು. ಇಂತಹ ವಿಷಯಗಳ ಬಗ್ಗೆ ಸರ್ಕಾರವು ಹೆಚ್ಚಿನ ಗಮನವನ್ನು ಹರಿಸಬೇಕು.

ನೆರೆ ಹಾವಳಿಯುಂಟಾಗಿ ಇಲ್ಲಿಗೆ 60 ದಿನಗಳಾಗಿವೆ. ಜಿಲ್ಲೆಯ ದೇವದುರ್ಗ ತಾಲ್ಲೂಕಿನಲ್ಲಿ 23 ಕಡೆಗಳಲ್ಲಿ ಗಂಜಿ ಅಥವಾ ಕಾಳಜಿ ಕೇಂದ್ರಗಳನ್ನು ತೆರೆಯಲಾಗಿದ್ದು, ಅಲ್ಲಿ ನಮ್ಮ ಪಕ್ಷದ ನಾಯಕರು ಹಾಗೂ ಜನಪ್ರತಿನಿಧಿಗಳೆಲ್ಲರೂ ಭೇಟಿ ನೀಡಿದ್ದೇವೆ. ಜಿಲ್ಲಾಧಿಕಾರಿಗಳು ಹಾಗೂ ಜಿಲ್ಲಾಡಳಿತದವರು ತಮ್ಮ ಕೈಯ್ಯಲ್ಲಿ ಆದ ಎಲ್ಲಾ ರೀತಿಯ ಪ್ರಯತ್ನಗಳನ್ನು ಮಾಡಿದ್ದಾರೆ. ನೆರೆ ಹಾವಳಿ ನಿಂತ ಕೆಲವು ದಿನಗಳ ನಂತರ ಗ್ರಾಮಸ್ಥರುಗಳಿಗೆ ತಮ್ಮ ತಮ್ಮ ಮನೆಗಳಿಗೆ ತೆರಳಲು ಸೂಚಿಸಿದರು. ಆಗ ನಾವು ಭೇಟಿ ನೀಡಿದ ಸಂದರ್ಭದಲ್ಲಿ ಜಿಲ್ಲೆಯ ದೇವದುರ್ಗ ತಾಲ್ಲೂಕಿನ ಜಾಲಹಳ್ಳಿ ಗ್ರಾಮದ ಮಹಿಳೆಯರು ಈಗ ನಾವು ನಮ್ಮ ಮನೆಗಳಿಗೆ ತೆರಳಿದರೆ, ಅಲ್ಲಿ ಹಾವು, ಚೇಳು ಇತ್ಯಾದಿ ವಿಷಜಂತುಗಳು ಇರುತ್ತವೆ, ಹೀಗಾಗಿ ತಮಗೆ ಮತ್ತೂ ಹೆಚ್ಚಿನ ತೊಂದರೆಯಾಗುತ್ತದೆ ಎಂಬುದಾಗಿ ತಿಳಿಸಿದರು. ಇವುಗಳೆಲ್ಲವನ್ನೂ ದಾಖಲೆಗೆ ತೆಗೆದುಕೊಳ್ಳಲಾಗಿದೆ. ಇದಕ್ಕೆ ಮುಂದುವರೆದು, ಸ್ಥಳೀಯ ಗ್ರಾಮಸ್ಥರು ನಮಗೆ ಪುರ್ನವಸತಿ ಕಲ್ಪಿಸಿ ಕೊಡುವ ವ್ಯವಸ್ಥೆಯನ್ನು ಮಾಡಿಕೊಡಬೇಕೆಂದು ಕೇಳಿದರು. ನೆರೆ ಪೀಡಿತ ಸಂತ್ರಸ್ತರು ಗಂಜಿ ಅಥವಾ ಕಾಳಜಿ ಕೇಂದ್ರವನ್ನು ಬಿಟ್ಟು ಹೋಗುವ ಸಂದರ್ಭದಲ್ಲಿ 8 ದಿವಸಕ್ಕೆ ಆಗುವಷ್ಟು ಅಕ್ಕಿ, ಎಣ್ಣೆ ಮತ್ತು ಬೇಳೆಗಳನ್ನು ಹೊಂದಿದ ಕಿಟ್‌ವೊಂದನ್ನು ವಿತರಿಸಿದರು. ಇದು ಒಂದನ್ನು ಹೊರತು ಪಡಿಸಿ, ಅಂದಿನಿಂದ ಇಂದಿನವರೆಗೆ ಅವರಿಗೆ ಸರ್ಕಾರದಿಂದ ಕನಿಷ್ಠ ಒಂದು ರೂಪಾಯಿಯೂ ಸಹ ದೊರೆತಿಲ್ಲ. ಒಂದು ಕುಟುಂಬಕ್ಕೆ ಹತ್ತು ಸಾವಿರ ರೂಪಾಯಿಗಳನ್ನು ನೀಡಿದ್ದಾರೆ. ನೆರೆ ಪೀಡಿತ ಕುಟುಂಬದ ಬಗ್ಗೆ ನಿನ್ನೆಯ ದಿವಸ ಸದನದಲ್ಲಿ ಚರ್ಚೆಯಾಗಿದೆ. ಈ ವಿಷಯದ ಬಗ್ಗೆ ಮಾನ್ಯ ಕಂದಾಯ ಮಂತ್ರಿಗಳು ಉತ್ತರವನ್ನು ನೀಡಿದ್ದಾರೆ. ಅದನ್ನು ಪರಿಗಣಿಸಿ, ಸಂತ್ರಸ್ತರಿಗೆ ಎಲ್ಲಾ ರೀತಿಯ ವ್ಯವಸ್ಥೆಗಳನ್ನು ಕಲ್ಪಿಸುವುದಕ್ಕೆ ಪ್ರಯತ್ನಗಳನ್ನು ಮಾಡುವುದಾಗಿ ತಿಳಿಸಿದ್ದಾರೆ. ಮಾನ್ಯ ಉಸ್ತುವಾರಿ ಮಂತ್ರಿಗಳಿಗೆ ತಿಳಿದಿರುವಂತೆ, ಕಲ್ಯಾಣ ಕರ್ನಾಟಕ ಭಾಗದಲ್ಲಿನ ಒಂದು ಕುಟುಂಬದಲ್ಲಿ ನಾಲ್ಕು ಸಂಸಾರಗಳಿರುತ್ತವೆ. ಒಂದು ಕುಟುಂಬಕ್ಕೆ ಹತ್ತು ಸಾವಿರ ರೂಪಾಯಿಗಳನ್ನು ನೀಡಿದರೆ, ಆ ಕುಟುಂಬದ ಎಲ್ಲಾ ಸದಸ್ಯರು ಬದುಕುವುದಕ್ಕೆ ಸಾಧ್ಯವಾಗುವುದಿಲ್ಲ. ಈ ವಿಚಾರದಲ್ಲಿಯೂ ಸಹ ಮಾನ್ಯ ಉಸ್ತುವಾರಿ ಮಂತ್ರಿಗಳು ಗಮನವನ್ನು ಹರಿಸಬೇಕು.

ಕಳೆದ ಒಂದು, ಒಂದೂವರೆ ದಶಕಗಳಿಂದ ಆ ಭಾಗದ ಗ್ರಾಮಗಳನ್ನು ಉಸ್ತುವಾರಿ ಮಂತ್ರಿಗಳು ನೋಡುತ್ತಿದ್ದಾರೆ. ಅಲ್ಲಿ ಯಾವುದೇ ರೀತಿಯಾದ ವಾಹನಗಳು ಚಲಿಸುವುದಕ್ಕೆ ಅನುಕೂಲವಾದ ಪರಿಸ್ಥಿತಿ ಇಲ್ಲ. ಹೀಗಾಗಿ ಕಳೆದ 15–20 ವರ್ಷಗಳಿಂದ ಗ್ರಾಮಸ್ಥರು ತಮ್ಮ ಗ್ರಾಮ ಪ್ರದೇಶ ವ್ಯಾಪ್ತಿಯಿಂದ ಹೊರಬಂದು ತಮ್ಮ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಹೊಲಗಳ ಹತ್ತಿರ ಮನೆಗಳನ್ನು ಕಟ್ಟಿಸಿಕೊಂಡಿದ್ದಾರೆ. ಇಂತಹ ಸ್ಥಿತಿ ಸರ್ವೇ ಸಾಮಾನ್ಯವಾಗಿ ಎಲ್ಲಾ ಗ್ರಾಮಗಳಲ್ಲಿಯೂ ಕಂಡು ಬರುತ್ತದೆ. ಅಂತಹ ಮನೆಗಳು ಇನ್ನೂ ಪಂಚಾಯಿತಿ ವ್ಯಾಪ್ತಿಗೆ ಒಳಪಟ್ಟಿಲ್ಲ. ಈ ಬಗ್ಗೆ ವಿಚಾರಿಸಿದಾಗ, ಪಂಚಾಯಿತಿಯವರು ವ್ಯವಸಾಯೇತರ ಭೂಮಿ ಎಂಬುದಾಗಿ ಇನ್ನೂ ಮಾರ್ಪಾಡಾಗಿಲ್ಲ, ಸದರಿ ಮನೆಗಳಿಗೆ ಯಾವುದೇ ನಂಬರ್ ಇಲ್ಲ ಹಾಗೂ ಇನ್ನಿತರೆ ಸಬೂಬುಗಳನ್ನು ಹೇಳುತ್ತಾರೆ. ಅಂತಹ ಮನೆಗಳನ್ನು ಇವತ್ತಿನ ದಿವಸ ಯಾವುದಕ್ಕೂ ಸಹ ಪರಿಗಣಿಸುತ್ತಿಲ್ಲ. ಸದರಿ ಗ್ರಾಮಗಳ ಶೇಕಡಾ 30–35 ಮನೆಗಳು ಈ ರೀತಿಯಾಗಿ ನಿರ್ಮಿಸಲ್ಪಟ್ಟಿದ್ದಾಗಿರುವುದರಿಂದ ಅಲ್ಲಿನ ನಿವಾಸಿಗಳಿಗೆ ತೊಂದರೆಯಾಗಿದೆ. ಹೀಗಾಗಿ ಈ ವಿಚಾರದಲ್ಲಿ ಜಿಲ್ಲಾ ಮಟ್ಟದಲ್ಲಿ ಸರಿಯಾದ ಅಧಿಕಾರಗಳ ತಂಡವನ್ನು ರಚನೆ ಮಾಡಿ, ಇಂತಹ ಸಮಸ್ಯೆಗಳನ್ನು ಸರಿಪಡಿಸುವ ನಿಟ್ಟಿನಲ್ಲಿ ಸಂಬಂಧಪಟ್ಟ ಮಂತ್ರಿಗಳು ಗಮನಹರಿಸಬೇಕೆಂದು ನಾನು ಮನವಿ ಮಾಡುತ್ತೇನೆ.

**ಸಭಾಪತಿಯವರು:–** ಮಾನ್ಯ ಬೋಸರಾಜುರವರೇ, ತಮಗೆ ಮಾತನಾಡಲು 10 ನಿಮಿಷಗಳ ಕಾಲಾವಕಾಶವನ್ನು ನೀಡಲಾಗಿತ್ತು. ಆದರೆ, ಈಗಾಗಲೇ ತಾವು 15 ನಿಮಿಷಗಳ ಕಾಲಾವಕಾಶವನ್ನು ಉಪಯೋಗಿಸಿಕೊಂಡಿದ್ದೀರಿ. ಜಿಲ್ಲಾ ಉಸ್ತುವಾರಿ ಮಂತ್ರಿಗಳು ಇದೇ ತಿಂಗಳ 15ನೇ ತಾರೀಖಿನಿಂದು ತಮ್ಮ ಜಿಲ್ಲೆಗೆ ಭೇಟಿ ನೀಡುವುದಾಗಿ ಈಗಾಗಲೇ ತಿಳಿಸಿದ್ದಾರೆ. ಹೀಗಾಗಿ ನಿಮ್ಮ ಜಿಲ್ಲೆಗೆ ಸಂಬಂಧಿಸಿದ ಎಲ್ಲಾ ರೀತಿಯ ಸಮಸ್ಯೆಗಳ ಬಗ್ಗೆ ಅವರೊಂದಿಗೆ ಚರ್ಚಿಸಿ.

**ಶ್ರೀ ಎನ್.ಎಸ್.ಬೋಸ್‌ರಾಜು:–** ಮಾನ್ಯ ಸಭಾಪತಿಯವರೇ, ಇನ್ನೂ ಎರಡು ಉದಾಹರಣೆಗಳನ್ನು ನಾನು ನೀಡಿ, ನನ್ನ ಮಾತುಗಳನ್ನು ಮುಗಿಸುತ್ತೇನೆ. ರಾಜ್ಯದ ಮಾನ್ಯ ಮುಖ್ಯಮಂತ್ರಿಗಳು ಒಬ್ಬರೇ ಒಂದು ತಿಂಗಳವರೆಗೆ ನೆರೆ ಪೀಡಿತ ಎಲ್ಲಾ ಪ್ರದೇಶಗಳಿಗೆ ಭೇಟಿ ನೀಡುವ ಪ್ರಯತ್ನವನ್ನು ಮಾಡಿದ್ದಾರೆ. ಎಲ್ಲೆಲ್ಲಿ ಸಾಧ್ಯವಾಯಿತೋ ಅಂತಹ ಪ್ರದೇಶಗಳಿಗೆಲ್ಲಾ ಭೇಟಿ ನೀಡಿದ್ದಾರೆ. ಆದರೆ ಮುಖ್ಯ ಮಂತ್ರಿಗಳೊಬ್ಬರೇ ಎಲ್ಲಾ ನೆರೆ ಪೀಡಿತ ಪ್ರದೇಶಗಳಿಗೆ ಭೇಟಿ ನೀಡಲು ಸಾಧ್ಯವಾಗುವುದಿಲ್ಲ. ಅವರಿಗೆ ಕಷ್ಟವಾಗುತ್ತದೆ. ಅವರಿಗೆ 76 ವರ್ಷಗಳಾಗಿದ್ದು, ನನಗೆ 73 ವರ್ಷಗಳಾಗಿದೆ. ಆದರೂ ಸಹ ನಮ್ಮ ಜಿಲ್ಲೆಗೆ ಐದು ನಿಮಿಷಗಳ ಕಾಲ ಭೇಟಿ ನೀಡಿದ್ದಾರೆ. ಯಾದಗಿರಿ ಜಿಲ್ಲೆಗೆ 10 ನಿಮಿಷಗಳಷ್ಟು ಕಾಲ ಭೇಟಿ ನೀಡಿದ್ದಾರೆ. ಆದರೆ ಜಿಲ್ಲಾ ಉಸ್ತುವಾರಿ ಮಂತ್ರಿಗಳ ನೇಮಕವಾದ ತಕ್ಷಣವೇ ಸಂಬಂಧಪಟ್ಟ ಎಲ್ಲರೂ ನಮ್ಮ ಜಿಲ್ಲೆಗೆ ಭೇಟಿ ನೀಡಿದ್ದರೆ, ಅಲ್ಲಿನ ವಾಸ್ತವಿಕ ಪರಿಸ್ಥಿತಿಯನ್ನು ಅವಗಾಹಿಸಲು ಅನುಕೂಲವಾಗುತ್ತಿತ್ತು ಎನ್ನುವುದು ನನ್ನ ಅಭಿಪ್ರಾಯವಾಗಿದೆ. ಆದರೆ ಈ ವಿಚಾರದಲ್ಲಿ ಸರ್ಕಾರದ ವತಿಯಿಂದ ವಿಳಂಬವಾಗಿದೆ. ನೆರೆ ಹಾವಳಿ ಆಗಿ 60 ದಿನಗಳು ಕಳೆದ ನಂತರ ಕೇಂದ್ರ ಸರ್ಕಾರದಿಂದ ನೆರೆ ಪರಿಹಾರ ಅನುದಾನ ಬಿಡುಗಡೆಯಾಗಿದೆ. ನಾನು ಕಳೆದ 45 ವರ್ಷಗಳಿಂದ ರಾಜಕೀಯ



"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕ್ಷೇತ್ರದಲ್ಲಿದ್ದೇನೆ. ನಾನು ಕಂಡಂತೆ ಈ ರೀತಿಯಾದ ವಿಳಂಬವು ಪ್ರಥಮ ಬಾರಿಗೆ ಆಗಿದೆ. ಈ ಹಿಂದೆ 2005 ನೇ ಸಾಲಿನಲ್ಲಿ ನಾನು ಶಾಸಕನಾಗಿ ಮಾನ್ಯ ಮುಖ್ಯಮಂತ್ರಿಗಳ ರಾಜಕೀಯ ಕಾರ್ಯದರ್ಶಿಯಾಗಿದ್ದೇನು. ಈ ಬಗ್ಗೆ ಈ ಸದನದಲ್ಲಿ ಯಾರೂ ಸಹ ಪ್ರಸ್ತಾಪಿಸಿಲ್ಲ. ಆದರೂ ಸಹ ನಾನು ಈ ಬಗ್ಗೆ ನಿನ್ನೆಯ ದಿವಸ ನಮ್ಮ ಸಭೆಯಲ್ಲಿ ಹೇಳಿದ್ದೇನೆ.

(ಮುಂದು)

(144)/11-10-2019/12-20/ಎಲ್‌ಎಂ/ಜಿಆರ್

(ವೈಸ್ ಛೇರ್ಮನ್‌ರವರ ಉಪಸ್ಥಿತಿ)

**ಶ್ರೀ ಎನ್.ಎಸ್.ಬೋಸ್‌ರಾಜು(ಮುಂದು):-**

2005ರಲ್ಲಿ ಮಾನ್ಯ ಧರ್ಮಸಿಂಗ್‌ರವರು ಮುಖ್ಯಮಂತ್ರಿಗಳಾಗಿದ್ದರು, ಮಾನ್ಯ ಎಂ.ಪಿ.ಪ್ರಕಾಶ್‌ರವರು ಉಪ ಮುಖ್ಯಮಂತ್ರಿಗಳಾಗಿದ್ದರು. ಆಗ ಕೊಯ್ನ ಡ್ಯಾಂ ನಿಂದ ನಾಲ್ಕುವರೆಯಿಂದ ಐದು ಲಕ್ಷ ಕ್ಯೂಸೆಕ್ಸ್ ನೀರನ್ನು ಬಿಟ್ಟರು. ಇದರಿಂದ ಬೆಳಗಾವಿ, ಬಿಜಾಪೂರ, ಬಾಗಲಕೋಟಿ ಮತ್ತು ರಾಯಚೂರು ಈ ನಾಲ್ಕು ಜಿಲ್ಲೆಗಳಿಗೆ ಹಾನಿ ಉಂಟಾಯಿತು. ಆ ಸಮಯದಲ್ಲಿ ನೂರಾರು ವಿದ್ಯುತ್ ಕಂಬಗಳು ಬಿದ್ದು ಹೋದವು, ಟ್ರಾನ್ಸ್‌ಫಾರ್ಮ್‌ರ್ಸ್ ಹಾಳಾದವು. At that time, Dr.S.M Jamdar was the Principal Secretary to Government, Revenue Department and Smt Malathi Das was the Chief Secretary to Government. ಆ ಸಂದರ್ಭದಲ್ಲಿ ಮಾನ್ಯ ಮುಖ್ಯಮಂತ್ರಿಗಳಾಗಿದ್ದ ಧರ್ಮಸಿಂಗ್‌ರವರನ್ನು ಹಿಡಿದು, ಮಾನ್ಯ ದೇಶಪಾಂಡೆಯವರು, ಮಾನ್ಯ ಎಚ್.ಕೆ.ಪಾಟೀಲ್‌ರವರು, ನಾನು ಎಲ್ಲರೂ ಸೇರಿ ಬೆಳಗಾವಿಯಲ್ಲಿ ಮೂರು ದಿನಗಳ ಕ್ಯಾಂಪ್ ಮಾಡಿದ್ದೆವು. ಆ ಸಮಯದಲ್ಲಿ ಮಾನ್ಯ ಮುಖ್ಯಮಂತ್ರಿಗಳಾಗಿದ್ದ ಧರ್ಮಸಿಂಗ್‌ರವರು ಮಾನ್ಯ ಪ್ರಧಾನ ಮಂತ್ರಿಗಳಾಗಿದ್ದ ಮನಮೋಹನ ಸಿಂಗ್‌ರವರ ಜೊತೆಯಲ್ಲಿ ಮಾತನಾಡಿ, ನಮ್ಮ ರಾಜ್ಯದಲ್ಲಿ ಈ ರೀತಿ ಪರಿಸ್ಥಿತಿ ಇದೆ ಎಂದು ಹೇಳಿದರು. ತಕ್ಷಣ ಮಾನ್ಯ ಪ್ರಧಾನ ಮಂತ್ರಿಗಳು ನಾನು ಬರುತ್ತೇನೆ, ಬಂದು aerial survey ಮಾಡುತ್ತೇನೆ ಎಂದು ಭರವಸೆಯನ್ನು ಕೊಟ್ಟರು. ಅವರು ಮಾತನಾಡಿದ ಮಾರನೆ ದಿನವೇ ಆಗಿನ ಕೇಂದ್ರ ಕೃಷಿ ಸಚಿವರಾಗಿದ್ದ ಮಾನ್ಯ ಶರದ್ ಪವಾರ್‌ರವರು ತಮ್ಮ ಸ್ವಂತ ವಾಹನದಲ್ಲಿಯೇ ಪೂನಾದಿಂದ ನೇರವಾಗಿ ಬೆಳಗಾವಿಗೆ ಬಂದರು. ಎರಡು ದಿನ ನಮ್ಮ ಜೊತೆಯಲ್ಲಿ ಇದ್ದು, ನಮ್ಮ ಜೊತೆ ಮತ್ತು ಆಗಿನ ಮಾನ್ಯ ಮುಖ್ಯ ಮಂತ್ರಿಯವರ ಪ್ರಧಾನ ಕಾರ್ಯದರ್ಶಿಯವರಾಗಿದ್ದ ಮಾನ್ಯ ಎಸ್.ವಿ.ರಂಗನಾಥ್‌ರವರ ಜೊತೆಯಲ್ಲಿ, ಉಳಿದ ಅಧಿಕಾರಿಗಳ ಜೊತೆಯಲ್ಲಿ ಚರ್ಚೆ ಮಾಡಿ, ಕಬ್ಬು ಬೆಳೆಗಾರರಿಗೆ ಏನು ಪರಿಹಾರ ಕೊಡಬೇಕು, garden lands ಗೆ ಏನು ಪರಿಹಾರ ಕೊಡಬೇಕು ಎನ್ನುವುದನ್ನು ರಾತ್ರಿ 1

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಗಂಟೆವರೆಗೆ ಕುಳಿತು ಚರ್ಚೆ ಮಾಡಿ ಪಟ್ಟಿಯನ್ನು ಅವರೇ ತಯಾರು ಮಾಡಿದರು. ಸಾಯಂಕಾಲ 5 ಗಂಟೆಗೆ ದೆಹಲಿಯಿಂದ ಗೋವಾಕ್ಕೆ ಬಂದು ವಾಸ್ತವ್ಯ ಹೂಡಿದರು. ಬೆಳಗ್ಗೆ 8–30ಕ್ಕೆ ಬೆಳಗಾವಿಗೆ ಬಂದು aerial survey ಮಾಡಬೇಕಾಗಿತ್ತು, ಮತ್ತು 1 ಗಂಟೆಗೆ ಪ್ರೆಸ್‌ಮೀಟ್ ಕರೆಯಲಾಗಿತ್ತು. ಆದರೆ ಆಗ ವಾತಾವರಣ ಸರಿ ಇಲ್ಲದ ಕಾರಣ ವಿಮಾನ ಸಂಚಾರ ಸಾಧ್ಯವಿಲ್ಲದ್ದರಿಂದ aerial survey ಮಾಡಲು ಸಾಧ್ಯವಾಗಲಿಲ್ಲ. ಮಾನ್ಯ ಪ್ರಧಾನ ಮಂತ್ರಿಗಳು 11 ಗಂಟೆಯವರೆಗೂ ಗೋವಾದಲ್ಲಿಯೇ ಇರಬೇಕಾಯಿತು. ಆಗ ಮಾನ್ಯ, ಶರದ್ ಪವಾರ್‌ರವರು ಮಾನ್ಯ ಪ್ರಧಾನ ಮಂತ್ರಿಗಳಿಗೆ ಫೋನ್ ಮಾಡಿ, ಈಗ ತಾವು ಏರಿಯಾ ಸರ್ವೇ ಮಾಡಲು ವಾತಾವರಣ ಸರಿ ಇಲ್ಲ, ಆದರೆ 1 ಗಂಟೆಗೆ ಬೆಳಗಾವಿಯಲ್ಲಿ ನಿಮ್ಮ ಪ್ರೆಸ್‌ಮೀಟ್‌ನ್ನು ಕರೆಯಲಾಗಿದೆ. ಪ್ರೆಸ್‌ಮೀಟ್‌ನಲ್ಲಿ ನಾವು ಏನು ಹೇಳಬೇಕು ಎಂದು ಕೇಳಿದರು. ಅದಕ್ಕೆ ಮಾನ್ಯ ಪ್ರಧಾನ ಮಂತ್ರಿಗಳು 'what is the expected loss' ಎಂದು ಕೇಳಿದರು. ಅದಕ್ಕೆ ಶ್ರೀ ಶರದ್ ಪವಾರ್‌ರವರು ಎಷ್ಟು ಎಂದು ಈಗಲೇ ಹೇಳುವುದಕ್ಕೆ ಆಗುವುದಿಲ್ಲ. ಸದ್ಯಕ್ಕೆ ಕನಿಷ್ಠ 500 ಕೋಟಿ ರೂ.ಗಳನ್ನು ಕೊಡಬೇಕಾಗುತ್ತದೆ ಎಂದು ಹೇಳಿದರು. ಅದಕ್ಕೆ ಪ್ರಧಾನ ಮಂತ್ರಿಗಳು "Ok, we will announce Rs.500 Crore on behalf of the Government of India' ಎಂದು ಹೇಳಿ 12 ಗಂಟೆಗೆ ಗೋವಾದಿಂದ ವಾಪಸ್ ಹೋದರು. ಇಲ್ಲಿ ಬೆಳಗಾವಿಯಲ್ಲಿ 1 ಗಂಟೆ ಇದ್ದ ಪ್ರೆಸ್‌ಮೀಟ್‌ನಲ್ಲಿ 500 ಕೋಟಿ ರೂ.ಗಳ ಪರಿಹಾರ ಕಾರ್ಯಕ್ಕೆ ಘೋಷಣೆ ಮಾಡಿದರು. 500 ಕೋಟಿ ರೂ.ಗಳು ಕೇಂದ್ರ ಸರ್ಕಾರದಿಂದ ಬಂದ ತಕ್ಷಣ ನಮ್ಮ ಸರ್ಕಾರ ಹಣವನ್ನು ಖರ್ಚು ಮಾಡಲು ಪ್ರಾರಂಭ ಮಾಡಿತ್ತು. ನಂತರ ಕೇಂದ್ರ ಸರ್ಕಾರದ ಟೀಮ್ ಬಂದು ಸರ್ವೇ ಮಾಡಿ ಪರಿಹಾರ ಕಾರ್ಯಕ್ಕೆ 368 ಕೋಟಿ ರೂ.ಗಳು ಸಾಕು ಎಂದು ಆ ಸಮಿತಿ ವರದಿಯನ್ನು ಕೊಟ್ಟಿತ್ತು. ತಕ್ಷಣ ಒಂದು ವಾರದಲ್ಲಿ ಉಳಿದ ಹಣವನ್ನು ವಾಪಸ್ ಕಳುಹಿಸಿ ಎಂದು ಕೇಂದ್ರ ಹಣಕಾಸು ಇಲಾಖೆಯಿಂದ ನಮ್ಮ ಸರ್ಕಾರಕ್ಕೆ ಪತ್ರ ಬಂತು.

ಮಾನ್ಯ ಸಭಾಪತಿಯವರೇ, ಇದನ್ನು ಏಕೆ ಹೇಳುತ್ತಿದ್ದೇನೆ ಎಂದರೆ, ಯಾರೇ ಕಷ್ಟದಲ್ಲಿರಲಿ ದೇಶದ ಮುಖ್ಯಸ್ಥರು, ರಾಜ್ಯದ ಮುಖ್ಯಸ್ಥರು ತಕ್ಷಣ ಸ್ಪಂದಿಸಬೇಕಾಗುತ್ತದೆ. ಜನರಿಗೆ ಸಮಾಧಾನವಾಗುವಂತೆ ಶಕ್ತಿ ಕೊಡಬೇಕಾಗುತ್ತದೆ. ಆದರೆ ಈ ರೀತಿ ಘಟನೆಯಾಗಿ 60 ದಿನಗಳಾದರೂ ಮಾನ್ಯ ಪ್ರಧಾನ ಮಂತ್ರಿಗಳು ಈ ಭಾಗಕ್ಕೆ ಬರಲಿಲ್ಲ, ರಾಜ್ಯದ ಜನರ ಬಗ್ಗೆ ಮಾತನಾಡಲಿಲ್ಲ, ರಾಜ್ಯದ ಜನತೆಗೆ ಒಂದು ಸಂದೇಶವನ್ನು ಕೊಡಲಿಲ್ಲ. ಮಾನ್ಯ ಮುಖ್ಯಮಂತ್ರಿಗಳಿಗೆ ಮಾತನಾಡಲು ಅವಕಾಶ ಕೊಡಲಿಲ್ಲ. ಮಾನ್ಯ ಪ್ರಧಾನ ಮಂತ್ರಿಗಳು ಒಂದು ಕಾರ್ಯಕ್ರಮದ ನಿಮಿತ್ತ ಬೆಂಗಳೂರಿಗೆ ಬಂದ ಸಂದರ್ಭದಲ್ಲಿ ಇಸ್ರೋ ಗೆಸ್ಟ್‌ಹೌಸ್‌ನಲ್ಲಿ 40 ನಿಮಿಷಗಳ ಕಾಲ ಇದ್ದರು. ಆಗಲಾದರೂ ಮಾನ್ಯ ಮುಖ್ಯಮಂತ್ರಿಗಳನ್ನು ಕರೆಯಿಸಿ, ಪಕ್ಷದ ನಾಯಕರನ್ನು ಕರೆಯಿಸಿ ಅಥವಾ ಕ್ಯಾಬಿನೆಟ್ ಸಚಿವರನ್ನು ಕರೆಯಿಸಿ ಅಥವಾ ವಿರೋಧ ಪಕ್ಷದವರ್ನು ಕರೆಯಿಸಿ ನೆರೆ–ಪ್ರವಾಹದ ಬಗ್ಗೆ ಮಾತನಾಡಬಹುದಾಗಿತ್ತು.

ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಸಂತ್ರಸ್ತರ ಬಗ್ಗೆ ಒಂದು statement ಮಾಡಬಹುದಾಗಿತ್ತು. It's a grate unfortunate thing for the people of Karnataka. ಈ ರೀತಿಯ ಪರಿಸ್ಥಿತಿ ನಮ್ಮ ರಾಜ್ಯದಲ್ಲಿ ಪ್ರಥಮ ಬಾರಿಗೆ ಆಗಿದೆ ಎಂದು ನಾನು ಹೇಳಬಯಸುತ್ತೇನೆ. 2005–06ನೇ ಸಾಲಿನಲ್ಲಿ ಮಾನ್ಯ ಶರದ್ ಪವಾರ್‌ರವರು ಬೆಳಗಾವಿಗೆ ಬಂದು ಎರಡು ದಿನ ಇದ್ದು, ಎಲ್ಲವನ್ನು ಚರ್ಚೆ ಮಾಡಿರುವುದನ್ನು ಮತ್ತು ಮಾನ್ಯ ಪ್ರಧಾನ ಮಂತ್ರಿಗಳು ಬಂದು ಹೋಗಿರುವುದನ್ನು, 500 ಕೋಟಿ ರೂ.ಗಳನ್ನು ಬಿಡುಗಡೆ ಮಾಡಿರುವುದನ್ನು, ಕೇಂದ್ರದಿಂದ ಸಮಿತಿ ಬಂದು ಸರ್ವೇ ಮಾಡಿ ವರದಿ ಕೊಟ್ಟ ಮೇಲೆ ಬಂದಿರುವ ಹಣದಲ್ಲಿ ಉಳಿದ ಹಣವನ್ನು ಕೇಂದ್ರ ಹಣಕಾಸು ಇಲಾಖೆಗೆ ವಾಪಸ್ ಕೊಟ್ಟಿರುವುದನ್ನು ಬೇಕಾದರೆ ಮಾನ್ಯ ವಿರೋಧ ಪಕ್ಷದ ನಾಯಕರು verify ಮಾಡಿಕೊಳ್ಳಬಹುದು. ಎಲ್ಲವು ರೆಕಾರ್ಡ್‌ನಲ್ಲಿದೆ. ಅದೇ ರೀತಿ 2009ರಲ್ಲಿ ಮತ್ತೆ ಪ್ರವಾಹ ಬಂದಾಗ ತುಂಗಾ–ಮಲಪ್ರಭಾ–ಕೃಷ್ಣಾ ನದಿ ತೀರದ ಜನರು ಜಲ ಪ್ರವಾಹಕ್ಕೆ ಒಳಗಾದಾಗ, ಮತ್ತೆ ಆಗಿನ ಪ್ರಧಾನ ಮಂತ್ರಿಗಳಾಗಿದ್ದ ಡಾ: ಮನಮೋಹನ ಸಿಂಗ್‌ರವರು ಸ್ಪಂದಿಸಿ aerial survey ಮಾಡಿ ರಾಯಚೂರಿನಲ್ಲಿ ಲ್ಯಾಂಡ್ ಆಗಿದ್ದರು. ಆಗ ಈ ರಾಜ್ಯದಲ್ಲಿ ಮಾನ್ಯ ಯಡಿಯೂರಪ್ಪನವರು ಮುಖ್ಯಮಂತ್ರಿಗಳಾಗಿದ್ದರು, ರಾಯಚೂರಿಗೆ ಎಲ್ಲ ಕ್ಯಾಬಿನೆಟ್ ಮಂತ್ರಿಗಳು ಬಂದಿದ್ದರು. ನಾವು ಕೂಡಾ ರಾಯಚೂರಿನಲ್ಲಿದ್ದೆವು. ರಾಯಚೂರಿನ aero base airstrip ನಲ್ಲಿ ಒಂದು ಕಟ್ಟಡ ಇದೆ. ಅಲ್ಲಿ ಜಿಲ್ಲಾಡಳಿತ ಮೀಟಿಂಗ್‌ನ್ನು ಅರೇಂಜ್ ಮಾಡಿತ್ತು. ಅಲ್ಲಿ ಎಲ್ಲರ ಜೊತೆಯಲ್ಲಿ ಒಂದು ಗಂಟೆಗಳ ಕಾಲ ಪ್ರವಾಹದ ಬಗ್ಗೆ ಚರ್ಚೆ ಮಾಡಿದರು. ಚರ್ಚೆ ಮಾಡಿ ದೆಹಲಿಗೆ ಹೋಗಿ ತಕ್ಷಣ 1600 ಕೋಟಿ ರೂ.ಗಳ ಪರಿಹಾರ ಕಾರ್ಯಕ್ಕೆ ಹಣವನ್ನು ಬಿಡುಗಡೆ ಮಾಡಿದರು. ಇದು ರೆಕಾರ್ಡ್‌ನಲ್ಲಿದೆ. ಈ ರೀತಿ 2005–06ರಲ್ಲಿ ಪ್ರವಾಹ ಬಂದಾಗ ಪ್ರಧಾನ ಮಂತ್ರಿಗಳು ಬಂದು ಪರಿವೀಕ್ಷಣೆ ಮಾಡಿ ಹೋದರು.

**ಶ್ರೀ ಪ್ರಕಾಶ್ ರಾಠೋಡ್:–** ಮಾನ್ಯ ಸಭಾಪತಿಗಳೆ, 500 ಕೋಟಿ ರೂ.ಗಳಲ್ಲಿ ಉಳಿದ ಹಣವನ್ನು ಏನು ಮಾಡಲಾಯಿತು ಎನ್ನುವುದನ್ನು ಅವರಿಗೆ ಹೇಳಿ.

**ಶ್ರೀ ಎನ್.ಎಸ್.ಬೋಸರಾಜು:–** ಅದೆಲ್ಲ ಬೇಡ, ಆಡಳಿತ ಪಕ್ಷದವರು ಅದನ್ನು ವೈರಿಫೈ ಮಾಡಿಕೊಳ್ಳುತ್ತಾರೆ.

**ವೈಸ್ ಛೇರ್ಮನ್:–** ಭೋಸರಾಜುರವರೆ, ಸರ್ಕಾರ ಏನು ಮಾಡಬೇಕು ಎನ್ನುವುದನ್ನು ಹೇಳಿ. ನಿಮ್ಮ ಬೇಡಿಕೆ ಏನು ಹೇಳಿ. ಹೇಳಿದ್ದನ್ನೇ ರಿಪೀಟ್ ಮಾಡಬೇಡಿ.

**ಶ್ರೀ ಎನ್.ಎಸ್.ಭೋಸರಾಜು:–** ಮಾನ್ಯ ಸಭಾಪತಿಗಳೆ, ಇಂತಹ ಪರಿಸ್ಥಿತಿಯಲ್ಲಿ ಪ್ರಧಾನ ಮಂತ್ರಿಗಳು ಯಾವ ರೀತಿ ಸ್ಪಂದಿಸಬೇಕಾಗಿತ್ತೋ ಆ ರೀತಿ ಸ್ಪಂದಿಸಲಿಲ್ಲ, ಮಾನವೀಯತೆಯನ್ನು ತೋರಿಸಲಿಲ್ಲ ಎನ್ನುವುದನ್ನು ಹೇಳುತ್ತಿದ್ದೇವೆ.

“ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು):–** ಮಾನ್ಯ ಸಭಾಪತಿಗಳೆ, ಮಾನ್ಯ ವಿರೋಧ ಪಕ್ಷದ ಎಲ್ಲ ನಾಯಕರು, ಸದಸ್ಯರು ಮಾತನಾಡುವುದನ್ನು ಅತ್ಯಂತ ಗೌರವಯುತವಾಗಿ ಕೇಳಬೇಕು ಎಂದು ನಿರ್ಧಾರ ಮಾಡಿ ಮಧ್ಯದಲ್ಲಿ ಯಾವುದೆ ತೊಂದರೆ ಮಾಡಿದೆ ಸುಮ್ಮನೆ ಕುಳಿತು ಕೇಳುತ್ತಿದ್ದೇವೆ. ತಾವು ಏನು ಹೇಳಬೇಕೊ ಹೇಳಿ. ಉತ್ತರ ಕೊಡುವಾಗ ಮಾನ್ಯ ಮುಖ್ಯಮಂತ್ರಿಗಳು ಸಮಜಾಯಿಷಿ ಕೊಡುತ್ತಾರೆ. ಆದರೆ ತಾವು ಮತ್ತೆ–ಮತ್ತೆ ಯಾರನ್ನೋ ಪ್ರೇರೇಪಿಸುವಂತಹ ಮಾತುಗಳನ್ನು ಹೇಳುತ್ತಿದ್ದೀರಿ. ಮಾನ್ಯ ಪ್ರಧಾನ ಮಂತ್ರಿಗಳು ಬರಲಿಲ್ಲ, ಈ ಕಡೆ ನೋಡಲಿಲ್ಲ, ಈಗ 1200 ಕೋಟಿ ರೂ.ಗಳನ್ನು ಮಂಜೂರು ಮಾಡಿದ್ದಾರೆ ಎಂದು ಹೇಳಿದ್ದೀರಿ.

**ವೈಸ್ ಛೇರ್ಮನ್:–** ಅವರು ತಮ್ಮ ಅನ್ನಿಸಿಕೆಗಳನ್ನು ಹೇಳುತ್ತಿದ್ದಾರೆ.

**ಶ್ರೀ ಎನ್.ಎಸ್.ಬೋಸ್‌ರಾಜು:–** ನಮ್ಮ ಕಲ್ಯಾಣ ಕರ್ನಾಟಕಕ್ಕೆ ಏನನ್ನೂ ಕೊಟ್ಟಿರುವುದಿಲ್ಲ.

(ಗೊಂದಲ)

**ಶ್ರೀ ಎಸ್.ಆರ್.ಪಾಟೀಲ್(ವಿರೋಧ ಪಕ್ಷದ ನಾಯಕರು):–** ಮಾನ್ಯ ಸಭಾಪತಿಗಳೆ, ಬೋಸ್‌ರಾಜು ಹೇಳಿರುವುದನ್ನು ಕೇಳಿ ಸಭಾನಾಯಕರಿಗೆ ಏಕೆ ನೋವಾಗುತ್ತಿದೆ. 2005–06ರಲ್ಲಿ ಪ್ರವಾಹ ಬಂದಾಗ ಪ್ರಧಾನ ಮಂತ್ರಿಗಳು ಬಂದು ನೋಡಿಕೊಂಡು ಪರಿಹಾರ ಬಿಡುಗಡೆ ಮಾಡಿದ್ದಾರೆ. ಅದನ್ನು ಮಾನ್ಯ ಸದಸ್ಯರು ಹೇಳುತ್ತಿದ್ದಾರೆ. ಅದನ್ನು ಕೇಳಿ ಸಭಾನಾಯಕರಿಗೆ ಏಕೆ ನೋವಾಗುತ್ತಿದೆ?

(ಗೊಂದಲ)

ಕರ್ನಾಟಕಕ್ಕೆ ಮಾನ್ಯ ಪ್ರಧಾನ ಮಂತ್ರಿಗಳು ಬರದೆ ಇರುವುದನ್ನು, ನಮ್ಮ ರಾಜ್ಯದ ಬಗ್ಗೆ ಚಕಾರ ಸಹ ಎತ್ತದೆ ಇರುವುದರ ಬಗ್ಗೆ ಅವರು ಹೇಳುತ್ತಿದ್ದಾರೆ. Hon'ble Member has got an inherent right.

ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು):– ಹೇಳಿ ನಾವು ಬೇಡ ಎನ್ನುವುದಿಲ್ಲ.

(ಗೊಂದಲ)

**Sri S.R.PATIL**:- Mr.Chairman Sir, everything is on record. If there is a discrepancy let the Government clarify it. 2005 ರಲ್ಲಿ ಮತ್ತು 2009ರಲ್ಲಿ ಪ್ರವಾಹ ಬಂದಾಗ ಪ್ರಧಾನ ಮಂತ್ರಿಗಳಾಗಿದ್ದ ಮಾನ್ಯ ಮನಮೋಹನ ಸಿಂಗ್‌ರವರು ನಮ್ಮ ರಾಜ್ಯಕ್ಕೆ ಬಂದು aerial survey ಮಾಡಿ, ಪರಿಹಾರದ ಹಣವನ್ನು ಘೋಷಣೆ ಮಾಡಿರುವುದನ್ನು ಮಾನ್ಯ ಸದಸ್ಯರು ಹೇಳುತ್ತಿದ್ದಾರೆ. ಇದೆಲ್ಲವು ರೆಕಾರ್ಡ್‌ನಲ್ಲಿ ಇಂದಿಗೂ ಇದೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಈಗ ಕೇಂದ್ರ ಸರ್ಕಾರ ಹಣವನ್ನು ಬಿಡುಗಡೆ ಮಾಡಿದೆ. ನೀವು ಬರಿ ಮಾನ್ಯ ಪ್ರಧಾನ ಮಂತ್ರಿಗಳ ಬಗ್ಗೆಯೇ ಮಾತನಾಡುತ್ತಿದ್ದೀರಿ. ನನಗೆ ಏನು ನೋವಾಗಿಲ್ಲ,,,

**ವೈಸ್ ಛೇರ್ಮನ್:–** ಸಭಾನಾಯಕರೆ ನೀವು ಹೇಳುವುದನ್ನು ಉತ್ತರ ಕೊಡುವಾಗ ಹೇಳಿ.

“ ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು ”

(ಗೊಂದಲ)

**ಶ್ರೀ ಎಸ್.ಆರ್.ಪಾಟೀಲ್:–** ಈಗಿನ ಪ್ರಧಾನ ಮಂತ್ರಿಗಳು ಬರಲೇ ಇಲ್ಲ. ಈ ರಾಜ್ಯದ ಜನರು 25 ಜನರನ್ನು ನಿಮ್ಮ ಸಹಾಯದಿಂದ ಒಬ್ಬರು ಒಟ್ಟು 26 ಜನ ಬಿಜೆಪಿ ಸದಸ್ಯರನ್ನು ಆಯ್ಕೆ ಮಾಡಿ ಕಳುಹಿಸಿದ್ದಾರೆ. ವಿಧಾನ ಸಭೆ ಚುನಾವಣೆಯಲ್ಲಿ 105 ಜನರನ್ನು ಆಯ್ಕೆ ಮಾಡಿದ್ದಾರೆ. ಈ ರಾಜ್ಯದ ಜನ ನಿಮ್ಮ ಪಕ್ಷಕ್ಕೆ ದೊಡ್ಡ ಪ್ರಮಾಣದಲ್ಲಿ ಸಹಾಯ ಮಾಡಿದ್ದಾರೆ, ಆರ್ಶೀವಾದ ಮಾಡಿದ್ದಾರೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಜನಾದೇಶ ಸಿಕ್ಕಿದೆ, ಅದನ್ನು ನಾವು ಒಪ್ಪಿಕೊಳ್ಳುತ್ತೇವೆ. ಆದರೆ ತಾವು...

**ಶ್ರೀ ಎಸ್.ಆರ್.ಪಾಟೀಲ್:–** ಸದಸ್ಯರು ಚೆನ್ನಾಗಿ ಮಾತನಾಡುತ್ತಿರುವಾಗ ಮಾನ್ಯ ಸಭಾನಾಯಕರು ಪದೇ–ಪದೇ ಎದ್ದು ನಿಂತು ಈ ರೀತಿ interrupt ಮಾಡುವುದು ಸರಿಯಲ್ಲ. It is not in good taste.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ತಾವು ಸಭಾನಾಯಕರಾಗಿದ್ದಾಗ.. ನಾವು ಉಲ್ಲೇಖ ಮಾಡಿದ್ದೇವೆ.

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:–** ಮಾನ್ಯ ಸಭಾಪತಿಗಳೆ, 120 ವರ್ಷಗಳ ಹಿಂದೆ ರೀತಿ ರಾಜ್ಯಕ್ಕೆ ಪ್ರವಾಹ ಪರಿಸ್ಥಿತಿ ಬಂದಿತ್ತು. ಮತ್ತೆ ಅದೇ ರೀತಿಯ ಪರಿಸ್ಥಿತಿ ರಾಜ್ಯಕ್ಕೆ ಬಂದಿದೆ. ಈ ಸಂದರ್ಭದಲ್ಲಿ ವಿರೋಧ ಪಕ್ಷದ ಸದಸ್ಯರು ಹೇಳುವುದು, ದೇಶದ ಪ್ರಧಾನ ಮಂತ್ರಿಗಳಾಗಿದ್ದವರು ಈ ರೀತಿ ಪರಿಸ್ಥಿತಿ ಬಂದಾಗ ರಾಜ್ಯಕ್ಕೆ ಬಂದು ವೈಮಾನಿಕ ಸಮೀಕ್ಷೆ ಮಾಡಿ, ಒಂದು ಸಭೆಯನ್ನು ಮಾಡಿ ಅಲ್ಲಿನ ಪರಿಸ್ಥಿತಿ ಏನಾಗಿದೆ ಎನ್ನುವುದನ್ನು ಚರ್ಚೆ ಮಾಡಿ ಒಂದು ಹೇಳಿಕೆಯನ್ನು ಕೊಟ್ಟಿದ್ದರೆ ಜನರಿಗೆ ಎಷ್ಟೊ ಸಮಾಧಾನವಾಗುತ್ತಿತ್ತು. ಇದರ ಬಗ್ಗೆ ಎಲ್ಲರೂ ಮಾತನಾಡುತ್ತಾರೆ. ಇದಕ್ಕಿಂತ ದೊಡ್ಡ ವಿಪತ್ತು ಬಿಹಾರ ರಾಜ್ಯಕ್ಕೆ ಬಂದಾಗ ಯಾವ ರೀತಿ ಕೇಂದ್ರ ನಡೆದುಕೊಂಡಿದೆ ಎನ್ನುವುದು ಎಲ್ಲರಿಗೂ ಗೊತ್ತಿದೆ. ಕೇಂದ್ರ ಗೃಹ ಸಚಿವರು ಬಂದು ನೋಡಿಕೊಂಡು ಹೋದರು. ಅವರೇನು ಮಾಡಿದರು? ಹಣ ಕೊಡಬೇಕಾಗಿದ್ದು ಕೇಂದ್ರದ ಧರ್ಮ, ಅದನ್ನು ಅವರು ಕೊಟ್ಟಿದ್ದಾರೆ. ಆದರೆ ತಕ್ಷಣ ಮಾನ್ಯ ಪ್ರಧಾನ ಮಂತ್ರಿಗಳು ಬಂದು ನೋಡಿ ಕ್ರಮ ತೆಗೆದುಕೊಳ್ಳಬೇಕಾಗಿತ್ತು ಎನ್ನುವುದು ಜನರಲ್ಲಿ ಇರುವ ಭಾವನೆ. ನಮ್ಮ ರಾಜ್ಯ ಬಿಟ್ಟು ಬೇರೆ ಎಲ್ಲ ರಾಜ್ಯಗಳಿಗೂ ಮಾನ್ಯ ಪ್ರಧಾನ ಮಂತ್ರಿಗಳು ಹೋಗಿದ್ದಾರೆ. ಬಿಹಾರದಲ್ಲಿ ನಮ್ಮ ರಾಜ್ಯದಲ್ಲಿ ಆಗಿರುವುದಕ್ಕಿಂತ ಹೆಚ್ಚಿನ ವಿಪತ್ತು ಉಂಟಾಗಿತ್ತು. ಅಲ್ಲಿ ಯಾವ ರೀತಿ ತಕ್ಷಣ ಕ್ರಮ ತೆಗೆದುಕೊಂಡರು ಅದೇ ರೀತಿ ಇಲ್ಲಿಯು ಕ್ರಮ ತೆಗೆದುಕೊಳ್ಳಬೇಕಾಗಿತ್ತು. ಪಕ್ಷಾತೀತವಾಗಿ ಹೇಳುವುದಾದರೆ ಈ ರೀತಿಯ ಪರಿಸ್ಥಿತಿ 120 ವರ್ಷಗಳ ಹಿಂದೆ ಆಗಿತ್ತು. ಮತ್ತೆ ಅದೇ ರೀತಿಯ ಪರಿಸ್ಥಿತಿ ಇವತ್ತು ಉಂಟಾಗಿದೆ. ದೇಶದ ಪ್ರಧಾನ ಮಂತ್ರಿಗಳನ್ನು ಕೇಳುವುದು ನಮ್ಮ ಧರ್ಮ. ಪ್ರಧಾನ ಮಂತ್ರಿ ಎಂದರೆ, ಅವರು ಇಡೀ ದೇಶಕ್ಕೆ ಪ್ರಧಾನ ಮಂತ್ರಿಗಳು

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಸಿ.ಸಿ.ಪಾಟೀಲ್(ಗಣಿ ಮತ್ತು ಭೂ ವಿಜ್ಞಾನ , ವಾಣಿಜ್ಯ ಮತ್ತು ಕೈಗಾರಿಕಾ ಸಚಿವರು** ) ಮಾನ್ಯ ಸಭಾಪತಿಗಳೆ, ಆ ರೀತಿ ಅವರು ಕೇಳುತ್ತಿಲ್ಲ. ಪ್ರಧಾನ ಮಂತ್ರಿಗಳನ್ನು ದೋಷಿಸಲು ಅವರು ಸದನವನ್ನು ಉಪಯೋಗಿಸಿಕೊಳ್ಳುತ್ತಿದ್ದಾರೆ.

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:–** ಮಾನ್ಯ ಸಭಾಪತಿಗಳೆ, ಪ್ರಧಾನ ಮಂತ್ರಿಗಳು ಎಂದರೆ, ಅವರು ಇಡೀ ದೇಶಕ್ಕೆ ಪ್ರಧಾನ ಮಂತ್ರಿಗಳು. ಅವರಿಗೂ ಜವಾಬ್ದಾರಿ ಇರುತ್ತದೆ. ಅವರು ಬಂದು ನೋಡಿದರೆ ಬಹಳ ಬೇಗ ಪರಿಹಾರ ಕಾರ್ಯಗಳಿಗೆ ಹಣ ಬಿಡುಗಡೆಯಾಗುತ್ತಿತ್ತು ಎನ್ನುವುದು ನಮ್ಮ ಅನಿಸಿಕೆ.

(ಮುಂದು)

(145) 11-10-2019 (12-30) ಬಿಎಸ್‌ಡಿ–ಜಿಆರ್

ಶ್ರೀ ಚಂದ್ರಕಾಂತಗೌಡ ಚನ್ನಪ್ಪಗೌಡ ಪಾಟೀಲ್ (ಗಣಿ ಮತ್ತು ಭೂ ವಿಜ್ಞಾನ ಹಾಗೂ ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವರು):– ಮಾನ್ಯ ಸಭಾಪತಿಯವರೇ, ಮಾನ್ಯ ಬೋಸರಾಜುರವರು ಹಿರಿಯ ಸದಸ್ಯರಾಗಿದ್ದು, ಅವರ ಬಗ್ಗೆ ಅಪಾರ ಗೌರವವಿದೆ. ಅವರು ಮಾತನಾಡುವಾಗ ರೂ.1,200 ಕೋಟಿಗಳನ್ನು ಪುಗಸಟ್ಟೆ ಕೊಟ್ಟಿಲ್ಲ ಎನ್ನುವ ಶಬ್ದಗಳನ್ನು ಉಪಯೋಗ ಮಾಡಿದರು.

ಶ್ರೀ ಎನ್.ಎಸ್. ಬೋಸರಾಜು:– ಅದರಲ್ಲಿ ಏನು ತಪ್ಪಿದೆ?

(ಗೊಂದಲ)

ಶ್ರೀ ಎಸ್.ಆರ್. ಪಾಟೀಲ್:– ರೂ.38,000 ಕೋಟಿಗಳಲ್ಲಿ ಕೊಟ್ಟಿರುವ ರೂ.1,200 ಕೋಟಿಗಳು 3 ಪರ್ಸೆಂಟ್ ಆಗುತ್ತದೆ.

(ಗೊಂದಲ)

ಶ್ರೀ ಚಂದ್ರಕಾಂತಗೌಡ ಚನ್ನಪ್ಪಗೌಡ ಪಾಟೀಲ್:– ಮಾನ್ಯ ವಿರೋಧ ಪಕ್ಷದ ನಾಯಕರು ಸೌಜನ್ಯದಿಂದ ಕೇಳಬೇಕು. ನಾವು ಮುಕ್ತ ಮನಸ್ಸಿನಿಂದ ಸ್ವೀಕಾರ ಮಾಡಿಕೊಂಡು ಬರೆದುಕೊಳ್ಳುತ್ತಿದ್ದೇವೆ. ಈ ಸದನವನ್ನು ಕೇವಲ ಪ್ರಧಾನಿಗಳನ್ನು ಟೀಕೆ ಮಾಡುವುದಕ್ಕೆ ಬಳಸುವುದು ಬೇಡ.

ಶ್ರೀ ಪ್ರಕಾಶ್ ಕೆ. ರಾಥೋಡ್:– ಟೀಕೆ ಮಾಡಲೇಬೇಕು, ಏಕೆ ಮಾಡಬಾರದು. ಫೆಡರಲ್ ವ್ಯವಸ್ಥೆಯಲ್ಲಿ ಟೀಕೆ ಮಾಡುವುದು ಇದ್ದೇ ಇರುತ್ತದೆ.

ಶ್ರೀ ಎನ್.ಎಸ್. ಬೋಸರಾಜು:– ಮಾನ್ಯ ಸಭಾಪತಿಯವರೇ, 2005–06 ರಲ್ಲಿ ಆಗಿರುವ ಪ್ರವಾಹ ಮತ್ತು 2009 ರಲ್ಲಿ ಆಗಿರುವ ಪ್ರವಾಹಕ್ಕೆ ಕೇಂದ್ರ ಸರ್ಕಾರ ಯಾವ ರೀತಿ ಸ್ಪಂದಿಸಿದೆ. 60 ದಿನಗಳು ಕಳೆದ ನಂತರ......

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಶ್ರೀ ಚಂದ್ರಕಾಂತಗೌಡ ಚನ್ನಪ್ಪಗೌಡ ಪಾಟೀಲ್:- ಶ್ರೀ ಮನ್‌ಮೋಹನ್ ಸಿಂಗ್‌ರವರು ರೂ.1,600 ಕೋಟಿಗಳನ್ನು ಘೋಷಣೆ ಮಾಡಿ ಬಿಡುಗಡೆ ಮಾಡಿದ್ದು ಎಷ್ಟು?

(ಗೊಂದಲ)

ಶ್ರೀ ಎಂ.ಕೆ. ಪ್ರಾಣೇಶ್:- ಮಾನ್ಯ ಸಭಾಪತಿಯವರೇ, ಸದನವನ್ನು ಟೀಕೆ ಮಾಡುವುದಕ್ಕೆ ಬಳಸುವುದು ಬೇಡ. ಸಲಹೆಗಳನ್ನು ನೀಡದರೆ ಪರಿಹಾರಾತ್ಮಕ ಕ್ರಮಗಳನ್ನು ತೆಗೆದುಕೊಳ್ಳಬಹುದು. ಅವರ ಪ್ರಧಾನ ಮಂತ್ರಿ ಸರಿಯಿಲ್ಲ ಎಂದು ಹೇಳುವುದು ಬೇಡ. ಸಲಹೆಗಳನ್ನು ಕೊಡಲಿ.

ಶ್ರೀ ಹೆಚ್.ಎಂ. ರೇವಣ್ಣ:- ಹೀಗೆ ಮಾಡಬೇಕು ಎಂದು ಗೈಡ್‌ಲೈನ್ ಕೊಟ್ಟುಬಿಡಲಿ.

(ಗೊಂದಲ)

ಶ್ರೀ ಪ್ರಕಾಶ್ ಕೆ. ರಾಥೋಡ್:- ನಾವು ಟೀಕೆ ಮಾಡಬೇಕು, ನಾವು ವಾಸ್ತವಾಂಶ ಹೇಳುತ್ತಿದ್ದೇವೆ.

(ಗೊಂದಲ)

ಶ್ರೀ ಎಸ್. ಆರ್. ಪಾಟೀಲ್:- ನಾವು ಪ್ರತಿ ಪಕ್ಷದಿಂದ constructive criticism ಮಾಡುತ್ತಿದ್ದೇವೆ. It is not a destructive criticism.

ವೈಸ್ ಚೇರ್ಮನ್:- ತಾವು ಮುಕ್ತಾಯ ಮಾಡಿ.

ಶ್ರೀ ಪ್ರಕಾಶ್ ಕೆ. ರಾಥೋಡ್:- ಬೇರೆ ದೇಶಗಳಿಗೆ 180 ಮಿಲಿಯನ್ ಡಾಲರ್ಸ್ ಕೊಡುತ್ತಾರೆ. ಆದರೆ ನಮ್ಮ ದೇಶದಲ್ಲಿ ಕೊಡುತ್ತಿಲ್ಲ ಎಂದರೆ ಹೇಗೆ?

ವೈಸ್ ಚೇರ್ಮನ್:- ತಾವು ಮುಕ್ತಾಯ ಮಾಡಿ. ಪುನ: ಪುನ: ಚರ್ಚೆಯಾಗುವುದು ಬೇಡ. ನಾಳೆ ಉತ್ತರ ಕೊಡುವಾಗ ಹೇಳಲಿ.

ಶ್ರೀ ಸಿ.ಟಿ. ರವಿ:- ಮಾನ್ಯ ಸಭಾಪತಿಯವರೇ, 10 ವರ್ಷ ಯು.ಪಿ.ಎ ಸರ್ಕಾರ ಆಳ್ವಿಕೆಯಲ್ಲಿದ್ದು, ಮಾನ್ಯ ಮನಮೋಹನ್ ಸಿಂಗ್‌ರವರು ಪ್ರಧಾನ ಮಂತ್ರಿಯಾಗಿದ್ದರು. ಹಲವಾರು ಸಾರಿ ಕರ್ನಾಟಕ ರಾಜ್ಯವು ಬರ ಮತ್ತು ಅತಿವೃಷ್ಟಿಯನ್ನು ಎದುರಿಸಿದೆ. 10 ವರ್ಷಗಳಲ್ಲಿ ರೂ.4,138 ಕೋಟಿಗಳನ್ನು ಕರ್ನಾಟಕ ರಾಜ್ಯಕ್ಕೆ ಎನ್.ಡಿ.ಆರ್.ಎಫ್., ಮತ್ತು ಎಸ್.ಟಿ.ಆರ್.ಎಫ್., ಮೂಲಕ ಕೊಡಲಾಗಿದೆ. 2014 ರಿಂದ 2019 ರ ಅವಧಿಯಲ್ಲಿ ರೂ.7,300 ಕೋಟಿಗಳನ್ನು ......

(ಗೊಂದಲ)

ವೈಸ್ ಚೇರ್ಮನ್:- ದಯವಿಟ್ಟು ಹಿರಿಯ ಸದಸ್ಯರು ಕುಳಿತುಕೊಳ್ಳಬೇಕು. ಮಾನ್ಯ ಸದಸ್ಯರು ಮುಕ್ತಾಯ ಮಾಡಬೇಕು. ಯಾವ್ಯಾವ ವರ್ಷ ಎಷ್ಟು ಕೊಟ್ಟಿದ್ದಾರೆ ಎಂಬುದೆಲ್ಲವೂ ಇರಬೇಕು. ಸುಮ್ಮನೆ ವೇಗ್ ಆಗಿ ಹೇಳುವುದು ಬೇಡ.

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಶ್ರೀ ಎಚ್.ಎಂ. ರೇವಣ್ಣ:– ಮಾನ್ಯ ಸಭಾಪತಿಯವರೇ, calamity ಯಾವಾಗ ಆಗಿದೆ?

ಶ್ರೀ ಎಸ್.ಆರ್. ಪಾಟೀಲ್:– ಮಾನ್ಯ ಸಭಾಪತಿಯವರೇ, ಈ ರೀತಿ ಮಾತನಾಡುವಾಗ ಮಧ್ಯ ಪ್ರವೇಶ ಮಾಡಿದರೆ ಹೇಗೆ? ನಾವೇನೂ ಮಾತನಾಡಬಾರದೇ? ಸೌಜನ್ಯತೆ ಬೇಡವೇ?

(ಗೊಂದಲ)

ಶ್ರೀ ಕೋಟ ಶ್ರೀನಿವಾಸ ಪೂಜಾರಿ:– ಸರ್ಕಾರ ಹೇಳುವುದನ್ನು ಕೇಳುವ ಸೌಜನ್ಯ ಇಲ್ಲವೇ?

ವೈಸ್ ಚೇರ್ಮನ್:– ಮಾನ್ಯ ಸದಸ್ಯರು ಪ್ರಸ್ತಾಪಿಸಿದ ವಿಚಾರಗಳಿಗೆ ಸರ್ಕಾರವು ಕೂಲಂಕಶವಾಗಿ ಉತ್ತರ ಕೊಡುತ್ತದೆ.

ಶ್ರೀ ಎನ್.ಎಸ್. ಬೋಸರಾಜು:– ಮಾನ್ಯ ಸಭಾಪತಿಯವರೇ, ಒಟ್ಟಾರೆ ರೂ.38,000/– ಕೋಟಿಗಳನ್ನು ಘೋಷಣೆ ಮಾಡಿ ನಂತರ ರೂ.35,000/– ಕೋಟಿಗಳೆಂದು ಆಯಿತು. ಮಾನ್ಯ ಮುಖ್ಯಮಂತ್ರಿಗಳು ಮಾಧ್ಯಮಗಳಿಗೆ ನೀಡಿರುವ ಹೇಳಿಕೆಯ ದಾಖಲೆ ನನ್ನ ಬಳಿ ಇದೆ. ರೂ.5,000/– ಕೋಟಿಯಿಂದ ರೂ.35,000/– ಕೋಟಿ, ರೂ.40,000/– ಕೋಟಿ ಎಂದುಕೊಂಡು ಕೊನೆಗೆ ಐವತ್ತರಿಂದ ಅರವತ್ತು ಸಾವಿರ ಕೋಟಿ ರೂಪಾಯಿಗಳೆಂದು ಅನೇಕ ಬಾರಿ ಹೇಳಿದರು. ನಾವು ಒಂದು ಲಕ್ಷ ಕೋಟಿ ರೂಪಾಯಿಗಳೆಂದು ನಮ್ಮ ಪಕ್ಷದ ವರದಿ ಇದೆ. ಸುಮಾರು ರೂ.60,000/– ಕೋಟಿ ಲಾಸ್ ಆಗಿದೆ ಎಂದು ಈ ರಾಜ್ಯದ ಮುಖ್ಯ ಮಂತ್ರಿಗಳು ಹೇಳಿದ್ದಾರೆ. ಈ ಮಾತನ್ನು ಮಾನ್ಯ ಮುಖ್ಯಮಂತ್ರಿಗಳು ಹೇಳಿರುವ ಬಗ್ಗೆ ದಾಖಲೆಗಳನ್ನು ತೋರಿಸುತ್ತೇನೆ. ಅನೇಕ ಪ್ರೆಸ್ ಹೇಳಿಕೆಗಳನ್ನು ಕೊಟ್ಟಿದ್ದಾರೆ. ನಾವು ವಿರೋಧ ಪಕ್ಷದಲ್ಲಿದ್ದುಕೊಂಡು ಎಲ್ಲವನ್ನು ನೋಡಿ, ಗ್ರಾಮ–ಗ್ರಾಮಗಳಿಗೂ ಭೇಟಿ ನೀಡಿ ಒಂದು ಲಕ್ಷ ಕೋಟಿ ರೂಪಾಯಿಗಳೆಂದು ಹೇಳಿದ್ದೇವೆ. ರೂ.40,000/– ಕೋಟಿ ಮತ್ತು ರೂ.60,000/– ಕೋಟಿಗಳ ವ್ಯತ್ಯಾಸದ ಬಗ್ಗೆ ವೆರಿಫೈ ಮಾಡಲಿ. ಇವತ್ತು ರೂ.35,000/– ಕೋಟಿಗಳೆಂದು ಸಮರ್ಥನೆ ಮಾಡಿಕೊಂಡರೆ ರೈತರಿಗೆ, ಬಡವನಿಗೆ ಮತ್ತು ರಾಜ್ಯದ ಜನರಿಗೆ ತೊಂದರೆಯಾಗುತ್ತದೆ. ಹಣವನ್ನು ಕಡಿಮೆ ಮಾಡುವ ಪ್ರಯತ್ನಕ್ಕೆ ಹೋಗಬಾರದು. ಕಡಿಮೆ ಮಾಡುವ ಪ್ರಶ್ನೆಗೆ ಹೋಗಬಾರದು.

**(ಈ ಹಂತದಲ್ಲಿ ಮಾನ್ಯ ಸಭಾಪತಿಯವರು ಪೀಠವನ್ನು ಅಲಂಕರಿಸಿದರು)**

ಮಾನ್ಯ ಮುಖ್ಯಮಂತ್ರಿಗಳು ಕ್ಯಾಬಿನೆಟ್ ಸಚಿವರನ್ನು ಕಳುಹಿಸಲಿ, ಇಲ್ಲದಿದ್ದರೆ ವಿರೋಧ ಪಕ್ಷದವರನ್ನು ಕರೆದುಕೊಂಡು ಹೋಗಲಿ. ನಾವು ಮಾನ್ಯ ಮುಖ್ಯಮಂತ್ರಿಗಳ ಬಳಿ ಮಾತನಾಡುತ್ತೇವೆ. ಮಾನ್ಯ ಧರ್ಮಸಿಂಗ್ ರವರು ಮತ್ತು ಮಾನ್ಯ ಎಸ್.ಎಂ. ಕೃಷ್ಣರವರು ಮುಖ್ಯಮಂತ್ರಿಗಳಾಗಿದ್ದಾಗ ಮೂರು ಬಾರಿ ನಿಯೋಗವನ್ನು ಕರೆದುಕೊಂಡು ಹೋಗಿದ್ದೆವು. ಮಾನ್ಯ ಯಡಿಯೂರಪ್ಪನವರು ಹಾಗೂ ಮಾನ್ಯ ಅನಂತಕುಮಾರ್ ರವರುಗಳನ್ನು ಕರೆದುಕೊಂಡು ನೇರವಾಗಿ ಪ್ರಧಾನ ಮಂತ್ರಿಯವರ ಬಳಿ ಮಾತನಾಡಿದೆವು. ಹೈದರಬಾದ್–ಕರ್ನಾಟಕದ ವಿಚಾರಕ್ಕೂ ಕರೆದುಕೊಂಡು ಹೋಗಿ ಮಾತನಾಡಿದ್ದೇವೆ. ಮೂರು ಬಾರಿ ನಿಯೋಗ ಹೋಗಿದ್ದೇವೆ. ಇವತ್ತು

“ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

ಇಂತಹ ವಿಪತ್ತು ಬಂದು, ಇನ್ನೂ ಅನೇಕ ವರ್ಷ ಕಳೆದರೂ ಸರಿಪಡಿಸಲಾಗದ ಹಾನಿ ಕರ್ನಾಟಕಕ್ಕೆ ಆಗಿದೆ. ಇದರ ಬಗ್ಗೆ ನಿಯೋಗದ ಮುಖಾಂತರ ಪ್ರಧಾನ ಮಂತ್ರಿಯವರ ಬಳಿ ಮಾತನಾಡಲು ಇರುವ ತೊಂದರೆ ಏನು? ಇದಕ್ಕೆ ಒತ್ತಾಯ ಮಾಡಬೇಕು. ಇಲ್ಲವಾದರೆ ಅವರೇ ಮಾತನಾಡಿ ಎಷ್ಟು ತರಬೇಕೋ ಆ ಪ್ರಯತ್ನವನ್ನು ಮಾಡಬೇಕು. ಇವೆರಡೂ ಆಗುತ್ತಿಲ್ಲ. ಇದರಿಂದ ಕರ್ನಾಟಕದ ಜನತೆಗೆ ತೊಂದರೆಯಾಗುತ್ತಿದೆ. ಮಾನ್ಯ ಮುಖ್ಯಮಂತ್ರಿಗಳು ರೂ.5 ಲಕ್ಷ ಕೊಡುವ ಬಗ್ಗೆ ಘೋಷಣೆ ಮಾಡಿದ್ದು, ಈಗಿನ ದರದ ಪ್ರಕಾರ ಯಾವುದೇ ಮನೆ ಕಟ್ಟಲು ಆಗುವುದಿಲ್ಲ. ಕನಿಷ್ಟ ರೂ.10 ಲಕ್ಷಗಳು ಬೇಕು. ಬೆಳೆ ನಾಶಕ್ಕೆ ಕನಿಷ್ಟ ರೂ.1 ಲಕ್ಷ ಕೊಡಬೇಕು. ಮಾನ್ಯ ಸಿದ್ದರಾಮಯ್ಯನವರು ಇದ್ದ ಸಂದರ್ಭದಲ್ಲಿ ತುಂಗಭದ್ರಾ ಭಾಗದಲ್ಲಿ ಮಳೆಯಾಗಿ ಬೆಳೆಗೆ ನಷ್ಟವಾದ ಸಮಯದಲ್ಲಿ ಜಿಲ್ಲಾ ಉಸ್ತುವಾರಿ ಸಚಿವರೊಡನೆ ಪರಿಹಾರ ಕೇಳಿದೆವು. ಆಗ ನಮ್ಮೊಡನೆ ಹೆಲಿಕಾಪ್ಟರ್‌ನಲ್ಲಿ ಏರಿಯಾ ಸರ್ವೇ ಮಾಡಿದ ನಂತರ ರೂ.35 ರಿಂದ 40 ಸಾವಿರ ಕೊಡಬೇಕೆಂದು ಕೇಳಿದೆವು. ಆಗ ಆಲಿಕಲ್ಲು ಮಳೆಯೂ ಆಗಿದ್ದು, ಹೆಚ್ಚಿನ ರೀತಿ ಅಂದರೆ ರೂ.25,000/– ಗಳನ್ನು ಕೊಟ್ಟಿದ್ದಾರೆ. ಈ ಉದಾಹರಣೆಗಳು ನಮ್ಮ ಮುಂದೆ ಇದೆ. ಆದ್ದರಿಂದ ಇವತ್ತಿನ ಪರಿಸ್ಥಿತಿಯಲ್ಲಿ ಹೆಚ್ಚಿನ ರೀತಿಯಲ್ಲಿ ಜನರಿಗೆ ಸಹಾಯ ಮಾಡಬೇಕೆಂದು ಮಾನ್ಯ ಸಭಾಪತಿಯವರ ಮೂಲಕ ಒತ್ತಾಯಿಸುತ್ತಾ, ನನಗೆ ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ಧನ್ಯವಾದಗಳನ್ನು ಅರ್ಪಿಸುತ್ತೇನೆ.

(ಮುಂದು)

(146) 11.10.2019 12.40 ಪಿಕೆ:ಎಂಡಿ

(ಸಭಾಪತಿಗಳ ಉಪಸ್ಥಿತಿ)

**ಶ್ರೀ ಕೆ.ಟಿ.ಶ್ರೀಕಂಠೇಗೌಡ (ಪದವೀಧರರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಭಾರತದ ಇತಿಹಾಸದಲ್ಲಿ, ಕರ್ನಾಟಕದ ಇತಿಹಾಸದಲ್ಲಿ ನಡೆದಂತಹ ಹೃದಯವಿದ್ರಾವಕ ಘಟನೆಗಳ ಬಗ್ಗೆ ಮಾತನಾಡುವುದಕ್ಕೆ ನಿಂತಿರುವುದೇ ನನಗೆ ಅತ್ಯಂತ ಬೇಸರದ, ಕರುಳು ಕಿತ್ತು ಬರುವ ಘಟನೆಯಾಗಿದೆ ಎಂದು ಹೇಳಲೇಬೇಕಾಗಿದೆ. ಇಂತಹ ಸಂದರ್ಭ ನಿರ್ಮಾಣವಾಯಿತಲ್ಲ, ಇಂತಹ ಪರಿಸ್ಥಿತಿಗೆ ನಾವು ಮುಂದಾದೆವಲ್ಲ, ಇಂತಹ ಸನ್ನಿವೇಶವನ್ನು ಎದುರಿಸಬೇಕಾಗಿ ಬಂತಲ್ಲ, ಅದಕ್ಕಾಗಿ ನಾನು ತೀವ್ರವಾದ ವಿಷಾದವನ್ನು ವ್ಯಕ್ತಮಾಡುತ್ತೇನೆ. ಮಾನ್ಯ ಸಭಾಪತಿಯವರೇ, ಆಳುವ ಸರ್ಕಾರಗಳನ್ನೂ ಮೀರಿ, ನಾಡಿನ ಜನ, ಸಂಘ–ಸಂಸ್ಥೆಗಳು ಸಂಕಷ್ಟಕ್ಕೀಡಾದ ನೆರೆ ಸಂತ್ರಸ್ತರ ನೆರವಿಗೆ ಧಾವಿಸಿದ್ದಕ್ಕೆ ನಾನು ನಿಮ್ಮೆಲ್ಲರ ಪರವಾಗಿ ದೊಡ್ಡ ನಮಸ್ಕಾರ ಹಾಕುತ್ತೇನೆ. 10 ದಿನಗಳ ಕಾಲ ಸತತವಾಗಿ ಬಿದ್ದ ಮಳೆ, ಮಹಾರಾಷ್ಟ್ರ ಮತ್ತು ಕೇರಳದಿಂದ ಬಂದಂಥ ದೊಡ್ಡ ಪ್ರವಾಹದ ಕಾರಣದಿಂದ ಇಂತಹ ಪರಿಸ್ಥಿತಿ ನಿರ್ಮಾಣವಾಗಿ, ಈ ರಾಜ್ಯದ 22 ಜಿಲ್ಲೆಗಳು, 132 ತಾಲ್ಲೂಕುಗಳು ಮತ್ತು ಸುಮಾರು 2500 ಹಳ್ಳಿಗಳು ನೆರೆ ಹಾವಳಿಗೆ, ಪ್ರವಾಹದ ಹಾವಳಿಗೆ ತುತ್ತಾಗಿವೆ. ಬಹುಶಃ ಇದು ಈ ರಾಜ್ಯದಲ್ಲಿ ಕಂಡರಿಯದ, ಕೇಳರಿಯದ ಹೃದಯ ವಿದ್ರಾವಕವಾದ ಘಟನೆಯಾಗಿದೆ. ಹಾಗಾಗಿ ನಾವೆಲ್ಲಾ ಈ ಪರಿಸ್ಥಿತಿಯನ್ನು ಸವಾಲಾಗಿ ಸ್ವೀಕಾರ ಮಾಡಬೇಕಿದೆ. ಸಂಕಷ್ಟಕ್ಕೀಡಾದ ಜನರ ಬದುಕನ್ನು ಮರು ಕಟ್ಟಿಕೊಡುವ ಸಂದರ್ಭಕ್ಕೆ ಸಾಕ್ಷಿ ಆಗಬೇಕಾದಂತಹ

“ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

ಕೆಲಸಕ್ಕೆ ನಾವು ಮುಂದಾಗಬೇಕಾಗಿದೆ. ಈ ಘಟನೆಯಲ್ಲಿ 90 ಜನರು ಅಸುನೀಗಿದ್ದಾರೆ ಎಂಬ ಲೆಕ್ಕ ಸಿಕ್ಕಿದೆ. ಇನ್ನೂ 8 ರಿಂದ 10 ಜನ ಕಾಣೆಯಾಗಿದ್ದಾರೆ. ಇಬ್ಬರು ವ್ಯಕ್ತಿಗಳು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಸಾವಿರಾರು ಜನ ಬದುಕಿದ್ದು ಸತ್ತಂತೆ ಇದ್ದಾರೆ. ಪಶು–ಪ್ರಾಣಿಗಳ ಸಂಖ್ಯೆ ಲೆಕ್ಕಕ್ಕೆ ಸಿಕ್ಕಿಲ್ಲ. ರೈತರ ಎಲ್ಲಾ ಮನೆಗಳಲ್ಲಿ ಅವರಷ್ಟೇ ಸಂಖ್ಯೆಯಲ್ಲಿ ಪಶು–ಪ್ರಾಣಿಗಳಿರುತ್ತವೆ. ದನ–ಕರು, ಕುರಿ–ಮೇಕೆ ಇತ್ಯಾದಿಗಳ ಲೆಕ್ಕ ಸಿಕ್ಕಿಲ್ಲ. ಒಟ್ಟಾರೆ, ಮನೆ ಕಳೆದುಕೊಂಡವರು, ಬೆಳೆ ಕಳೆದುಕೊಂಡವರು, ಪ್ರಾಣಿಗಳನ್ನು ಕಳೆದುಕೊಂಡವರ ಸ್ಥಿತಿ ಚಿಂತಾಜನಕವಾಗಿದೆ. ರಸ್ತೆಗಳು ಹಾಳಾಗಿವೆ, ಸೇತುವೆಗಳು ಹಾಳಾಗಿವೆ, ವಿದ್ಯುತ್ ಸಂಪರ್ಕ ಹೋಗಿದೆ, ಟೆಲಿಫೋನ್ ಸಂಪರ್ಕ ಹೋಗಿದೆ. ಇಡೀ ವ್ಯವಸ್ಥೆ ಹಾಳಾಗಿ ಹೋಗಿದೆ. ಈ ಹಿನ್ನೆಲೆಯಲ್ಲಿ ನಾವು ಎಲ್ಲವನ್ನೂ ಮರೆತು, ನೊಂದ ಜನರ ಬಗೆಗೆ ವಾಸ್ತವ ನೆಲೆಗಟ್ಟಿನಲ್ಲಿ ಚರ್ಚೆ ಮಾಡಲೇಬೇಕಾದಂತಹ ಸವಾಲು ನಮ್ಮೆದುರಿಗೆ ಇದೆ. ರಾಜಕಾರಣವನ್ನು ಮರೆತು, ಈ ಒಕ್ಕೂಟ ವ್ಯವಸ್ಥೆಯಲ್ಲಿ ರಾಜ್ಯ ಮತ್ತು ಕೇಂದ್ರ ಸರ್ಕಾರಗಳು ಇಂತಹ ಸವಾಲನ್ನು ಸ್ವೀಕಾರ ಮಾಡಬೇಕಾಗಿದೆ. ಆ ಜನರಿಗೆ ಮತ್ತೆ ಬದುಕನ್ನು ಕಟ್ಟಿಕೊಡಬೇಕಾದ ಸಂದರ್ಭ ಈಗ ಒದಗಿ ಬಂದಿದೆ. ಇಲ್ಲಿ ಯಾವುದರ ಬಗ್ಗೆ ಮಾತನಾಡಬೇಕು ಗೊತ್ತಾಗುತ್ತಿಲ್ಲ. ಒಂದು ಮಗು ಪುಸ್ತಕ ಇಟ್ಟುಕೊಂಡು ಕುಳಿತು ಕಣ್ಣೀರು ಹಾಕುವುದರ ಬಗ್ಗೆ ಮಾತನಾಡೋಣವೇ? ಮನೆ ಮಗ ತಾನು ಸಂಪಾದನೆ ಮಾಡಿ ಇಟ್ಟಿದ್ದ ಒಂದಿಷ್ಟು ಚಿನ್ನ, ಒಂದಿಷ್ಟು ಬೆಳ್ಳಿ, ಒಂದಿಷ್ಟು ತಾಮ್ರ, ಹಣ ಎಲ್ಲವನ್ನು ಬಿಟ್ಟು ಓಡಿ ಬಂದಿರುವುದರ ಬಗ್ಗೆ ಮಾತನಾಡಬೇಕೇ? ಪಾತ್ರೆ ಮತ್ತು ಇತರ ಸಾಮಾನುಗಳನ್ನು ಕಳೆದುಕೊಂಡು ಓಡಿ ಬಂದವರ ಬಗ್ಗೆ ಮಾತನಾಡಬೇಕೇ? ಯಾವುದರ ಬಗ್ಗೆ ಮಾತನಾಡಬೇಕು? ಅವರ ಇಡೀ ಬದುಕು ಹಾಳಾಗಿದೆ. ಮಾನ್ಯ ಸಿ.ಟಿ.ರವಿಯವರು ಇಲ್ಲಿಯ ತನಕ ಸದನದಲ್ಲಿ ಇದ್ದರು, ಬಹುಶಃ ಈಗ ಆಚೆ ಹೋಗಿದ್ದಾರೆ. ಮಾನ್ಯ ಸಭಾಪತಿಯವರೇ, ಲಕ್ಷಗಟ್ಟಲೆ ಅಲ್ಲ, ಲೆಕ್ಕಕ್ಕೆ ಸಿಗದಷ್ಟು, ಕೋಟಿಗಟ್ಟಲೆ ನಷ್ಟವಾಗಿದೆ ಎನ್ನುವುದನ್ನು ಮಾನ್ಯ ಸಿ.ಟಿ.ರವಿಯವರಿಗೆ ಮನದಟ್ಟು ಮಾಡಿಕೊಡುತಿದ್ದೆ. ಅವರು ಸದನಕ್ಕೆ ಬರಬೇಕು. ಈಗ ಈ ಸದನದಲ್ಲಿ ಎಷ್ಟು ಜನ ಸಚಿವರು ಇದ್ದಾರೆ? ಮಾನ್ಯ ಸಭಾನಾಯಕರು ನಾವು ಹೇಳುತ್ತಿರುವುದನ್ನು ಬರೆದುಕೊಳ್ಳುತ್ತಿದ್ದಾರೆ ಎಂದೆನಿಸುತ್ತಿಲ್ಲ.

**ಶ್ರೀ ಹೆಚ್.ಎಂ.ರೇವಣ್ಣ:–** ಸದನ ನಡೆಯುತ್ತಿದೆ. ಇಲ್ಲಿ ಎಷ್ಟು ಸಂಖ್ಯೆಯಲ್ಲಿ ಮಂತ್ರಿಗಳು ಇರಬೇಕೋ ಅಷ್ಟು ಜನ ಮಂತ್ರಿಗಳು ಇಲ್ಲ.

(ಗೊಂದಲ)

**ಶ್ರೀ ಐವನ್ ಡಿ'ಸೋಜಾ:–** ಕನಿಷ್ಠ 3 ಜನ ಮಂತ್ರಿಗಳು ಇರಬೇಕು.

(ಗೊಂದಲ)

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು):–** ಮಾನ್ಯ ಸಭಾಪತಿಯವರೇ, ಮಾನ್ಯ ಸಿ.ಟಿ.ರವಿಯವರು ಅನುಮತಿ ತೆಗೆದುಕೊಂಡು ಹೋಗಿದ್ದಾರೆ. ಬರುತ್ತಾರೆ.

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

(ಗೊಂದಲ)

**ಶ್ರೀ ಹೆಚ್.ಎಂ.ರೇವಣ್ಣ:–** ಸದನ 3 ದಿವಸಗಳ ಕಾಲ ಮಾತ್ರ ಇದೆ. ಈ ಅವಧಿಯಲ್ಲೂ ಮಂತ್ರಿಗಳು ಇಲ್ಲದೇ ಹೋದರೆ ಹೇಗೆ? (ಗೊಂದಲ)

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಸದನದಲ್ಲಿ 3 ಜನ ಮಂತ್ರಿಗಳಿರಬೇಕು. 5 ನಿಮಿಷ ಹೊರಗೆ ಹೋಗಿ ಮಾತನಾಡಿ ಬರುತ್ತೇನೆ ಎಂದು ಮಾನ್ಯ ಸಚಿವರು ಹೇಳಿ ಹೋಗಿದ್ದಾರೆ.

**ಶ್ರೀ ಎಸ್.ಆರ್.ಪಾಟೀಲ್(ವಿರೋಧ ಪಕ್ಷದ ನಾಯಕರು):–** ಸದನದಲ್ಲಿ ಇರಬೇಕಾದ ಅಧಿಕಾರಿಗಳ ಹೆಸರನ್ನು ಹೇಳುತ್ತೇನೆ. ಶ್ರೀ ಯು.ಬಿ.ಇಬ್ರಾಹಿಂ, ಸರ್ಕಾರದ ಕಾರ್ಯದರ್ಶಿ, ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ ಇದ್ದಾರೆಯೇ? (ಈ ಹಂತದಲ್ಲಿ ಸಂಬಂಧಪಟ್ಟಂತಹ ಅಧಿಕಾರಿಯು ಅಧಿಕಾರಿಗಳ ಗ್ಯಾಲರಿಯಲ್ಲಿ ಎದ್ದು ಕುಳಿತುಕೊಂಡರು) ಶ್ರೀ ಮನೋಜ್‌ಕುಮಾರ್ ಮೀನಾ, ವಸತಿ ಇಲಾಖೆ, ಇವರು ಇದ್ದಾರೆಯೇ? (ಈ ಹಂತದಲ್ಲಿ ಸದರಿ ಇಲಾಖೆಯಿಂದ ಬಂದಿದ್ದ ಒಬ್ಬ ಮಹಿಳಾ ಅಧಿಕಾರಿ ಎದ್ದು ಕುಳಿತುಕೊಂಡರು) ಮಾನ್ಯ ಸಭಾಪತಿಯವರೇ, ಇರಬೇಕಾದ ಅಧಿಕಾರಿ ಇಲ್ಲದೇ ಅವರ ಪರವಾಗಿ ಬೇರೆ ಅಧಿಕಾರಿಯವರು ಎದ್ದು ನಿಂತುಕೊಳ್ಳುವುದು, ಯಾವುದೋ ಹೆಸರಿಗೆ ಯಾರೋ ಎದ್ದು ನಿಂತುಕೊಂಡರೆ Indian Penal Code ಪ್ರಕಾರ ಅದು cheating by personation ಆಗುತ್ತದೆ. ಶ್ರೀ ನಾಗಭೂಷಣ್, ಜಂಟಿ ಕಾರ್ಯದರ್ಶಿ, ಶ್ರೀಮತಿ ಕಲ್ಪನಾ, ಸರ್ಕಾರದ ಉಪಕಾರ್ಯದರ್ಶಿ, ಶ್ರೀ ಎನ್.ವೈ.ಸಾಗರ್, ಸರ್ಕಾರದ ಅಪರ ಕಾರ್ಯದರ್ಶಿ, ಇವರೆಲ್ಲರೂ ಇರಬೇಕು. (ಈ ಮೇಲಿನ ಎಲ್ಲಾ ಅಧಿಕಾರಿಗಳು ಅಧಿಕಾರಿಗಳ ಗ್ಯಾಲರಿಯಲ್ಲಿ ಉಪಸ್ಥಿತರಿದ್ದರು) ಮಾನ್ಯ ಸಭಾಪತಿಯವರೇ, ಈಗ ಒಬ್ಬ ಮಂತ್ರಿಗಳು ಸದನಕ್ಕೆ ಬಂದರು. ಇವರು ಮೂರನೆಯವರು . . . (ಗೊಂದಲ)

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಕನಿಷ್ಠ ಮೂರು ಜನ ಮಂತ್ರಿಗಳಿರಬೇಕು. ಮಾನ್ಯ ವಿರೋಧ ಪಕ್ಷದ ನಾಯಕರಿಗೆ ತಾಳ್ಮೆ ಇರಬೇಕಾಗುತ್ತದೆ . . . .

(ಗೊಂದಲ)

**ಶ್ರೀ ಎಸ್.ಆರ್.ಪಾಟೀಲ್:–** ಮಾನ್ಯ ಸಭಾಪತಿಯವರೇ, ಶತಮಾನಗಳ ಇತಿಹಾಸ ಇರುವಂತಹ, ಚಿಂತಕರ ಛಾವಡಿ ಎಂದೆನಿಸಿಕೊಳ್ಳುವಂತಹ ಈ ಸದನದಲ್ಲಿ ಕನಿಷ್ಠ 3 ಮಂತ್ರಿಗಳು ಇಲ್ಲದಿದ್ದರೆ ಹೇಗೆ?

(ಗೊಂದಲ)

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ಅಧಿಕಾರಿಗಳ ಉಪಸ್ಥಿತಿ ಅಥವಾ ಮಂತ್ರಿಗಳ ಉಪಸ್ಥಿತಿ ಇಲ್ಲದೇ ಇದ್ದರೆ ಅದರ ಬಗ್ಗೆ ಸಭಾಪತಿಯವರಿಗೆ ದೂರು ಕೊಡಬಹುದು, ಅಹವಾಲು

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಸಲ್ಲಿಸಬಹುದು. ಅದುಬಿಟ್ಟು, ಮಾನ್ಯ ವಿರೋಧ ಪಕ್ಷದ ನಾಯಕರು ಒಂದು ಪಟ್ಟಿಯನ್ನು ಇಟ್ಟುಕೊಂಡು, ಯಾರ್‍ಯಾರು ಇದ್ದಾರೆ ಎದ್ದು ನಿಲ್ಲಿ ಎಂದು ಹೇಳುವಂಥದ್ದು ಸರಿಯಲ್ಲ.

(ಗೊಂದಲ)

**ಶ್ರೀ ಎಸ್.ಆರ್.ಪಾಟೀಲ್:–** ಮಾನ್ಯ ಸಭಾಪತಿಯವರೇ, ಎದ್ದು ನಿಂತುಕೊಳ್ಳಬೇಕೆಂದು ನಾನು ಹೇಳಲಿಲ್ಲ. It should not go on record. ಎಷ್ಟು ಜನ ಅಧಿಕಾರಿಗಳು ಇರಬೇಕು ಎಂಬುದನ್ನು ಹೇಳುತ್ತಿದ್ದೇನೆ ಅಷ್ಟೆ. ಅವರು ಎದ್ದು ನಿಂತುಕೊಳ್ಳಬೇಕೆಂದು ನಾನು ಹೇಳಲಿಲ್ಲ. ಮಾನ್ಯ ಸಭಾನಾಯಕರು ತಪ್ಪು ಮಾಹಿತಿ ಕೊಡಬಾರದು.

(ಗೊಂದಲ)

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ವಿರೋಧ ಪಕ್ಷದ ನಾಯಕರ ಏನೇ ಅಹವಾಲುಗಳು ಇದ್ದರೆ ಅದನ್ನು ಸಭಾಪತಿಯವರಿಗೆ ತಿಳಿಸಬೇಕು ಎಂದು ಹೇಳುತ್ತಿದ್ದೇನೆ.

(ಗೊಂದಲ)

**ಶ್ರೀ ಎಸ್.ಆರ್.ಪಾಟೀಲ್:–** ನಾನು ಸಭಾಪತಿಯವರನ್ನು ಉದ್ದೇಶಿಸಿಯೇ ಹೇಳುತ್ತಿದ್ದೆ. I have not told, and I have not pointed over the officer. ಯಾವ ಅಧಿಕಾರಿಗಳು ಸದನದಲ್ಲಿ ಇರಬೇಕೋ ಆ ಕುರಿತು ಕೇಳಲೇಬೇಕಾಗುತ್ತದೆ. I have not pointed out any officer. ಮಾನ್ಯ ಸಭಾನಾಯಕರು ತಪ್ಪು ಮಾಹಿತಿ ಕೊಡುತ್ತಿದ್ದಾರೆ, have your limitation.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಎಷ್ಟು ಜನ ಅಧಿಕಾರಿಗಳು ಉಪಸ್ಥಿತರಿರಬೇಕು ಎನ್ನುವುದು ನಮಗೂ ಗೊತ್ತಿದೆ. ಸರ್ಕಾರ ನಡೆಸುವುದು ನಮ್ಮ ಜವಾಬ್ದಾರಿಯಾಗಿದೆ.

(ಗೊಂದಲ)

**ಶ್ರೀ ಎಸ್.ಆರ್.ಪಾಟೀಲ್:–** ನಮಗೂ ಜವಾಬ್ದಾರಿ ಇರುತ್ತದೆ.

(ಗೊಂದಲ)

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ಮಾನ್ಯ ಎಸ್.ಆರ್.ಪಾಟೀಲ್‌ರವರಿಗೆ ನಾವು ಪೂರ್ಣ ಗೌರವ ಕೊಡುತ್ತೇವೆ.

**ಶ್ರೀ ಎಸ್.ಆರ್.ಪಾಟೀಲ್:–** ನಾನೂ ಕೂಡ ಯಾವಾಗಲೂ ಗೌರವದಿಂದಲೇ ಮಾತನಾಡುತ್ತೇನೆ. ನನ್ನ ಜೀವನದಲ್ಲಿ ಯಾವತ್ತೂ decency limit ದಾಟಿ ಹೋಗಿಲ್ಲ. (ಗೊಂದಲ)

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಶ್ರೀ ಐವನ್ ಡಿ'ಸೋಜಾ:–** ಮಾನ್ಯ ಸಭಾಪತಿಯವರೇ, ಮಾನ್ಯ ವಿರೋಧ ಪಕ್ಷದ ನಾಯಕರು ಹೇಳಿದ್ದರಲ್ಲಿ ತಪ್ಪೇನೂ ಇಲ್ಲ.

(ಗೊಂದಲ)

**ಶ್ರೀ ಬಸವರಾಜ ಹೊರಟ್ಟಿ:–** ಮಾನ್ಯ ಸಭಾಪತಿಯವರೇ, ಆಡಳಿತ ಪಕ್ಷದವರಿಗೆ ಮಂತ್ರಿಗಳ ಕೊರತೆ ಇದೆ. ಹಾಗಾಗಿ ದಯವಿಟ್ಟು ಚಿಜರಿಣಾಣ ಮಾಡಿಕೊಳ್ಳಿ. ಆ 17 ಜನ ಬಂದ ನಂತರ ತಕರಾರು ಮಾಡೋಣ. ಅಲ್ಲಿಯವರೆವಿಗೂ ತಾಳ್ಮೆಯಿಂದ ಸಹಕರಿಸಿ.

**ಶ್ರೀ ಸಿ.ಸಿ.ಪಾಟೀಲ್ (ಗಣಿ ಮತ್ತು ಭೂವಿಜ್ಞಾನ ಸಚಿವರು) :–** ಮಾನ್ಯ ವಿರೋಧ ಪಕ್ಷದ ನಾಯಕರ ಬಗ್ಗೆ ನಮಗೆ ಗೌರವ ಇದೆ. ಪಟ್ಟಿ ಇಟ್ಟುಕೊಂಡು ಹಾಜರಾತಿ ಕೇಳುವ ಅಧಿಕಾರ ಅವರಿಗೆ ಇದೆ, ಆದರೆ ಮಾನ್ಯ ಸಭಾಪತಿಯವರೇ ಅವರು ತಮ್ಮ ಮೂಲಕ ಆ ಕೆಲಸವನ್ನು ಮಾಡಬೇಕು.

**ಶ್ರೀ ಎಸ್.ಆರ್.ಪಾಟೀಲ್:–** ಮಾನ್ಯ ಸಭಾಪತಿಯವರೇ, I have enlightened the House. ನಾನು ಪ್ರತಿಪಕ್ಷದ ನಾಯಕನಾಗಿ, ಸದನದಲ್ಲಿ ಅಧಿಕಾರಿಗಳು ಎಷ್ಟು ಇದ್ದಾರೆ, ಮಂತ್ರಿಗಳು ಎಷ್ಟು ಜನ ಉಪಸ್ಥಿತರಿದ್ದಾರೆ ಎಂಬುದನ್ನು ಸದನದ ಅವಗಾಹನೆಗೆ ತಂದೆ. ಹಾಜರಾತಿ ತೆಗೆದುಕೊಳ್ಳುವ ಕೆಲಸ ನಾನು ಮಾಡುವುದಿಲ್ಲ. ಹಾಜರಿರಬೇಕಾದ ಇಂತಹ ಅಧಿಕಾರಿಗಳು ಸದನದಲ್ಲಿ ಇಲ್ಲದೇ ಇದ್ದಾಗ, ಮಂತ್ರಿಗಳು ಇಲ್ಲದೇ ಇದ್ದಾಗ ಮಾನ್ಯ ಸಭಾಪತಿಯವರು ಅದನ್ನು ಕೇಳುತ್ತಾರೆ. ಮಾನ್ಯ ಸಭಾಪತಿಯವರೇ, ಸರ್ಕಾರಿ ಮುಖ್ಯ ಸಚೇತಕರು ಸದನದಲ್ಲಿ ಇಲ್ಲ.

ಮಾನ್ಯ ಈಶ್ವರಪ್ಪನವರು ಪ್ರತಿಪಕ್ಷದ ನಾಯಕರಾಗಿದ್ದಾಗ ಯಾವ ಅಧಿಕಾರಿಗಳು ಮತ್ತು ಯಾವ ಮಂತ್ರಿಗಳು ಸದನದಲ್ಲಿ ಉಪಸ್ಥಿತರಿರಬೇಕೆಂದು ಪಟ್ಟಿ ಇಟ್ಟುಕೊಂಡು ಓದಿದ ಉದಾಹರಣೆಗಳಿವೆ.

(ಗೊಂದಲ)

(ಮುಂದು . . . .)

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

(147)11-10-2019 12.50 ಡಿಎಸ್–ಎಂಡಿ

**ಶ್ರೀ ಎಸ್.ಆರ್.ಪಾಟೀಲ್:–** ಮಾನ್ಯ ಸಭಾಪತಿಯವರೇ, ವಿರೋಧ ಪಕ್ಷದ ನಾಯಕನಾಗಿ ಮಂತ್ರಿಗಳು, ಅಧಿಕಾರಿಗಳು ಸದನಕ್ಕೆ ಹಾಜರಾಗಿದ್ದಾರೆಯೋ ಇಲ್ಲವೋ ಎಂಬುದನ್ನು ನಾನು ಕೇಳಬಾರದೇ? It is our duty ಮತ್ತು ಹಕ್ಕು. It is my inherent right, I will ask. I have got every right. You go through the rules.

(ಗೊಂದಲ)

**ಶ್ರೀ ಕೆ.ಟಿ.ಶ್ರೀಕಂಠೇಗೌಡ:–** ಮಾನ್ಯ ಸಭಾಪತಿಯವರೇ, ಈಗ ಮಾನ್ಯ ಸಿ.ಟಿ. ರವಿ ಯವರು ಬಂದರು, ನನಗೆ ಸಮಾಧಾನವಾಯಿತು. ನಾನು ಪ್ರಶ್ನೆಯನ್ನು ಕೇಳಿದ್ದೆ, ಅದಕ್ಕೆ ಸ್ಪಷ್ಟೀಕರಣ ಕೊಡುವುದಕ್ಕೆ ಮಾನ್ಯ ಸಚಿವರು ಇರಲಿಲ್ಲ.

ಮಾನ್ಯ ಸಭಾಪತಿಯವರೇ, ಇವತ್ತು 600 ಅಂಗನವಾಡಿ ಕಟ್ಟಡಗಳು ಕುಸಿದು ಬಿದ್ದಿವೆ. ಸಾವಿರಾರು ಶಾಲೆಗಳು ಕುಸಿದು ಬಿದ್ದಿವೆ. ಆಸ್ಪತ್ರೆಗಳ ಕಟ್ಟಡಗಳು ನಾಶವಾಗಿವೆ. ಖಾಸಗಿ ಜನರ ಆಸ್ತಿ ಲೆಕ್ಕ ಹಾಕುವುದಕ್ಕೆ ಬರುವುದಿಲ್ಲ. 700–800 ಲಕ್ಷ ಎಕರೆ ಭೂಕುಸಿತ, ಭೂಸವಕಳಿ ಉಂಟಾಗಿದೆ. ಒಟ್ಟು 25 ಲಕ್ಷ ಎಕರೆ ಬೆಳೆ ನಷ್ಟ ಬೇರೆ ಮತ್ತು ನೆರೆ ಹಾವಳಿಗೆ ತುತ್ತಾಗಿರುವುದು ಬೇರೆ. ಚಿಕ್ಕಮಗಳೂರು ಜಿಲ್ಲೆ ಮೂಡಿಗೆರೆಯಲ್ಲಿ ಆಗಿರುವಂತಹ ಅನಾಹುತ ಇದೆಯಲ್ಲಾ ಇದು ಮಡಿಕೇರಿಯಲ್ಲಿ ಆದ ಅನಾಹುತಗಿಂತಲೂ ಮೀರಿ ನಿಂತಿದೆ. 1500 ರಿಂದ 1600 ಎಕರೆ ಭೂಕುಸಿತಕ್ಕೆ, ಭೂಕೊರೆತಕ್ಕೆ ಉಂಟಾಗಿದೆ. ರೈತ ಶ್ರೀ ಚಂದ್ರಗೌಡ ಏಕೆ ಸತ್ತ, ಚನ್ನಪ್ಪಗೌಡ ಏಕೆ ಸತ್ತ, ಪರಿಸ್ಥಿತಿ ಏನಾಯಿತು? ಅದನ್ನು ಲೆಕ್ಕ ಹಾಕುವುದಕ್ಕೆ ಆಗುತ್ತದೆಯೇ? ರೈಲ್ವೆ ಹಳಿ damage ಆಗಿದೆ, ಅದು ಕೇಂದ್ರದ್ದು, ರಾಜ್ಯದಲ್ಲ. 35,000 ಕಿಲೋಮೀಟರ್ ರಸ್ತೆ ಸಂಪರ್ಕ ಕಳೆದುಕೊಂಡಿದೆ. 8828 ಸೇತುವೆಗಳು ಹಾಳಾಗಿವೆ. 57,000 electric poles ಹಾಳಾಗಿವೆ. ದೂರವಾಣಿ ಸಂಪರ್ಕ ಹಾಳಾಗಿದೆ. ಅಲ್ಲಿಗೆ ವಿದ್ಯುಚ್ಛಕ್ತಿ ಸಂಪರ್ಕ ಸಿಕ್ಕಿಲ್ಲ. ಲೆಕ್ಕ ಹಾಕದಿರುವಷ್ಟು ನಷ್ಟವಾಗಿದೆ. ಲಕ್ಷಾಂತರ ಮಕ್ಕಳು ಶಾಲೆಗೆ ಹೋಗುತ್ತಿದ್ದರು. ಶಾಲಾ ಕಟ್ಟಡಗಳು ಕುಸಿದು ಬಿದ್ದಿರುವುದರಿಂದ ಪುಸ್ತಕಗಳು, ಬ್ಯಾಗ್‌ಗಳು ನೀರಿನಲ್ಲಿ ಮುಳುಗಿ ಹೋದರಿಂದ ಮಕ್ಕಳು ಎಲ್ಲಿ ಹೋಗುತ್ತಾರೆ, ಹೇಗೆ ಓದುತ್ತಾರೆ, ಏನು ಓದುತ್ತಾರೆ? ಆ ಮಕ್ಕಳು, ಇಂಜಿನಿಯರ್, ಡಾಕ್ಟರ್ ಆಗುತ್ತಿದ್ದರು, ಆ ಮಕ್ಕಳು ಈ ದೇಶದ ಪ್ರಧಾನಿಯಾಗುತ್ತಿದ್ದರು. ಈಗ ಆ ಮಕ್ಕಳ ಬದುಕು ಹೇಗೆ ಕಟ್ಟಿಕೊಡುತ್ತಾರೆ? ಆ ಮಕ್ಕಳನ್ನು ಶಾಲೆಗೆ ಹೇಗೆ ಕಳುಹಿಸಿ ಕೊಡುತ್ತಾರೆ, ನಾನು ದೂರದರ್ಶನದಲ್ಲಿ ನೋಡುತ್ತಿದ್ದೇನೆ, ಆ ಮಕ್ಕಳು ನಮ್ಮ ಪುಸ್ತಕಗಳು ಹೋಯಿತು, ನಮ್ಮ ಬದುಕು ಹೋಯಿತು, ನಾನು ಹೇಗೆ ಓದಿಕೊಳ್ಳಲಿ ಎಂದು ಕಣ್ಣೀರು ಹಾಕುತ್ತಿದ್ದಾರೆ. ನಾನು ಇದರಲ್ಲಿ ಖಂಡಿತವಾಗಿಯೂ ರಾಜಕಾರಣ ಬೆರೆಸುತ್ತಿಲ್ಲ. ಆದರೆ, ವಾಸ್ತವಿಕ ನೆಲಕಟ್ಟಿನಲ್ಲಿ ಆಗಿರುವಂತಹ ಅನಾಹುತಗಳ ಬಗ್ಗೆ ನಾವು ಗಂಭೀರವಾಗಿ ಚರ್ಚೆ ಮಾಡೋಣ. ಮನೆಗಳು ನಷ್ಟ ಆಗಿವೆ. ಒಂದು ಮನೆಗೆ 5 ಲಕ್ಷ ಪರಿಹಾರ ಕೊಡುತ್ತೇವೆಂದು ಹೇಳುತ್ತಾರೆ, ಆದರೆ 15 ಲಕ್ಷ ರೂಪಾಯಿಗಳಿಂದ 50 ಲಕ್ಷ ರೂಪಾಯಿಗಳವರೆಗೆ ಖರ್ಚು ಮಾಡಿ ಮನೆ ಕಟ್ಟಿರುವವರು ಇಲ್ಲವೇ? ಈ ರೀತಿ ಏಕೆ ಲೆಕ್ಕ ಹಾಕುತ್ತಿದ್ದಾರೆ? ಇವತ್ತು ಒಂದು ಅಂದಾಜಿನ ಪ್ರಕಾರ ಸುಮಾರು 2 ಲಕ್ಷ 37 ಮನೆಗಳು ನಾಶ ಆಗಿವೆ. ಸರ್ಕಾರ ಪರಿಹಾರ ಏನು ಹೇಳುತ್ತಿದೆಂದರೆ, 43,315 ಮನೆಗಳು ಎ ಕ್ಯಾಟಗರಿ, ಬಿ ಕ್ಯಾಟಗರಿಯ 70,000 ಮನೆಗಳು ಎಂದಿದು. 2 ಲಕ್ಷ 37 ಜನರ ಪರಿಸ್ಥಿತಿ ಏನಾಗಬೇಕು? ಒಂದೇ ಮನೆಯಲ್ಲಿರುವಂತಹ ಮೂರ್‍ನಾಲ್ಕು ಕುಟುಂಬಗಳ ಪರಿಸ್ಥಿತಿ

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಏನಾಗಬೇಕು. ನಾನು ಸತ್ಯ ಏನು ಹೇಳುತ್ತೇನೆಂದರೆ, ಈ ನೆರೆ ಹಾವಳಿ ಹೊಸದೇನು ಅಲ್ಲ. 2005, 2009 ರಲ್ಲಿ ನೆರೆ ಹಾವಳಿಯಾಗಿದೆ ಎಂದು ಮಾನ್ಯ ಬೋಸ್‌ರಾಜ್‌ರವರು ಹೇಳಿದರು. ಸತತವಾಗಿ ಭೀಮಾ ನದಿ, ಆಲಮಟ್ಟಿ ಅಣೆಕಟ್ಟಿನ ಹಿಂಭಾಗ ಮತ್ತು ಉದ್ದಕ್ಕೆ ಪ್ರವಾಹ ಬಂದಾಗಲೆಲ್ಲಾ ಈ ನೆರೆ ಹಾವಳಿಗೆ ತುತ್ತಾಗಿರುವಂಥ ಜನರಿಗೆ ನಾವು ಪುನರ್ವಸತಿ ಕಲ್ಪಿಸಲೇಬೇಕಲ್ಲವೇ? ಮತ್ತೊಂದು ಮನೆಯನ್ನು ಅಲ್ಲೇ ಕಟ್ಟುತ್ತಾರೆಯೇ? ಅವರಿಗೆ ಪರ್ಯಾಯ ಜಾಗದಲ್ಲಿ ಮನೆಗಳನ್ನು ಕಟ್ಟಿ ಕೊಡಬೇಕಲ್ಲವೇ? ಅವರಿಗೆ ಶಾಶ್ವತವಾದ ನೆಲೆಯನ್ನು ಕಲ್ಪಿಸಿಕೊಡಬೇಕಲ್ಲವೇ? 8 ಲಕ್ಷ ಕ್ಯೂಸೆಕ್ಸ್ ನೀರು ಒಂದೇ ಬಾರಿ ಬಂದರೆ ಯಾವ ಮನೆಗಳು, ಯಾವ ಹಳ್ಳಿಗಳು, ಯಾವ ಭೂಮಿ ಉಳಿಯುತ್ತದೆ? ಇಲ್ಲಿ ಎರಡು ಪ್ರಶ್ನೆಗಳಿವೆ. ಹಿನ್ನೀರು ನಿಂತುಕೊಂಡಿದ್ದಾಗ, ಕೃಷ್ಣಾ, ಆಲಮಟ್ಟಿಯಿಂದ ಬಹಳಷ್ಟು ಹಳ್ಳಿಗಳು ಮುಳುಗಡೆಯಾಗಿಬಿಟ್ಟಿವೆ. ಈಗಾಗಲೇ ಮುಳುಗಡೆಯಾಗಿರುವವರಿಗೆ ನಾವು ಪುನರ್ವಸತಿ ಕಲ್ಪಿಸಿಕೊಡುವುದಕ್ಕಾಗಿಲ್ಲ. ಅವರಿಗೆ ಪರಿಹಾರ ಕೊಡುವುದಕ್ಕಾಗಿಲ್ಲ. ಈಗ ಅದರ ಹತ್ತು ಪಟ್ಟು ಹೆಚ್ಚಾಯಿತು. ಇನ್ನಷ್ಟು ಹಣವನ್ನು ಹೇಗೆ ಲೆಕ್ಕ ಹಾಕುತ್ತಾರೆ? ಈಗ ನನ್ನ ಹತ್ತಿರ ಮಾಹಿತಿ ಇದೆ. ರಾಯಚೂರು ಜಿಲ್ಲೆ, ಲಿಂಗಸೂಗೂರು ತಾಲ್ಲೂಕು, ಮುಧೋಳಗಡ್ಡಿ, ಓಂಕಾರ ಗಡ್ಡಿ, ಕಡದರಗಡ್ಡಿ, ಯರಗೋಡಿ ಗ್ರಾಮದ ಜನರು ಹೇಳುತ್ತಾರೆ, ನಾವು ಇಲ್ಲಿ ಇರುವುದಿಲ್ಲ, ಯಾವುದಾದರೂ ಸರ್ಕಾರ ಪರ್ಯಾಯ ಜಾಗದಲ್ಲಿ ಮನೆ ಕಟ್ಟಿಸಿಕೊಡಲಿ ಎಂದು ಹೇಳುತ್ತಿದ್ದಾರೆ. ನೆರೆ ಹಾವಳಿಯಾದಾಗ ನಾವು ಪ್ರಯೋಗ ಮಾಡಲಿಲ್ಲವೇ? ಕಳೆದ ವರ್ಷ ಮಡಿಕೇರಿಯಲ್ಲಿ ಅನಾಹುತ ಆದಾಗ. ಸರ್ಕಾರ 800 ಮನೆಗಳನ್ನು ಕಟ್ಟಿಸಿದ್ದೇವೆ. ತಲಾ ಹತ್ತು ಲಕ್ಷ ರೂಪಾಯಿಗಳನ್ನು ಪರಿಹಾರ ಹಣವನ್ನು ಕೊಟ್ಟಿದ್ದೇವೆ.

**ಶ್ರೀ ಎಂ.ಪಿ.ಸುನಿಲ್ ಸುಬ್ರಮಣಿ:–** ಮಾನ್ಯ ಸಭಾಪತಿಯವರೇ, ಆ ಮನೆಗಳು ಇನ್ನು ಪೂರ್ಣಗೊಂಡಿಲ್ಲ.

(ಗೊಂದಲ)

**ಶ್ರೀ ಕೆ.ಟಿ.ಶ್ರೀಕಂಠೇಗೌಡ:–** ಮಾನ್ಯ ಸಭಾಪತಿಯವರೇ, ಮನೆ ಪೂರ್ಣಗೊಂಡಿಲ್ಲ, ಅದು ಸತ್ಯ. ಅದನ್ನು ನಾನು ಒಪ್ಪಿಕೊಳ್ಳುತ್ತೇನೆ.

**ಶ್ರೀ ಎಂ.ಪಿ.ಸುನಿಲ್ ಸುಬ್ರಮಣಿ:–** ಮಾನ್ಯ ಸಭಾಪತಿಯವರೇ, ಕೊಡಗಿನಲ್ಲಿ ಪ್ರವಾಹ ಆಗಿ ಎಷ್ಟು ದಿವಸ ಆಯಿತು? 800 ಮನೆಗಳನ್ನು ಕಟ್ಟುವುದಕ್ಕೆ ಎಷ್ಟು ವರ್ಷ ಬೇಕು, ಅದಕ್ಕೆ ಮೊದಲು ಅವರು ಉತ್ತರ ಕೊಡಲಿ.

**ಶ್ರೀ ಕೆ.ಟಿ.ಶ್ರೀಕಂಠೇಗೌಡ:–** ಈಗ ಮನೆಗಳ ನಿರ್ಮಾಣ ಕಾರ್ಯ ಮುಗಿದಿದೆ.

(ಗೊಂದಲ)

**ಸಭಾಪತಿಯವರು:–** ಮಾನ್ಯ ಸುನಿಲ್ ಸುಬ್ರಮಣಿಯವರೇ, ತಮಗೆ ಅವಕಾಶ ಕೊಟ್ಟಾಗ ಮಾತನಾಡಿ, ಈಗ ಕುಳಿತುಕೊಳ್ಳಿ.

(ಗೊಂದಲ)

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**Sri K.T.SRIKANTEGOWDA:-** Leave it to me, I am ready to speak, I will speak.

(ಗೊಂದಲ)

**ಶ್ರೀ ಎನ್.ರವಿಕುಮಾರ್:-** ಸುಳ್ಳು ಹೇಳುವುದು ನಿಮ್ಮ ಧರ್ಮ ಎನ್ನುವುದಾದರೆ ಹೇಳಿ.

**ಶ್ರೀ ಮಾನೆ ಶ್ರೀನಿವಾಸ್:-** ಮಾನ್ಯ ಸಭಾಪತಿಯವರೇ, ಅವರೇನು ಸಚಿವರೇ?

(ಗೊಂದಲ)

**ಸಭಾಪತಿಯವರು:-** ಶ್ರೀಕಂಠೇಗೌಡರವರನ್ನು ಹೊರತುಪಡಿಸಿ ಬೇರೆ ಯಾರೇ ಮಾತನಾಡಿದರೂ ರೆಕಾರ್ಡ್‌ಗೆ ಹೋಗುವುದು ಬೇಡ.

**ಶ್ರೀ ಕೆ.ಟಿ.ಶ್ರೀಕಂಠೇಗೌಡ:-** ಮಾನ್ಯ ಸಭಾಪತಿಯವರೇ, ಧನ್ಯವಾದಗಳು. ಕಳೆದ ವರ್ಷ ಮಡಿಕೇರಿಯಲ್ಲಿ ನೆರೆ ಹಾವಳಿ ಆಯಿತು. ತೀವ್ರವಾದ ಭೂಕುಸಿತ ಆಯಿತು. ಶ್ರೀ ಸಾ.ರಾ.ಮಹೇಶ್‌ರವರು ಮಡಿಕೇರಿ ಜಿಲ್ಲಾ ಉಸ್ತುವಾರಿ ಸಚಿವರಾಗಿದ್ದರು. ಮೂರು ತಿಂಗಳು ಕಾಲ ಅಲ್ಲೇ ಬೀಡುಬಿಟ್ಟಿದ್ದರು. ಕಡಿದು ಹೋಗಿರುವ ರಸ್ತೆ ಸಂಪರ್ಕವನ್ನು ಕೆಲವೇ ದಿನಗಳಲ್ಲಿ ಕಲ್ಪಿಸಿಕೊಟ್ಟರು.

**ಶ್ರೀ ಎಂ.ಪಿ.ಸುನಿಲ್ ಸುಬ್ರಮಣಿ:-** ಮಾನ್ಯ ಸಭಾಪತಿಯವರೇ,...

**ಶ್ರೀ ಕೆ.ಟಿ.ಶ್ರೀಕಂಠೇಗೌಡ:-** ಮಾನ್ಯ ಸಭಾಪತಿಯವರೇ, Please allow me to speak. ಮಾನ್ಯ ದೇಶಪಾಂಡೆಯವರು, ಮಾನ್ಯ ಸಿ.ಎಸ್.ಪುಟ್ಟರಾಜುರವರು, ಮಾನ್ಯ ಡಿ.ಸಿ.ತಮ್ಮಣ್ಣನವರು, ಹತ್ತಾರು ಸಚಿವರು ಅಲ್ಲಿ ಬೀಡುಬಿಟ್ಟಿದ್ದರು. ನಾನು ನಾಲ್ಕೈದು ಸಲ ಅಲ್ಲಿಗೆ ಹೋಗಿದ್ದೇನೆ. ಇವತ್ತು 800 ಮನೆಗಳನ್ನು ಹೊಸ ವಿನ್ಯಾಸದಲ್ಲಿ ಕಟ್ಟಿದ್ದಾರೆ.

**ಶ್ರೀ ರಘುನಾಥ ರಾವ್ ಮಲ್ಕಾಪೂರೆ:-** ಮಾನ್ಯ ಸಭಾಪತಿಯವರೇ, ಇವರೇ ಅರ್ಧ ಗಂಟೆ ಮಾತನಾಡುತ್ತಿದ್ದರೆ ಉಳಿದವರಿಗೆ ಮಾತನಾಡುವುದಕ್ಕೆ ಅವಕಾಶ ಸಿಗುವುದಿಲ್ಲ. ಉಳಿದವರು ಏನು ಮಾಡಬೇಕು?

(ಮುಂದು)

**ಶ್ರೀ ಕೆ.ಟಿ.ಶ್ರೀಕಂಠೇಗೌಡ:-** ಮಾನ್ಯ ಸಭಾಪತಿಯವರೇ, ನಾನು ಇಲ್ಲಿ ರಾಜಕಾರಣ ಬೆರಸಲಿಕ್ಕೆ ಹೋಗುವುದಿಲ್ಲವೆಂದು ಮೊದಲೇ ಹೇಳಿದ್ದು, ಅದನ್ನು ಮತ್ತೊಮ್ಮೆ ಸ್ಪಷ್ಟಪಡಿಸುತ್ತೇನೆ. ಒಂದು ದೊಡ್ಡ ನಿದರ್ಶನ ಇದೆ. ಅಲ್ಲಿ ಈಗಾಗಲೇ 95% ರಷ್ಟು ಮನೆಗಳ ನಿರ್ಮಾಣ ಕಾರ್ಯ ಮುಗಿದಿದೆ. ರಾಜಕೀಯ ಮೇಲಾಟದಲ್ಲಿ ಇನ್ನು ಅದು 5% ಬಾಕಿ ಇದ್ದು, ಅದು ಮುಗಿಯಬೇಕಾಗಿದೆ. ಒಟ್ಟಾರೆ 800 ಮನೆಗಳ ನಿರ್ಮಾಣ ಕಾರ್ಯ ಮುಗಿಯಲಿದ್ದು, ಅವುಗಳನ್ನು ಜನರಿಗೆ ಹಂಚಬೇಕಾಗಿದೆ.

**ಸಭಾಪತಿಯವರು:-** 5 ನಿಮಿಷಗಳಲ್ಲಿ ನಿಮ್ಮ ಭಾಷಣವನ್ನು ಮುಗಿಸಿ.

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಶ್ರೀ ಕೆ.ಟಿ.ಶ್ರೀಕಂಠೇಗೌಡ:-** ಮಾನ್ಯ ಸಭಾಪತಿಯವರೇ, ನಮ್ಮ ಪಕ್ಷದ ವತಿಯಿಂದ ನಾನು ಒಬ್ಬನೇ ಮಾತನಾಡುತ್ತಿದ್ದೇನೆ. ತಲಾ 10 ಲಕ್ಷ ರೂಪಾಯಿಗಳ ವೆಚ್ಚದಲ್ಲಿ 800 ಮನೆಗಳು ನಿರ್ಮಾಣ ಆಗುತ್ತಿವೆ. ಅದಕ್ಕೆ 5% ಕೆಲಸ ಮಾತ್ರ ಬಾಕಿ ಇದ್ದು, ಯಾರು ಸರ್ಕಾರದ ಜವಾಬ್ದಾರಿಗೆ ಬರುತ್ತಾರೆ, ಅವರು ಈ ಕೆಲಸವನ್ನು ಮುಗಿಸಬೇಕಾಗಿದೆ. ಅವರು ತಿಮ್ಮಪ್ಪ ಆಗಿರಬಹುದು, ಬೊಮ್ಮಪ್ಪ ಆಗಿರಬಹುದು, ಲಕ್ಷ್ಮಪ್ಪ ಆಗಿರಬಹುದು. ಅವರು ಈ ಮನೆಗಳ ಕೆಲಸವನ್ನು ಮುಗಿಸಿ, ಜನರಿಗೆ ಹಂಚಬೇಕು. ಈ ವಿಚಾರದಲ್ಲಿ ನನ್ನ ಪ್ರಶ್ನೆ ಇಷ್ಟೆ. ಒಂದು ಕಡೆ ಮನೆ ಕಳೆದುಕೊಂಡವರಿಗೆ ಮನೆ ಕಟ್ಟಿಸಿಕೊಡುವುದು ಸರ್ಕಾರದ ಜವಾಬ್ದಾರಿ. ಈಗಾಗಲೇ ಉದಾಹರಣೆ ಕಣ್ಣೆದುರಿಗೆ ಇದೆ. ಮತ್ತೊಂದು ಕಡೆ ಯಾರು ನದಿ ದಂಡೆಯ ಮೇಲೆ ಮತ್ತು ನದಿಯ ಹಿಂಭಾಗದಲ್ಲಿ ನಿರಂತರವಾಗಿ ಮುಳಗಡೆಗೆ ಒಳಗಾಗುತ್ತಾರೋ ಅವರಿಗೆ ಶಾಶ್ವತವಾಗಿ ಪುನರ್ವಸತಿ ಕಲ್ಪಿಸುವಂತಹ ಕೆಲಸ ಇವತ್ತು ಆಗಬೇಕಲ್ಲವೇ? Backwater ಎಂದು ಏನು ಕರೆಯುತ್ತೇವೆ, ಎಷ್ಟು ಬಾರಿ ಈ ಪ್ರದೇಶದಲ್ಲಿರುವ ಹಳ್ಳಿಗಳನ್ನು ಮುಳುಗಿಸುತ್ತೀರಿ, ಎಷ್ಟು ಬಾರಿ ಈ ಆತಂಕದ ದಿನಗಳನ್ನು ಅವರು ನೋಡಬೇಕು? ದಯಮಾಡಿ ನಮ್ಮನ್ನು ಸುರಕ್ಷಿತ ಪ್ರದೇಶಗಳಿಗೆ ಸ್ಥಳಾಂತರ ಮಾಡಿ ಎಂದು ಹೇಳಿ ಅವರು ಪರಿಪರಿಯಾಗಿ ಕೇಳುತ್ತಿದ್ದಾರೆ. ಈ ವಿಚಾರವಾಗಿ ಯಾವ್ಯಾವ ಕ್ರಮ ಕೈಗೊಂಡಿದ್ದೀರಿ? ಆ ಕ್ರಮದ ಬಗ್ಗೆ ಇಲ್ಲಿ ಸ್ಪಷ್ಟಪಡಿಸಬೇಕು.

ಎರಡನೆಯದಾಗಿ, ಬಹಳ ವಿಚಾರ ಇದೆ. ಹೇಳಿ, ಕೇಳಿ ಈ ನಮ್ಮ ನಾಡು ಕೃಷಿಯನ್ನು ಅವಲಂಬಿಸಿರುವಂತಹ ನಾಡು. ಇಲ್ಲಿ ಸುಮಾರು 30 ಲಕ್ಷ ಹೆಕ್ಟೇರ್ ಭೂಮಿಯಲ್ಲಿನ ಬೆಳೆ ಪ್ರವಾಹಕ್ಕೆ ತುತ್ತಾಗಿ ಎಲ್ಲಾ ರೀತಿಯ ಬೆಳೆಗಳಿಗೂ ನಷ್ಟವಾಗಿದೆ. ತೋಟಗಾರಿಕೆ ಬೆಳೆಯಂತೆ ಸಾಮಾನ್ಯ ಕೃಷಿ ಬೆಳೆಯೂ ಸಹ ನಷ್ಟವಾಗಿದೆ. ಬಹುಶಃ ಈ ಬೆಳೆಗಳಿಂದ ಆಗಿರುವಂತಹ ನಷ್ಟವನ್ನು ಲೆಕ್ಕ ಹಾಕುವುದಾದರೆ ಅದೇ ಲಕ್ಷ-ಲಕ್ಷ ಕೋಟಿ ರೂಪಾಯಿಗಳಾಗುತ್ತದೆ. ಆದರೆ, ಮೊಟ್ಟಮೊದಲನೆಯದಾಗಿ ಹೇಳುವುದಾದರೆ ಇತಿಹಾಸದಲ್ಲಿ ಕಳೆದ ಎರಡು ವರ್ಷಗಳಿಂದ ಅಂದರೆ ಕಳೆದ ವರ್ಷ ಮತ್ತು ಈ ವರ್ಷ ಒಂದು ಹೊಸ ಪರಂಪರೆಯಾಗಿ ಜಲಪ್ರಳಯ ಆಗುತ್ತಿದ್ದು, ಭೂ ಕುಸಿತ ಮತ್ತು ಭೂ ಕೊರೆತ ಉಂಟಾಗುತ್ತಿದೆ. ಹಿಂದೆ ಯಾವತ್ತೂ ಸಹ ಈ ರೀತಿಯಲ್ಲಿ ಆಗಿರಲಿಲ್ಲ. ಇವತ್ತು ಶ್ರೀ ಸಿ.ಟಿ.ರವಿಯವರ ಚಿಕ್ಕಮಗಳೂರು ಜಿಲ್ಲೆಯ ಮೂಡಿಗೆರೆ ತಾಲ್ಲೂಕಿನಲ್ಲಿ 1500 ರಿಂದ 1600 ಎಕರೆ ಪ್ರದೇಶ ಭೂ ಕುಸಿತಕ್ಕೆ ಒಳಗಾಗಿದೆ.

(ಗೊಂದಲ)

**ಶ್ರೀ ಎಂ.ಕೆ. ಪ್ರಾಣೇಶ್:-** ಮಾನ್ಯ ಸಭಾಪತಿಯವರೇ, ಒಂದು ಸಣ್ಣ correction.

**ಶ್ರೀ ಕೆ.ಟಿ.ಶ್ರೀಕಂಠೇಗೌಡ:-** ಮಾನ್ಯ ಸಭಾಪತಿಯವರೇ, ನಾನು yield ಆಗಿಲ್ಲ. ನಾನು ಹೇಳಿದ ಮಾಹಿತಿಗಳು ಮತ್ತು ಅಂಕಿ-ಅಂಶಗಳು ತಪ್ಪಾಗಿದ್ದರೆ ಈ ಬಗ್ಗೆ ತಾವು ಒಂದು ಸದನ ಸಮಿತಿಯನ್ನು ರಚನೆ ಮಾಡಿ. ನಾನು ಅಲ್ಲಿ ಈ ಬಗ್ಗೆ ಸಾಬೀತುಪಡಿಸುತ್ತೇನೆ. ಇಲ್ಲದಿದ್ದರೆ, ನನ್ನ ಶಾಸಕ ಸ್ಥಾನಕ್ಕೆ ರಾಜೀನಾಮೆಯನ್ನು

“ ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

ಕೊಟ್ಟು ಹೋಗುವುದಕ್ಕೆ ನಾನು ತಯಾರಾಗಿದ್ದೇನೆ. ನಾನು ಹೇಳಿದ ಮಾತುಗಳು ಮತ್ತು ಕೊಟ್ಟಿರುವ ಮಾಹಿತಿಗಳು ವಾಸ್ತವಿಕತೆಗೆ ದೂರ ಆಗಿದ್ದಲ್ಲಿ ಈ ಬಗ್ಗೆ ಸದನ ಸಮಿತಿಯನ್ನು ನೇಮಕ ಮಾಡಿ. ಈ ವಿಚಾರದಲ್ಲಿ ಸಣ್ಣ ಲೋಪ ಬಂದರೂ ಸಹ ಆ ಕೂಡಲೇ ನಾನು ನನ್ನ ರಾಜೀನಾಮೆಯನ್ನು ಕೊಡುತ್ತೇನೆ. ಎಲ್ಲವನ್ನೂ ಸಿದ್ಧತೆ ಮಾಡಿಕೊಂಡು, ತಯಾರು ಮಾಡಿಕೊಂಡು ನಾನು ಈ ದೇಶದ, ಈ ರಾಜ್ಯದ, ಈ ಸರ್ಕಾರದ ಮುಂದೆ ಇಡುತ್ತಿದ್ದೇನೆ. ಕಳಸ ಭಾಗದಲ್ಲಿ ಆಗಿರುವಂತಹ ನಷ್ಟವನ್ನು ಪರಿಹರಿಸುವಲ್ಲಿ ಏನು ಮನಸ್ಸು ಇದೆ, ಅದರ ಬಗ್ಗೆ ದಯವಿಟ್ಟು ಅಲ್ಲಿನ ಸಮಸ್ಯೆಗಳನ್ನು ಕೇಳಿ.

**ಶ್ರೀ ಆಯನೂರು ಮಂಜುನಾಥ್(ಪದವೀಧರರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಶ್ರೀ ಶ್ರೀಕಂಠೇಗೌಡರವರು ಏನು ಬೇಕಾದರೂ ಹೇಳಲಿ. ಆದರೆ, ರಾಜೀನಾಮೆ ವಿಷಯವನ್ನು ಹೇಳುವುದು ಬೇಡ. ಏಕೆಂದರೆ, ರಾಜೀನಾಮೆ ವಿಷಯದಲ್ಲಿ ನಂಬಿಕೆ ಉಳಿಸಿಕೊಳ್ಳುವುದಕ್ಕಾಗುವುದಿಲ್ಲ. ಶ್ರೀ ಹೆಚ್.ಡಿ.ದೇವೇಗೌಡರು ಇಂತಹ ವಿಚಾರಗಳನ್ನು ಬಹಳ ಹೇಳಿದರು. ಶ್ರೀ ಹೆಚ್.ಡಿ.ರೇವಣ್ಣನವರು ಸಹ ಹೇಳಿದರು. ಅವರೇ ರಾಜೀನಾಮೆಯನ್ನು ಕೊಡಲಿಲ್ಲ. ನೀವು ಏನು ರಾಜೀನಾಮೆಯನ್ನು ಕೊಡುತ್ತೀರಿ?

(ಗೊಂದಲ)

**ಶ್ರೀ ಕೆ.ಟಿ.ಶ್ರೀಕಂಠೇಗೌಡ:-** ಮಾನ್ಯ ಸಭಾಪತಿಯವರೇ, ನಾನು ಒಬ್ಬ ರೈತನ ಮಗನಾಗಿ, ನೊಂದ ರೈತನಿಗೆ ಆಗಿರುವಂತಹ ತೊಂದರೆಯ ಬಗ್ಗೆ ಕಾಳಜಿಯಿಂದ, ಹೃದಯದ ನೋವಿನಿಂದ ಈ ಮಾತನ್ನು ಹೇಳುತ್ತಿದ್ದೇನೆ. ಯಾವಾಗ ಸುಳ್ಳು ಹೇಳುತ್ತಿದ್ದೀರಿ, ಸತ್ಯಾಂಶವನ್ನು ಮರೆಮಾಚುತ್ತಿದ್ದೀರಿ ಎಂದು ನೀವು ಹೇಳಿದ ಕಾರಣಕ್ಕಾಗಿ ಈ ಮಾತನ್ನು ಹೇಳುತ್ತಿದ್ದೇನೆ ಅಷ್ಟೆ ಹೊರತು ಅನ್ಯತಾ ನಾನು ಮಾತನಾಡುವವನಲ್ಲ. ನಾನು ಲಕ್ಷಾಂತರ ಮಕ್ಕಳಿಗೆ ಪಾಠ ಹೇಳಿದ ಮನುಷ್ಯ. ನಾನು ಯಾವತ್ತಾದರೂ ರಾಜಕಾರಣ ಬೆರಸುವುದಾದರೆ, ಅಂದೇ ತಾವು ಹೇಳಿದ ಶಿಕ್ಷೆಗೆ ತಯಾರಾಗಿದ್ದೇನೆ.

ಮಾನ್ಯ ಸಭಾಪತಿಯವರೇ, ಇತ್ತೀಚೆಗೆ ಅಂದರೆ ಈ ತಿಂಗಳ 1ನೇ ತಾರೀಖಿನಂದು ಬೇಲೂರಿನಲ್ಲಿ ನಡೆದ ಅಂತರ ರಾಷ್ಟ್ರೀಯ ಕಾಫಿ ದಿನಾಚರಣೆಯ ಉದ್ಘಾಟನೆಗೆ ನನ್ನನ್ನು ಕರೆದಿದ್ದರು, ಸದರಿ ಸಮಾರಂಭದಲ್ಲಿ ಅತಿಥಿಗಳಾಗಿ ಶ್ರೀ ಗೋಪಾಲಸ್ವಾಮಿಯವರು ಮತ್ತು ಶ್ರೀ ಲಿಂಗೇಶ್ ರವರು ಇದ್ದರು. ಅಲ್ಲಿ ಹಾಸನ, ಮಡಿಕೇರಿ, ಶಿವಮೊಗ್ಗ ಜಿಲ್ಲಾ ಕಾಫಿ ಬೆಳೆಗಾರರು, ಹಾಗೂ ನಾಡಿನ ಇತರ ಭಾಗದ ಸಾವಿರಾರು ಜನರು ಆ ಒಂದು ಸಮಾರಂಭಕ್ಕೆ ಆಗಮಿಸಿದ್ದರು. ಆ ಕಾಫಿ ಪ್ಲಾಂಟರ್ಸ್‌ನ ಕಣ್ಣೀರಿನ ಕಥೆಯನ್ನು ಕೇಳಿ ನಮ್ಮ ಕಣ್ಣುಗಳು ಹನಿಗೂಡಿದವು. ಮೊದಲು ಅಡುಗೆ ಮಾಡಿ ಊಟ ಬಡಿಸುತ್ತಿದ್ದವರು ಈ ಬಾರಿ ಊಟ ಬಡಿಸುವಂತಹ ಸ್ಥಿತಿಯಲ್ಲಿ ಇರಲಿಲ್ಲ. ಅವರು ಹೇಳುವ ಪ್ರಕಾರ ಈ ದೇಶದಲ್ಲಿ ಕಾಫಿಯನ್ನು ರಫ್ತು ಮಾಡುವಲ್ಲಿ ನಾವು 6ನೇ ಸ್ಥಾನದಲ್ಲಿದ್ದೆವು. ನಮ್ಮ ರಫ್ತು 16%. ಇದ್ದು, ಆದಾಯವನ್ನು ತರುತ್ತಿದ್ದೆವು. ಈಗ ನಮ್ಮ ಕಾಫಿ ತೋಟಗಳ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸ್ಥಿತಿಯನ್ನು ಕೇಳುವವರು ಯಾರು ಸ್ವಾಮಿ? ಸಮೃದ್ಧವಾಗಿ ಫಲ ಕೊಡುವಂತಹ ಒಂದು ಕಾಫಿ ಗಿಡವನ್ನು ಬೆಳೆಸಬೇಕಾದರೆ 10 ರಿಂದ 15 ವರ್ಷಗಳು ಬೇಕು. ಇವತ್ತು ನಮ್ಮ ಕಾಫಿ ತೋಟಗಳು ಹಾಳಾಗುತ್ತಿವೆ. ಭೂ ಕುಸಿತ ಉಂಟಾಗಿದೆ. ಕಾಫಿ ತೋಟಗಳನ್ನು ಮಾರುತ್ತೇವೆಂದರೆ, ಅದನ್ನು ಕೇಳುವವರಿಲ್ಲ. ನಮಗೆ ಬದುಕು ಇಲ್ಲ. ಅವರು ನಮ್ಮ ಸಾಲ ಮನ್ನಾ ಮಾಡಿ ಎಂದು ಕೇಳುತ್ತಿಲ್ಲ, ಆ ಸಾಲವನ್ನು renewal ಮಾಡಿಕೊಡಿ ಎಂದು ಕೇಳುತ್ತಿದ್ದೇವೆಂದು ಹೇಳುತ್ತಿದ್ದಾರೆ. ಆದರೆ, ಸಾಲವನ್ನು renewal ಮಾಡಿಕೊಡುತ್ತಿಲ್ಲ. ನಮಗೆ ರಕ್ಷಣೆಯಿಲ್ಲ. ಹೇಳಲಿಕ್ಕೆ, ಕೇಳಲಿಕ್ಕೆ ಮಾತ್ರ ಕಾಫಿ ಪ್ಲಾಂಟರ್ಸ್. ಆದರೆ ನಮ್ಮ ಸ್ಥಿತಿ ದೇವರೊಬ್ಬನಿಗೆ ಮಾತ್ರ ಪ್ರೀತಿ. ನಾವು ಬೀದಿಗೆ ಬಂದಿದ್ದೇವೆ, ಮನೆಯನ್ನು ಕಳೆದುಕೊಂಡಿದ್ದೇವೆ. ಸಾವಿರಾರು ಎಕರೆ ಕಾಫಿ ತೋಟವನ್ನು ಕಳೆದುಕೊಂಡಿದ್ದೇವೆ. ನಮಗೆ ಈ ಬದುಕು ಬೇಡ ಎನ್ನುವಷ್ಟರ ಮಟ್ಟಿಗೆ ಬಂದಿದೆ ಎಂದು ಹೇಳಿ ಅಲ್ಲಿನ ಹೆಣ್ಣು ಮಕ್ಕಳು, ಗಂಡು ಮಕ್ಕಳು ಎಲ್ಲರೂ ಕಣ್ಣೀರು ಹಾಕುತ್ತಿದ್ದಾರೆ. ಈ ಕಾಫಿ ತೋಟಗಳಿಗೆ ಆಗಿರುವ ನಷ್ಟವನ್ನು ಹೇಗೆ ಲೆಕ್ಕಚಾರ ಹಾಕಬೇಕೆಂದು ಮಾನ್ಯ ಸಚಿವರಾದ ಶ್ರೀ ಸಿ.ಟಿ.ರವಿ ಅವರು ಹೇಳಬೇಕು. ಈ ಭೂ ಕುಸಿತ, ಭೂ ಕೊರೆತವನ್ನು ಹೇಗೆ ಲೆಕ್ಕಚಾರ ಮಾಡಬೇಕು? ಆದ್ದರಿಂದ, ಈ ವಿಚಾರವಾಗಿ ಸರ್ಕಾರದಲ್ಲಿ ನಾನು ಮನವಿ ಮಾಡುವುದೇನೆಂದರೆ ಇವತ್ತು ಎಲ್ಲಿ ಭೂ ಕೊರತ ಉಂಟಾಗಿದೆಯೋ, ಎಲ್ಲಿ ಭೂ ಸವಕಳಿ ಉಂಟಾಗಿದೆಯೋ ಅವರುಗಳಿಗೆ ಪರ್ಯಾಯ ಜಮೀನನ್ನು ಕೊಡಿ. ಅವನು ನಾಡಿನ ಜನತೆಗೆ ಅನ್ನ ಹಾಕುವ ರೈತನಿದ್ದಾನೆ. ಅವನಿಗೆ ಪರ್ಯಾಯ ಭೂಮಿಯನ್ನು ನೀಡಿ. ಆ ಭೂ ಕೊರೆತವನ್ನು ಸರಿ ಮಾಡಲಿಕ್ಕೆ ಸಾಧ್ಯವೇ ಇಲ್ಲವೆಂದು ನೀವು ಯೋಚನೆ ಮಾಡಬೇಕು. ರೈತರಾದ ಚಂದ್ರೇಗೌಡ ಮತ್ತು ಬಚ್ಚೇಗೌಡ ಇವರೆಲ್ಲಾ ಏತಕ್ಕೆ ಸತ್ತು ಹೋದರೆಂದರೆ, ಅವನ ಜಮೀನು ಕೊರೆದು ಹೋಗಿದೆ, ಭೂ ಕುಸಿತ ಆಯಿತು. ಒಂದು ಬಿಡಿಗಾಸು ಸಹ ಅವನ ಆತ್ಮಹತ್ಯೆಗೆ ಮುನ್ನ ಬರಲಿಲ್ಲ. ಅದು ನಂತರ ಬಂತು. ಆ ವಿಚಾರ ಬಿಡಿ. ಸರ್ಕಾರದವರು 5 ಲಕ್ಷ ಕೊಟ್ಟರು, ಶ್ರೀ ಹೆಚ್.ಡಿ.ಕುಮಾರಸ್ವಾಮಿಯವರು 2 ಲಕ್ಷ ರೂಪಾಯಿಗಳನ್ನು ಕೊಟ್ಟರು. ಶ್ರೀ ಸಿದ್ದರಾಮಯ್ಯನವರು ಪ್ರತಿ ಕುಟುಂಬಕ್ಕೆ ತಲಾ 50 ಸಾವಿರ ರೂಪಾಯಿಗಳಂತೆ ಪರಿಹಾರ ಕೊಟ್ಟರು. ಆದರೆ, ಸಾಯುವ ಮುನ್ನ ಯಾವುದಾದರೂ ಪರಿಹಾರ ಬಂತೇ? ಅವರು ಕಚೇರಿಗೆ ಅಲೆದಂತಹ ರೀತಿಯನ್ನು ಯಾರಾದರೂ ಕೇಳಿದ್ದಿರಾ, ಪತ್ರಿಕೆಗಳಲ್ಲಿನ ವರದಿಯನ್ನು ಓದಿದ್ದೀರಾ, ಟಿ.ವಿ.ಗಳಲ್ಲಿ ಬಂದಂತಹದ್ದನ್ನು ನೋಡಿದ್ದೀರಾ? ಇದು ಸಾಂಕೇತಿಕ ಉದಾಹರಣೆ. ಚಂದ್ರೇಗೌಡ ಮತ್ತೊಬ್ಬ ಬಚ್ಚೇಗೌಡ ಆತ್ಮಹತ್ಯೆ ಮಾಡಿಕೊಂಡದ್ದು ಏತಕ್ಕೆ? ಇನ್ನು ಎಷ್ಟು ಜನ ಆತ್ಮಹತ್ಯೆ ಮಾಡಿಕೊಳ್ಳಬೇಕು? ಅವನು ಈ ದೇಶಕ್ಕೆ ಬೇಸಾಯ ಮಾಡಿ ಅನ್ನವನ್ನು ಕೊಡಬೇಕು. ಅವನ ಬದುಕೇ ಭೂಮಿ, ಅವನ ಜೀವನವೇ ಬೇಸಾಯ. ಅವನಿಗೆ ಈಗ ಭೂಮಿಯನ್ನು ಕೊಡಬೇಕಲ್ಲವೇ? ಅದು ನಮ್ಮ ಮುಂದೆ ಇರುವಂತಹ ಸವಾಲು. ಅವನಿಗೆ ಬದಲಿ ಭೂಮಿಯನ್ನು ಕೊಡಿ. ಅವನಿಗೆ ಬದಲಿ ಮನೆಯನ್ನು ಕೊಡಿ.

ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಆ ಸವಾಲನ್ನು ನೀವು ಸ್ವೀಕಾರ ಮಾಡಿ. ನಾವು ಇಲ್ಲಿ ಖಂಡಿತವಾಗಿಯೂ ಸಹ ರಾಜಕಾರಣ ಮಾಡುವುದಿಲ್ಲ. ಇನ್ನು ಮುಂದುವರಿದು, 1,2,3,4 ಸಮಸ್ಯೆಗಳು ಇದ್ದರೂ ಸಹ ಅದು ಲೆಕ್ಕಕ್ಕೆ ಇಲ್ಲ.

ಮಾನ್ಯ ಸಭಾಪತಿಯವರೇ, ಬಹಳ ವಿಶೇಷವಾಗಿ ನಮ್ಮ ಶಾಲೆಗಳ ವಿಚಾರ, ಕೆರೆಕಟ್ಟೆಗಳ ವಿಚಾರ, ಅಂಗನವಾಡಿ ಕಟ್ಟಡಗಳ ವಿಚಾರ, ರಸ್ತೆಗಳ ವಿಚಾರವಾಗಿ ಹೇಳಬೇಕಾಗಿದೆ. ಹಾಳಾಗಿರುವಂತಹ ರಸ್ತೆಗಳನ್ನು ದುರಸ್ತಿ ಮಾಡಲಿಕ್ಕೆ ಇನ್ನು ಎಷ್ಟು ದಿವಸಗಳು ಬೇಕು? ಈಗಾಗಲೇ 80 ದಿವಸಗಳು ಕಳೆದಿವೆ. . ಎಲ್ಲಿಯಾದರೂ ರಸ್ತೆಗಳು ರಿಪೇರಿ ಆಗಿದೆಯೇ ಎಂದು ನನಗೆ ನೀವು ಹೇಳಬೇಕು. ರಸ್ತೆಗಳು ದುರಸ್ತಿಯಾದರೆ, ಜನರು ಮಾಮೂಲಿಯಾಗಿ ಓಡಾಡಬಹುದು. ಅವರುಗಳು ರಸ್ತೆಗಳಲ್ಲಿ ಸಾಗಬಹುದು. ವಾಹನಗಳು ಸಂಚರಿಸಬಹುದು. ಎಲ್ಲಿ ರಸ್ತೆಗಳನ್ನು ರಿಪೇರಿ ಮಾಡಿಸಿದ್ದೀರಿ ಎಂದು ಉದಾಹರಣೆಯಾಗಿ ಹೇಳಿ. ಯಾವ ಒಂದು ಹಳ್ಳಿಗೆ ವಿದ್ಯುಚ್ಛಕ್ತಿಯನ್ನು ಕೊಟ್ಟಿದ್ದೀರಿ ಎಂದು ನನಗೆ ಹೇಳಿ. ಎಲ್ಲಿ ಅಂಗನವಾಡಿ ಕಟ್ಟಡಗಳನ್ನು ಮತ್ತು ಶಾಲಾ ಕಟ್ಟಡಗಳನ್ನು ಮಾಡಿಸಲಾಗಿದೆ ಎಂದು ಹೇಳಿ. ಎಲ್ಲಿ ಆ ಮಕ್ಕಳನ್ನು ಶಾಲೆಗೆ ಕಳುಹಿಸಿದ್ದೀರಿ ಎಂದು ಹೇಳಿ. ಮಕ್ಕಳ ಬದುಕನ್ನು ಕಟ್ಟಿಕೊಡಬೇಕು, ಆ ಜನರ ಬದುಕನ್ನು ಕಟ್ಟಿಕೊಡಬೇಕು. ಆ ಜನಕ್ಕೆ ಪರ್ಯಾಯ ಭೂಮಿಯನ್ನು ಕೊಡಬೇಕು, ಅವರುಗಳಿಗೆ ಮನೆಯನ್ನು ಕಟ್ಟಿಕೊಡಬೇಕು. ಹೇಗೆ ಮಾಡಿಕೊಡಬೇಕು ಹೇಳಿ. ಇದು ದೊಡ್ಡ ಸವಾಲು ಅಲ್ಲವೇ? ಇಲ್ಲಿ ಒಂದು ಲಕ್ಷ ಕೋಟಿ ರೂಪಾಯಿಗಳು ಲೆಕ್ಕಕ್ಕೆ ಸಿಕ್ಕುತ್ತದೆಯೇ? ಬರಿ ಭೂ ಕುಸಿತ ಮತ್ತು ಭೂ ಕೊರೆತವನ್ನು ಸರಿಪಡಿಸುವುದಕ್ಕಾಗಿಯೇ ಇವತ್ತು ಲಕ್ಷಾಂತರ ಕೋಟಿ ರೂಪಾಯಿಗಳ ವೆಚ್ಚವನ್ನು ಮುಟ್ಟುತ್ತದೆ. ಉಳಿದಂತೆ ಯಾವ ರೀತಿ ಲೆಕ್ಕಚಾರ ಮಾಡುತ್ತೀರಿ? ತಾಳಿ, ಚಿನ್ನ, ಒಡವೆ ಎಲ್ಲವನ್ನೂ ಇವತ್ತು ಬಿಟ್ಟು ಬಂದಿದ್ದಾರೆ. ಎಲ್ಲವೂ ಸಾಗರಕ್ಕೆ ಹೋಗಿದೆ. ಎಷ್ಟೋ ವಾಹನಗಳು ಪ್ರವಾಹದಲ್ಲಿ ತೇಲಿ ಹೋಗಿವೆ, ಎಷ್ಟೋ ಎತ್ತಿನ ಗಾಡಿಗಳು, ಉಳುವ ನೇಗಿಲುಗಳು ಮುಳುಗಿ ಹೋಗಿವೆ. ನೀವು ಎಲ್ಲಿ ಲೆಕ್ಕ ಹಾಕುತ್ತೀರಿ, ಯಾವುದನ್ನು ಬಿಡುತ್ತೀರಿ? ಹೀಗಾಗಿ, ಇದು ಸರ್ಕಾರಕ್ಕೆ ಬಹು ದೊಡ್ಡ ಸವಾಲು ಆಗಿದೆ.

**ಶ್ರೀ ಎನ್. ರವಿಕುಮಾರ್:** ಮಾನ್ಯ ಸಭಾಪತಿಯವರೇ,

(ಗೊಂದಲ)

**ಶ್ರೀ ಐವನ್ ಡಿ'ಸೋಜಾ:–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಉತ್ತರವನ್ನು ಕೊಡುವಂತಿಲ್ಲ. How can he answer? ಈ ಬಗ್ಗೆ ಮಾನ್ಯ ಸಚಿವರು ಮಾಹಿತಿಯನ್ನು ಕೊಡಬೇಕು. What right he has got to answer?

(ಗೊಂದಲ)

**ಮುಂದು. .**

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**(150) 11.10.2019 01.10 ಎಸ್‌ವಿ-ಎಕೆ**

**(ಸಭಾಪತಿಯವರ ಉಪಸ್ಥಿತಿ)**

**ಶ್ರೀ ಸಿ.ಟಿ.ರವಿ (ಪ್ರವಾಸೋದ್ಯಮ ಸಚಿವರು):-** ಮಾನ್ಯ ಸಭಾಪತಿಯವರೇ, ಮಾನ್ಯ ಶ್ರೀಕಂಠೇಗೌಡರು ಬಹಳ ಗಂಭೀರವಾದ ವಿಷಯವನ್ನು ಹೇಳುತ್ತಿದ್ದಾರೆ. ನಾವು ಅವರ ಭಾವನೆಗಳನ್ನು ಅರ್ಥ ಮಾಡಿಕೊಳ್ಳುತ್ತೇವೆ. ಅವರು ಹೇಳುತ್ತಿರುವ ರೀತಿಯಲ್ಲಿ ಹಾನಿಯಾಗಿರುವುದು ನಿಜ. ಇಷ್ಟು ದೊಡ್ಡ ಪ್ರಮಾಣದಲ್ಲಿ ಹಾನಿಯಾಗಿದ್ದರೂ ಜೀವಹಾನಿ ಕಡಿಮೆಯಾಗಿರುವುದಕ್ಕೆ ಸರ್ಕಾರ ತೆಗೆದುಕೊಂಡ ಮುಂಜಾಗ್ರತಾ ಕ್ರಮಗಳು ಕಾರಣವಾಗಿದೆ. ಇಲ್ಲವಾದಲ್ಲಿ ಈ ಸಾವಿನ ಸರಪಳಿ ಕೇವಲ 91 ಜನರಿಗೆ ನಿಲ್ಲುತ್ತಿರಲಿಲ್ಲ. 900-1000ವನ್ನು ದಾಟುತ್ತಿತ್ತು. ಸರ್ಕಾರ ಮುಂಜಾಗ್ರತೆಯನ್ನು ವಹಿಸಿದುದರ ಕಾರಣದಿಂದಾಗಿ ಸಾವಿನ ಸಂಖ್ಯೆ ಕಡಿಮೆಯಾಗಿದೆ. ಆದರೆ ಪ್ರಕೃತಿ ವಿಕೋಪವನ್ನು ನಿಯಂತ್ರಿಸುವ ಯಾವ ಟೆಕ್ನಿಕ್ ಸಹ ಇದುವರೆವಿಗೂ ಬಂದಿಲ್ಲ. ಪರಿಹಾರದ ಕ್ರಮಗಳನ್ನು ಕೈಗೊಳ್ಳಬಹುದೇ ಹೊರತು ಪ್ರಕೃತಿಯ ವಿಕೋಪವನ್ನು ನಿಯಂತ್ರಿಸುವುದು ಸಾಧ್ಯವಿಲ್ಲ. ಇದನ್ನು ನಿಯಂತ್ರಿಸುವ ವಿದ್ಯೆ ಯಾರಿಗಾದರೂ ಗೊತ್ತಿದ್ದರೆ ಖಂಡಿತವಾಗಿ ಹೇಳಲಿ. ಭೂಕುಸಿತವುಂಟಾಗುವುದನ್ನು ತಪ್ಪಿಸೋಣ. ನಾನು ಭೂಕುಸಿತವುಂಟಾದ ಜಾಗಕ್ಕೆ ಹೋಗಿ ಅಲ್ಲಿನ ಪರಿಸ್ಥಿತಿಯನ್ನು ಕಣ್ಣಾರೆ ಕಂಡು ಕಣ್ಣೀರು ಹಾಕಿರುವವನು. ವಾಸ್ತವಿಕ ನೆಲೆಯಲ್ಲಿ ಮಾನ್ಯ ಶ್ರೀಕಂಠೇಗೌಡರು ಹೇಳುತ್ತಿರುವುದರಲ್ಲಿ ಯಾವುದನ್ನೂ ಅಲ್ಲಗಳೆಯುವುದಿಲ್ಲ. ಇದನ್ನು ನಾವು ಗಂಭೀರವಾಗಿ ತೆಗೆದುಕೊಂಡಿದ್ದೇವೆ. ಎನ್.ಡಿ.ಆರ್.ಎಫ್. ನಾರ್ಮ್ಸ್‌ಗೆ ಬರದಿದ್ದಲ್ಲಿ ಏನು ಮಾಡಬೇಕೆಂಬುದರ ಬಗ್ಗೆ ನಾವು ಸಂಪುಟ ಸಭೆಯಲ್ಲಿ ಹತ್ತಾರು ಬಾರಿ ಚರ್ಚೆ ಮಾಡಿದ್ದೇವೆ. ಉದಾಹರಣೆಗೆ ಕಾಫಿ ಬೆಳೆ ಆ ನಾರ್ಮ್ಸ್ ಅಡಿಯಲ್ಲಿ ಬರುವುದಿಲ್ಲ. ಪ್ರತಿ ಹೆಕ್ಟೇರ್‌ಗೆ ರೂ.38,000/- ಭೂಕುಸಿತ ಪರಿಹಾರವಾಗಿ ಕೊಡುತ್ತಾರೆ. ಗರಿಷ್ಠ ಎರಡು ಹೆಕ್ಟೇರ್‌ಗೆ ಕೊಡುತ್ತಾರೆ. ಆದರೆ ಆಸ್ತಿ ಬೆಲೆಯನ್ನು ಯಾರೂ ಸರಿಪಡಿಸುವುದಕ್ಕಾಗುವುದಿಲ್ಲ. ಪರ್ಯಾಯ ಭೂಮಿಯನ್ನು ಹುಡುಕೋಣವೆಂದರೆ ಎಲ್ಲೆಲ್ಲೋ ಆಗಿದ್ದ ಪ್ರಕೃತಿ ವಿಕೋಪಕ್ಕೆಲ್ಲಾ ನಮ್ಮ ಜಿಲ್ಲೆಯಲ್ಲಿ ಅರಣ್ಯ ಎಂದು ಹೇಳಿ ಪರ್ಯಾಯ ಭೂಮಿಯನ್ನು ಕೊಟ್ಟುಬಿಟ್ಟಿದ್ದಾರೆ. ಎಲ್ಲೋ ಯಾವುದೋ ಒಂದು ಯೋಜನೆಯನ್ನು ಮಾಡುವುದಕ್ಕೆ ಪರ್ಯಾಯವಾಗಿ ನಮ್ಮ ಜಿಲ್ಲೆಯಲ್ಲಿ ಅರಣ್ಯ ಎಂದು ಪರಿಹಾರ ಕೊಟ್ಟಿದ್ದಾರೆ. ಈಗ ಜಾಗ ಇಲ್ಲ. ಅತ್ಯಂತ ಗಂಭೀರವಾಗಿಯೇ ಜಾಗವನ್ನು ಹುಡುಕುತ್ತಿದ್ದೇವೆ. ಮಾನ್ಯ ಸದಸ್ಯರ ಭಾವನೆಗಳನ್ನು ಸರ್ಕಾರ ಅರ್ಥ ಮಾಡಿಕೊಳ್ಳುತ್ತದೆ ಹಾಗೂ ಅವರ ಭಾವನೆಗಳ ಜೊತೆ ಸರ್ಕಾರ ಇದೆ.

**ಶ್ರೀ ಕೆ.ಟಿ.ಶ್ರೀಕಂಠೇಗೌಡ:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರ ಕಾಳಜಿಗೆ ನನ್ನ ಅಭಿನಂದನೆಗಳನ್ನು ತಿಳಿಸಬಯಸುತ್ತೇನೆ.

**ಶ್ರೀ ಪಿ.ಆರ್.ರಮೇಶ್:-** ಮಾನ್ಯ ಸಭಾಪತಿಯವರೇ, ಮಾನ್ಯ ಮಂತ್ರಿಗಳು ಒಂದು ಸ್ಪಷ್ಟನೆಯನ್ನು ಕೊಟ್ಟಿದ್ದಾರೆ. ಈ ಪ್ರಕೃತಿ ವಿಕೋಪದಲ್ಲಿ ಸಾಕಷ್ಟು ಹಾನಿಯಾಗಿದೆ. ಸರ್ಕಾರ ಮುಂಜಾಗ್ರತೆ ವಹಿಸಿದ್ದರಿಂದ ಕಡಿಮೆ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಜೀವಹಾನಿಯಾಗಿದೆ ಎಂದು ಮಾನ್ಯ ಸಚಿವರು ಹೇಳಿದರು. ಯಾವ ರೀತಿ precautionary measures ಮತ್ತು preventive measures ಅನ್ನು ತೆಗೆದುಕೊಳ್ಳಲಾಗಿದೆ ಎಂಬುದನ್ನು ಹೇಳಿದರೆ ನಮಗೆ ಇನ್ನೂ ಹೆಚ್ಚು ಸಂತೋಷವಾಗುತ್ತದೆ.

**ಶ್ರೀ ಸಿ.ಟಿ.ರವಿ:–** ಮಾನ್ಯ ಸಭಾಪತಿಯವರೇ, ತಾವು ಅನುಮತಿಯನ್ನು ನೀಡಿದರೆ ಎಷ್ಟು ಜನರನ್ನು ಸ್ಥಳಾಂತರಗೊಳಿಸಲಾಯಿತು. ಎಲ್ಲೆಲ್ಲಿ ಕಾಳಜಿ ಕೇಂದ್ರಗಳನ್ನು ತೆರೆಯಲಾಯಿತು, ಎಲ್ಲೆಲ್ಲಿಗೆ ಮುಖ್ಯಮಂತ್ರಿಗಳು ಭೇಟಿ ಕೊಟ್ಟರು, ಎಲ್ಲಿಗೆ ಮಂತ್ರಿಗಳು ಹೋದರು ಎಂಬುದರ ಬಗ್ಗೆ ಈಗಲೇ ಹೇಳುತ್ತೇನೆ.

**ಶ್ರೀ ಕೆ.ಟಿ.ಶ್ರೀಕಂಠೇಗೌಡ:–** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರ ಕಾಳಜಿಗೆ ನಾನು ಅಭಿನಂದನೆಗಳನ್ನು ಪುನರುಚ್ಚರಿಸುತ್ತೇನೆ. ಸರ್ಕಾರದಿಂದ ಪ್ರಯತ್ನಗಳಾಗಿವೆ. ಇಲ್ಲವೆಂದು ನಾನು ಹೇಳುತ್ತಿಲ್ಲ. ಆದರೆ ಅದು 'ಆನೆ ಹೊಟ್ಟೆಗೆ ಮೂರುಕಾಸಿನ ಮಜ್ಜಿಗೆಯಿದ್ದಂತೆ.' ಪ್ರಕೃತಿಯ ಮುಂದೆ ನಾವು ಯಾರು? ಪ್ರಕೃತಿಯ ಅನಾಹುತಗಳನ್ನು ತಡೆಯಲಿಕ್ಕೆ ನಾವು ಯಾರು? ನಾವು ಕನಿಷ್ಠ ಹುಲುಮಾನವರು. ನೆರೆ ಉಕ್ಕಿ ಬಂದಾಗ, ಸಮುದ್ರ ಉಕ್ಕಿ ಬಂದಾಗ ನಾವು ಮಾಡುವುದೇನಿದೆ? ಆದರೆ ಸವಾಲನ್ನು ಸ್ವೀಕಾರ ಮಾಡಬೇಕಲ್ಲವೆ? ಇಷ್ಟೆಲ್ಲಾ ಅನಾಹುತಗಳು ಉಂಟಾದಾಗ ಅದೊಂದು ರಾಷ್ಟ್ರೀಯ ವಿಪತ್ತು ಎಂದು ಘೋಷಣೆಯಾಗಬೇಕಲ್ಲವೆ? ಮಹಾರಾಷ್ಟ್ರದಿಂದ ಏಳೆಂಟು ಲಕ್ಷ ಕ್ಯೂಸೆಕ್ಸ್ ನೀರು ಹರಿದು ಬಂದು, ಕೇರಳದಿಂದ ಸಾವಿರಾರು ಕ್ಯೂಸೆಕ್ಸ್ ನೀರು ಹರಿದು ಬಂದು ಪ್ರವಾಹ ಉಕ್ಕಿದರೆ ಅದು ರಾಷ್ಟ್ರೀಯ ವಿಪತ್ತಲ್ಲವೆ? ಕರ್ನಾಟಕ, ಕೇರಳ ಮತ್ತು ಮಹಾರಾಷ್ಟ್ರ ರಾಜ್ಯಗಳು ದೇಶದ ಭಾಗವಲ್ಲವೆ? ಇದನ್ನು ರಾಷ್ಟ್ರೀಯ ವಿಪತ್ತು ಎಂದು ಏಕೆ ಘೋಷಿಸುತ್ತಿಲ್ಲ? ಲೆಕ್ಕ ಹಾಕಲು ಸಾಧ್ಯವಾಗದಷ್ಟು ಅನಾಹುತ ಸಂಭವಿಸಿ ಹೋಗಿದೆ. ಇನ್ನೂ 50–100 ವರ್ಷಗಳ ಕಾಲ ಅವರಿಗೆ ಬದುಕನ್ನು ಕಟ್ಟಿಕೊಡಲು ಸಾಧ್ಯವಿಲ್ಲ. 500–600 ವರ್ಷಗಳಿಂದ ಕಟ್ಟಿಕೊಂಡು ಬಂದ ಬದುಕನ್ನು ಕೇವಲ ಐದಾರು ದಿನದಲ್ಲಿ ಪ್ರಕೃತಿ ಕಿತ್ತು ಹಾಕಿದೆ. ಇದು ಹುಡುಗಾಟದ ಮಾತಲ್ಲ. ಇದು ರಾಜಕೀಯದ ಮಾತಲ್ಲ. ಇದು ತಮಾಷೆಯ ಮಾತಲ್ಲ. ಇಂದು ಅಮೇರಿಕಾದ 50–60,000 ಜನರನ್ನು ತೃಪ್ತಿ ಪಡಿಸುವುದಕ್ಕೆ ಹೋಗುತ್ತೇವೆ. ಇಲ್ಲಿರುವ 8–10 ಲಕ್ಷ ಜನರಿಗೆ ಬದುಕನ್ನು ಕಟ್ಟಿಕೊಡಬೇಕಲ್ಲವೆ? ಆ ಸವಾಲನ್ನು ಸ್ವೀಕಾರ ಮಾಡಬೇಕಲ್ಲವೆ? ಈ ಕೆಲಸವನ್ನು ಸರ್ಕಾರ ಮಾಡಲಿ. ಆಗ ಅದನ್ನು ಮೆಚ್ಚುತ್ತೇವೆ. ಇದನ್ನೂ ಮೆಚ್ಚುತ್ತೇವೆ. ಸರ್ಕಾರ ಸವಾಲನ್ನು ಸ್ವೀಕರಿಸಲಿ.

**ಶ್ರೀ ಸಿ.ಟಿ.ರವಿ:–** ಮಾನ್ಯ ಸಭಾಪತಿಯವರೇ, ಅವರ ಸವಾಲನ್ನು ನಾವು ತೆಗೆದುಕೊಳ್ಳುವುದಿಲ್ಲ. ಅವರ ಕಳಕಳಿಯನ್ನು ಸ್ವೀಕರಿಸುತ್ತೇವೆ. ಏನು ಮಾಡಿದ್ದೇವೆಂದು ಹೇಳುತ್ತೇವೆ. ಸವಾಲನ್ನು ಸ್ವೀಕರಿಸುವುದು ಚುನಾವಣೆಯಲ್ಲಿ. ಅದನ್ನು ಸ್ವೀಕಾರ ಮಾಡಿ ತೋರಿಸಿದ್ದೇವೆ. ಇದನ್ನು ನಾವು ಕಳಕಳಿ ಎಂದು ಸ್ವೀಕರಿಸುತ್ತೇವೆ.

**(ಗೊಂದಲ)**

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ಅಷ್ಟು ಜನ ಶಾಸಕರ ರಾಜೀನಾಮೆಯನ್ನು ಕೊಡಿಸಿರುವುದು ನೀವು ಸ್ವೀಕರಿಸಿರುವ ಸವಾಲೇ?

**(ಗೊಂದಲ)**

**ಸಭಾಪತಿಯವರು:-** ಮಾನ್ಯ ಶ್ರೀಕಂಠೇಗೌಡರೇ, ನಿಮ್ಮ ಮಾತು ಮುಗಿಯಿತೇ? ಈ ರೀತಿ ನೀವು yield ಆಗುತ್ತಿದ್ದರೆ ಏನು ಮಾಡುವುದು?

**ಶ್ರೀ ಕೆ.ಟಿ.ಶ್ರೀಕಂಠೇಗೌಡ:-** ಮಾನ್ಯ ಸಭಾಪತಿಯವರೇ, ಬೇಗ ಮುಗಿಸುತ್ತೇನೆ.

**(ಗೊಂದಲ)**

**ಶ್ರೀ ಸಿ.ಟಿ.ರವಿ:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಮಾತನಾಡುತ್ತಿರುವುದು ಅವರ ಹೃದಯದ ಮಾತು ಎಂದು ನಾನು ಭಾವಿಸಿದ್ದೇನೆ. ಆದರೆ ಸವಾಲು ಎಂಬುದು ಹೃದಯದ ಮಾತಲ್ಲ. ಅದು ಧಿಮಾಕಿನ ಮಾತು. ಹೃದಯದ ಮಾತಾದರೆ ಅದು ಕಳಕಳಿ. ಧಿಮಾಕಿನ ಮಾತಾದರೆ ಅದು ಸವಾಲು.

**ಶ್ರೀ ಕೆ.ಟಿ.ಶ್ರೀಕಂಠೇಗೌಡ:-** ಮಾನ್ಯ ಸಭಾಪತಿಯವರೇ, ಇದು ಕಳಕಳಿಯ ಮಾತು. ಕಾಳಜಿಯ ಮಾತು. ಸಂತ್ರಸ್ತರ ಬದುಕನ್ನು ಕಟ್ಟಿಕೊಡುವ ಮಾತು. ಮತ್ತೊಂದು ಸೂಕ್ಷ್ಮವಾದ ಮಾತನ್ನು ಹೇಳುತ್ತೇನೆ. ಇಂದು ಅಲ್ಲಿ ಸಾವಿರಾರು ಶಾಲಾ ಮಕ್ಕಳು ವಿದ್ಯಾಭ್ಯಾಸದಿಂದ ವಂಚಿತರಾಗಿ ಬೀದಿಗೆ ಬಿದ್ದಿದ್ದಾರೆ. ಅದು ಅಂಗನವಾಡಿಯಿಂದ ಹಿಡಿದು ಎಸ್.ಎಸ್.ಎಲ್.ಸಿ. ಮತ್ತು ಪಿ.ಯು.ಸಿಯವರವರೆಗೆ ಅಥವಾ ಡಿಗ್ರಿಯವರೆಗೆ ಆಗಿರಬಹುದು. ಇವರಿಗೆ ಏನು ಮಾಡಲಾಗಿದೆ? ಏನು ಮಾಡಬಹುದು? ಇವರಿಗೆ ಮನೆಯಿಲ್ಲ, ಊಟವಿಲ್ಲ, ಪುಸ್ತಕವಿಲ್ಲ, ಪಾಠವಿಲ್ಲ. ತಕ್ಷಣದಲ್ಲಿಯೇ ಸರ್ಕಾರ 50-100 ವಸತಿ ಶಾಲೆಗಳನ್ನು ಪ್ರಾರಂಭಿಸಬೇಕು. ಮಕ್ಕಳಿಗೆ ಶಿಕ್ಷಣವನ್ನು ಕೊಡಬೇಕು.

ಮಾನ್ಯ ಸಭಾಪತಿಯವರೇ, ನಾನು ಕೇವಲ ತೌಡು ಕುಟ್ಟುವುದಕ್ಕಾಗಿ ಇಲ್ಲಿ ಮಾತನಾಡುತ್ತಿಲ್ಲ. ವಾಸ್ತವ ನೆಲೆಗಟ್ಟಿನಲ್ಲಿ ರಚನಾತ್ಮಕವಾಗಿ ಸಂತ್ರಸ್ತರ ಬದುಕನ್ನು ಕಟ್ಟಿಕೊಡುವುದರ ಬಗ್ಗೆ ವಿಚಾರವನ್ನು ಮಂಡನೆ ಮಾಡುತ್ತಿದ್ದೇನೆ. ಈಗ ರೈತರು ಭೂಮಿಯ ಕಡೆಗೆ ಹೋಗುತ್ತಿಲ್ಲ. ಏಕೆ ಹೋಗುತ್ತಿಲ್ಲವೆಂದರೆ ಅವರಿಗೆ ಪರಿಹಾರ ಬರಲಿ ಎಂದು. ಅವರೇನಾದರೂ ಪುನಃ ಉಳುಮೆ ಮಾಡಿದರೆ ಪರಿಹಾರ ಸಿಗದೆ ಹೋಗುತ್ತದೆಯೇನೋ? ಒಂದು ಬೆಳೆ ನಷ್ಟವಾಗಿದೆ. ಇನ್ನೊಂದು ಬೆಳೆಯೇನಾಗುತ್ತದೋ? ರೈತನಿಗೆ ನಂಬಿಕೆಯಿಲ್ಲ. ವಿಶ್ವಾಸವಿಲ್ಲ. ಅವನು ತನಗೆ ಪರಿಹಾರ ಸಿಗದೇ ಹೋದರೆ ತನ್ನ ಸ್ಥಿತಿಯೇನು ಎಂದು ಆತಂಕದಲ್ಲಿದ್ದಾನೆ. ಅವನ ಆತಂಕ ನಿವಾರಣೆ ಮಾಡಬೇಕು. ರೂ.10,000/- ಇರುವುದನ್ನು ರೂ.25,000/-ಕ್ಕೆ ಹೆಚ್ಚಿಸಬೇಕು. ಪರಿಹಾರವನ್ನು ಯಾರಿಗೆ ಕೊಟ್ಟಿದ್ದಾರೆ? ಪುನರ್ವಸತಿ ಎಲ್ಲಿ ಕಲ್ಪಿಸಿದ್ದಾರೆ? ಮನೆಗಳು ಎಲ್ಲಿ ನಿರ್ಮಿಸಿದ್ದಾರೆ? ಈ ಎಲ್ಲಾ ಸಮಸ್ಯೆಗಳಿಗೆ ಪರಿಹಾರವನ್ನು ಕಂಡುಕೊಳ್ಳುವುದರ ಜೊತೆಯಲ್ಲಿ ರಾಜ್ಯ ಹಾಗೂ ಕೇಂದ್ರ ಸರ್ಕಾರಗಳು ಒಟ್ಟಾಗಿ ನಿಂತು ಶಾಶ್ವತವಾಗಿ ಬದುಕು-ಭವಿಷ್ಯವನ್ನು ರೂಪಿಸುವ ಸವಾಲನ್ನು ಸ್ವೀಕರಿಸಬೇಕು. ಇವತ್ತು ಎರಡೂ ಸರ್ಕಾರಗಳಿಗೆ

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಒಂದು ಅವಕಾಶವಿದೆ. It's a golden opportunity. ಜನರ ಬದುಕನ್ನು ರೂಪಿಸಿದರೆ, ಅವರು ಜೀವನ ಪರ್ಯಂತ ನೆನಪಿಸಿಕೊಳ್ಳುತ್ತಾರೆ. ಸರ್ಕಾರಕ್ಕೆ ಇನ್ನೂ ಕಾಲ ಮಿಂಚಿಲ್ಲ. ಸರ್ಕಾರ ಶಾಶ್ವತ ಪರಿಹಾರಕ್ಕೆ ಮುಂದಾಗಬೇಕು. ಕೇಂದ್ರ ಹಾಗೂ ರಾಜ್ಯ ಸರ್ಕಾರಗಳೆರಡೂ ಸಹ ಈ ವಿಷಯದಲ್ಲಿ ಮೀನ–ಮೇಷ ಎಣಿಸದೆ ಸಂತ್ರಸ್ತರ ಕಣ್ಣೀರನ್ನು ಒರೆಸಿ ಶಾಶ್ವತ ಕಾಯಕಲ್ಪಕ್ಕೆ ಮುಂದಾಗಬೇಕೆಂದು ಆಗ್ರಹಿಸುತ್ತಾ, ನನಗೆ ಅವಕಾಶವನ್ನು ಕೊಟ್ಟದ್ದಕ್ಕಾಗಿ ತಮಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

**(..ಮುಂದು)**

(150) 11.10.2019 KG.RN 1.20

**(ಸಭಾಪತಿಯವರ ಉಪಸ್ಥಿತಿ)**

**ಶ್ರೀ ಎಂ.ಪಿ.ಸುನೀಲ್ ಸುಬ್ರಮಣಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ನನಗೆ ಮಾತನಾಡುವುದಕ್ಕೆ ಅವಕಾಶ ಕಲ್ಪಿಸಿ ಕೊಟ್ಟಿದಕ್ಕಾಗಿ ತಮಗೆ ಧನ್ಯವಾದಗಳು. ನನ್ನ ಗೆಳೆಯರಾದ ಹಾಗೂ ಮಾನ್ಯ ಸದಸ್ಯರಾದ ಶ್ರೀ ಕೆ.ಟಿ.ಶ್ರೀಕಂಠೇಗೌಡರು ನಿವೃತ್ತ ಪ್ರಾಂಶುಪಾಲರಾಗಿದ್ದು ಅವರು ಬಹಳ ಚೆನ್ನಾಗಿ ಮಾತನಾಡಿದ್ದಾರೆ. ಆದರೆ, ಅದರಲ್ಲಿ ಕೆಲವು ಸತ್ಯಾಂಶ ಇರಲಿಲ್ಲ. ಮಾನ್ಯ ಮಾಜಿ ಸಚಿವರಾದ ಸಾ.ರಾ.ಮಹೇಶ್‌ರವರು ನಮ್ಮ ಜಿಲ್ಲೆಯ in-charge Minister ಆಗಿ ಸುಮಾರು 8 ದಿವಸಗಳ ಕಾಲ ನಮ್ಮ ಜೊತೆಯಲ್ಲಿದ್ದರು. ಮಾನ್ಯ ಸದಸ್ಯರು ಹಳೆಯ ಸಂದರ್ಭವನ್ನು ಪ್ರಸ್ತಾಪ ಮಾಡಿದ್ದಾರೆ. ಮಾನ್ಯ ಸದಸ್ಯರು ಪ್ರಸ್ತಾಪ ಮಾಡಿದಂತಹ ವಿಷಯಕ್ಕೆ ನಾನು ಉತ್ತರ ಕೊಡಬೇಕಾಗುತ್ತದೆ. ಹಾಗೆಯೇ, ಕೆಲವು ವಿಷಯಗಳಿಗೆ clarification ಕೊಡಬೇಕಾಗುತ್ತದೆ. ನಮ್ಮ ವಿರೋಧ ಪಕ್ಷದ ನಾಯಕರು ನಾವು ಯಾವುದೇ ಸಂದರ್ಭದಲ್ಲಿಯೂ ರಾಜಕೀಯ ಮಾಡದೆ ಬಹಳ ಒಳ್ಳೆಯ ರೀತಿಯಲ್ಲಿ ಕೆಲಸಗಳನ್ನು ಮಾಡಬೇಕೆಂದು ಚೆನ್ನಾಗಿ ಹೇಳಿದ್ದಾರೆ. ನನಗೆ ಅವರ ಮಾತುಗಳು ಬಹಳ ಖುಷಿಯಾಗಿವೆ. ಏಕೆಂದರೆ, ಇದು ಆ ಸಂದರ್ಭವಲ್ಲ. ಏಕೆಂದರೆ, ನಾವು ಬಿಜೆಪಿಯವರಾದರೂ, ಕಾಂಗ್ರೆಸ್ ಪಕ್ಷದವರಾದರೂ ಮತ್ತು ಜೆಡಿಎಸ್ ಪಕ್ಷದವರಾದರೂ ಸಹ ಪಕ್ಷ, ಜಾತಿ, ಬೇದ ಬಾವ ಬಿಟ್ಟು ಕೆಲಸ ಮಾಡಿದ್ದೇವೆ. ಆ ರೀತಿ ತೊಂದರೆಯಾದಂತಹ ಸಂದರ್ಭದಲ್ಲಿ ನಮಗೆ ಅನುಭವದ ಕೊರತೆ ಇತ್ತು. ಹಾಗೆಯೇ, ಮಾನ್ಯ ಸಚಿವರಿಗೂ ಸಹ ಅನುಭವದ ಕೊರತೆ ಇತ್ತು, ಏಕೆಂದರೆ, ನಮಗೆ ಅದು ಹೊಸ ಅನುಭವ. 2018 ರಲ್ಲಿ ಆ ರೀತಿ ಆದಂತಹ ಸಂದರ್ಭದಲ್ಲಿ ಹಿರಿಯ ನಾಗರೀಕರು 100 ವರ್ಷಗಳ ಹಿಂದೆ ಈ ರೀತಿ ಆಗಿತ್ತು ಎಂದು ಹೇಳುತ್ತಿದ್ದರು.

(ಗೊಂದಲ)

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾನ್ಯ ಸಭಾಪತಿಯವರೇ, ನಾನು ಕೊಡಗು ಜಿಲ್ಲೆಯ ಬಗ್ಗೆ ಹೇಳುತ್ತಿದ್ದೇನೆ. ಆ ಸಂದರ್ಭದಲ್ಲಿ ಹಿರಿಯರು ಹೇಳಿದ ಮಾತುಗಳನ್ನು ನಾನು ಇಲ್ಲಿ ಹೇಳುತ್ತಿದ್ದೇನೆ. ಏಕೆಂದರೆ, ನಾನು ನೋಡಿಲ್ಲ. ಈಗ ನನಗೆ ಸುಮಾರು 57 ವರ್ಷ ವಯಸ್ಸು ಆಗಿದೆ. ಆ ರೀತಿಯ ಘಟನೆಗಳನ್ನು ನಾನು ಇದುವರೆವಿಗೂ ನೋಡಿಲ್ಲ. ಆಗ ಪರಿಹಾರ ಕೇಂದ್ರಗಳನ್ನು ಮಾಡುವಂತಹ ಸಂದರ್ಭದಲ್ಲಿ ಯಾವ ರೀತಿಯ ಪರಿಸ್ಥಿತಿ ಇತ್ತು ಎಂದರೆ, ಅಡಿಗೆ ಮಾಡಲು ಗ್ಯಾಸ್ ಸಿಲಿಂಡರ್‌ನ್ನು ತೆಗೆದುಕೊಳ್ಳಲು ಆಗುತ್ತಿರಲಿಲ್ಲ. ಅಡಿಗೆ ಮಾಡಲು ಆಗುತ್ತಿರಲಿಲ್ಲ. ಬ್ರಾಹ್ಮಣರು ಇರಬಹುದು, ಕೊಡವ ಸಮುದಾಯದವರು ಇರಬಹುದು, ಗೌಡರು ಇರಬಹುದು, ಮುಸಲ್ಮಾನರು ಇರಬಹುದು ಅಥವಾ ಯಾವುದೇ ಸಮುದಾಯದವರು ಇರಬಹುದು ಆ ಸಂದರ್ಭದಲ್ಲಿ ಎಲ್ಲರೂ ಒಟ್ಟಾಗಿ ಯಾವುದೇ ರೀತಿಯ ಭಿನ್ನಾಬಿಪ್ರಾಯವಿಲ್ಲದೆ ಕೆಲಸ ಮಾಡಿದ್ದೆವು. ಆ ಸಂದರ್ಭದಲ್ಲಿ ನಮ್ಮಲ್ಲಿ ಯಾವುದೇ ರಾಜಕೀಯದ ಮಾತುಗಳು ಬರಲಿಲ್ಲ. ಆ ಸಮಯದಲ್ಲಿ ಸುಮಾರು 20 ಜನರು ತೀರಿ ಹೋದರು. 2018 ರಲ್ಲಿ ಅಲ್ಲಿ 4,450 ವಿದ್ಯುತ್ ಕಂಬಗಳು ಹಾಳಾಗಿದ್ದವು. ಸುಮಾರು 60 ಕಿಲೋಮೀಟರ್ ವಿದ್ಯುತ್ ಲೈನ್ ಡ್ಯಾಮೇಜ್ ಆಗಿತ್ತು. 270 Transformers ಡ್ಯಾಮೇಜ್ ಆಗಿದ್ದವು. ಆ ಸಂದರ್ಭದಲ್ಲಿ ಮೆಸ್ಕಾಂರವರು ಬಹಳ ಚೆನ್ನಾಗಿ ಕೆಲಸ ಮಾಡಿದರು. ಆ ವೇಳೆಯಲ್ಲಿ ಸುಮಾರು 800 ಜನ ಸಿಬ್ಬಂದಿಯವರು ಬಂದು ಬಹಳ ಒಳ್ಳೆಯ ರೀತಿಯಲ್ಲಿ ಕೆಲಸ ಮಾಡಿದರು. ನಾನು ಅದನ್ನು ಒಪ್ಪುತ್ತೇನೆ. ಆದರೆ, ಸಮ್ಮಿಶ್ರ ಸರ್ಕಾರ ಇದ್ದಂತಹ ಸಂದರ್ಭದಲ್ಲಿ 6 ತಿಂಗಳಿನಲ್ಲಿ ಮನೆ ಕಟ್ಟಿಕೊಡುತ್ತೇವೆಂದು ಹೇಳಿದ ಸರ್ಕಾರ co-ordination ಇಲ್ಲದ ಕಾರಣ ಆ ಕೆಲಸ ಆಗಲಿಲ್ಲ. ಆದರೆ, ಈ ಸಂದರ್ಭದಲ್ಲಿ ಮಾಜಿ ಸಚಿವರಾದಂತಹ ಮಾನ್ಯ ಆರ್.ವಿ.ದೇಶಪಾಂಡೆಯವರನ್ನು ಮೆಚ್ಚಬೇಕು. ಏಕೆಂದರೆ, ಅವರು ಹೇಳಿದಂತಹ ಸಮಯಕ್ಕೆ ಸರಿಯಾಗಿ ಬಂದು ಕೆಲಸಗಳನ್ನು ಮಾಡಿಕೊಡುತ್ತಿದ್ದರು. ಆದರೆ, ಎಲ್ಲಾ ಕೆಲಸಗಳು ತಾತ್ಕಾಲಿಕವಾಗಿ ಮಾತ್ರ ಆಗಿವೆ. ಲೋಕೋಪಯೋಗಿ ಇಲಾಖೆಗೆ ಸೇರಿದ ಬೇಕಾದಷ್ಟು ರಸ್ತೆಗಳು ಹಾಳಾಗಿ ಹೋಗಿವೆ. ಅದಕ್ಕೆ ಹಣ ಬೇಕಾದಷ್ಟು ಹೋಗಿದೆ. ಆದರೆ, ಯಾವುದೇ ಕೆಲಸಗಳು ಇದುವರೆಗೂ ಖಾಯಂ ಆಗಿ ಆಗಲಿಲ್ಲ. ಈಗಲೂ ಅಲ್ಲಿ ಮರಳಿನ ಚೀಲಗಳನ್ನು ಇಟ್ಟಿದ್ದಾರೆ. ಮಾನ್ಯ ಸದಸ್ಯರಾದ ಶ್ರೀ ಕೆ.ಟಿ.ಶ್ರೀಕಂಠೇಗೌಡರು ಅಲ್ಲಿಗೆ ಬಂದು ಸ್ವತಃ ನೋಡಬೇಕು. ನಮಗೆ ಅವರ ಕಾಳಜಿ ಅರ್ಥವಾಗುತ್ತದೆ. ಅವರು ಅನೇಕ ಬಾರಿ ನನಗೆ ಕರೆ ಮಾಡಿ ಕೊಡಗಿನಲ್ಲಿ ಮಳೆ ಬೀಳುತ್ತಿದೆಯಾ, ಅಲ್ಲಿನ ಪರಿಸ್ಥಿತಿ ಯಾವ ರೀತಿ ಇದೆ ಎಂದು ನನಗೆ ಕೇಳುತ್ತಿದ್ದರು. ನಾನು ಅದಕ್ಕೆ ಅವರಿಗೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಅದೇ ರೀತಿ ಮಾಜಿ ಮುಖ್ಯ ಮಂತ್ರಿಯವರಾದ ಮಾನ್ಯ ಹೆಚ್.ಡಿ.ಕುಮಾರಸ್ವಾಮಿಯವರಿಗೂ ಸಹ ಧನ್ಯವಾದಗಳನ್ನು ಸಲ್ಲಿಸುತ್ತೇನೆ. ಏಕೆಂದರೆ, ಆ ಸಂದರ್ಭದಲ್ಲಿ ಅವರು ತಲಕಾವೇರಿಗೆ ಬಂದಿದ್ದರು. ಯಾವ ಮುಖ್ಯಮಂತ್ರಿಯವರು ಆ ಸಂದರ್ಭದಲ್ಲಿ ಅಲ್ಲಿಗೆ ಬಂದಿರಲಿಲ್ಲ. ಮಾನ್ಯ ಸಿದ್ದರಾಮಯ್ಯನವರು ಮುಖ್ಯಮಂತ್ರಿಯಾಗಿದ್ದಂತಹ ಸಂದರ್ಭದಲ್ಲಿ ನಾನು ಬೆಳಗಾವಿ ಅಧಿವೇಶನದಲ್ಲಿ

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ತಲಕಾವೇರಿಯ ನೀರು ಬೆಂಗಳೂರು, ಮಂಡ್ಯ, ಮೈಸೂರು ಮತ್ತು ತಮಿಳುನಾಡಿಗೆ ಬೇಕು. ಆದರೆ, ತಲಕಾವೇರಿಯಲ್ಲಿ ಮಳೆಯಾಗದಿದ್ದರೆ ಬೆಂಗಳೂರು, ಮಂಡ್ಯ ಮತ್ತು ಮೈಸೂರಿನಲ್ಲಿ ಗಲಾಟೆ ಮಾಡಿ ಪತ್ರಿಕೆಗಳಲ್ಲಿ ಸುಮಾರು 25 ಸಾವಿರ ಕೋಟಿ ರೂಪಾಯಿಗಳು ನಷ್ಟವಾಗಿದೆ ಎಂದು ಬರೆಯುತ್ತಾರೆ. ಆದರೆ, ತಲಕಾವೇರಿಗೆ ಮಾತ್ರ ಯಾರು ಬರುವುದಿಲ್ಲ. ಆದರೆ, ಮಾನ್ಯ ಹೆಚ್.ಡಿ.ಕುಮಾರಸ್ವಾಮಿಯವರು ಬಂದಿದ್ದರು, ಅದಕ್ಕೆ ನಾನು ಅವರಿಗೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಮಾನ್ಯ ಹೆಚ್.ಡಿ.ಕುಮಾರಸ್ವಾಮಿಯವರು ಇದರ ಬಗ್ಗೆ ಒಂದು ಪ್ರಾಧಿಕಾರ ಮಾಡಿದಂತಹ ಸಂದರ್ಭದಲ್ಲಿ ನಾವೆಲ್ಲರೂ ಬಹಳ ಸಂತೋಷ ಪಟ್ಟೆವು. ಆದರೆ, ಆ ಪ್ರಾಧಿಕಾರದಲ್ಲಿ ಒಂದು ಸಭೆ ಮಾತ್ರ ಆಗಿದೆ. ಒಂದು ಮಿನಿ ಬಸ್ ಬೇಕೆಂದು ಆಗಿನ ಸಚಿವರಾಗಿದ್ದಂತಹ ಶ್ರೀ ಸಾ.ರಾ.ಮಹೇಶ್‌ರವರನ್ನು ಮತ್ತು ಮಾನ್ಯ ಹೆಚ್.ಡಿ.ಕುಮಾರಸ್ವಾಮಿಯವರನ್ನು ಕೇಳಿದ್ದೆವು. ಆದರೆ, ಮಿನಿ ಬಸ್ ಕೊಡಲೇ ಇಲ್ಲ. ಆಗಿನ ಸಾರಿಗೆ ಸಚಿವರಾಗಿದ್ದಂತಹ ಶ್ರೀ ಡಿ.ಸಿ.ತಮ್ಮಣ್ಣನವರನ್ನು ಭೇಟಿ ಮಾಡಿ ಒಂದು ಮಿನಿ ಬಸ್ ಕೊಡಿ, ತಾವು ದಯವಿಟ್ಟು ಅಲ್ಲಿಗೆ ಒಂದು ಬಾರಿ ಬನ್ನಿ ಎಂದು ಸುಮಾರು ಬಾರಿ ಕೇಳಿದೆ. ಆದರೆ, ಮಿನಿ ಬಸ್ ಕೊಡಲೇ ಇಲ್ಲ. ನಾವು ಈ ರೀತಿಯ ಪರಿಸ್ಥಿತಿಯನ್ನು ನೋಡಿದ್ದೇವೆ. ಮನೆ ಕಟ್ಟುವ ಕೆಲಸ ಬಹಳ ಬೇಗ ಆಗುತ್ತದೆ ಎಂದು ನಾವೆಲ್ಲ ತುಂಬ ಆಸೆ ಪಟ್ಟಿದ್ದೆವು. Infosys ಕಂಪನಿಯವರು 200 ಮನೆಗಳನ್ನು ಕಟ್ಟಿಕೊಡುತ್ತೇವೆಂದು ಬಂದಿದ್ದರು. ಅದರೆ, ಅವರಿಗೆ ಯಾರು ಸರಿಯಾದಂತಹ ವ್ಯವಸ್ಥೆ ಮಾಡಿಕೊಡಲಿಲ್ಲ. ಆಗ ವಸತಿ ಸಚಿವರು ಬೇರೆ ಒಬ್ಬರು ಇದ್ದರು. ಈ ಕಡೆ ಬೇರೆ ಒಬ್ಬರು ಇದ್ದರು. ಅವರು ಮಾತು ಇವರು ಕೇಳುತ್ತಿರಲಿಲ್ಲ, ಇವರ ಮಾತನ್ನು ಅವರು ಕೇಳುತ್ತಿರಲಿಲ್ಲ. ಆಗ ಅಂತಹ ಪರಿಸ್ಥಿತಿ ಇತ್ತು.

ಮಾನ್ಯ ಸಭಾಪತಿಯವರೇ, ನಮ್ಮ ಸರ್ಕಾರ ಬಂದು ಎರಡು ತಿಂಗಳು ಕಳೆದು ಮೂರನೇ ತಿಂಗಳಿಗೆ ಕಾಲಿಟ್ಟಿದ್ದೇವೆ. ಆದರೆ, ನಮ್ಮ ಸರ್ಕಾರದಲ್ಲಿ ಏನಾಗಿದೆ ಎಂದರೆ, ಯಾರ ಹತ್ತಿರ ಮನೆಯ ದಾಖಲೆಗಳು ಇಲ್ಲವೋ, ಅಂತಹವರ ಮನೆ ಕುಸಿದಿದ್ದರೂ ಸಹ ಅವರಿಗೂ ಪರಿಹಾರ ಕೊಡುವಂತಹ ಕೆಲಸವನ್ನು ಮಾಡಿದೆ. ಸುಮಾರು 50 ಪರಿಹಾರ ಕೇಂದ್ರಗಳನ್ನು ನಿರ್ಮಿಸಿದ್ದೇವೆ. ಏಕೆಂದರೆ, ನಮಗೆ ಕಳೆದ ಬಾರಿ ಯಾವ ರೀತಿ ತೊಂದರೆ ಆಗಿತ್ತು, ಆ ಅನುಭವದ ಮೇಲೆ ಜಿಲ್ಲಾಧಿಕಾರಿಯವರು ಇರಬಹುದು, ಎಸ್.ಪಿ.,ಯವರು ಇರಬಹುದು, ನಮ್ಮ ಜಿಲ್ಲೆಯಲ್ಲಿ ಎಲ್ಲರೂ ಮಹಿಳಾ ಅಧಿಕಾರಿಗಳು ಇದ್ದಾರೆ. ನಾವು ಆ ಸಂದರ್ಭದಲ್ಲಿ ಇಷ್ಟೊಂದು ಮಳೆ ಬಂದು ಈ ರೀತಿ ಆಗಿದೆ, ಇವರು ಏನು ಸಹಾಯ ಮಾಡುತ್ತಾರೆ, ಇವರು ಏನು ಸಾಧನೆ ಮಾಡುತ್ತಾರೆಂದು ನಮ್ಮ ಮನಸ್ಸಿನಲ್ಲಿ ಇತ್ತು.,

(ಗೊಂದಲ)

**ಶ್ರೀಮತಿ ಎಸ್.ವೀಣಾ ಅಚ್ಚಯ್ಯ (ವಿಧಾನ ಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಮಹಿಳಾ ಅಧಿಕಾರಿಗಳು ಬಹಳ ಚೆನ್ನಾಗಿ ಕೆಲಸ ಮಾಡಿದ್ದಾರೆ. ಮಾನ್ಯ ಸದಸ್ಯರು ಮಹಿಳಾ ಅಧಿಕಾರಿಗಳನ್ನು ಸುಮ್ಮನೆ ಬೈಯುತ್ತಿದ್ದಾರೆ.,

(ಗೊಂದಲ)

**ಶ್ರೀ ಎಂ.ಪಿ.ಸುನೀಲ್ ಸುಬ್ರಮಣಿ:-** ಮಾನ್ಯ ಸಭಾಪತಿಯವರೇ, ಆದರೆ, ಅಲ್ಲಿನ ಜಿಲ್ಲಾಧಿಕಾರಿಯವರು, ಎಸ್.ಪಿ. ಮತ್ತು ಸಿ.ಎಸ್ ರವರು ಬಹಳ ಚೆನ್ನಾಗಿ ಕೆಲಸ ಮಾಡಿದರು. ಮಾನ್ಯ ಸದಸ್ಯರು ಕೋಪ ಮಾಡಿಕೊಳ್ಳುವುದು ಬೇಡ. ನಾನು ಅಧಿಕಾರಿಗಳನ್ನು ಹೊಗಳುತ್ತಿದ್ದೇನೆ. Irrigation ಬಗ್ಗೆ ಮಾನ್ಯ ಸದಸ್ಯರ ಪ್ರಶ್ನೆಯೊಂದಕ್ಕೆ ಇದೇ ಜಾಗದಲ್ಲಿ ಅದು ನಮಗೆ ಅನ್ವಯವಾಗುವುದಿಲ್ಲವೆಂದು Irrigation Minister ಉತ್ತರ ಕೊಟ್ಟರು. ಗದ್ದೆಗಳಿಗೆ ಮರಳು ಬಂದು ಬಿದ್ದಿತ್ತು. ಇದೇ ಜಾಗದಲ್ಲಿ ಉತ್ತರ ಕೊಟ್ಟರು. ಆಗ ನನಗೆ ಬಹಳ ಸಿಟ್ಟು ಬಂದಿತ್ತು. ಈಗ ಅದನ್ನು ಕ್ಲಿಯರ್ ಮಾಡುವಂತಹ ಕೆಲಸ ಆಗಿದೆ. ಏಕೆಂದರೆ, 13 ತಿಂಗಳಿನಿಂದ ಇನ್ನೂ ಕೆಲಸ ಆಗಿಲ್ಲ. ನಾವು ಆ ಸಂದರ್ಭದಲ್ಲಿ ಮನವಿ ಮಾಡಿದ್ದೇವೆ. ಅಲ್ಲಿಗೆ ಮಾನ್ಯ ಮುಖ್ಯ ಮಂತ್ರಿಯವರು ಮತ್ತು in-charge Minister ರವರು ಬಂದಿದ್ದರು. ಮರಗಳು ಬಿದ್ದಿದ್ದವು. ಮಾನ್ಯ ಸದಸ್ಯರ ಜಾಗದಲ್ಲಿಯೇ ಹೆಚ್ಚು ಮರಗಳು ಬಿದ್ದಿದ್ದವು. ನಾವು ಕೆಲವು ಮರಗಳನ್ನು ಮಾರಾಟ ಮಾಡುವುದಕ್ಕೆ ಮತ್ತು ಕೆಲವು ಮರಗಳನ್ನು ಉತ್ಪತ್ತಿ ಮಾಡುವುದಕ್ಕೆ ನೆಡುತ್ತೇವೆ. ಮಾನ್ಯ ಸದಸ್ಯರಾದ ಶ್ರೀ ಕೆ.ಟಿ.ಶ್ರೀಕಂಠೇಗೌಡರವರು ಕಾಫಿ ಬೆಳೆಗಾರರ ಬಗ್ಗೆ ಮಾತನಾಡಿದ್ದಾರೆ. ನನಗೆ ಬಹಳ ಸಂತೋಷವಾಯಿತು. ಏಕೆಂದರೆ, 30/40 ವರ್ಷಗಳ ಹಿಂದೆ ಕಾಫಿ ಬೆಳೆಗಾರರು ಎಂದರೆ ಬಹಳ ಬೆಲೆ ಇತ್ತು. ಇವತ್ತಿನ ದಿವಸ ಕಾಫಿ ಬೆಳೆಗಾರರು ಏನೂ ವ್ಯವಸ್ಥೆ ಮಾಡಿಕೊಳ್ಳುವುದಕ್ಕೆ ಆಗುವುದಿಲ್ಲ. ಏಕೆಂದರೆ, ಉತ್ಪತ್ತಿಯೇ ಇಲ್ಲ. ಆ ರೀತಿ ಪರಿಸ್ಥಿತಿ ಇವತ್ತಿನ ದಿವಸ ಇದೆ. ಮಾನ್ಯ ಶ್ರೀ ಕೆ.ಟಿ.ಶ್ರೀಕಂಠೇಗೌಡರವರಿಗೆ ಆ ರೀತಿಯ ಕಾಳಜಿ ಇರುವುದಕ್ಕೆ ನಾನು ಅವರಿಗೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಅವರು ಅಷ್ಟಾದರೂ ತಿಳಿದುಕೊಂಡಿದ್ದಾರೆ. ಆದರೆ, ಅವರೂ ಅವರಿಗೆ ಸಹಾಯ ಮಾಡಲಿಲ್ಲ. ಆ ಮರಗಳನ್ನು ತೆಗೆದುಕೊಳ್ಳೋಣವೆಂದು ಮಾನ್ಯ ಸದಸ್ಯರು ಡಿ.ಸಿ ಕಛೇರಿಯಲ್ಲಿ ಕೇಳಿಕೊಂಡರು. ಇಬ್ಬರು ಶಾಸಕರು ಕೇಳಿಕೊಂಡರು. ನಾವು ಸಹ ಕೇಳಿದೆವು. ಆದರೆ, ಕೊಡಲಿಲ್ಲ. ಈಗ ಆ ಮರಗಳು ಗೆದ್ದಲು ಹಿಡಿದು ಹೋಗಿವೆ. ಅದಕ್ಕೆ ಯಾರು ಸಹ ಅನುಮತಿ ಕೊಡಲಿಲ್ಲ. ಅರಣ್ಯ ಇಲಾಖೆಯು ಸಹ ಮರ ತೆಗೆಯುವುದಕ್ಕೆ ಬಿಡಲಿಲ್ಲ. ಸರ್ಕಾರದ ಮಾತನ್ನು ಸಹ ಕೇಳಲಿಲ್ಲ. ಈ ರೀತಿಯ ಪರಿಸ್ಥಿತಿ ಇತ್ತು.,

(ಗೊಂದಲ)

**ಶ್ರೀ ಟಿ.ಎ.ಶರವಣ (ವಿಧಾನ ಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಒಂದೇ ನಿಮಿಷ.,

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

(ಗೊಂದಲ)

**ಶ್ರೀ ಎಂ.ಪಿ.ಸುನೀಲ್ ಸುಬ್ರಮಣಿ:–** ಮಾನ್ಯ ಸಭಾಪತಿಯವರೇ, ಇನ್ನೂ ಎರಡು ನಿಮಿಷಗಳ ಕಾಲಾವಕಾಶ ಕೊಡಿ. ನಾನು ಮಾತನಾಡಿ ಮುಗಿಸುತ್ತೇನೆ. ನಾನು ರಾಜಕೀಯದ ಬಗ್ಗೆ ಮಾತನಾಡುವುದಿಲ್ಲ. ನಾನು ರಾಜಕೀಯದ ಬಗ್ಗೆ ಮಾತನಾಡುವಂತಿದ್ದರೆ ಮಾನ್ಯ ಹೆಚ್.ಡಿ.ಕುಮಾರಸ್ವಾಮಿಯವರಿಗೆ ಅಭಿನಂದನೆಗಳನ್ನು ಸಲ್ಲಿಸುತ್ತಿರಲಿಲ್ಲ.,

(ಗೊಂದಲ)

**ಶ್ರೀ ಟಿ.ಎ.ಶರವಣ:–** ಮಾನ್ಯ ಸಭಾಪತಿಯವರೇ, ಮಾನ್ಯ ಮುಖ್ಯ ಮಂತ್ರಿಗಳಾದ ಹೆಚ್.ಡಿ.ಕುಮಾರಸ್ವಾಮಿಯವರು ಆ ಭಾಗಕ್ಕೆ ಭೇಟಿ ಮಾಡಿ ಮೊದಲನೇ ಸಭೆ ಮಾಡಿದಂತಹ ಸಂದರ್ಭದಲ್ಲಿ ಬಿಜೆಪಿ ಸಚಿವರೇ ಅಲ್ಲಿ ಇದ್ದಾಗ, ಬಿಜೆಪಿ ಶಾಸಕರೇ ಈ ತರಹ ಯಾವ ಮುಖ್ಯಮಂತ್ರಿಯವರು ಇಲ್ಲಿಗೆ ಬಂದು ಸಭೆ ಮಾಡಿ ತಕ್ಷಣ ಪರಿಹಾರ ಕೊಟ್ಟಿಲ್ಲವೆಂದು ಹೇಳಿ ಅವರೇ ಅವರಿಗೆ ಅಭಿನಂದನೆಗಳನ್ನು ಸಲ್ಲಿಸಿದ್ದಾರೆ.,

(ಗೊಂದಲ)

**ಶ್ರೀ ಎಂ.ಪಿ.ಸುನೀಲ್ ಸುಬ್ರಮಣಿ:–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಆ ಮೇಲೆ ಮಾತನಾಡಲಿ, ನಮ್ಮ ಸಮಯದಲ್ಲಿ ಅವರು ಮಾತನಾಡುವುದು ಬೇಡ..

(ಗೊಂದಲ)

**ಶ್ರೀ ಟಿ.ಎ.ಶರವಣ:–** ಮಾನ್ಯ ಸಭಾಪತಿಯವರೇ, ಮಾನ್ಯ ಹೆಚ್.ಡಿ.ಕುಮಾರಸ್ವಾಮಿಯವರು ಅದನ್ನು ಚಾಲೆಂಜಾಗಿ ತೆಗೆದುಕೊಂಡು ಅಭಿವೃದ್ಧಿ ಕೆಲಸಗಳನ್ನು ಅಲ್ಲಿ ಮಾಡಿದ್ದಾರೆ. ಇವತ್ತು ಇವರು ಏಕೆ ಆರೋಪ ಮಾಡುತ್ತಿದ್ದಾರೆ?

(ಗೊಂದಲ)

**ಶ್ರೀ ಎಂ.ಪಿ.ಸುನೀಲ್ ಸುಬ್ರಮಣಿ:–** ಮಾನ್ಯ ಸಭಾಪತಿಯವರೇ, ನಾನು ಇವತ್ತು ಆಪಾದನೆ ಮಾಡುತ್ತಿಲ್ಲ.

(ಗೊಂದಲ)

**ಶ್ರೀ ಟಿ.ಎ.ಶರವಣ:–** ಮಾನ್ಯ ಸಭಾಪತಿಯವರೇ, ಅವತ್ತಿನ ದಿವಸ ಅವರೆಲ್ಲ ಬಹಳ ಖುಷಿಯಾಗಿದ್ದರು.

(ಗೊಂದಲ)

**ಶ್ರೀ ಎಂ.ಪಿ.ಸುನೀಲ್ ಸುಬ್ರಮಣಿ:–** ಮಾನ್ಯ ಸಭಾಪತಿಯವರೇ, ನಾವು ಆರೋಪ ಮಾಡುತ್ತಿಲ್ಲ. ಅವರು ಆರಂಭದಲ್ಲಿ ಬಹಳ ಚೆನ್ನಾಗಿ ಕೆಲಸಗಳನ್ನು ಮಾಡಿದ್ದಾರೆ. ತಾತ್ಕಾಲಿಕ ಕೆಲಸಗಳನ್ನು ಬಹಳ ವೇಗವಾಗಿ ಮಾಡಿದ್ದಾರೆ. ಆ ನಂತರ ಕೆಲಸಗಳಿಗೆ ಯಾವುದೇ ರೀತಿಯ ವೇಗ ಇರಲಿಲ್ಲ. ಈ ಬಾರಿ ಮೆಸ್ಕಾಂನ ಸುಮಾರು

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

2,460 ವಿದ್ಯುತ್ ಕಂಬಗಳು ಡ್ಯಾಮೇಜ್ ಆಗಿವೆ, ಸುಮಾರು 6 ಕಿಲೋಮೀಟರ್‌ಗಳಷ್ಟು ವಿದ್ಯುತ್ ಲೈನ್ ಡ್ಯಾಮೇಜ್ ಆಯಿತು, 117 transformers ಡ್ಯಾಮೇಜ್ ಆದವು. ಇವೆಲ್ಲಾ 15 ದಿವಸಗಳಲ್ಲಿ ರೆಡಿ ಆಯಿತು. ಮೆಸ್ಕಾಂ ಸಿಬ್ಬಂದಿಯವರು ಕಳೆದ ಬಾರಿ ಮತ್ತು ಈ ಬಾರಿಯೂ ಸಹ ಬಹಳ ಚೆನ್ನಾಗಿ ಕೆಲಸ ಮಾಡಿದ್ದಾರೆ. ಈ ರೀತಿಯ ಕೆಲಸಗಳನ್ನು ಮಾಡಿದರೆ ನಾವು ಅವರನ್ನು ಒಪ್ಪುತ್ತೇವೆ, ಅವರನ್ನು ಅಭಿನಂದಿಸುತ್ತೇವೆ. ಏಕೆಂದರೆ, ವಿದ್ಯುತ್ ಬಹಳ ಮುಖ್ಯವಾದುದು, ಅದನ್ನು ಆದಷ್ಟು ಬೇಗ ಕೊಟ್ಟರು. ಆದರೆ, ಬೇರೆ ರೀತಿಯ ಕೆಲಸಗಳು ಅಂದರೆ, ಮನೆಗಳನ್ನು ಕಟ್ಟಿ ಕೊಡುವಂತಹ ಕೆಲಸ ಆಗಬೇಕಾಗಿತ್ತು. ಎಲ್ಲರೂ ಕಣ್ಣೀರು ಹಾಕುತ್ತಿದ್ದಾರೆ. ಒಬ್ಬರು ಸುಮಾರು 50 ಲಕ್ಷ ರೂಪಾಯಿಗಳ ಮನೆಯನ್ನು ಕಟ್ಟಿಕೊಂಡಿದ್ದರು. ಆ ಮನೆಯು ಸಹ ಕುಸಿದು ಹೋಯಿತು. ನಂತರ ಅವರು ಒಂದೇ ಬೆಡ್‌ರೂಂ ಮನೆಯಲ್ಲಿ ವಾಸ ಮಾಡುವುದಕ್ಕೆ ತಯಾರು ಇದ್ದರು. ಆದರೆ, ನಮ್ಮ ಕೈಯಲ್ಲಿ ಅವರಿಗೆ ಮನೆ ಕಟ್ಟಿಕೊಡುವುದಕ್ಕೆ ಆಗುತ್ತಿಲ್ಲ. ಆದರೆ, ಗ್ರಾಮ ಪಂಚಾಯಿತಿ ಸದಸ್ಯರು ಇರಬಹುದು, ಶಾಸಕರು ಇರಬಹುದು, ಲೋಕಸಭಾ ಸದಸ್ಯರು ಇರಬಹುದು, ನಾವು ಇಬ್ಬರು ಎಂ.ಎಲ್.ಸಿ ಗಳು ಇರಬಹುದು ಬಹಳಷ್ಟು ಕಷ್ಟಪಟ್ಟರೂ ಸಹ ಆ ಕೆಲಸಗಳು ವೇಗಕ್ಕೆ ಬರಲಿಲ್ಲ. ಆ ಕೆಲಸಗಳು ವೇಗಕ್ಕೆ ಬಂದಿದ್ದರೆ, ನಾನು ಮಾನ್ಯ ಸದಸ್ಯರಾದ ಶ್ರೀ ಕೆ.ಟಿ.ಶ್ರೀಕಂಠೇಗೌಡರು ಹೇಳಿದಂತೆ ಕೇಳುತ್ತಿದ್ದೆ, ನಾನು ಅವರಿಗೆ 100 ನಮಸ್ಕಾರಗಳನ್ನು ಹಾಕುತ್ತಿದ್ದೆ. ಮಾನ್ಯ ಸದಸ್ಯರು ಆಗಾಗ ನಮ್ಮ ಜಿಲ್ಲೆಗೆ ಭೇಟಿ ಕೊಡುತ್ತಿದ್ದರು, ನಮ್ಮ ಜಿಲ್ಲೆಯ ಬಗ್ಗೆ ವಿಚಾರ ಮಾಡುತ್ತಿದ್ದರು. ಹಾಗಾಗಿ ನಾನು ಅವರನ್ನು ನೆನಪು ಮಾಡಿಕೊಳ್ಳುತ್ತೇನೆ. ಆದರೆ, ಕೆಲಸ ವೇಗವಾಗಿ ಆಗಿಲ್ಲ. ಆಗ ಸಮ್ಮಿಶ್ರ ಸರ್ಕಾರ ಇದ್ದಿದ್ದರಿಂದ ಒಂದಕ್ಕೊಂದು ಹೊಂದಿಕೊಳ್ಳುತ್ತಿರಲಿಲ್ಲ. ಮಾನ್ಯ ಸಭಾಪತಿಯವರು ನನಗೆ ಸಮಯ ಕೊಟಿದ್ದಾರೆ. ಹಾಗಾಗಿ, ನಾನು ಅವರಂತೆ ಸಮಯವನ್ನು ಎಳೆಯುವುದಿಲ್ಲ. ನಾವೆಲ್ಲರೂ ಒಟ್ಟಾಗಿ ಕೆಲಸ ಮಾಡೋಣ. ಆದರೆ, ನಾವು ಮಾಡಿದಂತಹ ಒಳ್ಳೆಯ ಕೆಲಸಗಳನ್ನು ಅವರು ಒಪ್ಪಿಕೊಳ್ಳಬೇಕು. ನಾವು ಯಾವ ಒಳ್ಳೆಯ ಕೆಲಸವನ್ನು ಮಾಡುತ್ತೇವೆ ಅಂತಹ ಕೆಲಸಕ್ಕೆ ಅವರು 'ಶಹಬಾಷ್‌ಗಿರಿ'ಯನ್ನು ಕೊಡಬೇಕು. ಸುಮ್ಮ-ಸುಮ್ಮನೆ ಅದು ಆಗಿಲ್ಲ, ಇದು ಆಗಿಲ್ಲವೆಂದು ಅವರು ನಮಗೆ ದಾರಿ ತಪ್ಪಿಸುವಂತಹ ಕೆಲಸ ಮಾಡಬಾರದು. ನಮ್ಮ ವಿರೋಧ ಪಕ್ಷದ ನಾಯಕರು ಯಾವ ರೀತಿ ಸಹಕಾರ ಕೊಡುತ್ತಾರೆ, ಆ ರೀತಿ ನಾವು ಮಾಡಿಕೊಳ್ಳಬೇಕು. ಅವರು ಪ್ರತಿ ಸಂದರ್ಭದಲ್ಲಿಯೂ ಸಹ ಎಲ್ಲರೂ ಒಟ್ಟಿಗೆ ಕೆಲಸ ಮಾಡೋಣವೆಂದು ಹೇಳುತ್ತಾರೆ. ಅವರು ಹೊರಗಡೆಯೂ ಸಹ ಅದೇ ರೀತಿ ನಡೆದುಕೊಳ್ಳುತ್ತಾರೆ. ಅವರ ಬಗ್ಗೆ ನನಗೆ ತುಂಬ ಗೌರವ ಇದೆ. ಅವರು ಸಚಿವರಾಗಿದ್ದಂತಹ ಸಂದರ್ಭದಲ್ಲಿಯೂ ಅವರು ಕೊಟ್ಟಂತಹ ಮಾತನ್ನು ಉಳಿಸಿಕೊಳ್ಳುತ್ತಿದ್ದರು.

**(ಮುಂದು .....)**

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

(151)11–10–2019(1–30)ಎಂವಿ–ಆರ್‌ಎನ್

**(ಸಭಾಪತಿಯವರ ಉಪಸ್ಥಿತಿ)**

**ಶ್ರೀ ಸುನೀಲ್ ಸುಬ್ರಮಣಿ ಎಂ.ಪಿ. (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) (ಮುಂದು...):–**

ಆ ರೀತಿಯಾಗಿ ಕೆಲಸ ಮಾಡೋಣ, ಸುಮ್ಮನೆ ನಾಟಕಕ್ಕೆ ಮತ್ತು ತೋರಿಕೆಗೆ ಹಾಗೂ ಟಿ.ವಿ.ಯಲ್ಲಿ ಪ್ರಚಾರ ಬರಲಿ ಎಂದು ಕೂಗಾಡುವುದು ದಯವಿಟ್ಟು ಬೇಡ. ಕೊಡಗು ಜಿಲ್ಲೆ ಒಂದೇ ಅಲ್ಲ. ಇವತ್ತಿನ ದಿವಸ ಚಿಕ್ಕಮಗಳೂರು ಜಿಲ್ಲೆ ಮತ್ತು ದಕ್ಷಿಣ ಕನ್ನಡ ಜಿಲ್ಲೆ ಸಹ ಧ್ವಂಸವಾಗಿದೆ. ಅದರ ಜೊತೆಗೆ ಸುಮಾರು ಹತ್ತು ಜಿಲ್ಲೆಗಳಲ್ಲಿ ತುಂಬಾ ಹಾನಿಯಾಗಿದೆ. ಆದುದರಿಂದ ಎಲ್ಲರೂ ಒಟ್ಟಾಗಿ ಕೆಲಸ ಮಾಡೋಣವೆಂದು ಹೇಳುತ್ತಾ, ನನಗೆ ಮಾತನಾಡಲು ಅವಕಾಶ ಕೊಟ್ಟ ಎಲ್ಲರಿಗೂ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

**ಶ್ರೀ ಬಸವರಾಜ ಪಾಟೀಲ್ ಇಟಗಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ನನಗೆ ಮಾತನಾಡಲು ಅವಕಾಶ ಕೊಟ್ಟಿರುವುದಕ್ಕೆ ತಮಗೆ ಧನ್ಯವಾದಗಳು. ಈಗ ಸಾಕಷ್ಟು ಹಿರಿಯ ಸದಸ್ಯರುಗಳು ಮಾತನಾಡಿದ್ದಾರೆ. ನಾನು ಈ ವಿಷಯದ ಬಗ್ಗೆ ಕೇವಲ ಅಂಕಿ–ಅಂಶಗಳನ್ನು ಮತ್ತೆ ಪುನರಾವರ್ತನೆಗೊಳಿಸುವುದಾಗಲಿ ಅಥವಾ ಮರುಕಳಿಸುವುದಾಗಲಿ ಮಾಡದೆ, ಅದನ್ನು ಬಿಟ್ಟು, ಕೆಲವು ವಿಷಯಗಳನ್ನು ಮಾತ್ರ ಸರ್ಕಾರದ ಗಮನಕ್ಕೆ ತರಬಯಸುತ್ತೇನೆ.

ಮೊದಲನೆಯದಾಗಿ ಕೊಂಕಣ ಪ್ರದೇಶ ಮತ್ತು Western Ghats ಗಳಲ್ಲಿ ಮಳೆಯ ವಿಕೋಪದಿಂದ ಶೇಕಡಾ 70ರಷ್ಟು ನಷ್ಟವಾಗಿದೆ. 2009ರಲ್ಲೂ ಸಹ ಮಳೆ ಬಂದಿತ್ತು. ಆಗ Western Ghats ನ ಕೊಂಕಣ ಪ್ರದೇಶದಲ್ಲಿ ನೀರು ಬರುತ್ತಿತ್ತು, ಅದರ ಜೊತೆಗೆ ಬೆಳಗಾವಿ, ಬಾಗಲಕೋಟೆ ಮತ್ತು ಬಿಜಾಪುರದಲ್ಲಿ ಈಗ ಬಂದಿರುವ ಮಳೆಗಿಂತ ಹೆಚ್ಚಿನ ಪ್ರಮಾಣದಲ್ಲಿ ಮಳೆ ಬಂದಿತ್ತು. ಇವತ್ತು ಆಲಮಟ್ಟಿಯಲ್ಲಿ ಒಂದು ದಿನಕ್ಕೆ 6.36 ಲಕ್ಷ ಕ್ಯೂಸೆಕ್ಸ್ ನೀರನ್ನು ನಿಗದಿಪಡಿಸಿ ಹೊರಗೆ ಬಿಟ್ಟಿರುವುದು. ಆದರೆ, 2009ರಲ್ಲಿ ದಿನಕ್ಕೆ ಸುಮಾರು 7.5 ಲಕ್ಷ ಕ್ಯೂಸೆಕ್ಸ್ ನೀರು ಹೊರಗೆ ಹೋಗುತ್ತಿತ್ತು. ಕಳೆದ ಬಾರಿ ಜಾಸ್ತಿ ಪ್ರಮಾಣದಲ್ಲಿ ಇದ್ದರೂ ಕೂಡ ಇಷ್ಟೊಂದು ನಷ್ಟವಾಗಿರಲಿಲ್ಲ. ಆದರೆ, ಈ ಬಾರಿ ನಷ್ಟವಾಗಿದೆ. ಇದಕ್ಕೆ ಕಾರಣವಿದೆ. ಇದನ್ನು ಸರ್ಕಾರ ಅತ್ಯಂತ ಗಂಭೀರವಾಗಿ ಪರಿಗಣಿಸಬೇಕೆಂದು ತಮ್ಮ ಮುಖಾಂತರ ಮನವಿ ಮಾಡುತ್ತೇನೆ. ಕಾರಣವೇನೆಂದರೆ, ಇವುಗಳೆಲ್ಲವೂ ಸಹ ಪ್ರಕೃತಿ ವಿಕೋಪದಿಂದ ಆಗಿರುವುದು. ಈಗ ಹೆಚ್ಚು ಮಳೆ ಬರುತ್ತದೆ ಅದರಿಂದ ನೀರು ಹೆಚ್ಚು ಮತ್ತು ಕಡಿಮೆ ಆಗುತ್ತದೆ. ಆದರೆ, ಕೊಯ್ನಾ ಡ್ಯಾಂ, ಆಲಮಟ್ಟಿ ಡ್ಯಾಂ, ನಾರಾಯಣಪುರ ಡ್ಯಾಂ ಮತ್ತು ಗುಗಲ್ ಬ್ಯಾರೇಜ್ ಆಮೇಲೆ ಜುರಾಲಾ ಪ್ರಾಜೆಕ್ಟ್‌ಗಳ ಗೇಟ್‌ಗಳು ಏನಿದೆ ಅವುಗಳನ್ನು ಯಾವ ರೀತಿ ರೆಗ್ಯುಲೇಟ್ ಮಾಡಬೇಕು ಮತ್ತು ಯಾವಾಗ ಎಷ್ಟು ನೀರನ್ನು ಬಿಡುಗಡೆ ಮಾಡಬೇಕು ಮತ್ತು ಯಾವಾಗ ನಿಯಂತ್ರಣ ಮಾಡಬೇಕು ಎಂಬುದು

ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಬಹಳ ಮುಖ್ಯವಾಗಿದೆ. ಇದನ್ನು ನೀರಾವರಿ ಇಲಾಖೆಯವರು ಅತ್ಯಂತ ಗಮನವಿಟ್ಟು ನೋಡಿಕೊಳ್ಳಬೇಕು. ಮಾನ್ಯ ಸಭಾನಾಯಕರು ನಾನು ಹೇಳುವುದನ್ನು ಬರೆದುಕೊಳ್ಳಲಿ. ಇವುಗಳನ್ನು ಮಾಡುವಂಥದ್ದು ಬಹಳ ಮುಖ್ಯವಾಗಿದೆ.

ದಿನಾಂಕ: 8 ರಿಂದ 10ನೇ ತಾರೀಖಿನವರೆಗೆ ಮಳೆ ಬರುತ್ತಿತ್ತು ಮತ್ತು ಕೊಯ್ನಾ ಡ್ಯಾಂನಿಂದ ನಮಗೆ ನೀರು ಬಂತು. ಆಲಮಟ್ಟಿ ಡ್ಯಾಂನಲ್ಲಿ ರೆಗ್ಯುಲೇಟ್ ಮಾಡುವ ಸಮಯಕ್ಕೆ ಒಂದೇ ದಿವಸಕ್ಕೆ 519.6 ಮೀಟರ್ ಇರುವುದನ್ನು 513 ಮೀಟರ್‌ಗೆ ಇಳಿಸಿ, ನೀರನ್ನು ಹೊರಕ್ಕೆ ಬಿಟ್ಟರು. ಕೊಯ್ನಾ ಡ್ಯಾಂನಿಂದ 2 ಲಕ್ಷ ಕ್ಯೂಸೆಕ್ಸ್ ನೀರು ಬರುತ್ತಿತ್ತು. ಆದರೆ, ಒಂದೇ ಬಾರಿಗೆ 6 ಲಕ್ಷ ಕ್ಯೂಸೆಕ್ಸ್ ನೀರನ್ನು ಬಿಟ್ಟರು. ಅದೇ ರೀತಿ ಇವರು 20 ರಿಂದ 30 ಸಾವಿರ ಕ್ಯೂಸೆಕ್ಸ್ ನೀರು ಬಿಡುವುದನ್ನು ಬಿಟ್ಟು, ಒಂದೇ ದಿನಕ್ಕೆ 5 ರಿಂದ 6 ಲಕ್ಷ ಕ್ಯೂಸೆಕ್ಸ್ ನೀರನ್ನು ಹೊರಕ್ಕೆ ಬಿಟ್ಟರು. ಆ ಕಾರಣದಿಂದ ನಷ್ಟ ಜಾಸ್ತಿಯಾಯಿತು.

**ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ (ಸರ್ಕಾರದ ಮುಖ್ಯ ಸಚೇತಕರು):–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಬಹಳ ವಿಶೇಷವಾದ ವಿಷಯವನ್ನು ಪ್ರಸ್ತಾಪ ಮಾಡುತ್ತಿದ್ದಾರೆ. ಇದು ಮಹಾರಾಷ್ಟ್ರದ ಪಶ್ಚಿಮ ಘಟ್ಟದಲ್ಲಿ ಆಗಿರುವಂತಹ ಮಳೆ, ಮಹಾರಾಷ್ಟ್ರದಲ್ಲಿ ಒಟ್ಟು 13 ಜಲಾಶಗಳಲ್ಲಿ ಇರುವಂತಹ ಕೃಷ್ಣ, ದೂದ್‌ಗಂಗಾ, ವೇದಗಂಗಾ, ಪಂಚಗಂಗಾ, ಮಲಪ್ರಭ ಮತ್ತು ಘಟಪ್ರಭ ಇವೆಲ್ಲವೂ ಸಹ ಮಹಾರಾಷ್ಟ್ರದ ಪಶ್ಚಿಮ ಘಟ್ಟದಲ್ಲಿ ಹುಟ್ಟುವಂತಹ ನದಿಗಳು. ಆ ಎಲ್ಲಾ ನದಿಗಳು ಸಹ ನಮ್ಮ ಕೃಷ್ಣಾ ನದಿಗೆ ಬಂದು ಸೇರುತ್ತವೆ. ಹೀಗಾಗಿ ಸುಮಾರು ಹತ್ತು ದಿನಗಳಲ್ಲಿ ಐದು ಲಕ್ಷ ಕ್ಯೂಸೆಕ್ಸ್‌ಗಿಂತ ಹೆಚ್ಚು ನೀರು ಕೃಷ್ಣೆಗೆ ಹರಿದ ಕಾರಣ, ಈ ರೀತಿಯ ದೊಡ್ಡ ಪ್ರವಾಹವನ್ನು ಎದುರಿಸುವಂತಹ ಸಂದರ್ಭ ನಮಗೆ ಬಂದು ಒದಗಿತು. ಇವತ್ತು ಈ ನೀರನ್ನು ನಿರ್ವಹಣೆ ಮಾಡುವಂತಹ ವಿಚಾರದಲ್ಲಿ ಸರ್ಕಾರ, ನಾನು ಮಾತನಾಡುವಂತಹ ಸಂದರ್ಭದಲ್ಲಿ ಅದರ ಬಗ್ಗೆ ಹೇಳುತ್ತೇನೆ. ಕರ್ನಾಟಕ ಮತ್ತು ಮಹಾರಾಷ್ಟ್ರ ಎರಡೂ ರಾಜ್ಯಗಳು ಕೃಷ್ಣಾ ಮತ್ತು ಉಳಿದ ನದಿಗಳನ್ನು ನಿರ್ವಹಣೆ ಮಾಡುವುದಕ್ಕೆ ಜಂಟಿ ಸಮಿತಿಯನ್ನು ಮಾಡಬೇಕು ಎಂಬುದು ನಮ್ಮ ಬೇಡಿಕೆ ಇದೆ. ಮಾನ್ಯ ಮುಖ್ಯಮಂತ್ರಿಗಳು ಬೆಳಗಾವಿಗೆ ಬಂದಂತಹ ಸಂದರ್ಭದಲ್ಲಿ ನಾವು ಆ ಭಾಗದ ಶಾಸಕರಾಗಿ ಅದಕ್ಕೆ ಸಂಬಂಧಪಟ್ಟಂತೆ ಸರ್ಕಾರಕ್ಕೆ ಮನವಿಯನ್ನು ಸಲ್ಲಿಸಿದ್ದೇವೆ ಮತ್ತು ವಿನಂತಿಯನ್ನು ಮಾಡಿದ್ದೇವೆ. ನಾವು ಈ ನದಿ ನೀರನ್ನು ನಿರ್ವಹಣೆ ಮಾಡುವುದಕ್ಕೆ ಅಧಿಕಾರಿಗಳ ಸಮಿತಿಯಾಗಬೇಕು, ಇದರಿಂದ ಮಹಾರಾಷ್ಟ್ರ ಮತ್ತು ಕರ್ನಾಟಕದ ನದಿ ನೀರಿನ ನಿರ್ವಹಣೆ ಆಗದೇ ಇದ್ದರೆ, ಪ್ರತಿಭಾರಿಯೂ ಸಹ ಈ ರೀತಿಯ ತೊಂದರೆಯನ್ನು ಈ ಭಾಗದಲ್ಲಿರುವಂತಹ ಜನರು ಅನುಭವಿಸುತ್ತಾರೆ. ಹಾಗಾಗಿ ಕೃಷ್ಣಾ ನದಿ ನೀರನ್ನು ನಿರ್ವಹಣೆ ಮಾಡಬೇಕೆಂಬುದು ನಮ್ಮ ವಿನಂತಿ.

**ಶ್ರೀ ಬಸವರಾಜ ಪಾಟೀಲ್ ಇಟಗಿ:–** ಮಾನ್ಯ ಸಭಾಪತಿಯವರೇ, ಎಲ್ಲವನ್ನೂ ಸಹ ಮಾನ್ಯ ಸದಸ್ಯರೇ ಮಾತನಾಡಿದರೆ, ನಾನು ಏನನ್ನು ಮಾತನಾಡಲಿ.

**ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ:–** ಮಾನ್ಯ ಸಭಾಪತಿಯವರೇ, ನಾನು ಅದರ background ಅನ್ನು ಹೇಳಿದ್ದೇನೆ ಅಷ್ಟೇ.

**ಶ್ರೀ ಬಸವರಾಜ ಪಾಟೀಲ್ ಇಟಗಿ:–** ಮಾನ್ಯ ಸಭಾಪತಿಯವರೇ, ನಾನು ಹತ್ತು ನಿಮಿಷ ಮಾತನಾಡುತ್ತೇನೆ. ಈಗ ತೌಡು ಕುಟ್ಟಿದ ಹಾಗೆ ಆಗುತ್ತದೆ. ಏಕೆಂದರೆ, ಹೇಳುವುದನ್ನೇ ಹೇಳಿದಂತೆ ಆಗುತ್ತದೆ. ನಾನು ಮಾನ್ಯ ಕೆ.ಟಿ.ಶ್ರೀಕಂಠೇಗೌಡರ ಹಾಗೆ ಮಾಸ್ಟರ್ ಅಲ್ಲ. ನನಗೆ 45 ನಿಮಿಷ ಮಾತನಾಡುವುದಕ್ಕೆ ಬರುವುದಿಲ್ಲ. ಈಗ ಮುಖ್ಯವಾದ ಪಾಯಿಂಟ್ಸ್ ಅಂದರೆ ನಮ್ಮ ಸಮಸ್ಯೆಗಳು ಏನಿದೆ ಎಂಬುದು. ನಾನು ಸಹ ಕೃಷ್ಣಾ ನದಿ ದಂಡೆಯ ಮೇಲೆ ಇರುವಂತಹ ಒಬ್ಬ ರೈತ. ಇಲ್ಲಿ 2005, 2009 ಮತ್ತು 2019ರಲ್ಲಿ ಮೂರು ಬಾರಿ ಪ್ರವಾಹವಾಗಿದೆ. ಈ ಮೂರು ಸಂದರ್ಭದಲ್ಲಿ, due to non-management of water, seventy percent of loss has been caused to State. ಈ ನೆರೆ ಹಾವಳಿಯಿಂದ ಏನು ಬಂದಿದೆ. ಇದಕ್ಕೆ ನೀವು ಒಂದು ಸಮಿತಿಯನ್ನು ಮಾಡಿ. ಯಾವ ದಿನ ಯಾವ ಪ್ರದೇಶದಲ್ಲಿ ಎಷ್ಟು ಇಂಚಿನ ಮಳೆಯಾಗಿದೆ ಮತ್ತು ಕೊಂಕಣ ಪ್ರದೇಶದಲ್ಲಿ ಎಷ್ಟು ಮಳೆಯಾಗುತ್ತದೆ ಮತ್ತು ಬ್ಯಾರೇಜ್‌ಗಳಲ್ಲಿ ಎಷ್ಟು ನೀರನ್ನು ಬಿಡುತ್ತಾರೆ, ನಮ್ಮ ಬ್ಯಾರೇಜ್‌ಗಳ ಸಾಮರ್ಥ್ಯ ಏನಿದೆ ಮತ್ತು ಬ್ಯಾರೇಜ್‌ಗಳನ್ನು ಯಾವ ರೀತಿ ರೆಗ್ಯುಲೇಟ್ ಮಾಡಬೇಕು ಎಂಬುದು ಸಹಾ ಬಹಳ ಮುಖ್ಯವಾದ ವಿಷಯವಾಗಿದೆ. ಇದರ ಬಗ್ಗೆ ಸರ್ಕಾರ ಹೆಚ್ಚಿಗೆ ಗಮನವನ್ನು ಕೊಡುತ್ತಿಲ್ಲ. ನಾನು ಒಂದು ಉದಾಹರಣೆಯನ್ನು ಹೇಳುತ್ತೇನೆ. ಮಾನ್ಯ ಹೆಚ್.ಕೆ.ಪಾಟೀಲ್‌ರವರು ಇದ್ದಾಗ ನಮ್ಮ ಊರಿನ ಹತ್ತಿರ ನೂರು ಕೋಟಿ ರೂಪಾಯಿಗಳ ವೆಚ್ಚದಲ್ಲಿ ಗುಗಲ್ ಬ್ರಿಜ್ ಕಮ್ ಬ್ಯಾರೇಜ್ ಅನ್ನು ನಿರ್ಮಾಣ ಮಾಡಿಸಿದರು. 2009ರಲ್ಲಿ ಪ್ರವಾಹ ಬಂದಾಗ ಅಲ್ಲಿ ಇನ್ನು ಸಹ ಗೇಟ್‌ಗಳನ್ನು ಅಳವಡಿಸಿರಲಿಲ್ಲ. ಆ ಸಂದರ್ಭದಲ್ಲಿ ಸುಮಾರು 7.60 ಲಕ್ಷ ಕ್ಯೂಸೆಕ್ಸ್ ನೀರು ಹೊರಗೆ ಬಿಡಲಾಯಿತು. ಈ ಬಾರಿ ಅದೇ ಗುಗಲ್ ಬ್ಯಾರೇಜ್‌ನಲ್ಲಿ ಅಲಮಟ್ಟಿ ಡ್ಯಾಂ ಮತ್ತು ಬಸವಸಾಗರ ಡ್ಯಾಂನಿಂದ ಸುಮಾರು 6.36 ಲಕ್ಷ ಕ್ಯೂಸೆಕ್ಸ್ ನೀರನ್ನು ಹೊರಗೆ ಬಿಟ್ಟಾಗ ಸುಮಾರು 14 ಗೇಟ್‌ಗಳನ್ನು ಮೇಲಕ್ಕೆ ಎತ್ತಲಾರದಂತಹ ಪರಿಸ್ಥಿತಿ ಇತ್ತು. ಏಕೆಂದರೆ ಸರಿಯಾಗಿ ಅವುಗಳ ನಿರ್ವಹಣೆಯಾಗಿರಲಿಲ್ಲ. 2009ರಿಂದ 2019ರ ತನಕ ಎಷ್ಟು rope cut ಆಗಿವೆ, ಎಷ್ಟು greasing ಆಗಿದೆ ಮತ್ತು ಆ rails ಏನಾಗಿದೆ ಎಂದು ಅದನ್ನು ಯಾರೂ ಸಹ ನೋಡುತ್ತಿಲ್ಲ. ಅದಕ್ಕೆ 14 village submerge ಆಗಿ ಸರ್ಕಾರ ಅದರ ಹೊಣೆ ಹೊರುವಂತಹ ಪರಿಸ್ಥಿತಿ ನಿರ್ಮಾಣವಾಗಿದೆ. ಇವತ್ತು ಬೆಳಗಾವಿ ಜಿಲ್ಲೆಯಲ್ಲಿ ಮಳೆ ಬಂದರೆ ಸಮಸ್ಯೆಯಾಗುವುದಿಲ್ಲ. ಮಾನ್ಯ ಸದಸ್ಯರು ಹೇಳಿದಂತೆ ದೂದ್‌ಗಂಗಾ, ವೇದಗಂಗಾ, ಪಂಚಗಂಗಾ, ಕೃಷ್ಣಾ ಮತ್ತು ಭೀಮ ಇವುಗಳಿಗೆ ಮಹಾರಾಷ್ಟ್ರದಿಂದ ನೀರು ಬರುತ್ತದೆ, ಅದನ್ನು ನಾವು ಸರಿಯಾಗಿ ನಿರ್ವಹಣೆ ಮಾಡದ ಕಾರಣಕ್ಕೆ ನಮ್ಮ ರಾಜ್ಯದಲ್ಲಿ ನೆರೆ ಬಂದಿರುವಂಥದ್ದು. ಅದರಲ್ಲೂ ವಿಶೇಷವಾಗಿ ಈಗ ಎಲ್ಲರ ತಲೆಯಲ್ಲಿ ಏನಿದೆ

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಎಂದರೆ, ಕೊಯ್ನಾ ಡ್ಯಾಂನಿಂದ ನೀರು ಬಿಟ್ಟ ಕೂಡಲೇ ಬೆಳಗಾವಿ, ಬಿಜಾಪುರ ಮತ್ತು ಬಾಗಲಕೋಟೆ ಇವುಗಳಿಗಿಂತ ಹೆಚ್ಚಾಗಿ ನೆರೆ ಬರುವಂಥದ್ದು ರಾಯಚೂರು ಮತ್ತು ಯಾದಗಿರಿ ಜಿಲ್ಲೆಗಳಿಗೆ. ಏಕೆಂದರೆ ಅಲ್ಲಿ ಬರುವಂತಹ ನೀರು 3 ರಿಂದ 4 ಲಕ್ಷ ಕ್ಯೂಸೆಕ್ಸ್ ಸಣ್ಣ ಪ್ರಮಾಣದಲ್ಲಿ ಇರುತ್ತದೆ.

**(ಈ ಹಂತದಲ್ಲಿ ಪ್ಯಾನಲ್ ಸದಸ್ಯರಾದ ಶ್ರೀ ಕೆ.ಟಿ.ಶ್ರೀಕಂಠೇಗೌಡರು ಸಭಾಪತಿಯವರ ಪೀಠವನ್ನು ಅಲಂಕರಿಸಿದರು)**

ಆದರೆ, ಅವುಗಳೆಲ್ಲ ಜೋಡಿಯಾಗಿ ರಾಯಚೂರು ಜಿಲ್ಲೆಯ Kadanur Village Barrage ನ ಶಕ್ತಿನಗರಕ್ಕೆ ಬರುವಷ್ಟರಲ್ಲಿ ಅದು ಸುಮಾರು ಹತ್ತು ಲಕ್ಷ ಕ್ಯೂಸೆಕ್ಸ್ ನೀರಾಗಿರುತ್ತದೆ. ನನ್ನ ಮಾಹಿತಿಯ ಪ್ರಕಾರ subject to correction, 2009ರಲ್ಲಿ one point of time 14 ಲಕ್ಷ ಕ್ಯೂಸೆಕ್ಸ್ water discharge ಜುರಾಲಾ ಪ್ರಾಜೆಕ್ಟ್‌ನಿಂದ ಇತ್ತು. ಅದು ಆಂಧ್ರಪ್ರದೇಶದ ಒಂದು ಪ್ರಾಜೆಕ್ಟ್. ಇವತ್ತು ಮಳೆ ಬಂದು ನೆರೆ ಬಂದಂತಹ ಸಂದರ್ಭದಲ್ಲಿ ಆಂಧ್ರಪ್ರದೇಶ ಸರ್ಕಾರ ಇರಬಹುದು, ಮಹಾರಾಷ್ಟ್ರ ಸರ್ಕಾರ ಇರಬಹುದು ಮತ್ತು ಕರ್ನಾಟಕ ಸರ್ಕಾರ ಇರಬಹುದು, ಇವುಗಳಲ್ಲಿ ಒಂದು co-ordination ಇರಬೇಕು. ನಮಗೆ ಎಷ್ಟು ಕ್ಯೂಸೆಕ್ಸ್ ನೀರು ಬಂದಂತಹ ಸಂದರ್ಭದಲ್ಲಿ ನಾವು ಎಷ್ಟು ನೀರನ್ನು ಬಿಡಬೇಕು ಮತ್ತು ಹೇಗೆ ರೆಗ್ಯುಲೇಟ್ ಮಾಡಬೇಕು ಮತ್ತು ಎಷ್ಟು ನೆರೆ ಹಾವಳಿಯನ್ನು ಕಡಿಮೆ ಮಾಡಬಹುದು ಎಂಬುದನ್ನು ರಾಜ್ಯ ಸರ್ಕಾರ ಮಾಡಿದಾಗ ಮಾತ್ರ, ಮುಂಬರುವ ದಿನಗಳಲ್ಲಿ ಅದನ್ನು ನಿಯಂತ್ರಣಕ್ಕೆ ತರುವಂಥದ್ದು, ನಷ್ಟವನ್ನು ಕಡಿಮೆ ಮಾಡುವಂತಹ ಕೆಲಸ ಆಗುತ್ತದೆ ಎನ್ನುವಂತಹ ಮಾತನ್ನು ತಮ್ಮ ಮುಖಾಂತರ ಸರ್ಕಾರಕ್ಕೆ ತಿಳಿಸಲು ಬಯಸುತ್ತೇನೆ.

ಈಗ ಸುಮಾರು ಸದಸ್ಯರುಗಳು ಮನೆಗಳು ಹಾಳಾಗಿರುವ ಬಗ್ಗೆ ಮಾತನಾಡಿದ್ದಾರೆ. ನಾನು ಮನೆಗಳ ಬಗ್ಗೆ ಜಾಸ್ತಿ ಹೇಳುವುದಿಲ್ಲ. ಈಗ ಸರ್ಕಾರದವರು ಅಂಕಿ–ಅಂಶಗಳನ್ನು ಮಾಡಿ 'ಎ' 'ಬಿ' ಮತ್ತು 'ಸಿ' ಕೆಟಗರಿ ಎಂದು ಮಾಡಿದ್ದಾರೆ. ನನ್ನ ಮನವಿ ಏನೆಂದರೆ, ಈ ಮೊದಲಿನ ಸರ್ಕಾರ ಕೊಡಗಿನಲ್ಲಿ ಮನೆಗಳನ್ನು ಕಟ್ಟಿಕೊಳ್ಳುವುದಕ್ಕೆ ಸುಮಾರು ಒಂಭತ್ತುವರೆ ಲಕ್ಷ ರೂಪಾಯಿಗಳನ್ನು ನೀಡಿದ್ದಾರೆ. ಆದರೆ ಈಗ 5,00,000/– ರೂಪಾಯಿಗಳನ್ನು ನೀಡುತ್ತೇವೆಂದು ಹೇಳುತ್ತಿದ್ದಾರೆ. ಏಕೆ ಈ ರೀತಿಯ ತಾರತಮ್ಯ ಮಾಡುತ್ತಿದ್ದಾರೆ. ನಾನು ಮಾನ್ಯ ಕಂದಾಯ ಸಚಿವರಲ್ಲಿ ಒಂದು ಮನವಿ ಮಾಡುವುದೇನೆಂದರೆ. ಮನೆಗಳಿಗೆ 'ಎ' 'ಬಿ' ಮತ್ತು 'ಸಿ' ಕ್ಯಾಟಗರಿ ಎಂದು ಮಾಡಿ, ಅವುಗಳಿಗೆ ಸುಮಾರು ಐದು ಲಕ್ಷ ರೂಪಾಯಿಗಳನ್ನು ಕೊಡುತ್ತೇವೆಂದು ಹೇಳಿದ್ದಾರೆ. ಇದರ ಬಗ್ಗೆ ಮಾನ್ಯ ಸಚಿವರು ಗಮನಹರಿಸಬೇಕು. ಈಗ ಐದಾರು ಲಕ್ಷ ರೂಪಾಯಿಗಳಲ್ಲಿ ಯಾವುದೇ ರೀತಿಯ ಮನೆ ನಿರ್ಮಾಣ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ ಎನ್ನುವುದು ಮಾನ್ಯ ಸಚಿವರಿಗೂ ಸಹ ಗೊತ್ತಿದೆ ಮತ್ತು ಅವರು ಸಹ

ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಹಳ್ಳಿಗಳನ್ನು ನೋಡಿದ್ದಾರೆ. ಕೊಡಗು ಜಿಲ್ಲೆಗೆ ಒಂಭತ್ತುವರೆ ಲಕ್ಷ ರೂಪಾಯಿಗಳನ್ನು ನೀಡಿ ಇಲ್ಲಿಗೆ ಏಕೆ ಐದು ಲಕ್ಷ ರೂಪಾಯಿಗಳನ್ನು ಕೊಡುತ್ತಾರೆ?

**(ಮುಂದು...)**

(152) 11.10.2019-01.40-LL-VK

ವೈಸ್ ಛೇರ್ಮನ್‌ರವರ ಉಪಸ್ಥಿತಿ

ಶ್ರೀ ಬಸವರಾಜ ಪಾಟೀಲ್ ಇಟಗಿ(ಮುಂದುವರೆದಿದ್ದು...)

ಕೊಡಗು ಜಿಲ್ಲೆಯ ನಿರಾಶ್ರಿತರಿಗೆ ಮನೆ ಕಟ್ಟಿಕೊಳ್ಳುವುದಕ್ಕೆ ಪ್ರತಿ ಮನೆಗೆ 9.5(ಒಂಬತ್ತೂವರೆ) ಲಕ್ಷ ರೂಪಾಯಿಗಳಂತೆ ಪರಿಹಾರ ನೀಡಿದ್ದಾರೆ. ಅಷ್ಟೇ ಪರಿಹಾರವನ್ನು ನಮ್ಮ ಭಾಗದ ನಿರಾಶ್ರಿತರಿಗೂ ಕೊಡಿ. ಈ ತಾರತಮ್ಯವನ್ನು ಏತಕ್ಕೆ ಮಾಡಬೇಕು? ಈ ಬಗ್ಗೆ ಮುಂದಿನ ಸಚಿವ ಸಂಪುಟ ಸಭೆಯಲ್ಲಿ ಮಾತನಾಡಿ ಇದಕ್ಕೆ ಒಂದು ಪರಿಹಾರವನ್ನು ಕೊಡುವುದಕ್ಕೆ ಪ್ರಯತ್ನ ಮಾಡಬೇಕೆಂದು ಕೋರುತ್ತೇನೆ.

**ಶ್ರೀ ಎಂ.ಪಿ. ಸುನೀಲ್ ಸುಬ್ರಮಣಿ:–** ಮಾನ್ಯ ಸಭಾಪತಿಯವರೇ, ಮನೆ ಕಟ್ಟಿಕೊಡುವುದಕ್ಕಷ್ಟೇ ಆ ಹಣ ನೀಡಲಾಗಿರುತ್ತದೆ. ಆದರೆ, ಮನೆ ಕಟ್ಟಿಕೊಳ್ಳುವುದಕ್ಕೆ ಅಲ್ಲಿಯೂ ಸಹ 5 ಲಕ್ಷ ರೂಪಾಯಿ ಪರಿಹಾರ ಕೊಡಲಾಗಿರುತ್ತದೆ.

**ಶ್ರೀ ಬಸವರಾಜ ಪಾಟೀಲ್ ಇಟಗಿ:–** ಮಾನ್ಯ ಸಭಾಪತಿಯವರೇ, ಹಾಗಾದರೆ ನಮ್ಮ ಭಾಗದ ನಿರಾಶ್ರಿತರಿಗೂ ಸಹ ಮನೆ ಕಟ್ಟಿಕೊಡಲಿ.

**ಶ್ರೀಮತಿ ಎಸ್. ವೀಣಾ ಅಚ್ಚಯ್ಯ:–** ಮಾನ್ಯ ಸಭಾಪತಿಯವರೇ, 9 ಲಕ್ಷದ 85 ಸಾವಿರ ರೂಪಾಯಿ ಪರಿಹಾರದ ಹಣದಲ್ಲಿ ಶ್ರೀ ರಾಜೀವ್ ಗಾಂಧಿ ನಿಗಮದಿಂದ ನಮ್ಮ ಭಾಗದ ನಿರಾಶ್ರಿತರಿಗೆ ಮನೆಗಳನ್ನು ಕಟ್ಟಿಕೊಟ್ಟಿದ್ದರೂ ಸಹ, ಸುಮಾರು 70 ಜನರು ಅವರ ಸ್ವಂತ ಜಾಗದಲ್ಲಿಯೇ ಮನೆಗಳನ್ನು ಕಟ್ಟಿಕೊಳ್ಳುತ್ತೇವೆಂದು ಹೇಳಿದ್ದರಿಂದ ಅವರಿಗೆ ಆ ಹಣವನ್ನು 3 ಹಂತಗಳಲ್ಲಿ ಕೊಡಲಾಗಿರುತ್ತದೆ.

**ಶ್ರೀ ಬಸವರಾಜ ಪಾಟೀಲ್ ಇಟಗಿ:–** ಮಾನ್ಯ ಸಭಾಪತಿಯವರೇ, ಯಾರೂ ಹೇಳದೇ ಇರುವಂತಹ ಬಹಳ ಮುಖ್ಯವಾದಂತಹ ವಿಷಯ ತಮ್ಮ ಗಮನಕ್ಕೆ ತರುವುದಕ್ಕೆ ಬಯಸುತ್ತೇನೆ. ನದಿ ಪಾತ್ರದಲ್ಲಿ ಇವೊತ್ತಿನ ದಿವಸ ನೆರೆ ಬಂದಿದ್ದು, ಸರ್ಕಾರಿ ಅಧಿಕಾರಿಗಳು ನೆರೆ ಪ್ರದೇಶವನ್ನು ವೀಕ್ಷಣೆ ಮಾಡುವುದಕ್ಕೆ ಬಂದರು. ಉದಾಹರಣೆಗೆ, ನಾನು ಬಾಗಲಕೋಟೆ ಜಿಲ್ಲೆಯ ಬಗ್ಗೆ ಹೇಳುತ್ತಿದ್ದೇನೆ. ಏಕೆಂದರೆ, ನಮ್ಮ ಜಿಲ್ಲೆಗಿಂತಲೂ ಅದು ಜಾಸ್ತಿ ಇದೆ. ಎಲ್ಲಾ ರೈತರು ಸಹ ಖಾಸಗಿಯಾಗಿ ಪೈಪ್‌ಲೈನ್‌ಗಳನ್ನು ಮಾಡಿದ್ದಾರೆ. ಸರ್ಕಾರದ ಅಧಿಕಾರಿಗಳು ನೆರೆ ವೀಕ್ಷಣೆ ಮಾಡಿ, ಎಷ್ಟು ಪ್ರದೇಶ ಮುಳುಗಡೆ ಆಗಿದೆ ಅಲ್ಲಿಗೆ ಒಂದು ಗುರುತು ಮಾಡಿದ್ದಾರೆ. ಉದಾಹರಣೆಗೆ, 600, 800 ಮೀಟರ್, ಅರ್ಧ ಕಿಲೋಮೀಟರ್ ಅಥವಾ ಒಂದು ಕಿಲೋಮೀಟರ್ ಇರಬಹುದು ಅಲ್ಲಿಗೆ ಸಮನಾಂತರವಾಗಿ ಗುರುತು

ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಮಾಡಿದ್ದಾರೆ. ಅವರಿಗೂ ಸಹ ಪರಿಹಾರ ಕೊಡುವುದಕ್ಕೆ ಪ್ರಯತ್ನ ಮಾಡುತ್ತೇವೆಂದು ಹೇಳಿದ್ದಾರೆ. ಇನ್ನೂ ಪರಿಹಾರ ಬಂದಿರುವುದಿಲ್ಲ. ಆದರೆ, ಮುಂದೆ ಬರಬಹುದು. ಸರ್ಕಾರಕ್ಕೆ ತಮ್ಮ ಮುಖಾಂತರ ನನ್ನ ವಿನಂತಿ ಏನೆಂದರೆ, ಇವೊತ್ತಿನ ದಿವಸ ಬಾಗಲಕೋಟೆ ಜಿಲ್ಲೆ, ಬಿಜಾಪುರ ಜಿಲ್ಲೆ ಅಥವಾ ಮುಧೋಳ ತಾಲ್ಲೂಕು ಇರಬಹುದು ನಮ್ಮ ಮಾನ್ಯ ತಿಮ್ಮಾಪೂರರವರ ಕ್ಷೇತ್ರ ಇರಬಹುದು ಅಲ್ಲಿ ಸುಮಾರು 8, 10 ಕಿಲೋಮೀಟರ್ ಪೈಪ್‌ಲೈನ್‌ಗಳನ್ನು ಅಳವಡಿಸಿದ್ದು, ತೋಟಗಾರಿಕೆ ಬೆಳೆಗಳಾದ ದ್ರಾಕ್ಷಿ, ದಾಳಿಂಬೆ ಇತ್ಯಾದಿ ಬೆಳೆಗಳನ್ನು ಬೆಳೆಯುತ್ತಿದ್ದಾರೆ.

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:–** ಮಾನ್ಯ ಸಭಾಪತಿಯವರೇ, ಒಟ್ಟು 19 ಕಿಲೋಮೀಟರ್ ಪೈಪ್‌ಲೈನ್ ಹಾಕಿದ್ದಾರೆ.

**ಶ್ರೀ ಬಸವರಾಜ ಪಾಟೀಲ್ ಇಟಗಿ:–** ಮಾನ್ಯ ಸಭಾಪತಿಯವರೇ, ಹೌದು, ಸುಮಾರು 19 ಕಿಲೋಮೀಟರ್‌ವರೆಗೆ ಪೈಪ್‌ಲೈನ್‌ಗಳನ್ನು ಹಾಕಿದ್ದಾರೆ. ಆದರೆ, ಇವೊತ್ತಿನ ದಿವಸ ಪ್ರವಾಹ ಬಂದಾಗ, ಆ ಪ್ರದೇಶದಲ್ಲಿ ಒಂದು ತಿಂಗಳವರೆಗೆ ನಾವು ಕಾಲು ಇಡಲಾರದಂತಹ ಪರಿಸ್ಥಿತಿ ಇರುತ್ತದೆ. ಏಕೆಂದರೆ, 2, 3, ಅರ್ಧ ಮೀಟರ್ ಅಥವಾ ಒಂದು ಮೀಟರ್‌ನಷ್ಟು silt up ಆಗಿತ್ತು. ಒಂದು ಚಕ್ಕಡಿ ಗಾಡಿ ಸಹ ಅಲ್ಲಿಗೆ ಹೋಗಲಾರದಂತಹ ಪರಿಸ್ಥಿತಿ ಇತ್ತು. ಆವೊತ್ತಿನ ದಿವಸ ನಾವು ಎಲೆಕ್ಟ್ರಿಕಲ್ ಪೋಲ್, ಟ್ರಾನ್ಸ್‌ಫಾರ್ಮರ್‌ಗಳನ್ನು ಬದಲಾವಣೆ ಮಾಡುವುದಕ್ಕೆ ಅಷ್ಟೇ ಅಲ್ಲದೇ, ಅದರ ಹತ್ತಿರಕ್ಕೂ ಕೂಡ ಹೋಗುವುದಕ್ಕೆ ಆಗಲಿಲ್ಲ. ಏಕೆಂದರೆ, ಆ silt up ಅಷ್ಟು ಪ್ರಮಾಣದಲ್ಲಿ ಇತ್ತು. ಅಂತಹ ಸಂದರ್ಭ ಸುಮಾರು ಒಂದು ತಿಂಗಳ ಕಾಲ ಇತ್ತು. ಆ ಒಂದು ತಿಂಗಳ ಕಾಲಾವಧಿಯಲ್ಲಿ ಏನಾಯಿತೆಂದರೆ, 9 , 10, 15 ಕಿಲೋಮೀಟರ್ ಪೈಪ್‌ಲೈನ್‌ಗಳು ಏನು ಹೋಗಿದ್ದವೋ, ಅಲ್ಲಿರತಕ್ಕಂತಹ ತೋಟಗಾರಿಕೆ ಬೆಳೆಗಳು ಅಥವಾ ವಾಣಿಜ್ಯ ಬೆಳೆಗಳಾದ ಮೆಣಸಿನಕಾಯಿ ಇರಬಹುದು, ಹತ್ತಿ ಇರಬಹುದು ಅಥವಾ ಬೇರೆ ಎಲ್ಲಾ ಬೆಳೆಗಳು ಆ ಒಂದು ತಿಂಗಳಿನಲ್ಲಿ ಹಾಳಾಗುವಂತಹ ಪರಿಸ್ಥಿತಿಯನ್ನು ನಾವು ನೋಡಿದ್ದೇವೆ. ನೆರೆ ಹಾವಳಿಯಿಂದಲೇ ಅವರ ಬೆಳೆಗಳಿಗೆ ಧಕ್ಕೆಯಾಗಿರುತ್ತದೆ. ಇಂತಹ ಬೆಳೆಗಾರರಿಗೆ ಯಾರು ಪರಿಹಾರ ಕೊಡಬೇಕು? ಅದಕ್ಕೆ ನನ್ನ ವಿನಂತಿ ಏನೆಂದರೆ, ಉದಾಹರಣೆಗೆ, ಬೆಳಗಾವಿ ಜಿಲ್ಲೆ, ಬಾಗಲಕೋಟೆ ಜಿಲ್ಲೆ, ಬಿಜಾಪುರ ಜಿಲ್ಲೆ, ರಾಯಚೂರು ಜಿಲ್ಲೆ ಅಥವಾ ಯಾವುದೇ ಜಿಲ್ಲೆಯಲ್ಲಿ ಪೈಪ್‌ಲೈನ್‌ಗಳು ಎಷ್ಟು ಕಿಲೋಮೀಟರ್‌ಗಳವರೆಗೆ ಹೋಗಿದೆ ಮತ್ತು ಎಷ್ಟು ಪ್ರದೇಶದಲ್ಲಿ ರೈತರು ಉಳುಮೆ ಮಾಡುತ್ತಿದ್ದಾರೆ ಅವರೆಲ್ಲರಿಗೂ ಕೂಡ ನೆರೆ ಹಾವಳಿಯಿಂದ ತೊಂದರೆಯಾಗಿದೆ ಎಂದು ಪರಿಗಣಿಸಿ, ಅವರಿಗೂ ಸಹ ಪರಿಹಾರ ಕೊಡತಕ್ಕಂತಹ ಪ್ರಯತ್ನ ಮಾಡಬೇಕೆಂದು ಹೇಳುತ್ತೇನೆ. ಇಲ್ಲದೇ ಇದ್ದರೆ ಅವರಿಗೆ ಬಹಳ ಕಷ್ಟವಾಗುತ್ತದೆ. ಏಕೆಂದರೆ, ಈಗಾಗಲೇ ಶೇಕಡ 50 ಅಥವಾ 60 ರಷ್ಟು ಬೆಳೆ ಹಾನಿಯಾಗಿರುತ್ತದೆ.

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಈ ಬಾರಿಯ ಒಂದು ವಿಚಿತ್ರವೆಂದರೆ, ಆ ಕಡೆ ನೆರೆ, ಈ ಕಡೆ ಬರ. ನನಗೆ ತಿಳಿದಮಟ್ಟಿಗೆ ಮೊನ್ನೆಯ ದಿವಸ ಕೊಪ್ಪಳ ಜಿಲ್ಲೆಯ ಕುಷ್ಟಗಿಯಲ್ಲಿ ಭಾರಿ ಮಳೆಯಾಗಿದೆ. ಆ ಮಳೆಯಾಗುವುದಕ್ಕೆ ಮೊದಲು ನನ್ನ ಕ್ಷೇತ್ರದಲ್ಲಿ ಅಂದರೆ ಕೊಪ್ಪಳ ಜಿಲ್ಲೆಯಲ್ಲಿ 62 ಹಳ್ಳಿಗಳಿಗೆ ಟ್ಯಾಂಕರ್ ಮುಖಾಂತರ ಕುಡಿಯುವ ನೀರನ್ನು ಸರಬರಾಜು ಮಾಡುವುದನ್ನು ನಾವು ನೋಡಿದ್ದೇವೆ. ಕೇವಲ ಮೊನ್ನೆಯ ದಿವಸವಷ್ಟೇ ಅಂದರೆ, ಸುಮಾರು 8 ದಿನಗಳ ಮೊದಲು ಭಾರಿ ಮಳೆಯಾಗಿದೆ. ಇದರಿಂದಾಗಿ, ಬಳ್ಳಾರಿ ಜಿಲ್ಲೆ ಮತ್ತು ಕೊಪ್ಪಳ ಜಿಲ್ಲೆಯಲ್ಲಿ ಕುಡಿಯುವ ನೀರು ಸಿಗುತ್ತದೆಯಷ್ಟೇ. ಅದಕ್ಕಿಂತಲೂ ಮೊದಲು ಕುಷ್ಟಗಿ ತಾಲ್ಲೂಕಿನ ಸುಮಾರು 60 ಹಳ್ಳಿಗಳಿಗೆ ಕುಡಿಯುವ ನೀರು ಸರಬರಾಜು ಮಾಡುವಂತಹ ಪರಿಸ್ಥಿತಿ ಇತ್ತು. ಇದಕ್ಕೆ ಮೊದಲು ಮಾತನಾಡಿದ ನಮ್ಮ ಹಿರಿಯರು ನದಿ ದಂಡೆಯ ಬಗ್ಗೆ ಹೇಳಿದರು. ಇವೊತ್ತಿನ ದಿವಸ ನನಗೆ ತಿಳಿದ ಮಟ್ಟಿಗೆ ಬೆಳಗಾವಿಯಿಂದ ಹಿಡಿದು ರಾಯಚೂರು ಮುಗಿಯುವವರೆಗೆ ಕನಿಷ್ಠ 2 ಸಾವಿರ ಅಥವಾ 3 ಸಾವಿರ ಹಳ್ಳಿಗಳಿಗೆ water source ಎಂದು ಕೃಷ್ಣಾ ನದಿಯಿದೆ, ಭೀಮಾ ನದಿಯಿದೆ, ಮತ್ತು ಧೂದ್‌ಗಂಗಾ ನದಿಯಿದೆ. ಆ ಎಲ್ಲಾ ನದಿ ದಂಡೆಯಲ್ಲಿರುವ ಸರ್ಕಾರಿ ಕುಡಿಯುವ ನೀರಿನ ಯೋಜನೆಗಳಲ್ಲಿರುವ ಜಾಕ್‌ವೆಲ್, ಮೋಟಾರ್ಸ್‌ಗಳು ಪ್ರವಾಹದಿಂದ ಕಿತ್ತುಕೊಂಡು ಹೋಗಿರುತ್ತವೆ. ಅಷ್ಟೇ ಅಲ್ಲದೇ, ನಮ್ಮ ತಾಲ್ಲೂಕಿನಲ್ಲಿ 33 ಕೆ.ವಿ. ಸಾಮರ್ಥ್ಯದ ಒಂದು ಸಬ್ ಸ್ಟೇಷನ್ ಸಹ ಕಿತ್ತುಕೊಂಡು ಹೋಗಿರುತ್ತದೆ. On the banks of river Krishna, ನೆರೆ ಹಾವಳಿ ಬಂದ ತಕ್ಷಣ ಎಲ್ಲಾ ಮೋಟಾರ್ಸ್‌ಗಳು ಹಾಳಾಗಿ ಹೋಗುವಂತಹ ಪರಿಸ್ಥಿತಿ ಇದೆ. ಇದರಿಂದಾಗಿ, ಈ ಬಾರಿ ಸಾಕಷ್ಟು ಹಾನಿಯಾಗಿರುವುದನ್ನು ನಾವು ನೋಡಿದ್ದೇವೆ. ಈ ಬಗ್ಗೆ ಹೆಚ್ಚಿನ ಗಮನಹರಿಸುವಂತಹ ಕೆಲಸವನ್ನು ಸರ್ಕಾರ ಮಾಡಬೇಕಾಗಿದೆ. ತಾವು ಮಾತನಾಡುತ್ತಾ ರೈತರ ಬಗ್ಗೆ ಸಾಕಷ್ಟು ವಿಷಯಗಳನ್ನು ಹೇಳಿದ್ದೀರಿ. ನನಗೆ ತಿಳಿದಮಟ್ಟಿಗೆ ನೆರೆ ಬಂದಾಗ ಶೇಕಡ 80 ರಷ್ಟು ನೇರ ಪರಿಣಾಮ ಆಗುವುದು ರೈತರಿಗೆ. ಇವೊತ್ತಿನ ದಿವಸ ಯಾವುದೇ ಶಾಲಾ ಕಟ್ಟಡಗಳು ಬಿದ್ದಿರಬಹುದು, ರಸ್ತೆ ಹಾಳಾಗಿರಬಹುದು, ಅದರಿಂದ ಬದುಕು ಹಾಳಾಗಿರುವುದಿಲ್ಲ. ಕೇವಲ ಓಡಾಡುವುದಕ್ಕೆ ತೊಂದರೆಯಾಗಿದೆಯಷ್ಟೇ.

**ವೈಸ್ ಛೇರ್ಮನ್:-** ನೆರೆಯಿಂದಾಗಿ ದೊಡ್ಡ ಪ್ರಮಾಣದಲ್ಲಿ ರೈತರ ಬದುಕಿಗೆ ತೊಂದರೆಯಾಗಿದೆ.

**ಶ್ರೀ ಬಸವರಾಜ ಪಾಟೀಲ್ ಇಟಗಿ:-** ಮಾನ್ಯ ಸಭಾಪತಿಯವರೇ, ಹೌದು. ನೆರೆಯಿಂದಾಗಿ ನೇರ ಪರಿಣಾಮ ಆಗುವುದು ರೈತರಿಗೆ ಮಾತ್ರ. ಅವೊತ್ತಿನ ದಿವಸಕ್ಕೆ ಅವರು ತಮ್ಮ ಜೀವನವನ್ನೇ ಕಳೆದುಕೊಂಡಂತಹ ಪರಿಸ್ಥಿತಿ ಇರುತ್ತದೆ. ಚಿಕ್ಕಮಗಳೂರು ಜಿಲ್ಲೆಯಲ್ಲಿ landsliding ಆಗಿರುವುದನ್ನು ನೋಡಿದ್ದೇವೆ. ಅಂತಹ ಸಂದರ್ಭದಲ್ಲಿ ಆ ರೈತನ ಕಥೆ ಮುಗಿದು ಹೋದಂತೆಯೇ. ಏಕೆಂದರೆ, ಸರ್ಕಾರದಿಂದ ಲಕ್ಷಗಟ್ಟಲೇ ಪರಿಹಾರ ಕೊಟ್ಟರೂ ಸಹ ಆತ ಪುನಃ ಮೊದಲಿನಂತೆ ರೈತ ಆಗುವುದಕ್ಕೆ ಆಗುವುದಿಲ್ಲ. ಏಕೆಂದರೆ, ಅಷ್ಟು ಕಷ್ಟ ಇದೆ. ಸುಮಾರು 30-35 ಲಕ್ಷ ರೂಪಾಯಿ ಬೆಲೆ ಬಾಳುವಂತಹ ಭೂಮಿಗೆ ಸರ್ಕಾರದಿಂದ 1 ಲಕ್ಷ ಅಥವಾ 2 ಲಕ್ಷ ಪರಿಹಾರ ಕೊಟ್ಟರೆ ಅವನು ಈ ಕಡೆ ಬದುಕು ಕಟ್ಟಿಕೊಳ್ಳುವುದಕ್ಕೂ ಆಗುವುದಿಲ್ಲ ಅಥವಾ ಬೇರೆ ಕಡೆ ಹೋಗುವುದಕ್ಕೂ ಆಗುವುದಿಲ್ಲ. ಇವೊತ್ತಿನ

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ದಿವಸ ನಮ್ಮ ಗ್ರಾಮವನ್ನು ಬಿಟ್ಟು ನಾವು ಬೇರೆ ಕಡೆಗೆ ಹೋಗಬೇಕಾದಾಗ, ಆ ಸೆಂಟಿಮೆಂಟ್‌ಗೆ ನಾವು ಬೇರೆ ಕಡೆಗೆ ಹೋಗುವುದಕ್ಕಾಗುವುದಿಲ್ಲ. ಉದಾಹರಣೆಗೆ, 2009ರಲ್ಲಿ ನೆರೆ ಹಾವಳಿ ಬಂದಾಗ, ಕೆಲವು ಜಿಲ್ಲೆಗಳಲ್ಲಿ ಅನೇಕ ಊರುಗಳನ್ನು ಸ್ಥಳಾಂತರ ಮಾಡಬೇಕೆಂದು ಒಂದು ನಿರ್ಧಾರ ಮಾಡಲಾಯಿತು. ಆಗ ಶ್ರೀ ಬಿ.ಎಸ್. ಯಡಿಯೂರಪ್ಪನವರ ನೇತೃತ್ವದ ಬಿಜೆಪಿ ಸರ್ಕಾರ ಅಧಿಕಾರದಲ್ಲಿತ್ತು. ಆಗ ಪುನರ್ವಸತಿ ಕಲ್ಪಿಸುವುದಕ್ಕಾಗಿ ಸ್ಥಳ ಗುರುತಿಸಿ, ಕೆಲವು ಸಂಸ್ಥೆಗಳಿಂದ ಅಂದರೆ, ಮಠ–ಮಾನ್ಯರಿಂದ ಹಾಗೂ ಇನ್ಫೋಸಿಸ್‌ನಂತಹ ಸಂಸ್ಥೆಗಳು ಮನೆ ಕಟ್ಟುವಂತಹ ಕೆಲಸ ಮಾಡಿದ್ದವು. ಆ ಸಂದರ್ಭದಲ್ಲಿ ಒಂದು ತಪ್ಪು ಮಾಡಲಾಯಿತು. ಅದೇನೆಂದರೆ, ಯಾವುದೇ ರೈತನನ್ನು ಒಂದು ಕಡೆಯಿಂದ ಮತ್ತೊಂದು ಕಡೆಗೆ ಸ್ಥಳಾಂತರ ಮಾಡಬೇಕಾದರೆ ಆತನಿಗೆ ಏನು ಬೇಕೆಂಬುದನ್ನು ತಿಳಿದುಕೊಳ್ಳುವುದು ಸರ್ಕಾರದ ಕೆಲಸವಾಗಿರುತ್ತದೆ. ಆದರೆ, ನಗರ ಪ್ರದೇಶಗಳಲ್ಲಿ 20 x 30 ಅಡಿ ಅಳತೆಯಲ್ಲಿ ಕನಿಷ್ಠ ನಾಲ್ಕು ಅಂತಸ್ತುಗಳ ಕಟ್ಟಡಗಳನ್ನು ಕಟ್ಟಿರುತ್ತಾರೆ. ಆದರೆ, ರೈತರ ಪರಿಸ್ಥಿತಿ ಆ ರೀತಿ ಇರುವುದಿಲ್ಲ. ಇವೊತ್ತಿನ ದಿವಸ ಒಬ್ಬ ರೈತನನ್ನು ಒಂದು ಜಾಗದಿಂದ ಮತ್ತೊಂದು ಜಾಗಕ್ಕೆ ಸ್ಥಳಾಂತರಿಸಬೇಕಾದರೆ ಕನಿಷ್ಠ 40 x 60 ಅಡಿ ಅಳತೆಯ ಜಾಗ ಬೇಕು. 60 x 80 ಅಡಿ ಅಳತೆ ಆದರೆ ideal. ಏಕೆಂದರೆ, ಅವನಿಗೆ ಕೇವಲ ಮನೆ ಇರುವುದಿಲ್ಲ. ಅವನಿಗೆ ಮನೆ ಬೇಕು, ಕೊಟ್ಟಿಗೆ ಮನೆ ಬೇಕು, ಬಣವೆ ಹಾಕುವುದಕ್ಕೆ ಜಾಗ ಬೇಕು, ಕೃಷಿ ಪರಿಕರಗಳನ್ನು ಇಟ್ಟುಕೊಳ್ಳುವುದಕ್ಕೆ ಜಾಗ ಬೇಕು. ಇವೆಲ್ಲವುದಕ್ಕೂ ಕೂಡ ಬೇಕಾದಂತಹ ಕನಿಷ್ಠ ಜಾಗವನ್ನಂತೂ ಸರ್ಕಾರ ಕೊಡಬೇಕಾಗುತ್ತದೆ. ಉದಾಹರಣೆಗೆ, ನಮ್ಮ ಜಿಲ್ಲಾ ಉಸ್ತುವಾರಿ ಸಚಿವರು ಇನ್ನೂ ಉಸ್ತುವಾರಿ ಸಚಿವರಾಗುವುದಕ್ಕೆ ಮೊದಲು ರಾಯಚೂರು ಜಿಲ್ಲೆಯ ಗುರ್ಜಾಪುರಕ್ಕೆ ಭೇಟಿ ನೀಡಿದ್ದರು. ಆ ಸಂದರ್ಭದಲ್ಲಿ ಗುರ್ಜಾಪುರ ಹಳ್ಳಿಯ ಜನರು, "ನಮಗೆ ಕಳೆದ ಬಾರಿ ಕಟ್ಟಿಸಿಕೊಟ್ಟಂತಹ ಮನೆಗಳಿಗೆ ನಾವು ಯಾರೂ ಹೋಗುವುದಿಲ್ಲ. ಈಗ ಕಟ್ಟಿಸಿಕೊಡುವಂತಹ ಮನೆಗಳಿಗೂ ಸಹ ನಾವು ಹೋಗುವುದಿಲ್ಲ. ಏಕೆಂದರೆ, ಆ ಮನೆಗಳಲ್ಲಿ ಹೋಗಿ ವಾಸಿಸುವುದಕ್ಕೆ ಕಿಟಕಿ, ಬಾಗಿಲು, ಜಾಗ, ಪೀಠೋಪಕರಣಗಳು, ರಸ್ತೆ, ಕುಡಿಯುವುದಕ್ಕೆ ನೀರು ಇಂತಹ ಯಾವುದೇ ಮೂಲಭೂತ ಸೌಕರ್ಯಗಳಿಲ್ಲ. ನಾವು ಅಲ್ಲಿಗೆ ಹೋಗುವುದಿಲ್ಲ"ವೆಂದು ಹೇಳಿದರು. ಆದುದರಿಂದ, ಪುನರ್ವಸತಿಗಾಗಿ ಹೊಸದಾಗಿ ಭೂಸ್ವಾಧೀನ ಮಾಡಬೇಕು. ಏಕೆಂದರೆ, ಇಡೀ ಊರು submerge ಆಗಿದೆ. ಬೇರೆ ಕಡೆ ಊರು ಸ್ಥಳಾಂತರ ಮಾಡಬೇಕಾದರೆ, 4 ದನ, ಮೇಕೆಗಳು, 2–3 ಸದಸ್ಯರು ಇರುವುದಕ್ಕೆ ಕನಿಷ್ಠ ಎಷ್ಟು ಅಳತೆಯ ಪುನರ್ವಸತಿ ಬೇಕೆಂದು ಸರ್ಕಾರವೇ ಯೋಚನೆ ಮಾಡಬೇಕು.

**ವೈಸ್ ಛೇರ್ಮನ್:–** ಮಾನ್ಯ ಇಟಗಿಯವರೇ, ತಾವು ಆದಷ್ಟು ಬೇಗ ತಮ್ಮ ಮಾತನ್ನು ಮುಗಿಸಿ.

**ಶ್ರೀ ಬಸವರಾಜ ಪಾಟೀಲ್ ಇಟಗಿ:–** ಮಾನ್ಯ ಸಭಾಪತಿಯವರೇ, ತಾವು ಮಾತು ಮುಗಿಸಬೇಕೆಂದು ನನಗೆ ಹೇಳಿದರೆ ನಾನು ಮಾತನಾಡುವುದೇ ಇಲ್ಲ. ತಾವು ಇಲ್ಲಿ ನಿಂತು ಮಾತನಾಡುವಾಗ ಜಗ್ಗಿ ಮಾತನಾಡಿ, ನಮಗೆ ಮಾತ್ರ ಬೇಗ ಮಾತನಾಡಿ ಮುಗಿಸಿ ಎಂದು ಹೇಳುತ್ತಿದ್ದೀರಿ.



" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ವೈಸ್ ಛೇರ್ಮನ್:-** ಏಕೆಂದರೆ, ತಮ್ಮ ನಂತರ ಮಾನ್ಯ ಹೊರಟ್ಟಿಯವರು ಮಾತನಾಡಬೇಕು. ಅದಕ್ಕಾಗಿ ತಾವು ಬೇಗ ಮಾತನಾಡಿ ಮುಗಿಸಿ.

**ಶ್ರೀ ಬಸವರಾಜ ಪಾಟೀಲ್ ಇಟಗಿ:-** ಮಾನ್ಯ ಸಭಾಪತಿಯವರೇ, ತಾವು ಇದುವರೆವಿಗೂ ಭಾಷಣ ಮಾಡಿ, ನಮಗೆ ಬೇಗ ಮಾತನಾಡಿ ಮುಗಿಸಿ ಎಂದು ಹೇಳಿದರೆ ಹೇಗೆ?

**ವೈಸ್ ಛೇರ್ಮನ್:-** ಆಯಿತು ಮಾತನಾಡಿ.

**ಶ್ರೀ ಬಸವರಾಜ ಪಾಟೀಲ್ ಇಟಗಿ:-** ಮಾನ್ಯ ಸಭಾಪತಿಯವರೇ, ನಮಗೆ ಸ್ವಲ್ಪವಾದರೂ ನ್ಯಾಯ ಬೇಕು. ಮಾನ್ಯ ಕೋಟ ಶ್ರೀನಿವಾಸ ಪೂಜಾರಿಯವರು ನನ್ನ ನೆರವಿಗೆ ಬರಬೇಕು.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ಮಾನ್ಯ ಇಟಗಿಯವರು ಬಹಳ ಚೆನ್ನಾಗಿ ಮಾತನಾಡುತ್ತಿದ್ದಾರೆ. ಅವರು ಮಾತನಾಡಲಿ. ಅದಕ್ಕೆ ನನ್ನ ತೊಂದರೆಯೇನು ಇಲ್ಲ.

**ಶ್ರೀ ಬಸವರಾಜ ಪಾಟೀಲ್ ಇಟಗಿ:-** ಮಾನ್ಯ ಸಭಾಪತಿಯವರೇ, ರಾಜ್ಯ ಸರ್ಕಾರ 2005ರಲ್ಲಿ, 2009ರಲ್ಲಿ ಮತ್ತು 2019ರಲ್ಲಿ ಒಟ್ಟಾರೆಯಾಗಿ 3 ಬಾರಿ ನೆರೆ ಹಾವಳಿಯನ್ನು ನೋಡಿರುತ್ತದೆ. ಇದು ಪುನಃ ಮರುಕಳಿಸಬಹುದು. ಇಲ್ಲವೆನ್ನುವ ಪ್ರಶ್ನೆಯೇ ಇಲ್ಲ. ಅದಕ್ಕಾಗಿ, ಯಾವ್ಯಾವ ಹಳ್ಳಿಗಳು ನೆರೆಯಿಂದಾಗಿ ಶೇಕಡ 90ರಷ್ಟು ಹಾನಿಗೀಡಾಗುತ್ತವೆ, ಅಂತಹ ಹಳ್ಳಿಗಳನ್ನು ಶಾಶ್ವತವಾಗಿ ಸ್ಥಳಾಂತರಿಸುವಂತಹ ಕೆಲಸ ಆದ್ಯತೆ ಮೇರೆಗೆ ಆಗಬೇಕು. ಇದಾದ ನಂತರ ನದಿ ದಂಡೆ ಏನಿರುತ್ತದೆ, ಅದನ್ನು ಗುರುತು ಮಾಡುವಂತಹ ಕೆಲಸವನ್ನು ರಾಜ್ಯ ಸರ್ಕಾರ ಮಾಡಬೇಕಾಗಿದೆ. ಪ್ರತಿ ಬಾರಿ flood level 5 ಲಕ್ಷ, 6 ಲಕ್ಷ, 4 ಲಕ್ಷ ಕ್ಯೂಸೆಕ್ಸ್ ಬರಬಹುದು. ಆ flood level 5 ಲಕ್ಷ ಕ್ಯೂಸೆಕ್ಸ್ ಇದ್ದಾಗ, ಎಷ್ಟು ಪ್ರದೇಶವನ್ನು ಆಕ್ರಮಿಸಿಕೊಳ್ಳುತ್ತದೆಂದು ಮೊದಲೇ ಗುರುತು ಮಾಡಬೇಕು. ಅದರ ಜೊತೆಗೆ, ಅಂತಹ ಪ್ರದೇಶಗಳಲ್ಲಿ ಯಾರೂ ಮನೆಗಳನ್ನು ಕಟ್ಟಿಕೊಳ್ಳಬಾರದೆಂದು ಸರ್ಕಾರದಿಂದ ಒಂದು ನಿರ್ದೇಶನ ಇರಬೇಕು ಹಾಗೂ ಒಂದು ವೇಳೆ ಪ್ರವಾಹ ಬಂದಾಗ ಈ ಪ್ರದೇಶ ಮುಳುಗಡೆಯಾಗುತ್ತದೆ ಎನ್ನುವಂತಹ ಎಚ್ಚರಿಕೆ ಕೊಡುವಂತಹ ಕೆಲಸವನ್ನು ತಕ್ಷಣವೇ ಸರ್ಕಾರ ಮಾಡಬೇಕು. ಏಕೆಂದರೆ, ಎಷ್ಟು ಲಕ್ಷ ಕ್ಯೂಸೆಕ್ಸ್ ನೀರು ಬರುತ್ತದೆಂದು ಜನರಿಗೆ ಗೊತ್ತಿರುವುದಿಲ್ಲ. ಹಳ್ಳಿಗಳಲ್ಲಿ ಜಲಾಶಯದಿಂದ ನೀರು ಬಹಳ ಬರುತ್ತದೆಯೆಂದು ಹೇಳುತ್ತಾರೆ. ಆದರೆ, ಎಷ್ಟು ನೀರು ಬರುತ್ತದೆಂಬ ಬಗ್ಗೆ ಗೊತ್ತಿರುವುದಿಲ್ಲ. ನಮ್ಮ ಮನೆ ಮುಳುಗುವಷ್ಟು ನೀರು ಬರುತ್ತದೆಯೋ ಅಥವಾ ಸ್ವಲ್ಪ ಬರುತ್ತದೆಯೋ ಎಂಬ ಬಗ್ಗೆ ಗೊತ್ತಿರುವುದಿಲ್ಲ. ಹಾಗಾಗಿ, flood level ಗಳನ್ನ ಅಲ್ಲಲ್ಲಿ demarcation ಮಾಡತಕ್ಕಂಥದ್ದನ್ನು ಮಾಡಬೇಕು. ಇನ್ನೊಂದು ವಿಷಯವನ್ನು ತಮ್ಮ ಗಮನಕ್ಕೆ ತರುವುದೇನೆಂದರೆ, ಇವೊತ್ತಿನ ದಿವಸ ನಾವು ಕೃಷ್ಣಾ ನದಿ, ಭೀಮಾ ನದಿ, ಪಂಚಗಂಗಾ ನದಿ, ವೇದ ಗಂಗಾ ಅಥವಾ ಧೂದ್ ಗಂಗಾ ನದಿ ಇರಬಹುದು. ಅವುಗಳ ಮೇಲೆ ನಾವು

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಬ್ರಿಡ್ಜ್‌ಗಳನ್ನು ಕಟ್ಟಬಹುದು. ಆದರೆ, flood level ಎಷ್ಟಿದೆ, ನಾವು ಎಷ್ಟು ಎತ್ತರಕ್ಕೆ ಬ್ರಿಡ್ಜ್ ಕಟ್ಟಬೇಕೆಂದು ನಮ್ಮ ನೀರಾವರಿ ಇಲಾಖೆಯ ಅಧಿಕಾರಿಗಳು ಯೋಚನೆ ಮಾಡುವುದಿಲ್ಲ.

(ಮುಂದುವರೆದಿದೆ...)

(153)11.10.2019/1.50/ವೈಎಲ್-ವಿಕೆ (ವೈಸ್‌ಛೇರ್ಮನ್‌ರವರ ಉಪಸ್ಥಿತಿ)

ಶ್ರೀ ಬಸವರಾಜ ಪಾಟೀಲ್ ಇಟಗಿ(ಮುಂದು):-

ಸುಮಾರು 100 ವರ್ಷಗಳಲ್ಲಿ 6-7 ಲಕ್ಷ ಕ್ಯೂಸೆಕ್ಸ್ ನೀರು discharge ಆಗುತ್ತಿರುವುದನ್ನು ನೋಡುತ್ತಾ ಬಂದಿದ್ದೇವೆ. ಪ್ರತಿ 5 ವರ್ಷಗಳಿಗೊಮ್ಮೆ ಅಂದರೆ, 2005ನೇ ಸಾಲಿನಲ್ಲಿ ಮತ್ತು 2009ನೇ ಸಾಲಿನಲ್ಲಿ ಇದೇ ರೀತಿ ಆಗಿರುವುದನ್ನು ನೋಡಿದ್ದೇವೆ. ಸರ್ಕಾರ ಇದರ ಬಗ್ಗೆ ಏತಕ್ಕೆ ಗಮನ ಕೊಡುತ್ತಿಲ್ಲ.

**ವೈಸ್‌ಛೇರ್ಮನ್:-** ಮಾನ್ಯ ಅರುಣ ಶಹಾಪುರರವರೇ ಮಾನ್ಯ ಸದಸ್ಯರು ಹೊಸ ವಿಚಾರದ ಬಗ್ಗೆ ಬೆಳಕು ಚೆಲ್ಲುತ್ತಿದ್ದಾರೆ.

**ಶ್ರೀ ಬಸವರಾಜ ಪಾಟೀಲ್ ಇಟಗಿ(ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಅವರ ಊರಿನ ವಿಚಾರವನ್ನೇ ಮಾತನಾಡುತ್ತಿದ್ದೇನೆ ಅವರು ಕೇಳುತ್ತಿಲ್ಲ. ಬಾಗಲಕೋಟೆ, ಬಿಜಾಪುರ ಎಷ್ಟು ಸೇತುವೆಗಳು ಮುಳುಗುತ್ತಿವೆ, ಏತಕ್ಕೆ ಮುಳುಗುತ್ತಿವೆ ಎಂಬುದನ್ನು ಒಂದು ಸಲ ಕೇಳಿದರೆ... ಏಕೆಂದರೆ ಸಂಬಂಧಪಟ್ಟ ಇಲಾಖೆಯವರಿಗೆ ಅದರ ಪ್ರವಾಹದ ಮಟ್ಟ ಎಷ್ಟಿದೆ ಎಂಬುದೇ ಗೊತ್ತಿಲ್ಲ. ಸುಮ್ಮನೆ ಲೋಕೋಪಯೋಗಿ ಇಲಾಖೆಯವರಿಗೆ ಎಸ್ಟಿಮೇಟ್ ಮಾಡುತ್ತಾರೆ, 4 vents ಹಾಕಿ, ಒಂದು ಸೇತುವೆಯನ್ನು ನಿರ್ಮಾಣ ಮಾಡುತ್ತಾರೆ. No, that is not correct. ಇವತ್ತು ನಾವು ಇರತಕ್ಕಂಥ ಪ್ರದೇಶದಲ್ಲಿ ವೇದಗಂಗಾ, ಪಂಚಗಂಗಾ, ದೂದಗಂಗಾ, ಭೀಮಾ ನದಿ, ಕೃಷ್ಣ ನದಿ, ತುಂಗಾಭದ್ರ ನದಿಗಳಿಗೆ ಗರಿಷ್ಠ ಪ್ರವಾಹ ಮಟ್ಟವನ್ನು ಅಳತೆ ಮಾಡಿದಾಗ ಮಾತ್ರ 90% ಸರಿದೂಗುತ್ತದೆ. ಆಕಸ್ಮಿಕವಾಗಿ 5 ವರ್ಷಗಳಿಗೊಮ್ಮೆ 100 ವರ್ಷಗಳಿಗೊಮ್ಮೆ ಹೆಚ್ಚು ಕಡಿಮೆ ಆಗುತ್ತದೆ. ಆ ವಿಚಾರ ಬೇರೆ. ಉದಾಹರಣೆಗೆ ಹೇಳುವುದಾದರೆ, ದೇವದುರ್ಗದಿಂದ ಶಹಾಪೂರಕ್ಕೆ ಹೋಗುವುದಕ್ಕೆ ಹೂವಿನ ಹೆಡ್ಗಿ ಹತ್ತಿರ low level causeway ಸೇತುವೆಯನ್ನು ನಿರ್ಮಿಸಲಾಗಿದೆ. 2.2 ಲಕ್ಷಗಳಿಂದ 2.3 ಲಕ್ಷಗಳಲ್ಲಿ submerge ಆಗುತ್ತದೆ. ಪ್ರತಿ ವರ್ಷ 15 ದಿವಸ ಅಥವಾ 1 ತಿಂಗಳಲ್ಲಿ submerge ಆಗುತ್ತದೆ. ಇದರಿಂದ ಆ ಸೇತುವೆಯನ್ನು ನಿರ್ಮಿಸಿ ಏನು ಪ್ರಯೋಜನ?

**ವೈಸ್‌ಛೇರ್ಮನ್:-** ಸರ್ಕಾರ ಏನು ಮಾಡಬೇಕು ಅದನ್ನು ಹೇಳಿ.

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಶ್ರೀ ಬಸವರಾಜ ಪಾಟೀಲ್ ಇಟಗಿ:–** ಮಾನ್ಯ ಸಭಾಪತಿಯವರೇ, ತಮ್ಮ ಮೂಲಕ ಹೇಳುವುದಕ್ಕೆ ಬಯಸುವುದೇನೆಂದರೆ, ಯಾವುದೇ ಸೇತುವೆಯನ್ನು ನಿರ್ಮಾಣ ಮಾಡಿದರೂ ಅದರ ಮಟ್ಟವನ್ನು ನೋಡಿಕೊಳ್ಳಬೇಕಲ್ಲವೇ ಎಂಬುದನ್ನು ಕೇಳುತ್ತಿದ್ದೇನೆ. ಅದರ ಬಗ್ಗೆ instruct ಮಾಡಬೇಕು. ನೀರಾವರಿ ಇಲಾಖೆಯವರಾಗಲಿ, ಲೋಕೋಪಯೋಗಿ ಇಲಾಖೆಯವರಾಗಲಿ ಬಂದು ಎಷ್ಟು ಉದ್ದ ಎಂದು ಅಳತೆ ಮಾಡಿ ಸೇತುವೆಯನ್ನು ನಿರ್ಮಾಣ ಮಾಡಿ ಬಿಟ್ಟರೆ ಆಗುವುದಿಲ್ಲ. ಮಾನ್ಯ ಮಾಜಿ ನೀರಾವರಿ ಸಚಿವರಾದ ಹೆಚ್.ಕೆ.ಪಾಟೀಲ್‌ರವರ ಸಮ್ಮುಖದಲ್ಲಿ 100.00 ಕೋಟಿ ರೂಪಾಯಿಗಳಲ್ಲಿ ಗೂಗಲ್ ಬ್ಯಾರೇಜ್ ನಿರ್ಮಾಣ ಮಾಡಿಸಿದ್ದೇವೆ. ಆಗ ಗರಿಷ್ಠವಾಗಿ ಇವೆಲ್ಲವನ್ನೂ ತೆಗೆದುಕೊಂಡರೂ ಸಹ ಅವೋತ್ತಿನ ದಿವಸ ಪ್ರವಾಹದ ಮಟ್ಟ 5.5 ಲಕ್ಷ ಕ್ಯೂಸೆಕ್ಸ್ ಇತ್ತು. ನಾವೂ 5.8 ಲಕ್ಷ ಕ್ಯೂಸೆಕ್ಸ್‌ಗೆ ಆ bridge cum barrage ಮಾಡಿಸಿದ್ದೆವು. ಆದರೂ ಸಹ 6.3 ಕ್ಯೂಸೆಕ್ಸ್ ನೀರು ಬಂದು ಮುಳುಗಿತ್ತು. ಎಷ್ಟು precautions ತೆಗೆದುಕೊಂಡರೂ ಸಹ ಇಂತಹ ಪರಿಸ್ಥಿತಿ ಬಂದಿದೆ. ಆದ್ದರಿಂದ ತಮ್ಮ ಮೂಲಕ ಸರ್ಕಾರಕ್ಕೆ ವಿನಂತಿಸುವುದೇನೆಂದರೆ, ಮುಂದೆ ಯಾವುದೇ ಇಂತಹ ಯೋಜನೆಯನ್ನು ಕೈಗೊಳ್ಳುವಂಥ ಸಂದರ್ಭದಲ್ಲಿ ಸರಿಯಾದ ರೀತಿಯಲ್ಲಿ ಅದರ ಬಗ್ಗೆ ಅಧ್ಯಯನ ಮಾಡುವಂತೆ ಅಧಿಕಾರಿಗಳಿಗೆ ತಿಳಿಸಬೇಕು. ಏಕೆಂದರೆ ಯಾವ ನದಿ ಎಷ್ಟು ಪ್ರವಾಹ ಮಟ್ಟದಲ್ಲಿದೆ ಎಂಬುದು...

**ವೈಸ್‌ಛೇರ್ಮನ್:–** ಬಹಳ ಚೆನ್ನಾಗಿ ಮಾತನ್ನಾಡುತ್ತೀರಿ, ತಮ್ಮ ಮಾತನ್ನು ಮುಕ್ತಾಯಗೊಳಿಸಿ.

**ಶ್ರೀ ಬಸವರಾಜ ಪಾಟೀಲ್ ಇಟಗಿ:–** ಮಾನ್ಯ ಸಭಾಪತಿಯವರೇ, ತಾವು ಏನೇನೋ ಹೇಳಿ ನಮ್ಮ ಮನಸ್ಸಿನಲ್ಲಿರುವುದನ್ನೇ ಕೆಡಿಸಿಬಿಡುತ್ತೀರಿ. ನಮಗೆ ಎಲ್ಲೋ ಒಂದು ಸಲ ಮಾತನಾಡಲು ಅವಕಾಶ ಕಲ್ಪಿಸುತ್ತೀರಿ. ನಮ್ಮ ಹೆಸರನ್ನು ಕರೆಯುವುದೇ ಇಲ್ಲ. ಮಾನ್ಯ ಐವನ್ ಡಿ'ಸೋಜಾರವರಂತಹ ದೊಡ್ಡ–ದೊಡ್ಡವರ ಹೆಸರನ್ನು ಕರೆಯುತ್ತೀರಿ. ನಮ್ಮ ಹೆಸರು ಕೊನೆಯಲ್ಲಿ ಕರೆಯುತ್ತೀರಿ.

ವೈಸ್‌ಛೇರ್ಮನ್:– ಅವರಿಗೆ ನೀವು good hold agriculture graduate ಎಂಬುದು ಗೊತ್ತಿಲ್ಲ.

**ಶ್ರೀ ಬಸವರಾಜ ಪಾಟೀಲ್ ಇಟಗಿ:–** ಮಾನ್ಯ ಸಭಾಪತಿಯವರೇ, ಆ ರೀತಿ ಅಲ್ಲ. ಅವರು ಬೆಂಗಳೂರಿನಲ್ಲಿದ್ದಾರೆ. ಅವರು ಕಿರಿ–ಕಿರಿ ಮಾಡುತ್ತಾರೆ. ನಾವು ಹಳ್ಳಿಯಲ್ಲಿರುತ್ತೇವೆ ನಾವು ಬಂದು ಏನು ಮಾತನಾಡುತ್ತೇವೆ?

**ವೈಸ್‌ಛೇರ್ಮನ್:–** ಆ ರೀತಿ ಅಲ್ಲ. ತಾವೂ ಕೃಷಿ ಪದವೀಧರರು, ಮಾದರಿ ರೈತರು ಎಂಬುದು ಗೊತ್ತಿರುವುದಿಲ್ಲ. ಈಗ ಅವರಿಗೆ ಗೊತ್ತಾಗಿದೆ ಬಿಡಿ.

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಬಸವರಾಜ ಪಾಟೀಲ್ ಇಟಗಿ:–** ಮಾನ್ಯ ಸಭಾಪತಿಯವರೇ, ನೋಡಿ ಮತ್ತೆ ಆ ವಿಚಾರವನ್ನು ವಾಪಸ್ಸು ತರುವುದು ಹೇಗೆ ಎಂದು ಗೊತ್ತಾಗುತ್ತಿಲ್ಲ. ಸಂಪರ್ಕ ಕಡಿತವಾದಂತೆ ಆಯಿತು ಅಲ್ಲವೇ? ಈಗ ಸರ್ಕಾರ ಸಾಕಷ್ಟು ಕ್ರಮವನ್ನು ತೆಗೆದುಕೊಂಡಿದೆ. ಆಗಿರುವಂಥ ಲೋಪವೇನೆಂದರೆ ತಡವಾಗಿ ಪರಿಹಾರ ನೀಡಿದ್ದಾರೆ. ಅದಕ್ಕೆ ಬಹಳ ಒತ್ತಡ ಬೀರಿದ್ದೆ. ಮೊದಲು ಪ್ರತಿ ಕುಟುಂಬಗಳಿಗೆ 10 ಸಾವಿರ ರೂಪಾಯಿಗಳನ್ನು ತಕ್ಷಣವೇ ಬಿಡುಗಡೆ ಮಾಡಿ 3–4 ದಿವಸಗಳಲ್ಲಿ ಎಲ್ಲರಿಗೂ ತಲುಪಿಸಿದ್ದಾರೆ. ಆದರೆ, 10 ಸಾವಿರ ರೂಪಾಯಿಗಳನ್ನು ನೀಡಿದ ಮೇಲೆ ವಾಪಸ್ಸು ಉಳಿಮೆ ಮಾಡುವುದಕ್ಕೆ, ಅವರ ಬದುಕನ್ನು ಕಟ್ಟಿಕೊಳ್ಳುವುದಕ್ಕೆ ಹಣ ಬೇಕಾಗುತ್ತದೆ. ಆದರೆ ಅದನ್ನು ಇನ್ನೂ ನೀಡಿಲ್ಲ. ಮನೆ ನಿರ್ಮಾಣಕ್ಕೆ ಸಹ ಸರಿಯಾಗಿ ಪರಿಹಾರ ನೀಡಿಲ್ಲ. ಮೊನ್ನೆ ಕೇಂದ್ರ ಸರ್ಕಾರದಿಂದ 1200 ಕೋಟಿ ರೂಪಾಯಿ ಬಂದಿದ್ದು, ಅದನ್ನು ಬಿಡುಗಡೆ ಮಾಡಿದ್ದೇವೆ ಎಂದು ಹೇಳಿದ್ದಾರೆ.

**ಶ್ರೀ ಆರ್.ಅಶೋಕ್(ಕಂದಾಯ ಸಚಿವರು):–** ಮಾನ್ಯ ಸಭಾಪತಿಯವರೇ, ಆಗಿಲ್ಲ. ಈಗಾಗಲೇ ಎರಡು ಲಕ್ಷಕ್ಕೂ ಹೆಚ್ಚು ಜನರಿಗೆ 10,000 ರೂಪಾಯಿಗಳನ್ನು ಬಿಡುಗಡೆ ಮಾಡಿದ್ದಾರೆ. ಅದರ ಪಟ್ಟಿ ಸಹ ನಮ್ಮ ಕಛೇರಿಯಲ್ಲಿದೆ. ಅದಕ್ಕೆ ಸಂಬಂಧಿಸಿದಂತೆ ಪುಸ್ತಕದಲ್ಲಿ ಮುದ್ರಿಸಿ ಪ್ರತಿಯೊಬ್ಬರ ವಿಳಾಸದ ಸಮೇತ... ಈ ಮೊದಲು ಚೆಕ್ ನೀಡಲಾಗುತ್ತಿತ್ತು, ಅದನ್ನು ತಡೆದು ಆರ್.ಟಿ.ಜಿ.ಎಸ್. ಮೂಲಕ ಹಣವನ್ನು ನೀಡುವುದಕ್ಕೆ ಹೇಳಿದ್ದೇನೆ. ಎರಡನೆಯದಾಗಿ, ಮಾನ್ಯ ಸದಸ್ಯರು 10,000 ರೂಪಾಯಿಗಳನ್ನು ಬಿಡುಗಡೆ ಮಾಡಿರುವುದು ಬಿಟ್ಟು ಬೇರೆ ಏನೂ ಬಿಡುಗಡೆ ಮಾಡಿಲ್ಲ ಎಂದು ಹೇಳುತ್ತಿದ್ದಾರೆ. ಆದರೆ, ಹಿಂದೆ ಯಾರ ಯಾರ ಮನೆಗಳು ಹಾನಿಯಾಗಿವೆ ಅವರಿಗೆ ರೂ.25,000, 50,000, 1,00,000, 5,00,000 ಗಳಂತೆ ಈ ರೀತಿ ಹಣವನ್ನು ಬಿಡುಗಡೆ ಮಾಡುವ ವ್ಯವಸ್ಥೆ ಇತ್ತು. ಆದರೆ, ಈಗ ಎರಡೇ ಕಂತಿನಲ್ಲಿ ಹಣವನ್ನು ಬಿಡುಗಡೆ ಮಾಡುತ್ತಿದ್ದೇವೆ. ಯಾರಿಗೆ 25,000 ರೂಪಾಯಿಗಳನ್ನು ನೀಡಬೇಕಾಗಿತ್ತು ಅವರಿಗೂ ಸಹ ಶೇಕಡ 60 ರಷ್ಟು ಜನರಿಗೆ ಆರ್.ಟಿ.ಜಿ.ಎಸ್. ಮೂಲಕ ನೀಡಲಾಗಿದೆ. ಹಾಗೆಯೇ ಮನೆ ರಿಪೇರಿ ಮಾಡಿಕೊಳ್ಳುವುದಕ್ಕೆ ರೂ.1,00,000 ಏನೂ ನೀಡಬೇಕಾಗಿತ್ತು, ಅದನ್ನು ಸಹ ಶೇಕಡ 60 ರಷ್ಟು ಜನರಿಗೆ ಆರ್.ಟಿ.ಜಿ.ಎಸ್. ಮೂಲಕ ತಲುಪಿಸಲಾಗಿದೆ. ಈಗ ಸ್ವಲ್ಪ ಬದಲಾವಣೆ ಮಾಡಿದರೆ ಯಾರಿಗೆ ಈಗಾಗಲೇ ಒಂದು ಲಕ್ಷ ನೀಡಲಾಗಿದೆ ಅವರಿಗೆ ಉಳಿದ 4 ಲಕ್ಷ ನೀಡುತ್ತೇವೆ. ಯಾರಿಗೆ ಮನೆಗಳ ರಿಪೇರಿಗೆ ಹಣದ ಅವಶ್ಯಕತೆ ಇದೆ, ಅವರಿಗೆ ಆರ್.ಟಿ.ಜಿ.ಎಸ್. ಮೂಲಕ ತಲುಪಿಸುವಂಥ ಕೆಲಸ ಮಾಡಲಾಗಿದೆ.

**ಶ್ರೀ ಬಸವರಾಜ ಪಾಟೀಲ್ ಇಟಗಿ:–** ಮಾನ್ಯ ಸಭಾಪತಿಯವರೇ, ನಾನು ಹೇಳಿದ ವಿಚಾರವೇನೆಂದರೆ, ಹಣ ಬಿಡುಗಡೆಯಾಗುವುದರಲ್ಲಿ ಸ್ವಲ್ಪ ತಡವಾಗಿದೆ.

**ಶ್ರೀ ಟಿ.ಎ.ಶರವಣ(ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಆರ್.ಟಿ.ಜಿ.ಎಸ್. ಮುಖಾಂತರ ಎಲ್ಲರಿಗೂ ಹಣವನ್ನು ತಲುಪಿಸಲಾಗುತ್ತಿದೆ ಎಂದು ಮಾನ್ಯ ಸಚಿವರು ಹೇಳಿದ್ದಾರೆ. Initially ಕೊಟ್ಟಂತಹ

“ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

ಕೆಲವು ಚೆಕ್‌ಗಳು ಹಿಂದಿರುಗಿ ಬಂದಿದೆ. ಅದರ ಬಗ್ಗೆ ಸಹ ಗಮನಹರಿಸಿ ಅವರಿಗೂ ತಕ್ಷಣವೇ ಆ ಹಣವನ್ನು ಸಹ ಆರ್.ಟಿ.ಜಿ.ಎಸ್. ಮೂಲಕ ತಲುಪಿಸುವಂಥ ಕೆಲಸ ಮಾಡಿಸಿ.

**ಶ್ರೀ ಆರ್.ಅಶೋಕ್:-** ಮಾನ್ಯ ಸಭಾಪತಿಯವರೇ, ಆ ವಿಚಾರ ಪತ್ರಿಕೆಯಲ್ಲಿ ವರದಿಯಾದ ತಕ್ಷಣ ಜಿಲ್ಲಾಧಿಕಾರಿಯವರಿಗೆ ಕರೆ ಮಾಡಿದೆ. ಇದು ಉತ್ತರ ಕರ್ನಾಟಕಕ್ಕೆ ಸಂಬಂಧಿಸಿದ ವಿಚಾರವಾಗಿದೆ. ಡಿ.ಸಿ.ಯವರ ಖಾತೆಯಲ್ಲಿ 60 ಲಕ್ಷ ರೂಪಾಯಿ ಹಣ ಇತ್ತು. ಆದರೆ, ಬ್ಯಾಂಕ್ ಮ್ಯಾನೇಜರ್ ಮಾಡಿದ ತಪ್ಪಿನಿಂದಾಗಿ ಚೆಕ್ ಹಿಂದಿರುಗಿ ಬಂದಿದೆ. ನಂತರ ಬ್ಯಾಂಕ್ ಮ್ಯಾನೇಜರ್‌ರವರಿಗೆ ಇದರ ಸಲುವಾಗಿ ನೋಟೀಸ್ ನೀಡಲಾಗಿದೆ. ಡಿ.ಸಿ.ಯವರ ಖಾತೆಯಲ್ಲಿ 60 ಲಕ್ಷ ರೂಪಾಯಿ ಹಣ ಇತ್ತು. ಎಲ್ಲಾ ಜಿಲ್ಲಾಧಿಕಾರಿಗಳಿಗೂ ಈ ರೀತಿ ಚೆಕ್ ನೀಡುವುದರಿಂದ ಸಮಸ್ಯೆಯಾಗುತ್ತದೆ ಎಂದು ಸೂಚನೆ ನೀಡಲಾಗಿದೆ.

**ಶ್ರೀ ಎಸ್.ಆರ್.ಪಾಟೀಲ್(ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ಪತ್ರಿಕೆಯಲ್ಲಿ ಚೆಕ್ bounce ಆಗಿ ಹಿಂದಿರುಗಿ ಬಂದಿದೆ ಎಂದು ವರದಿಯಾಗಿತ್ತು. ಅದು ತಪ್ಪು ಮಾಹಿತಿ. ನಾನು ಸಹ ಅದರ ಬಗ್ಗೆ ನಮ್ಮ ಜಿಲ್ಲೆಯಲ್ಲಿ ಪರಿಶೀಲನೆ ಮಾಡಿದ್ದೇನೆ. ಖಾತೆಯಲ್ಲಿ ಹಣ ಇದ್ದರೂ ಬ್ಯಾಂಕ್ ಮ್ಯಾನೇಜರ್‌ರವರು ಮಾಡಿದ ತಪ್ಪಿನಿಂದಾಗಿ ಚೆಕ್ bounce ಆಗಿದೆ.

**ಶ್ರೀ ಬಸವರಾಜ ಪಾಟೀಲ್ ಇಟಗಿ:-** ಮಾನ್ಯ ಸಭಾಪತಿಯವರೇ, ತಮ್ಮ ಮೂಲಕ ಮಾನ್ಯ ಕಂದಾಯ ಸಚಿವರಿಗೂ ಧನ್ಯವಾದಗಳನ್ನರ್ಪಿಸುತ್ತೇನೆ. ಅವರು ಮಾಡಿರುವಂತಹ ಸರಿಯಾದ ಕೆಲಸವೇನೆಂದರೆ ಆರ್.ಟಿ.ಜಿ.ಎಸ್. ಮೂಲಕ ನೇರವಾಗಿ farmers ಗಳಿಗೆ ಹಣ ಮುಟ್ಟುವ ಹಾಗೆ ಮಾಡಿದ್ದಾರೆ. ಏಕೆಂದರೆ 2009ನೇ ಸಾಲಿನಲ್ಲಿ ಕೆಲವು ಗ್ರಾಮಗಳಲ್ಲಿ ನೋಡಿದ್ದೇನೆ. ಆ Village Accountant ರವರು ಚೆಕ್ ಪುಸ್ತಕವನ್ನು ಇಟ್ಟುಕೊಂಡು ಅವರಿಗೆ ಇಷ್ಟ ಬಂದವರಿಗೆ ಚೆಕ್ಕನ್ನು ನೀಡಿದ್ದಾರೆ. ಒಬ್ಬ beneficiary ಗೂ ಚೆಕ್ಕನ್ನು ನೀಡಿಲ್ಲ. ಕಂದಾಯ ಸಚಿವರು ಒಳ್ಳೆಯ ಕೆಲಸವನ್ನು ಮಾಡಿದ್ದಾರೆ. ಇನ್ನೂ ಎರಡೂ ದಿವಸ ತಡವಾದರೂ ಪರವಾಗಿಲ್ಲ, ಆರ್.ಟಿ.ಜಿ.ಎಸ್. ಮೂಲಕವೇ ಹಣವನ್ನು ತಲುಪಿಸುವಂತಹ ಕೆಲಸವಾಗಬೇಕು.

**ಶ್ರೀ ಆರ್.ಅಶೋಕ್:-** ಮಾನ್ಯ ಸಭಾಪತಿಯವರೇ, ಬೆಳೆ ಪರಿಹಾರ ಎಂದರೆ, ಹಿಂದಿನ ವರ್ಷದ ಬರಗಾಲಕ್ಕೆ ಸಂಬಂಧಿಸಿದಂತೆ ನಿನ್ನೆ ದಿವಸ 1029.39 ಕೋಟಿ ರೂಪಾಯಿಗಳು ಬಿಡುಗಡೆ ಆಗಿದೆ.

**ವೈಸ್‌ಛೇರ್ಮನ್:-** ಮಾನ್ಯ ವೈ.ಎ.ನಾರಾಯಣಸ್ವಾಮಿಯವರೇ ಸಚಿವರು ಏನು ಹೇಳುತ್ತಿದ್ದಾರೆ ಕೇಳಿ.

**ಶ್ರೀ ಆರ್.ಅಶೋಕ್:-** ಮಾನ್ಯ ಸಭಾಪತಿಯವರೇ, ಮಾನ್ಯ ವೈ.ಎ.ನಾರಾಯಣಸ್ವಾಮಿಯವರು ಇನ್ನೂ ಹೆಬ್ಬಾಳದಲ್ಲಿಯೇ ಇದ್ದಾರೆ. ಎಂ.ಎಲ್.ಎ. ಲೆಕ್ಕದಲ್ಲಿಯೇ ಇದ್ದಾರೆ, ಅವರು ಎಂ.ಎಲ್.ಸಿ. ಆಗಿ ಆಯ್ಕೆಯಾಗಿ ಬಂದಿಲ್ಲ. 2018ನೇ ಸಾಲಿನ ಬೆಳೆ ಪರಿಹಾರಕ್ಕೆ 1029.39 ಕೋಟಿ ರೂಪಾಯಿ ಬಿಡುಗಡೆಯಾಗಿ ಬಂದಿದೆ.

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಅದನ್ನು ನಿನ್ನೆ ಒಂದೇ ದಿವಸದಲ್ಲಿ 4 ಲಕ್ಷ ರೈತರಿಗೆ 240.00 ಕೋಟಿ ರೂಪಾಯಿಗಳನ್ನು ಆರ್.ಟಿ.ಜಿ.ಎಸ್. ಮುಖಾಂತರ ರೈತರ ಖಾತೆಗೆ ಬಿಡುಗಡೆ ಮಾಡುವುದಕ್ಕೆ ಹೇಳಿದ್ದೇನೆ. ಒಂದು ವಾರದೊಳಗೆ ಉಳಿದಂಥ ಎಲ್ಲಾ ರೈತರಿಗೂ ಆರ್.ಟಿ.ಜಿ.ಎಸ್. ಮೂಲಕವೇ ಹಣ ಬಿಡುಗಡೆ ಮಾಡಲಾಗುತ್ತದೆ.

**ಶ್ರೀ ಬಸವರಾಜ ಪಾಟೀಲ್ ಇಟಗಿ:-** ಮಾನ್ಯ ಸಭಾಪತಿಯವರೇ, ಒಂದೆರಡೂ ದಿವಸ ತಡವಾದರೂ ಪರವಾಗಿಲ್ಲ, direct ಆಗಿ ಹಣ farmers account ಗೆ ಹೋಗುವಂತೆ ಮಾಡಿ.

(ಗೊಂದಲ)

**ಶ್ರೀ ಆರ್.ಅಶೋಕ್:-** ಮಾನ್ಯ ಸಭಾಪತಿಯವರೇ, ಅವರು ಹೇಳುತ್ತಿರುವುದು ಸರಿ ಇದೆ. ಅಧಿಕಾರಿಗಳು ಚೆಕ್ಕನ್ನು ಹಾಗೆಯೇ ಜೇಬಿನಲ್ಲಿಟ್ಟುಕೊಂಡು ವಾಪಸ್ಸು ತರುತ್ತಾರೆ.

**ಶ್ರೀ ಕವಟಗಿಮಠ ಮಹಂತೇಶ ಮಲ್ಲಿಕಾರ್ಜುನ:-** ಮಾನ್ಯ ಸಭಾಪತಿಯವರೇ,... ಮಾನ್ಯ ಬಸವರಾಜ ಪಾಟೀಲ್ ಇಟಗಿಯವರೇ, ಮಾನ್ಯ ಆರ್.ಅಶೋಕ್‌ರವರೇ ಒಂದು ನಿಮಿಷ.

**ಶ್ರೀ ಆರ್.ಅಶೋಕ್:-** ಮಾನ್ಯ ಸಭಾಪತಿಯವರೇ, ಚೆಕ್ಕನ್ನು ನೀಡಿದರೆ 500 ರೂಪಾಯಿ 1000 ರೂಪಾಯಿ ಜಾಸ್ತಿ ಕೇಳುವಂತಹ ಕೆಲಸವೂ ನಡೆಯುತ್ತದೆ. ಅದಕ್ಕಾಗಿ ಆರ್.ಟಿ.ಜಿ.ಎಸ್. ಮಾಡಿದರೆ ಈ ರೀತಿಯ ಸಮಸ್ಯೆ ಬಗೆಹರಿಯುತ್ತದೆ. ಆರ್.ಟಿ.ಜಿ.ಎಸ್. ಮೂಲಕವೇ ರೈತರಿಗೆ ಹಣ ತಲುಪಿಸುವ ಹಾಗೆ ಮಾಡುತ್ತೇವೆ.

**ಶ್ರೀ ಕವಟಗಿಮಠ ಮಹಂತೇಶ ಮಲ್ಲಿಕಾರ್ಜುನ(ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಮಾನ್ಯ ಬಸವರಾಜ ಪಾಟೀಲ್ ಇಟಗಿಯವರು ಆರ್.ಟಿ.ಜಿ.ಎಸ್. ಬಗ್ಗೆ ಹೇಳಿದ್ದಾರೆ. ಇಡೀ ದೇಶದಲ್ಲಿ ಪ್ರಥಮ ಬಾರಿಗೆ ನರೇಂದ್ರ ಮೋದಿಯವರು ಪ್ರಧಾನ ಮಂತ್ರಿಯಾದ ನಂತರ... ಮೊದಲು ನಾನು ಹೇಳುವುದನ್ನು ಕೇಳಿ.

(ಗೊಂದಲ)

**ಡಾ॥ ವೈ.ಎ.ನಾರಾಯಣಸ್ವಾಮಿ(ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಈ ರಾಜ್ಯದ ಜನತೆ ಬಗ್ಗೆ ಸ್ವಲ್ಪವೂ ಕಾಳಜಿ ಇಲ್ಲ.

(ಗೊಂದಲ)

**ಶ್ರೀ ಕವಟಗಿಮಠ ಮಹಂತೇಶ ಮಲ್ಲಿಕಾರ್ಜುನ:-** ಮಾನ್ಯ ಸಭಾಪತಿಯವರೇ, ಇವತ್ತು ನೇರವಾಗಿ ಆರ್.ಟಿ.ಜಿ.ಎಸ್. ಮೂಲಕ ರೈತರ ಖಾತೆಗೆ ಹಣ ಜಮೆ ಆಗುತ್ತಿದೆ.

(ಗೊಂದಲ)

**ವೈಸ್‌ಛೇರ್ಮನ್:-** ಎಲ್ಲರೂ ದಯವಿಟ್ಟು ಕುಳಿತುಕೊಳ್ಳಿ.

(ಗೊಂದಲ)

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಶ್ರೀ ಕವಟಗಿಮಠ ಮಹಂತೇಶ ಮಲ್ಲಿಕಾರ್ಜುನ:-** ಮಾನ್ಯ ಸಭಾಪತಿಯವರೇ, ಮಾಡಿರುವ ಕೆಲಸದ ಬಗ್ಗೆ ಹೇಳಬೇಕಲ್ಲವೇ?

(ಗೊಂದಲ)

**ವೈಸ್‌ಛೇರ್ಮನ್:-** ಮಾನ್ಯ ಬಸವರಾಜ ಪಾಟೀಲ್ ಇಟಗಿಯವರು ಅವರ ಮಾತನ್ನು ಮುಕ್ತಾಯಗೊಳಿಸುತ್ತಿದ್ದಾರೆ.

(ಗೊಂದಲ)

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ದೇಶದ ಪ್ರಧಾನ ಮಂತ್ರಿಗಳಾದ ನರೇಂದ್ರ ಮೋದಿಯವರಿಗೆ ಗೌರವ ಸಲ್ಲಿಸುವುದಕ್ಕೆ ಹೇಳುತ್ತಿದ್ದೇವೆ.

(ಗೊಂದಲ)

**ವೈಸ್‌ಛೇರ್ಮನ್:-** ಮಾನ್ಯ ವೈ.ಎ.ನಾರಾಯಣಸ್ವಾಮಿಯವರೇ ದಯವಿಟ್ಟು ಕುಳಿತುಕೊಳ್ಳಿ.

**(ಗೊಂದಲ)**

**ಡಾ॥ ವೈ.ಎ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ಒಂದು ನಿಮಿಷ. ಪ್ರವಾಹ ಬಂದಿರುವಂಥ ಸಂದರ್ಭದಲ್ಲಿ ನಮ್ಮ ಕಂದಾಯ ಸಚಿವರು ಒಳ್ಳೆಯ ಕೆಲಸವನ್ನು ಮಾಡಿದ್ದಾರೆ. ಎಲ್ಲರಿಗೂ ನೇರವಾಗಿ ಆರ್.ಟಿ.ಜಿ.ಎಸ್. ಮುಖಾಂತರ ಹಣವನ್ನು ತಲುಪಿಸುತ್ತಿದ್ದಾರೆ.

(ಗೊಂದಲ)

**ವೈಸ್‌ಛೇರ್ಮನ್:-** ಮಾನ್ಯ ಬಸವರಾಜ ಪಾಟೀಲ ಇಟಗಿಯವರೇ ತಮ್ಮ ಮಾತನ್ನು ಮುಂದುವರೆಸಿ. yield ಆಗುವುದಕ್ಕೆ ಹೋಗಬೇಡಿ.

(ಮುಂದು) . . .

(154)/11.10.2019/2.00/ಎಸ್‌ಕೆ-ಬಿಎನ್‌ಎಸ್

**(ವೈಸ್ ಛೇರ್ಮನ್‌ರವರ ಉಪಸ್ಥಿತಿ)**

**(ಗೊಂದಲ)**

**ವೈಸ್ ಛೇರ್ಮನ್:-** ಮಾನ್ಯ ನಾರಾಯಣಸ್ವಾಮಿಯವರೇ ದಯವಿಟ್ಟು, ಕುಳಿತುಕೊಳ್ಳಿ. ಮಾನ್ಯ ಬಸವರಾಜ ಪಾಟೀಲ್ ಇಟಗಿಯವರೇ, ತಮ್ಮ ಮಾತನ್ನು ಪೂರ್ಣಗೊಳಿಸಿ.

**(ಗೊಂದಲ)**

**ಡಾ॥ ವೈ.ಎ.ನಾರಾಯಣಸ್ವಾಮಿ (ಶಿಕ್ಷಕರ ಕ್ಷೇತ್ರ):-** ನಾನು yield ಆಗಿಲ್ಲ.

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ವೈಸ್ ಛೇರ್ಮನ್:–** ಶ್ರೀ ಬಸವರಾಜ ಪಾಟೀಲ್ ಇಟಗಿಯವರನ್ನು ಬಿಟ್ಟು ಬೇರೆ ಯಾರು ಮಾತನಾಡಿದರೂ ರೆಕಾರ್ಡ್‌ಗೆ ಹೋಗುವುದಿಲ್ಲ. ಶ್ರೀ ಬಸವರಾಜ ಪಾಟೀಲ್ ಇಟಗಿಯವರೆ, ತಮ್ಮ ಮಾತನ್ನು ಮುಗಿಸಿ.

**(ಗೊಂದಲ)**

**ಡಾ॥ ವೈ.ಎ.ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ ಒಂದು ನಿಮಿಷ. ...

(ವೈಸ್ ಛೇರ್ಮನ್‌ರವರ ಆದೇಶದ ಮೇರೆಗೆ ಮಾನ್ಯ ಸದಸ್ಯರಾದ ಡಾ॥ ವೈ.ಎ. ನಾರಾಯಣಸ್ವಾಮಿಯವರು ಮಾತನಾಡಿದ್ದನ್ನು ದಾಖಲಿಸಲಿಲ್ಲ.)

**ವೈಸ್ ಛೇರ್ಮನ್:–** ತಾವು ಮಾತನಾಡಿದ್ದು ರೆಕಾರ್ಡ್‌ಗೆ ಹೋಗುವುದಿಲ್ಲ. ದಯವಿಟ್ಟು ಕುಳಿತುಕೊಳ್ಳಿ.

**(ಗೊಂದಲ)**

**ವೈಸ್ ಛೇರ್ಮನ್:–** ಮಾನ್ಯ ನಾರಾಯಣಸ್ವಾಮಿಯವರೇ, ದಯವಿಟ್ಟು ಕುಳಿತುಕೊಳ್ಳಿ.

**(ಗೊಂದಲ)**

**ಶ್ರೀ ಬಸವರಾಜ ಪಾಟೀಲ್ ಇಟಗಿ(ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ಮಾನ್ಯ ಸಭಾಪತಿಯವರೇ ನಾನೇನು yield ಆಗಿಲ್ಲ.

**ವೈಸ್ ಛೇರ್ಮನ್:–** ಮಾನ್ಯ ನಾರಾಯಣಸ್ವಾಮಿಯವರೇ, ಅವರು yield ಆಗಿಲ್ಲ, ದಯವಿಟ್ಟು ಕುಳಿತುಕೊಳ್ಳಿ. ಶ್ರೀ ಬಸವರಾಜ ಪಾಟೀಲ್ ಇಟಗಿಯವರೇ ತಾವು ಬೇಗ ಮಾತನಾಡಿ ಮುಗಿಸಿ.

**ಶ್ರೀ ಬಸವರಾಜ ಪಾಟೀಲ್ ಇಟಗಿ:–** ಮಾನ್ಯ ಸಭಾಪತಿಯವರೇ, ನಾಲ್ಕೈದು ಪಾಯಿಂಟ್ಸ್ ಇವೆ, ಅವುಗಳನ್ನು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

**ವೈಸ್ ಚೇರ್ಮನ್:–** ಶ್ರೀ ಬಸವರಾಜ ಪಾಟೀಲ್ ಇಟಗಿಯವರೇ, ತಮಗೆ ಇನ್ನೂ ಒಂದೂವರೆ ನಿಮಿಷ ಹೆಚ್ಚಿಗೆ ಅವಕಾಶ ಕೊಡುತ್ತೇನೆ, ತಾವು ಮಾತನಾಡಿ ಬೇಗ ಮುಗಿಸಿ.

**ಶ್ರೀ ಬಸವರಾಜ ಪಾಟೀಲ್ ಇಟಗಿ:–** ಮಾನ್ಯ ಸಭಾಪತಿಯವರೇ, ತಮ್ಮ ರೀತಿ ಹೆಚ್ಚು ತೌಡು ಕುಟ್ಟುವುದಕ್ಕೆ ನನಗೆ ಅಷ್ಟು ಬರುವುದಿಲ್ಲ. ಅದು ನಮ್ಮ ಸಮಸ್ಯೆಯಾಗಿದೆ.

**(ಸದನದಲ್ಲಿ ನಗು)**

**ವೈಸ್ ಛೇರ್ಮನ್:–** ಮಾನ್ಯ ಬಸವರಾಜ ಪಾಟೀಲ್ ಇಟಗಿಯವರೇ, ತೌಡು ಕುಟ್ಟುವುದಕ್ಕೂ ಶಕ್ತಿ ಮತ್ತು ಶ್ರಮ ಎರಡೂ ಇರಬೇಕು.

**ಶ್ರೀ ಬಸವರಾಜ ಪಾಟೀಲ್ ಇಟಗಿ:–** ಮಾನ್ಯ ಸಭಾಪತಿಯವರೇ, ತಮ್ಮಲ್ಲಿ ಆ ಶಕ್ತಿ ಇದೆ. ನಮ್ಮ ಹತ್ತಿರ ಆ ರೀತಿ ಶಕ್ತಿ ಇಲ್ಲ. ಆ ತೌಡು ಕುಟ್ಟುವ ಶಕ್ತಿ ಇದ್ದಿದ್ದರೆ, ನಾನು ಬಹಳ ಮುಂದೆ ಬರುತ್ತಿದ್ದೆನು.

**(ಸದನದಲ್ಲಿ ನಗು)**

**ವೈಸ್ ಛೇರ್ಮನ್:–** ತಾವು ಮಾತನಾಡುವುದನ್ನು ಬೇಗ ಮುಗಿಸಿ.

**(ಗೊಂದಲ)**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ವಿರೋಧ ಪಕ್ಷದ ನಾಯಕರು):–** ಶ್ರೀ ಬಸವರಾಜ ಪಾಟೀಲ್ ಇಟಗಿಯವರು ನಾನು ಭಾವಾಭಿನಯ ಮಾಡುತ್ತೇನೆ, ನೀವು ಅಭಿನಯ ಮಾಡುತ್ತೀರಿ ಎಂದು ಹೇಳಿದರು.

**ವೈಸ್ ಛೇರ್ಮನ್:–** ಶ್ರೀ ಬಸವರಾಜ ಪಾಟೀಲ್ ಇಟಗಿಯವರೇ, ಆಯಿತು ಬೇಗ ಮಾತನಾಡಿ ಮುಗಿಸಿ.

**(ಸದನದಲ್ಲಿ ನಗು)**

**ಶ್ರೀ ಬಸವರಾಜ ಪಾಟೀಲ್ ಇಟಗಿ:–** ಮಾನ್ಯ ಸಭಾಪತಿಯವರೇ, ಇವತ್ತಿನ ದಿವಸ ಇಷ್ಟೆಲ್ಲಾ ಸಮಸ್ಯೆಯನ್ನು ರಾಜ್ಯ ಸರ್ಕಾರ ನೋಡಿದೆ, ತಾವೆಲ್ಲರೂ ಕೂಡ ನೋಡಿದ್ದೀರಿ. ಈಗ ರೈತರಿಗೆ ಇಷ್ಟೆಲ್ಲಾ ನಷ್ಟ ಆಗಿದೆ. ಅದನ್ನು ಈ ಸದನದ ಗಮನಕ್ಕೆ ತರುತ್ತಿದ್ದೇನೆ. ಇವತ್ತಿನ ದಿವಸ ಎಸ್.ಬಿ.ಐ., ಅವರೇನು ನೋಟಿಸ್ ಕಳುಹಿಸುತ್ತಿಲ್ಲ. Axis Bank, ಹೆಚ್.ಡಿ.ಎಫ್.ಸಿ. ಬ್ಯಾಂಕ್, ಐ.ಸಿ.ಐ.ಸಿ.ಐ. ಬ್ಯಾಂಕ್‌ಗಳು, ರೈತರು ಇಷ್ಟೆಲ್ಲಾ ಪ್ರವಾಹದಿಂದ ಹಾನಿಗೆ ಒಳಗಾಗಿದ್ದರೂ ಕೂಡ ಇವತ್ತಿನವರೆಗೂ ಅವರಿಂದ ನೋಟಿಸ್ ಮನೆಯೊಳಗೆ ಬರುತ್ತಿವೆ. ಅದಕ್ಕಾಗಿ ಇದರ ಬಗ್ಗೆ ಸರ್ಕಾರ ಗಂಭೀರವಾದಂತಹ ಕ್ರಮವನ್ನು ತೆಗೆದುಕೊಳ್ಳಬೇಕು. ಈಗಾಗಲೇ ಸರ್ಕಾರದವರು ಡಿಕ್ಲೇರ್ ಮಾಡಿದ್ದಾರೆ. ರೈತರಿಗೆ ಬ್ಯಾಂಕಿನವರು ನೋಟಿಸ್ ಕೊಡಬಾರದು, ಅವರಿಂದ ಸಾಲ ವಸೂಲಿಗೆ ಒತ್ತಾಯ ಮಾಡಬಾರದೆಂದು ನಿರ್ದೇಶನ ಕೊಟ್ಟಿದೆ. ಆದರೂ ಕೂಡ ಆ ರೈತರ ಮನೆ ಬಾಗಿಲಿಗೆ ನೋಟಿಸ್ ಬರುತ್ತಿದೆ. ಇದರ ಬಗ್ಗೆ ಗಂಭೀರವಾದಂತಹ ಚಿಂತನೆ ಮಾಡಬೇಕು. ಮಾನ್ಯ ಕೋಟ ಶ್ರೀನಿವಾಸ ಪೂಜಾರಿಯವರೇ, ತಾವು ಇದರ ಬಗ್ಗೆ ಗಮನಹರಿಸಬೇಕು. ಇದಕ್ಕೆ ನಿರ್ದೇಶನ immediately ಹೋಗಬೇಕು. ನೆರೆ ಬಂದಿರತಕ್ಕಂಥ ಎಲ್ಲಾ ಜಿಲ್ಲೆಗಳಿಗೆ ಇವತ್ತಿನ ದಿವಸ, ಚಿಕ್ಕಮಗಳೂರು ಜಿಲ್ಲೆ ಇರಬಹುದು, ಕೊಡಗು, ರಾಯಚೂರು, ಬೆಳಗಾಂ, ಬಾಗಲಕೋಟೆ ಮತ್ತು ಯಾದಗಿರಿ ಜಿಲ್ಲೆಗಳಿರಲಿ, ಈ ಎಲ್ಲಾ ಜಿಲ್ಲೆಗಳಲ್ಲಿರುವಂತಹ Lead Bank ಗಳಿಗೆ ನೋಟಿಸ್ ಕಳುಹಿಸಿ, ಆರು ತಿಂಗಳು ಅಥವಾ ಒಂದು ವರ್ಷದವರೆಗೆ ರೈತರಿಗೆ pressurize ಮಾಡತಕ್ಕಂಥದ್ದಲ್ಲವೆಂದು ರಾಜ್ಯ ಸರ್ಕಾರದಿಂದ ನಿರ್ದೇಶನ ಕೊಡುವಂತಹದ್ದು ಮುಖ್ಯ. ಒಂದರ ಮೇಲೆ ಒಂದು ಸಮಸ್ಯೆಗಳು ಸರಿಯಾಗಿ ಬರುತ್ತಿವೆ.

**ವೈಸ್ ಛೇರ್ಮನ್:–** ದಯವಿಟ್ಟು ತಮ್ಮ ಮಾತನ್ನು ಮುಗಿಸಿ. ಶ್ರೀ ಬಸವರಾಜ ಪಾಟೀಲ್ ಇಟಗಿಯವರು ನೆನೆಪಿಸಿಕೊಂಡು, ನೆನೆಪಿಸಿಕೊಂಡು ಮಾತನಾಡುತ್ತಿದ್ದಾರೆ.

**(ಸದನದಲ್ಲಿ ನಗು)**

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಬಸವರಾಜ ಪಾಟೀಲ್ ಇಟಗಿ:–** ಮಾನ್ಯ ಸಭಾಪತಿಯವರೇ, ನನ್ನ ಮನೆ ಕೃಷ್ಣಾ ನದಿ ದಂಡೆಯ ಮೇಲೆ ಇದೆ, ಅದು ಮಾನ್ಯ ಎನ್.ಎಸ್.ಬೋಸ್‌ರಾಜ್‌ರವರಿಗೆ ಗೊತ್ತಿದೆ. ಸಂಪೂರ್ಣವಾಗಿ 50 ಗದ್ದೆಗಳು ಮುಳುಗಿವೆ. . . . .

**ವೈಸ್ ಛೇರ್ಮನ್:–** ನಮ್ಮ ಶಾಲೆಯಲ್ಲಿ ಬಹಳ ಮಕ್ಕಳು ಇದೇ ರೀತಿ ಮಾತನಾಡುತ್ತಾರೆ. ದಯವಿಟ್ಟು ತಮ್ಮ ಮಾತನ್ನು ಮುಗಿಸಿ.

**(ಗೊಂದಲ)**

**ಶ್ರೀ ಬಸವರಾಜ ಪಾಟೀಲ್ ಇಟಗಿ:–** ಮಾನ್ಯ ಸಭಾಪತಿಯವರೇ, ತಾವು ಅಲ್ಲಿಗೆ ಬಂದರೆ 50–60 ಮೊಸಳೆ ತೋರಿಸುತ್ತೇನೆ. ಮಾನ್ಯ ಸಭಾಪತಿಯವರೇ, ಈ ನೆರೆ ಹಾವಳಿ ಬಂದಿದ್ದರಿಂದ, ಇಷ್ಟು ಮನೆಗಳು ನೀರಿನಿಂದ ಜಲಾವೃತವಾಗಿವೆ ಮತ್ತು ಇಂತಿಷ್ಟು ಮನೆಗಳು ಬಿದ್ದುಹೋಗಿವೆ ಹಾಗೂ ಪ್ರವಾಹ ಬಂದು ಊರುಗಳು ಕೊಚ್ಚಿಕೊಂಡು ಹೋಗಿವೆ. ಆ ಸಂದರ್ಭದಲ್ಲಿ ಕೇವಲ ಅವರ ಪಾತ್ರೆಗಳು, ಬಟ್ಟೆಗಳು ಅಲ್ಲದೇ ಇವತ್ತು ಅವರ ಲ್ಯಾಂಡ್ ರೆಕಾರ್ಡ್‌ಗಳಾದ ಪಹಣಿ, ಮ್ಯುಟೇಷನ್ ಪ್ರತಿ ಅಥವಾ ನೋಂದಣಿ ಪತ್ರಗಳು, Sale Deeds ಇರತಕ್ಕಂಥವುಗಳು, ಆಧಾರ್ ಕಾರ್ಡ್‌ಗಳು, ರೇಷನ್ ಕಾರ್ಡ್‌ಗಳು, ಈ ರೀತಿ ಏನು ಬಹು ಮುಖ್ಯವಾದ ದಾಖಲೆಗಳು ಅವರ ಲೈಫ್‌ನಲ್ಲಿ ಇದ್ದವೋ ಅವೆಲ್ಲವೂ ಕೂಡ ನೀರಿನಲ್ಲಿ ಕೊಚ್ಚಿಕೊಂಡು ಹೋಗತಕ್ಕಂಥದ್ದು ಆಗಿದೆ. ಇದರಲ್ಲಿ ಕೆಲವು ಮುಳುಗಿರಬಹುದು, ಕೆಲವು ಉಳಿದಿರಬಹುದು. ಅದಕ್ಕೆ ತುರ್ತಾಗಿ ಯಾವುದೇ ನೆರವು ಕೇಳಿದರೆ, ನಮ್ಮ ಅಧಿಕಾರಿಗಳು ಮೊದಲು ನಿಮ್ಮ ಆಧಾರ್ ಕಾರ್ಡ್‌ಗಳನ್ನು ತೆಗೆದುಕೊಂಡು ಬನ್ನಿ, ರೇಷನ್ ಕಾರ್ಡ್ ತೆಗೆದುಕೊಂಡು ಬನ್ನಿ ಅದು ಇಲ್ಲದಿದ್ದರೆ ನೀವು ಹೊರಡಿ ಎಂದು ಹೇಳುತ್ತಾರೆ. ಇತ್ತೀಚೆಗೆ ನಾನು Deccan Herald ದಿನಪತ್ರಿಕೆಯನ್ನು ನೋಡಿದೆ, ಅದರಲ್ಲಿ ಏನು ಇತ್ತು ಎಂದರೆ, ಇವತ್ತಿನ ದಿವಸ ಸರ್ಕಾರ ಮನೆಗಳಿಗೆ ಪರಿಹಾರವನ್ನು ಕೊಡುತ್ತೇವೆಂದು ಹೇಳುತ್ತಿದ್ದಾರೆ. It should be registered in Gram Panchayat. Otherwise, they are not entitled for compensation, ಎಂದು ಆ article ನಲ್ಲಿದೆ. ಮೊನ್ನೆ ನಾನು ಅವರಿಗೂ ಕೂಡ ಕ್ಲಿಯರ್ ಮಾಡಿದ್ದೇನೆ. ಇವತ್ತು ಎಷ್ಟೋ ಹಳ್ಳಿಗಳಲ್ಲಿ ಸಾಕಷ್ಟು ಜನ ಬಡವರು ಗ್ರಾಮ ಠಾಣಾದಲ್ಲಿ ಮನೆಗಳನ್ನು ಕಟ್ಟಿಕೊಂಡಿದ್ದಾರೆ. ಇವತ್ತು ಅವರಲ್ಲಿ ನಾಲ್ಕು ಜನ ಮಕ್ಕಳಿರುವ ಮನೆಗಳಲ್ಲಿ ಜಗಳವಾದ ತಕ್ಷಣವೇ ಅವರು ಏನು ಮಾಡುತ್ತಾರೆಂದರೆ, ಅವರ ಹೆಂಡತಿ–ಮಕ್ಕಳನ್ನು ಕರೆದುಕೊಂಡು ಹೋಗಿ ಎಲ್ಲೋ ಒಬ್ಬ ದೊಡ್ಡವರನ್ನು ಹಿಡಿದುಕೊಂಡು, ಸರ್ ಇದೊಂದು ಸ್ವಲ್ಪ ಜಾಗವನ್ನು occupy ಮಾಡಿಕೊಳ್ಳುತ್ತೇವೆಂದು ಕೈಕಾಲು ಮುಗಿದು, ಒಂದು ಸಣ್ಣ ಮನೆಯನ್ನು ಕಟ್ಟಿಕೊಳ್ಳುತ್ತಾರೆ. ಅವರು ದಾಖಲೆಯನ್ನು ಎಲ್ಲಿಂದ ತರುತ್ತಾರೆ? ಅವರು ದಾಖಲೆಯನ್ನು ತರಬೇಕೆಂದರೆ, ಊರನ್ನೇ ಬಿಡಬೇಕಾಗುತ್ತದೆ. ಯಾವುದೇ

ಗ್ರಾಮಗಳಲ್ಲಿ ಶೇಕಡ 90 ರಷ್ಟು ಸರಿಯಾದ ದಾಖಲೆಗಳು ಇಲ್ಲವೇ ಇಲ್ಲ. ಈಗ ನಾವೇನೇ ಈ ಆಶ್ರಯ ಯೋಜನೆ ...

**ವೈಸ್ ಛೇರ್ಮನ್:–** ನಿನ್ನೆ ದಿವಸ ಈ ವಿಷಯದ ಬಗ್ಗೆ ಪ್ರಸ್ತಾಪವಾಗಿರುವುದಕ್ಕೆ ಮಾನ್ಯ ಸಚಿವರು ಆ ತರಹ ಇರುವಂತಹದ್ದೆಲ್ಲಾ ಪರಿಶೀಲನೆ ಮಾಡಿಕೊಡುತ್ತೇವೆಂದು ಒಪ್ಪಿಕೊಂಡಿದ್ದಾರೆ. Next point.

**ಶ್ರೀ ಬಸವರಾಜ ಪಾಟೀಲ್ ಇಟಗಿ:–** ಮಾನ್ಯ ಸಭಾಪತಿಯವರೇ, ಅದಕ್ಕೆ compensation ಕೊಡಬೇಕು ಎನ್ನುತ್ತಾರೆ.

(ಗೊಂದಲ)

**ವೈಸ್ ಛೇರ್ಮನ್:–** ಮಾನ್ಯ ಬಸವರಾಜ ಪಾಟೀಲ್ ಇಟಗಿಯವರೇ, ತಮ್ಮ ಮಾತನ್ನು ಪೂರ್ಣಗೊಳಿಸಿ. ಮಾನ್ಯ ಸಚಿವರು ಅದನ್ನು clarify ಮಾಡಿದ್ದಾರೆ.

**(ಗೊಂದಲ)**

**ಶ್ರೀ ಬಸವರಾಜ ಪಾಟೀಲ್ ಇಟಗಿ:–** ಮಾನ್ಯ ಸಭಾಪತಿಯವರೇ, ನಾನು ಮಾತನಾಡುವುದಕ್ಕೆ ಹೋದರೆ, ನಡುವೆ ಅಡ್ಡ ಬಂದು ನಿಲ್ಲಿಸಿಬಿಡುತ್ತಾರೆ.

**ವೈಸ್‌ಛೇರ್ಮನ್:–** ತಮ್ಮ ಮಾತನ್ನು ಮುಗಿಸಿ.

**(ಗೊಂದಲ)**

**ಶ್ರೀ ಬಸವರಾಜ ಪಾಟೀಲ್ ಇಟಗಿ:–** ಮಾನ್ಯ ಸಭಾಪತಿಯವರೇ, ಪ್ರವಾಹ ಎಲ್ಲಿ ಜಾಸ್ತಿ ಬಂದಿದೆ, ಎಲ್ಲಿ ಮಳೆ ಜಾಸ್ತಿ ಬಂದಿದೆ, ಅಂತಹ ನಾಲ್ಕಾರು ಜಿಲ್ಲೆಗಳಲ್ಲಿ approach roads to the villages ಎಲ್ಲವೂ ಕೂಡ ಕೊಚ್ಚಿಕೊಂಡು ಹೋಗುವಂತಹದ್ದನ್ನು ನಾವು ಕಂಡಿದ್ದೇವೆ. ನಮ್ಮ ಊರಿನಲ್ಲಿ ರಸ್ತೆಗಳು ಸರಿ ಹೋಗಿಲ್ಲ. ಇವತ್ತು ಉದಾಹರಣೆಗೆ ಹೇಳಬೇಕೆಂದರೆ, ದೇವದುರ್ಗ ತಾಲ್ಲೂಕಿನಲ್ಲಿರುವ ಸುಮಾರು ಹನ್ನೆರಡು ಹಳ್ಳಿಗಳಿಗೆ ಬಸ್ಸುಗಳ ಸೌಲಭ್ಯ ಇವತ್ತಿನವರೆಗೂ ಇಲ್ಲ. ಇದಕ್ಕೆ ಕಾರಣವೇನೆಂದರೆ, ಆ ಸೇತುವೆಗಳು ಹಾಳಾಗಿದ್ದು, approach road ಗಳನ್ನು ಇವತ್ತಿನವರೆಗೂ ಸರಿ ಪಡಿಸಿಲ್ಲ. ಅದನ್ನು ಪಿ.ಡಬ್ಲ್ಯೂ.ಡಿ.ಯವರು ಮಾಡಬೇಕು. ಆ ಪಿ.ಡಬ್ಲ್ಯೂ.ಡಿ.ಯವರನ್ನು ಕೇಳಿದರೆ ಮೇಲಿಂದ ನಮಗೆ ಹಣ ಬಂದರೆ ರಸ್ತೆಗಳನ್ನು ಮಾಡುತ್ತೇವೆಂದು ಹೇಳುವಂತಹ ಸನ್ನಿವೇಶವಾಗಿದೆ. ಸುಮಾರು 72 ರಿಂದ 73 ದಿವಸಗಳಾದರೂ ಕೂಡ ಅಲ್ಲಿರುವ ಮಕ್ಕಳು ಶಾಲೆಗೆ ಇವತ್ತಿನವರೆಗೂ ಹೋಗಿಲ್ಲ. ಯಾರಿಗೆ ಸೈಕಲ್ ಮೋಟಾರ್ ಇದೆಯೋ, ಆ ಸೈಕಲ್ ಮೋಟಾರ್ ಮೇಲೆ ಮಕ್ಕಳನ್ನು ದೇವದುರ್ಗಕ್ಕೆ ಕರೆದುಕೊಂಡು ಹೋಗಿ ಶಾಲೆಗೆ ಮಕ್ಕಳನ್ನು ಬಿಟ್ಟು ಬರುತ್ತಿದ್ದಾರೆ. ಉಳಿದಂತಹವರು ಯಾರಿಗೆ ಶಕ್ತಿಯಿಲ್ಲ, ಆ ಮಕ್ಕಳೆಲ್ಲಾ ಶಾಲೆಗೆ ಹೋಗದೇ ಮನೆಗೆ ಇದ್ದಾರೆ. ಆ border villages ಗೆ ಇವತ್ತಿನವರೆಗೆ

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಬಸ್ಸುಗಳು ಸೌಲಭ್ಯವಿಲ್ಲದೇ ಎರಡು ತಿಂಗಳಾಯಿತು. ಅವರಿಗೆ ಜಿಲ್ಲೆ ಮತ್ತು ತಾಲ್ಲೂಕುಗಳಿಗೆ connectivity ಇಲ್ಲ. ಒಂದು ಸಾಮಾನು ಬರುವುದಿಲ್ಲ. ಕಾಯಿಪಲ್ಯ ಬರಬೇಕೆಂದರೆ, ನಾಲ್ಕು ದಿವಸಗಳು ಬೇಕಾಗುತ್ತದೆ. ಇಲ್ಲದೇ ಹೋದರೆ, ಅವರು ಮೂರು ಅಥವಾ ನಾಲ್ಕು ಕಿಲೋ ಮೀಟರ್‌ವರೆಗೂ ಹೋಗಿ, ಅಲ್ಲಿಂದ ಕಾಯಿಪಲ್ಯ ತೆಗೆದುಕೊಂಡು ಮನೆಗೆ ಬರುವಂತಹ ಸನ್ನಿವೇಶ ಉಂಟಾಗಿದೆ. ನಾನು ಸರ್ಕಾರಕ್ಕೆ ಮನವಿ ಮಾಡುವುದೇನೆಂದರೆ, ಸರ್ಕಾರದ ಹಣವನ್ನು ಅವರಿಗೆ ಆಮೇಲೆ allot ಮಾಡಲಿ. ಎಲ್ಲೆಲ್ಲಿ connectivity cut ಆಗಿದ್ದೆ, ಅಲ್ಲಿಗೆ ತಕ್ಷಣವೇ Executive Engineers ನ್ನು ಕರೆದು, ಅವರಿಗೆ ಒಂದು ನಿರ್ದೇಶನವನ್ನು ಕೊಡಿ. ಐವತ್ತು ಲಕ್ಷ ರೂಪಾಯಿಗಳವರೆಗೆ ಯಾವ ಟೆಂಡರ್ ಇಲ್ಲದೇ ಕಾರ್ಯನಿರ್ವಹಿಸುವುದಕ್ಕೆ ಈಗಾಗಲೇ ಒಂದು ಆದೇಶವನ್ನು ಕೊಟ್ಟಿದ್ದೇವೆ ಎನ್ನುವಂತಹ ಮಾತನ್ನು ಅವರೇ ಹೇಳಿದ್ದನ್ನು ನಾನು ಕೇಳಿದ್ದೇನೆ. ಈಗ ಅವುಗಳನ್ನು immediately restore ಮಾಡುವುದಕ್ಕೆ ಹೇಳಿ. ಮೊದಲನೆಯದಾಗಿ, ಮೂರ್‍ನಾಲ್ಕು ದಿವಸಗಳಲ್ಲಿ ಬಸ್‌ನ್ನು ಬಿಡುವುದಕ್ಕೆ ಹೇಳಿ. ತಾವು ಆಮೇಲೆ ಹಣ ಬಿಡುಗಡೆಯಾದ ಮೇಲೆ ಕಂಟ್ರ್ಯಾಕ್ಟರ್‌ಗಳಿಗೆ ಪೇಮೆಂಟ್ ಮಾಡಬಹುದು. ಇವತ್ತಿನವರಿಗೆ ಆ ಮಕ್ಕಳು ಶಾಲೆಗೆ ಹೋಗದೇ ಎರಡು ತಿಂಗಳು ಕಳೆದು ಹೋಯಿತು. ಎರಡು ತಿಂಗಳು ಬಿಟ್ಟರೆ ಒಂದು ವರ್ಷದ curriculum ಹೋಯಿತಲ್ಲ. ತಾವೇ ಶಿಕ್ಷಕರಿದ್ದೀರಿ. ಇದು ತಮಗೂ ಗೊತ್ತಿದೆ. ಆ ಮಕ್ಕಳು ಶಾಲೆಗೆ ಬಂದಿಲ್ಲವೆಂದರೆ, ಪರೀಕ್ಷೆ ಬರೆಯಲು hall ticket ಕೊಡುವುದಿಲ್ಲ. ಈಗ ಎರಡು ತಿಂಗಳು ಕಳೆದಿದೆ. ಅವರು ಹೇಗೆ ಮಾಡಬೇಕು?

**ವೈಸ್ ಛೇರ್ಮನ್:-** ಆಯಿತು ಮುಂದಿನ ಪಾಯಿಂಟ್‌ಗೆ ಬನ್ನಿ.

**ಶ್ರೀ ಬಸವರಾಜ ಪಾಟೀಲ್ ಇಟಗಿ:-** ಮಾನ್ಯ ಸಭಾಪತಿಯವರೇ, ಇವತ್ತಿನ ದಿವಸ ಈ ಪರಿಸ್ಥಿತಿ ಇದೆ. ಇದನ್ನು ಸರಿ ಮಾಡಿಸುವಂತಹ ಕೆಲಸ ತಕ್ಷಣವೇ ಆಗಬೇಕು. Hall ticket ಇಲ್ಲದಿದ್ದರೆ ಪರೀಕ್ಷೆ ಬರೆಯಲು ಆಗುವುದಿಲ್ಲ.

**ವೈಸ್ ಛೇರ್ಮನ್:-** ನಮ್ಮಲ್ಲಿ ಕೆಲವು ಮಕ್ಕಳಿಗೆ ಪ್ರಶ್ನೆಯನ್ನು ಕೇಳಿದರೆ, ಅವರು ಉತ್ತರವನ್ನು ಬಾಯಿ ಪಾಠ ಮಾಡಿಕೊಂಡು ಬಂದಿರುತ್ತಾರೆ. ಆ ಮಕ್ಕಳು ನೆನೆಪಿಸಿಕೊಂಡು ಉತ್ತರವನ್ನು ಹೇಳುತ್ತಾರೆ. ನಿಮ್ಮ ಕಥೆ ಹಾಗಾಗಿದೆ.

**ಶ್ರೀ ಬಸವರಾಜ ಪಾಟೀಲ್ ಇಟಗಿ:-** ಮಾನ್ಯ ಸಭಾಪತಿಯವರೇ, ತಮ್ಮಲ್ಲಿಯೇ ಶಾಲೆಯನ್ನು ಕಲಿತಿದ್ದೇವೆ. ಇದು ನಮಗೆ ಏನು ಗೊತ್ತಿತ್ತು? ನಾನು conclude ಮಾಡುವುದೇ ಬೇಡವೇ?

**ವೈಸ್ ಛೇರ್ಮನ್:-** ತಾವು conclude ಮಾಡುವುದಿಲ್ಲ. ಈಗ ಸದನವನ್ನು ಭೋಜನ ವಿರಾಮಕ್ಕಾಗಿ ಮಧ್ಯಾಹ್ನ ಮೂರು ಗಂಟೆ ಹದಿನೈದು ನಿಮಿಷದವರೆಗೆ ಮುಂದೂಡಿದ್ದೇನೆ.

“ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**(ಸದನವು ಭೋಜನ ವಿರಾಮಕ್ಕಾಗಿ ಮಧ್ಯಾಹ್ನ 2 ಗಂಟೆ 08 ನಿಮಿಷಕ್ಕೆ ಮುಂದೂಡಿ ಪುನಃ 3 ಗಂಟೆ 15 ನಿಮಿಷಕ್ಕೆ ಸೇರಲು ನಿಶ್ಚಯಿಸಿತು)**

**(155)11.10.2019/3.30/ಎಂ.ಎಂ–ಕೆ.ಎಸ್**

(ಸಭಾಪತಿಯವರ ಉಪಸ್ಥಿತಿ)

**(ಭೋಜನ ವಿರಾಮಕ್ಕಾಗಿ ಮಧ್ಯಾಹ್ನ 2.00 ಗಂಟೆಗೆ ಮುಂದೂಡಲ್ಪಟ್ಟ ಸದನವು ಪುನಃ ಮಧ್ಯಾಹ್ನ 3 ಗಂಟೆ 34 ನಿಮಿಷಕ್ಕೆ ಪ್ರಾರಂಭವಾಯಿತು)**

**ಶ್ರೀ ಬಸವರಾಜ ಪಾಟೀಲ ಇಟಗಿ:–** ಮಾನ್ಯ ಸಭಾಪತಿಯವರೇ, ನಾನು ನನ್ನ ಚರ್ಚೆಯನ್ನು ಮುಕ್ತಾಯಗೊಳಿಸಿಲ್ಲ.

**ಸಭಾಪತಿಯವರು:–** ಆಗುವುದಿಲ್ಲ, ಬೆಳಿಗ್ಗೆ ಎಷ್ಟು ಸಮಯ ಮಾತನಾಡಿದ್ದರಿ ಎಂಬುದನ್ನು ಹೇಳಿ.

**ಶ್ರೀ ಬಸವರಾಜ ಪಾಟೀಲ ಇಟಗಿ:–** ಮಾನ್ಯ ಸಭಾಪತಿಯವರೇ, ಎರಡು ನಿಮಿಷ ಅವಕಾಶ ಕೊಟ್ಟರೆ ಮುಗಿಸುತ್ತೇನೆ.

**ಸಭಾಪತಿಯವರು:–** ತಾವು ಅರ್ಧ ಗಂಟೆ ಮಾತನಾಡಿದ್ದೀರಿ.

**ಶ್ರೀ ಬಸವರಾಜ ಪಾಟೀಲ ಇಟಗಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಬಹಳ ಪ್ರಮುಖವಾದ ಅಂಶವನ್ನು ಹೇಳಬೇಕಾಗಿರುವುದರಿಂದ ಎರಡು ನಿಮಿಷದಲ್ಲಿ ಹೇಳಿ ಮುಗಿಸುತ್ತೇನೆ. ನನಗೆ ಮಾತನಾಡಲು ಅವಕಾಶ ನೀಡಿದ್ದಕ್ಕಾಗಿ ಧನ್ಯವಾದಗಳು. ನಾನು ಹೆಚ್ಚು ಮಾತನಾಡದೇ ಒಂದೆರಡು ಅಂಶಗಳನ್ನು ಹೇಳಿ ತಮ್ಮ ಮೂಲಕ ಸರ್ಕಾರದ ಗಮನಕ್ಕೆ ತರಬಯಸುತ್ತೇನೆ. ಸರ್ಕಾರ ಮುಂದಿನ ದಿನಗಳಲ್ಲಿ dam water management ಬಗ್ಗೆ ಒಂದು Joint Committee ಮಾಡಬೇಕಾಗುತ್ತದೆ. ಏಕೆಂದರೆ ನೀರು ಬಿಡುಗಡೆಯಾದಾಗ ಬಹಳಷ್ಟು ತೊಂದರೆಯಾಗುತ್ತಿದೆ. ಮಹಾರಾಷ್ಟ್ರ, ಕರ್ನಾಟಕ ಮತ್ತು ತೆಲಂಗಾಣ ಈ ಮೂರು ರಾಜ್ಯಗಳಲ್ಲಿ ಒಂದು Monitoring Committee ಅನ್ನು ಮಾಡಬೇಕು. ಅದರ ಮುಖಾಂತರ ನೀರನ್ನು ಬಿಡುಗಡೆ ಮಾಡಿದಾಗ ಮಾತ್ರ ಕಡಿಮೆಯಾಗುತ್ತದೆ ಇದು ಮೊದಲನೆಯದು. ಎರಡನೇಯದಾಗಿ ಬೆಳೆ ಇನ್ಸೂರೆನ್ಸ್ ಬಗ್ಗೆ ಹೇಳುವುದಾದರೆ, ಪ್ರಧಾನ ಮಂತ್ರಿ ಫಸಲ್ ಭೀಮಾ ಯೋಜನೆ ಏನಿದೆ ಅದರಲ್ಲಿ ಒಂದು clause ಇದೆ. ಇಂತಹ ಪ್ರಕೃತಿ ವಿಕೋಪಗಳಾದಾಗ ಸರ್ಕಾರವು 15 ದಿವಸದೊಳಗೆ ಅದನ್ನು ಗುರುತಿಸಿ, ಇವತ್ತು ಸುಮಾರು 19 ಜಿಲ್ಲೆಗಳಲ್ಲಿ ಪ್ರವಾಹ ವಿಕೋಪಕ್ಕೆ ತುತ್ತಾಗಿರುವ ಪರಿಸ್ಥಿತಿಯನ್ನು ನೋಡಿದ್ದೇವೆ. ಒಮ್ಮೆ survey ಮಾಡಿ ಒಂದು ಕ್ಯಾಬಿನೆಟ್ ಮೀಟಿಂಗ್ ಮಾಡಿ ಸಂಬಂಧಪಟ್ಟ ಕೃಷಿ ಸಚಿವರು ಸಭೆ ನಡೆಸಿ ಯಾವ್ಯಾವ ಪ್ರದೇಶಗಳಲ್ಲಿ ಪ್ರಕೃತಿ ವಿಕೋಪಗಳಾಗಿದೆ ಎನ್ನುವುದನ್ನು ಗ್ರಾಮ ಪಂಚಾಯಿತಿಯ ಘಟಕದಲ್ಲಿ ಹೋಬಳಿಯ ಮಟ್ಟದ ಘಟಕಗಳಿಂದ declare ಮಾಡಿದರೆ; ಆ ಘಟಕಗಳಲ್ಲಿ ಒಂದು 'Mid-Season Adversity' ಎಂದಿದೆ. ಅದು

" ತಿದ್ದುಪಡಿಯಾಗದ ಪ್ರತಿ/ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಯಾವಾಗ ಪ್ರಕೃತಿ ವಿಕೋಪವಾಗುತ್ತದೆ ಆಗ ರಾಜ್ಯಸರ್ಕಾರವು ಇಂತಹ ಹೋಬಳಿಗಳಲ್ಲಿ affected crop ಎಂದು ಸರ್ಕಾರದವರು insurance company ಗೆ ಕೊಟ್ಟರೆ, ಅವರು within 15 days ಅಥವಾ ಒಂದು ತಿಂಗಳೊಳಗೆ crop insurance ನ ಶೇ.25 ರಷ್ಟು sum insured amount ತಕ್ಷಣವೇ ಅವರ ಖಾತೆಗೆ ಬರುತ್ತದೆ. Compensation ಅನ್ನು ಎಲ್ಲೆಲ್ಲಿ ಯಾವ್ಯಾವ ರೀತಿ ಕೊಡಬೇಕೆನ್ನುವ ಬಗ್ಗೆ 'Mid-Season Adversity' ಯಲ್ಲಿದೆ. ಅದನ್ನು ಇವರು ಈಗಾಗಲೇ ಕಳುಹಿಸಿದ್ದರೆ ಇಷ್ಟರಲ್ಲಿ ಎರಡು ತಿಂಗಳೊಳಗೆ ಸುಮಾರು ಎರಡರಿಂದ ಎರಡುವರೆ ಸಾವಿರ ಕೋಟಿ ರೂಪಾಯಿ ಈಗಾಗಲೇ ಪ್ರೈಮರಿ ಹಣ ಸರ್ಕಾರಕ್ಕೆ ಬರುತ್ತಿತ್ತು. ಇವತ್ತು ಸರ್ಕಾರಕ್ಕೆ ಒಂದು ಪೈಸೆಯ ತೊಂದರೆಯೂ ಆಗುತ್ತಿರಲಿಲ್ಲ. ಪ್ರವಾಹದಿಂದ ಬಾಧಿತವಾಗಿರುವ 19 ಜಿಲ್ಲೆಗಳು ಕವರ್ ಆಗಿದ್ದರೆ 4 ರಿಂದ 5 ಸಾವಿರ ಕೋಟಿ ರೂಪಾಯಿ ಈಗಾಗಲೇ ರಾಜ್ಯ ಸರ್ಕಾರಕ್ಕೆ ಬರುತ್ತಿತ್ತು. ಇವರಿಗೂ ಕೂಡ ಒಂದು ಪೈಸೆಯ ಬರ್ಡನ್ ಆಗುತ್ತಿರಲಿಲ್ಲ.

**ಶ್ರೀ ಸಿ.ಟಿ. ರವಿ (ಪ್ರವಾಸೋದ್ಯಮ ಸಚಿವರು):–** ಮಾನ್ಯ ಇಟಗಿಯವರೇ, it covers only the affected crop of the insured farmers.

**ಶ್ರೀ ಬಸವರಾಜ ಪಾಟೀಲ ಇಟಗಿ:–** ಮಾನ್ಯ ಸಭಾಪತಿಯವರೇ, ಹೌದು. ಈಗ 19 ಜಿಲ್ಲೆಗಳಲ್ಲಿ ಎಲ್ಲರೂ crop insurance ಮಾಡಿದ್ದಾರೆ. ಅದನ್ನು ಇಷ್ಟೊತ್ತಿಗೆ invoke ಮಾಡಿದ್ದರೆ 3 ರಿಂದ 4 ಸಾವಿರ ಕೋಟಿ ರೂಪಾಯಿಗಳು ರೈತರ ಖಾತೆಗೆ ಬರುತ್ತಿತ್ತು. ಅಲ್ಲಿನ ನಿಯಮ ಏನಿದೆ ಎಂದರೆ, invoke ಮಾಡಿದ 15 ದಿನಗಳೊಳಗೆ ಶೇ.25ರಷ್ಟು sum insured to be paid to the farmers ಎಂದು ಇದೆ. ಉಳಿದದ್ದನ್ನು subsequently ಕೊಡುತ್ತಾರೆ. ರಾಜ್ಯಸರ್ಕಾರಕ್ಕೂ ಒಂದು ಪೈಸೆ exchequer ಆಗುತ್ತಿರಲಿಲ್ಲ. ಆದರೆ ಎರಡು ತಿಂಗಳಾದರೂ ಕೂಡ ಸರ್ಕಾರ ಇದನ್ನು ಇನ್ವೋಕ್ ಮಾಡಿಲ್ಲ. ಅದು ತಪ್ಪು ಎಂದು ತಮ್ಮ ಮುಖಾಂತರ ಹೇಳುತ್ತಿದ್ದೇನೆ. ರೈತರ ಬಗ್ಗೆ ಇನ್ನಷ್ಟು ಕಾಳಜಿ ತೆಗೆದುಕೊಳ್ಳಬೇಕಾಗುತ್ತದೆ. ಇಂತಹ ಪ್ರಕೃತಿ ವಿಕೋಪಗಳಾದಾಗ ರಾಜ್ಯ ಸರ್ಕಾರ ಬಹಳ ಯೋಚನೆ ಮಾಡಬೇಕಾಗುತ್ತದೆ. ಇಂದು ಇಲ್ಲಿ ಉಪಮುಖ್ಯಮಂತ್ರಿಯವರಿದ್ದಾರೆ, ಹಿರಿಯ ಸಚಿವರುಗಳಿದ್ದಾರೆ, ಅವರಿಗೆ ತಮ್ಮ ಮುಖಾಂತರ ವಿನಂತಿ ಮಾಡುವುದೇನೆಂದರೆ, ಇಂತಹ ಪರಿಸ್ಥಿತಿಗಳನ್ನು; ಹಿಂದೆ ಬೆಳೆ ಹಾನಿಯಾದಾಗ, rates slump ಆದಾಗ revolving funds ಅನ್ನು ಇಟ್ಟಿರುತ್ತೇವೆ. ಸರ್ಕಾರ ಏಕೆ ಈ ನಿಟ್ಟಿನಲ್ಲಿ ವಿಚಾರ ಮಾಡಬಾರದು? ಸರ್ಕಾರ ಎರಡುವರೆ ಲಕ್ಷ ಕೋಟಿ ಬಜೆಟ್ ಅನ್ನು ಮಂಡನೆ ಮಾಡಿದೆ. ಇಂತಹ ಪರಿಸ್ಥಿತಿ ಬಂದಾಗ ಪ್ರತ್ಯೇಕವಾಗಿ ಐದು ಸಾವಿರ ಕೋಟಿ ಹಣವನ್ನು ಇಂತಹದ್ದಕ್ಕೆ ಏಕೆ ಇಡಬಾರದು ಎನ್ನುವುದು ನನ್ನ ಪ್ರಶ್ನೆಯಾಗಿದೆ. ಆವರ್ತ ನಿಧಿ

ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಅಥವಾ ಯಾವುದೇ ನಿಧಿಯನ್ನು ನೆರೆ ಹಾವಳಿಗೆ ಉಪಯೋಗ ಮಾಡಬಹುದು. ನಾಳೆ rates slump ಆದಾಗ ಸರ್ಕಾರ ಏನಾದರೂ ನಿರ್ಧಾರ ತೆಗೆದುಕೊಂಡರೆ ಸಾವಿರಾರು ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಬೇಕಾಗುತ್ತದೆ. ಪರಿಹಾರದ ಹಣ ಬರಲು ಎರಡು ತಿಂಗಳಾಯಿತು. ಈ ಸಮಯದಲ್ಲಿ ಆ ಹಣವಿದ್ದರೆ ಅದನ್ನು ಉಪಯೋಗ ಮಾಡಿ ಬಂದಾಗ ಆ ನಿಧಿಗೆ ವರ್ಗಾಯಿಸಬಹುದು.

**ಶ್ರೀ ಸಿ.ಟಿ. ರವಿ (ಪ್ರವಾಸೋದ್ಯಮ ಸಚಿವರು):–** ಮಾನ್ಯ ಸಭಾಪತಿಯವರೇ, ನೆರೆ ಬಂದು ಎರಡು ತಿಂಗಳಾಯಿತು. ಹೊಸ ಸರ್ಕಾರ ಬಂದೂ ಎರಡು ತಿಂಗಳಾಯಿತು. ನಿಮ್ಮ ಸಲಹೆಯನ್ನು ಹಿಂದೆ ಇದ್ದಂತಹ ನಿಮ್ಮ ಸರ್ಕಾರದವರಿಗೆ ನೀವು ಮುಟ್ಟಿಸಲಿಲ್ಲವೋ ಅಥವಾ ಅವರು ಕೇಳಿಸಿಕೊಳ್ಳಲಾರದ ಸ್ಥಿತಿಗೆ ಬಂದಿದ್ದರೋ?

**ಶ್ರೀ ಬಸವರಾಜ ಪಾಟೀಲ ಇಟಗಿ:–** ಮಾನ್ಯ ಸಭಾಪತಿಯವರೇ, ತಮ್ಮ ಮುಖಾಂತರ ಒಂದು ವಿಷಯವನ್ನು ನೆನಪು ಮಾಡುತ್ತೇನೆ. ನಾನು ಮೊದಲು 1998ರಲ್ಲಿ ಚುನಾಯಿತನಾಗಿದ್ದೆ, 2000ನೇ ಇಸವಿಯಲ್ಲಿ ನನಗೆ ಸದನದಲ್ಲಿ ಮಾತನಾಡುವುದಕ್ಕೆ ಅವಕಾಶ ಕೊಟ್ಟರು. ಎರಡು ವರ್ಷಗಳ ಕಾಲ ನನಗೆ ಮಾತನಾಡಲು ಅವಕಾಶ ಕೊಟ್ಟಿರಲಿಲ್ಲ. ಅಂದು ಮಾನ್ಯ ಎಸ್.ಎಂ. ಕೃಷ್ಣರವರು ಇದ್ದಾಗ, I was the first person to raise revolving fund.

(ಮುಂದು . . .

(156) 11–10–2019 /3–40/ಕೆಹೆಚ್–ಕೆಎಸ್ 97

**(ಸಭಾಪತಿಯವರ ಉಪಸ್ಥಿತಿ)**

**ಶ್ರೀ ಬಸವರಾಜ ಪಾಟೀಲ್ ಇಟಗಿ (ಮುಂದು):–** ಇವತ್ತು ಆ ಕಡತಗಳನ್ನು ತೆಗೆದು ನೋಡಿ. ಸರ್ಕಾರದವರು Revolving fund ಗೆ ಖಾಯಂ ಇಡಲೇಬೇಕು. ಆಗ ನಾವು 500 ಕೋಟಿ ರೂಪಾಯಿಗಳನ್ನು ಕೇಳಿದ್ದೆವು. ಆಗ rates ಸಿಕ್ಕಾಪಟ್ಟೆ slump ಆಗಿತ್ತು. ಆ ರೈತರಿಗೆ ಅನುಕೂಲ ಮಾಡುವುದಕ್ಕಾಗಿ ಎ.ಪಿ.ಎಂ.ಸಿ. ಮುಖಾಂತರ ಮ್ಯಾನೇಜ್ ಮಾಡುವುದಕ್ಕಾಗಿ ಆಗ ಮಾಡಲಾಯಿತು. ನಾನು ತಮ್ಮಲ್ಲಿ ವಿನಂತಿ ಮಾಡುವುದೇನೆಂದರೆ, ಇದರ ಬಗ್ಗೆ ರಾಜ್ಯ ಸರ್ಕಾರ ಈಗಲಾದರೂ ಎಚ್ಚೆತ್ತುಕೊಳ್ಳಬೇಕು. ಸುಮಾರು 5 ಸಾವಿರ ಕೋಟಿ ರೂಪಾಯಿಗಳ ಮೊತ್ತವನ್ನು ಇಂತಹ ಪರಿಸ್ಥಿತಿಯಲ್ಲಿ ಉಪಯೋಗ ಮಾಡಬೇಕು. ಉದಾಹರಣೆಗೆ, ತಾವು ಮನೆಗಳನ್ನು ಕೊಟ್ಟು, crop compensation ಕೊಟ್ಟಿದ್ದಾರೆ ಎಂದರೆ, ಕೇಂದ್ರ ಸರ್ಕಾರದಿಂದ ಬಂದಂತಹ ಹಣವನ್ನು ಮತ್ತೆ ಅದಕ್ಕೆ ಹಾಕಬಹುದು. ತಮಗೂ ಕೂಡ revolving fund ಸಿಗುತ್ತದೆ. ಈ ಫಂಡ್ ಸಿಕ್ಕಿದಾಗ ಬೇರೆ ಈ ರೀತಿಯ calamities ಆದಾಗ unusual expenditure

“ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

ಸರ್ಕಾರಕ್ಕೆ ಬಂದಾಗ ತಮಗೆ scope ಇರುತ್ತದೆ. ಯಾರು ಕೇಳದೆಯೇ, immediately funds can be released. ಇದರ ಬಗ್ಗೆ ಸರ್ಕಾರದವರು ಸಾಕಷ್ಟು ಆಲೋಚನೆ ಮಾಡಬೇಕು.

**ಸಭಾಪತಿಯವರು:-** ಆಯಿತು. ಮಾನ್ಯ ಸದಸ್ಯರಾದ ತಿಪ್ಪೇಸ್ವಾಮಿಯವರೇ, ತಾವು ಮಾತನಾಡಿ.

**ಶ್ರೀ ಬಸವರಾಜ ಪಾಟೀಲ್ ಇಟಗಿ:-** ಮಾನ್ಯ ಸಭಾಪತಿಯವರೇ, ಒಂದು ನಿಮಿಷ. I should thank the people of Karnataka. ಇವತ್ತು ನಮ್ಮ ರಾಜ್ಯದ ಜನರು ಇಂತಹ ಕಷ್ಟದ ಸಮಯದಲ್ಲಿಯೂ ಕೂಡ ಬೇರೆ ಬೇರೆ ಪ್ರದೇಶಗಳಲ್ಲಿರುವ ಉತ್ತರ ಕರ್ನಾಟಕ, ದಕ್ಷಿಣ ಕರ್ನಾಟಕದಲ್ಲಿರುವ ಸಾಕಷ್ಟು ಜನರು ತಮಗೆ ಶಕ್ತಿ ಏನಿದೆ, ಅದನ್ನು ತಂದು ಪ್ರತಿಯೊಬ್ಬ ಸಂತ್ರಸ್ತರಿಗೆ ಕೊಡುವಂತಹ ಕೆಲಸವನ್ನು ಮಾಡಿದ್ದಾರೆ. ನಮ್ಮ ಕಡೆಯಿಂದ ಅವರಿಗೂ ಕೂಡ ಧನ್ಯವಾದಗಳನ್ನು ಹೇಳುತ್ತಿದ್ದೇನೆ. ಅದಲ್ಲದೇ especially ಟಿ.ವಿ. ಮಾಧ್ಯಮದವರು, ದೃಶ್ಯ ಮಾಧ್ಯಮದವರು ಅವರ ಜೀವದ ಹಂಗನ್ನು ತೊರೆದು ಬೆಳಗಾವಿ ಜಿಲ್ಲೆಯಲ್ಲಿ ಆ ನೀರಿನಲ್ಲಿ ಅರ್ಧ ಮುಳುಗಿ, ಬೋಟ್‌ನಲ್ಲಿ ಹೋಗಿ ಇಷ್ಟು ದೃಶ್ಯಗಳನ್ನು ತಂದು ನಮ್ಮೆಲ್ಲರಿಗೂ ಎಚ್ಚರಿಸುವಂತಹ ಕೆಲಸವನ್ನು ಇವತ್ತಿನ ದಿವಸ ಈ ಪ್ರಿಂಟ್ ಮೀಡಿಯಾ, ಟಿ.ವಿ. ಮಾಧ್ಯಮದವರು ಮಾಡುತ್ತಿದ್ದಾರೆ. ಅವರಿಗೂ ಕೂಡ ನನ್ನ ಧನ್ಯವಾದಗಳನ್ನು ಹೇಳಿ ಮತ್ತು ನನಗೆ ಮಾತನಾಡುವುದಕ್ಕೆ ಅವಕಾಶವನ್ನು ಮಾಡಿಕೊಟ್ಟಿರುವುದಕ್ಕೆ ತಮಗೂ ಕೂಡ ಧನ್ಯವಾದಗಳನ್ನು ಹೇಳಿ ನನ್ನ ಎರಡು ಮಾತನ್ನು ಮುಗಿಸುತ್ತೇನೆ.

**ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಅವಕಾಶಕ್ಕಾಗಿ ಧನ್ಯವಾದಗಳು. ಈ ಶತಮಾನದಲ್ಲಿ ಕಂಡರಿಯದ ಭೀಕರ ನೆರೆ ಹಾವಳಿಯನ್ನು ನಾವು ನೋಡಿದ್ದೇವೆ. ವಿಶೇಷವಾಗಿ ಇಡೀ ಕರ್ನಾಟಕ ಕಳೆದ 100 ವರ್ಷಗಳಲ್ಲಿ ಇದೇ ಪ್ರಥಮ ಬಾರಿಗೆ ಅತಿ ದೊಡ್ಡ ಮಳೆಯಿಂದಾಗಿ ಪ್ರವಾಹ ಪೀಡಿತವಾಗಿದೆ. ನಾವು ಅನೇಕ ಸಂದರ್ಭಗಳಲ್ಲಿ ಉತ್ತರ ಕರ್ನಾಟಕದ ಬಗ್ಗೆ ಮಾತನಾಡುತ್ತೇವೆ. ಆದರೆ ಇಡೀ ಕರ್ನಾಟಕವೇ ಈ ಒಂದು ಅನಾಹುತಕ್ಕೆ ತುತ್ತಾಗಿರುವಂತಹ ಸಂದರ್ಭದಲ್ಲಿ ಮತ್ತು ಕರ್ನಾಟಕದಲ್ಲಿ ಆಗಿರುವಂತಹ ನೆರೆ ಹಾವಳಿಯಿಂದಾಗಿ ನಾವು ಇತಿಹಾಸವನ್ನು ಗಮನಿಸಿದಾಗ ಆಗಿರುವ ಅನಾಹುತಕ್ಕೆ ಹಿನ್ನೆಲೆ ಏನು? ಪರಿಸರದ ಬಗ್ಗೆ ಮಾತನಾಡುವಂತಹ ನಾವು ಪ್ರತಿ ಬಾರಿ ಮಳೆ ಬಂದಾಗ ಗಿಡ ನೆಡುವಂತಹ ಪರಿಸರದ ಕಾಳಜಿ ಬಗ್ಗೆ ಮಾತನಾಡುತ್ತೇವೆ. ಆದರೆ ಪರಿಸರ ಸಂರಕ್ಷಣೆಯ ಬಗ್ಗೆ ಯಾವುದೇ ಸರ್ಕಾರ ಇರಬಹುದು, ಅದು ಕಟ್ಟಕಡೆಯ ಮಾತಾಗಿರುತ್ತದೆ. ಪರಿಸರ ರಕ್ಷಣೆ ಮತ್ತು ಪರಿಸರ ಸಂರಕ್ಷಣೆಯಾದಾಗ ಮಾತ್ರ ಈ ರಾಷ್ಟ್ರೀಯ ವಿಪತ್ತುಗಳನ್ನು, ನೆರೆ ಹಾವಳಿಯನ್ನು ಯಶಸ್ವಿಯಾಗಿ ಹಿಡಿದಿಟ್ಟುಕೊಳ್ಳಬಹುದೆಂಬ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ.

" ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ವಿಶೇಷವಾಗಿ ಮೊನ್ನೆಯ ದಿವಸ ಬಂದಿರುವಂತಹ ಈ ನೆರೆ ಮತ್ತು ಪಶ್ಚಿಮ ಘಟ್ಟ ಪ್ರದೇಶದಲ್ಲಿ ಆಗಿರುವಂತಹ ಮಳೆ ಹಾಗೂ ಕರ್ನಾಟಕ ರಾಜ್ಯದ ಇನ್ನಿತರ ಕಡೆಗಳಲ್ಲಿ ಆಗಿರುವಂತಹ ಮಳೆ ಹಿನ್ನೆಲೆಯಲ್ಲಿ ಬಹಳ ನಷ್ಟವನ್ನು ಅನುಭವಿಸುತ್ತಿದೆ. ಜನ–ಜಾನುವಾರುಗಳಿರಬಹುದು, ರೈತರು ಬೆಳೆದಂತಹ ಬೆಳೆ ಇರಬಹುದು, ಸರ್ಕಾರಿ ಕಟ್ಟಡಗಳು ಇರಬಹುದು, ಇಡೀ ಸಮಾಜದ ಕುಟುಂಬವೇ ಅತ್ಯಂತ ತೊಂದರೆಯನ್ನು ಅನುಭವಿಸಿರುವಂತಹ ಒಂದು ಭೀಕರ ಸಂದರ್ಭವನ್ನು ನಾವೆಲ್ಲರೂ ಎದುರಿಸಿದ್ದೇವೆ. ವಿಶೇಷವಾಗಿ ಮಹಾರಾಷ್ಟ್ರದ ಪಶ್ಚಿಮ ಘಟ್ಟದ ಪ್ರದೇಶದಲ್ಲಿ ಹುಟ್ಟುವಂತಹ ನದಿಗಳಾದ ಕೃಷ್ಣಾ ನದಿ, ದೂದ್‌ಗಂಗಾ, ವೇದಗಂಗಾ, ಪಂಚಗಂಗಾ, ಮಲಪ್ರಭಾ, ಘಟಪ್ರಭಾ, ಹಿರಣ್ಯಕೇಶಿ ಮತ್ತು ಮಾರ್ಕಂಡೇಯ ಈ ಎಲ್ಲಾ ನದಿಗಳು ಬೆಳಗಾವಿ ಜಿಲ್ಲೆಯ ಮುಖಾಂತರ ಹಾಗೂ ಬಾಗಲಕೋಟೆ ಜಿಲ್ಲೆಯ ಮುಖಾಂತರ ಆಲಮಟ್ಟಿ ಜಲಾಶಯವನ್ನು ಸೇರುವಂತಹ ವ್ಯವಸ್ಥೆ ಇದಾಗಿದೆ. ಅನೇಕ ಸಂದರ್ಭಗಳಲ್ಲಿ 2005–06ನೇ ಸಾಲಿನಲ್ಲಿ ಮತ್ತು 2009ನೇ ಸಾಲಿನಲ್ಲಿ ಪ್ರವಾಹ ಬಂದಂತಹ ಸಂದರ್ಭದಲ್ಲೂ ಸಹ ನಾವು ಬರವನ್ನು ಅನುಭವಿಸಿದ್ದೆವು. ಅಲ್ಲಿ ಆದಂತಹ ಭೀಕರ ಮಳೆಯಿಂದ ನಾವು ನೆರೆ ಹಾವಳಿಯನ್ನು ಅನುಭವಿಸಿದ್ದನ್ನು ಸಹ ನಾವು ನೋಡಿದ್ದೇವೆ. ಆದರೆ ಈ ಬಾರಿ ಮಾತ್ರ ಅಲ್ಲಿಯೇ ನೆರೆಯಾಗಿ ಮಳೆ ಬಂದಿದ್ದು ಮತ್ತು ಕರ್ನಾಟಕದ ಎಲ್ಲಾ ಭಾಗಗಳಲ್ಲೂ ಸಹಿತ ಅತ್ಯಂತ ಹೆಚ್ಚು ಮಳೆಯನ್ನು ನಾವು ಕಂಡಿದ್ದೇವೆ. 2019ನೇ ಸಾಲಿನ ಮುಂಗಾರು ಮಳೆಯ ವಿವರವನ್ನು ನಾವು ಗಮನಿಸಿದಾಗ ಆಗಸ್ಟ್ 1 ರಿಂದ 10ನೇ ತಾರೀಖಿನವರೆಗೆ ಆದಂತಹ ಒಟ್ಟು ಮಳೆಯ ಪ್ರಮಾಣ ಎಷ್ಟೆಂದರೆ, ಅಥಣಿ ತಾಲ್ಲೂಕಿನಲ್ಲಿ ವಾಸ್ತವವಾಗಿ 21 ಎಂ.ಎಂ. ಮಳೆ ಆಗುತ್ತದೆ. ಆದರೆ ಅಲ್ಲಿ 75 ಎಂ.ಎಂ. ಮಳೆ ಆಗಿದೆ. ಬೆಳಗಾವಿ ಜಿಲ್ಲೆಯಲ್ಲಿ ಆಗಿರುವ ಹಾನಿಯ ಬಗ್ಗೆ ನಾನು ವಿವರಗಳನ್ನು ಕೊಡುತ್ತಿದ್ದೇನೆ. ಬೈಲಹೊಂಗಲ ತಾಲ್ಲೂಕಿನಲ್ಲಿ 63 ಎಂ.ಎಂ. ನಷ್ಟು ವಾಡಿಕೆ ಮಳೆಯಾಗುತ್ತಿತ್ತು. ಆದರೆ, ಅಲ್ಲಿ 401 ಎಂ.ಎಂ. ಮಳೆಯಾಗಿದೆ. ಬೆಳಗಾವಿ ತಾಲ್ಲೂಕಿನಲ್ಲಿ ವಾಡಿಕೆಯಂತೆ 132 ಎಂ.ಎಂ. ಮಳೆ ಆಗಬೇಕಾಗಿತ್ತು, ಆದರೆ ಅಲ್ಲಿ 674 ಎಂ.ಎಂ. ಮಳೆಯಾಗಿದೆ. ಚಿಕ್ಕೋಡಿ ತಾಲ್ಲೂಕಿನಲ್ಲಿ 36 ಎಂ.ಎಂ. ವಾಡಿಕೆ ಮಳೆಗಿಂತ ಹೆಚ್ಚು ಅಂದರೆ, 301 ಎಂ.ಎಂ. ಮಳೆಯಾಗಿದೆ. ಗೋಕಾಕ್ ತಾಲ್ಲೂಕಿನಲ್ಲಿ 21 ಎಂ.ಎಂ. ವಾಡಿಕೆ ಮಳೆಗಿಂತ ಹೆಚ್ಚು ಅಂದರೆ, 153 ಎಂ.ಎಂ. ಮಳೆಯಾಗಿದೆ. ಖಾನಾಪೂರ ತಾಲ್ಲೂಕಿನಲ್ಲಿ 8 ದಿನಗಳಲ್ಲಿ 1200 ಎಂ.ಎಂ. ಮಳೆಯಾಗಿದೆ. ಕಳೆದ 50 ವರ್ಷಗಳಲ್ಲಿ ಈ ರೀತಿಯ ದೊಡ್ಡ ಮಳೆ ಯಾವತ್ತೂ ಆಗಿರಲಿಲ್ಲ. ಒಟ್ಟು ಬೆಳಗಾವಿ ಜಿಲ್ಲೆಯಲ್ಲಿ ರಾಮದುರ್ಗ, ರಾಯಭಾಗ, ಸವದತ್ತಿ ಇನ್ನು ಹಲವು ತಾಲ್ಲೂಕುಗಳಲ್ಲಿಯೂ ಕೂಡ ಅತ್ಯಂತ ಹೆಚ್ಚು ಮಳೆಯನ್ನು ನಾವು ಕಾಣುತ್ತಿದ್ದೇವೆ. ಹೀಗಾಗಿ ಕೃಷ್ಣಾ ನದಿ, ದೂದ್‌ಗಂಗಾ, ವೇದಗಂಗಾ, ಪಂಚಗಂಗಾ, ಮಲಪ್ರಭಾ, ಘಟಪ್ರಭಾ, ಹಿರಣ್ಯಕೇಶಿ ಮತ್ತು ಮಾರ್ಕಂಡೇಯ ಈ ಎಲ್ಲಾ ನದಿಗಳಲ್ಲಿ ವಿಶೇಷವಾಗಿ ಮಹಾರಾಷ್ಟ್ರದಲ್ಲಿರುವ ಬೇರೆ ನದಿಗಳು ಸಹ ಕೃಷ್ಣಾ ನದಿಗೆ ಸೇರುತ್ತವೆ. ಕೃಷ್ಣಾ ನದಿ ಮುಖಾಂತರ ಹರಿದು ಬರುವಂತಹ ಈ ನೀರು ಸುಮಾರು ಕ್ಯೂಸೆಕ್ಸ್‌ಗಳಲ್ಲಿ ಗಮನಿಸಿದಾಗ ನನ್ನ ಹತ್ತಿರವಿರುವ ಮಾಹಿತಿಯ ಪ್ರಕಾರ

ಜುಲೈ ಮತ್ತು ಆಗಸ್ಟ್ ತಿಂಗಳಿನಲ್ಲಿ ದಿನಾಂಕ:03-08-2019 ರಲ್ಲಿ Kallur barrage ಗೆ ಸುಮಾರು 2 ಲಕ್ಷ ಕ್ಯೂಸೆಕ್ಸ್ ನೀರು ಒಂದೇ ದಿನದಲ್ಲಿ ಹರಿದು ಬಂದಿದೆ. ಹಾಗೆಯೇ, 4ನೇ ತಾರೀಖು 2 ಲಕ್ಷ 31 ಸಾವಿರ ಕ್ಯೂಸೆಕ್ಸ್ ನೀರು, 5ನೇ ತಾರೀಖು 2 ಲಕ್ಷ 64 ಸಾವಿರ ಕ್ಯೂಸೆಕ್ಸ್ ನೀರು, 6ನೇ ತಾರೀಖು 2 ಲಕ್ಷ 94 ಸಾವಿರ ಕ್ಯೂಸೆಕ್ಸ್ ನೀರು, 7ನೇ ತಾರೀಖು 3 ಲಕ್ಷ 46 ಸಾವಿರ ಕ್ಯೂಸೆಕ್ಸ್ ನೀರು, 8ನೇ ತಾರೀಖು 3 ಲಕ್ಷ 88 ಸಾವಿರ ಕ್ಯೂಸೆಕ್ಸ್ ನೀರು, 9ನೇ ತಾರೀಖು 4 ಲಕ್ಷ 7 ಸಾವಿರ ಕ್ಯೂಸೆಕ್ಸ್ ನೀರು, 10ನೇ ತಾರೀಖು 4 ಲಕ್ಷ 7 ಸಾವಿರ ಕ್ಯೂಸೆಕ್ಸ್ ನೀರು ಹರಿದು ಬಂದಿದೆ. ಹೀಗೆ ಸುಮಾರು 4 ಲಕ್ಷ ಕ್ಯೂಸೆಕ್ಸ್ ನೀರು Rajapur ಮತ್ತು Kallur barrage ಮುಖಾಂತರ ಕೃಷ್ಣಾ ನದಿಗೆ ಹರಿದು ಬಂದಂತಹ ಹಿನ್ನೆಲೆಯಲ್ಲಿ ಇದರ ಜೊತೆಗೆ ಕರ್ನಾಟಕದ ಬೇರೆ ಭಾಗದಲ್ಲಿರುವಂತಹ ಘಟಪ್ರಭಾ, ಹಿರಣ್ಯಕೇಶಿ ಮತ್ತು ಮಲಪ್ರಭಾ ನದಿಗಳಿಗೂ ಸಹಿತ ಹರಿದು ಬಂದಿದೆ. ನಾವು ಮಹದಾಯಿ ನದಿ ನೀರಿನ ಬಗ್ಗೆ ಮಾತನಾಡುತ್ತೇವೆ. ಖಾನಾಪೂರದಲ್ಲಿ ಆದಂತಹ ದೊಡ್ಡ ಘೋರ ಮಳೆಯ ಹಿನ್ನೆಲೆಯಲ್ಲಿ ಮಲಪ್ರಭಾ ನದಿಗೂ ಸಹಿತ ಸುಮಾರು 4 ದಶಕಗಳಲ್ಲಿ ಕೇವಲ 4 ಬಾರಿ ಮಾತ್ರ Malaprabha reservoir ತುಂಬಿತ್ತು. ಆದರೆ ಈ ಬಾರಿ ಕೇವಲ 8 ದಿನಗಳಲ್ಲಿ Malaprabha reservoir ತುಂಬಿದೆ. ಆದ್ದರಿಂದ ಒಮ್ಮೆಲೇ ನದಿ ಮುಖಾಂತರ ರಾಮದುರ್ಗ ತಾಲ್ಲೂಕು ಮತ್ತು ಬಾಗಲಕೋಟೆ ಜಿಲ್ಲೆಗೆ ಸುಮಾರು 1 ಲಕ್ಷ 20 ಸಾವಿರ ಕ್ಯೂಸೆಕ್ಸ್ ನೀರನ್ನು ಒಂದೇ ದಿನದಲ್ಲಿ ಹರಿಯ ಬಿಡಲಾಯಿತು. ಇದರಿಂದ ಬೆಳಗಾವಿ ಜಿಲ್ಲೆಯ ರಾಮದುರ್ಗ ತಾಲ್ಲೂಕಿನ ಸುಮಾರು 29 ಗ್ರಾಮಗಳು, ಸವದತ್ತಿ ತಾಲ್ಲೂಕಿನ ಸುಮಾರು 9 ಗ್ರಾಮಗಳು ಪ್ರವಾಹಕ್ಕೆ ಈಡಾಗಿರುವುದನ್ನು ತಾವು ಗಮನಿಸಬೇಕು. ಇಡೀ ಜನರ ಜೀವನ ಅತ್ಯಂತ ತೊಂದರೆಗೀಡಾಗಿ ಅವರು ಬೆಳೆದಂತಹ ಬೆಳೆ ಇರಬಹುದು, ಅವರು ಮನೆ-ಮಠಗಳನ್ನು ಕಳೆದುಕೊಂಡಿರುವಂತಹ ಸಂದರ್ಭವನ್ನು ನಾವು ನೋಡಿದ್ದೇವೆ. ಬಾದಾಮಿ ತಾಲ್ಲೂಕು ಮಲಪ್ರಭಾ ನದಿ ಪಾತ್ರದಲ್ಲಿ ಬರುವಂತಹ ಗ್ರಾಮಗಳಾಗಿವೆ. ಇದಾದ ನಂತರ ಘಟಪ್ರಭಾ ನದಿಯಿಂದ ಮುಂದೆ ಇರುವಂತಹ ಗ್ರಾಮಗಳು ಗೋಕಾಕ್ ತಾಲ್ಲೂಕಿನ ಅನೇಕ ಗ್ರಾಮಗಳು ಸಹಿತ ಈ ನದಿ ನೀರಿನಿಂದ ಬಾಧಿತವಾಗಿರುವಂತಹ ಗ್ರಾಮಗಳಾಗಿವೆ. ಈ ಸಂದರ್ಭದಲ್ಲಿ ಇಷ್ಟೇ ಹೇಳುವುದಕ್ಕೆ ಬಯಸುತ್ತಿದ್ದೇನೆ. ಈಗಾಗಲೇ ಹಲವಾರು ಸದಸ್ಯರು ಅನೇಕ ವಿಚಾರಗಳನ್ನು ಪ್ರಸ್ತಾಪ ಮಾಡಿದ್ದಾರೆ. ಸನ್ಮಾನ್ಯ ಮುಖ್ಯಮಂತ್ರಿಗಳಾಗಿರುವಂತಹ ಯಡಿಯೂರಪ್ಪನವರಿಗೆ ನಿಜವಾಗಿಯೂ ಈ ಪಕ್ಷದ ಸದಸ್ಯನಾಗಿದ್ದೇನೆಂದು ಅಲ್ಲ, ಒಬ್ಬ ನಾಯಕನಾಗಿ ಜನರ ಭಾವನೆಗಳಿಗೆ, ಸಮಸ್ಯೆಗಳಿಗೆ ಯಾವ ರೀತಿ ಸ್ಪಂದಿಸಬಹುದು; ಹಾಗೆಯೇ ಇನ್ನು ಮಂತ್ರಿಮಂಡಲ ರಚನೆಯಾಗಿರಲಿಲ್ಲ, ಸನ್ಮಾನ್ಯ ಯಡಿಯೂರಪ್ಪನವರು ಮುಖ್ಯಮಂತ್ರಿಗಳಾಗಿ ಕೆಲವೇ ದಿನಗಳಲ್ಲಿ ಈ ಒಂದು ದೊಡ್ಡ ಪ್ರವಾಹ ಬಂದಂತಹ ಸಂದರ್ಭದಲ್ಲಿ ತಕ್ಷಣ ನಿರ್ಣಯವನ್ನು ತೆಗೆದುಕೊಂಡು ಪ್ರತಿ ಕುಟುಂಬಕ್ಕೆ ಸುಮಾರು 10 ಸಾವಿರ ರೂಪಾಯಿಗಳನ್ನು ಕೊಡುವಂತಹ ನಿರ್ಣಯವನ್ನು ತೆಗೆದುಕೊಂಡರು.

(ಮುಂದು)

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**(157) 11/10/2019/3:50/ಎಸ್‌ಪಿಆರ್/ಜಿಆರ್**

**(ಸಭಾಪತಿಯವರ ಉಪಸ್ಥಿತಿ)**

**ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ (ಮುಂದು):-**

ಒಂದು ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳಲೇ ಬೇಕಾಗುತ್ತದೆ. ಮಾನ್ಯ ಸದಸ್ಯರಾದ ಶ್ರೀ ಬಸ್ಸವರಾಜ್ ಪಾಟೀಲ್ ಇಟಗಿರವರು ಮಾತನಾಡುವ ಸಂದರ್ಭದಲ್ಲಿ ಆರ್.ಟಿ.ಜಿ.ಎಸ್., ವ್ಯವಸ್ಥೆಯನ್ನು ಜಾರಿಗೆ ತಂದಿರುವುದರಿಂದ ನೇರವಾಗಿ ಬಡ ಜನರ ಖಾತೆಗಳಿಗೆ ನೆರೆ ಪರಿಹಾರ ಮೊತ್ತವು ಜಮಾ ಆಯಿತು. ಅಂತಹ ವ್ಯವಸ್ಥೆಯಿಂದ ಬಹಳ ಅನುಕೂಲವಾಗಿದೆ ಎಂಬ ಮಾತನ್ನೂ ಸಹ ಮಾನ್ಯ ಸದಸ್ಯರು ಹೇಳಿದರು. ನಾನು ಸಾಂದರ್ಭಿಕವಾಗಿ 'ಜನ್-ಧನ್' ವಿಚಾರವನ್ನು ಪ್ರಸ್ತಾಪಿಸಿದ್ದೇನೆ. ಯಾರನ್ನೂ ಹೊಗಳುವುದಕ್ಕಾಗಿ ನಾನು ಈ ಮಾತನ್ನು ಹೇಳುತ್ತಿಲ್ಲ. 2005 ಹಾಗೂ 2009 ನೇ ಸಾಲಿನಲ್ಲಿ ಬೆಳಗಾವಿ ಜಿಲ್ಲೆಯ ಚಿಕ್ಕೋಡಿ ತಾಲ್ಲೂಕಿನಲ್ಲಿ ಪ್ರವಾಹ ಪರಿಸ್ಥಿತಿ ಉಂಟಾದಾಗ, ಅಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಕೆಳಹಂತದ ಅಧಿಕಾರಿಗಳಾದ ಗ್ರಾಮ ಲೆಕ್ಕಿಗರಾಗಲಿ ಅಥವಾ ಇನ್ನಾರೆ ಇರಲಿ, ಪರಿಹಾರದ ಚೆಕ್‌ಗಳನ್ನು ಬರೆದು ತಮ್ಮ ಜೋಬಿನಲ್ಲಿ ಹಾಕಿಕೊಂಡು ಅಡ್ಡಾಡುತ್ತಿದ್ದಂತಹ ಸಂದರ್ಭಗಳನ್ನು ನಾವು ನೋಡಿದ್ದೇವೆ. ಇವತ್ತಿನ ದಿವಸ ಮಾನ್ಯ ಪ್ರಧಾನ ಮಂತ್ರಿಗಳಾದ ಶ್ರೀ ನರೇಂದ್ರ ಮೋದಿ ರವರು ಜಾರಿಗೆ ತಂದಿರುವ ಜನ್-ಧನ್ ಖಾತೆ ಯೋಜನೆಯಿಂದಾಗಿ ಹಳ್ಳಿಗಳಲ್ಲಿನ ಸಾಮಾನ್ಯ ಬಡ ವರ್ಗದವರೂ ಸಹ ಶೂನ್ಯ ಮೊತ್ತದೊಂದಿಗೆ ಖಾತೆಯನ್ನು ತೆರೆಯಬಹುದು. ಇದರಿಂದಾಗಿ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಬಿಡುಗಡೆ ಮಾಡುವ ಅನುದಾನದ ಮೊತ್ತವು ನೇರವಾಗಿ ಸಾಮಾನ್ಯ ಬಡ ಜನರ ಖಾತೆಗೆ ಜಮೆ ಮಾಡಲಾಗುತ್ತಿದೆ. ಹೀಗಾಗಿ ಯಾವುದೇ ರೀತಿಯ ಹಣದ ಸೋರಿಕೆಯಾಗುತ್ತಿಲ್ಲ. ಇದರಿಂದಾಗಿ, ಬಡ ಜನರ ಮನೆ ಬಾಗಿಲಿಗೆ ನೇರವಾಗಿ ಸರ್ಕಾರದ ಯೋಜನೆಗಳನ್ನು ತಲುಪಿಸಲು ಅನುಕೂಲವಾಗುತ್ತಿದೆ ಎಂಬ ಮಾತನ್ನು ನಾನು ಹೇಳುತ್ತೇನೆ. ಈಗ ಎದುರಾಗಿರುವ ನೆರೆ ಪರಿಸ್ಥಿತಿಯನ್ನು ಆಡಳಿತ ನಡೆಸುವ ಸರ್ಕಾರವು ನಿರ್ವಹಣೆ ಮಾಡಬೇಕಾಗಿದೆ. ಮಾನ್ಯ ವಿರೋಧ ಪಕ್ಷದ ನಾಯಕರಾದ ಶ್ರೀ ಎಸ್.ಆರ್.ಪಾಟೀಲ್‌ರವರೂ ಸಹ ಆ ಭಾಗದಿಂದ ಬಂದವರೇ ಆಗಿದ್ದಾರೆ. ಕೃಷ್ಣಾ ನದಿ ವಿಚಾರ ಬಂದಾಗ, ನಾವೆಲ್ಲರೂ ಶಾಸಕರುಗಳು ಪಕ್ಷಾತೀತವಾಗಿ ಆಗಿರುವ ಅನ್ಯಾಯಗಳ ವಿರುದ್ಧ ಧ್ವನಿಯನ್ನು ಎತ್ತುವಂತಹ ಕೆಲಸವನ್ನು ಅನೇಕ ಸಂದರ್ಭಗಳಲ್ಲಿ ಮಾಡಿದ್ದೇವೆ.

ಸರ್ಕಾರವು ಈಗಾಗಲೇ ಕುಟುಂಬ ಒಂದಕ್ಕೆ 10 ಸಾವಿರ ರೂಪಾಯಿಗಳ ಪರಿಹಾರ ಧನವನ್ನು ನೀಡಿದೆ. ನಮ್ಮ ಜಿಲ್ಲೆಗೆ ಸಂಬಂಧಪಟ್ಟಂತೆ ನಾನು ತೆಗೆದುಕೊಂಡ ಮಾಹಿತಿಯನ್ವಯ ಒಟ್ಟು ಬಾಧಿತ ಗ್ರಾಮಗಳು ಸುಮಾರು

ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

377, ಭಾಧಿತವಾಗಿ ಸ್ಥಳಾಂತರಿಸಿದ ಕುಟುಂಬಗಳ ಸಂಖ್ಯೆ 96,458 ; ಸ್ಥಳಾಂತರಿಸಿದ ಒಟ್ಟು ಜನಸಂಖ್ಯೆ 4,18,103 ; ಸ್ಥಳಾಂತರಿಸಿದ ಜಾನುವಾರಗಳ ಒಟ್ಟು ಸಂಖ್ಯೆ ಸುಮಾರು 1,23,375 ಗಳಾಗಿವೆ. ಈ ಸಂದರ್ಭದಲ್ಲಿ ನಾವು ಸರ್ಕಾರಿ ಅಧಿಕಾರಿಗಳ ಬಗ್ಗೆಯೂ ಸಹ ನಾವು ಮಾತನಾಡಬೇಕಾಗುತ್ತದೆ. ಬೆಳಗಾವಿ ಜಿಲ್ಲೆಯ ಜಿಲ್ಲಾಧಿಕಾರಿಗಳು, ಪೊಲೀಸ್ ವರಿಷ್ಠಾಧಿಕಾರಿ, ಪೊಲೀಸ್ ಸಿಬ್ಬಂದಿಗಳ ಜೊತೆಗೆ ಎಸ್.ಡಿ.ಆರ್.ಎಫ್., ಮತ್ತು ಎನ್.ಡಿ.ಆರ್.ಎಫ್., ತಂಡಗಳ ಸದಸ್ಯರುಗಳು ಹಾಗೂ ಯೋಧರು ತಮ್ಮ ಜೀವದ ಹಂಗು ತೊರೆದು ಸಂತ್ರಸ್ತರ ಸಂರಕ್ಷಣೆ ಮಾಡಿದ್ದನ್ನು ನಾವುಗಳೆಲ್ಲರೂ ಪಕ್ಷಾತೀತವಾಗಿ ಈ ಸದನದ ಮುಖಾಂತರ ನಮ್ಮ ಧನ್ಯವಾದಗಳನ್ನು ಹೇಳಬೇಕಾಗುತ್ತದೆ. ಸುಮಾರು 4-5 ಲಕ್ಷ ಕ್ಯೂಸೆಕ್ಸ್ ನೀರು ಹರಿದು ಬರುವ ಸಂದರ್ಭದಲ್ಲಿ ತಮ್ಮ ಜೀವದ ಹಂಗು ತೊರೆದು ನದಿ ದಂಡೆಯಲ್ಲಿರುವ, ನಡುಗಡ್ಡೆಯಾಗಿದ್ದ ಗ್ರಾಮಗಳಲ್ಲಿನ ಜನರನ್ನು ಬೋಟ್‌ಗಳ ಮುಖಾಂತರ ಸಂರಕ್ಷಣೆ ಮಾಡಿದ್ದಾರೆ. ಅವರುಗಳು ಮಾಡಿರುವ ಸೇವೆಯು ಅತ್ಯಂತ ಶ್ಲಾಘನೀಯ ಎಂದು ನಾನು ಹೇಳುತ್ತೇನೆ. ಇದರ ಜೊತೆಗೆ ಅನೇಕ ಸಾರ್ವಜನಿಕ ಸಂಘ-ಸಂಸ್ಥೆಗಳು, ಬೆಂಗಳೂರು ಮೊದಲುಗೊಂಡು ರಾಜ್ಯದ ಎಲ್ಲಾ ಭಾಗದ ಜನತೆಯು ಉತ್ತರ ಕರ್ನಾಟಕ ಭಾಗದಲ್ಲಿ ನೆರೆ ಹಾವಳಿಯುಂಟಾದಾಗ ಸ್ಪಂದಿಸಿದ್ದಾರೆ. ದಕ್ಷಿಣ ಕರ್ನಾಟಕ ಭಾಗದಲ್ಲಿ ಕಾವೇರಿ ನದಿ ನೀರಿನ ಸಮಸ್ಯೆ ಬಂದಾಗ, ಕಳೆದ ಬಾರಿ ಕೊಡಗು ಜಿಲ್ಲೆಯಲ್ಲಿ ಆದ ನೆರೆ ಸಂದರ್ಭದಲ್ಲಿಯೂ ಸಹ ಉತ್ತರ ಕರ್ನಾಟಕ ಜನತೆ ಸ್ಪಂದಿಸಿದ್ದಾರೆ. ಇಡೀ ಕರ್ನಾಟಕ ನಮ್ಮದು ಎನ್ನುವ ಭಾವನೆಯಲ್ಲಿ ರಾಜ್ಯದ ದಕ್ಷಿಣ ಭಾಗದ ಜನರು ಸ್ಪಂದಿಸಿ, ತಮ್ಮ ಸಹಾಯ ಹಸ್ತವನ್ನು ಚಾಚಿದ್ದಾರೆ. ಈ ವಿಚಾರಕ್ಕೆ ಸಂಬಂಧಪಟ್ಟಂತೆ ಈಗಾಗಲೇ ಮಾನ್ಯ ಕಂದಾಯ ಸಚಿವರು ಹೇಳಿಕೆಯನ್ನು ನೀಡಿದ್ದಾರೆ. ನೆರೆ ಹಾವಳಿಯಿಂದಾಗಿ ಉತ್ತರ ಕರ್ನಾಟಕ ಭಾಗದ ರೈತರಿಗೆ ಆಗಿರುವ ತೊಂದರೆಯನ್ನು ನಾವು ಗಮನಿಸಿದಾಗ ಸರ್ಕಾರವು ನೀಡಿರುವ ನೆರೆ ಪರಿಹಾರದ ಮೊತ್ತವು ಕಡಿಮೆ ಇರಬಹುದು. ಆದರೆ ಸರ್ಕಾರವು ಪ್ರವಾಹ ಪೀಡಿತರಿಗೆ ಸಹಾಯ ಹಸ್ತವನ್ನು ನೀಡುತ್ತದೆ ಹಾಗೂ ಸರ್ಕಾರವು ಅವರ ಜೊತೆಗೆ ಇದೆ ಎನ್ನುವ ವಿಶ್ವಾಸವನ್ನು ಮೂಡಿಸುವಂತಹ ಕೆಲಸವನ್ನು ರಾಜ್ಯದ ಮಾನ್ಯ ಮುಖ್ಯಮಂತ್ರಿಗಳು, ಸಂಪುಟ ದರ್ಜೆಯ ಸಚಿವರು ಮಾಡಿದ್ದಾರೆ ಎಂದು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ.

ಮಾನ್ಯ ಸಭಾಪತಿಯವರೇ, ಮಾನ್ಯ ಕಂದಾಯ ಸಚಿವರು ಮತ್ತೊಂದು ಬಾರಿ ಬೆಳಗಾವಿ ಜಿಲ್ಲೆಗೆ ಭೇಟಿ ನೀಡುವುದಾಗಿ ಈಗಾಗಲೇ ತಿಳಿಸಿದ್ದಾರೆ. ಉಪ ಮುಖ್ಯ ಮಂತ್ರಿಗಳಾದ ಶ್ರೀ ಲಕ್ಷಣ ಸವದಿರವರು ನಮ್ಮ ಜಿಲ್ಲೆಗೆ ಭೇಟಿ ನೀಡಿದ್ದಾರೆ. ಅದೇ ರೀತಿಯಾಗಿ ನಮ್ಮ ಜಿಲ್ಲೆಯ ಉಸ್ತುವಾರಿ ಮಂತ್ರಿಗಳೂ ಸಹ ಜಿಲ್ಲೆಗೆ ಭೇಟಿ ನೀಡಿದ್ದಾರೆ. ಇದರ ಜೊತೆಗೆ ನಾನು ಮತ್ತೊಂದು ವಿಷಯವನ್ನು ಪ್ರಸ್ತಾಪ ಮಾಡಬಯಸುತ್ತೇನೆ. ನದಿಗಳ ನಿರ್ವಹಣೆ ವಿಚಾರದಲ್ಲಿ ನಾನು ಈಗಾಗಲೇ ಮಾತನಾಡಿದ್ದೇನೆ. ಮಹಾರಾಷ್ಟ್ರ ರಾಜ್ಯದಿಂದ ಬರುವ ನದಿ ನೀರಿನ ನಿರ್ವಹಣೆ

ಬಗ್ಗೆ ಸಮಿತಿಯೊಂದನ್ನು ರಚನೆ ಮಾಡಬೇಕೆಂದು ನಾವುಗಳೆಲ್ಲರೂ ಮೊದಲಿನಿಂದಲೂ ಬೇಡಿಕೆಯನ್ನಿಟ್ಟಿದ್ದೇವೆ. ಕಳೆದ ಬಾರಿಯೂ ಸಹ ಮಾರ್ಚ್, ಏಪ್ರಿಲ್ ಮತ್ತು ಮೇ ತಿಂಗಳುಗಳಲ್ಲಿ ಕೃಷ್ಣಾ ನದಿಯು ಸಂಪೂರ್ಣವಾಗಿ ಬತ್ತಿಹೋಗಿತ್ತು. ಉತ್ತರ ಕರ್ನಾಟಕದ ಬೆಳಗಾವಿ ಹಾಗೂ ಬಾಗಲಕೋಟೆ ಜಿಲ್ಲೆಗಳು ಕೃಷ್ಣಾ ನದಿಯ ಮೇಲೆ ಅವಲಂಬಿಸಿವೆ. ಆ ಸಂದರ್ಭದಲ್ಲಿ ನಾವು ಮಹಾರಾಷ್ಟ್ರ ರಾಜ್ಯದ ಮುಖ್ಯಮಂತ್ರಿಗಳಿಗೆ ಪಕ್ಷಾತೀತವಾಗಿ ಸದಸ್ಯರುಗಳೆಲ್ಲರೂ ಹೋಗಿ ನೀರು ಬಿಡಲು ಮನವಿ ಮಾಡಿದ್ದೆವು. ಇದಕ್ಕೆ ಸ್ಪಂದಿಸಿದ ಮಹಾರಾಷ್ಟ್ರ ರಾಜ್ಯವು ಪ್ರತಿಬಾರಿಯೂ ಸಹ ನಾಲ್ಕು ಟಿ.ಎಂ.ಸಿ., ನೀರನ್ನು ಬಿಟ್ಟಿದ್ದನ್ನು ನಾವು ಇಲ್ಲಿ ಸ್ಮರಿಸಬಹುದು. ಆದರೆ ಕಳೆದ ಬಾರಿ ಯಾವ ಕಾರಣಕ್ಕಾಗಿಯೋ ಗೊತ್ತಿಲ್ಲ, ಮಹಾರಾಷ್ಟ್ರ ರಾಜ್ಯವು ನಮಗೆ ನೀರನ್ನು ಕೊಟ್ಟಿಲ್ಲ. ಇದರಿಂದಾಗಿ ಉತ್ತರ ಕರ್ನಾಟಕ ಭಾಗದ ಜನರು ನಾಲ್ಕು ತಿಂಗಳುಗಳ ಕಾಲ ಭೀಕರ ಬರಗಾಲ ಪರಿಸ್ಥಿತಿಯನ್ನು ಅನುಭವಿಸುವಂತಾಯಿತು ಹಾಗೂ ಬಹುಗ್ರಾಮ ಕುಡಿಯುವ ನೀರಿನ ಯೋಜನೆಗಳು ಸ್ಥಗಿತಗೊಳ್ಳುವಂತಾಯಿತು. ನದಿ ಭಾಗದ ಗ್ರಾಮಗಳಿಗೂ ಸಹ ಟ್ಯಾಂಕರ್ ಮುಖಾಂತರ ಕುಡಿಯುವ ನೀರನ್ನು ಸರಬರಾಜು ಮಾಡಲಾಯಿತು.

ಹಿಪ್ಪರಗಿ ಆಣೆಕಟ್ಟಿನ ಆಯಕಟ್ಟಿನ ಹಿನ್ನೀರಿನ ವ್ಯಾಪ್ತಿಯಲ್ಲಿ ಬರುವ ಗ್ರಾಮಗಳಿಗೆ ಬ್ಯಾರೇಜ್‌ಗಳ ನಿರ್ಮಾಣ ಮಾಡಬೇಕೆಂದು ನಾನು ಈ ಸಂದರ್ಭದಲ್ಲಿ ಸರ್ಕಾರಕ್ಕೆ ವಿನಂತಿಸುತ್ತೇನೆ. ಸದರಿ ಬ್ಯಾರೇಜ್‌ಗಳು ಮಳೆಗಾಲದಲ್ಲಿ ಉಪಯೋಗವಾಗದೇ ಇರಬಹುದು, ಆದರೆ ಬೇಸಿಗೆಯ ಕಾಲದಲ್ಲಿ ಜನ ಮತ್ತು ಜಾನುವಾರುಗಳಿಗೆ ಕುಡಿಯುವ ನೀರನ್ನು ಹಿಡಿದು ಇಟ್ಟುಕೊಳ್ಳಲು ಅನುಕೂಲವಾಗುತ್ತದೆ.

ಮಹಾರಾಷ್ಟ್ರ ರಾಜ್ಯದಲ್ಲಿ ಈ ಹಿಂದೆ ಶ್ರೀ ವಸಂತದಾದಾ ಪಾಟೀಲ್ ಎಂಬುವವರು ಮುಖ್ಯಮಂತ್ರಿಗಳಾಗಿದ್ದಾಗ 'ಪಾನಿ ಅಡ್ವಾ ಪಾನಿ ಜುಡ್ವಾ' ಎಂಬ ಯೋಜನೆಯನ್ನು ಜಾರಿಗೆ ತಂದರು. ಇದರರ್ಥ ನೀರನ್ನು ತಡೆಯಿರಿ, ನೀರನ್ನು ಬಳಸಿರಿ ಎನ್ನುವ ಯೋಜನೆಯ ಮುಖಾಂತರ ಸುಮಾರು 5–10 ಕಿಲೋಮೀಟರ್‌ಗಳಿಗೆ ಒಂದರಂತೆ ಬ್ಯಾರೇಜ್‌ಗಳನ್ನು ನಿರ್ಮಾಣ ಮಾಡಿದರು. ಇದರಿಂದಾಗಿ ಬೇಸಿಗೆ ಕಾಲದಲ್ಲಿ ನೀರು ಸಿಗುವಂತಾಯಿತು. ಕೃಷ್ಣಾ, ಧೂದ್‌ಗಂಗಾ, ವೇದ್‌ಗಂಗಾ ಹಾಗೂ ಹಿರಣ್ಯಕೇಶಿ ನದಿಗಳು ಇರಬಹುದು. ಎಲ್ಲೆಲ್ಲಿ ಬ್ಯಾರೇಜ್‌ಗಳನ್ನು ನಾವು ನಿರ್ಮಿಸುತ್ತೇವೆಯೋ ಅಲ್ಲಿ ನಮಗೆ ಉಪಯೋಗವಾಗುತ್ತದೆ. ಮುಂಬರುವ ದಿನಗಳಲ್ಲಿ ಒಂದು ವೇಳೆ ಯುದ್ಧವಾದರೆ, ಅದು ನೀರಿಗಾಗಿಯೇ ಮಾತ್ರವೇ ಆಗುತ್ತದೆ. ಹೀಗಾಗಿ ಪ್ರತಿ ನೀರಿನ ಹನಿಯ ಸದ್ಬಳಕೆ ಮಾಡುವ ನಿಟ್ಟಿನಲ್ಲಿ ಬ್ಯಾರೇಜ್‌ಗಳ ನಿರ್ಮಾಣವಾಗಬೇಕು. ನೀರನ್ನು ಎತ್ತುವುದರ ಮುಖಾಂತರ ಕೆರೆಗಳನ್ನು ತುಂಬಿಸುವಂತಹ ಯೋಜನೆಗಳನ್ನು ಜಾರಿಗೆ ತರಬೇಕು. ನೆರೆ ಪರಿಸ್ಥಿತಿ ಬಂದಾಗ ನೀರು ಹೆಚ್ಚಾಯಿತು ಎಂದು ಹಾಗೂ ಬರ ಪರಿಸ್ಥಿತಿ ಬಂದಾಗ ನೀರಿನ ಅಭಾವದ ಬಗ್ಗೆ ನಾವುಗಳು ಮಾತನಾಡುತ್ತೇವೆ. ಮುಂದಿನ

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ದಿನಗಳನ್ನು ಗಮನದಲ್ಲಿಟ್ಟುಕೊಂಡು ಸರ್ಕಾರವು ಇಂತಹ ಯೋಜನೆಗಳನ್ನು ಜಾರಿಗೆ ತರಬೇಕೆಂದು ನಾನು ಸರ್ಕಾರಕ್ಕೆ ವಿನಂತಿಸುತ್ತೇನೆ.

**ಶ್ರೀ ಎಸ್.ಆರ್.ಪಾಟೀಲ್(ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರ ನೀರು ನಿರ್ವಹಣೆ ಹೇಳಿಕೆಗೆ ಪೂರಕವಾಗಿ ನಾನು ಮಾತನಾಡುತ್ತೇನೆ. ಬೇಸಿಗೆಯ ಕಾಲದಲ್ಲಿ ನಾಲ್ಕು ತಿಂಗಳ ಮಟ್ಟಿಗೆ ನಾಲ್ಕು ಟಿ.ಎಂ.ಸಿ., ನೀರನ್ನು ಬಿಡುವಂತೆ ನಮ್ಮ ರಾಜ್ಯವು ಮಹಾರಾಷ್ಟ್ರ ರಾಜ್ಯವನ್ನು ಪರಿಪರಿಯಾಗಿ ಬೇಡಿಕೊಂಡಿದೆ. ಈ ಮೊದಲು ಹಣ ನೀಡಿ ನೀರನ್ನು ಕೊಡುತ್ತಿದ್ದರು. ಆದರೆ ಈ ಬಾರಿ ನೀರಿನ ಬದಲಾಗಿ ನೀರು ಕೊಡಬೇಕೆಂದು ಹೇಳಿದರು. ಇದಕ್ಕೆ ನಾವು ಒಪ್ಪಿಗೆಯನ್ನು ನೀಡಿದ್ದೇವೆ. ಆದರೆ ಮಹಾರಾಷ್ಟ್ರ ಸರ್ಕಾರದವರು 4 ಟಿ.ಎಂ.ಸಿ. ಪ್ರಮಾಣದಷ್ಟು ನೀರನ್ನು ನಮ್ಮ ರಾಜ್ಯಕ್ಕೆ ಬಿಡದೇ ಇದ್ದಿದ್ದರಿಂದ ಉತ್ತರ ಕರ್ನಾಟಕದ ಜನರು ಬೇಸಿಗೆ ಕಾಲದಲ್ಲಿ ಬಹಳ ಕಷ್ಟ ಹಾಗೂ ನೋವನ್ನು ಅನುಭವಿಸುವಂತಾಯಿತು.

**(ಈ ಹಂತದಲ್ಲಿ ಪ್ಯಾನಲ್ ಸದಸ್ಯೆ ಡಾ॥ ತೇಜಸ್ವಿನಿ ಗೌಡ ರವರು ಸಭಾಪತಿಯವರ ಪೀಠವನ್ನು ಅಲಂಕರಿಸಿದರು.)**

ಈ ಕಾರಣಕ್ಕಾಗಿ ಕರ್ನಾಟಕ ಹಾಗೂ ಮಹಾರಾಷ್ಟ್ರ ರಾಜ್ಯಗಳಿಂದ ನೀರು ನಿರ್ವಹಣೆಗಾಗಿ ಮಾನಿಟರಿಂಗ್ ಸಮಿತಿಯನ್ನು ಮಾಡಿದರೆ, ಅವಶ್ಯಕತೆ ಇರುವಾಗ ನೀರನ್ನು ಬಿಡುವಂತಹ ವ್ಯವಸ್ಥೆ ಆಗುತ್ತದೆ. ಇಂತಹ ಸಮಿತಿ ರಚನೆಯ ಬಗ್ಗೆ ಹೆಚ್ಚು ಒತ್ತಾಯಿಸಬೇಕು. ಸದರಿ ಸಮಿತಿಯನ್ನು ಎರಡೂ ಸರ್ಕಾರಗಳ ಮುಖ್ಯಸ್ಥರುಗಳು ಭಾಗವಹಿಸಿ, ಚರ್ಚೆ ಮಾಡಿ ಅಗತ್ಯ ಕ್ರಮಗಳನ್ನು ತೆಗೆದುಕೊಳ್ಳುತ್ತಾರೆ. ಯಾವಾಗ ಕೃಷ್ಣಾ ನದಿಯಲ್ಲಿ ನೀರು ಇರುವುದಿಲ್ಲವೋ, ನಮ್ಮ ರಾಜ್ಯಕ್ಕೆ ನೀರಿನ ಅಭಾವ ಪರಿಸ್ಥಿತಿ ಉಂಟಾಗುತ್ತೆಯೋ ಆಗ ಮಾನವೀಯತೆಯ ದೃಷ್ಟಿಯಿಂದ ಮಹಾರಾಷ್ಟ್ರ ಸರ್ಕಾರದವರು ಸ್ವಲ್ಪ ಪ್ರಮಾಣ ನೀರನ್ನು ನಮ್ಮ ರಾಜ್ಯಕ್ಕೆ ನೀಡಿದರೆ, ನಮ್ಮ ಜನರು ಬದುಕಲು ಸಹಾಯವಾಗುತ್ತದೆ. ಮಹಾರಾಷ್ಟ್ರದ ಸೋಲಾಪುರ ಪ್ರದೇಶಕ್ಕೆ ಕುಡಿಯುವ ನೀರಿನ ವ್ಯವಸ್ಥೆಯನ್ನು ನಮ್ಮ ರಾಜ್ಯದಿಂದ ಮಾಡುವುದಕ್ಕೆ ಅವಕಾಶ ಇದೆ. ನಮ್ಮ ರಾಜ್ಯದ ಬೆಳಗಾವಿ ಮತ್ತು ಬಾಗಲಕೋಟೆ ಜಿಲ್ಲೆಗಳಿಗೆ ನೀರು ನಿರ್ವಹಣಾ ಸಮಿತಿಯಿಂದ ನೀರು ನೀಡಿದ್ದಲ್ಲಿ, ಎರಡೂ ರಾಜ್ಯಗಳಿಗೆ ಅನುಕೂಲವಾಗುತ್ತದೆ ಎಂದು ನಾನು ಈ ಸಂದರ್ಭದಲ್ಲಿ ಸರ್ಕಾರಕ್ಕೆ ಹೇಳಲಿಚ್ಛಿಸುತ್ತೇನೆ.

**ಶ್ರೀ ಸಿ.ಸಿ.ಪಾಟೀಲ್ (ಗಣಿ ಮತ್ತು ಭೂ ವಿಜ್ಞಾನ ಸಚಿವರು):-** ಮಾನ್ಯ ಸಭಾಪತಿಯವರೇ, ಮಾನ್ಯ ವಿರೋಧ ಪಕ್ಷದ ನಾಯಕರು ಬಹಳ ಅತ್ಯುತ್ತಮವಾದ ಸಲಹೆಯನ್ನು ನೀಡಿದ್ದಾರೆ. ಮಹಾರಾಷ್ಟ್ರ ರಾಜ್ಯದಲ್ಲಿ ಮಳೆಯಾದಾಗ,

ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಅಲ್ಲಿನ ಅಣೆಕಟ್ಟು ತುಂಬುವ ಸಂದರ್ಭದಲ್ಲಿ ಕೋಯ್ನಾ ನದಿ ನೀರನ್ನು ಅಲ್ಲಿನ ಸರ್ಕಾರವು ಹಿಡಿದು ಇಟ್ಟುಕೊಳ್ಳುವುದಕ್ಕೆ ಆಗುವುದಿಲ್ಲ. ಹೀಗಾಗಿ ಕೊಯ್ನಾ ನದಿಯಿಂದ ನಮ್ಮ ರಾಜ್ಯಕ್ಕೆ ಅನಿರೀಕ್ಷಿತವಾಗಿ ನೀರು ಹರಿದು ಬರುತ್ತದೆ. ನಮ್ಮ ಹಾಗೂ ಮಹಾರಾಷ್ಟ್ರ ರಾಜ್ಯಗಳ ನಡುವೆ ಸೌಹಾರ್ದಯುತ ಸಮಿತಿಯ ರಚನೆ ಆಗಬೇಕು ಎನ್ನುವ ಅಭಿಪ್ರಾಯವು ಇತ್ತು.

(ಮುಂದು)

(158)/11-10-2019/4-00/ಎಲ್ಎಂ/ಜಿಆರ್

**ಶ್ರೀ ಸಿ.ಸಿ.ಪಾಟೀಲ್(ಮುಂದು):-** ಈಗಾಗಲೇ ಮಾನ್ಯ ಮುಖ್ಯ ಮಂತ್ರಿಗಳಾದ ಶ್ರೀ ಬಿ.ಎಸ್.ಯಡಿಯೂರಪ್ಪನವರು, ಮಹಾರಾಷ್ಟ್ರ ಮುಖ್ಯಮಂತ್ರಿಗಳಾದ ಶ್ರೀ ದೇವೇಂದ್ರ ಫಡ್ನವಿಸ್‌ರವರ ಜೊತೆಯಲ್ಲಿ ಈ ವಿಚಾರವಾಗಿ ಮಾತನಾಡಿದ್ದಾರೆ. ಬಹುತೇಕ Coordination Committee ಆಗುತ್ತದೆ.

**ಶ್ರೀ ಬಸವರಾಜ ಪಾಟೀಲ್ ಇಟಗಿ;-** ತೆಲಂಗಾಣ, ಕರ್ನಾಟಕ, ಗೋವಾ, ಮಹಾರಾಷ್ಟ್ರ ನಾಲ್ಕು ರಾಜ್ಯಗಳು ಸೇರಿ ಚರ್ಚೆ ಮಾಡಿದರೆ ಬಹಳ ಒಳ್ಳೆಯದಾಗುತ್ತದೆ. ನೀರು ಇದ್ದಾಗ, ಇಲ್ಲದೇ ಇರುವಾಗಲೂ ನೀರು ಸಿಗುವಂತಹ ವ್ಯವಸ್ಥೆಯನ್ನು ಮಾಡಬಹುದು. ಹೋದ ಸಾರಿ ನಮ್ಮ ಜಿಲ್ಲೆಗಳಿಗೆ ಎಫೆಕ್ಟ್ ಆಗಿತ್ತು. ಈ ಸಾರಿ ಬೆಳಗಾವಿ ಜಿಲ್ಲೆಗೆ ಎಫೆಕ್ಟ್ ಆಗಿದೆ.

**ಶ್ರೀ ಸಿ.ಸಿ.ಪಾಟೀಲ್:-** ಮಾನ್ಯ ಸಭಾಪತಿಗಳೆ, ಪ್ರವಾಹ ಬಂದಾಗ ಮಾನ್ಯ ಮುಖ್ಯಮಂತ್ರಿಗಳು ನನ್ನ ಜಿಲ್ಲೆಗೆ ಬಂದಿದ್ದರು. ಆಗ ಅವರು ಮಹಾರಾಷ್ಟ್ರ ಮುಖ್ಯ ಮಂತ್ರಿಗಳಾದ ಶ್ರೀ ದೇವೇಂದ್ರ ಫಡ್ನವಿಸ್‌ರವರ ಜೊತೆಯಲ್ಲಿ ಮಾತನಾಡಿರುವುದನ್ನು ನಾನು ಕೇಳಿದ್ದೇನೆ. ಬಹುತೇಕ ಅದು ಜಾರಿಯಾಗುತ್ತದೆ. ಅದರಲ್ಲಿ ತಮ್ಮ ಸಲಹೆಗಳನ್ನು ಸೇರಿಸಲಾಗುತ್ತದೆ.

**ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ:-** ಮಾನ್ಯ ಸಭಾಪತಿಗಳೆ. ನೀರು ನಿರ್ವಹಣೆ ಸಮಿತಿಯನ್ನು ರಚನೆ ಮಾಡಬೇಕೆಂದು ಈ ಸಂದರ್ಭದಲ್ಲಿ ಒತ್ತಾಯವನ್ನು ಮಾಡುತ್ತೇನೆ. ಈಗಾಗಲೇ ನಮ್ಮ ಮುಖ್ಯಮಂತ್ರಿಗಳು ಮಹಾರಾಷ್ಟ್ರ ಮುಖ್ಯಮಂತ್ರಿಗಳ ಜೊತೆಯಲ್ಲಿ ಈ ವಿಚಾರವಾಗಿ ಸಭೆ ಮಾಡಿದ್ದಾರೆ ಎಂದು ಮಾನ್ಯ ಸಚಿವರಾದ ಸಿ.ಸಿ.ಪಾಟೀಲ್‌ರವರು ಹೇಳಿದ್ದಾರೆ. ಆದಷ್ಟು ಬೇಗ ನೀರು ನಿರ್ವಹಣಾ ಸಮಿತಿ ರಚನೆಯಾಗಬೇಕು. ನೀರಿನ ಸದ್ಬಳಕೆ ವಿಚಾರದಲ್ಲಿ ಕೃಷ್ಣಾ ನದಿ ತೀರ ಇರಬಹುದು, ಯಾವುದೇ ನದಿ ತೀರ ಇರಬಹುದು ಅಲ್ಲಿ ಆದಷ್ಟು ಹೆಚ್ಚು ಬ್ಯಾರೇಜ್‌ಗಳ ನಿರ್ಮಾಣವಾಗಬೇಕು. ಪ್ರತಿಯೊಂದು ಹನಿ ನೀರು ಸದ್ಬಳಕೆಯಾಗುವಂತೆ ಮಾಡಬೇಕು ಎನ್ನುವ ಮಾತನ್ನು ಹೇಳುತ್ತೇನೆ. ಹಾಗೆಯೇ ಬ್ಯಾರೇಜ್‌ಗಳ ನಿರ್ವಹಣೆಯೂ ಆಗಬೇಕು. ರಾಮದುರ್ಗದಲ್ಲಿ ನಡೆದಿರುವ

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಒಂದು ಘಟನೆ ಬಗ್ಗೆ ಹೇಳುತ್ತೇನೆ. ಮಲಪ್ರಭಾ ನದಿಗೆ ಒಂದು ಕೊಡಚಿ ಬ್ಯಾರೇಜ್ ನಿರ್ಮಾಣ ಮಾಡಲಾಗಿದೆ. ಅದರ ಗೇಟನ್ನು ತೆಗೆಯಲು ಸಾಧ್ಯವಾಗಲಿಲ್ಲ ಎಂದು ಎಷ್ಟೋ ಸಾವಿರ ಎಕರೆ ಬೆಳೆ ಹಾನಿಯಾಗಿದೆ. ಗೇಟ್ ತೆಗೆಯಲು ಆಗಲಿಲ್ಲ ಎಂದು ನದಿ ನೀರು ಡೈವರ್ಟ್ ಆಗಿಬಿಟ್ಟಿದೆ. ಆದ್ದರಿಂದ ಈ ಯೋಜನೆಯಲ್ಲಿ ಬ್ಯಾರೇಜ್‌ಗಳ ನಿರ್ವಹಣೆ ಕೆಲಸವನ್ನು ಸರ್ಕಾರ ವ್ಯವಸ್ಥಿತವಾಗಿ ಮಾಡಬೇಕು ಎಂದು ಒತ್ತಾಯ ಮಾಡುತ್ತಾ, ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ವಂದಿಸಿ ನನ್ನ ಮಾತುಗಳನ್ನು ಮುಕ್ತಾಯಗೊಳಿಸುತ್ತೇನೆ.

**ಶ್ರೀ ಆರ್.ಬಿ.ತಿಮ್ಮಾಪೂರ(ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಗಳೆ, 104 ವರ್ಷಗಳ ಹಿಂದೆ ಈ ರೀತಿಯ ಪ್ರವಾಹ ಬಂದಿತ್ತು ಎಂದು ಹೇಳುತ್ತಾರೆ. ನಾವು ಕಂಡಿಲ್ಲ. ಆದರೆ ಹೇಳುವುದನ್ನು ಕೇಳಿದ್ದೇವೆ. ಈ ಹುಚ್ಚು ಪ್ರವಾಹ ಜನರ ಬದುಕು ಕೊಚ್ಚಿ ಹೋಗುವ ಹಾಗೆ ಮಾಡಿದೆ. ಜನರು ತಮ್ಮ ಮನೆ–ಮಠಗಳನ್ನು ಕಳೆದುಕೊಂಡಿದ್ದಾರೆ, ಬೆಳೆ ಹಾನಿಯಾಗಿದೆ, ಶಾಲೆ–ಕಾಲೇಜುಗಳು ಕೊಚ್ಚಿಕೊಂಡು ಹೋಗಿವೆ. ಒಟ್ಟು 90 ಜನ ಈ ಭೀಕರ ಪ್ರವಾಹದಿಂದ ಸಾವನ್ನಪ್ಪಿದ್ದಾರೆ, 70 ಲಕ್ಷ ಜನ ನಿರಾಶ್ರಿತರಾಗಿದ್ದಾರೆ. 20 ಲಕ್ಷಕ್ಕಿಂತ ಹೆಚ್ಚಿನ ಬೆಳೆ ಹಾನಿ, ದನ–ಕರುಗಳ ಸಾವು, ಸಣ್ಣ ವ್ಯಾಪಾರಸ್ಥರ ಬದುಕು ದುಸ್ತರವಾಗಿದೆ. ಇವತ್ತಿನ ಈ ಪರಿಸ್ಥಿತಿಗೆ "ಒಲೆಹತ್ತಿ ಉರಿದೊಡೆ ನಿಲ್ಲಬಹುದಲ್ಲದೆ, ಧರೆಹತ್ತಿ ಉರಿದೊಡೆ ನಿಲ್ಲಲು ಬಾರದು" ಎನ್ನುವ ಮಾತು ನನಗೆ ನೆನಪಾಗುತ್ತಿದೆ. ಈ ಭೀಕರ ಪರಿಸ್ಥಿತಿಯನ್ನು ಕಂಡು ಕೇಂದ್ರ ಸರ್ಕಾರ, ರಾಜ್ಯ ಸರ್ಕಾರ ನಮ್ಮ ಸಹಾಯಕ್ಕೆ ಬರುತ್ತಾರೆ ಎಂದು ಈ ರಾಜ್ಯದ ಜನರು ಕಾತರದಿಂದ ನೋಡುತ್ತಿದ್ದಾರೆ. ಇಂತಹ ಸಂದರ್ಭದಲ್ಲಿ ನಮ್ಮ ದೇಶದ ಪ್ರಧಾನಿಗಳು ಕರ್ನಾಟಕ ಎಂದರೆ ತುಂಬಾ ಅಸಡ್ಡೆಯಿಂದ ನಡೆದುಕೊಂಡರು ಎನ್ನುವುದನ್ನು ಯಾವುದೇ ಮುಚ್ಚುಮರೆ ಇಲ್ಲದೆ ನಾವು ಹೇಳಬೇಕಾಗುತ್ತದೆ. ಮಾನ್ಯ ಮುಖ್ಯಮಂತ್ರಿಗಳು ನಿಮ್ಮ ಹತ್ತಿರ ಬರುತ್ತೇವೆ, ಇಲ್ಲಿ ಯಾವ ಪರಿಸ್ಥಿತಿ ಇದೆ ಎನ್ನುವುದನ್ನು ತಮಗೆ ಮನವರಿಕೆ ಮಾಡಿಕೊಡುತ್ತೇವೆ, ಪರಿಹಾರಕ್ಕಾಗಿ ಬರುತ್ತೇವೆ ಎಂದು ಕೇಳಿಕೊಂಡರು ಅವರಿಗೂ ಮಾನ್ಯ ಪ್ರಧಾನ ಮಂತ್ರಿಗಳ ಭೇಟಿಗೆ ಅವಕಾಶ ಸಿಗುವುದಿಲ್ಲ. ಬಿಹಾರ ರಾಜ್ಯದ ಬಗ್ಗೆ ಮಾತನಾಡುತ್ತಾರೆ. ಆದರೆ ಕರ್ನಾಟಕದ ಬಗ್ಗೆ ಚಕಾರವು ಎತ್ತುತ್ತಿಲ್ಲ. 25 ಜನ ಎಂ.ಪಿ., ಗಳನ್ನು ಆಯ್ಕೆ ಮಾಡಿ ಕಳುಹಿಸಿದ ಕರ್ನಾಟಕ ರಾಜ್ಯದ ಬಗ್ಗೆ 52 ಇಂಚಿನ ಎದೆಯಿರುವ ಪ್ರಧಾನ ಮಂತ್ರಿಗಳಿಗೆ...

**ಶ್ರೀ ಸಿ.ಸಿ.ಪಾಟೀಲ್:–** ಬಿಹಾರ ರಾಜ್ಯಕ್ಕಿಂತ ಹೆಚ್ಚಿನ ಅನುದಾನವನ್ನು ನಮ್ಮ ರಾಜ್ಯಕ್ಕೆ ಕೊಟ್ಟಿದ್ದಾರೆ.

**ಶ್ರೀ ಆರ್.ಬಿ.ತಿಮ್ಮಾಪೂರ:–** ದೇಶದ ಪ್ರಧಾನ ಮಂತ್ರಿಗಳು ಎಂದರೆ ನಮ್ಮ ಪ್ರಧಾನ ಮಂತ್ರಿಗಳು ಎಂದು ಅರ್ಥ. ಅವರು ನಿಮ್ಮ ಪಕ್ಷದವರು ಇರಬಹುದು. ಹಣ ಕೊಡದೆ ಇದ್ದರೂ ಇಂತಹ ಸಂದರ್ಭದಲ್ಲಿ ಅವರು ಆಡುವ ಮಾತುಗಳಿಂದ ಜನರಲ್ಲಿ ಇರುವ ಬೇಸರ ಹೋಗುತ್ತದೆ. ಅವರು ಬಿಹಾರ ರಾಜ್ಯದ ವಿಚಾರದಲ್ಲಿ ಟ್ವೀಟ್ ಮಾಡುತ್ತಾರೆ. ನಮ್ಮ ರಾಜ್ಯದ ಬಗ್ಗೆ ಏಕೆ ಮಾತನಾಡುವುದಿಲ್ಲ? ಅವರು ನಮ್ಮ ಪ್ರಧಾನಿಗಳು, ಕರ್ನಾಟಕ ಈ ದೇಶದಲ್ಲಿ ಇಲ್ಲವೆ? ಹಣ ಕೊಟ್ಟಿರುವುದನ್ನು ಬಿಡಿ, ಮಾನ್ಯ ಪ್ರಧಾನಿಗಳು ನಾನು ನಿಮ್ಮ ಜೊತೆಯಲ್ಲಿ ಇದ್ದೇನೆ, ನಿಮ್ಮ

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ರಕ್ಷಣೆಗೆ ಬರುತ್ತೇನೆ, ರೈತರ ಸಹಾಯಕ್ಕೆ ಬರುತ್ತೇನೆ ಎನ್ನುವಂತಹ ಮಾತನ್ನು ಹೇಳಬೇಕು. ಏಕೆ ಮಾನ್ಯ ಮುಖ್ಯಮಂತ್ರಿಗಳಿಗೆ ಅವಮಾನ ಮಾಡುವಂತಹ ರೀತಿಯಲ್ಲಿ ರೀತಿ–ನೀತಿಗಳು ನಡೆಯುತ್ತಿದೆ ಇಲ್ಲಿ. ಇವರು ಬೇಡವಾದ ಕೂಸೆ? ಪ್ರವಾಹದ ಬಗ್ಗೆ ಮನವರಿಕೆ ಮಾಡಿಕೊಡುತ್ತೇವೆ ಎಂದು ನಮ್ಮ ಮಾನ್ಯ ಮುಖ್ಯಮಂತ್ರಿಗಳು ಬರುತ್ತೇವೆ ಎಂದಾಗ, ಅವರಿಗೆ ಭೇಟಿಗೆ ಅವಕಾಶ ಕೊಡಲಿಲ್ಲ ಎಂದರೆ ಏನು ಅರ್ಥ? ಅವಮಾನ ಮಾಡಿದ ಹಾಗೆಯೇ.

**ಶ್ರೀ ಲಹರ್ ಸಿಂಗ್ ಸಿರೋಯಾ:–** ಮಾನ್ಯ ಮುಖ್ಯಮಂತ್ರಿಗಳಿಗೆ ಅವಮಾನ ಮಾಡುವಂತೆ ನಡೆದುಕೊಳ್ಳುವಂತವರಲ್ಲ ಮಾನ್ಯ ಪ್ರಧಾನ ಮಂತ್ರಿಗಳು.

**ಶ್ರೀ ಆರ್.ಬಿ.ತಿಮ್ಮಾಪೂರ:–** ನಮ್ಮ ಮುಖ್ಯಮಂತ್ರಿಗಳಿಗೆ ಅವಮಾನ ಮಾಡಿದರೆ ನಮ್ಮ ರಾಜ್ಯದ ಜನರಿಗೆ ಅವಮಾನ ಮಾಡಿದ ಹಾಗೆ. ಏಕೆ ಭೇಟಿಗೆ ಅವಕಾಶ ಕೊಡಲಿಲ್ಲ?

**ಶ್ರೀ ಲಹರ್ ಸಿಂಗ್ ಸಿರೋಯಾ:–** ಅವಮಾನವಾಗುವ ರೀತಿಯಲ್ಲಿ ಯಾರು ನಡೆದುಕೊಂಡಿರುವುದಿಲ್ಲ.

**ಶ್ರೀ ಆರ್.ಬಿ.ತಿಮ್ಮಾಪೂರ:–** ಮಾನ್ಯ ಸಭಾಪತಿಗಳೆ, ಕೇಂದ್ರದಲ್ಲಿ ಎಲ್ಲೋ ಒಂದು ಕಡೆ ನಮ್ಮ ಮುಖ್ಯಮಂತ್ರಿಗಳ ಬಗ್ಗೆ ಅಸಡ್ಡೆ ಭಾವನೆ ಇದೆ. ಏಕೆ ಅಸಡ್ಡೆ ಭಾವನೆ ಇದೆ ಎನ್ನುವುದು ಗೊತ್ತಿಲ್ಲ. ಇಷ್ಟೊಂದು ಅಸಡ್ಡೆ ಭಾವನೆಯಿಂದ ನಡೆದುಕೊಳ್ಳುವಂತಹದ್ದು ಆಗಬಾರದಿತ್ತು ಎನ್ನುವುದು ನನ್ನ ಭಾವನೆ. ಅಸಡ್ಡೆ ಇಲ್ಲ ಎಂದರೆ ಕೇಂದ್ರ ಸರ್ಕಾರಕ್ಕೆ ನಿಯೋಗವನ್ನು ಏಕೆ ಕರೆದುಕೊಂಡು ಹೋಗಲಿಲ್ಲ. ಕೇಂದ್ರ ಸರ್ಕಾರಕ್ಕೆ ಮನವರಿಕೆ ಮಾಡಿಕೊಡಬೇಕಾಗಿತ್ತು. ಮಾನ್ಯ ಮುಖ್ಯಮಂತ್ರಿಗಳ ವಿಚಾರ ಬಿಡಿ. ಆದರೆ 25 ಜನ ಸಂಸದರು ಹೋಗಿ ಕೇಳಬೇಕಾಗಿತ್ತು? ಕೇಳಲಿಲ್ಲ. ಕೇಂದ್ರಕ್ಕೆ ನಿಯೋಗವನ್ನು ತೆಗೆದುಕೊಂಡು ಹೋಗಲು ಆಗಲಿಲ್ಲ. ಕೇಂದ್ರ ಗೃಹ ಸಚಿವರು ಬಂದು ಹೋದರು, ಕೇಂದ್ರ ಹಣಕಾಸು ಸಚಿವರು ಬಂದು ಹೋದರು. ಬಂದ್ರು ಹೋದ್ರು ಅಷ್ಟೆ. ಮಾನ್ಯ ಮುಖ್ಯಮಂತ್ರಿಗಳು ನಮ್ಮ ಜಿಲ್ಲೆಗೆ ಎರಡು ಸಾರಿ ಬಂದರು. ಬಂದಾಗ ಕಬ್ಬಿನ ಬೆಳೆಗೆ ಏನಾದರೂ ಕೊಡುತ್ತಾರೆ, ಭರವಸೆಯನ್ನು ಕೊಟ್ಟು ಹೋಗುತ್ತಾರೆ ಎಂದು ಅಂದುಕೊಂಡಿದ್ದೆವು. ಆದರೆ ಹನಿಮೂನ್‌ಗೆ ಹೋದಾಗ, 'ಮೂನ್ ಇತ್ತು ಹನಿ ಇರಲಿಲ್ಲ' ಎನ್ನುವ ಹಾಗೆ ನಮ್ಮ ಮುಖ್ಯಮಂತ್ರಿಗಳ ಪರಿಸ್ಥಿತಿ ಆಗಿದೆ. ಈ ಪ್ರವಾಹದಿಂದ ಸಂತ್ರಸ್ಥರ ಪರಿಪಾಟಲು ಏನೇನು ಎನ್ನುವ ಬಗ್ಗೆ ಯಾರ್‍ಯಾರು, ಏನೇನು ಹೇಳಿದ್ದಾರೆ ಎನ್ನುವುದನ್ನು ಹೇಳುತ್ತೇನೆ. ನಿಮ್ಮ ಪಕ್ಷದ ಶಾಸಕರೇ ಆಗಿರುವಂತಹ ಮಾನ್ಯ ಬಸವರಾಜ ಪಾಟೀಲ್ ಯತ್ನಾಳ ಸಾಹೇಬರು ಏನು ಹೇಳಿದ್ದಾರೆ ಎಂದರೆ "ಬಿಹಾರಕ್ಕೆ ಸ್ಪಂದಿಸಿದ ಮೋದಿ ರಾಜ್ಯದ ಬಗ್ಗೆ ಅಲಕ್ಷ್ಯ, ಸಾಮಾಜಿಕ ತಾಣಗಳಲ್ಲಿ ಜನರು ನಮ್ಮನ್ನು ಪ್ರಶ್ನೆ ಮಾಡುತ್ತಿದ್ದಾರೆ, ನಿಯೋಗ ಹೋಗುವಾಗ ನನ್ನನ್ನು ಕರೆಯಿರಿ, ಪ್ರಧಾನಿಯವರನ್ನು ಪ್ರಶ್ನಿಸುತ್ತೇನೆ, ಅನುದಾನ ನೀಡದಿದ್ದರೆ ಜನರೇ ಪಾಠ ಕಲಿಸುತ್ತಾರೆ" ಇನ್ನೊಬ್ಬರು ಬಿಜೆಪಿ ಯ ಹಿರಿಯ ನಾಯಕರು, ಮಾಜಿ ಸಚಿವರಾದ ಶ್ರೀ ಡಿ.ಬಿ.ಚಂದ್ರೇಗೌಡರು ಹೇಳುತ್ತಾರೆ " ಕೇಂದ್ರ ಬಿಜೆಪಿ ಸರ್ಕಾರ ಪ್ರವಾಹಪೀಡಿತ ಜನರ ಸಂಕಷ್ಟಕ್ಕೆ ಸ್ಪಂಧಿಸುತ್ತಿಲ್ಲ"

ಎಂದು ಬೇಸರವನ್ನು ವ್ಯಕ್ತಪಡಿಸಿದ್ದಾರೆ. ಇನ್ನೊಬ್ಬರು ಶ್ರೀ ಚಕ್ರವರ್ತಿ ಸೂಲಿಬೆಲೆ ಎನ್ನುವವರು, ಇವರು ಬಹಳ ಆತ್ಮೀಯರು, ಈ ರಾಜ್ಯದಲ್ಲಿ, ಈ ದೇಶದಲ್ಲಿ ಬಿಜೆಪಿ ಸರ್ಕಾರ ಬರಲು ತುಂಬಾ ಪ್ರಯತ್ನಪಟ್ಟವರು, ಅವರು ಹೇಳುತ್ತಾರೆ, " ಜನರಿಗೆ ತಪ್ಪು ದಾರಿ ತೋರಿಸುತ್ತಿರುವ ದಾಷ್ಟ್ಯತನವನ್ನು ತೋರಿಸುತ್ತಿರುವ ನಿಮ್ಮ ಬಗ್ಗೆ ನಾಡಿಗೆ ಕನಿಕರ ಇದೆ, ನಿಮ್ಮ ಮಂತ್ರಿಗಿರಿ ಭಿಕ್ಷೆ ಎನ್ನುವುದನ್ನು ಮರೆಯಬೇಡಿ, ಪ್ರವಾಹ ಕಳೆದು ಜನರು ಬದುಕನ್ನು ಕಟ್ಟಿಕೊಳ್ಳುವ ಕಾಲಕ್ಕೆ ಬರದ ಪರಿಹಾರ ಯಾವ ಪುರಷಾರ್ಥಕ್ಕೆ" ಸ್ವಾಮಿಜೀಯವರು ಹೇಳುತ್ತಾರೆ, "ನಿಮ್ಮ ವೈಕ್ತಿಗತ ಭಿನ್ನಾಭಿಪ್ರಾಯಗಳಿಂದ ನೆರೆ ಸಂತ್ರಸ್ಥರ ಜೀವನದ ಜೊತೆ ಚೆಲ್ಲಾಟವಾಡಬೇಡಿ, ಕೇಂದ್ರ ಸರ್ಕಾರ ತಕ್ಷಣ ಎಚ್ಚೆತ್ತು ರಾಜ್ಯಕ್ಕೆ ಹೆಚ್ಚಿನ ಪರಿಹಾರವನ್ನು ಕೊಡಬೇಕು, ಮಾನ್ಯ ಪ್ರಧಾನ ಮಂತ್ರಿಗಳು ರಾಜ್ಯವನ್ನು ಏಕೆ ಕಡೆಗಣಿಸುತ್ತಿದ್ದಾರೆ" ಎಂದು ಹೇಳಿದ್ದಾರೆ.

**ವೈಸ್ ಛೇರ್ಮನ್:-** ನಿಮ್ಮ ಅಭಿಪ್ರಾಯಗಳನ್ನು ಹೇಳಿ. ನಿಮ್ಮ ಅಭಿಪ್ರಾಯಗಳನ್ನು ಹೇಳಲು ಅವಕಾಶವನ್ನು ಕೊಟ್ಟಿದ್ದೇನೆ ನಾನು. ಟೀಕೆ ಮಾಡಲು ನಿಮಗೆ ಅವಕಾಶವಿದೆ. ಪ್ರವಾಹದ ಬಗ್ಗೆ ಹೇಳಿದರೆ ಚರ್ಚೆಗೆ ಉಪಯುಕ್ತವಾಗುತ್ತದೆ. ಸರ್ಕಾರಕ್ಕೆ ಸಲಹೆ ಕೊಡಿ. ಸರ್ಕಾರವನ್ನು ತಿವಿಯಿರಿ, ಸರ್ಕಾರಕ್ಕೆ ಅಂಕುಶವನ್ನು ಇಡುವುದು ಪ್ರತಿಪಕ್ಷದ ಹಕ್ಕು.

**ಶ್ರೀ ಸಿ.ಸಿ.ಪಾಟೀಲ್(ಗಣಿ ಮತ್ತು ಭೂವಿಜ್ಞಾನ ಸಚಿವರು):-** ಮಾನ್ಯ ಸಭಾಪತಿಗಳೆ, 2019ನೇ ಸಾಲಿನಲ್ಲಿ ಭೀಕರವಾದ ಪ್ರವಾಹ ಬಂದಿದೆ. ಇದೇನೋ ಇದೇ ಮೊದಲು ಉಂಟಾಗಿರುವ ಪ್ರವಾಹ ಅಲ್ಲ. ಎಷ್ಟು ಸಾರಿ ಪ್ರವಾಹ ಪರಿಸ್ಥಿತಿ ಬಂದಿದೆ ಎನ್ನುವುದನ್ನು ಇತಿಹಾಸಗಳ ಪುಟಗಳನ್ನು ತಿರುಗಿಸಿ ನೋಡಿದಾಗ, ಯಾವ- ಯಾವ ಸಮಯದಲ್ಲಿ ಎಷ್ಟು ಅನುದಾನ ಬಂದಿದೆ ಎನ್ನುವುದರ ಬಗ್ಗೆಯು ಮಾನ್ಯ ತಿಮ್ಮಾಪೂರರವರು ಸ್ವಲ್ಪ ಬೆಳಕು ಚೆಲ್ಲಿದರೆ ಒಳ್ಳೆಯದಾಗುತ್ತದೆ. ಯಾವ ಸಮಯದಲ್ಲಿ ಯಾವ ಪ್ರಧಾನ ಮಂತ್ರಿಗಳು ಈ ರಾಜ್ಯಕ್ಕೆ ಹೆಚ್ಚಿನ ಅನುದಾನವನ್ನು ಕೊಟ್ಟಿದ್ದಾರೆ ಎನ್ನುವುದನ್ನು ಸದನದಲ್ಲಿ ಹೇಳಿದರೆ ನಮಗೂ ಅನುಕೂಲವಾಗುತ್ತದೆ. ಬಿಹಾರ ರಾಜ್ಯದ ಬಗ್ಗೆ ಟ್ವೀಟ್ ಮಾಡಿದರು, ನಮ್ಮ ರಾಜ್ಯದ ಬಗ್ಗೆ ಟ್ವೀಟ್ ಮಾಡಲಿಲ್ಲ ಎಂದು ಇವತ್ತು ಬೆಳಿಗ್ಗೆಯಿಂದ ಹಲವಾರು ಬಾರಿ ಮಾನ್ಯ ವಿರೋಧ ಪಕ್ಷದ ಸದಸ್ಯರು ಹೇಳುತ್ತಿದ್ದಾರೆ. I want to know whether the tweet is important or relief fund is important. ಟ್ವೀಟ್ ಯಾವುದೇ ರಾಜ್ಯದ ಬಗ್ಗೆ ಮಾಡಿದರೂ, ಮಾನ್ಯ ಪ್ರಧಾನಿಯವರು ಹೆಚ್ಚಿನ ಅನುದಾನವನ್ನು ನಮ್ಮ ಕರ್ನಾಟಕ ರಾಜ್ಯಕ್ಕೆ ಕೊಟ್ಟಿದ್ದಾರೆ. ಪರಿಸ್ಥಿತಿ ಭೀಕರವಾಗಿದೆ. ಅದನ್ನು ನಾವು ಒಪ್ಪಿಕೊಳ್ಳುತ್ತೇವೆ.

**ವೈಸ್ ಛೇರ್ಮನ್:-** ಮಾನ್ಯ ಸಚಿವರು ಸರ್ಕಾರದ ಉತ್ತರದಲ್ಲಿ ತಮ್ಮ ಪ್ರತಿಕ್ರಿಯೆ ಕೊಡಬಹುದು.

(ಮುಂದು)



ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

(159) 11-10-2019 (04-10) ಬಿಎಸ್‌ಡಿ-ಎಡಿ

**ಶ್ರೀ ಆರ್.ಬಿ. ತಿಮ್ಮಾಪೂರ:-** ಮಾನ್ಯ ಸಭಾಪತಿಯವರೇ, ಮುಧೋಳ ತಾಲ್ಲೂಕಿನಲ್ಲಿ ಸಂಪೂರ್ಣವಾಗಿ ಕೊಚ್ಚಿಕೊಂಡು ಹೋಗಿ ಅಲ್ಲಿನ ಅಳಲನ್ನು ಕೇಳುವವರೇ ಇಲ್ಲ. ತಾವೊಬ್ಬರು ಹೆಣ್ಣುಮಗಳಾಗಿ ದಯಮಾಡಿ ಅಲ್ಲಿನ ಪರಿಸ್ಥಿತಿಯನ್ನು ಬಂದು ನೋಡಿ. ಅಂತಹ ಪರಿಸ್ಥಿತಿಯನ್ನು ನೋಡಬಾರದು. ಸಂತ್ರಸ್ತರು ಇನ್ನೂ ಮನೆಗೆ ಹೋಗಿಲ್ಲ. ಗುಲಗಾಲ್ ಜಂಬಗಿ ಹಳ್ಳಿಯಲ್ಲಿ 63 ಮನೆಗಳು ನಾಶವಾಗಿದ್ದು, ಇದುವರೆಗೂ ಸರ್ವೆ ಮಾಡಿಲ್ಲ. ಸಂಪೂರ್ಣವಾಗಿ ಊರು ಮುಳುಗಿದ್ದರೂ ಈ ಮನೆಗಳು ಪರಿಹಾರದಡಿ ಬರುವುದಿಲ್ಲ ಎಂದು ಹೇಳುತ್ತಿದ್ದಾರೆ. ಬಹುಶ: ಊರಿನ ಹೊರಗೆ ಎಸ್.ಸಿ., ಮತ್ತು ಎಸ್.ಟಿ., ಜನಾಂಗದವರು ಇರುತ್ತಾರೆ. ಅಲ್ಲಿಯೇ ಹೆಚ್ಚಿನ ಪ್ರವಾಹ ಬರುತ್ತದೆ. ಒಂದೇ ಊರಿನಲ್ಲಿ 21 ಅಂಬಿಗರು, 31 ಎಸ್.ಸಿ ಮತ್ತು 13 ಜನರಲ್ ಜನಾಂಗದವರ ಮನೆಗಳಿವೆ. ಇಡೀ ಊರು ಮುಳುಗಿದ್ದರೂ ಅವರಿಗೆ ಪರಿಹಾರ ಇಲ್ಲ. ಅಲ್ಲಿನ ಶ್ರೀ ಬಸಪ್ಪ ಚನ್ನಬಸಪ್ಪ ನೀಲಿ ಎನ್ನುವವರು ಊರಿಗೆ ಹೋಗಿ ಅವನ ಮನೆ ನೋಡುತ್ತಾನೆ, ಕಬ್ಬಿನ ಬೆಳೆ ನೋಡುತ್ತಾನೆ, ಎಲ್ಲವೂ ಹೋಯಿತಲ್ಲ ಎಂದು ಜೀವ ಬಿಡುತ್ತಾನೆ. ಸಂತ್ರಸ್ತರ ಬಿಡಾರದಲ್ಲಿರುವ ಶ್ರೀ ಫಕೀರಪ್ಪ ಸುತ್ತೆಪ್ಪ ಮ್ಯಾಗೇರಿ, ಶ್ರೀಮತಿ ತಾಯವ್ವ ಶೈಲಪ್ಪ ಸತ್ತಿಗೇರಿ ಎನ್ನುವವರು ಆಸ್ಪತ್ರೆಗೆ ಹೋಗಲು ಸಾಧ್ಯವಾಗದೇ ಸಾವಿಗೀಡಾಗುತ್ತಾರೆ. ಪ್ರವಾಹದಲ್ಲಿ ಕೊಚ್ಚಿಕೊಂಡು ಹೋದರೆ ಮಾತ್ರ ಪರಿಹಾರ, ಪ್ರವಾಹದಿಂದಾದ ಅನಾಹುತಕ್ಕೆ ಪರಿಹಾರ ಇಲ್ಲವೆಂದರೆ ಇದೆಂತಹ ನ್ಯಾಯ? ಸಾವಿಗೆ ಬೆಲೆ ಇಲ್ಲವೇ? ಇಷ್ಟೆಲ್ಲಾ ಕಳೆದುಕೊಂಡು ಎಲ್ಲವೂ ಹೋಯಿತು ಎಂದು ಒದ್ದಾಡುವವರಿಗೆ ಪರಿಹಾರ ಇಲ್ಲವೆಂದರೆ ಯಾವ ನ್ಯಾಯ? ಪ್ರವಾಹದಲ್ಲಿ ಕೊಚ್ಚಿಕೊಂಡು ಹೋಗಿ ಸತ್ತರೆ ಮಾತ್ರವಲ್ಲದೇ ಹಾನಿಯಾಗಿರುವುದನ್ನು ನೋಡಿ ಸತ್ತವರ ಬಗ್ಗೆಯೂ ಕನಿಕರ ಇರಬೇಕೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ನಮ್ಮ ಜಿಲ್ಲೆಯಲ್ಲಿ ಹಾನಿಯಾಗಿರುವುದೆಲ್ಲವನ್ನೂ ಸರಿ ಮಾಡಿಬಿಟ್ಟಿದ್ದೇವೆ ಎಂದರೆ ಆಗುವುದಿಲ್ಲ. ರೂ.1,200 ಕೋಟಿಗಳನ್ನು ಒಂದು ಗೋಣಿ ಚೀಲದಲ್ಲಿ 50 ಪೈಸೆಗಳನ್ನು ಹಾಕಿದಂತೆ ಆಗುತ್ತದೆ. ಯಾವ ಜನರಿಗೆ ಸಹಾಯ ಮಾಡುವುದಕ್ಕೆ ಆಗುತ್ತದೆ? ಮಾನ್ಯ ಸಿದ್ದರಾಮಯ್ಯನವರು ಮುಖ್ಯಮಂತ್ರಿಯವರಾಗಿದ್ದಾಗ ಒಂದು ಟನ್ ಕಬ್ಬಿಗೆ ದರವನ್ನು ರೂ.350/-ಗಳನ್ನು ಪ್ರೋತ್ಸಾಹ ಧನವಾಗಿ ಕೊಟ್ಟರು. ಒಂದು ಎಕರೆಗೆ ರೂ.14,000/- ಪರಿಹಾರ ಬರುತ್ತದೆ. ಭತ್ತ ಸೇರಿದಂತೆ ಹಲವಾರು ಬೆಳೆಗಳಿಗೆ ಹಾನಿಯಾದಾಗ ಪರಿಹಾರ ಕೊಟ್ಟರು. ಆಲಿಕಲ್ಲಿನ ಮಳೆಯಾದಾಗ ಒಂದು ಎಕರೆ ದ್ರಾಕ್ಷಿ ಬೆಳೆಗೆ ರೂ.25,000/-ಗಳನ್ನು ಪರಿಹಾರ ಕೊಟ್ಟರು. ಇಡೀ ರಾಜ್ಯದಾದ್ಯಂತ ಕೊಟ್ಟರು. ಈ ಸರ್ಕಾರಕ್ಕೆ ಪರಿಹಾರ ನೀಡಲು ಏನಾಗಿದೆ?

**ವೈಸ್ ಚೇರ್ಮನ್:-** ಸರ್ಕಾರ ಏನು ಮಾಡಬೇಕು ಎಂಬುದರ ಬಗ್ಗೆ ಹೇಳಿ.

**ಶ್ರೀ ಆರ್.ಬಿ. ತಿಮ್ಮಾಪೂರ:-** ಅದರ ಅರಿವಿನ ಬಗ್ಗೆ ಹೇಳಬೇಕಲ್ಲವೇ? ಈ ಸರ್ಕಾರದವರಿಗೆ ನೆನಪು ಇರುವಂತೆ ಇಲ್ಲ.

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಶ್ರೀ ಚಂದ್ರಕಾಂತಗೌಡ ಚನ್ನಪ್ಪಗೌಡ ಪಾಟೀಲ್:–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಒಂದು ವಿಚಾರವನ್ನು ಉತ್ಪ್ರೇಕ್ಷೆಯಿಂದ ಮತ್ತೊಂದನ್ನು ಮುಚ್ಚಿಟ್ಟುಕೊಂಡು ಮಾತನಾಡುತ್ತಿದ್ದಾರೆ. ಅವರು ಪರಿಹಾರ ನೀಡಿರುವ ಅಂಕಿ ಅಂಶಗಳನ್ನು ನೀಡಬೇಕೆಂದು ಮನವಿ ಮಾಡುತ್ತೇನೆ.

**ಶ್ರೀ ಆರ್.ಬಿ. ತಿಮ್ಮಾಪೂರ:–** ಮಾನ್ಯ ಸಭಾಪತಿಯವರೇ, ನೆರೆ ಬಂದು 60 ದಿವಸ ಕಳೆದು ಹೋಗಿದೆ. ನಷ್ಟವಾಗಿರುವಲ್ಲಿ ಒಂದು ಎಕರೆಗೆ ಏನು ಪರಿಹಾರ ಕೊಡುತ್ತಾರೆಂದು ಹೇಳಲಿ. ರೈತರು ಒದ್ದಾಡುತ್ತಿದ್ದಾರೆ. ಕಬ್ಬನ್ನು ತೆಗೆಯಲು ಆಗುತ್ತಿಲ್ಲ, ಬೆಳೆ ಭಿತ್ತಲು ಆಗುತ್ತಿಲ್ಲ. ಒಂದು ಎಕರೆ ಪರಿಹಾರವಾಗಿ ರೂ.50,000/– ಅಥವಾ ಒಂದು ಲಕ್ಷ ರೂಪಾಯಿಗಳನ್ನು ಕೊಡುತ್ತೇವೆ ಎಂದು ಹೇಳಲು ಏನಾಗಿದೆ? ಅವರಿಗೆ ಬಾಯಿ ಬರುತ್ತಿಲ್ಲ. ಇದು ಕಟು ಸತ್ಯದ ಮಾತುಗಳು. ಅವರು ಹೋದಕಡೆ ರೈತರು ಧಿಕ್ಕಾರ ಎಂದು ಏಕೆ ಕೂಗುತ್ತಿದ್ದಾರೆ? ಅವರ ನೋವನ್ನು ತೋಡಿಕೊಂಡು ಹೇಳುತ್ತಾರೆ. ಪ್ರಧಾನಿ ಎಂದು ಹೇಳುವುದು ಬೇಡ.

**ಶ್ರೀ ಚಂದ್ರಕಾಂತಗೌಡ ಚನ್ನಪ್ಪಗೌಡ ಪಾಟೀಲ್ (ಗಣಿ ಮತ್ತು ಭೂ ವಿಜ್ಞಾನ ಹಾಗೂ ವಾಣಿಜ್ಯ ಮತ್ತು ಕೈಗಾರಿಕೆ ಸಚಿವರು):–** ನಾನು ಪ್ರವಾಹದ ಜಿಲ್ಲೆಯಿಂದ ಬಂದವನಾಗಿದ್ದೇನೆ.

**ಶ್ರೀ ಆರ್.ಬಿ. ತಿಮ್ಮಾಪೂರ:–** ಮಾನ್ಯ ಸಭಾಪತಿಯವರೇ, ನನ್ನ ಜಮೀನಿನಲ್ಲಿಯೂ ರೂ.35 ಲಕ್ಷ ಕಬ್ಬು ನಾಶವಾಗಿ ಮತ್ತು ಮನೆ ಕೂಡ ಮುಳುಗಿದೆ. ರೂ.35 ಲಕ್ಷ ಎಲ್ಲಿಂದ ತರುವುದು? ಒಂದು ಎಕರೆ ಬೆಳೆ ಹಾಕಲು ರೂ.20 ರಿಂದ 50 ಸಾವಿರ ಖರ್ಚು ಬರುತ್ತದೆ. ಇನ್ನೂ ಏಕೆ ಅವರಿಗೆ ಕನಿಕರ ಬಂದಿಲ್ಲ. ನೆರೆ ಬಂದು 60 ದಿವಸ ಕಳೆದಿದೆ, ರೈತ ತೊಂದರೆಯಲ್ಲಿದ್ದಾನೆ, ನಾವು ಇಷ್ಟು ಹಣ ಕೊಡುತ್ತೇವೆ ಎಂದು ಹೇಳಲಿ. ನಮ್ಮ ಜಿಲ್ಲೆಯಲ್ಲಿನ ಎಲ್ಲಾ ರೈತರಿಗೆ ಸಹಾಯ ಮಾಡಿದ್ದಾರೆಯೇ? ಕೇಂದ್ರ ಸರ್ಕಾರ ಕೊಟ್ಟಿರುವ ಮಧ್ಯಂತರ ಪರಿಹಾರವಾಗಿ ರೂ.1200 ಕೋಟಿಗಳನ್ನು ಏನು ಮಾಡುತ್ತಾರೆ, ಯಾರ್ಯಾರಿಗೆ ಕೊಡುತ್ತಾರೆ ಎಂಬುದನ್ನು ಹೇಳಲಿ. ನಮ್ಮ ಜಿಲ್ಲೆಯಲ್ಲಿನ ನಾಯಕರು ಏನೇನು ತೊಂದರೆ ಇದೆ ಎನ್ನುವ ಬಗ್ಗೆ ಹೇಳುತ್ತಾರೆ. ಶ್ರೀ ದೊಡ್ಡನಗೌಡ ಪಾಟೀಲರು ' ಗ್ರಾಮಗಳು ನೆರೆಯಿಂದ ಮುಳುಗಿವೆ, ಆದರೆ ಕೇವಲ 33 ಮನೆಗಳು ಬಿದ್ದಿವೆ ಎಂದು ಅಧಿಕಾರಿಗಳು ಹೇಳುತ್ತಿದ್ದಾರೆ, ಬಿದ್ದ ಮನೆಗಳ ಬಗ್ಗೆ ಪುನರ್ ಸಮೀಕ್ಷೆ ಮಾಡಬೇಕು, ಗ್ರಾಮಗಳಲ್ಲಿ ಸಂತ್ರಸ್ತರಿಗೆ ಹಕ್ಕುಪತ್ರ ಕೊಡಿಸಬೇಕು. ವಾರಗಟ್ಟಲೆ ಮಳೆಯಲ್ಲಿ ನೆಂದು ನೀರಿನಲ್ಲಿ ನಿಂತಿದ್ದ ಮನೆಗಳು ಈಗಲೂ ಬೀಳುತ್ತಿವೆ. ಅವುಗಳನ್ನು ಬಿದ್ದ ಮನೆಗಳೆಂದು ಪರಿಗ್ಗಣಿಸಬೇಕು' ಎಂದು ಹೇಳಿದ್ದಾರೆ. ಅಂದರೆ ಈ ಕೆಲಸಗಳನ್ನು ಇನ್ನೂ ಮಾಡಬೇಕು. ಇಷ್ಟೆಲ್ಲಾ ತೊಂದರೆಗಳನ್ನು ಜನತೆಗೆ ಹೇಳಬೇಕು. ಒಂದು ಕಡೆ ಸಂತ್ರಸ್ತರಿಗೆ ನಮ್ಮ ಸಚಿವರುಗಳು ರೂ.10,000/– ನೀಡಿದ್ದೇ ಜಾಸ್ತಿ, ಕೇಂದ್ರದ ಸಹಾಯ ಬೇಡ ಎಂದು ಹೇಳಿರುವ ಮಾತುಗಳನ್ನು ಕೇಳಿಲ್ಲವೇ? ಮಾನ್ಯ ಸಭಾಪತಿಯವರೇ, ತಾವು ಟಿ.ವಿ. ಚಾಲನ್‌ನಲ್ಲಿ ವಿ.ಐ.ಪಿ ಗಳ ಸಂದರ್ಶನ ಮಾಡುತ್ತಿದ್ದ ಸಂದರ್ಭದಲ್ಲಿ ಈ ರೀತಿ ಹೇಳಿದ್ದರೆ ಏನು ಹೇಳುತ್ತಿದ್ದಿರಿ? ಆಗ ಯಾವ ಶಬ್ದಗಳನ್ನು ಉಪಯೋಗ ಮಾಡುತ್ತಿದ್ದಿರಿ? ಇವರಾ ಸರ್ಕಾರ ಕಟ್ಟಲು ಬಂದವರು, ಇವರು

ನಾಲಾಯಕ್ ಎಂದೆಲ್ಲಾ ಹೇಳಿರುವುದನ್ನು ಸಂದರ್ಶನ ಮಾಡುವ ಸಮಯದಲ್ಲಿ ನಾವು ಕೇಳಿದ್ದೇವೆ. ಆಗ ಎಂತಹ ಗಟ್ಟಿ ಹೆಣ್ಣುಮಗಳು, ಸತ್ಯದ ಬಗ್ಗೆ ಎಷ್ಟೊಂದು ಹೋರಾಟ ಮಾಡುತ್ತಾರೆ ಎನ್ನುತ್ತಿದ್ದೆವು. ಆದರೆ ಏಕೋ ತಾವು ಈ ಕಡೆ ಬಂದಾಗ ಸೈಲೆಂಟ್ ಆಗಿಬಿಟ್ಟಿದ್ದೀರಿ. ತಾವು ಆಡುತ್ತಿದ್ದ ಆ ಮಾತುಗಳು ಎಲ್ಲಿ ಹೋದವು ಎಂದು ಅರ್ಥವಾಗುತ್ತಿಲ್ಲ.

**ವೈಸ್ ಚೇರ್ಮನ್:–** ಈಗ ನಾನು ಪೀಠದ ಮೇಲೆ ಕುಳಿತಿದ್ದೇನೆ.

**ಶ್ರೀ ಆರ್.ಬಿ. ತಿಮ್ಮಾಪೂರ:–** ಮಾನ್ಯ ಸಭಾಪತಿಯವರೇ, ತಮ್ಮ ಮಾತುಗಳ ಬಗ್ಗೆ ನಾನು ಕೇಳಿದ್ದೇನೆ. ಮಾನ್ಯ ಮುಖ್ಯಮಂತ್ರಿಯವರು ಹಸಿರು ಶಾಲು ಹೊದ್ದುಕೊಂಡು ಪ್ರಮಾಣ ವಚನದಲ್ಲಿ ಸ್ವೀಕರಿಸಿದ ಮಾರನೆಯ ದಿನವೇ ಶಾಲು ಇಲ್ಲ. ನಾನು ಶಾಲು ಖಾಯಂ ಆಗಿ ಇರುತ್ತದೆ ಎಂದು ತಿಳಿದುಕೊಂಡಿದ್ದೆನು. ಆದರೆ ಪ್ರಮಾಣ ವಚನ ತೋರಿಸುವುದಕ್ಕೆ ಮಾತ್ರ ಹಸಿರು ಶಾಲು ಹೊದ್ದಿಕೊಳ್ಳುವುದು. ಬೀದಿಯಲ್ಲಿ ರೈತರು ಹಸಿರು ಶಾಲುಗಳನ್ನು ತಿರುಗಿಸುತ್ತಿದ್ದಾರೆ, ಇದರ ಬಗ್ಗೆ ಏಕೆ ನಿಷ್ಕಾಳಜಿ ಹೊಂದಿದ್ದಾರೆ.

**ಶ್ರೀ ಎಂ. ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ನೆರೆಪೀಡಿತ ಜಿಲ್ಲೆಯಿಂದ ಬಂದ ಮಾನ್ಯ ಸದಸ್ಯರು ಬಹಳ ಗಂಭೀರವಾಗಿ ಮಾತನಾಡುತ್ತಿದ್ದು, ದಯಮಾಡಿ ಸಮಯವನ್ನು ನಿಗದಿ ಮಾಡಬೇಡಿ. ಅವರು ಅಂತರಾಳದ ಮಾತು ಮತ್ತು ಜಿಲ್ಲೆಯಲ್ಲಿನ ನೋವಿನ ಬಗ್ಗೆ ಹೇಳುತ್ತಿದ್ದಾರೆ. ದಯಮಾಡಿ ಅವರಿಗೆ ಕಾಲಾವಕಾಶ ಕೊಡಬೇಕು.

**ವೈಸ್ ಚೇರ್ಮನ್:–** ವಿಷಯಕ್ಕಿಂತ ರಾಜಕೀಯ ಚರ್ಚೆ ಜಾಸ್ತಿಯಾಗುತ್ತಿದೆ. ಸಮಯದ ಕೊರತೆ ಇದೆ. ಆರೋಗ್ಯಕರ ಚರ್ಚೆಯನ್ನು ನಾನು ಪುರಸ್ಕಾರ ಮಾಡುತ್ತೇನೆ.

**ಶ್ರೀ ಎಂ. ನಾರಾಯಣಸ್ವಾಮಿ:–** ಚರ್ಚೆಯನ್ನು ಯಾವುದೇ ಕಾರಣಕ್ಕೂ ರಾಜಕೀಯ ಚರ್ಚೆ ಮಾಡುವುದು ಬೇಡ.

(ಗೊಂದಲ)

**ವೈಸ್ ಚೇರ್ಮನ್:–** ಅತ್ಯಂತ ತೀಕ್ಷ್ಣವಾಗಿ ಮಾತನಾಡುವ ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ಪೀಠ ಕೊಟ್ಟಿದೆ. ಅದು ಉಪಯುಕ್ತವಾಗಬೇಕು. ಸಮಯದ ಮಿತಿ ಇದೆ. ನನಗೆ ಕೇಳಿಸಿಕೊಳ್ಳಲು ಆಸಕ್ತಿ ಇದೆ.

**ಶ್ರೀ ಆರ್.ಬಿ. ತಿಮ್ಮಾಪೂರ:–** ಮಾನ್ಯ ಯಡಿಯೂರಪ್ಪನವರ ಪಕ್ಷದ ಕೇಂದ್ರ ಸರ್ಕಾರ ಏಕೆ ನೆಗ್ಲೆಕ್ಟ್ ಮಾಡುತ್ತಿದೆ, ಇವರ ಮಾತುಗಳಿಗೆ ಏಕೆ ಬೆಲೆ ಇಲ್ಲ. ?

**ವೈಸ್ ಚೇರ್ಮನ್:–** ಮಾನ್ಯ ಉಪ ಮುಖ್ಯಮಂತ್ರಿಯವರಾದ ಕಾರಜೋಳರವರು ಅನುಮಾನಗಳಿಗೆ ಉತ್ತರ ಕೊಡುವ ಸಮಯದಲ್ಲಿ ಬಗೆಹರಿಸುವ ಪ್ರಯತ್ನ ಮಾಡಬೇಕು.

**ಶ್ರೀ ಆರ್.ಬಿ. ತಿಮ್ಮಾಪೂರ:–** ನಮ್ಮ ಶಾಸಕರೊಬ್ಬರು ಉಪ ಮುಖ್ಯಮಂತ್ರಿಗಳಾಗಿದ್ದಾರೆ.

“ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

**ಶ್ರೀ ಎಂ. ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ಉತ್ತರ ಹೇಳುವಾಗ ಹೇಳಿ ಎಂದು ಹೇಳುತ್ತಿದ್ದೀರಿ, ಯಾರು ಏನು ಮಾತನಾಡುತ್ತಿದ್ದಾರೆ ಎಂದು ಯಾರೊಬ್ಬರೂ ನೋಟ್ ಮಾಡಿಕೊಳ್ಳುತ್ತಿಲ್ಲ. ಇನ್ನು ಯಾವರೀತಿ ಉತ್ತರ ಕೊಡುತ್ತಾರೆ. ನಾವು ಕಾಟಾಚಾರಕ್ಕೆ ಸದನದಲ್ಲಿ ಕುಳಿತಿದ್ದೇವೆಯೇ? ಇಷ್ಟು ಗಂಭೀರವಾದ ವಿಚಾರ ಮಾತನಾಡುವಾಗ ನೋಟ್ ಮಾಡಿಕೊಳ್ಳುವುದು ಬೇಡವೇ?

(ಮುಂದು)

(160) 11.10.2019 4.20 ಪಿಕೆ:ಎಂಡಿ
(ಪೀಠದಲ್ಲಿ ಡಾ:ತೇಜಸ್ವಿನಿ ಗೌಡರವರ ಉಪಸ್ಥಿತಿ)

(ಗೊಂದಲ)

**ವೈಸ್ ಚೇರ್ಮನ್:–** ಸರ್ಕಾರದಿಂದ ಕೊಡುವ ಉತ್ತರ ಸಮಾಧಾನವಾಗದೇ ಇದ್ದರೆ ನೀವು ಸ್ಪಷ್ಟೀಕರಣ ಕೇಳಿ. ಮಾನ್ಯ ಸದಸ್ಯರುಗಳ ಸಹಕಾರ ಇಲ್ಲದೇ ಇದ್ದರೆ ಸದನವನ್ನು ನಡೆಸುವುದಕ್ಕೆ ಆಗುವುದಿಲ್ಲ. ಮಾನ್ಯ ತಿಮ್ಮಾಪುರರವರೇ ಛಿಂಟಛಿಟಣಜಜ ಮಾಡಿ. ಇನ್ನೂ ಬಹಳಷ್ಟು ಜನ ಮಾತನಾಡುವವರಿದ್ದಾರೆ.

(ಗೊಂದಲ)

**ಶ್ರೀ ಆರ್.ಬಿ.ತಿಮ್ಮಾಪುರ:–** ನನ್ನ ಬೇಡಿಕೆ ಏನು ಎಂಬುದನ್ನು ಹೇಳುತ್ತೇನೆ.

**ಶ್ರೀ ಗೋವಿಂದ ಎಂ. ಕಾರಜೋಳ:–** ಮಾನ್ಯ ಸಭಾಪತಿಯವರೇ, ತಾವು ಪೀಠದಿಂದ ನನ್ನ ಕಡೆ ಬೊಟ್ಟು ಮಾಡಿದಿರಿ. ಬಹುಶಃ ಈ ಪ್ರವಾಹ ಶತಮಾನದ ದೊಡ್ಡ ದುರಂತವಾಗಿದೆ. 1914ರಲ್ಲಿ ಇಂತಹ ಒಂದು ದೊಡ್ಡ ಪ್ರವಾಹ ಬಂದಿತ್ತು ಎನ್ನುವುದನ್ನು ಇತಿಹಾಸದ ಪುಟಗಳಲ್ಲಿ ನೋಡಿದ್ದೇವೆ. 21ನೇ ಶತಮಾನದ ಈ ದುರಂತದಲ್ಲಿ ಕರ್ನಾಟಕ ರಾಜ್ಯದ 22 ಜಿಲ್ಲೆಗಳು, 103 ತಾಲ್ಲೂಕುಗಳಲ್ಲಿ ಆಗಿರುವ ಪ್ರವಾಹದಿಂದ ಜನ ಸಂತ್ರಸ್ತರಾಗಿದ್ದಾರೆ, ಸಾವು–ನೋವುಗಳಾಗಿವೆ, ಜಾನುವಾರುಗಳನ್ನು ಕಳೆದುಕೊಂಡಿದ್ದಾರೆ, ರೈತನ ಸಂಪತ್ತಾದ ಬೆಳೆಯನ್ನು ಕಳೆದುಕೊಂಡಿದ್ದಾರೆ. ಅದಕ್ಕೆ ಸಮರ್ಪಕವಾಗಿ ಸರ್ಕಾರ ಉತ್ತರ ಕೊಡುತ್ತದೆ. ನಾನು ಈ ಮನೆಯ ಮೂಲಕ ವಿನಂತಿ ಮಾಡಿಕೊಳ್ಳುವುದೇನೆಂದರೆ, ಸಂತ್ರಸ್ತರ ನೋವಿನಲ್ಲಿ ಭಾಗಿ ಆಗುವ ರೀತಿಯಲ್ಲಿ ನಮ್ಮ ವಿಚಾರಗಳನ್ನು ಮಂಡಿಸಬೇಕಾಗುತ್ತದೆ. ರಾಜಕೀಯ ಕಮಟು ವಾಸನೆ ಬರುವಂತಹ ವಿಚಾರಗಳನ್ನು ಮಂಡಿಸುವಂಥದ್ದು ಪ್ರಸ್ತುತ ಸರಿಯಲ್ಲ ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಉತ್ತರ ಕೊಡುವಂತಹ ಸಂದರ್ಭದಲ್ಲಿ ಎಲ್ಲಾ ವಿಚಾರಗಳನ್ನು ಒಳಗೊಂಡಂತೆ ಉತ್ತರವನ್ನು ಸರ್ಕಾರ ಕೊಡುವುದಕ್ಕೆ ಸಿದ್ಧವಿದೆ. ಯಾರು ಬೇಕಾದರೂ ತಮ್ಮ ಅಭಿಪ್ರಾಯಗಳನ್ನು ಇತಿಮಿತಿಯೊಳಗೆ, ಸಂತ್ರಸ್ತರ ನೋವಿಗೆ ಅನುಗುಣವಾಗಿ ಮಾತನಾಡಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ.

**ಶ್ರೀ ಆರ್.ಬಿ.ತಿಮ್ಮಾಪುರ:–** ಮಾನ್ಯ ಸಭಾಪತಿಯವರೇ, ಸರ್ಕಾರ ಬೆಳೆಗಳ ನಷ್ಟಕ್ಕೇಕೆ ಪರಿಹಾರ ಘೋಷಿಸುತ್ತಿಲ್ಲ? ಕೇಂದ್ರ ಸರ್ಕಾರದಿಂದ ಏನು ಪರಿಹಾರ ಹಣವನ್ನು ಘೋಷಣೆಯಾಗಿದೆಯೋ ಅದು ಬಂದಿದೆಯೋ ಇಲ್ಲವೋ? ಅದರಿಂದ ನೀವು ಯಾವುದಕ್ಕೆ ಪರಿಹಾರ ಕೊಡುತ್ತೀರಿ ಎನ್ನುವುದನ್ನು ಜನರಿಗೆ

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಹೇಳಬೇಕು. ಜನ ಆತಂಕದಿಂದ ಕಾಯುತ್ತಿದ್ದಾರೆ. ಮತ್ತೆ ಬೆಳೆಯನ್ನು ಯಾವರೀತಿ ಬೆಳೆಯಬೇಕು ಎನ್ನುವ ನೋವು ಅವರಲ್ಲಿದೆ. ನಮ್ಮ ಆತಂಕಗಳು, ನಮ್ಮ ಸಂಶಯಗಳು ಏನೆಂದರೆ, ನಿಮ್ಮಲ್ಲಿ co-ordination ಇಲ್ಲದೇ ಇರುವ ಕಾರಣದಿಂದ ಸಂತ್ರಸ್ತರಿಗೆ ಸಿಗುವಂತಹ ಪರಿಹಾರದಲ್ಲಿ ಅನ್ಯಾಯವಾಗಬಾರದು; ಇದರಿಂದ ಸತ್ರಸ್ತರು ತೊಂದರೆ ಅನುಭವಿಸುವಂತಾಗಬಾರದು. ಒಂದು ಕಡೆ ಕಬ್ಬು ಬೆಳೆ ನಾಶವಾಗಿದೆ, ಕಾರ್ಖಾನೆಗಳು ಬಂದ್ ಆಗಿವೆ. ಬೀದಿಗೆ ಬಂದಿರುವ ಕಾರ್ಮಿಕರಿಗೆ ಏನು ಕೊಡುತ್ತೀರಿ? ಅವರ ಬದುಕಿನ ಗತಿ ಏನು? ರೂ. 100-200-300 ಕೋಟಿ ಖರ್ಚು ಮಾಡಿ ಕಾರ್ಖಾನೆಯನ್ನು ಕಟ್ಟಿರುವವರು ಬೀದಿಗೆ ಬಂದುಬಿಟ್ಟರೆ ಗತಿ ಏನು? ರೈತ ಉಳಿಯಬೇಕು, ಕಾರ್ಮಿಕ ಉಳಿಯಬೇಕು, ಕಾರ್ಖಾನೆಗಳು ಉಳಿಯಬೇಕು. ಇದರ ಬಗ್ಗೆ ನೀವು ಒಂದು ಮಾತನ್ನೂ ಆಡದಿರುವುದು ದುರಾದೃಷ್ಟಕರ. ಕಾರ್ಮಿಕರಿಗೆ ಏನು ಪರಿಹಾರ ಘೋಷಿಸುತ್ತೀರಿ? ಡಿಸಿಎಂ ಆದ ಮಾನ್ಯ ಕಾರಜೋಳ ಮತ್ತು ನನ್ನ ಕ್ಷೇತ್ರ ಒಂದೇ ಆಗಿದ್ದು, ಅಲ್ಲಿನ ರನ್ನನಗರದ ಸಹಕಾರಿ ಸಕ್ಕರೆ ಕಾರ್ಖಾನೆಯ ಕಾರ್ಮಿಕರು 3 ದಿನಗಳಿಂದ ಸತ್ಯಾಗ್ರಹ ಮಾಡುತ್ತಿದ್ದಾರೆ. ನಾವು ಅಲ್ಲಿ ಹೋಗಿ ಏನು ಹೇಳಬೇಕು? ಇದುವರೆಗೂ ಅವರ ಜೊತೆ ಯಾರೂ ಮಾತನಾಡದೇ ಇರುವುದು ದುರಾದೃಷ್ಟಕರ ಎಂದು ಹೇಳಬೇಕಾಗುತ್ತದೆ. ಮಾನ್ಯ ಸಭಾಪತಿಯವರೇ, ನನ್ನ ಬೇಡಿಕೆಯನ್ನು ಹೇಳಿಬಿಡುತ್ತೇನೆ, ಈ ನೆರೆಯನ್ನು 'ರಾಷ್ಟ್ರೀಯ ವಿಪತ್ತು' ಎಂದು ಘೋಷಿಸಬೇಕು. ಪರಿಹಾರ ಕೊಡುವಾಗ ಕೊಡಗಿಗೆ ಒಂದು ನ್ಯಾಯ ಮತ್ತು ಉತ್ತರ ಕರ್ನಾಟಕದ ಭಾಗಕ್ಕೆ ಒಂದು ನ್ಯಾಯ ಆಗಬಾರದು. ಉತ್ತರ ಕರ್ನಾಟಕದವರು ಯಾರೂ ಕೇಳುವುದಿಲ್ಲವೆಂದು ಹೀಗೆ ಮಾಡುತ್ತಾರೆಯೇ? ಅವರಿಗೆ ರೂ. 10 ಲಕ್ಷಗಳಂತೆ ಪರಿಹಾರ ಕೊಟ್ಟಿದ್ದಾರೆ, ನಮಗೂ ಕೊಡಿ. ಪ್ರವಾಹಕ್ಕೆ ಒಳಗಾಗಿರುವ ಹಳ್ಳಿಗಳಿಗೆ EPQ (Economic Production Quantity) Model ನಲ್ಲಿ ಪರಿಹಾರ ನೀಡಿ ಸುರಕ್ಷಿತ ಪುನರ್ವಸತಿ ಮಾಡಬೇಕು. ಪ್ರವಾಹದಿಂದ ಫಸಲು ನಾಶವಾಗಿದ್ದು, ಫಸಲಿನ ನಷ್ಟಕ್ಕೆ ವೈಜ್ಞಾನಿಕವಾಗಿ ಪೂರ್ಣ ಪ್ರಮಾಣದ ನಷ್ಟ ಭರಿಸುವಂತೆ ಆಗಬೇಕು. ಕಬ್ಬಿಗೆ ಎಕರೆಗೆ ಕನಿಷ್ಠ ರೂ. 50 ಸಾವಿರ ಪರಿಹಾರ ಕೊಡಬೇಕು. ರೈತರು ಪಡೆದಿರುವ ಕೃಷಿ ಬೆಳೆ ಸಾಲ, ಮಹಿಳಾ ಸ್ವಸಹಾಯ ಸಂಘಗಳ ಸಾಲ ಮನ್ನಾ ಮಾಡಿ, ಶೂನ್ಯ ಬಡ್ಡಿದರದಲ್ಲಿ ದೀರ್ಘಾವಧಿ ಸಾಲ ನೀಡಬೇಕು. ಕೇಂದ್ರದ NDRF (National Disaster Response Fund) ಮತ್ತು ರಾಜ್ಯದ SDRF (State Disaster Response Fund) ನ ಮಾರ್ಗಸೂಚಿ ಅವೈಜ್ಞಾನಿಕವಾಗಿದ್ದು, ಅದನ್ನು ಪುನರ್ಪರಿಶೀಲನೆ ಮಾಡಬೇಕು. ಮಾನ್ಯ ಸಿದ್ದರಾಮಯ್ಯನವರು ಪರಿಹಾರ ಕೊಡುವಾಗ NDRF ಅಥವಾ SDRF ನ guidelines ನೋಡದೇ ಪರಿಹಾರ ಕೊಟ್ಟಿದ್ದರು. ರೈತ ತೊಂದರೆಯಲ್ಲಿದ್ದಾನೆ ಸೂಕ್ತ ಪರಿಹಾರ ಕೊಡಿ ಎಂದು ಹೇಳಿದ್ದರು.

**ಶ್ರೀ ಸಿ.ಟಿ.ರವಿ:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರ ಬುದ್ಧಿವಂತಿಕೆ, ಕಳಕಳಿ ಚೆನ್ನಾಗಿ ಅರ್ಥವಾಗುತ್ತಿದೆ. ಅವರು ಮಂತ್ರಿಯಾಗಿದ್ದಾಗ ಒಂದು ಮನೆಗೆ ಸುಮಾರು ರೂ. 95,100 ಕೊಟ್ಟಿದ್ದರು. ಈಗ ರೂ. 5 ಲಕ್ಷ ಎಂದು ಘೋಷಣೆ ಮಾಡಿದ್ದೇವೆ. ಮಡಿಕೇರಿಯಲ್ಲಿ 840 ಮನೆಗಳು ಹಾನಿಯಾಗಿತ್ತು. ಕೇಂದ್ರದಿಂದ ರೂ. 500 ಕೋಟಿ ಹಣ ಬಂತು ಮತ್ತು ದಾನಿಗಳು ದೊಡ್ಡ ಪ್ರಮಾಣದಲ್ಲಿ ಹಣವನ್ನು ಕೊಟ್ಟಿದ್ದರು. ಈಗ ಇವರು ರೂ. 5 ಲಕ್ಷಕ್ಕೂ, ರೂ. 10 ಲಕ್ಷಕ್ಕೂ ಹೋಲಿಕೆ ಮಾಡುತ್ತಿದ್ದಾರೆ. ಆದರೆ ಇವರು ರೂ. 1 ಲಕ್ಷಕ್ಕೂ ರೂ. 5 ಲಕ್ಷಕ್ಕೂ ಹೋಲಿಕೆ ಮಾಡಬೇಕು. ರೂ. 95,100 ಕೊಡುತ್ತಿದ್ದುದೆಲ್ಲಿ, ರೂ. 5 ಲಕ್ಷ ಕೊಡುತ್ತಿರುವುದೆಲ್ಲಿ? ಸುಮಾರು 5 ಪಟ್ಟು ಜಾಸ್ತಿ ನೀಡಲಾಗುತ್ತಿದೆ.

**ವೈಸ್ ಚೇರ್ಮನ್:-** ಮಾನ್ಯ ತಿಮ್ಮಾಪುರರವರೇ ದಯವಿಟ್ಟು ಛಿಂಟಿಛಿಟಣಜಜ ಮಾಡಿ.

**ಶ್ರೀ ಆರ್.ಬಿ.ತಿಮ್ಮಾಪುರ:-** ನನ್ನ ಬೇಡಿಕೆಗಳೇನು ಎಂದು ಹೇಳಿ ಮಾತನ್ನು ಮುಗಿಸುತ್ತೇನೆ. ಮಾನ್ಯ ಸಭಾಪತಿಯವರೇ, ಸರ್ಕಾರ ಸಂತ್ರಸ್ತರಿಗೆ ಸೂಕ್ತ ಪರಿಹಾರ ಕೊಡದೇ ಇದ್ದರೆ ಅವರು ಮತ್ತೆ ಈಕಡೆ ಬರಬೇಕಾಗುತ್ತದೆ.

**ವೈಸ್ ಚೇರ್ಮನ್:-** ಮಾನ್ಯ ಸದಸ್ಯರೇ ವಿಷಯ ಬಿಟ್ಟು ಹೋಗಬೇಡಿ.

**ಶ್ರೀ ಆರ್.ಬಿ.ತಿಮ್ಮಾಪುರ:-** ಮಾನ್ಯ ಸಭಾಪತಿಯವರೇ, ಇನ್ನೂ ಕೂಡ ಶೆಡ್‌ಗಳ ನಿರ್ಮಾಣ ಮಾಡಿಕೊಟ್ಟಿಲ್ಲ. ಅಲ್ಲಲ್ಲೇ ಬೀದಿಯಲ್ಲಿ ಬಿದ್ದುಕೊಂಡಿದ್ದಾರೆ. ಒಂದು ಶೆಡ್ ಕಟ್ಟಿ ಕೊಡುವುದಕ್ಕೆ ಯೋಗ್ಯತೆ ಇಲ್ಲದೇ ಹೋದರೆ ಅವರು ಎಲ್ಲಿ ವಾಸ ಮಾಡಬೇಕು? ಪ್ರವಾಹದಿಂದ ಮನೆಗಳು ಕೊಚ್ಚಿಕೊಂಡು ಹೋಗಿವೆ, ಒಡ್ಡು ಕೊಚ್ಚಿಕೊಂಡು ಹೋಗಿದೆ.

**ವೈಸ್ ಚೇರ್ಮನ್:-** ನಿಮಗೆ ಸಾಕಷ್ಟು ಸಮಯ ಕೊಟ್ಟಿದ್ದೇನೆ. ಮಾನ್ಯ ರವಿಕುಮಾರ್ ಅವರು ಮಾತನಾಡುತ್ತಾರೆ, ಅವರ ಹೆಸರನ್ನು ಕರೆದಿದ್ದೇನೆ. ದಯವಿಟ್ಟು ಕುಳಿತುಕೊಳ್ಳಿ.

**ಶ್ರೀ ಎನ್.ರವಿಕುಮಾರ್(ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಇದುವರೆಗೆ ಮಾನ್ಯ ತಿಮ್ಮಾಪುರ ಅವರಿಂದ ಹಿಡಿದು ಹಿಮ್ಮುಖವಾಗಿ ಸಾಕಷ್ಟು ಜನ, ವಿಪಕ್ಷದ ನಾಯಕರವರೆಗೆ ಮಾತನಾಡಿದ್ದಾರೆ. ಐತಿಹಾಸಿಕವಾಗಿರುವಂತಹ ನಷ್ಟ, ಸಾಮಾಜಿಕವಾಗಿರುವಂತಹ ನಷ್ಟ, ಶೈಕ್ಷಣಿಕವಾಗಿರುವಂತಹ ನಷ್ಟ, ಔದ್ಯೋಗಿಕವಾಗಿ ಆಗಿರುವಂತಹ ನಷ್ಟ, ನೈತಿಕವಾಗಿ ಆಗಿರುವಂತಹ ನಷ್ಟ ಈ ರೀತಿ ನಷ್ಟಗಳ ಸರಮಾಲೆ ಸಮಾಜದಲ್ಲಿ ಸಂಭವಿಸಿದೆ. ಈ ಸಂಬಂಧ ತುಂಬಾ ಭಾವನಾತ್ಮಕವಾಗಿ, ಏನೇನು ಶಬ್ದಗಳನ್ನು ಬಳಸಿದರೆ, ಎಷ್ಟು ಆಳವಾಗಿ ಭಾವನಾತ್ಮಕವಾಗಿ ಸ್ಪಂದಿಸುತ್ತಾರೆ ಎನ್ನುವುದನ್ನು ಲೆಕ್ಕ ಹಾಕಿ ವಿಪಕ್ಷದ ನಾಯಕರು ಮತ್ತು ಸದಸ್ಯರುಗಳು ಮಾತನಾಡಿದ್ದಾರೆ. ಆದರೆ, ಇಂತಹ ಮಾತುಗಳನ್ನು ಆಡಿದವರು, 2-3 ತಿಂಗಳ ಹಿಂದೆ ಅವರದೇ ಸರ್ಕಾರ ಇದ್ದಾಗ ಇದೇ ಶಬ್ದಗಳನ್ನು ಅವರಿಗೆ ತಾಳೆ ಹಚ್ಚಿಬಿಟ್ಟರೆ . . . (ಗೊಂದಲ)

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಐವನ್ ಡಿ'ಸೋಜಾ:–** ಅದರ ಹಿಂದೆ ನೀವು ಇದ್ದೀರಿ.

(ಗೊಂದಲ)

**ಶ್ರೀ ಎಂ. ನಾರಾಯಣಸ್ವಾಮಿ:–** ಆವತ್ತು ನೆರೆ ಹಾವಳಿ ಆಗಿರಲಿಲ್ಲ, ಪ್ರವಾಹ ಬಂದಿರಲಿಲ್ಲ.

(ಗೊಂದಲ)

**ಶ್ರೀ ಎನ್.ರವಿಕುಮಾರ್:–** ಮಾನ್ಯ ಸಭಾಪತಿಯವರೇ, ನಾನು ಇನ್ನೂ ಮಾತನಾಡುವುದಕ್ಕೆ ಪ್ರಾರಂಭ ಮಾಡಿಲ್ಲ . . . . (ಗೊಂದಲ)

**ಶ್ರೀ ಎಂ.ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ಮಾತನಾಡಬೇಕಾದರೆ ಗಂಭೀರವಾಗಿ ಮಾತನಾಡಿ. ಮಾನ್ಯ ಸದಸ್ಯರು ಕೇವಲ ಪ್ರವಾಹದ ಬಗ್ಗೆ ಮಾತನಾಡಲಿ.

(ಗೊಂದಲ)

**ವೈಸ್ ಚೇರ್ಮನ್:–** ಮಾನ್ಯ ಸದಸ್ಯರೇ ದಯವಿಟ್ಟು ವಿಷಯದ ಬಗ್ಗೆ ಮಾತನಾಡಿ. ಉಪ ಮುಖ್ಯಮಂತ್ರಿಗಳು ಉತ್ತರವನ್ನು ಕೊಡುತ್ತಾರೆ.

(ಗೊಂದಲ)

**ಶ್ರೀ ಎಸ್.ರವಿ:–** ಮಾನ್ಯ ಸಭಾಪತಿಯವರೇ, ಮಾನ್ಯ ತಿಪ್ಪೇಸ್ವಾಮಿ ರವರಿಗೆ ರಾಜಕಾರಣ ಬೇಡ, ಪ್ರವಾಹದ ಬಗ್ಗೆ ಮಾತನಾಡಿ ಎಂದು ಹೇಳಿದಿರಿ. ದಯಮಾಡಿ ಆಡಳಿತ ಪಕ್ಷದ ಸದಸ್ಯರಿಗೂ ಅದೇ ಮಾತನ್ನು ಹೇಳಿ. ಅವರಿಗೆ ಅತೀ ಬುದ್ಧಿವಂತಿಕೆ ಬೇಡವೆಂದು ಹೇಳಿ. ಮಾನ್ಯ ಸದಸ್ಯರಿಗೆ ಪ್ರವಾಹದ ಬಗ್ಗೆ ಗಂಭೀರತೆಯಿಂದ ಮಾತನಾಡುವುದಕ್ಕೆ ಹೇಳಿ.

(ಗೊಂದಲ)

**ಶ್ರೀ ಸಿ.ಸಿ.ಪಾಟೀಲ್(ಗಣಿ ಮತ್ತು ಭೂವಿಜ್ಞಾನ ಹಾಗೂ ವಾಣಿಜ್ಯ ಕೈಗಾರಿಕಾ ಸಚಿರು):–** ತಾವೆಲ್ಲಾ ಆಗಿನಿಂದ ಮಾತನಾಡಿದಿರಿ. ಆದರೆ ಮಾನ್ಯ ರವಿಕುಮಾರ್‌ರವರ ಒಂದು ಮಾತನ್ನೂ ನಿಮ್ಮಿಂದ ತಡೆದುಕೊಳ್ಳುವುದಕ್ಕೆ ಆಗುತ್ತಿಲ್ಲ.

(ಗೊಂದಲ) (ಮುಂದು . . .)

(161)11–10–2019 4.30 ಡಿಎಸ್–ಎಕೆ

**ವೈಸ್‌ಛೇರ್ಮನ್:–** ಅವರು ಮಾಡಿದರು ಎಂದು ನೀವು ಮಾಡಬೇಕು ಎಂದೇನೂ ಇಲ್ಲ.

(ಗೊಂದಲ)

**ಶ್ರೀ ಆರ್.ಧರ್ಮಸೇನ:–** ಮಾನ್ಯ ಸಭಾಪತಿಯವರೇ, ಮಾನ್ಯ ರವಿಕುಮಾರ್‌ರವರು ಕನಿಷ್ಠ ಜ್ಞಾನ ಇಟ್ಟುಕೊಂಡು ಮಾತನಾಡಬೇಕಲ್ಲವೇ?

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಶ್ರೀ ಎನ್.ರವಿಕುಮಾರ್:-** ಮಾನ್ಯ ಸಭಾಪತಿಯವರೇ, ನಾನು ಕನಿಷ್ಠ ಜ್ಞಾನವನ್ನು ಇಟ್ಟುಕೊಂಡೇ ಮಾತನಾಡುತ್ತಿದ್ದೇನೆ.

**ವೈಸ್‌ಛೇರ್ಮನ್:-** ಆಪಾದನೆಗಳನ್ನು ಮಾಡುವುದು ಬೇಡ.

**ಶ್ರೀ ಎನ್.ರವಿಕುಮಾರ್:-** ಬಹಳ ಗರಿಷ್ಠ ಜ್ಞಾನವನ್ನು ಇಟ್ಟುಕೊಂಡಿರುವಂಥವರು ಎಷ್ಟೋ ವರ್ಷಗಳಿಂದ ಏನು ಮಾಡಿದರು ಎನ್ನತಕ್ಕಂಥ ಗರಿಷ್ಠ ಜ್ಞಾನವನ್ನು ಇಟ್ಟುಕೊಂಡಿರುವಂಥವನು.

(ಗೊಂದಲ)

**ವೈಸ್‌ಛೇರ್ಮನ್:-** ಮಾನ್ಯ ರವಿಕುಮಾರ್‌ರವರೇ, ವಿಷಯವನ್ನು ಮಂಡನೆ ಮಾಡಿ. ಎರಡು ಕಡೆಯಿಂದ ಪ್ರಚೋದನೆ ಬೇಡ. ಸರ್ಕಾರಕ್ಕೆ ಉತ್ತರ ನೀಡಲು ಅವಕಾಶ ಮಾಡಿಕೊಡಿ. ವಿರೋಧ ಪಕ್ಷದವರಿಗೆ ಚರ್ಚೆ ಮಾಡಲು ಹೆಚ್ಚಿನ ಅವಕಾಶ ಇದೆ.

(ಗೊಂದಲ)

**ವೈಸ್‌ಛೇರ್ಮನ್:-** ಎಲ್ಲರು ಕುಳಿತುಕೊಳ್ಳಿ, ಸಮಯಾವಕಾಶ ಕಡಿಮೆ ಇದೆ. ದಯವಿಟ್ಟು ಎರಡು ಕಡೆ ಪ್ರಚೋದನೆ ಬೇಡ.

(ಗೊಂದಲ)

**ಶ್ರೀ ಐವನ್ ಡಿ'ಸೋಜಾ:-** ಆಕಸ್ಮಿಕವಾಗಿ ಅಧಿಕಾರಕ್ಕೆ ಬಂದಿದ್ದೀರಿ.

(ಗೊಂದಲ)

**ವೈಸ್‌ಛೇರ್ಮನ್:-** ಮಾನ್ಯ ಐವನ್ ಡಿ'ಸೋಜಾರವರೇ, ಕುಳಿತುಕೊಳ್ಳಿ. ದಯಮಾಡಿ ಎರಡು ಕಡೆ ಪ್ರಚೋದನೆ ಬೇಡ. ವಿರೋಧ ಪಕ್ಷದವರಿಗೆ ಟೀಕೆ ಮಾಡುವುದಕ್ಕೆ ಅವಕಾಶ ಇದೆ. ಆ ಮಿತಿಯನ್ನು ಮೀರದಿದ್ದರೆ ಸಮಯ ಸದುಪಯೋಗವಾಗುತ್ತದೆ.

**ಶ್ರೀ ಕೆ.ಸಿ.ಕೊಂಡಯ್ಯ:-** ಮಾನ್ಯ ಸಭಾಪತಿಯವರೇ, ಮಾನ್ಯ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನರವರು ರವರು facts, figures ಬಗ್ಗೆ ಹೇಳಿದ್ದಾರೆ. ಅವರು ಯಾರನ್ನೂ criticize ಮಾಡಿಲ್ಲ. ನೆರೆ ಪೀಡಿತ ಜಿಲ್ಲೆಯಿಂದ ಬಂದಿರುವವರಾಗಿರುವುದರಿಂದ ಅಲ್ಲಿನ ನೋವು, ಕಷ್ಟವನ್ನು ಅರಿತು ಹೇಳುತ್ತಿದ್ದಾರೆ. ಮಾನ್ಯ ರವಿಕುಮಾರ್‌ರವರಿಗೆ ತಾವು ಸಲಹೆಯನ್ನು ನೀಡಿ. ಅವರು ಸರ್ಕಾರದಲ್ಲಿದ್ದಾರೆ. ಅವರು ನೆರೆ ಪೀಡಿತ ಪ್ರದೇಶಗಳಿಗೆ ಭೇಟಿ ಕೊಟ್ಟಿದ್ದರೆ ಅಲ್ಲಿನ ಕಷ್ಟ ನಷ್ಟಗಳೇನು ಎಂಬುದನ್ನು ಸರ್ಕಾರಕ್ಕೆ ಸಲಹೆ ನೀಡಲಿ. ಆಡಳಿತ ಪಕ್ಷದವರು ಬಹಳಷ್ಟು ಮಾತನಾಡಿದರು ಅದಕ್ಕೇನಾದರೂ ನಾವು criticize ಮಾಡಿದ್ದೇವೆಯೇ? ಹಾಗಾಗಿ ದಯಮಾಡಿ ಅವರಿಗೆ ಎಚ್ಚರಿಕೆಯನ್ನು ನೀಡಿ.

" ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಶ್ರೀ ಎನ್.ರವಿಕುಮಾರ್:-** ಮಾನ್ಯ ಸಭಾಪತಿಯವರೇ, ನಾನು ಕೂಡ ಇಡೀ ರಾಜ್ಯದಲ್ಲಿ ನೆರೆ ಪೀಡಿತ ಪ್ರದೇಶಗಳಿಗೆ ಸಾಕಷ್ಟು ಓಡಾಡಿದ್ದೇನೆ. ಅದರ ಅನುಭವದಿಂದಲೇ ಕೆಲವು ವಿಷಯಗಳನ್ನು ನಾನು ಹೇಳುವುದಕ್ಕೆ ಬಯಸುತ್ತಿದ್ದೇನೆ. ಮಾನ್ಯ ವಿರೋಧ ಪಕ್ಷದ ನಾಯಕರು, ಮಾನ್ಯ ಶ್ರೀಕಂಠೇಗೌಡರು ಮಾತನಾಡತಕ್ಕಂಥ ಸಂದರ್ಭದಲ್ಲಿ ಶಾಲೆಗಳು ಓಪನ್ ಆಗಿಲ್ಲ, ವಸತಿ ಶಾಲೆಗಳು ಓಪನ್ ಆಗಿಲ್ಲ, ಶಾಲೆಗಳಿಗೆ ಎಲ್ಲಿ ಹೋಗಬೇಕು ಎಂದು ಹೇಳಿದರು.

(ಗೊಂದಲ)

**ವೈಸ್‌ಛೇರ್ಮನ್:-** ದಯವಿಟ್ಟು ಅವರು ಮಾತನಾಡುವುದಕ್ಕೆ ಅಡ್ಡಿ ಮಾಡಬೇಡಿ.

(ಗೊಂದಲ)

**ವೈಸ್‌ಛೇರ್ಮನ್:-** ಸಮಯಾವಕಾಶ ಕಡಿಮೆ ಇದೆ. ಅವರಿಗೆ ಮಾತನಾಡುವುದಕ್ಕೆ ಬಿಡಿ. ಸದಸ್ಯರಿಗೆ ಎಲ್ಲಿ ನಿಯಂತ್ರಣ ಮಾಡಬೇಕೆಂಬುದು ನಮಗೆ ಗೊತ್ತಿದೆ. ಅವರಿಗೆ ಹೀಗೆ ಮಾತನಾಡಬೇಕೆಂದು ನಾವು ಹೇಳುವುದಕ್ಕಾಗುವುದಿಲ್ಲ. ಅಭಿವ್ಯಕ್ತಿ ಸ್ವಾತಂತ್ರ್ಯ ಎಲ್ಲರಿಗೂ ಒಂದೇ. ಸದನದ ನಿಯಮಾವಳಿಗಳನ್ನು, ಸಭಾ ಗೌರವವನ್ನು ಮೀರಿದರೆ ಮಾತ್ರ ನಾವು ಎಚ್ಚರಿಕೆಯನ್ನು ಕೊಡುತ್ತೇವೆ. ಸ್ವಲ್ಪ ಸಹನೆ ಇರಲಿ.

**ಶ್ರೀ ಬಸವರಾಜ ಪಾಟೀಲ್ ಇಟಗಿ:-** ಮಾನ್ಯ ಸಭಾಪತಿಯವರೇ, he is not a minister. ಅವರು ಉತ್ತರ ಕೊಡುವುದು ಬೇಡ, ಮಂತ್ರಿಗಳು ಉತ್ತರ ಕೊಡುತ್ತಾರೆ.

**ಶ್ರೀ ಎನ್.ರವಿಕುಮಾರ್:-** ಮಾನ್ಯ ಸಭಾಪತಿಯವರೇ, ನಾನು ಸಚಿವನಾಗಿ ಉತ್ತರ ಕೊಡುತ್ತಿಲ್ಲ. ನನಗೂ ಕೂಡ ಈ ಸದನದಲ್ಲಿ ಹಕ್ಕು ಇದೆ.

(ಗೊಂದಲ)

**ವೈಸ್‌ಛೇರ್ಮನ್:-** ಮಾತು ಮಾತಿಗೆ ಅಡ್ಡಿಪಡಿಸಿದರೆ ಸಮಯ ವ್ಯರ್ಥವಾಗುತ್ತದೆ.

**ಶ್ರೀ ಎನ್.ರವಿಕುಮಾರ್:-** ಮಾನ್ಯ ಸಭಾಪತಿಯವರೇ, ನನಗೆ ಮಾತನಾಡುವ ಹಕ್ಕು ಇದೆ. ನನ್ನ ಹಕ್ಕುಗಳನ್ನು ಅವರು ಕಸಿದುಕೊಳ್ಳುವುದಕ್ಕೆ ಸಾಧ್ಯವಿಲ್ಲ. ಹಾಗಾಗಿ ನಾನು ಪೀಠಕ್ಕೆ ಮನವಿ ಮಾಡುತ್ತೇನೆ. ನನ್ನ ಹಕ್ಕುಗಳನ್ನು ಕುಡಿತ ಮಾಡುವುದಕ್ಕೆ ಯಾರಿಗೂ ಅಧಿಕಾರವಿಲ್ಲ.

**ವೈಸ್‌ಛೇರ್ಮನ್:-** ರವಿಕುಮಾರ್‌ರವರು ಮಾತನಾಡುವುದನ್ನು ಬಿಟ್ಟು ಬೇರೆ ಯಾವುದು ಕೂಡ ರೆಕಾರ್ಡ್‌ಗೆ ಹೋಗಬಾರದು.

**Sri BASAVARAJ PATIL ITAGI:** Only ministers can reply.

(ಗೊಂದಲ)

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು):–** ಮಾನ್ಯ ಸಭಾಪತಿಯವರೇ, ಅವರು ಎರಡು ದಿವಸಗಳಿಂದ ಬಹಳಷ್ಟು ವಿಚಾರಗಳ ಬಗ್ಗೆ ಬೆಳಕನ್ನು ಚೆಲ್ಲಿದ್ದಾರೆ. ನಾವೆಲ್ಲರೂ ಬಹಳ ತಾಳ್ಮೆಯಿಂದ ಕೇಳಿದ್ದೇವೆ. ಪ್ರತಿಯೊಬ್ಬ ಸದಸ್ಯರಿಗೂ ಕೂಡ ತಾವು ಅವಕಾಶವನ್ನು ಕೊಡುತ್ತಿದ್ದೀರಿ. ಈಗ ಮಾನ್ಯ ರವಿಕುಮಾರ್‌ರವರ ಸರದಿ ಬಂದಿದೆ. ಅವರ ವಿಚಾರಗಳ ಬಗ್ಗೆ ನೀವು ಏನು ಹೇಳಬೇಕೆಂದಿದ್ದೀರೋ ಅದನ್ನು ನೀವು ಮಾತನಾಡುವಾಗ counter ಮಾಡಿ. ಅವರು ಮಾತನಾಡುತ್ತಿರುವಾಗ ಮಧ್ಯೆ ಹಸ್ತಕ್ಷೇಪ ಮಾಡಿದಾಗ ವಿನಾಕಾರಣ ಸಮಸ್ಯೆಗಳಾಗುತ್ತವೆ. ದಯವಿಟ್ಟು ಅವರು ಸಹಕಾರ ನೀಡಬೇಕು.

**ಶ್ರೀ ಐವನ್ ಡಿ'ಸೋಜಾ:–** ಮಾನ್ಯ ಸಭಾಪತಿಯವರೇ, ಅದೇರೀತಿ ನಾವು ಮಾತನಾಡುತ್ತಿರುವಾಗ ಅವರು ಸುಮ್ಮನಿರಬೇಕಲ್ಲವೇ?

**ಶ್ರೀ ಕೆ.ಸಿ.ಕೊಂಡಯ್ಯ:–** ಮಾನ್ಯ ಸಭಾಪತಿಯವರೇ, ಶ್ರೀಕಂಠೇಗೌಡರವರು ಈ ರೀತಿ ಹೇಳಿದರು, ಎಸ್.ಆರ್.ಪಾಟೀಲ್‌ರವರು ಈ ರೀತಿ ಹೇಳಿದರು ಎಂದು ಅವರು ಹೇಳುವುದು ಬೇಡ. ಅವರು ತಮ್ಮ ಸಲಹೆಯನ್ನು ನೀಡಲಿ. ಆಡಳಿತ ಪಕ್ಷದವರು ಅಂಕಿ–ಅಂಶಗಳನ್ನು ಹೇಳಿದರು, ನಾವೇನಾದರು ಅಡ್ಡಪಡಿಸಿದ್ದೇವೆಯೇ?

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ಅವರು ತಾವು ಕಂಡಿದ್ದನ್ನು ಹೇಳುತ್ತಿದ್ದಾರೆ.

**ಶ್ರೀ ಕೆ.ಸಿ.ಕೊಂಡಯ್ಯ:–** ಮಾನ್ಯ ಸಭಾಪತಿಯವರೇ, ಅದನ್ನು ಹೇಳಿ ಅವರು ಸರ್ಕಾರಕ್ಕೆ ಛಾಟಿ ಬೀಸಲಿ. ಅದು ಬಿಟ್ಟು ಎಸ್.ಆರ್.ಪಾಟೀಲ್‌ರವರು ಈ ರೀತಿ ಹೇಳಿದರು ಎಂದು ಹೇಳುವುದು ಸರಿಯಲ್ಲ.

**ಶ್ರೀ ಎನ್.ರವಿಕುಮಾರ್:–** ಮಾನ್ಯ ಸಭಾಪತಿಯವರೇ, ಇಷ್ಟು ಏಕೆ ಗದ್ದಲವಾಗುತ್ತಿದೆ ಎಂಬುದು ನನಗೆ ಅರ್ಥವಾಗುತ್ತಿಲ್ಲ. ಇನ್ನು ನಾನು ಯಾವುದೇ ವಿಷಯವನ್ನು ಪ್ರಸ್ತಾಪ ಮಾಡಿಲ್ಲ. ಉದಾಹರಣೆಗೆ, ನಾನು ಈ ಅಂಶದ ಬಗ್ಗೆ ಹೇಳಿದ್ದೆ, ಈ ಅಂಶದ ಬಗ್ಗೆ ನಮ್ಮದು ವಿರೋಧವಿದೆ ಎಂದು ಹೇಳಲಿ. ನಾನೇನು ಅಂಶದ ಬಗ್ಗೆ ಹೇಳಿದ್ದೇನೆ? ನಾನೇನು ಅಂಶದ ಬಗ್ಗೆ ಪ್ರಸ್ತಾಪ ಮಾಡಿದ್ದೇನೆ? ಕರ್ನಾಟಕ ರಾಜ್ಯದಲ್ಲಿ ವಿಪರೀತವಾಗಿ ಹಾನಿಯಾಗಿದೆ.

**ನೂತನ ಸಚಿವರ ಪರಿಚಯ**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು):–** ಮಾನ್ಯ ಸಭಾಪತಿಯವರೇ, ನಮ್ಮ ಸದನಕ್ಕೆ ಗ್ರಾಮೀಣಾಭಿವೃದ್ಧಿ ಸಚಿವರಾದ ಮಾನ್ಯ ಕೆ.ಎಸ್.ಈಶ್ವರಪ್ಪನವರು ಸದನಕ್ಕೆ ಬಂದಿದ್ದಾರೆ. ಅವರನ್ನು ಸದನಕ್ಕೆ ಸ್ವಾಗತಿಸುತ್ತಿದ್ದೇನೆ.

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಕೆ.ಎಸ್.ಈಶ್ವರಪ್ಪ:–** ವಿರೋಧ ಪಕ್ಷದ ನಾಯಕರಾದ ಮಾನ್ಯ ಎಸ್.ಆರ್.ಪಾಟೀಲ್‌ರವರಿಗೆ ಅಭಿನಂದನೆಯನ್ನು ಸಲ್ಲಿಸುತ್ತೇನೆ.

**ಶ್ರೀ ಐವನ್ ಡಿ'ಸೋಜಾ:–** ಮಾನ್ಯ ಸಭಾಪತಿಯವರೇ, ಮಾನ್ಯ ಈಶ್ವರಪ್ಪನವರು ನಮ್ಮ ಸದನದಿಂದ ವಿರೋಧ ಪಕ್ಷದ ನಾಯಕರಾಗಿ ಈ ಕಡೆ ಬಂದಂಥವರು. ಹಾಗಾಗಿ ನಮಗೆ ಗೌರವವಿದೆ.

**ಶ್ರೀ ಎಸ್.ಆರ್.ಪಾಟೀಲ್:–** ಮಾನ್ಯ ಸಭಾಪತಿಯವರೇ, ಮಾನ್ಯ ಈಶ್ವರಪ್ಪರವರು ಪದೇಪದೇ ಅಪೇಕ್ಷೆಪಡುತ್ತಿದ್ದರು, ಅವರ ಅಪೇಕ್ಷೆಯನ್ನು ಪೂರೈಸುತ್ತಿದ್ದೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರಾದ ಮಾಧುಸ್ವಾಮಿಯವರು ಸದನಕ್ಕೆ ಬಂದಿದ್ದಾರೆ. ಅವರನ್ನು ಸದನಕ್ಕೆ ಸ್ವಾಗತಿಸುತ್ತಿದ್ದೇನೆ.

**ಶ್ರೀ ಎನ್.ರವಿಕುಮಾರ್(ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಕರ್ನಾಟಕ ರಾಜ್ಯದಲ್ಲಿ ಎಂದೂ ಕಂಡರಿಯದಂತಹ ಪ್ರವಾಹ ಬಂದಿದೆ. ಇದರಲ್ಲಿ ಆಡಳಿತ ಪಕ್ಷ ಇರಬಹುದು, ವಿಪಕ್ಷ ಇರಬಹುದು, ಟಿ.ವಿ.ಯಲ್ಲಿ ನೋಡಿದರೆ ಎಲ್ಲರಿಗೂ ಗೊತ್ತಾಗುತ್ತಿತ್ತು, ಎಲ್ಲರೂ ಕೂಡ ಬಾಯಿ ಮೇಲೆ ಬೆರಳು ಇಟ್ಟುಕೊಳ್ಳುವಂತೆ ಸಹಾಯವೂ ಹರಿದು ಬಂದಿತು. ಸಂತ್ರಸ್ತರಿಗೆ ಅಳುವುದಕ್ಕೂ ಕೂಡ ಕಣ್ಣೀರು ಬರದಿರುವ ಪರಿಸ್ಥಿತಿಯಲ್ಲಿದ್ದರು. ದಾನಿಗಳು ಅಷ್ಟು ಪ್ರಮಾಣದಲ್ಲಿ ನೀಡಿದ ದವಸ, ಧಾನ್ಯ, ಬಟ್ಟೆ, ಲೋಡ್‌ಗಟ್ಟಲೆ ಕೊಟ್ಟಿರುವುದನ್ನು ನಾನು ಯಾವುತ್ತು ನೋಡಿರಲಿಲ್ಲ. ಹಾಗಾಗಿ ಆ ಜನರಿಗೆ ಮತ್ತು ವಿಪಕ್ಷದ ಸದಸ್ಯರಿಗೆ ಅಭಿನಂದನೆಯನ್ನು ಸಲ್ಲಿಸುತ್ತೇನೆ. ವಿಶೇಷವಾಗಿ ನಮ್ಮ ರಾಜ್ಯದ ಮುಖ್ಯಮಂತ್ರಿಗಳು ಈ ವಯಸ್ಸಿನಲ್ಲೂ ಕೂಡ ಪ್ರವಾಹದಲ್ಲಿ ಸಿಲುಕಿರುವಂತಹ ಜನರ ಕಷ್ಟದ ಕಣ್ಣೀರನ್ನು ಒರೆಸುವುದಕ್ಕೋಸ್ಕರವಾಗಿ ಅತ್ಯಂತ ಹೃದಯಸ್ಪರ್ಶಿಯಾಗಿ ಓಡಾಡಿದ್ದಾರೆ. ಅವರಿಗೂ ಕೂಡ ನಾನು ಈ ಸಂದರ್ಭದಲ್ಲಿ ಅಭಿನಂದನೆಯನ್ನು ಸಲ್ಲಿಸುತ್ತಿದ್ದೇನೆ. ಇನ್ನೂ ಸರ್ಕಾರ ಬಹಳ ಅಗಾಧವಾಗಿ ಸ್ಪಂದಿಸಬೇಕು, ಆಳವಾಗಿ ಸ್ಪಂದಿಸಬೇಕು, ಇನ್ನೂ ದೊಡ್ಡ ಪ್ರಮಾಣದಲ್ಲಿ ಸ್ಪಂದಿಸಬೇಕು ಎಂದು ವಿಪಕ್ಷ ನಾಯಕರು ಈಗ ಮಾತನಾಡಿದ್ದಾರೆ. ಇದರ ಅರ್ಥ ಕರ್ನಾಟಕ ರಾಜ್ಯ ಸರ್ಕಾರ ಸಂಪೂರ್ಣವಾಗಿ ಸಾಲ ಮಾಡಿಬಿಟ್ಟಿದೆ, ಸಮಸ್ಯೆಗಳೇ ಇಲ್ಲ, ಪ್ರವಾಹದಲ್ಲಿ ಸಿಲುಕಿರುವಂತಹ ಎಲ್ಲಾ ಜನರ ಕಣ್ಣೀರು ಹೊರೆಸಿಬಿಟ್ಟಿದ್ದೇವೆ, ಈಗ ನಾವು ಸ್ನಾನ ಮಾಡಿ ಬೆಚ್ಚಗೆ ಬೆಡ್‌ಶೀಟ್ ಹೊದ್ದುಕೊಂಡು ಮಲಗಬೇಕು ಎನ್ನುವ ಸ್ಥಿತಿಯನ್ನು ನಾನು ಹೇಳುತ್ತಿಲ್ಲ. ಈಗ ತಾನೇ ಇನ್ನು ಪ್ರವಾಹ ಸ್ಥಿತಿ ಮುಗಿದಿರುವುದರಿಂದ ಮನೆ ಕಟ್ಟುವುದಕ್ಕೆ ಪ್ರಾರಂಭ ಮಾಡಬಹುದು. ಆ ಸ್ಥಿತಿಗೆ ನಾವು ಬಂದಿದ್ದೇವೆ.

**(ಈ ಹಂತದಲ್ಲಿ ಮಾನ್ಯ ಸಭಾಪತಿಯವರು ಪೀಠವನ್ನಲಂಕರಿಸಿದರು)**

(ಮುಂದು)

(162)11-10-2019/4-40/bkp-ak

ಶ್ರೀ ಎನ್.ರವಿಕುಮಾರ್(ವಿಧಾನಸಭಾ ಕ್ಷೇತ್ರ) ಮುಂದು. . )

ನಾವು ಈಗ ಕೆಲಸ ಪ್ರಾರಂಭ ಮಾಡಬಹುದು. ಆ ಒಂದು ಸ್ಥಿತಿಗೆ ನಾವು ಬಂದಿದ್ದೇವೆ. ಅದಕ್ಕೆ ಕರ್ನಾಟಕ ರಾಜ್ಯ ಸರ್ಕಾರ ಬದ್ಧವಾಗಿದೆ. ಇದಕ್ಕೆ ವಿರೋಧ ಪಕ್ಷದವರ ಮತ್ತು ಸಮಾಜದ ಸಹಕಾರವೂ ಸಹ ಬೇಕಾಗಿದೆ. ಉದಾಹರಣೆಗೆ ಎಷ್ಟು ಮನೆಗಳು ನಷ್ಟಕ್ಕೆ ಒಳಗಾಗಿವೆ ಎನ್ನುವ ವಿಚಾರಕ್ಕೆ ಸಂಬಂಧಪಟ್ಟಂತೆ 2 ಲಕ್ಷ ಮನೆಗಳಿಗೆ ಹಾನಿಯಾಗಿದೆ, 3 ಲಕ್ಷ ಮನೆಗಳಿಗೆ ಹಾನಿಯಾಗಿದೆ ಎಂದು ಹೇಳಿ ಒಬ್ಬೊಬ್ಬರು ಒಂದೊಂದು ರೀತಿಯಲ್ಲಿ ಹೇಳುತ್ತಾರೆ. ನಿರ್ದಿಷ್ಟವಾಗಿ ಎಷ್ಟು ಹಾನಿಯಾಗಿದೆ ಎಂದು ಹೇಳಿ ಸರ್ಕಾರದ ಅಂಕಿ–ಅಂಶ ಇಲ್ಲಿ ಇದೆ. ಅದರ ಪ್ರಕಾರ ನೀವು ಇದನ್ನು ಒಪ್ಪುತ್ತೀರೋ, ಬಿಡುತ್ತೀರೋ ಅದು ಬೇರೆ ವಿಚಾರ. ಆದರೆ, ಕರ್ನಾಟಕ ರಾಜ್ಯದಲ್ಲಿ ಯಾರ್ಯಾರಿಗೆ ಮನೆ ಇಲ್ಲ, ಅವರೆಲ್ಲರಿಗೂ ಮನೆಯನ್ನು ಕಟ್ಟಿಸಿಕೊಡಬೇಕು. ಪ್ರವಾಹದಿಂದ ಯಾರ್ಯಾರು ಮನೆಯಿಂದ ಹೊರಗಡೆ ಬಂದಿದ್ದಾರೆ, ರಸ್ತೆಯಲ್ಲಿದ್ದಾರೆ, ಫುಟ್‌ಪಾತ್‌ನಲ್ಲಿದ್ದಾರೆ, ಜಮೀನುಗಳಲ್ಲಿ ಇದ್ದಾರೆ, ಶೆಡ್‌ಗಳಲ್ಲಿ ಇದ್ದಾರೆ, ಅವರೆಲ್ಲರಿಗೂ ಮನೆಯನ್ನು ಕಟ್ಟಿಕೊಡಬೇಕು. ಸರ್ಕಾರ ಏನು 5 ಲಕ್ಷ ರೂಪಾಯಿಗಳನ್ನು ಕೊಟ್ಟಿದೆ, ಅದರ ಸಲುವಾಗಿ ನಾನು ಸರ್ಕಾರಕ್ಕೆ ಅಭಿನಂದನೆಯನ್ನು ಹೇಳಲಿಕ್ಕೆ ಬಯಸುತ್ತೇನೆ. ದೇಶದ ಬೇರೆ ಬೇರೆ ರಾಜ್ಯಗಳಿಗೆ ದೂರವಾಣಿ ಮಾಡಿ ಈ ರೀತಿಯ ವಿಚಾರಕ್ಕೆ ಸಂಬಂಧಪಟ್ಟಂತೆ ಯಾವ ಮಟ್ಟದಲ್ಲಿ ಪರಿಹಾರವನ್ನು ನೀಡಲಾಗಿದೆ ಎಂದು ನಾನು ಕೇಳಿ ತಿಳಿದುಕೊಂಡಿದ್ದೇನೆ. ಯಾವುದಾದರೂ ರಾಜ್ಯದಲ್ಲಿ ಇಷ್ಟೊಂದು ದೊಡ್ಡ ಪ್ರಮಾಣದಲ್ಲಿ ಪ್ರವಾಹ ಉಂಟಾಗಿ, ಲಕ್ಷಾಂತರ ಮನೆಗಳು ನಷ್ಟವಾದಂತಹ ಸಂದರ್ಭದಲ್ಲಿ ಎನ್.ಡಿ.ಆರ್.ಎಫ್ ನಾರ್ಮ್ಸ್ ಅನ್ನು ಬಿಟ್ಟು 5 ಲಕ್ಷ ರೂಪಾಯಿಗಳ ಪರಿಹಾರವನ್ನು ಕೊಟ್ಟಿದ್ದಾರೆಯೇ ಎಂದು ನೋಡಿದಾಗ ಯಾವ ಒಂದು ರಾಜ್ಯದಲ್ಲಿಯೂ ಸಹ ಈ ಮಟ್ಟದಲ್ಲಿ ಪರಿಹಾರವನ್ನು ಕೊಟ್ಟಿರುವುದಿಲ್ಲ. ಆದರೆ, ಕರ್ನಾಟಕದಲ್ಲಿ ಕೊಟ್ಟಿದ್ದಾರೆ. ಕರ್ನಾಟಕ ರಾಜ್ಯದ ಕೊಡಗು ಜಿಲ್ಲೆಯಲ್ಲಿ ಈ ರೀತಿಯ ಪ್ರವಾಹ ಉಂಟಾದಂತಹ ಸಂದರ್ಭದಲ್ಲಿ 10 ಲಕ್ಷ ರೂಪಾಯಿಗಳ ಪರಿಹಾರವನ್ನು ಕೊಟ್ಟಂತಹ ಶ್ರೀಮಾನ್ ಹೆಚ್.ಡಿ.ಕುಮಾರಸ್ವಾಮಿಯವರಿಗೆ ಮತ್ತು ವಿರೋಧ ಪಕ್ಷದವರಿಗೆ ಈ ಸಂದರ್ಭದಲ್ಲಿ ಅಭಿನಂದನೆಯನ್ನು ಸಲ್ಲಿಸಲಿಕ್ಕೆ ಬಯಸುತ್ತೇನೆ. ಮಾಡಿರುವಂತಹ ಕೆಲಸಕ್ಕೆ ಅಭಿನಂದನೆಯನ್ನು ಸಲ್ಲಿಸದೇ ನಾವು ಇವತ್ತು ಆಡಳಿತ ಪಕ್ಷದಲ್ಲಿದ್ದೇವೆಂದು ಹೇಳಿ ನಾನು ದ್ರೋಹ ಮಾಡಲಿಕ್ಕೆ ಹೋಗುವುದಿಲ್ಲ. ನಷ್ಟ ಉಂಟಾದಂತಹ 800 ಮನೆಗಳಿಗೆ 10 ಲಕ್ಷ ರೂಪಾಯಿಗಳನ್ನು ಕೊಡಬಹುದು. ಆದರೆ, ಈಗ ಲಕ್ಷಾಂತರ ಮನೆಗಳು ಹಾಳಾಗಿರುವಂತಹ ಸಂದರ್ಭದಲ್ಲಿ ಅವರುಗಳಿಗೆ ಮನೆಗಳನ್ನು ಕಟ್ಟಿಕೊಡುವಂತಹ ಸಂದರ್ಭದಲ್ಲಿ ಅದೇ ಮಟ್ಟದಲ್ಲಿ 10 ಲಕ್ಷ ರೂಪಾಯಿಗಳನ್ನು ಸರ್ಕಾರದ ವತಿಯಿಂದ ಕೊಡಲಿಕ್ಕೆ ಸಾಧ್ಯವಿದೆಯೇ? ಇವತ್ತು ಶ್ರೀ ಯಡಿಯೂರಪ್ಪ ನೇತೃತ್ವದ ಸರ್ಕಾರ ಇರಬಹುದು, ಹಿಂದೆ, ಶ್ರೀ ಹೆಚ್.ಡಿ.ಕುಮಾರಸ್ವಾಮಿಯವರ ನೇತೃತ್ವದ ಸರ್ಕಾರ ಇರಬಹುದು, ಅದಕ್ಕಿಂತ ಹಿಂದೆ ಶ್ರೀ ಸಿದ್ದರಾಮಯ್ಯನವರ ನೇತೃತ್ವದ ಸರ್ಕಾರ ಇರಬಹುದು. ಇಂತಹ ಸಂದರ್ಭದಲ್ಲಿ ಯಾವುದೇ ಸರ್ಕಾರ ಇದ್ದರೂ ಸಹ 10 ಲಕ್ಷ ರೂಪಾಯಿಗಳನ್ನು ಕೊಡಲಿಕ್ಕೆ ಸಾಧ್ಯವಿದೆಯೇ ಎನ್ನುವುದನ್ನು ನಾವು ಮತ್ತು ನೀವು ಎಲ್ಲರೂ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕುಳಿತುಕೊಂಡು ಯೋಚನೆ ಮಾಡಬೇಕಾಗಿದೆ. ಅದನ್ನು ಬಿಟ್ಟು ನಾವು ಕೇವಲ ಭಾಷಣ ಮಾಡಿ, ನಾಳೆ ಅದು ಪೇಪರ್‌ನಲ್ಲಿ ಬಂದ ತಕ್ಷಣ 10 ಲಕ್ಷ ರೂಪಾಯಿಗಳನ್ನು ಕೊಡಲಿಕ್ಕೆ ಸಾಧ್ಯವೇ, ಇದು ವ್ಯವಹಾರಿಕವೇ ಎನ್ನುವುದನ್ನು ನೋಡಬೇಕು. 3 ಲಕ್ಷ ಮನೆಗಳು ಹಾನಿಗೊಳಗಾಗಿದ್ದರೆ 10 ಲಕ್ಷ ರೂಪಾಯಿಗಳನ್ನು ಕೊಡಬೇಕೆಂದರೆ ಒಟ್ಟು ಎಷ್ಟು ಮೊತ್ತವಾಗುತ್ತದೆ, ಕರ್ನಾಟಕದ ಬಜೆಟ್ ಎಷ್ಟು ಎಂದು ಹೇಳಿ ಯೋಚನೆ ಮಾಡಬೇಕಾಗುತ್ತದೆ.

**ಸಭಾಪತಿಯವರು:–** ತಾವು ತಮ್ಮ ಭಾಷಣವನ್ನು ಮುಗಿಸಿ.

**ಶ್ರೀ ಎನ್.ರವಿಕುಮಾರ್(ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ನಾನು ಇನ್ನೂ ವಿಷಯವನ್ನೇ ಪ್ರಾರಂಭ ಮಾಡಿರುವುದಿಲ್ಲ. ನನಗೆ ಮಾತನಾಡಲಿಕ್ಕೆ ಸರಿಯಾಗಿ ಬಿಟ್ಟಿಲ್ಲ.

**ಸಭಾಪತಿಯವರು:–** ಈಗಾಗಲೇ ತಾವು ತಮ್ಮ ಭಾಷಣವನ್ನು ಪ್ರಾರಂಭ ಮಾಡಿ 20 ನಿಮಿಷಗಳಾಗಿದೆ. ಇಲ್ಲಿ ನೋಟ್ ಮಾಡಲಾಗಿದೆ. ನೀವು 4 ಗಂಟೆ 23 ನಿಮಿಷಕ್ಕೆ ತಮ್ಮ ಭಾಷಣವನ್ನು ಪ್ರಾರಂಭ ಮಾಡಿದ್ದೀರಿ. ಈಗ ಎಷ್ಟು ಸಮಯ ಆಗಿದೆ ಎಂದು ನೋಡಿ.

**ಶ್ರೀ ಎನ್.ರವಿಕುಮಾರ್:–** ಮಾನ್ಯ ಸಭಾಪತಿಯವರೇ, ಆಗ ನಾನು ನನ್ನ ಭಾಷಣವನ್ನು ಪ್ರಾರಂಭ ಮಾಡಿರಲಿಲ್ಲ. ನಾನು ಈಗ ಪ್ರಾರಂಭ ಮಾಡಿದ್ದೇನೆ.

**ಸಭಾಪತಿಯವರು:–** ನೀವು ಪ್ರಾರಂಭ ಮಾಡಿ, ಬಿಡಿ. ಬೇರೆಯವರಿಗೆ ಮಾತನಾಡಲಿಕ್ಕೆ ಅವಕಾಶ ಬೇಡವೇ? ಆದ್ದರಿಂದ, ಎಲ್ಲರಿಗೂ ಮಾತನಾಡಲಿಕ್ಕೆ ಅವಕಾಶ ಕೊಡಬೇಕಾಗುತ್ತದೆ. ಆದ್ದರಿಂದ, ತಾವು 5 ನಿಮಿಷಗಳಲ್ಲಿ ತಮ್ಮ ಭಾಷಣವನ್ನು ಮುಗಿಸಿ.

**ಶ್ರೀ ಎನ್.ರವಿಕುಮಾರ್:–** ಮಾನ್ಯ ಸಭಾಪತಿಯವರೇ, ನಾನು 5–00 ಗಂಟೆಗೆ ಮುಗಿಸುತ್ತೇನೆ.

**ಸಭಾಪತಿಯವರು:–** 5–00 ಗಂಟೆಯವರೆಗೆ ಆಗುವುದಿಲ್ಲ. ಜಾಸ್ತಿ ಸಮಯವನ್ನು ಕೊಡಲಿಕ್ಕೆ ಆಗುವುದಿಲ್ಲ.

**ಶ್ರೀ ಎನ್.ರವಿಕುಮಾರ್:–** ಮಾನ್ಯ ಸಭಾಪತಿಯವರೇ, 5–00 ಗಂಟೆಗಿಂತ ಒಂದು ನಿಮಿಷ ಹೆಚ್ಚು ಮಾತನಾಡುವುದಿಲ್ಲ. 5–00 ಗಂಟೆಯೊಳಗೆ ಸರಿಯಾಗಿ ಮುಗಿಸುತ್ತೇನೆ.

ಮೊದಲನೆಯದಾಗಿ, ಹೀಗಾಗಿ, ವ್ಯಾವಹಾರಿಕವಾಗಿ ಇವತ್ತಿನ ಸರ್ಕಾರ ಒಂದು ಮನೆಗೆ 5 ಲಕ್ಷ ರೂಪಾಯಿಗಳನ್ನು ಕೊಟ್ಟಿದೆ. ಈ ವಿಚಾರದಲ್ಲಿ ನನಗೆ ಅನಿಸುವುದು ಏನೆಂದರೆ ಕರ್ನಾಟಕ ರಾಜ್ಯದಲ್ಲಿ it is the highest money ever given by the government. The government has taken a fantastic decision. ಹೀಗಾಗಿ, ನಮ್ಮ ಶ್ರೀ ಯಡಿಯೂರಪ್ಪನವರ ನೇತೃತ್ವದ ಸರ್ಕಾರವನ್ನು ಈ ಸಂದರ್ಭದಲ್ಲಿ ಅಭಿನಂದಿಸುತ್ತೇನೆ. ಇದು ಒಂದು ವಿಚಾರ.

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಎರಡನೆಯದಾಗಿ, 10 ಸಾವಿರ ರೂಪಾಯಿಗಳನ್ನು 100ಕ್ಕೆ 100 ರಷ್ಟು ಅಂದರೆ ಯಾರ್‍ಯಾರು ನಿರಾಶ್ರಿತರು ಇದ್ದಾರೆ, ಆ ಎಲ್ಲಾ ಕುಟುಂಬಗಳಿಗೆ ನೇರವಾಗಿ ತಲುಪಿಸಿದೆ. ಅದಕ್ಕಿಂತ ಮೊದಲು ಯಾವ ಸರ್ಕಾರವೂ ಸಹ ಈ ರೀತಿಯಲ್ಲಿ 10 ಸಾವಿರ ರೂಪಾಯಿಗಳನ್ನು ಕೊಟ್ಟಿರಲಿಲ್ಲ. ಅನೇಕ ಬಾರಿ ಪ್ರವಾಹಗಳು ಬಂದಿತ್ತು. ಆ ಸಂದರ್ಭದಲ್ಲಿ ಈ ಮಟ್ಟದಲ್ಲಿ ತಕ್ಷಣದ ಪರಿಹಾರವನ್ನು ಕೊಟ್ಟಿರಲಿಲ್ಲ.

**ಶ್ರೀ ಎಸ್.ಆರ್.ಪಾಟೀಲ್(ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಚೆನ್ನಾಗಿ ಮಾತನಾಡುತ್ತಿದ್ದಾರೆ. I appreciate his speech. ಅವರಿಗೆ ನಾನು ಅಭಿನಂದಿಸುತ್ತೇನೆ. ಆದರೆ, ಹಿಂದೆ ಈ ರೀತಿಯಲ್ಲಿ ಕೊಟ್ಟಿಲ್ಲವೆಂದು ಹೇಳಿದ್ದು ಸಮಂಜಸವಲ್ಲ.

**ಶ್ರೀ ಎನ್.ರವಿಕುಮಾರ್:-** 10 ಸಾವಿರ ರೂಪಾಯಿಗಳನ್ನು ತಕ್ಷಣದ ಪರಿಹಾರವಾಗಿ ಕೊಟ್ಟಿಲ್ಲವೆಂದು ಹೇಳಿದೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾ ನಾಯಕರು):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಅವರ ಅಭಿಪ್ರಾಯಗಳನ್ನು ಹೇಳುತ್ತಿದ್ದಾರೆ. ವಿರೋಧ ಪಕ್ಷದ ನಾಯಕರು ಮಧ್ಯೆ ಪ್ರವೇಶ ಮಾಡಿ ಏನು ಬೇಕಾದರೂ ಹೇಳಬಹುದು. ಅದಕ್ಕೆ ನಮ್ಮ ವಾದವಿಲ್ಲ. ಆದರೆ, ಮಧ್ಯದಲ್ಲಿ ಅಕ್ಷೇಪ ಮಾಡಿದರೆ ಮತ್ತೆ ಅವರಿಗೆ ಸಮಯ ಕಡಿಮೆಯಾಗುತ್ತದೆ.

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಚೆನ್ನಾಗಿ ಮಾತನಾಡುತ್ತಿದ್ದಾರೆಂದು ಹೇಳಿ, ಅವರ ಫಲವಾಗಿಯೇ ಬ್ಯಾಟಿಂಗ್ ಮಾಡಿದೆ. ಆದರೆ, ಒಂದು ಸಣ್ಣ ಕ್ಲಾರಿಫಿಕೇಷನ್ ಕೇಳಿದೆ ಅಷ್ಟೆ. ಅವರು ಮಾತನಾಡಲಿ. ನಾವೇನು ಮಧ್ಯೆ ಪ್ರವೇಶ ಮಾಡುವುದಿಲ್ಲ. ನೀವು ಈ ಭಾಗದಲ್ಲಿ ಇದ್ದಂತಹ ಸಂದರ್ಭದಲ್ಲಿ ಸಾಕಷ್ಟು ಬಾರಿ ಮಧ್ಯೆ ಪ್ರವೇಶ ಮಾಡಿದ್ದೀರಿ. ಆ ರೀತಿಯಲ್ಲಿ ನಾವು ಆಗುವುದಿಲ್ಲ.

**ಶ್ರೀ ಎನ್.ರವಿಕುಮಾರ್:-** ಮಾನ್ಯ ಸಭಾಪತಿಯವರೇ, ನಾನು ಮತ್ತೊಂದು ಅಂಶವನ್ನು ಹೇಳಲಿಕ್ಕೆ ಬಯಸುತ್ತೇನೆ. ಯಾರೂ ಕೂಡ ಮನೆಯಿಲ್ಲದೆ ರಸ್ತೆಗೆ ಬರಬಾರದು ಎಂದು ಹೇಳಿ 10 ತಿಂಗಳವರೆಗೆ 5 ಸಾವಿರ ರೂಪಾಯಿಗಳನ್ನು ಮನೆ ಬಾಡಿಗೆಗಾಗಿ ಪ್ರತಿ ತಿಂಗಳು ಕೊಡುವುದು. 10 ತಿಂಗಳಿಗೆ ಅದು 50 ಸಾವಿರ ರೂಪಾಯಿಗಳಾಗುತ್ತದೆ. ಮುಂಗಡ ಹಣವನ್ನು ಯಾರು ಕೊಡುತ್ತಾರೆನ್ನುವ ವಿಚಾರ ಬಂದಾಗ 5 ತಿಂಗಳ ಬಾಡಿಗೆ ಹಣವನ್ನು ಮುಂಚಿತವಾಗಿಯೇ ಕೊಟ್ಟು, ಅದರಲ್ಲಿ ಮುಂಗಡ ಹಣವನ್ನು ಕೊಟ್ಟುಕೊಂಡು, ಪ್ರತಿ ತಿಂಗಳು ಮನೆ ಬಾಡಿಗೆಯನ್ನು ಕಟ್ಟಿಕೊಳ್ಳುತ್ತಾರೆಂದು ಹೇಳಿ, 25 ಸಾವಿರ ರೂಪಾಯಿಗಳನ್ನು ಒಟ್ಟಿಗೆ ಬಿಡುಗಡೆ ಮಾಡಲು ಸರ್ಕಾರ ನಿರ್ಧಾರ ಮಾಡಿದೆ. ಹೀಗಾಗಿ, ಮನೆ ಕಟ್ಟುವಂತಹ ವಿಚಾರದಲ್ಲಿ ಬಾಡಿಗೆ ಹಣದ ವಿಷಯ ಬರುವುದೇ ಇಲ್ಲ. ಅದು ಪ್ರತ್ಯೇಕವಾದುದು. ಹೀಗಾಗಿ ಕರ್ನಾಟಕ ಸರ್ಕಾರ ಒಂದು ಬಹಳ ದೊಡ್ಡ ನಿರ್ಧಾರವನ್ನು ಮಾಡಿದೆ. ಮತ್ತೆ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಜನರು ಖುಷಿಯಿಂದ ಇದ್ದಾರೆ. ಆದರೆ, ಯಾರು ಖುಷಿಯಿಂದ ಇಲ್ಲವೆಂದು ಹೇಳಿದರೆ ನಮ್ಮ ವಿರೋಧ ಪಕ್ಷದವರು ಮಾತ್ರ ಖುಷಿಯಿಂದ ಇಲ್ಲ. ಪ್ರವಾಹಕ್ಕೆ ಸಿಲುಕಿರುವ ಜನರು ಮೊದಲು ಎಂದೂ ಸಹ ಇಷ್ಟೊಂದು ಮಟ್ಟದಲ್ಲಿ ಪರಿಹಾರವನ್ನು ಕೊಟ್ಟಿರಲಿಲ್ಲವೆಂದು ಖುಷಿಯಿಂದ ಇದ್ದಾರೆ.

(ಗೊಂದಲ)

**ಶ್ರೀ ಎಂ. ನಾರಾಯಣಸ್ವಾಮಿ(ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಶ್ರೀ ಎನ್.ರವಿಕುಮಾರ್‌ರವರು ಈ ರೀತಿ ಮಾತನಾಡುವುದು ಸರಿ ಕಾಣುವುದಿಲ್ಲ. ಅವರು ವಾಸ್ತವಿಕತೆಯಿಂದ ಮಾತನಾಡಬೇಕು.

(ಗೊಂದಲ)

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ಮಾನ್ಯ ಶ್ರೀ ರವಿಕುಮಾರ್ ರವರು ಮಾತನಾಡಲಿಕ್ಕೆ ಅವಕಾಶ ಮಾಡಿಕೊಡಬೇಕು.

**ಶ್ರೀ ಎಂ. ನಾರಾಯಣಸ್ವಾಮಿ:–** ಮಾನ್ಯ ಸದಸ್ಯರು ಮಾತನಾಡುವಾಗ ಕಾಳಜಿಯಿಂದ ಮಾತನಾಡಬೇಕು.

**ಶ್ರೀ ಆರ್.ಧರ್ಮಸೇನ(ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಯಾವುದೇ ವಿಚಾರ ಬೇಡ. ಬೆಳಗಾವಿಯಲ್ಲಿ ಅಧಿವೇಶನ ಮಾಡಲಿಕ್ಕೆ ಹೇಳಿ. ಆಗ ವಾಸ್ತಾವಾಂಶವನ್ನು ತೋರಿಸುತ್ತಾರೆ.

(ಗೊಂದಲ)

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಸಂತ್ರಸ್ತರಿಗೆ ಖುಷಿಯಾಗಬೇಕೇ ಹೊರತು, ನಿಮಗೆ ಖುಷಿಯಾಗುವ ರೀತಿಯಲ್ಲಿ ಇಲ್ಲಿ ಮಾತನಾಡಲಿಕ್ಕೆ ಆಗುವುದಿಲ್ಲ.

(ಗೊಂದಲ)

**ಶ್ರೀ ಎನ್.ರವಿಕುಮಾರ್:–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಶ್ರೀ ಪ್ರಕಾಶ್ ಕೆ. ರಾಥೋಡ್ ರವರನ್ನು ಹೊರತುಪಡಿಸಿ, ಅಲ್ಲಿ ಉಳಿದವರೆಲ್ಲರೂ ಖುಷಿಯಾಗಿದ್ದಾರೆ. ಅಲ್ಲಿ ಆಸ್ಪತ್ರೆಗಳಂತಹದ್ದು ಇರಬಹುದು, ಮತ್ತೆ ತಕ್ಷಣ ಆರೋಗ್ಯ ಸರಿಯಿಲ್ಲದಿದ್ದಂತಹ ಸಂದರ್ಭದಲ್ಲಿ ಅವರಿಗೆ ಆಸ್ಪತ್ರೆಯ ವೆಚ್ಚವನ್ನು ಭರಿಸುವಂತಹದ್ದು ಇರಬಹುದು, ಮತ್ತೊಂದು ಇರಬಹುದು, ಯಾವುದೇ ಒಬ್ಬ ನಾಗರೀಕನಿಗೂ ಕೂಡ ಯಾವುದೇ ರೀತಿಯಲ್ಲಿ ಕಷ್ಟವನ್ನು ಕೊಡದೇ ಇರುವ ರೀತಿಯಲ್ಲಿ ಎಲ್ಲರಿಗೂ ಅನುಕೂಲತೆಗಳನ್ನು ಕೊಡುವಂತಹ ಕೆಲಸಗಳನ್ನು ಸರ್ಕಾರ ಮಾಡಿದೆ.

ಇನ್ನು ಶಾಲಾ–ಕಾಲೇಜುಗಳಿಗೆ ಸಂಬಂಧಪಟ್ಟಂತೆ ಅಲ್ಲಿನ ಮಕ್ಕಳು ಶಾಲೆಗೆ ಹೋಗುತ್ತಿದ್ದಾರೆಯೇ, ಅದರಲ್ಲಿ ಒಬ್ಬ ಪ್ರಧಾನ ಮಂತ್ರಿಯಾಗುವವನು ಇದ್ದ, ಒಬ್ಬ ಐ.ಎ.ಎಸ್. ಅಧಿಕಾರಿಯಾಗುವವನು ಇದ್ದ, ಕೆ.ಎ.ಎಸ್. ಅಧಿಕಾರಿ ಆಗುವವನಿದ್ದ, ಇಂಜಿನೀಯರ್ ಆಗುವವನು ಇದ್ದ ಎಂದು ಹೇಳಿದರು. ಹೌದು, ಅವನು ಆ

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"**

ರೀತಿಯಲ್ಲಿ ಆಗಬೇಕು. ಅದೇ ವಿಚಾರವಾಗಿ ಸರ್ಕಾರ ಕಾಳಜಿ ವಹಿಸಿರುವಂತಹದ್ದಾಗಿದೆ. ಅದಕ್ಕೆ ಸರ್ಕಾರ ಏನು ಮಾಡಿದೆ ಎಂದರೆ, ಯಾರು ವಿದ್ಯಾರ್ಥಿಗಳು ಪ್ರವಾಹದಡಿಯಲ್ಲಿ ಸಿಲುಕಿದ್ದಾರೆ, ಆ ವಿದ್ಯಾರ್ಥಿಗಳಿಗೆ ಯಾವುದೇ ಶಾಲೆಗಳಲ್ಲಿ ಸರ್ಟಿಫಿಕೇಟ್‌ಗಳನ್ನು ಕೇಳಬಾರದು. ಆ ವಿದ್ಯಾರ್ಥಿಗಳನ್ನು ಹಾಗೆಯೇ ದಾಖಲು ಮಾಡಿಕೊಳ್ಳಬೇಕೆಂದು ಹೇಳಿ ಸರ್ಕಾರ ನಿರ್ಧಾರ ಮಾಡಿದೆ. ಯಾವುದೇ ಹೆಡ್‌ಮಾಸ್ಟರ್, ಪ್ರಾಂಶುಪಾಲರು ನನಗೆ ಸರ್ಟಿಫಿಕೇಟ್ ಕೇಳಿದ್ದಾರೆ ಎಂದು ಹೇಳುವಂತಹ ಒಬ್ಬ ವಿದ್ಯಾರ್ಥಿಯ ಹೆಸರನ್ನು ಹೇಳಿ ನೋಡೋಣ. ನಾವು ಅದಕ್ಕೆ ಜವಾಬ್ದಾರಿಯನ್ನು ತೆಗೆದುಕೊಳ್ಳುತ್ತೇವೆ. ಈ ರೀತಿಯಲ್ಲಿ ಪ್ರತಿಯೊಬ್ಬ ವಿದ್ಯಾರ್ಥಿಯ ಜವಾಬ್ದಾರಿಯನ್ನು ಸರ್ಕಾರ ತೆಗೆದುಕೊಂಡಿದೆ. ಹಾಗಾಗಿ, ಸರ್ಕಾರಕ್ಕೆ, ಶಿಕ್ಷಣ ಸಚಿವರಿಗೆ ಮತ್ತು ಶಿಕ್ಷಣ ಇಲಾಖೆಗೆ ನಾನು ಈ ಸಂದರ್ಭದಲ್ಲಿ ಅಭಿನಂದನೆಯನ್ನು ಸಲ್ಲಿಸಲಿಕ್ಕೆ ಬಯಸುತ್ತೇನೆ.

**ಸಭಾಪತಿಯವರು:–** ಶ್ರೀಮತಿ ಜಯಮಾಲ ರವರು ತಮ್ಮ ಭಾಷಣವನ್ನು ಪ್ರಾರಂಭ ಮಾಡಬೇಕು.

**ಶ್ರೀ ಎನ್.ರವಿಕುಮಾರ್:–** ಮಾನ್ಯ ಸಭಾಪತಿಯವರೇ, ನಾನು 5–00 ಗಂಟೆಗೆ ನನ್ನ ಭಾಷಣವನ್ನು ಮುಗಿಸುತ್ತೇನೆ.

**ಸಭಾಪತಿಯವರು:–** ನೀವು 5–00 ಗಂಟೆಗೆ ಮುಗಿಸಿದರೆ ಉಳಿದ ಸದಸ್ಯರು ಹೇಗೆ ಮಾತನಾಡಬೇಕೆಂದು ಹೇಳಿ.

(ಗೊಂದಲ)

( ಮುಂದು. . )

**(162) 11.10.2019 04.50 ಎಸ್‌ವಿ–ಆರ್‌ಎನ್**

**(ಸಭಾಪತಿಯವರ ಉಪಸ್ಥಿತಿ)**

**ಸಭಾಪತಿಯವರು:–** ಮಾನ್ಯ ರವಿಕುಮಾರ್ ಅವರೆ, ನೀವು 04 ಗಂಟೆ 23 ನಿಮಿಷಕ್ಕೆ ಮಾತನಾಡಲು ಪ್ರಾರಂಭ ಮಾಡಿದ್ದೀರಿ.

**ಶ್ರೀ ಎನ್.ರವಿಕುಮಾರ್ (ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ನಾನು 04 ಗಂಟೆ 23 ನಿಮಿಷಕ್ಕೆ ಮಾತನಾಡಲು ಪ್ರಾರಂಭಿಸಿರಲಿಲ್ಲ. ಸಭಿಕರೆಲ್ಲರೂ ಇಲ್ಲಿಯೇ ಇದ್ದಾರೆ. ಅವರನ್ನೇ ಕೇಳಿರಿ. ವಿಪಕ್ಷ ನಾಯಕರಾದ ಮಾನ್ಯ ಎಸ್.ಆರ್.ಪಾಟೀಲರು ಇಲ್ಲಿಯೇ ಇದ್ದಾರೆ.

**(ಗೊಂದಲ)**

**ಶ್ರೀ ಐವನ್ ಡಿ'ಸೋಜ (ನಾಮನಿರ್ದೇಶಿತರು):–** ಮಾನ್ಯ ಸಭಾಪತಿಯವರೇ, ನಾವು ಸಭಿಕರಲ್ಲ. ಈ ಸದನದ ಮಾನ್ಯ ಸದಸ್ಯರು.

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಶ್ರೀ ಎಸ್.ಆರ್.ಪಾಟೀಲ್ (ವಿರೋಧಪಕ್ಷದ ನಾಯಕರು):–** ಮಾನ್ಯ ಸಭಾಪತಿಯವರೇ, ಮಾನ್ಯ ರವಿಕುಮಾರ್ ಅವರು ನಮ್ಮನ್ನೆಲ್ಲಾ ಸಭಿಕರೆಂದು ಸಂಬೋಧಿಸಿದ್ದಾರೆ. ಮಾನ್ಯ ಸದಸ್ಯರೆಂದು ಹೇಳಲಿ.

**ಶ್ರೀ ಎನ್.ರವಿಕುಮಾರ್:–** ಮಾನ್ಯ ಸಭಾಪತಿಯವರೇ, ನಾನು ಪ್ರಾರಂಭ ಮಾಡಿ ಕೇವಲ 10 ನಿಮಿಷಗಳಾಗಿವೆ.

**ಡಾ:ತೇಜಸ್ವಿನಿ ಗೌಡ (ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಮಾನ್ಯ ರವಿಕುಮಾರ್ ಅವರ ಹೆಸರನ್ನು ಕರೆಯಲಾಯಿತಾದರೂ ಅವರಿಗೆ ಮಾತನಾಡಲು ಬಿಡಲಿಲ್ಲ. ಸರಿಯಾಗಿ 20 ನಿಮಿಷಗಳು ಅವರು ಮಾತನಾಡಿಲ್ಲ.

**ಡಾ: ಜಯಮಾಲ (ನಾಮನಿರ್ದೇಶಿತರು):–** ಮಾನ್ಯ ಸಭಾಪತಿಯವರೇ, ಮಾನ್ಯ ರವಿಕುಮಾರ್ ಅವರು ಅರ್ಧಗಂಟೆಯಿಂದ ಹೀಗೆಯೇ ಕಾಲಹರಣ ಮಾಡುತ್ತಿದ್ದಾರೆ. ದಯವಿಟ್ಟು ಬೇರೆಯವರಿಗೂ ಮಾತನಾಡಲು ಅವಕಾಶವನ್ನು ಮಾಡಿಕೊಡಿ.

**ಶ್ರೀ ಎನ್.ರವಿಕುಮಾರ್:–** ಮಾನ್ಯ ಸಭಾಪತಿಯವರೇ, ಭೂಕುಸಿತದ ಬಗ್ಗೆ ವಿಷಯ ಬಂದಿತು. ಭೂಕುಸಿತ ಉಂಟಾದರೆ ಅದಕ್ಕೆ ಮಾನ್ಯ ಯಡಿಯೂರಪ್ಪನವರು ಜವಾಬ್ದಾರಿಯೇ ಅಥವಾ ಇನ್ಯಾರಾದರೂ ಸಚಿವರು ಜವಾಬ್ದಾರಿಯೇ? ಪ್ರಕೃತಿಯ ವಿಕೋಪಕ್ಕೆ ಇಲ್ಲಿ ಕುಳಿತು ಕೊಂಡಿರುವವರು ಯಾರೂ ಜವಾಬ್ದಾರಿಯಲ್ಲ. ಆ ದೇವರು ಮಾತ್ರ ಇದಕ್ಕೆ ಹೊಣೆಗಾರ.

**ಶ್ರೀ ಎಸ್.ಆರ್.ಪಾಟೀಲ್:–** ಮಾನ್ಯ ಸಭಾಪತಿಯವರೇ, ಹಾಗಾದರೆ ದೇವರು ಹೊಣೆಗಾರ, ದೇವರೇ ಸರಿಮಾಡಬೇಕು.

**(ಗೊಂದಲ)**

**ಶ್ರೀ ಎನ್.ರವಿಕುಮಾರ್:–** ಮಾನ್ಯ ಸಭಾಪತಿಯವರೇ, ಸರ್ಕಾರ ಭೂಕುಸಿತ ಉಂಟಾದ ಜಾಗದ ಜವಾಬ್ದಾರಿಯನ್ನು ತೆಗೆದುಕೊಂಡಿದೆ. ಭೂಕುಸಿತ ಉಂಟಾದ ಕಡೆಯಲ್ಲಿ ಬದಲಿ ಜಮೀನನ್ನು ಕೊಟ್ಟಿರತಕ್ಕಂತಹ ಮೊದಲನೆಯ ಸರ್ಕಾರ ಮಾನ್ಯ ಯಡಿಯೂರಪ್ಪನವರ ಸರ್ಕಾರ ಎಂದು ಈ ಸಂದರ್ಭದಲ್ಲಿ ಹೇಳಲಿಕ್ಕೆ ಬಯಸುತ್ತೇನೆ.

ಇನ್ನು ಮಾನ್ಯ ವಿರೋಧ ಪಕ್ಷದ ನಾಯಕರು ಮತ್ತು ಕಾಂಗ್ರೆಸ್‌ನ ಇತರ ನಾಯಕರಿಗೆ ನಾನು ಅಭಿನಂದನೆಗಳನ್ನು ಸಲ್ಲಿಸಬಯಸುತ್ತೇನೆ. ಅವರು ಬಹಳ ಒಳ್ಳೆಯ ವರದಿಯನ್ನು ತಂದಿದ್ದಾರೆ. ಅದೇನೆಂದರೆ ಕರ್ನಾಟಕ ರಾಜ್ಯದಲ್ಲಿ ಒಟ್ಟು ಬಿತ್ತನೆಯಾಗಿರತಕ್ಕಂತಹ ಪ್ರದೇಶ ಎಷ್ಟು ಎಕರೆಗಳಲ್ಲಿದೆ? ಕರ್ನಾಟಕ ರಾಜ್ಯದಲ್ಲಿ ಒಟ್ಟು agricultural land ಎಷ್ಟಿದೆ? ಬಿತ್ತನೆ ಮಾಡಿ ಬೆಳೆಯುವಂತಹ ಪ್ರದೇಶ ಎಷ್ಟಿದೆ? ನನಗೆ ಸಿಕ್ಕಿರುವ ಮಾಹಿತಿಯ ಪ್ರಕಾರ ಒಂದು ಲಕ್ಷದ ಇಪ್ಪತ್ಮೂರು...

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**(ಗೊಂದಲ)**

**ಶ್ರೀ ಐವನ್ ಡಿ'ಸೋಜ:–** ಮಾನ್ಯ ಸಭಾಪತಿಯವರೇ, ಅವರು ಹೇಳುತ್ತಿರುವ ಮಾಹಿತಿ ಸರಿಯಿಲ್ಲ.

**(ಗೊಂದಲ)**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾ ನಾಯಕರು):–** ಮಾನ್ಯ ಸಭಾಪತಿಯವರೇ, ಅವರೇನು ಹೇಳುತ್ತಾರೆಯೋ ಕೇಳೋಣ.

**(ಗೊಂದಲ)**

**ಶ್ರೀ ಆರ್.ಧರ್ಮಸೇನ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ನಾವು ವರದಿಯನ್ನು ಕೊಟ್ಟಿರುವುದು ಸರ್ಕಾರಕ್ಕೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ವರದಿಯನ್ನು ಕೊಟ್ಟಿರುವುದು ಸರ್ಕಾರಕ್ಕೆ ಎಂದ ಮೇಲೆ ಅದು ನಮಗೆ ಅಲ್ಲವೆ? ಅದರ ಬಗ್ಗೆ ನಾವು ಮಾತನಾಡಬೇಕಲ್ಲವೆ?

**ಶ್ರೀ ಎನ್.ರವಿಕುಮಾರ್:–** ಮಾನ್ಯ ಸಭಾಪತಿಯವರೇ, ನಾನು ಹೇಳುತ್ತೇನೆ. ಒಟ್ಟು ಬಿತ್ತನೆಯಾಗತಕ್ಕಂತಹ ಪ್ರದೇಶ ಎಷ್ಟೆಂದರೆ 119.9 ಲಕ್ಷ ಹೆಕ್ಟೇರ್. ಒಟ್ಟು ಕರ್ನಾಟಕ ರಾಜ್ಯದಲ್ಲಿ ಬಿತ್ತನೆಯಾಗಿರತಕ್ಕಂತಹ ಪ್ರದೇಶ. ಅದರಲ್ಲಿ ಉತ್ತರ ಕರ್ನಾಟಕ ಭಾಗಕ್ಕೆ ಶೇ.50 ಎಂದು ಇಟ್ಟುಕೊಳ್ಳೋಣ.

**ಶ್ರೀ ಎನ್.ಎಸ್.ಬೋಸ್‌ರಾಜು (ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, it is not correct.

**ಶ್ರೀ ಎನ್.ರವಿಕುಮಾರ್:–** ಮಾನ್ಯ ಸಭಾಪತಿಯವರೇ, ಆದರೆ ವರದಿಯಲ್ಲಿ ಏನು ಹೇಳಿದ್ದಾರೆಂದರೆ 30 ಲಕ್ಷ ಎಕರೆ ಭೂಮಿಯಲ್ಲಿ ಬೆಳೆ ಹಾನಿಯಾಗಿದೆ.

**(ಈ ಹಂತದಲ್ಲಿ ವಿರೋಧಪಕ್ಷದ ಸದಸ್ಯರು ಒಟ್ಟಾಗಿ 'ಹೌದು' ಎಂದು ಕೂಗಿದರು.)**

**(ಗೊಂದಲ)**

**ಶ್ರೀ ಎನ್.ರವಿಕುಮಾರ್:–** ಮಾನ್ಯ ಸಭಾಪತಿಯವರೇ, ಇದು ಅತ್ಯಂತ ಬೋಗಸ್.

**ಶ್ರೀ ಎಸ್.ಆರ್.ಪಾಟೀಲ್:–** ಮಾನ್ಯ ಸಭಾಪತಿಯವರೇ, 22,20,000 ಎಕರೆ ಹಾನಿಯಾಗಿದೆ ಎಂದು ಹೇಳಿ, ಸರ್ಕಾರವೇ ಅಂಕಿ ಸಂಖ್ಯೆಯನ್ನು ಕೊಟ್ಟಿದೆ.

**(ಗೊಂದಲ)**

**ಶ್ರೀ ಎನ್.ರವಿಕುಮಾರ್:–** ಮಾನ್ಯ ಸಭಾಪತಿಯವರೇ, ಇದು ಅತ್ಯಂತ ಸುಳ್ಳು ವರದಿಯಾಗಿದೆ.

**(ಗೊಂದಲ)**

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಶ್ರೀ ಎಸ್.ಆರ್.ಪಾಟೀಲ್:–** ಮಾನ್ಯ ಸಭಾಪತಿಯವರೇ, they are the greatest liars. 22,20,000 ಎಕರೆ ಪ್ರದೇಶದಲ್ಲಿ ಬೆಳೆದಂತಹ ಪೀಕು ನಾಶವಾಗಿದೆ ಎಂದು ಸರ್ಕಾರದ ದಾಖಲೆಯಲ್ಲಿದೆ. ನಾವು 30 ಲಕ್ಷ ಎಂದು ಹೇಳಿದ್ದೇವೆ. ದಾಖಲೆಯಲ್ಲಿ ತಪ್ಪಾಗಬಾರದು. We must set right the records.

**(ಗೊಂದಲ)**

**ಸಭಾಪತಿಯವರು:–** ಮುಂದೆ ಡಾ.ಜಯಮಾಲ ಅವರನ್ನು ಮಾತನಾಡಲು ಕರೆದಿದ್ದೇನೆ.

**(ಗೊಂದಲ)**

**ಶ್ರೀ ಎನ್.ರವಿಕುಮಾರ್:–** ಮಾನ್ಯ ಸಭಾಪತಿಯವರೇ, ಇದೊಂದು ಸುಳ್ಳಿನ ಕಂತೆ. ನನಗೆ ಮಾತನಾಡಲು ಇನ್ನೊಂದು ನಿಮಿಷ ಅವಕಾಶ ಕೊಡಿ.

**ಡಾ:ಜಯಮಾಲ:–** ಮಾನ್ಯ ಸಭಾಪತಿಯವರೇ, ಮಾನ್ಯ ರವಿಕುಮಾರ್ ಅವರು ಇವತ್ತೆಲ್ಲಾ ಮಾತನಾಡುತ್ತಾರೆ. ದಯಮಾಡಿ ಅವರಿಗೆ ಕುಳಿತುಕೊಳ್ಳಲು ಹೇಳಿ, ನಮಗೆ ಮಾತನಾಡಲು ಅವಕಾಶ ಕೊಡಿ.

**ಸಭಾಪತಿಯವರು:–** ಮಾನ್ಯ ರವಿಕುಮಾರ್ ಅವರೇ, ನಾನು ಡಾ:ಜಯಮಾಲ ಅವರನ್ನು ಕರೆದಿದ್ದೇನೆ.

**ಶ್ರೀ ಎಂ.ನಾರಾಯಣಸ್ವಾಮಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಅವರು ಹೇಳುವುದು ಸರಿಯಿದ್ದು, ಅವರಿಗೆ ತಾಕತ್ತಿದ್ದರೆ ಈ ವಿಷಯದಲ್ಲಿ ಒಂದು ಸದನ ಸಮಿತಿಯನ್ನು ರಚನೆ ಮಾಡಲಿ.

**(ಗೊಂದಲ)**

**ಡಾ:ಜಯಮಾಲ:–** ಮಾನ್ಯ ಸಭಾಪತಿಯವರೇ, ಈ ರೀತಿಯಾದಂತಹ ಒಂದು ಗಂಭೀರ ವಿಷಯದ ಬಗ್ಗೆ ಹೀಗೆ ಚರ್ಚೆ ನಡೆಯುತ್ತದೆಯೆಂದು ನಾನು ನನ್ನ ಕನಸು ಮನಸಿನಲ್ಲಿಯೂ ಎಣಿಸಿರಲಿಲ್ಲ.

**(ಗೊಂದಲ)**

**(ಈ ಹಂತದಲ್ಲಿ ಆಡಳಿತ ಪಕ್ಷದ ಹಾಗೂ ವಿರೋಧ ಪಕ್ಷದ ಹಲವು ಮಾನ್ಯ ಸದಸ್ಯರು ಎದ್ದುನಿಂತು ಒಟ್ಟಾಗಿ ಮಾತನಾಡತೊಡಗಿದರು.)**

**ಸಭಾಪತಿಯವರು:–** ಮಾನ್ಯ ಜಯಮಾಲ ಅವರು ಮಾತನಾಡುವುದನ್ನು ಹೊರತು ಪಡಿಸಿ ಬೇರೆ ಯಾರು ಮಾತನಾಡಿದರೂ ಅದು ದಾಖಲೆಗೆ ಹೋಗುವುದಿಲ್ಲ.

**(ಗೊಂದಲ)**

**(...ಮುಂದು)**

(164) 110.10.2019 KG.RN 5.00

(ಸಭಾಪತಿಯವರ ಉಪಸ್ಥಿತಿ)

**ಡಾ॥ ಜಯಮಾಲ (ನಾಮನಿರ್ದೇಶಿತರು):–** ಮಾನ್ಯ ಸಭಾಪತಿಯವರೇ, ಬಹಳ ದುಃಖದ ವಿಷಯವೆಂದರೆ, ಈ ವಿಷಯವಾಗಿ ರಾಜಕಾರಣ ಮಾಡಬೇಡಿ ಎಂದು ಹೇಳಿದರೂ ಸಹ, ರಾಜಕಾರಣ

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಮಾಡುವುದನ್ನು ನೋಡಿದಾಗ, ನಿಜವಾಗಿಯೂ ಬಹಳ ಬೇಸರವಾಗುತ್ತದೆ. ಎರಡು ತಿಂಗಳ ಹಿಂದೆ ಆದಂತಹ ಪ್ರವಾಹವನ್ನು 'ದುರ್ಘಟನೆ' ಮಾತ್ರವಲ್ಲ, ಅದೊಂದು 'ಜಲಪ್ರಳಯ' ಎಂದು ಹೇಳಬಹುದು. ನಾವು ಅಂತಹ ಪ್ರವಾಹವನ್ನು ನೋಡಿಲ್ಲ, ಅದನ್ನು ಕೇಳಿಯೂ ಇಲ್ಲ. ನಮ್ಮ ಹಿರಿಯರನ್ನು ಕೇಳಿದರೂ ಸಹ, ಇಂತಹ ಒಂದು ಮಳೆಯಾಗಲಿ ಅಥವಾ ನಮ್ಮ ರಾಜ್ಯದಲ್ಲಿ ಹರಿಯುವಂತಹ ಹೇಮವತಿ, ಕಬನಿಯಿಂದ ಹಿಡಿದು ಈ ಕಡೆಯಿಂದ ಉತ್ತರ, ದಕ್ಷಿಣ, ಪೂರ್ವ ಮತ್ತು ಪಶ್ಚಿಮದ ಕಡೆಯ ಎಲ್ಲ ನದಿಗಳು ಒಟ್ಟಿಗೆ ಸೇರಿ ಅವುಗಳ ಒಳಹರಿವು ಜಾಸ್ತಿಯಾಗಿ ಇವತ್ತಿನ ದಿವಸ ನಮ್ಮ ರಾಜ್ಯದಲ್ಲಿ ಜಲಪ್ರಳಯವನ್ನು ನೋಡಿದ್ದೇವೆ. ಇಂತಹ ಜಲಪ್ರಳಯಕ್ಕಿಂತಲೂ ಹೆಚ್ಚಿನ ಪ್ರಳಯವನ್ನು ನಾನು ಇಲ್ಲಿ ನೋಡುತ್ತಿದ್ದೇನೆ. ಇದನ್ನು ಸರ್ಕಾರದವರು ಬಹಳ ಲಘುವಾಗಿ ತೆಗೆದುಕೊಳ್ಳುತ್ತಿದ್ದಾರೆ. ಇದನ್ನು ಸರ್ಕಾರದವರು ಬಹಳ ಲಘುವಾಗಿ ತೆಗೆದುಕೊಳ್ಳಬಾರದು. ಈ ವಿಷಯದ ಬಗ್ಗೆ ನಗಬೇಡಿ. ಇದರ ಬಗ್ಗೆ counter ಮಾಡಬೇಡಿ. ಆ ರೀತಿ ಮಾಡಿದರೆ ಅದು ನಾಚಿಕೆಗೇಡಿನ ಸಂಗತಿಯಾಗುತ್ತದೆ. ನಾವು ಒಂದು ದಿವಸ ಈ ಭಾಗಕ್ಕೆ ಹೋದರೆ, ನಾವು ಸಹ ಆ ಸ್ಥಿತಿಯನ್ನು ಎದುರಿಸುವುದು ಹೇಗೆ ಎಂಬುದನ್ನು ಒಂದು ಕ್ಷಣ ಯೋಚನೆ ಮಾಡಬೇಕಾಗುತ್ತದೆ. ನಮ್ಮ ಬೆನ್ನು ನಮಗೆ ಕಾಣುವುದಿಲ್ಲ. 30 ಜಿಲ್ಲೆಗಳಲ್ಲಿ 22 ಜಿಲ್ಲೆಗಳು ಕವರ್ ಆಗಿವೆ. 103 ತಾಲ್ಲೂಕ್‌ಗಳು ಕವರ್ ಆಗಿವೆ. ಅಷ್ಟೊಂದು ಜನ ಅಲ್ಲಿ ಪರದಾಡುತ್ತಿದ್ದಾರೆ. ಇವತ್ತಿಗೂ ಸಹ ಅವರು ಪರದಾಡುತ್ತಲೇ ಇದ್ದಾರೆ. ಈ ತಪ್ಪನ್ನು ಸರ್ಕಾರ ಮಾಡಿದೆ ಎಂದು ನಾವು ಯಾರು ಸಹ ಯಾವತ್ತು ಹೇಳಿಲ್ಲ.

ಮಾನ್ಯ ಸಭಾಪತಿಯವರೇ, ಈ ಜಲಪ್ರಳಯ ಬಂದಂತಹ ಸಂದರ್ಭದಲ್ಲಿ ಮಾನ್ಯ ಮುಖ್ಯ ಮಂತ್ರಿಯವರು ಒಬ್ಬರು ಮಾತ್ರ ಏಕಾಂಗಿಯಾಗಿ ಅಲ್ಲಿ ಓಡಾಡಿದ್ದಾರೆ. ಉಳಿದವರು 15 ದಿವಸ ಬಿಟ್ಟು ಸಚಿವರಾಗಿದ್ದಾರೆ. ಆ ಭಾಗಕ್ಕೆ ಎಷ್ಟು ಜನ ಹೋಗಿದ್ದಾರೆ ಎನ್ನುವುದನ್ನು ಸಹ ನಾವು ಅಲೋಚನೆ ಮಾಡಬೇಕಾಗುತ್ತದೆ. ಆಯಿತು. ಇಲ್ಲಿ ಅವರದ್ದು ತಪ್ಪು ಇಲ್ಲ. ಇಲ್ಲಿ ತಪ್ಪಿನ ಪ್ರಶ್ನೆ ಅಲ್ಲ. ಇಲ್ಲಿ ಯಾರ ಮೇಲೆ ಯಾರೂ ಸಹ ಗೂಬೆ ಕೂರಿಸುವಂತಹ ಕೆಲಸ ಮಾಡುತ್ತಿಲ್ಲ. ಇಲ್ಲಿ ಪ್ರಶ್ನೆ ಬಂದಿರುವಂಥದ್ದು ಸ್ಪಂದನೆ ಯಾವ ರೀತಿ ಇತ್ತು ಎಂಬುದು ಒಂದೊಂದನ್ನು ಕೌಂಟರ್ ಮಾಡಿ ಒಬ್ಬಬ್ಬರೂ ಒಂದು ಲಕ್ಷ ಕೋಟಿ ರೂಪಾಯಿಗಳನ್ನು ಹೇಗೆ ಖರ್ಚು ಮಾಡುತ್ತೀರಿ ಎಂದು ಕೇಳುತ್ತಾರೆ. ನಾವು ಒಂದು ಲಕ್ಷ ಕೋಟಿ ರೂಪಾಯಿ ಇಲ್ಲ, ಅದು ಎಷ್ಟು ಲಕ್ಷ ಕೋಟಿ ರೂಪಾಯಿಗಳನ್ನು ಖರ್ಚು ಮಾಡುತ್ತೇವೆಯೋ, ಅದಕ್ಕೆ ಅಷ್ಟೇ ಹೊಂಡಗಳು ಅಲ್ಲಿ ತಯಾರಾಗಿವೆ. ಮಾನ್ಯ ಸಭಾನಾಯಕರು ಕೇವಲ 90 ಜನರು ಸತ್ತಿದ್ದಾರೆ, 10 ಜನ ಕಾಣೆಯಾಗಿದ್ದಾರೆ, ಇನ್ನೂ ಗೊತ್ತಾಗಿಲ್ಲ, ಇನ್ನೂ ಮುಂದಕ್ಕೆ ನಮಗೆ ಗೊತ್ತಾಗುತ್ತದೆ ಎಂದು ಹೇಳಿದರು.

ಮಾನ್ಯ ಸಭಾಪತಿಯವರೇ, ಕಂಡೂಕಾಣದಂತ ಹಿಂದಿನ ಸಮಾಜವಾಗಲಿ, ಹಿಂದಿನ ಸರ್ಕಾರಗಳಾಗಲಿ, ಇಂತಹ ಪ್ರವಾಹವನ್ನು ಕಂಡಿದ್ದಿಲ್ಲ. ಇದು ಯಾರ ತಪ್ಪು? ಇದು ಕೇರಳದಿಂದ ಬಂದಂತಹ ನೀರೋ ಅಥವಾ

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಹಾರಾಷ್ಟ್ರ ಅಣೆಕಟ್ಟೆಯ ಗೇಟ್‌ನಿಂದ ಬಿಟ್ಟಂತಹ ನೀರಿನ ತಪ್ಪೋ ಅಥವಾ ನಮ್ಮಲ್ಲಿ ಇರುವಂತಹ ಎಲ್ಲಾ ನದಿಗಳ ಒಳಹರಿವು ಜಾಸ್ತಿಯಾಗಿರುವ ತಪ್ಪೋ ಗೊತ್ತಿಲ್ಲ. ಆದರೆ, ಇವತ್ತಿನ ದಿವಸ ಇದಕ್ಕೆಲ್ಲಾ ನಾವು ಹೆಗಲು ಕೊಡಬೇಕೇ ವಿನಃ ಒಬ್ಬರ ಮೇಲೆ ಒಬ್ಬರು ಆರೋಪ ಮಾಡುತ್ತಾ ಕುಳಿತುಕೊಳ್ಳುವುದಕ್ಕೆ ಆಗುವುದಿಲ್ಲ. ಆ ಭಾಗದ ಜನರು ಸಂಪೂರ್ಣವಾಗಿ ಬದುಕನ್ನು ಕಳೆದುಕೊಂಡಿದ್ದಾರೆ. ಇವತ್ತು ನಾನು ಸರ್ಕಾರದಲ್ಲಿ ಕುಳಿತಿರುವವರನ್ನು ತಪ್ಪು ಎಂದು ಹೇಳುತ್ತಿಲ್ಲ. ಪರಿಸ್ಥಿತಿಯ ತಪ್ಪೋ. ವಿಧಿಯ ತಪ್ಪೋ, ಆದರೆ ಆ ಜನರ ಬದುಕನ್ನು ಹೇಗೆ ಕಟ್ಟಿಕೊಡುತ್ತೀರಿ ಎನ್ನುವುದು ಈಗ ನಮ್ಮ ಮುಂದಿರುವ ಪ್ರಶ್ನೆ. ತಾವೆಲ್ಲರೂ ಸಹ ಹೃದಯವಂತರಾಗಿದ್ದೀರಿ ಅಲ್ಲವೇ, ಹಾಗಾದರೆ, ನಮಗೆ ಉತ್ತರ ಕೊಡಿ. ನೀವು ಅವರಿಗೆ ಬದುಕನ್ನು ಕಟ್ಟಿಕೊಡುವುದಕ್ಕೆ ನಾವು ಆಗ್ರಹ ಮಾಡುತ್ತೇವೆ. ಅವರ ಹತ್ತಿರ ಮನವಿ ಮಾಡುತ್ತೇವೆ. ಅವರ ಬಳಿ ಕೇಳಿಕೊಳ್ಳುತ್ತೇವೆ.

ಮಾನ್ಯ ಸಭಾಪತಿಯವರೇ, ಇದರ ಎಲ್ಲಾ ವಿವರಗಳನ್ನು ನಮ್ಮ ಸದಸ್ಯರು ಈಗಾಗಲೇ ಕೊಟ್ಟಿದ್ದಾರೆ. ಇವತ್ತಿನ ದಿವಸ ಎಷ್ಟು ಲಕ್ಷ ಎಕರೆ ಭೂಮಿ ಹೋಗಿವೆ ಎಂದು ಚಾಲೆಂಜ್ ಮಾಡುವಂತಹವರು ಬೇಕಾದಷ್ಟು ಜನರು ಇದ್ದಾರೆ. 20 ಲಕ್ಷ ಎಕರೆ ಭೂಮಿ ನಾಶವಾಗಿದೆ ಮತ್ತು ಬೆಳೆ ನಷ್ಟವಾಗಿದೆ ಎನ್ನುವುದನ್ನು ನಾವೆಲ್ಲರೂ ನಂಬಬೇಕಾಗುತ್ತದೆ. ನಾನು ನಿಜವಾಗಿಯೂ ಮಾಧ್ಯಮದವರಿಗೆ ಒಂದು salute ಹೊಡೆಯುತ್ತೇನೆ. ಆ ಮಾಧ್ಯಮದ ಮಿತ್ರರು ಕ್ಯಾಮರಗಳನ್ನು ಇಟ್ಟುಕೊಂಡು ಆ ನದಿಗಳಲ್ಲಿ ಅವರು ಅವರ ಪ್ರಾಣಗಳನ್ನು ಒತ್ತೆಯಿಟ್ಟು ಒದ್ದಾಡಿ ಅವರು ನಮಗೆ ದಾಖಲೆಗಳನ್ನು ಮಾಡಿಕೊಟ್ಟಿದ್ದಾರೆ. ಅವರು ನಮಗೆ ದಾಖಲೆಗಳನ್ನು ಏಕೆ ಕೊಟ್ಟರೆಂದರೆ, ಆ ಮೂಲಕ ಅವರು ನಮ್ಮೆಲ್ಲರ ಹೃದಯವನ್ನು ತಟ್ಟಿ ಎಚ್ಚರಿಸಿದರು. ಆ ಜನರು ಎಂತಹ ಹೀನಾಯ ಸ್ಥಿತಿಗೆ ಬಂದಿದ್ದಾರೆ, ಅವರನ್ನು ಕಾಪಾಡಿ ಎಂದು ಹೇಳಿದರು. ಇದು ಅವರು ಮಾಡಿರುವಂತಹ ಉಪಕಾರ. ಎಷ್ಟೋ ಜನ ಯುವಕರು ಸ್ವ-ಇಚ್ಛೆಯಿಂದ ಬಂದು ಒಬ್ಬರು ಒಬ್ಬರನ್ನು ಕಾಪಾಡಿದರು.

ಮಾನ್ಯ ಸಭಾಪತಿಯವರೇ, ನಮಗೆ ಬಹಳ ಸಂತೋಷವಾಗುವಂತಹ ಸಂಗತಿ ಎಂದರೆ, ಆ ಹಿರಿಯ ನಾಗರೀಕರಿಗೆ ಅವರ ಮೈಮೇಲೆ ಇರುವ ಬಟ್ಟೆಗಳು ಸಹ ಅವರಿಗೆ ಗೊತ್ತಿಲ್ಲ. ಅವರ ಮನೆಗೆ ನೀರು ನುಗ್ಗಿದೆ. ಆ ವಯಸ್ಸಾಗಿರುವಂತಹ ಅಜ್ಜ-ಅಜ್ಜಿಯರು ಮನೆಯಲ್ಲಿರುವಂತಹ ಕಾಳು-ಕಡ್ಡಿಗಳನ್ನು ತಲೆಯ ಮೇಲೆ ಇಟ್ಟುಕೊಂಡು ಎರಡು ಕೈಯಲ್ಲಿ ಬಟ್ಟೆಗಳನ್ನು ಹಿಡಿದುಕೊಂಡು ಅವರ ಮೊಮ್ಮಕ್ಕಳನ್ನು ಮತ್ತು ಅವರ ಕುಟುಂಬದವರನ್ನು ಎಳೆದುಕೊಂಡು ಹೋಗುವಂತಹ ಸ್ಥಿತಿಯನ್ನು ನಾವು ನೋಡುತ್ತಿದ್ದೆವು. ಆದ್ದರಿಂದ ನಾವು ಇಲ್ಲಿ ಮಾತನಾಡುತ್ತಿರಬೇಕಾದರೆ, ನಾವು ಅವರ ಬದುಕಿನ ಹೋರಾಟವನ್ನು ಒಂದು ಕ್ಷಣ ಆಲೋಚನೆ ಮಾಡಬೇಕಾಗುತ್ತದೆ.

**ಸಭಾಪತಿಯವರು:-** ಮಾನ್ಯ ಸದಸ್ಯರೇ, 10 ನಿಮಿಷ ಆಯಿತು. ಬೇಗ ಮಾತನಾಡಿ ಮುಗಿಸಿ.

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಡಾ||ಜಯಮಾಲ:–** ಮಾನ್ಯ ಸಭಾಪತಿಯವರೇ, ಈ ವಿಚಾರವಾಗಿ ಮಾತನಾಡಲು ನನಗೆ ಸ್ವಲ್ಪ ಸಮಯಾವಕಾಶ ಕೊಡಿ. ದಯವಿಟ್ಟು ನನಗೆ ಅವಕಾಶ ಕೊಡಿ. ನಾವು ಯಾರು ಸಹ ಸಾಕು ಪ್ರಾಣಿಗಳ ಬಗ್ಗೆ ಯೋಚನೆ ಮಾಡಿರಲಿಲ್ಲ. ಅವರು ಬದುಕನ್ನು ಕಟ್ಟಿಕೊಳ್ಳುವುದಕ್ಕೆ ಸರ್ಕಾರಗಳೆ ಕೊಟ್ಟಂತಹ, ಅವರೇ ಕೊಂಡುಕೊಂಡಂತಹ ಸುಮಾರು 10 ಸಾವಿರ ಜಾನುವಾರುಗಳನ್ನು ಅವರು ತಮ್ಮ ಕಣ್ಣು ಮುಂದೆಯೇ ಕಳೆದುಕೊಂಡಿದ್ದಾರೆ ಎಂಬ ಮಾತನ್ನು ಕೇಳಿದಾಗ ಬಹಳ ದುಃಖವಾಗುತ್ತದೆ.

**(ಮುಂದು .....)**

(165)11–10–2019(5–10)ಎಂವಿ–ವಿಕೆ

**(ಸಭಾಪತಿಯವರ ಉಪಸ್ಥಿತಿ)**

**ಡಾ:ಜಯಮಾಲ (ಮುಂದು...):–**
ಮಾನ್ಯ ಸಭಾಪತಿಯವರೇ, ಅಲ್ಲಿ ಅನೇಕ ಗುಡ್ಡಗಳು ಕುಸಿದು ಹೋಗಿವೆ. ಕೊಡಗಿನಲ್ಲಿ ಭಯಂಕರವಾದಂತಹ ಜಲಸ್ಫೋಟವಾಗಿದೆ. ಆ ಜಲಸ್ಫೋಟವಾದಾಗ ಆ ಭಾಗಗಳಲ್ಲಿನ ಕುಟುಂಬಗಳು ಸತ್ತು ಹೋಗಿವೆ. ಈ ಜಲಸ್ಫೋಟಕ್ಕೆ ಕಾರಣವೇನು? ಮತ್ತು ಈ ಜಲಸ್ಫೋಟ ಹೇಗಾಯಿತು? ಒಂದರ ಮೇಲೆ ಒಂದು ಅಂದರೆ, ಕಷ್ಟದ ಮೇಲೆ ಕಷ್ಟ ಬಂದ ಹಾಗೆ ಅವರು ಬದುಕು ಹೇಗಾಗಿದೆ ಎಂದರೆ ಅವರೆಲ್ಲರೂ ಭೂಮಿಯನ್ನು ಕಳೆದುಕೊಂಡಿದ್ದಾರೆ. ಭೂಮಿ ಪ್ರಪಾತಕ್ಕೆ ಹೋಗಿದೆ. ಭೂಮಿಯ ಮೇಲ್ಪದರ ಮತ್ತು ಕೆಳಪದರ ಎಂದು ಇದ್ದಂತಹ ಭೂಮಿ ಲೆಕ್ಕಕ್ಕೆ ಸಿಗದಂತಾಗಿದೆ. ಮಾನ್ಯ ಕಂದಾಯ ಸಚಿವರು ಇದನ್ನು ಹೇಗೆ ಲೆಕ್ಕ ಹಾಕುತ್ತಾರೆ ಮತ್ತು ಅದಕ್ಕೆ ಹೇಗೆ ಪರಿಹಾರ ಕೊಡುತ್ತಾರೆಂದು ಗೊತ್ತಿಲ್ಲ. ಅಲ್ಲಿ ಭೂಮಿಯೇ ಇಲ್ಲವೆಂದ ಮೇಲೆ ಪರಿಹಾರವನ್ನು ಹೇಗೆ ಕೊಡುತ್ತಾರೆ? ಈಗ ಅಲ್ಲಿ ಅಂತಹ ಒಂದು ಸ್ಥಿತಿ ಇದೆ. ಆದುದರಿಂದ ನಾನು ತಮ್ಮ ಮುಖಾಂತರ ಮಾನ್ಯ ಸಚಿವರಿಗೆ ಒಂದು ಪ್ರಶ್ನೆಯನ್ನು ಕೇಳುವುದಕ್ಕೆ ಇಷ್ಟಪಡುತ್ತೇನೆ. ಕರ್ನಾಟಕದ ಮೂಲೆ ಮೂಲೆಗಳಲ್ಲಿ ಇರುವಂತಹ ಬೆಳೆಗಳನ್ನು ತೆಗೆದುಕೊಳ್ಳಬೇಕಾದರೆ, ನಮ್ಮಲ್ಲಿ ಸಾಧಾರಣವಾಗಿ ತಜ್ಞರು ಹೇಳುತ್ತಾರೆ, ಬೆಳೆಗಳಲ್ಲೂ ಕೂಡ ವೈಜ್ಞಾನಿಕವಾದ ಬೆಳೆಗಳಿವೆ. ಈಗ ಭತ್ತ flag level ಗಿಂತ ಮೇಲೆ ಇದ್ದರೆ ಶೇಕಡಾ 25ರಷ್ಟು ಬೆಳೆ ನಾಶವೆಂದು ಹೇಳುತ್ತಾರೆ. Flag level ಗಿಂತ ಪೂರ್ತಿಯಾಗಿ ಮುಳುಗಿದ್ದರೆ ಶೇಕಡಾ 50ರಿಂದ 75ರಷ್ಟು ಎಂದು ಹೇಳುತ್ತಾರೆ. ಐದು ದಿನಗಳಿಗಿಂತ ಹೆಚ್ಚು ಕಾಲದ ಭತ್ತ ಸಂಪೂರ್ಣವಾಗಿ ಮುಳುಗಿದರೆ, ಅದು ಸಂಪೂರ್ಣ ಭತ್ತ ನಾಶವೆಂದು ಹೇಳುತ್ತಾರೆ. ಕಬ್ಬು 7 ರಿಂದ 8 ದಿನಗಳ ಕಾಲ ಮುಳುಗಿದರೆ ಅದು ಸಂಪೂರ್ಣವಾಗಿ ನಾಶವಾಗುತ್ತದೆ. ಜೋಳ 5 ದಿನ ಪೂರ್ತಿಯಾಗಿ ಮುಳುಗಿದರೆ ಅದು ಸಂಪೂರ್ಣವಾಗಿ ನಾಶವಾಗುತ್ತದೆ. ಈ ರೀತಿಯಾಗಿ ಸಂಪೂರ್ಣವಾಗಿ ಬೆಳೆ ನಾಶವಾಗುತ್ತದೆ ಎಂದರೆ. ಇನ್ನು ಇಪ್ಪತ್ತು ದಿನಗಳ ಕಾಲ ನೀರಿನಲ್ಲಿ ಸಂಪೂರ್ಣವಾಗಿ ಮುಳುಗಿದೆ ಎಂದರೆ ಅಲ್ಲಿನ ಪರಿಸ್ಥಿತಿ ಯಾವ ರೀತಿ ಇರಬಹುದು. ಅಂದರೆ, ಅಲ್ಲಿನ ಮಣ್ಣು ಕೊಚ್ಚಿಕೊಂಡು ಹೋಗಿ ಅಲ್ಲಿ ಯಾವುದೇ

“ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

ಮಣ್ಣಿನ ಪದರಗಳು ಇಲ್ಲ. ಅಲ್ಲಿನ ಭೂಮಿಯ ಮಣ್ಣು ಸಂಪೂರ್ಣವಾಗಿ ಸಿಮೆಂಟ್‌ನ ರೀತಿಯಾಗಿ ಆಗಿದೆ. ಈ ರೀತಿಯ ಮಣ್ಣು ಹೋಗಿ ಅಲ್ಲಿನ ಬೆಳೆಗಳು ನಾಶವಾಗಿದೆ. ಇಷ್ಟು ಲಕ್ಷ ಹೆಕ್ಟೇರ್‌ಗೆ ಸರ್ಕಾರ ಯಾವ ರೀತಿಯ ಪರಿಹಾರವನ್ನು ನೀಡುತ್ತದೆ? ಇಡೀ ಊರಿಗೆ ಊರೇ ಕೊಚ್ಚಿಕೊಂಡು ಹೋದಾಗ, ಆಸ್ತಿ ಇರುವವರಿಗೆ ಮಾತ್ರ ಅವರಿಗೆ ಲೆಕ್ಕ ಹಾಕುತ್ತಾರೆ. ಆ ಊರಿನಲ್ಲಿರುವಂತಹವರು ಒಂದು ಪೆಟ್ಟಿಗೆ ಅಂಗಡಿಯನ್ನು ಇಟ್ಟುಕೊಂಡು ಬದುಕುತ್ತಿರುತ್ತಾರೆ. ದೇವಸ್ಥಾನದ ಬಳಿ ವಿಭೂತಿ ಮಾರಾಟ ಮಾಡಿಕೊಂಡು ಬದುಕುತ್ತಿರುತ್ತಾರೆ. ಅಲ್ಲಿ ನಿರಾಶ್ರಿತರು, ಬಡವ–ಬಗ್ಗರು, ಅಂಗವಿಕಲರು ಮತ್ತು ಭಿಕ್ಷುಕರಿದ್ದಾರೆ. ಪ್ರತಿಯೊಬ್ಬರು ಕೂಡ ಅವರದೇ ಆದಂತಹ ಆನಂದದ ಬದುಕಲ್ಲಿ ಏನೋ ಊಟ ಸಿಗುತ್ತದೆ ಮತ್ತು ತಾನು ಎಲ್ಲೋ ಮಲಗುತ್ತೇನೆ ಎನ್ನುವಂತಹ ರೀತಿಯಲ್ಲಿ ಅವರು ತಮ್ಮ ಬದುಕನ್ನು ಕಟ್ಟಿಕೊಂಡಿದ್ದರು. ಅವರೆಲ್ಲರಿಗೂ ಯಾವ ರೀತಿಯ ಪರಿಹಾರವನ್ನು ಕೊಡುತ್ತಾರೆಂದು ಇವತ್ತಿನವರೆವಿಗೂ ಸಹ ಹೇಳಿಲ್ಲ. ಈಗ ಮನೆ ಇದ್ದವರಿಗೆ ಮನೆ ಕೊಡುತ್ತೇನೆಂದು ಹೇಳಿದ್ದಾರೆ. ಮನೆ ಉಳ್ಳವರಿಗೆ ಕೊಡುತ್ತಾರೆ. ಅದೇ ಮನೆಯಲ್ಲಿ ಕೆಲಸ ಮಾಡಿಕೊಂಡು ಇರುವಂತಹವರಿಗೆ, ಅದೇ ಹೊಲದಲ್ಲಿ ದುಡಿದುಕೊಂಡು ಇರುವಂತಹವರಿಗೆ ಅವರು ಅವನದೇ ಆಸ್ತಿಯಲ್ಲಿ ಸುಮಾರು ಐವತ್ತು ವರ್ಷಗಳಿಂದ ಅವರ ಅಪ್ಪನ ಕಾಲದಿಂದ ಅಲ್ಲೇ ಇರುತ್ತಾರೆ ಅವರಿಗೆ ಏನು ಕೊಡುತ್ತಾರೆ? ಪ್ರತಿಯೊಬ್ಬರಿಗೂ ಕೂಡ ನೀವು ಹೇಳಬೇಕಾಗುತ್ತದೆ.

**ಸಭಾಪತಿಯವರು:–** ಸಾಕು ತಾವು ಮಾತನಾಡುವುದನ್ನು ಮುಗಿಸಿ.

**ಡಾ:ಜಯಮಾಲ:–** ಮಾನ್ಯ ಸಭಾಪತಿಯವರೇ, ನಾನು ಪರಿಹಾರದ ಬಗ್ಗೆ ಕೆಲವು ಮಾಹಿತಿಗಳನ್ನು ಕೊಡುತ್ತೇನೆ. ಈಗಾಗಲೇ ಮಾನ್ಯ ಸದಸ್ಯರೆಲ್ಲರೂ ಸಹ ಹೇಳಿದ್ದಾರೆ. 2005, 2009 ಮತ್ತು 2019ರಿಂದ ಈ ತರಹದ ಪ್ರವಾಹ ಮೂರನೇ ಬಾರಿ ಬಂದು, ಇದು ಪದೇ ಪದೇ ಮರುಕಳಿಸುತ್ತಿದೆ. ಇದು ಪದೇ ಪದೇ ಮರುಕಳಿಸುವಾಗ ನಾವು ಇದನ್ನು scientific ಆಗಿ ನೋಡಬೇಕು. ಈ ರೀತಿ scientific ಆಗಿ ನೋಡಬೇಕಾದರೆ ನಾನು ಸರ್ಕಾರಕ್ಕೆ ಮನವಿ ಮಾಡುತ್ತೇನೆ. ಒಂದು ತಜ್ಞರ ತಂಡವನ್ನು ಕರೆಸಿ. ನೀವು ಆ ತಜ್ಞರಿಂದ ಮಾಹಿತಿಯನ್ನು ಸಂಗ್ರಹಿಸಿ, ಇಂತಹ ಒಂದು ದುರ್ಘಟನೆ ಬರುವಾಗ, ನಾವು ಸಮುದ್ರಕ್ಕೆ ಕೆಲವು ಉಪಕರಣಗಳನ್ನು ಅಳವಡಿಸಿಕೊಳ್ಳುತ್ತೇವೆ. ಅದು ಮಾನ್ಯ ಸಭಾನಾಯಕರಿಗೆ ಗೊತ್ತಿದೆ. ನಮಗೆ ಆ ತರಹದ ವಾತಾವರಣವನ್ನು ಕಂಡು ಹಿಡಿಯುವ ಉಪಕರಣ ಬೇಕು ಹಾಗೂ ಅಲ್ಲಿನ ಜನರಿಗೆ ಯಾವಾಗ ಗೇಟ್‌ಗಳನ್ನು ತೆರೆಯುತ್ತಾರೆಂದು ತಿಳಿಸುವಂತಹ ಯಾವುದಾದರೂ ಒಂದು ಮಾಹಿತಿ ನೀಡಬೇಕು. ತಕ್ಷಣದಲ್ಲಿ ನೀವು ನೀರನ್ನು ಬಿಟ್ಟಾಗ ಜನರಿಗೆ ಈ ರೀತಿಯ ಆತಂಕವಾಗುತ್ತದೆ. ಪುನಃ ಪುನಃ ಅವರನ್ನು ಆತಂಕಕ್ಕೆ ಒಳಪಡಿಸಬಾರದು. ಅದಕ್ಕೆ ಸರ್ಕಾರದವರು ಏನಾದರೂ ಮಾಡುತ್ತಾರೆಯೇ?

**ಸಭಾಪತಿಯವರು:–** ಈಗ ಮಾತನಾಡುವುದಕ್ಕೆ ಮಾನ್ಯ ಕೆ.ಎ.ತಿಪ್ಪೇಸ್ವಾಮಿಯವರ ಹೆಸರನ್ನು ಕರೆದಿದ್ದೇನೆ.

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಡಾ:ಜಯಮಾಲ:–** ಮಾನ್ಯ ಸಭಾಪತಿಯವರೇ, ನಾನು ಪರಿಹಾರ ಹೇಳುವವರೆಗೂ ತಾವು ಆ ರೀತಿಯಾಗಿ ಹೇಳಬೇಡಿ. ಇವರು ಇಷ್ಟೆಲ್ಲಾ ಹೇಳುತ್ತಿದ್ದಾರೆ. ನಾನು ಸರ್ಕಾರವನ್ನು ಕೇಳುತ್ತೇನೆ, ಎಷ್ಟು ಪ್ರಮಾಣದ ಬೆಳೆಗಳು ನಾಶವಾಗಿದೆ. ಎಷ್ಟು ಪ್ರಮಾಣದ ಜೀವ ನಾಶವಾಗಿದೆ. ಎಷ್ಟು ಮಕ್ಕಳು ಮತ್ತು ಹೆಣ್ಣು ಮಕ್ಕಳ ಬದುಕು ನಾಶವಾಗಿದೆ. ಅದಕ್ಕೆ ಸಂಬಂಧಪಟ್ಟಂತೆ ಸರ್ಕಾರದವರು ಸರ್ವೆಯನ್ನು ಮಾಡಿಸಿದ್ದಾರೆಯೇ? ಸರ್ಕಾರ ಸರ್ವೆಯನ್ನು ಮಾಡಿಸಿಲ್ಲವೆಂದರೆ ದಯವಿಟ್ಟು ಸರ್ವೇಯನ್ನು ಮಾಡಿಸಲಿ. ಸರ್ವೇಯನ್ನು ಮಾಡಿಸದೆ ಇಲ್ಲಿ ಕುಳಿತುಕೊಂಡು ಕೌಂಟರ್ ಮಾಡಬಾರದು. ದಯವಿಟ್ಟು ಅವರು ಸರ್ವೇ ಮಾಡಿಸಲಿ. ಮಾನ್ಯ ಸದಸ್ಯರುಗಳು ಹೇಳಿರುವುದನ್ನು ಬಿಟ್ಟು ನಾನು ಕೆಲವು ವಿಷಯಗಳನ್ನು ಹೇಳುತ್ತೇನೆ.

**ಶ್ರೀ ಎನ್.ರವಿಕುಮಾರ್:–** ಮಾನ್ಯ ಸಭಾಪತಿಯವರೇ, ಈಗ ಮಾನ್ಯ ಸದಸ್ಯರು ಹೇಳುತ್ತಿರುವುದು ಯಾವ ಸರ್ವೇ ವರದಿ.

**ಶ್ರೀ ಎಂ.ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ನಮ್ಮ ಪಕ್ಷದ ವತಿಯಿಂದ ಸುಮಾರು ಎಂಟು ಸಮಿತಿಗಳನ್ನು ರಚನೆ ಮಾಡಿದ್ದೆವು. ಆ ಸಮಿತಿಗಳು ಖುದ್ದಾಗಿ ಅಲ್ಲಿಗೆ ಭೇಟಿ ನೀಡಿ, ತಯಾರಿಸಿರುವ ಸಮೀಕ್ಷೆ. ಆ ಸಮೀಕ್ಷೆ ಬೋಗಸ್ ಅಲ್ಲ. ಇಲ್ಲಿ ನಾಲ್ಕು ಗೋಡೆಗಳ ಮಧ್ಯೆ ಕುಳಿತುಕೊಂಡು ಮಾತನಾಡಬಾರದು.

**ಡಾ:ಜಯಮಾಲ:–** ಮಾನ್ಯ ಸಭಾಪತಿಯವರೇ, ನಾನೇ ಅವರಿಗೆ ಉತ್ತರವನ್ನು ಕೊಡುತ್ತೇನೆ. ಇದುವರೆಗೂ ಸರ್ಕಾರ ಏನೂ ಮಾಡದೆ ಇದ್ದಾಗ, ಕನಿಷ್ಟ ಪಕ್ಷ ವಿರೋಧ ಪಕ್ಷದವರು ಇಷ್ಟನ್ನಾದರೂ ಮಾಡಿದ್ದಾರೆ. ಅದಕ್ಕೆ ಆಡಳಿತ ಪಕ್ಷದವರು ಸಂತೋಷಪಡಲಿ. ನಾನು ಮಾತನಾಡಬಾರದು ಎಂದು ಇದ್ದೆ. ಆದರೆ ಅವರೇ ನನ್ನ ಕೈಯಲ್ಲಿ ಮಾತನಾಡಿಸುತ್ತಿದ್ದಾರೆ. ನಾನು ಇದನ್ನು ಮಾತನಾಡುವುದಕ್ಕೆ ಇಷ್ಟಪಡುವುದಿಲ್ಲ. ಏಕೆಂದರೆ ನಾನು ಸಂತ್ರಸ್ತರ ಪರವಾಗಿ ಇದ್ದೇನೆ. ಆಡಳಿತ ಪಕ್ಷದವರು ಸುಮ್ಮನೆ ಮಾತನಾಡುವುದು ಬೇಡ ಮತ್ತು ನಮಗೆ ಕೌಂಟರ್ ಮಾಡುವುದು ಬೇಡ. ಅವರಿಗೆ ತಾಕತ್ತಿದ್ದರೆ ಅವರು ಅದನ್ನು ಮಾಡಲಿ. ದಯವಿಟ್ಟು ಮಾನ್ಯ ಸದಸ್ಯರನ್ನು ಕುಳಿತುಕೊಳ್ಳುವುದಕ್ಕೆ ಹೇಳಿ. ಸಂತ್ರಸ್ತರಿಗೆ ನೀಡಿರುವ ಐ.ಡಿ ಮತ್ತು ಆಧಾರ್ ಕಾರ್ಡ್‌ಗಳನ್ನು ಅವರ ಮನೆಗೆ ಉಚಿತವಾಗಿ ತಲುಪಿಸುವಂತಹ ಕೆಲಸಗಳನ್ನು ಮಾಡಬೇಕು. ಯಾವುದೇ ಕಾರಣಕ್ಕೂ ಅಧಿಕಾರಿಗಳು ರಸ್ತೆಯಲ್ಲಿ ನಿಂತು ಅವರನ್ನು ಕೇಳಬಾರದು. ದಯವಿಟ್ಟು ಅದನ್ನು ಮಾಡಬೇಕೆಂದು ಹೇಳುತ್ತೇನೆ.

**ಸಭಾಪತಿಯವರು:–** ಈಗ ನೀವು ಮಾನ್ಯ ಮಂತ್ರಿಗಳು ಬಂದಾಗ ಅವರ ಬಳಿ ಮಾಹಿತಿ ಪಡೆದುಕೊಳ್ಳಿ. ನೀವು ಹಾಗೆ ಹೇಳುವುದಕ್ಕೆ ಆಗುವುದಿಲ್ಲ.

**ಡಾ:ಜಯಮಾಲ:–** ಮಾನ್ಯ ಸಭಾಪತಿಯವರೇ, ದಯವಿಟ್ಟು ಈ ರೀತಿ ಹೇಳಬೇಡಿ. ನಾನು ಒಂದು ಪರಿಹಾರವನ್ನು ಹೇಳುತ್ತೇನೆ. ಈಗ ತಕ್ಷಣಕ್ಕೆ ಅಷ್ಟು ಬೃಹತ್ ಮೊತ್ತದ ಹಣವನ್ನು ಒದಗಿಸುವುದಕ್ಕೆ ಸರ್ಕಾರಕ್ಕೆ ಕಷ್ಟವಿದೆ. ಆದರೆ, ನಾನು ಆಗುವಂತಹ ಎರಡು ಕೆಲಸದ ಸೂಚನೆಗಳನ್ನು ಹೇಳುತ್ತೇನೆ. ನನಗೆ ಗೊತ್ತಿರುವಂತೆ

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯಲ್ಲಿ 96 ಕೋಟಿ ರೂಪಾಯಿಗಳನ್ನು ಚಿಕ್ಕಿಯನ್ನು ಮಾಡುವುದಕ್ಕೆ, ಅಂದರೆ ಮಕ್ಕಳಿಗೆ ಪೌಷ್ಟಿಕ ಅಹಾರವನ್ನು ತಯಾರು ಮಾಡುವುದಕ್ಕೆ ಬೇರೆಯವರಿಗೆ ಕೊಡುತ್ತಾರೆ. ದಯವಿಟ್ಟು ಮಾನ್ಯ ಸಭಾನಾಯಕರು ಇದನ್ನು ಕೇಳಿಸಿಕೊಳ್ಳಬೇಕು. ಮೊದಲು ದಮನಕ್ಕೆ ಒಳಗಾದ ಹೆಣ್ಣುಮಕ್ಕಳಿಗೆ ಚಿಕ್ಕಿ ತಯಾರು ಮಾಡುವುದಕ್ಕೆ ಕೊಡಬೇಕು ಎಂದು ಇದ್ದೆವು. ಆದರೆ 96 ಕೋಟಿ ರೂಪಾಯಿಗಳನ್ನು ಈಗ ಪ್ರವಾಹಕ್ಕೆ ತುತ್ತಾಗಿ ನಿರಾಶ್ರಿತರಾದವರಿಗೆ ಅವರ ಬೆಳೆಗಳು ಆಗುವವರೆಗೂ ಈ ಚಿಕ್ಕಿಯನ್ನು ತಯಾರು ಮಾಡುವುದಕ್ಕೆ ಅವರಿಗೆ ಯೂನಿಟ್ಸ್‌ಗಳನ್ನು ಹಾಕಿಕೊಟ್ಟರೆ. ಇದರಿಂದ ಅವರಿಗೆ ತುಂಬಾ ಸಹಾಯವಾಗುತ್ತದೆ ಎಂದು ನಾನು ಹೇಳುತ್ತೇನೆ. ಇದರಿಂದ ಅಲ್ಲಿರುವಂತಹ ಹೆಣ್ಣು ಮಕ್ಕಳಿಗೆ ಆದಾಯ ಸಿಗುತ್ತದೆ. ಹಾಗೆಯೇ ಬೇರೆ ಬೇರೆ ಇಲಾಖೆಗಳಲ್ಲಿ ಮತ್ತು ಸಮಾಜ ಕಲ್ಯಾಣ ಇಲಾಖೆಯಲ್ಲಿ ಸ್ಕೂಲ್ ಮಕ್ಕಳಿಗೆ ಬಟ್ಟೆಗಳನ್ನು ಹೊರಗಡೆಯಿಂದ ಹೊಲೆಸುತ್ತಾರೆ. ಆದರೆ, ಈಗ ಪ್ರವಾಹ ಸಂತ್ರಸ್ತರಿಗೆ ಯೂನಿಟ್‌ಗಳನ್ನು ಹಾಕಿಕೊಟ್ಟು ಅವರು ಪೌಷ್ಠಿಕ ಆಹಾರ ತಯಾರು ಮಾಡುವುದಕ್ಕೆ ಅನುಕೂಲ. ಈ ರೀತಿಯಾದ ಪ್ರವಾಹದಿಂದ ಪೀಡಿತರಾದವರಿಗೆ ಅದನ್ನು ಮಾಡಿಕೊಡಬೇಕೆಂದು ತಮ್ಮ ಮೂಲಕ ಸರ್ಕಾರವನ್ನು ಕೇಳಿಕೊಳ್ಳುತ್ತೇನೆ. ಇದು ಬಹಳ ಸುಲಭವಾಗುತ್ತದೆ ಎಂಬುದು ನನ್ನ ಅನಿಸಿಕೆ. ಸರ್ಕಾರ ಇದಕ್ಕೆ ಒಂದು ಕಾಲಮಿತಿಯನ್ನು ಹೇಳಬೇಕಾಗುತ್ತದೆ. ಇದಕ್ಕೆ ಕಾಲಮಿತಿ ಇಲ್ಲದೇ ಹೋದರೆ, ನಾನು ಸರ್ಕಾರಕ್ಕೆ ಒಂದು ಮನವಿ ಮಾಡುತ್ತೇನೆ. ಈಗ ಮನೆಯನ್ನು ಕಟ್ಟಿಕೊಡಬೇಕಾದರೆ 'ಎ' 'ಬಿ' ಮತ್ತು 'ಸಿ' ಎಂದು ಹೇಳುವುದು ಎಲ್ಲಾ ಬೋಗಸ್. ಇವೆಲ್ಲವೂ ಕೂಡ ತಪ್ಪು. ಅವರುಗಳು ಪಡುತ್ತಿರುವ ಪಾಡು ನೋಡಿದರೆ, ಇವತ್ತು ಮನೆಗಳು ಏಕೆ ಮೇಲೆ ಏಳುತ್ತಿಲ್ಲ. ಮನೆ ಮೇಲೆ ಏಳಬೇಕು ಎಂದರೆ 'ಎ' ಕೆಟಗರಿಯವರಿಗೆ ಮೊದಲು ಒಂದು ಲಕ್ಷವನ್ನು ಕೊಡಬೇಕಾದರೆ, ಅದಕ್ಕೆ ಪಿಡಿಓ ಮತ್ತು ವಿಲೇಜ್ ಅಕೌಂಟೆಂಟ್ ಬರಬೇಕು. ಅವರಿಗೆ ಸಂತ್ರಸ್ತರು ಫೋಟೋವನ್ನು ತೋರಿಸಬೇಕು. ಇಂತಹ ಕೆಲಸಗಳೇ ಬೇಕಾಗಿಲ್ಲ. 'ಎ' 'ಬಿ' ಮತ್ತು 'ಸಿ' ಎಂದು ಯಾರೇ ಇರಲಿ ಅವರಿಗೆ ಐದು ಲಕ್ಷ ರೂಪಾಯಿಗಳನ್ನು ಅವರ ಹೆಸರಿಗೆ ಕೊಟ್ಟು ಅವರಿಗೆ ಮನೆ ಆಗುವ ರೀತಿ ಮಾಡಬೇಕೆಂದು ನಾನು ಸರ್ಕಾರವನ್ನು ಕೇಳಿಕೊಳ್ಳುತ್ತೇನೆ.

**(ಮುಂದು...)**

(166) 11.10.2019-05.20-LL-VK

ಸಭಾಪತಿಯವರ ಉಪಸ್ಥಿತಿ

**ಶ್ರೀ ಕೆ.ಎ. ತಿಪ್ಪೇಸ್ವಾಮಿ(ನಾಮನಿರ್ದೇಶಿತರು):-** ಮಾನ್ಯ ಸಭಾಪತಿಯವರೇ, ಈ ಅಲ್ಪಕಾಲದ ಚರ್ಚೆಯಲ್ಲಿ ಭಾಗವಹಿಸಲು ಅನುವು ಮಾಡಿಕೊಟ್ಟಿದ್ದಕ್ಕಾಗಿ ತಮಗೆ ವಂದಿಸುತ್ತೇನೆ. ಈ ವರ್ಷದ ಆಗಸ್ಟ್ ತಿಂಗಳು ಮತ್ತು ಸೆಪ್ಟೆಂಬರ್ ತಿಂಗಳಿನಲ್ಲಿ ಸಂಭವಿಸಿದಂತಹ ಭೀಕರ ಅತಿವೃಷ್ಠಿ ಮತ್ತು ನೆರೆ ಹಾವಳಿಯಿಂದ ಸರ್ಕಾರ ಒದಗಿಸಿರುವಂತಹ ಅಂಕಿ-ಅಂಶಗಳ ಪ್ರಕಾರ, ಖಾಸಗಿ ಮತ್ತು ಸಾರ್ವಜನಿಕ ಆಸ್ತಿ-ಪಾಸ್ತಿಗಳಿಗೆ ಉಂಟಾದ ನಷ್ಟ ಈ ರೀತಿ ಇದೆ. ಅದರಂತೆ, 90 ಜನ ಸಾವನ್ನಪ್ಪಿದ್ದಾರೆ, 33 ಜನ ಗಾಯಗೊಂಡಿದ್ದಾರೆ, 22 ಜಿಲ್ಲೆಯ 103

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ತಾಲ್ಲೂಕುಗಳು ನೆರೆ ಹಾವಳಿಯಿಂದ ಬಾಧಿತವಾಗಿವೆ, 1702 ಗ್ರಾಮಗಳು ಜಲಾವೃತಗೊಂಡಿವೆ, 2.47 ಲಕ್ಷ ಮನೆಗಳು ಜಖಂಗೊಂಡಿವೆ, ಸುಮಾರು 9.63 ಲಕ್ಷ ಹೆಕ್ಟೇರ್ ವಿಸ್ತೀರ್ಣದ ಬೆಳೆ ಹಾನಿ ಅಂದರೆ, 21.19 ಲಕ್ಷ ಎಕರೆಯಲ್ಲಿರತಕ್ಕಂತಹ ಬೆಳೆ ಹಾನಿಯಾಗಿದೆ. ಇಂತಹ ವಿಷಮ ಪರಿಸ್ಥಿತಿಯಲ್ಲಿ ರಾಜ್ಯ ಸರ್ಕಾರ ಕೈಗೊಂಡ ನೆರೆ ಪರಿಹಾರ ಕಾರ್ಯಗಳಲ್ಲಿ ಜಿಲ್ಲಾಧಿಕಾರಿಗಳ ನೇತೃತ್ವದಲ್ಲಿರುವಂತಹ ಜಿಲ್ಲಾಡಳಿತ, ಉತ್ತಮ ಆಡಳಿತಗಾರರಾದ ರಾಜ್ಯದ ಮುಖ್ಯ ಕಾರ್ಯದರ್ಶಿಯವರ ನೇತೃತ್ವದಲ್ಲಿರುವಂತಹ ರಾಜ್ಯಾಡಳಿತ, ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಬಿ.ಎಸ್. ಯಡಿಯೂರಪ್ಪ ನೇತೃತ್ವದ ಏಕ ವ್ಯಕ್ತಿಯ ಸಂಪುಟ ಮಾಡಿದ ಕಾರ್ಯಗಳು ತುಂಬ ಶ್ಲಾಘನೀಯ ಮತ್ತು ಅಭಿನಂದನಾರ್ಹ.

ಇದಲ್ಲದೇ, ಎಸ್.ಡಿ.ಆರ್.ಎಫ್. ಮತ್ತು ಎನ್.ಡಿ.ಆರ್.ಎಫ್. ತಂಡಗಳು, ಭಾರತೀಯ ಸೇನೆ, ವಾಯುಪಡೆ, ನೌಕಾಪಡೆ, ಹೋಂಗಾರ್ಡ್ಸ್, ಸ್ಕೌಟ್ಸ್ ಮತ್ತು ಜಿಲ್ಲಾ ಪೊಲೀಸ್ ಆಡಳಿತ ಮುಂತಾದವುಗಳು ತಮ್ಮ ಜೀವದ ಹಂಗು ತೊರೆದು ಜಲಾವೃತಗೊಂಡ ಪ್ರದೇಶದಿಂದ ಸಂತ್ರಸ್ತರನ್ನು ಪಾರು ಮಾಡಿದ್ದಾರೆ. ಅದೇ ರೀತಿ ಜಲಾವೃತಗೊಳ್ಳಬಹುದಾದ ಗ್ರಾಮಗಳಿಗೆ ಮುನ್ನೆಚ್ಚರಿಕೆ ನೀಡುವಲ್ಲಿ ಮತ್ತು ಅಲ್ಲಿನ ನೆರೆಯ ವಿಷಮ ಪರಿಸ್ಥಿತಿಯನ್ನು ಬಿತ್ತರಿಸುವಲ್ಲಿ ಪ್ರಿಂಟ್ ಮತ್ತು ಎಲೆಕ್ಟ್ರಾನಿಕ್ ಮಾಧ್ಯಮಗಳು ಉತ್ತಮವಾದ ಸೇವೆಯನ್ನು ಸಲ್ಲಿಸಿವೆ. ಅದೇ ರೀತಿ ಸರ್ವಸ್ವವನ್ನು ಕಳೆದುಕೊಂಡು ಸಂತ್ರಸ್ತ ಶಿಬಿರದಲ್ಲಿ ವಾಸವಿದ್ದ ನೆರೆ ಸಂತ್ರಸ್ತರಿಗೆ ಅಗತ್ಯವಿದ್ದಂತಹ ಆಹಾರ ಸಾಮಗ್ರಿಗಳು, ಹೊದಿಕೆಗಳು ಹಾಗೂ ಬಟ್ಟೆ-ಬರೆಗಳನ್ನು ನೀಡಿದ ಸ್ಥಳೀಯರು, ಸೇವಾಸಂಸ್ಥೆಗಳು ಮತ್ತು ಪಕ್ಷಭೇದ ತೊರೆದು ರಾಜ್ಯದ ಎಲ್ಲಾ ಪಕ್ಷಗಳು ನೊಂದ ಸಂತ್ರಸ್ತರ ನೆರವಿಗೆ ಧಾವಿಸಿ ಅಗತ್ಯವಿರುವ ಸಾಮಗ್ರಿಗಳನ್ನು ಒದಗಿಸಿದ್ದಾರೆ. ಇವರ ಸೇವೆ ಕೂಡ ಅವಿಸ್ಮರಣೀಯ. ಆದುದರಿಂದ, ಈ ನೆರೆ ಪರಿಹಾರ ಕಾರ್ಯದಲ್ಲಿ ಪಾಲ್ಗೊಂಡ ಪ್ರತಿಯೊಬ್ಬರ ಸೇವೆಯನ್ನು ಈ ಸದನ ಪ್ರಶಂಸಿಸಿ ಅವರನ್ನು ಅಭಿನಂದಿಸುತ್ತದೆಂದು ಮಾನ್ಯ ಸಭಾಪತಿಯವರು ಈ ಅಲ್ಪ ಕಾಲದ ಚರ್ಚೆಯ ನಂತರ ನಿರ್ಣಯಿಸಿ ಸ್ಮರಿಸಬೇಕೆಂದು ಕೋರುತ್ತೇನೆ.

ರಾಜ್ಯ ಸರ್ಕಾರ ಕೇಂದ್ರ ಸರ್ಕಾರಕ್ಕೆ ಆರ್ಥಿಕ ನೆರವು ಕೋರಿ, ಇದುವರೆವಿಗೂ 2 memorandum(ಮನವಿಯನ್ನು) ಸಲ್ಲಿಸಿದೆ. ಆಗಸ್ಟ್ ತಿಂಗಳಿನಲ್ಲಿ ಸಲ್ಲಿಸಿದಂತಹ ಮನವಿಯಲ್ಲಿ ತೋರಿಸಿದ ಹಾನಿಯ ಮೊತ್ತ 38,451.11 ಕೋಟಿ ರೂಪಾಯಿಗಳು. ಆದರೆ, ಸೆಪ್ಟೆಂಬರ್ ತಿಂಗಳಿನಲ್ಲಿ ಸಲ್ಲಿಸಿದಂತಹ ಮನವಿಯಲ್ಲಿ ತೋರಿಸಿದ ಹಾನಿಯ ಮೊತ್ತ 35,160.81 ಕೋಟಿ ರೂಪಾಯಿ. ಇದರಲ್ಲಿ ಸುಮಾರು 3 ಸಾವಿರ ಕೋಟಿ ರೂಪಾಯಿ ವ್ಯತ್ಯಾಸವಿದೆ. ಇದಕ್ಕೆ ಸರ್ಕಾರ ಸ್ಪಷ್ಟೀಕರಣ ನೀಡಬೇಕು. ಆಗಸ್ಟ್ ತಿಂಗಳಿನಲ್ಲಿ ಆದ ಅಂದಾಜು ಹಾನಿ ಮೊತ್ತದಲ್ಲಿ ಜಾಸ್ತಿ ಇದೆ, ಸೆಪ್ಟೆಂಬರ್ ತಿಂಗಳಿನಲ್ಲಿ ಆದ ಅಂದಾಜು ಮೊತ್ತದಲ್ಲಿ ಕಡಿಮೆ ಇದೆ.

ರಾಜ್ಯ ಸರ್ಕಾರ ಪ್ರಕಟಿಸಿರುವಂತಹ "Revised list of items and norms of assistance from the State Disaster Response Fund (SDRF) and the

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

National Disaster Response Fund (NDRF) ನ ಪ್ರಕಾರ 2 ಹೆಕ್ಟೇರ್‌ಗಿಂತ ಹೆಚ್ಚು ಹಿಡುವಳಿ ಹೊಂದಿರುವ ರೈತರು ಬೆಳೆ ಪರಿಹಾರಕ್ಕೆ ಅರ್ಹರು. ಆದರೆ, ಅದೇ ಅರ್ಹ ನೊಂದ ರೈತರಿಗೆ ತಮ್ಮ ಜಮೀನಿನಲ್ಲಿ ಬಿದ್ದಿರುವ debris, ಹೂಳು, ಭೂ ಸವೆತ ಮತ್ತು ಭೂಕುಸಿತದಿಂದ ತುಂಬಿರುವ ಮಣ್ಣನ್ನು ತೆಗೆದು ಜಮೀನನ್ನು ಅಬಾದು ಮಾಡಲು ಅವಕಾಶವಿಲ್ಲ. 2 ಹೆಕ್ಟೇರ್‌ಗಿಂತ ಜಾಸ್ತಿ ಇದ್ದವರಿಗೆ ಸರ್ಕಾರ ಬೆಳೆ ಪರಿಹಾರ ಕೊಡುತ್ತದೆ. ಆದರೆ, ಅವರಿಗೆ debris clear ಮಾಡುವುದಕ್ಕಾಗಲಿ ಅಥವಾ ಅಬಾದು ಮಾಡುವುದಕ್ಕೆ ಬೇಕಾದಂತಹ ಪರಿಹಾರ ಕೊಡುವುದಕ್ಕೆ ಅವರು ಅರ್ಹರಲ್ಲ.

**ಶ್ರೀ ಜೆ.ಸಿ. ಮಾಧುಸ್ವಾಮಿ(ಕಾನೂನು ಮತ್ತು ಸಂಸದೀಯ ವ್ಯವಹಾರಗಳು ಹಾಗೂ ಸಣ್ಣ ನೀರಾವರಿ ಸಚಿವರು):–** ಮಾನ್ಯ ಸಭಾಪತಿಯವರೇ, ನಾವೆಲ್ಲಾ debris clear ಮಾಡುವುದಕ್ಕೆ ಅಲ್ಲಿನ ಜಿಲ್ಲಾಧಿಕಾರಿಗಳಿಗೆ ಆದೇಶ ಕೊಟ್ಟಿದ್ದೇವೆ. ಸಕಲೇಶಪುರ ಮತ್ತು ಮೂಡಿಗೆರೆ ತಾಲ್ಲೂಕುಗಳಿಗೆ ನಾನೇ ಖುದ್ದಾಗಿ ಹೋಗಿ ನೋಡಿಕೊಂಡು ಬಂದಿದ್ದೇನೆ. Debris is cleared. Hillside sliding ನಿಂದ 15 ಅಡಿ, 20 ಅಡಿ ಅಥವಾ 30 ಅಡಿ ಬಿದ್ದಿರುವಂತಹ debris ತೆಗೆಯುವುದಕ್ಕೆ ಆಗಿರುವುದಿಲ್ಲ. ಆದರೆ, ಮಾನ್ಯ ಸದಸ್ಯರು ಹೇಳಿದ scattered debris is already cleared.

**ಶ್ರೀ ಕೆ.ಎ. ತಿಪ್ಪೇಸ್ವಾಮಿ:–** ಮಾನ್ಯ ಸಭಾಪತಿಯವರೇ, ನಾನು ಪ್ರವಾಹದಿಂದ ಹಾನಿಗೊಳಗಾದ ರೈತರ ಜಮೀನಿನಲ್ಲಿ ಬಿದ್ದಿರುವಂತಹ debris ಬಗ್ಗೆ ಹೇಳುತ್ತಿದ್ದೇನೆ.

**ಶ್ರೀ ಜೆ.ಸಿ. ಮಾಧುಸ್ವಾಮಿ:–** ಮಾನ್ಯ ಸಭಾಪತಿಯವರೇ, ಅದನ್ನು ಕೂಡ ತೆಗೆಸುತ್ತಿದ್ದೇವೆ and we have provided funds for that.

**ಶ್ರೀ ಕೆ.ಎ. ತಿಪ್ಪೇಸ್ವಾಮಿ:–** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ನಾನು ಹೇಳಿರುವ ವಿಷಯದ ಬಗ್ಗೆ ಪರಿಶೀಲನೆ ಮಾಡಲಿ. ಆದರೆ, ಅದಕ್ಕೆ ಎನ್.ಡಿ.ಆರ್.ಎಫ್. ನಾರ್ಮ್ಸ್ ಪ್ರಕಾರ ಪರಿಹಾರ ಕೊಡುವುದಿಕ್ಕೆ ಬರುವುದಿಲ್ಲ ಮತ್ತು ಅವರೂ ಸಹ ಕೊಡುವುದಿಲ್ಲ. ಒಂದು ವೇಳೆ ಪರಿಹಾರ ಕೊಡುವುದಾದರೆ, ಸರ್ಕಾರದ ಎಸ್.ಡಿ.ಆರ್.ಎಫ್.ನಲ್ಲಿರುವಂತಹ untied funds ನಲ್ಲಿ ಕೊಡಬೇಕಾಗುತ್ತದೆ.

**ಶ್ರೀ ಜೆ.ಸಿ. ಮಾಧುಸ್ವಾಮಿ:–** ಮಾನ್ಯ ಸಭಾಪತಿಯವರೇ, ಇದರಲ್ಲಿ ಸರ್ಕಾರ ಏನು valuation ಮಾಡಿದೆ ಹಾಗೂ ಮಾನ್ಯ ಸದಸ್ಯರು 35 ಸಾವಿರ ಕೋಟಿ ರೂಪಾಯಿ ಎಂದು ಏನು ಹೇಳಿದ್ದಾರೆ, ಅದು ಎನ್.ಡಿ.ಆರ್.ಎಫ್. ನಾರ್ಮ್ಸ್ ಪ್ರಕಾರ 3,890 ಕೋಟಿ ರೂಪಾಯಿ ಅಷ್ಟೇ ನಮಗೆ eligibility ಇರುವುದು.

**ಶ್ರೀ ಕೆ.ಎ. ತಿಪ್ಪೇಸ್ವಾಮಿ:–** ಮಾನ್ಯ ಸಭಾಪತಿಯವರೇ, ಆ ಬಗ್ಗೆ ನಾನು ಮುಂದೆ ಹೇಳುತ್ತೇನೆ.

**ಶ್ರೀ ಜೆ.ಸಿ. ಮಾಧುಸ್ವಾಮಿ:–** ಮಾನ್ಯ ಸಭಾಪತಿಯವರೇ, further works have to be...

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**(ಗೊಂದಲ)**

**ಶ್ರೀ ಕೆ.ಎ. ತಿಪ್ಪೇಸ್ವಾಮಿ:–** ಮಾನ್ಯ ಸಭಾಪತಿಯವರೇ...

**(ಗೊಂದಲ)**

**ಶ್ರೀ ಜೆ.ಸಿ. ಮಾಧುಸ್ವಾಮಿ:–** ಮಾನ್ಯ ಸಭಾಪತಿಯವರೇ, ಮಾನ್ಯ ತಿಪ್ಪೇಸ್ವಾಮಿಯವರು ಲೋಕೋಪಯೋಗಿ ಇಲಾಖೆಯಲ್ಲಿ ಕಾರ್ಯದರ್ಶಿಯಾಗಿ ಬಹಳಷ್ಟು ಕೆಲಸ ಮಾಡಿದ್ದಾರೆ. ಅವರು ಸುಮ್ಮನೆ ಮಾತನಾಡುವುದಿಲ್ಲ. ಮಾನ್ಯ ಸದಸ್ಯರು ಮಾತನಾಡುವಾಗ ನಾನು ಮಧ್ಯಪ್ರವೇಶ ಮಾಡಲಿಲ್ಲ. He is the brain changer of PWD.

**ಶ್ರೀ ಕೆ.ಎ. ತಿಪ್ಪೇಸ್ವಾಮಿ:–** ಮಾನ್ಯ ಸಭಾಪತಿಯವರೇ, ಅಂತಹ ದೊಡ್ಡ ಮಾತುಗಳು ಬೇಡ.

**ಶ್ರೀ ಎಂ.ಎ. ಗೋಪಾಲಸ್ವಾಮಿ:–** ಮಾನ್ಯ ಸಭಾಪತಿಯವರೇ, ಸಕಲೇಶಪುರ ಮತ್ತು ಆಲೂರು ಭಾಗದಲ್ಲಿ ರೈತರ ಜಮೀನಿನಲ್ಲಿ ಬಿದ್ದಿರುವಂತಹ debris ಅನ್ನು...

**(ಗೊಂದಲ)**

**ಶ್ರೀ ಕೆ.ಎ. ತಿಪ್ಪೇಸ್ವಾಮಿ:–** ಮಾನ್ಯ ಸಭಾಪತಿಯವರೇ, ರೈತರು ತಮ್ಮ ಜಮೀನಿನಲ್ಲಿ ಬಿದ್ದಿರುವಂತಹ debris ನಿಂದಾಗಿ ಇಡೀ ಮನೆ, ಮಠ, ಭೂಮಿ ಕೊಚ್ಚಿ ಹೋದ ಪ್ರಕರಣಗಳಲ್ಲಿ ಸರ್ಕಾರ ವಿಶೇಷ ಪ್ರಕರಣಗಳೆಂದು ಪರಿಗಣಿಸಿ ತನ್ನ ಎಸ್.ಡಿ.ಆರ್.ಎಫ್. ನಲ್ಲಿನ untied funds ನಿಂದ ನೆರವು ನೀಡಬೇಕಾಗುತ್ತದೆ. ಆದ್ದರಿಂದ, ಎಸ್.ಡಿ.ಆರ್.ಎಫ್./ಎನ್.ಡಿ.ಆರ್.ಎಫ್. ಗೆ ಒಳಪಡದ ಪ್ರಕರಣದಲ್ಲಿ...

**ಶ್ರೀ ಜೆ.ಸಿ. ಮಾಧುಸ್ವಾಮಿ:–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು yield ಆಗುವುದಾದರೆ ಮತ್ತೊಂದು ಮಾಹಿತಿ ನೀಡಿ ನಾನು ಸದನದಿಂದ ಹೊರಡುತ್ತೇನೆ.

**ಶ್ರೀ ಕೆ.ಎ. ತಿಪ್ಪೇಸ್ವಾಮಿ:–** ಮಾನ್ಯ ಸಭಾಪತಿಯವರೇ, ಆಯಿತು ಹೇಳಿ.

**ಶ್ರೀ ಜೆ.ಸಿ. ಮಾಧುಸ್ವಾಮಿ:–** ಮಾನ್ಯ ಸಭಾಪತಿಯವರೇ, Total loss considered by the Committee is 10,028 houses. In 'B' category we have another 29,000 houses. ಎರಡೂ ಸೇರಿಸಿ 39 ಸಾವಿರ ಮನೆಗಳಿಗೆ ನಾವು ತಲಾ 5 ಲಕ್ಷ ರೂಪಾಯಿ ಪರಿಹಾರ ಕೊಡುವುದಕ್ಕೆ ತೀರ್ಮಾನ ಮಾಡಿದ್ದೇವೆ. 'ಸಿ' ಕೆಟಗರಿಯಲ್ಲಿ ಹೇಳಿದಿದ್ದು 0-15 per cent of the loss, ಆದರೆ ಅದು 25% ಇತ್ತು, ಅದು 69,000 ದಿಂದ 70,000 ಸಾವಿರ ಮನೆಗಳಿವೆ. Total houses damaged are 1,05,000 and odd, not 2,00,000 houses. This is the final report. ಅವರಿಗೆ ನಾವು 50 ಸಾವಿರ ರೂಪಾಯಿ ಕೊಡುವ ತೀರ್ಮಾನ ಮಾಡಿದ್ದೇವೆ. 'ಎ' ಅಂಡ್ 'ಬಿ'

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಎರಡೂ ಕೆಟಗರಿ ಅನ್ನು ನಾವು club ಮಾಡಿಕೊಂಡಿದ್ದೇವೆ. Though we are not entitled for compensation from NDRF, Government of Karnataka is releasing Rs.5 lakh for each house.

**ಶ್ರೀ ಕೆ.ಎ. ತಿಪ್ಪೇಸ್ವಾಮಿ:–** ಮಾನ್ಯ ಸಭಾಪತಿಯವರೇ, ಅದನ್ನು untied funds ನಲ್ಲಿ ತಾವು ಕೊಡಬೇಕಾಗುತ್ತದೆ. ಎಸ್.ಡಿ.ಆರ್.ಎಫ್. ಮತ್ತು ಎನ್.ಡಿ.ಆರ್.ಎಫ್. ನಾರ್ಮ್ಸ್‌ನಲ್ಲಿ ಸಾಕಷ್ಟು ಗೊಂದ್ಲಲಗಳಿವೆ. ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು ಈ ಸದನದಲ್ಲಿದ್ದಾರೆ. ಅವರ ಗಮನಕ್ಕೆ ತರುವುದೇನೆಂದರೆ, ಪ್ರವಾಹದಿಂದ ಮನೆ ಒಳಗೆ ನೆರೆ ನುಗ್ಗಿ, 2 ದಿನಗಳ ಕಾಲ ನೀರು ನಿಂತರೆ ಅಂತಹ ಮನೆಗಳು ಜಖಂಗೊಂಡಿವೆ ಎಂದು ನಿರ್ಧರಿಸಬೇಕು. 24 ಗಂಟೆ ನೀರು ನಿಂತರೆ ಆಗುವುದಿಲ್ಲ. 48 ಗಂಟೆಗಳ ಕಾಲ ನೀರು ನಿಂತರೆ ಮಾತ್ರ ಆ ಮನೆ ಜಖಂಗೊಂಡಿದೆ ಎಂದು ಅರ್ಥ. ಇತ್ತೀಚೆಗೆ ಕೇಂದ್ರ ಸರ್ಕಾರದ ತಂಡ ನಮ್ಮ ರಾಜ್ಯಕ್ಕೆ ಬಂದು ನೆರೆ ವೀಕ್ಷಣೆ ಮಾಡಿದ್ದು, ಅದರಲ್ಲಿ ಅವರು ಕೆಲವು ಸ್ಪಷ್ಟೀಕರಣ ಕೇಳಿದ್ದಾರೆ. ಅದಲ್ಲದೇ, ಒಂದು ಎಕರೆ ಜಮೀನಿನಲ್ಲಿ ಶೇಕಡ 33 ಕ್ಕಿಂತಲೂ ಹೆಚ್ಚು ಬೆಳೆ ಹಾನಿಯಾಗಿದ್ದರೆ, ಅಂತಹ ಪ್ರಕರಣಗಳು ಪರಿಹಾರಕ್ಕೆ ಅರ್ಹ. ಬೆಳೆಹಾನಿ ಶೇಕಡ 25 ರಷ್ಟಿದ್ದರೆ ಪರಿಹಾರ ಕೊಡಬೇಕಾಗಿರುವುದಿಲ್ಲ. ಬೆಳೆ ಸಂಪೂರ್ಣವಾಗಿ ನಾಶವಾಗಬೇಕು ಅಥವಾ ಶೇಕಡ 33 ಕ್ಕಿಂತಲೂ ಜಾಸ್ತಿ ಬೆಳೆ ಹಾನಿಯಾಗಿರಬೇಕು. Desilting of Agriculture lands category ನಲ್ಲಿ 3 ಇಂಚಿಗಿಂತ ಹೆಚ್ಚು ಮರಳು ಅಥವಾ ಮಣ್ಣು ತುಂಬಿದರೆ ಅಂತಹ ನೊಂದ ರೈತರಿಗೆ ಪರಿಹಾರ ನೀಡಬೇಕು. 3 ಇಂಚು ಮರಳು ಎಂದರೆ ಉದಾಹರಣೆಗೆ, ಒಂದು ಸನಿಕೆಯಲ್ಲಿ ಮಣ್ಣು ತೆಗೆದರೆ ಎಷ್ಟು ಬರುತ್ತದೆಯೋ ಅಷ್ಟು. ಇದು ಎಷ್ಟರಮಟ್ಟಿಗೆ ಸಾಧ್ಯವಿದೆ. ಇವು ಪ್ರಾಕ್ಟಿಕಲ್ ಅಲ್ಲ. ಇವು ಯಾವುದೋ ಕಾಲದಲ್ಲಿ ಮಾಡಿರುವ ಮಾನದಂಡಗಳಾಗಿರುತ್ತವೆ. ದಯಮಾಡಿ, ಇಂತಹ ಮಾನದಂಡಗಳನ್ನು ಸ್ವಲ್ಪ ಸಡಿಲಗೊಳಿಸಿ ಪರಿಹಾರ ನೀಡಬೇಕಾಗಿರುತ್ತದೆ.

**ಶ್ರೀ ಜೆ.ಸಿ. ಮಾಧುಸ್ವಾಮಿ:–** ಮಾನ್ಯ ಸಭಾಪತಿಯವರೇ, there is a restriction. But now we have authorised the Deputy Commissioners and we have given funds to them. ಅದು ದೊಡ್ಡ ಕೆಲಸ ಅಲ್ಲ. ಹಾಸನ ಜಿಲ್ಲೆಗೆ ನಾನೇ ಉಸ್ತುವಾರಿ ಸಚಿವನಾಗಿದ್ದೇನೆ.

**ಶ್ರೀ ಕೆ.ಎ. ತಿಪ್ಪೇಸ್ವಾಮಿ:–** ಮಾನ್ಯ ಸಭಾಪತಿಯವರೇ, ಅದು ಒಳ್ಳೆಯದು. ಅದನ್ನು ಸ್ಪಷ್ಟೀಕರಣಗೊಳಿಸಿದರೆ ಆಯಿತು. ಆದರೆ, ಮಾನ್ಯ ಸಚಿವರು ಎಲ್ಲಾ ಜಿಲ್ಲೆಗಳಿಗೂ ಉಸ್ತುವಾರಿ ಸಚಿವರಾಗಿರುವುದಿಲ್ಲ. ಸರ್ಕಾರದವರು ಸರ್ವೇ ಕೆಲಸ ಏನು ಮಾಡಿದ್ದಾರೆ...

“ ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

**ಶ್ರೀ ಜೆ.ಸಿ. ಮಾಧುಸ್ವಾಮಿ:–** ಮಾನ್ಯ ಸಭಾಪತಿಯವರೇ, the major problems of desiltation or siltation arises in Mudigere and Chikmagalur Districts.

**ಶ್ರೀ ಕೆ.ಎ. ತಿಪ್ಪೇಸ್ವಾಮಿ:–** ಮಾನ್ಯ ಸಭಾಪತಿಯವರೇ, ನಾವು ಗೋಕಾಕ್ ಮತ್ತು ಇನ್ನಿತರ ಪ್ರವಾಹ ಪೀಡಿತ ಪ್ರದೇಶಗಳಿಗೆ ಭೇಟಿ ನೀಡಿದ್ದೇವೆ.

**(ಗೊಂದಲ)**

**ಶ್ರೀ ಜೆ.ಸಿ. ಮಾಧುಸ್ವಾಮಿ:–** ಮಾನ್ಯ ಸಭಾಪತಿಯವರೇ, ಸ್ಲೈಡ್ ಆಗಿರುವುದು...

**ಶ್ರೀ ಕೆ.ಎ. ತಿಪ್ಪೇಸ್ವಾಮಿ:–** ಮಾನ್ಯ ಸಭಾಪತಿಯವರೇ, ಗೋಕಾಕ್ ಟೌನ್‌ನಲ್ಲಿ ಬ್ರಿಡ್ಜ್ ಮೇಲೆ ಸುಮಾರು 30 ಅಡಿ ನೀರು 2 ದಿವಸ ಹರಿದಿದೆ. ಜೊತೆಗೆ, ಆ ಕಡೆ, ಈ ಕಡೆ ಸುಮಾರು 2 ಕಿಲೋಮೀಟರ್ ದೂರ ನೆರೆ ನಿಂತಿದೆ. ಕಬ್ಬು ಬೆಳೆ ಅಥವಾ ಇತರೆ ಬೆಳೆಗಳಲ್ಲಿ ಸುಮಾರು 10 ದಿವಸ ನೀರು ನಿಂತಿತ್ತು. ಇನ್ನು ರಾಜ್ಯ ಸರ್ಕಾರ ನೆರೆ ಹಾನಿ ಬಗ್ಗೆ ತಯಾರಿಸಿರುವ Memorandum ನಲ್ಲಿ ಒದಗಿಸಿರುವ ಡೇಟಾಗಳಿಗೆ ಮತ್ತು ಕೇಂದ್ರ ಸರ್ಕಾರದ *Inter-Ministerial Central Team* ತಯಾರಿಸಿರುವ ವರದಿಯಲ್ಲಿನ ಡೇಟಾಗಳಿಗೆ ಸಾಕಷ್ಟು ವ್ಯತ್ಯಾಸವಿದೆ. *Central Team* ರಾಜ್ಯ ಸರ್ಕಾರದಿಂದ clarifications ಕೇಳಿದೆ, reconciliation of figures ಕೇಳಿದೆ ಮತ್ತು certificates ಕೇಳಿದೆ. ಇಂತಹ ನ್ಯೂನತೆಗಳನ್ನು ಸರಿಪಡಿಸಬೇಕಾದರೆ ರಾಜ್ಯ ಸರ್ಕಾರಕ್ಕೆ ಸ್ವಲ್ಪ ಸಮಯ ಬೇಕಾಗುತ್ತದೆ. ಈ Central Committee recommendations ಅನ್ನು ಕಾಯುವ ಬದಲು ಕೇಂದ್ರ ಸರ್ಕಾರ ಮೊದಲೇ ಮಧ್ಯಂತರ ಆರ್ಥಿಕ ನೆರವು ನೀಡಬೇಕಾಗಿತ್ತು. ಇದು ನನ್ನ ಅನಿಸಿಕೆಯಾಗಿದೆ. ಆ ಕೆಲಸವನ್ನು ಕೇಂದ್ರ ಸರ್ಕಾರ ತ್ವರಿತವಾಗಿ ಮಾಡಲಿಲ್ಲ.

(ಮುಂದುವರೆದಿದೆ...)

(167)11.10.2019/5.30/ವೈಎಲ್–ಬಿಎನ್ಎಸ್ (ಸಭಾಪತಿಯವರ ಉಪಸ್ಥಿತಿ)

ಶ್ರೀ ಕೆ.ಎ.ತಿಪ್ಪೇಸ್ವಾಮಿ(ಮುಂದು):–

ಈಗಾಗಲೇ ಕೇಂದ್ರ ಸರ್ಕಾರ ನೀಡಿರತಕ್ಕಂಥ ಮಧ್ಯಂತರ ಆರ್ಥಿಕ ನೆರವು ಏನಿದೆ ಅದು ಕೇವಲ advance release from NDRF (National Disaster Response Force). ಮುಂದಿನ ವರ್ಷಗಳಲ್ಲಿ ಬರತಕ್ಕಂಥ ಕಂತುಗಳನ್ನು ಈ ವರ್ಷವೇ ಬಿಡುಗಡೆ ಮಾಡಿದೆ ಅಷ್ಟೇ. ಕೇಂದ್ರ ಸರ್ಕಾರವು ಯಾವುದೇ ರೀತಿಯ ಬೇರೆ ಸಂಪನ್ಮೂಲಗಳಿಂದ ಈ ಮಧ್ಯಂತರ ಆರ್ಥಿಕ ನೆರವನ್ನು ನೀಡಿರುವುದಿಲ್ಲ. ಪ್ರಕೃತಿ ವಿಕೋಪದಿಂದ ಅಥವಾ

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಪ್ರಳಯದಿಂದ ಆದ ಹಾನಿಯನ್ನು ಕೇವಲ ರಾಜ್ಯ ಸರ್ಕಾರವೇ ನಿಭಾಯಿಸುವುದು ಕಷ್ಟ. ಆದ್ದರಿಂದ ಕೇಂದ್ರ ಸರ್ಕಾರ ಇದರ ಬಗ್ಗೆ ಉದಾಸೀನತೆ ತೋರದೆ ರಾಜ್ಯದ ನೆರವಿಗೆ ಬರಬೇಕು. ಸತತವಾಗಿ ಕಳೆದ 2 ವರ್ಷಗಳಿಂದ ಅತಿವೃಷ್ಟಿ ಮತ್ತು ನೆರೆ ಹಾವಳಿಯಿಂದ ರಾಜ್ಯ ತತ್ತರಿಸಿ ಹೋಗಿದ್ದು, ನಾವು ಈಗ ಏನು assistance ಬೇಕೆಂಬುದರ ಸಲುವಾಗಿ SDRF (State Disaster Response Fund) ಪ್ರಕಾರ, NDRF Norms ಪ್ರಕಾರ ಸುಮಾರು 38 ಸಾವಿರ ಕೋಟಿ ರೂಪಾಯಿಗಳನ್ನು ಕೇಳಿದ್ದೇವೆ. ಆದರೆ, actually, ಆಗಿರತಕ್ಕಂಥ ಎಸ್ಟಿಮೇಟ್ ಪ್ರಕಾರ 1 ಕೋಟಿ ರೂಪಾಯಿಗಳಿಗೂ ಅಧಿಕವಾಗಿ ನಷ್ಟವಾಗಿದೆ.

**ಶ್ರೀ ಜೆ.ಸಿ.ಮಾಧುಸ್ವಾಮಿ(ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಇಲಾಖೆ):–** ಮಾನ್ಯ ಸಭಾಪತಿಯವರೇ, ಹೌದು.

**ಶ್ರೀ ಕೆ.ಎ.ತಿಪ್ಪೇಸ್ವಾಮಿ(ನಾಮನಿರ್ದೇಶನ ಹೊಂದಿದವರು):–** ಮಾನ್ಯ ಸಭಾಪತಿಯವರೇ, ಅದಕ್ಕೆ ಕಾರಣವೇನೆಂಬುದನ್ನು ನಾನೇ ಮುಂದೆ ಹೇಳುತ್ತೇನೆ.

**ಶ್ರೀ ಜೆ.ಸಿ.ಮಾಧುಸ್ವಾಮಿ(ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಇಲಾಖೆ):–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು estimation and Bill ಮಾಡುವುದರಲ್ಲಿ ಬಹಳ ಮೇಧಾವಿ ಇಲಾಖೆಯಲ್ಲಿದ್ದವರು. We depend on the Department's estimation only.

**ಶ್ರೀ ಕೆ.ಎ.ತಿಪ್ಪೇಸ್ವಾಮಿ(ನಾಮನಿರ್ದೇಶನ ಹೊಂದಿದವರು):–** ನಾನು ಹೇಳುತ್ತಿರುವುದು estimated cost ಅಲ್ಲ . . . .

**ಶ್ರೀ ಜೆ.ಸಿ.ಮಾಧುಸ್ವಾಮಿ:–** ಮಾನ್ಯ ಸಭಾಪತಿಯವರೇ, ನಮಗೆ, crop loss is estimated at Rs.1,035 Crores. ಈಗಾಗಲೇ ನಾವು out of Rs.1,200 Crores, 1035 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಲು ತಿಳಿಸಿದ್ದು, ಈ ಅಧಿವೇಶನ ಮುಗಿದ ತಕ್ಷಣ ಆ ಕೆಲಸವನ್ನು ಮಾಡಲಾಗುತ್ತದೆ. ಅದಕ್ಕಿಂತ ಜಾಸ್ತಿ ಹಣವನ್ನು ಒದಗಿಸಬೇಕೆಂಬ ಬೇಡಿಕೆ ಏನಿದೆ, we decide it depending upon the exchequer.

**ಶ್ರೀ ಕೆ.ಎ.ತಿಪ್ಪೇಸ್ವಾಮಿ(ನಾಮನಿರ್ದೇಶನ ಹೊಂದಿದವರು):–** ಮಾನ್ಯ ಸಭಾಪತಿಯವರೇ, ನಾನು ಹೇಳುವುದೇನೆಂದರೆ, ಕೇಂದ್ರ ಸರ್ಕಾರ ಜಾಸ್ತಿ ಹಣವನ್ನು ಒದಗಿಸುವ ವಿಚಾರ ಬೇರೆ. (**ಗೊಂದಲ**) ವಾಸ್ತವವಾಗಿ ಎಲ್ಲಿ ಸಮಸ್ಯೆಯಾಗಿದೆ, ಅಂತಹ ಕಡೆಗಳಿಗೆ ಸರ್ಕಾರದಿಂದ estimated cost ಭರಿಸಲಿ. ಇತಿಹಾಸದಲ್ಲಿಯೇ ಯಾವತ್ತು ಸಹ ಕೇಂದ್ರ ಸರ್ಕಾರ ಕೇಳಿದಷ್ಟು ಹಣವನ್ನು ನೀಡಿಲ್ಲ. ನಾನು ಸಹ Calamity Relief Fund ಸಂಸ್ಥೆಯಲ್ಲಿ 4 ವರ್ಷ ಸೇವೆ ಸಲ್ಲಿಸಿದ್ದೇನೆ. ಆದರೆ, ನೀಡತಕ್ಕಂಥ ಹಣದಲ್ಲಿ ವಾಸ್ತವ ಸಂಗತಿ ಏನಿದೆ ಎಂಬುದನ್ನು

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಏತಕ್ಕೆ ಅರಿತುಕೊಳ್ಳಬಾರದು? Moderate estimate ಪ್ರಕಾರ ಖಾಸಗಿ ಮತ್ತು ಇತರೆ ಆಸ್ತಿ-ಪಾಸ್ತಿಗಳಿಂದ ಉಂಟಾದ ನಷ್ಟ ಸುಮಾರು 1.00 ಕೋಟಿಗೂ ಮೀರಿದೆ. ಆದ್ದರಿಂದ ಪ್ರಕೃತಿ ವಿಕೋಪವನ್ನು ರಾಷ್ಟ್ರೀಯ ವಿಪತ್ತು ಎಂದು ಕೇಂದ್ರ ಸರ್ಕಾರ ಘೋಷಿಸಲು ಈ ಸದನ ಒಮ್ಮತದಿಂದ ನಿರ್ಣಯಿಸಬೇಕೆಂದು ಒತ್ತಾಯಿಸುತ್ತೇನೆ. ಈ ಬಗ್ಗೆ ನಮ್ಮ ರಾಷ್ಟ್ರದ ನಾಯಕರು ಹಾಗೂ ಮಾನ್ಯ ಮಾಜಿ ಪ್ರಧಾನ ಮಂತ್ರಿಗಳಾದ ಹೆಚ್.ಡಿ.ದೇವೇಗೌಡರು, ಇದರ ಬಗ್ಗೆ ಮಾನ್ಯ ಪ್ರಧಾನ ಮಂತ್ರಿಗಳಾದ ನರೇಂದ್ರ ಮೋದಿಯವರಿಗೆ ಮತ್ತು ಮಾನ್ಯ ಮುಖ್ಯಮಂತ್ರಿಗಳಾದ ಬಿ.ಎಸ್.ಯಡಿಯೂರಪ್ಪನವರಿಗೆ ಪತ್ರಗಳನ್ನು ಬರೆದು ಒತ್ತಾಯಿಸಿದ್ದಾರೆ. ಈ ರೀತಿ ಘೋಷಣೆಯಿಂದಾಗಿ ಕೇಂದ್ರ ಸರ್ಕಾರದ ಬೇರೆ ಬೇರೆ ಯೋಜನೆಗಳಿಂದ ಮತ್ತು ಮೂಲಗಳಿಂದ ಈ ಕೆಳಕಂಡ ಮೂಲಭೂತ ಸಂಸ್ಥೆಗಳನ್ನು ಪುನರ್ ನಿರ್ಮಾಣ ಮಾಡಲು ಮತ್ತು ನೆರೆ ಹಾವಳಿಯಿಂದ ನೊಂದ ಸಂತ್ರಸ್ತರಿಗೆ ಪುನರ್ ವಸತಿ ಕಲ್ಪಿಸಲು ಸಾಧ್ಯವಾಗುತ್ತದೆ. ನೆರೆ ಪೀಡಿತ ತಾಲ್ಲೂಕುಗಳನ್ನು ಪ್ರಕೃತಿ ವಿಕೋಪಕ್ಕೆ ತುತ್ತಾದ ತಾಲ್ಲೂಕುಗಳು ಎಂದು ಘೋಷಿಸಬೇಕು. ನೊಂದ ಸಂತ್ರಸ್ತರ ಕಂದಾಯವನ್ನು ಮತ್ತು ಸಾಲವನ್ನು ಮನ್ನಾ ಮಾಡಬೇಕು. ನೊಂದ ಸಂತ್ರಸ್ತರಿಗೆ ಸಹಕಾರ ಸಂಘಗಳ ಮತ್ತು ವಾಣಿಜ್ಯ ಬ್ಯಾಂಕುಗಳ ಮುಖಾಂತರ ಬಡ್ಡಿ ರಹಿತ ಸಾಲವನ್ನು ನೀಡುವುದು. ಪದೇ-ಪದೇ ನೆರೆ ಪೀಡಿತಕ್ಕೆ ಒಳಗಾಗುವ ಗ್ರಾಮಗಳ ನಿವಾಸಿಗಳನ್ನು ಸುರಕ್ಷಿತ ಸ್ಥಳಗಳಿಗೆ ಸ್ಥಳಾಂತರಿಸಿ ಪುನರ್ ವಸತಿ ಕಲ್ಪಿಸಬೇಕು. ಜಖಂಗೊಂಡಿರತಕ್ಕಂಥ ಶಾಲಾ ಕಟ್ಟಡಗಳು, ಅಂಗನವಾಡಿ ಕಟ್ಟಡಗಳು, ಆಸ್ಪತ್ರೆಗಳ ಪುನರ್ ನಿರ್ಮಾಣಕ್ಕೆ ಅಗತ್ಯ ಕ್ರಮ ಕೈಗೊಳ್ಳಬೇಕು. ಏಕೆಂದರೆ, NDRF Norms ಪ್ರಕಾರ ಒಂದು ಕಟ್ಟಡ ದುರಸ್ತಿಗೊಳಗಾಗಿದ್ದರೆ ಕೇವಲ 2.00 ಲಕ್ಷ ರೂಪಾಯಿಗಳನ್ನು ಮಾತ್ರ ನೀಡುತ್ತಾರೆ. ಆ 2.00 ಲಕ್ಷ ರೂಪಾಯಿಗಳಲ್ಲಿ ಯಾವುದೇ ಕೆಲಸವನ್ನು ಮಾಡಿಸುವುದಕ್ಕೆ ಆಗುವುದಿಲ್ಲ. ಅದೇ ರೀತಿ ಹಾನಿಗೊಳಗಾಗಿರುವ ಮತ್ತು ಕುಸಿದು ಹೋಗಿರುವ ಸೇತುವೆಗಳ ಮತ್ತು ರಸ್ತೆಗಳ ನಿರ್ಮಾಣ ಮಾಡಲು ತುರ್ತಾಗಿ ಕ್ರಮ ಕೈಗೊಳ್ಳಬೇಕು. NDRF Norms ಪ್ರಕಾರ ಒಂದು ಕಿಲೋ ಮೀಟರ್‌ನಷ್ಟು ರಾಜ್ಯ ಹೆದ್ದಾರಿ ಅಥವಾ ರಾಷ್ಟ್ರೀಯ ಹೆದ್ದಾರಿ, MDR (Major District Road) ಹಾಳಾಗಿದ್ದರೆ ಕೇವಲ 1.25 ಲಕ್ಷಗಳನ್ನು ಮಾತ್ರ ನೀಡುತ್ತಾರೆ. ಈ ಹಣದಿಂದ ಕೇವಲ ರಿಪೇರಿ ಮಾಡಬಹುದೇ ವಿನಃ ಪುನರ್ ನಿರ್ಮಾಣ ಅಥವಾ restoration ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. ಪಶ್ಚಿಮ ಘಟ್ಟದ ಜಿಲ್ಲಾಗಳಾದ ಬೇಲೂರು, ಮೂಡಗೆರೆ, ಸಕಲೇಶಪುರ, ಅರಕಲಗೂಡು ತಾಲ್ಲೂಕುಗಳಲ್ಲಿ ಮತ್ತು ಕೊಡಗು, ಕಡಲ ತೀರದ ಜಿಲ್ಲೆಗಳಲ್ಲಿ ಅತಿವೃಷ್ಟಿ ಹಾಗೂ ನೆರೆ ಹಾವಳಿಯಿಂದ ಉಂಟಾದ land slide ನಿಂದಾಗಿ ಹಲವಾರು ರೈತರು ಮತ್ತು ಕಾಫಿ ಬೆಳೆಗಾರರು ತಮ್ಮ ಸರ್ವಸ್ವವನ್ನು ಕಳೆದುಕೊಂಡಿದ್ದಾರೆ. ಅವರ ವಾಸಸ್ಥಳದ ಭೂಮಿಗಳು ಸಂಪೂರ್ಣವಾಗಿ ಕುಸಿದಿದ್ದು, ಅವರು ಆ ಭೂಮಿ ಮೇಲೆ ನೆಲೆಸುವುದಕ್ಕೆ ಸಾಧ್ಯವಾಗದಂತಾಗಿದೆ. ಇಂತಹ ಪ್ರಕರಣಗಳಿಂದಾಗಿ ರಾಜ್ಯ ಸರ್ಕಾರ ನೊಂದ

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸಂತ್ರಸ್ತರಿಗೆ ಬೇರೆ ಪುನರ್ ವಸತಿ ಕೇಂದ್ರಗಳನ್ನು ರೂಪಿಸಿ ಅಂದರೆ, project for rehabilitation ಅನ್ನು ತಯಾರಿಸಿ, ಅವರು ಜೀವನ ಪುನರ್ ಪ್ರಾರಂಭಿಸಲು ಸರ್ಕಾರ ಮುಂದಾಗಬೇಕೆಂದು ಕೋರುತ್ತೇನೆ.

**ಸಭಾಪತಿಯವರು:–** ಮಾನ್ಯ ಸದಸ್ಯರೇ, ಈಗಾಗಲೇ ತಾವೂ ಮಾತನಾಡಲು ಪ್ರಾರಂಭಿಸಿ 15 ನಿಮಿಷವಾಗಿದೆ.

**ಶ್ರೀ ಕೆ.ಎ.ತಿಪ್ಪೇಸ್ವಾಮಿ:–** ಮಾನ್ಯ ಸಭಾಪತಿಯವರೇ, ಕೇವಲ 2 ನಿಮಿಷದಲ್ಲಿ ನನ್ನ ಮಾತನ್ನು ಮುಗಿಸುತ್ತೇನೆ. ಈ ರೀತಿಯ ಪ್ರಾಜೆಕ್ಟ್‌ಗಳನ್ನು ತಯಾರು ಮಾಡುವುದರಿಂದ ಬೇರೆ–ಬೇರೆ private Foundations ಗಳು, ಕಂಪನಿಗಳು, ಕಾರ್ಪೋರೇಷನ್‌ಗಳು, Government Undertakings ಇವೆ. ಇವುಗಳಲ್ಲಿ Corporate social responsibility ಗಾಗಿ ಹಣವನ್ನು ಮೀಸಲಿಟ್ಟಿದ್ದು, ಅಂತಹ ಹಣವನ್ನು attract ಮಾಡಿ, ಅಂತಹ ಹಣವನ್ನು ಆ project ಗಾಗಿ ನೀಡಬಹುದು. ಅದಲ್ಲದೇ ಹಾನಿಗೊಳಗಾಗಿರುವ ಸಣ್ಣ ನೀರಾವರಿ ಕೆರೆಗಳು, ಕಾಲುವೆಗಳ ಪುನರ್ ನಿರ್ಮಾಣ, ದುರಸ್ತಿ ಕಾರ್ಯ, ಅತ್ಯವಶ್ಯ. ಆದ್ದರಿಂದ ಈ ಇಲಾಖೆಗಳಿಗೆ ಅವಶ್ಯಕವಿರುವ ಹಣವನ್ನು ಈ ವರ್ಷದ ಆಯವ್ಯಯದಲ್ಲಿ ಒದಗಿಸಿ ಕೊಡಬೇಕೆಂದು ಒತ್ತಾಯಿಸುತ್ತೇನೆ. ಕೇಂದ್ರ ಸರ್ಕಾರದಿಂದ ಹೆಚ್ಚಿನ ಆರ್ಥಿಕ ನೆರವನ್ನು ಪಡೆಯಲು ಮಾನ್ಯ ಮುಖ್ಯಮಂತ್ರಿಗಳು ಒಂದು ಸರ್ವ ಪಕ್ಷಗಳ ನಿಯೋಗವನ್ನು ದೆಹಲಿಗೆ ಕೊಂಡೊಯ್ಯಲು ನಿರ್ಣಯಿಸಬೇಕೆಂದು ತಮ್ಮ ಮೂಲಕ ಪ್ರಾರ್ಥಿಸುತ್ತೇನೆ. ನನಗೆ ಮಾತನಾಡಲು ಕಾಲಾವಕಾಶ ನೀಡಿರುವುದಕ್ಕೆ ಧನ್ಯವಾದಗಳನ್ನರ್ಪಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

**ಶ್ರೀ ಕೋಟ ಶ್ರೀನಿವಾಶ ಪೂಜಾರಿ(ಸಭಾನಾಯಕರು):–** ಮಾನ್ಯ ಸಭಾಪತಿಯವರೇ, ಒಂದು ನಿಮಿಷ ನಿನ್ನೆ ನಾನು ಮರೆತು ಬಿಟ್ಟೆ. ಪಶುಸಂಗೋಪನಾ ಮತ್ತು ಅಬಕಾರಿ ಸಚಿವರಾದ ಮಾನ್ಯ ಪ್ರಭು ಚೌಹಾಣ್‌ರವರು ಸದನದ ಉಪಸ್ಥಿತರಾಗಿದ್ದು, ಅವರನ್ನು ಸದನಕ್ಕೆ ಪರಿಚಯಿಸುತ್ತಿದ್ದೇನೆ.

“ ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

9. ವಿಶೇಷ ಪ್ರಸ್ತಾವನೆ ಅಡಿಯಲ್ಲಿ ಪ್ರಸ್ತಾಪಿಸಲ್ಪಟ್ಟ ವಿಷಯಕ್ಕೆ ಸಚಿವರ ಲಿಖಿತ ಹೇಳಿಕೆ.

**ಅ) ವಿಶ್ವ ಜಾಗತಿಕ ವಸತಿ ರಹಿತರ ದಿನಾಚರಣೆ ಅಂಗವಾಗಿ ವಸತಿಗೃಹ ಮತ್ತು ಪ್ರಯಾಣಿಕರ ತಂಗುದಾಣ ನಿರ್ಮಾಣ ಕುರಿತು.**

****

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು):–** ಮಾನ್ಯ ಸಭಾಪತಿಯವರೇ, ದಿನಾಂಕ: 10.10.2019 ರಂದು ನಿಯಮ 330ರ ಎ ರಡಿಯಲ್ಲಿ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಆರ್.ಚೌಡರೆಡ್ಡಿ ತೂಪಲ್ಲಿಯವರು ಕೇಳಿದ ಪ್ರಶ್ನೆಗೆ ಮಾನ್ಯ ಮುಖ್ಯಮಂತ್ರಿಗಳ ಪರವಾಗಿ ಉತ್ತರವನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ.

**(ಉತ್ತರವನ್ನು ಲಗತ್ತಿಸಲಾಗಿದೆ)**

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಆ) ವಿಷಯ:– ಮಂಗಳೂರು ಮಹಾನಗರ ಪಾಲಿಕೆ ಚುನಾಯಿತ ಆಡಳಿತ ಮಂಡಳಿ ಮುಕ್ತಯಗೊಂಡಿರುವ ಹಿನ್ನಲೆಯಲ್ಲಿ ಅಭಿವೃದ್ಧಿ ಕಾಮಗಾರಿಗಳು ಸ್ಥಗಿತಗೊಂಡಿರುವ ಬಗ್ಗೆ.**

**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು):–** ಮಾನ್ಯ ಸಭಾಪತಿಯವರೇ, ದಿನಾಂಕ: 10.10.2019 ರಂದು ನಿಯಮ 330ರ ಎ ರಡಿಯಲ್ಲಿ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಐವನ್ ಡಿ'ಸೋಜಾರವರು ಕೇಳಿದ ಪ್ರಶ್ನೆಗೆ ಮಾನ್ಯ ಮುಖ್ಯಮಂತ್ರಿಗಳ ಪರವಾಗಿ ಉತ್ತರವನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ.

**(ಉತ್ತರವನ್ನು ಲಗತ್ತಿಸಲಾಗಿದೆ)**

**ಸಭಾಪತಿಯವರು:–** ಮಂಡಿಸಲಾಯಿತು.

**10. ಪ್ರಕಟಣೆಗಳು**

ಅ) ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ವಿವೇಕ್‌ರಾವ್ ವಸಂತರಾವ್ ಪಾಟೀಲ್‌ರವರು ಅನಿವಾರ್ಯ ಕಾರಣಗಳಿಂದಾಗಿ ವಿಧಾನ ಪರಿಷತ್ತಿನ 139ನೇ ಅಧಿವೇಶನದ ದಿನಾಂಕ: 10.10.2019 ರಿಂದ 12.10.2019 ರ ವರೆಗಿನ ಉಪವೇಶನಗಳಲ್ಲಿ ಭಾಗವಹಿಸಲು ಸಾಧ್ಯವಾಗುತ್ತಿಲ್ಲವಾದ ಕಾರಣ ಹಾಜರಾತಿ ವಿನಾಯಿತಿ ನೀಡಬೇಕೆಂದು ಕೋರಿರುತ್ತಾರೆ.

ಸದರಿಯವರ ಗೈರು ಹಾಜರಿಗೆ ಸದನದ ಸಹಮತಿ ಇದೆಯೆಂದು ಭಾವಿಸುತ್ತೇನೆ.

**ಆ) ಕಾರ್ಯಕಲಾಪಗಳ ಸಲಹಾ ಸಮಿತಿಯ ವರದಿ**

ಈ ದಿನ ಅಂದರೆ ದಿನಾಂಕ: 11.10.2019 ರಂದು ನಡೆದ ಕಾರ್ಯಕಲಾಪಗಳ ಸಲಹಾ ಸಮಿತಿಯ ಸಭೆಯಲ್ಲಿ ಈ ಕೆಳಕಂಡಂತೆ ಕಾರ್ಯಕಲಾಪಗಳನ್ನು ನಡೆಸಲು ತೀರ್ಮಾನಿಸಲಾಯಿತು.

1) ರಾಜ್ಯದಲ್ಲಿ ಭಾರಿ ಮಳೆ ಮತ್ತು ಪ್ರವಾಹದಿಂದ ಉಂಟಾಗಿರುವ ಅನಾಹುತದಿಂದ ಸಂಕಷ್ಟಕ್ಕೀಡಾಗಿರುವ ಜನರಿಗೆ ಪರಿಹಾರ ಒದಗಿಸುವ ಕುರಿತು ಚರ್ಚೆ ಹಾಗೂ ಸರ್ಕಾರದಿಂದ ಉತ್ತರ.

2) ಹಣಕಾಸು/ಧನವಿನಿಯೋಗ ವಿಧೇಯಕಗಳ ಮಂಡನೆ, ಪರ್ಯಾಲೋಚನೆ ಮತ್ತು ಅಂಗೀಕಾರ.

ಕಾರ್ಯಕಲಾಪಗಳ ಸಲಹಾ ಸಮಿತಿಯ ಈ ವರದಿಗೆ ಸದನದ ಅಂಗೀಕಾರ ಇದೆ ಎಂದು ಭಾವಿಸುತ್ತೇನೆ.

ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

11. ನಿಯಮ 68ರ ಮೇರೆಗೆ ಸಾರ್ವಜನಿಕ ಮಹತ್ವದ ವಿಷಯದ ಮೇಲಿನ ಮುಂದುವರೆದ ಚರ್ಚೆ.

ರಾಜ್ಯದಲ್ಲಿ ಭಾರಿ ಮಳೆ ಮತ್ತು ಪ್ರವಾಹದಿಂದಾಗಿ ಉಂಟಾಗಿರುವ ಅನಾಹುತದಿಂದ ಸಂಕಷ್ಟಕ್ಕೀಡಾಗಿರುವ ಜನರಿಗೆ ಪರಿಹಾರ ಒದಗಿಸುವಲ್ಲಿ ಸರ್ಕಾರವು ವಿಫಲವಾಗಿರುವ ಬಗ್ಗೆ.

**ಶ್ರೀ ತಿಪ್ಪಣ್ಣ ಕಮಕನೂರ (ನಾಮನಿರ್ದೇಶನ ಹೊಂದಿದವರು):-** ಮಾನ್ಯ ಸಭಾಪತಿಯವರೇ, ನನಗೆ ಬರ ಪರಿಹಾರದ ಬಗ್ಗೆ ಮಾತನಾಡಲು ಅವಕಾಶ ಕಲ್ಪಿಸಿದ್ದಕ್ಕಾಗಿ ಧನ್ಯವಾದಗಳು. ಮೊದಲನೆಯದಾಗಿ ತಮ್ಮಲ್ಲಿ ಒಂದು ಮನವಿ ಮಾಡುವುದೇನೆಂದರೆ, ವಿರೋಧ ಪಕ್ಷದವರ ಸಲಹೆ-ಸೂಚನೆಗಳನ್ನು ಶಾಂತ ರೀತಿಯಲ್ಲಿ ಪೂರ್ವಕವಾಗಿ ಕೇಳಬೇಕು. ನಾನು ತಮ್ಮಲ್ಲಿ ಬೇಡಿಕೊಳ್ಳುವುದೇನೆಂದರೆ, ಸರಳತೆ, ತಾಳ್ಮೆ, ದಯೆ ಈ ಮೂರು ಆಡಳಿತ ಪಕ್ಷದವರ ಶ್ರೇಷ್ಠ ಸಂಪತ್ತು ಆಗಿರಬೇಕು. ವಿರೋಧ ಪಕ್ಷದವರು ಸಲಹೆ-ಸೂಚನೆಗಳನ್ನು ನೀಡಬೇಕಾದರೆ ಆಡಳಿತ ಪಕ್ಷದವರು ತಾಳ್ಮೆಯಿಂದ ಕೇಳುವಂತಹ ಕೆಲಸ ಮಾಡಬೇಕು. ಆಳುವ ಪಕ್ಷಕ್ಕೆ ಕೇಳುವ ಪಕ್ಷ ಇಲ್ಲದಿದ್ದರೆ ಆಡಳಿತವೂ ನಿರಂಕುಶವಾಗಿ ಜನ ಜೀವನವನ್ನೇ ಅಸ್ಥಿರಗೊಳಿಸುತ್ತದೆ ಎಂಬ ಮಾತನ್ನು ಹಿರಿಯರು ಹೇಳುತ್ತಾರೆ. ನಿನ್ನೆ ಕಂದಾಯ ಸಚಿವರು ಹೇಳಿದ ಹಾಗೆ ಗುಲ್ಬರ್ಗಾ ಜಿಲ್ಲೆಯಲ್ಲಿ ಸುಮಾರು 118 ವರ್ಷಗಳ ಬಳಿಕ ಭೀಮಾ ನದಿಗೆ ಮಹಾರಾಷ್ಟ್ರದಿಂದ ಭಾರಿ ಪ್ರಮಾಣದ ಪ್ರವಾಹ ಬಂದು ಬಹಳಷ್ಟು ಜನ ಸಂಕಷ್ಟಕ್ಕೆ ಒಳಗಾಗಿದ್ದಾರೆ. ನಮ್ಮ ವಿರೋಧ ಪಕ್ಷದ ನಾಯಕರಾದ ಮಾನ್ಯ ಎಸ್.ಆರ್. ಪಾಟೀಲ್‌ರವರು ಮತ್ತು ವಿರೋಧ ಪಕ್ಷದ ಗೌರವಾನ್ವಿತ ಸದಸ್ಯರೆಲ್ಲರೂ ಸರ್ಕಾರಕ್ಕೆ ಮನ ಮುಟ್ಟುವಂತಹ ರೀತಿಯಲ್ಲಿ ಸರ್ಕಾರಕ್ಕೆ ಕರುಣೆ ಬರಬೇಕು ಹಾಗೂ ತಕ್ಷಣ ಕ್ರಮ ಕೈಗೊಳ್ಳಬೇಕು.

(ಮುಂದು) . . .

(168)/11.10.2019/5.40/ಎಸ್‌ಕೆ-ಬಿಎನ್‌ಎಸ್

**(ಸಭಾಪತಿಯವರ ಉಪಸ್ಥಿತಿ)**

**ಶ್ರೀ ತಿಪ್ಪಣ್ಣ ಕಮಕನೂರ (ಮುಂದು):-**

ಮಾನ್ಯ ಸಭಾಪತಿಯವರೇ, ಪರಿಹಾರ ಕಾರ್ಯಕ್ರಮಗಳನ್ನು ಕೈಗೊಂಡು ಮುಂದೆ ಆಗುವಂತಹ ಅನಾಹುತಗಳನ್ನು ತಪ್ಪಿಸಬೇಕು. ಮಾನ್ಯ ಸದಸ್ಯರು ಪರಿಹಾರದ ಬಗ್ಗೆ ಈಗಾಗಲೇ ಅತ್ಯಂತ ಪ್ರಮಾಣಿಕವಾಗಿ ಸಲಹೆ ಸೂಚನೆಯನ್ನು ಕೊಟ್ಟಿದ್ದಾರೆ. ಆದರೆ, ನಮ್ಮ ಉತ್ತರ ಕರ್ನಾಟಕದ ಜನರ ಕಣ್ಣಲ್ಲಿ ನೀರು ಬರುತ್ತಾ ಇಲ್ಲ, ರಕ್ತ ಕಣ್ಣೀರು ಸುರೀತಾ ಇದೆ. ಅವರನ್ನು ಗೋಳು ಉಯ್ದುಕೊಂಡ್ರೆ, ಯಾವ ಸರ್ಕಾರವೂ ಶಾಶ್ವತವಾಗಿ ಇರುವುದಿಲ್ಲ. ಅವರ ಶಾಪ ತಟ್ಟೇ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ತಟ್ಟುತ್ತದೆ. ಅವರೇನು ಭಿಕ್ಷೆ ಕೇಳ್ತಾ ಇಲ್ಲ. ಮನೆ ಮಠ ಕಳೆದುಕೊಂಡು ಬೀದೀಲಿ ಬಿದ್ದಿದ್ದಾರೆ. ಈಗ ಕೊಟ್ಟಿರುವ 10 ಸಾವಿರ ರೂಪಾಯಿಗಳೇ ಸಾಕು ಎನ್ನುವಂತೆ ಮಾನ್ಯ ಈಶ್ವರಪ್ಪನವರು ಮಾತನಾಡುತ್ತಾರೆ. ಮಾನ್ಯ ಈಶ್ವರಪ್ಪನವರ ಹೊಟ್ಟೆ ತುಂಬಿರಬಹುದು. ಆದರೆ, ನಮ್ಮ ಜನ, ತಿಂಗಳುಗಟ್ಟಲೇ, ಬರೀ ಬಿಸ್ಕೆಟ್‌ಗಳನ್ನು ತಿಂದು, ಜೀವ ಕೈಯಲ್ಲಿ ಹಿಡಿದುಕೊಂಡಿದ್ದಾರೆ. ಉತ್ತರ ಕರ್ನಾಟಕದಲ್ಲಿ ಪ್ರವಾಹದಿಂದ 38 ಸಾವಿರ ಕೋಟಿ ರೂಪಾಯಿ ನಷ್ಟವಾಗಿದೆ ಎಂದು ಮಾನ್ಯ ಮುಖ್ಯಮಂತ್ರಿಗಳೇ ಅಕ್ಟೋಬರ್ 29 ರಂದು ಹೇಳಿದ್ದಾರೆ. ಆದರೆ ಒಂದೇ ದಿನದಲ್ಲಿ ಪರಿಹಾರ ಸಿಗುವ ನಿರೀಕ್ಷೆ ಇದೆಯೆಂದು ಅವರು ಕೂಡ ಹೇಳಿದ್ದರು.

**ಶ್ರೀ ರಘುನಾಥ್ ರಾವ್ ಮಲ್ಕಾಪೂರೆ (ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಮಾನ್ಯ ಈಶ್ವರಪ್ಪನವರು ಮತ್ತು ಮಾನ್ಯ ಮುಖ್ಯಮಂತ್ರಿಯವರು ಹೇಳಿದ್ದಾರೆಂಬುದು ತಪ್ಪಿದೆ. ಇದು ಸತ್ಯಕ್ಕೆ ದೂರವಾದುದು. ದಯವಿಟ್ಟು, ಕಡತದಿಂದ ತೆಗೆದು ಹಾಕಬೇಕು.

**ಶ್ರೀ ತಿಪ್ಪಣ್ಣ ಕಮಕನೂರ:–** ನಾನೇ ಮಾತನಾಡಬೇಕೆಂದು ಇದ್ದೇನೆ. ಆದಾದ ನಂತರ, ತಾವು ದಯವಿಟ್ಟು. ರಿಪ್ಲೈ ಮಾಡಿ. ನಾನು ಮಾತನಾಡುವುದನ್ನು ಮೊದಲು ಕೇಳಿ.

**(ಗೊಂದಲ)**

**ಶ್ರೀ ಕೆ.ಎ. ತಿಪ್ಪೇಸ್ವಾಮಿ (ನಾಮ ನಿರ್ದೇಶಿತರು):–** ಅವರು ಹೇಳಿರುವುದು ಸತ್ಯ. ...

**(ಗೊಂದಲ)**

**ಶ್ರೀ ಎಂ. ನಾರಾಯಣಸ್ವಾಮಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ಈ ಮಾತನ್ನು ಅವರು ಮಾತನಾಡಿರುವ ಬಗ್ಗೆ ಎಲ್ಲಾ ಮಾಧ್ಯಮಗಳಲ್ಲೂ ಕೂಡ ಬಂದಿದೆ. ಸರ್ಕಾರದವರು ಪಾಸಿಟಿವ್ ಆಗಿ ತೆಗೆದುಕೊಳ್ಳಲಿ.

**(ಗೊಂದಲ)**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ವಿರೋಧ ಪಕ್ಷದ ನಾಯಕರು):–** ಮಾನ್ಯ ಸದಸ್ಯರು ಹೇಳಿತ್ತಿರುವುದು ಸರಿಯಲ್ಲ.

**(ಗೊಂದಲ)**

**ಶ್ರೀ ತಿಪ್ಪಣ್ಣ ಕಮಕನೂರ:–** ಮಾನ್ಯ ಸಭಾಪತಿಯವರೇ, ನಾನು ಮಾತನಾಡುವಾಗ ಆಡಳಿತ ಪಕ್ಷದವರಿಗೆ ತಾಳ್ಮೆ ಇರಲಿ, ನನ್ನ ಮಾತಿನಲ್ಲಿ ಏನಾದರೂ ತಪ್ಪಾದರೆ, ಅದರ ಬಗ್ಗೆ ಪರಾಮರ್ಶೆ ಮಾಡಲಿ ಎಂದು ಹೇಳಿದ್ದೇನೆ.

**(ಗೊಂದಲ)**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ವಿರೋಧ ಪಕ್ಷದ ನಾಯಕರು):–** ಮಾನ್ಯ ಸದಸ್ಯರು ಹೇಳಿದಂತಹ ಮಾತನ್ನು ನಾವು ಪ್ರೀತಿಯಿಂದ ಕೇಳುತ್ತಿದ್ದೇವೆ. ದಯವಿಟ್ಟು ಒಂದು ನಿಮಿಷ ನನ್ನ ಮಾತು ಕೇಳಿ.

**(ಗೊಂದಲ)**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ತಿಪ್ಪಣ್ಣ ಕಮಕನೂರ:-** ಎಲ್ಲವನ್ನು ಈ ರೀತಿ ಪ್ರತಿರೋಧ ಮಾಡುವುದರಿಂದ, ವಿರೋಧ ಪಕ್ಷದವರ ಹಕ್ಕನ್ನು ತಾವು ಮೊಟಕುಗೊಳಿಸುತ್ತದ್ದೀರಿ.

**(ಗೊಂದಲ)**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ದಯವಿಟ್ಟು ಒಂದು ನಿಮಿಷ ಕೇಳಿ.

**ಶ್ರೀ ತಿಪ್ಪಣ್ಣ ಕಮಕನೂರ:-** ಮಾನ್ಯ ಈಶ್ವರಪ್ಪನವರೇ ಹೇಳಿದ್ದನ್ನೇ ನಾನು ಹೇಳತ್ತಿದ್ದೇನೆ. ನಾನು ಬೇರೆ ತಪ್ಪೇನೂ ಹೇಳಿಲ್ಲ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಅಯ್ಯೋ ದೇವರೇ! ಕೇಳಿ.

**ಶ್ರೀ ತಿಪ್ಪಣ್ಣ ಕಮಕನೂರ:-** ಮಾನ್ಯ ಸಭಾಪತಿಯವರೇ, ಪ್ರವಾಹ ಬಂದು ತಿಂಗಳುಗಟ್ಟಲೇ ಆದರೂ, ಪ್ರಧಾನಿ ಮೋದಿ ಅವರಿಗೆ ...

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸದಸ್ಯರು ಏನು ಬೇಕಾದರೂ ಹೇಳಬಹುದಾ? ಇದು ಯಾವ ನ್ಯಾಯ? ಅವರು ಹೇಳಿದ್ದನ್ನು..

**(ಗೊಂದಲ)**

**ಶ್ರೀ ಎಂ. ನಾರಾಯಣಸ್ವಾಮಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಈಶ್ವರಪ್ಪನವರು ಕಾರಿನಲ್ಲಿ ಕುಳಿತುಕೊಂಡು ಹೋಗುತ್ತಿರುವಾಗ, ಜನರು ಅವರ ಹಿಂದೆ ಓಡಿ ಬರುತ್ತಿರುವುದನ್ನು ಮಾಧ್ಯಮಗಳಲ್ಲಿ ತೋರಿಸುತ್ತಿದ್ದಾರೆ. ಇದು ಸತ್ಯ. ಇದಕ್ಕೆ ಏಕೆ ಸಮರ್ಥನೆ ಮಾಡಿಕೊಳ್ಳುತ್ತೀರಿ. ದಯವಿಟ್ಟು, ಗಂಭೀರವಾಗಿ ಚರ್ಚೆಯಾಗುತ್ತಿದೆ. ಪ್ರತಿಯೊಂದಕ್ಕೂ ವಿರೋಧ ಪಕ್ಷದವರಂತೆ ಮಾತನಾಡಬೇಡಿ.

**(ಗೊಂದಲ)**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸದಸ್ಯರಿಗೆ ಮಾತನಾಡಲು ಅವಕಾಶವನ್ನು ಮಾಡಿಕೊಟ್ಟಿದ್ದೀರಿ. ಅವರು ಮಾತನಾಡಲಿ. ಮಾನ್ಯ ಪುಣ್ಯಾತ್ಮರೇ, ಒಂದು ನಿಮಿಷ ತಡೆದುಕೊಳ್ಳಿ. ಈ ಸದನದ ಸಂಪ್ರದಾಯವೇನೆಂದರೆ, ಯಾರಾದರೂ ಸರ್ಕಾರದ ಪರವಾಗಿ ಎದ್ದು ನಿಂತುಕೊಂಡು ಮಾತನಾಡಿದರೆ, ಒಂದು ನಿಮಿಷ ಮಾತನಾಡುವುದಕ್ಕೆ ಅವರಿಗೆ ಅವಕಾಶ ಮಾಡಿಕೊಡಬೇಕು. ಮಾನ್ಯ ಸಭಾಪತಿಯವರೇ ನಾನು ಹೇಳುವುದೇನೆಂದರೆ, ಪ್ರಾರಂಭದಲ್ಲಿಯೇ ಮಾನ್ಯ ಸದಸ್ಯರು ಮಾತನಾಡುವಾಗ ಅತ್ಯಂತ ತಾಳ್ಮೆಯಿಂದ ಕೇಳುತ್ತಿದ್ದೇವೆ. ಮಾನ್ಯ ಸದಸ್ಯರು ಆರಂಭದಲ್ಲಿ ಮಾತನಾಡುವಾಗ ಪ್ರಜಾಪ್ರಭುತ್ವದ ವ್ಯವಸ್ಥೆಯಲ್ಲಿ ವಿರೋಧ ಪಕ್ಷಗಳು ಅತ್ಯಂತ ಜವಾಬ್ದಾರಿಯಿಂದ ಕೆಲಸ ಮಾಡುತ್ತವೆ. ಆಳುವವರನ್ನು ಕೇಳುವ ಜವಾಬ್ದಾರಿ ವಿರೋಧ ಪಕ್ಷದವರಿಗೆ ಇರುತ್ತದೆ. ಆದ್ದರಿಂದ, ದಯವಿಟ್ಟು ತಾಳ್ಮೆಯಿಂದ ಕೇಳಬೇಕು ಎನ್ನುವಂತಹ ಮಾತನ್ನು ಮಾನ್ಯ ಸದಸ್ಯರು ಹೇಳಿದ್ದಾರೆ. ನಾವು ಅವರ ಮಾತನ್ನು ಪ್ರೀತಿಯಿಂದ ಮತ್ತು ಗೌರವದಿಂದ ಕೇಳುತ್ತಿದ್ದೇವೆ. ಮಾನ್ಯ

" ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಸದಸ್ಯರು ಮಾತನಾಡುವಾಗ ಮಧ್ಯದಲ್ಲಿ 'ಮಾನ್ಯ ಈಶ್ವರಪ್ಪನವರೇ ನಿಮ್ಮ ಹೊಟ್ಟೆ ತುಂಬಿರಬಹುದು' ಎನ್ನುವ ಮಾತನ್ನು ಹೇಳಿದರು. ದಯವಿಟ್ಟು, ಆ ತರಹದ ಪದಗಳನ್ನು ಬಳಸಬಾರದು ಎಂಬುದು ನಮ್ಮೆಲ್ಲರ ವಿನಂತಿಯಾಗಿದೆ. ದಯವಿಟ್ಟು, ಮಾನ್ಯ ಸದಸ್ಯರು ತಮ್ಮ ಮಾತನ್ನು ಮುಂದುವರೆಸಲಿ.

**ಶ್ರೀ ಎನ್. ರವಿಕುಮಾರ್:-** ಮಾನ್ಯ ಸಭಾಪತಿಯವರೇ, ಮಾನ್ಯ ಈಶ್ವರಪ್ಪನವರ ಬಗ್ಗೆ ಹೇಳಿರುವುದು ಕಡತಕ್ಕೆ ಹೋಗಬಾರದು.

**ಶ್ರೀ ಧರ್ಮಸೇನ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಪ್ರತಿಯೊಂದು ಮಾತಿಗೆ objection ಮಾಡಿದರೆ, ಅದನ್ನು ಕಡತದಿಂದ ತೆಗೆಯಿರಿ ಎಂದರೆ ಹೇಗೆ?

**ಶ್ರೀ ಟಿ.ಎ. ಶರವಣ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭನಾಯಕರಿಗೆ ನಾವು ಕೇಳುವುದೇನೆಂದರೆ, ಮಾನ್ಯ ರವಿಕುಮಾರ್‌ರವರನ್ನು ಸಚಿವರನ್ನಾಗಿ ಮಾಡಿ ಮುಂದಿನ ಸಾಲಿನಲ್ಲಿ ಕೂರಿಸಿಬಿಡಿ. ಅವರು ಸರ್ಕಾರದ ಪರವಾಗಿ ಎಲ್ಲದಕ್ಕೂ ನಿಂತುಕೊಂಡು ಉತ್ತರವನ್ನು ಕೊಡುತ್ತಾರೆ. ದಯವಿಟ್ಟು, ಆ ಕೆಲಸವನ್ನು ಮಾಡಿ.

**(ಗೊಂದಲ)**

**ಶ್ರೀ ಐವನ್ ಡಿ'ಸೋಜಾ(ನಾಮನಿರ್ದೇಶಿತ ಹೊಂದಿದವರು):-** ಮಾನ್ಯ ರವಿಕುಮಾರ್‌ರವರು ಸಚಿವರಾಗುತ್ತಾರೆಂದು ಪತ್ರಿಕೆಯಲ್ಲಿ ಬಂದಿತ್ತು. ಆದರೆ ಸಚಿವರಾಗಲಿಲ್ಲ. ಅದಕ್ಕೆ ತಾವು ಬೇಸರಿಸಬೇಡಿ ಮತ್ತು ಇದಕ್ಕೆ ತಲೆಕೆಡಿಸಿಕೊಳ್ಳಬೇಡಿ. ಈಗ ತಾವು ದಯವಿಟ್ಟು ಸ್ವಲ್ಪ ಸುಮ್ಮನಿರಿ.

**ಶ್ರೀ ತಿಪ್ಪಣ್ಣ ಕಮಕನೂರ:-** ಮಾನ್ಯ ಸಭಾಪತಿಯವರೇ, ಪ್ರವಾಹ ಬಂದು ತಿಂಗಳುಗಟ್ಟಲೇ ಆದರೂ, ಪ್ರಧಾನಿ ಮೋದಿ ಎಂದ ಕೂಡಲೇ ತಾವು ಏತಕ್ಕೆ ಸಿಟ್ಟು ಆಗುತ್ತೀರಿ? ಅವರು ನಮ್ಮ ಹಾಗೂ ನಿಮ್ಮ ಪ್ರಧಾನ ಮಂತ್ರಿಗಳು. ಈ ಹಿಂದೆ ಇದ್ದಂತಹ ಮಾನ್ಯ ಮನಮೋಹನ್‌ಸಿಂಗ್‌ರವರು ಪ್ರಧಾನ ಮಂತ್ರಿಯಿದ್ದಾಗಲೂ ಕೂಡ ಅವರು ನಮ್ಮ ಮತ್ತು ನಿಮ್ಮ ಪ್ರಧಾನ ಮಂತ್ರಿಯಾಗಿದ್ದರು. ದಯವಿಟ್ಟು, ನನ್ನ ಮಾತನ್ನು ಕೇಳಿ. ಪ್ರಧಾನಿ ಮೋದಿಯವರಿಗೆ ಕರ್ನಾಟಕ ಎಲ್ಲಿದೆ ಎಂಬ ಬಗ್ಗೆ ನೆನಪೇ ಬರಲಿಲ್ಲ. ಆದರೆ ಬಿಹಾರದಲ್ಲಿ ಪ್ರವಾಹ ಬಂದ ದಿನವೇ ಟ್ವೀಟ್ ಮಾಡುತ್ತಾರೆ. 'ನಿಮ್ಮ ಜೊತೆ ನಾನಿದ್ದೇನೆ' ಎನ್ನುತ್ತಾರೆ. ಹಾಗಾದರೆ, ಕರ್ನಾಟಕವೇನು ಭಾರತದಲ್ಲಿಲ್ಲವೇ? ಒಕ್ಕೂಟ ವ್ಯವಸ್ಥೆಗೆ ಮೋದಿಯವರು ಕೊಡುವ ಬೆಲೆ ಇದೇ ಏನು? ಮಾನ್ಯ ಪೂಜಾರಿಯವರೇ ಇದು ಸರಿಯಿದೆಯೇ?

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸದಸ್ಯರು ಬರೆದುಕೊಂಡು ಬಂದಿದ್ದಾರೆ. ಅವರು ಮಾತನಾಡಲಿ.

**ಶ್ರೀ ತಿಪ್ಪಣ್ಣ ಕಮಕನೂರ:-** ಮಾನ್ಯ ಸಭಾಪತಿಯವರೇ, ನನಗೆ ಮಾತನಾಡಲು ಕಾಲಾವಕಾಶವನ್ನು ಕೊಟ್ಟರೆ, ನಾನು ಒಂದು ಗಂಟೆ ಕಾಲ ಮಾತನಾಡುತ್ತೇನೆ. ಪ್ರವಾಹ ಬಂದ ಮೇಲೆ, ಕೇಂದ್ರ ಗೃಹ ಸಚಿವರಾದ ಮಾನ್ಯ

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಅಮೀತ್ ಷಾ ಅವರು ಹಾಗೂ ಶ್ರೀಮತಿ ನಿರ್ಮಲಾ ಸೀತಾರಾಮನ್‌ರವರು ಬಂದು ಹೋದರು, ಆದರೆ ಅವರು ಯಾವುದೇ ರೀತಿಯಲ್ಲಿ ಬಡವರ ಕಣ್ಣೀರು ಒರೆಸುವ ಕೆಲಸವನ್ನೇ ಮಾಡಲಿಲ್ಲ ಮತ್ತು ಅವರು ಯಾವುದೇ ಹೇಳಿಕೆಯನ್ನು ಕೊಡಲಿಲ್ಲ. ಸರ್ಕಾರವನ್ನು ನಡೆಸುವಂತಹವರು ಅದನ್ನು ಗಂಭೀರವಾಗಿ ಪರಿಗಣಿಸಬೇಕು. 'ಕೇಂದ್ರದಲ್ಲೂ ಒಂದೇ, ರಾಜ್ಯದಲ್ಲೂ ಒಂದೇ ಸರ್ಕಾರವಿದ್ದರೆ, ಚಿನ್ನದ ಮಳೆಯೇ ಸುರಿಯುತ್ತಿತ್ತು' ಎಂದು ನಾವು ತಿಳಿದುಕೊಂಡಿದ್ದೆವು. ಆದರೆ, ಈಗ ಆಗುತ್ತಿರುವುದಾದರೂ ಏನು?

ಮಾನ್ಯ ಸಭಾಪತಿಯವರೇ, 2009ರಲ್ಲಿಯೂ ರಾಜ್ಯದಲ್ಲಿ ಪ್ರವಾಹ ಉಂಟಾಗಿತ್ತು. ಆಗ ಪ್ರಧಾನ ಮಂತ್ರಿಯಾದ ಮಾನ್ಯ ಮನಮೋಹನ್ ಸಿಂಗ್‌ರವರು ಕೂಡಲೇ ರಾಜ್ಯಕ್ಕೆ ಓಡೋಡಿ ಬಂದರು. ಆಗ ಮುಖ್ಯಮಂತ್ರಿ ನಮ್ಮ ಪಕ್ಷದವರು ಇರಲಿಲ್ಲ. ಮಾನ್ಯ ಯಡಿಯೂರಪ್ಪನವರು ಮುಖ್ಯಮಂತ್ರಿಯಾಗಿದ್ದರು. ಆದರೂ ಕೂಡ ಅವರ ಮನವಿಗೆ ಸ್ಪಂದಿಸಿ, ತಕ್ಷಣ ಬಂದು, ಅಂದಿನ ದಿನದಂದೇ ಸುಮಾರು ಒಂದು ಸಾವಿರದ ಆರುನೂರು ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದರು. ಆದರೆ, ಪ್ರಧಾನಿ ಆದವರಿಗೆ ಯಾವ ರಾಜ್ಯದಲ್ಲಿ ಯಾವುದೇ ಪಕ್ಷದ ಸರ್ಕಾರವಿರಲಿ, ಎಲ್ಲರೂ ತಮ್ಮ ಮಕ್ಕಳೇ ಎಂದುಕೊಂಡಿದ್ದರು. ಹೀಗಾಗಿ ತಕ್ಷಣವೇ ಮಾನ್ಯ ಮನಮೋಹನ್ ಸಿಂಗ್‌ರವರು ಹಣವನ್ನು ಬಿಡುಗಡೆ ಮಾಡಿದ್ದರು. ಆದರೆ ಮಾನ್ಯ ಕೋಟ ಶ್ರೀನಿವಾಸ ಪೂಜಾರಿಯವರೇ ಎಂತಾ ದುರ್ವಿಧಿ ನೋಡಿ: ರಾಜ್ಯದಲ್ಲೂ ಬಿಜೆಪಿ ಸರ್ಕಾರವಿದೆ, ಕೇಂದ್ರದಲ್ಲೂ ಬಿಜೆಪಿ ಸರ್ಕಾರವೇ ಇದೆ. ಹೀಗಿದ್ದರೂ, ನಮ್ಮ ಜನರು ಕಣ್ಣೀರಿನಲ್ಲಿ ಕೈ ತೊಳೆಯುತ್ತಿದ್ದಾರೆ. ನಾವೇನು ತಪ್ಪು ಮಾಡಿದ್ದೇವೆ. ಇದು ಅತ್ಯಂತ ಗಂಭೀರವಾದ ವಿಷಯ. ಮಾನ್ಯ ಸಿದ್ದರಾಮಯ್ಯನವರು ಐದು ವರ್ಷ ಮುಖ್ಯಮಂತ್ರಿಯಾಗಿದ್ದರು. ರಾಜ್ಯದ ಕಳೆದ ನಲವತ್ತು ವರ್ಷಗಳ ಇತಿಹಾಸದಲ್ಲಿ, ಯಾವ ಮುಖ್ಯಮಂತ್ರಿಯೂ ಐದು ವರ್ಷಗಳನ್ನು ಪೂರೈಸಿರಲಿಲ್ಲ. ಮಾನ್ಯ ಸಿದ್ದರಾಮಯ್ಯ ಸರ್ಕಾರದ ಅವಧಿ ನಿಜಕ್ಕೂ ಸುವರ್ಣಯುಗ. ಅವರು, ಆ ಪಕ್ಷ ಈ ಪಕ್ಷ ಎಂದು ಐದು ವರ್ಷಗಳಲ್ಲಿ ಎಂದಿಗೂ ನೋಡಲಿಲ್ಲ. ಎಲ್ಲ ಪಕ್ಷದವರ, ಎಲ್ಲಾ ಕ್ಷೇತ್ರಗಳಿಗೂ ಕೈ ಬಿಚ್ಚಿ ನೆರವು ನೀಡಿದರು. ಆದರೆ ಈ ಸರ್ಕಾರ ಮಾಡುತ್ತಿರುವುದಾದರೂ ಏನು? ಇತ್ತ ಪ್ರವಾಹ ಪರಿಹಾರ ಕೊಡುತ್ತಿಲ್ಲ. ಮತ್ತೊಂದೆಡೆ, ಕಾಂಗ್ರೆಸ್ ಶಾಸಕರ ಕ್ಷೇತ್ರಗಳ ಅನುದಾನಕ್ಕೆ ಕತ್ತರಿ ಹಾಕುತ್ತಿದ್ದಾರೆ. ನಾನು ಪದೇ ಪದೇ ಹೇಳುತ್ತಿದ್ದೇನೆ, ದಯಮಾಡಿ ಕೇಳಿ ಜನರ ವಿರುದ್ಧ ಹೋಗುವ ಯಾವುದೇ ಸರ್ಕಾರಕ್ಕೂ ಆಯುಷ್ಯ ಇರುವುದಿಲ್ಲ. ರಾಜ್ಯದಲ್ಲಿ ಭೀಕರ ಮಳೆ ಹಾಗೂ ಸಂತ್ರಸ್ತರ ಪ್ರದೇಶಗಳಿಗೆ ಕೇಂದ್ರ ಸರ್ಕಾರವು ನೆರೆ ಪರಿಹಾರ ಸಾಧ್ಯತೆ ಬಗ್ಗೆ ತಾವುಗಳು ದಿನಾಂಕ 29.09.2019 ರಂದು ಸಂಯುಕ್ತ ಕರ್ನಾಟಕ ಪತ್ರಿಕೆಯಲ್ಲಿ ವರದಿ ನೀಡಿರುತ್ತೀರಿ. ಸುಮಾರು 38,000 ಕೋಟಿ ನಷ್ಟ ಆಗಿದೆ. ಸುಮಾರು 100 ಕ್ಕೂ ಹೆಚ್ಚು ಜನ ಮೃತಪಟ್ಟಿದ್ದಾರೆ. ಸುಮಾರು 2000ಕ್ಕೂ ಹೆಚ್ಚು ಜಾನುವಾರುಗಳು ಸಾವನ್ನಪ್ಪಿವೆ. ಸುಮಾರು 103 ತಾಲ್ಲೂಕುಗಳು ಪ್ರವಾಹ ಪೀಡಿತವಾಗಿದೆ. ಸುಮಾರು 7.82 ಲಕ್ಷ ಹೆಕ್ಟೇರ್ ಬೆಳೆ ನಾಶವಾಗಿರುತ್ತದೆ.

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ದಿನಾಂಕ 04.10.2019 ರಂದು ಕೇಂದ್ರ ಸರ್ಕಾರದಿಂದ ಕೇವಲ 1200 ಕೋಟಿ ರೂಪಾಯಿಗಳು ಮಾತ್ರ ಬಿಡುಗಡೆಯಾಗಿದೆ.

ಮಾನ್ಯ ಸಭಾಪತಿಯವರೇ, ನಾನು ಹೇಳುವುದೇನೆಂದರೆ, ಹಣ ಬರಲಿ ಅಥವಾ ಬಿಡಲಿ. ಮಾನ್ಯ ಪ್ರಧಾನಮಂತ್ರಿಯವರು ಬೆಂಗಳೂರು ನಗರಕ್ಕೆ ಬಂದಾಗ, ಇಲ್ಲಿಯ ಕರ್ನಾಟಕದ ಮಹಾ ಜನತೆ ಭಯ ಪಡುವಂತಹ ಕಾರಣವಿಲ್ಲ, ‘ನಾನು ನಿಮ್ಮ ಜೊತೆ ಇರುತ್ತೇನೆಂದು ಹೇಳಿದ್ದರೆ,’ ನಮಗೆ ಮೂವತ್ತೆಂಟು ಸಾವಿರ ಕೋಟಿ ಹಣ ಕೊಟ್ಟಂತಾಗುತ್ತಿತ್ತು. ನಾವು ಅವರಿಗೆ ಅಷ್ಟೊಂದು ಅಭಾರಿಯಾಗಿ ಇರುತ್ತಿದ್ದೆವು. ಯಾವುದಕ್ಕೂ ಅವರು ಸ್ಪಂದಿಸಲಿಲ್ಲ. ಅವರು ಕರ್ನಾಟಕಕ್ಕೆ ಸಂಬಂಧವಿಲ್ಲದಂತೆ ವರ್ತನೆ ಮಾಡಿದರು. ಇದು ಒಳ್ಳೆಯ ಬೆಳವಣಿಗೆಯಲ್ಲ. ಏಕೆಂದರೆ, ನಾವೆಲ್ಲ ಅತ್ಯಂತ ಕಡು ಬಡವರು ಮತ್ತು ಹಿಂದುಳಿದ ಜನಾಂಗದಿಂದ ಬಂದವರು. ನಾವೆಲ್ಲ ಹಳ್ಳಿಯ ಮಗ್ಗುಲಿನಲ್ಲಿ ನಮ್ಮ ಜನರು ಜೋಪಡಿಗಳನ್ನು ಹಾಕಿಕೊಂಡು ಜೀವಿಸುತ್ತಾರೆ. ರಾತ್ರೋ ರಾತ್ರಿ ಏಕಾಏಕಿಯಾಗಿ ಮಹಾರಾಷ್ಟ್ರದಿಂದ ಬಂದಂತಹ ಭಾರಿ ಮಳೆಯಿಂದ  ಗುಡಿಸಲುಗಳಲ್ಲಿ ತಾಯಿ–ತಂದೆ ಮಕ್ಕಳು ಇಲ್ಲ. ಅಲ್ಲಿ ಅವರ ಬಗ್ಗೆ ಯಾವುದೇ ರೀತಿಯ ಕುರುಹೂ ಇಲ್ಲ. ಅಂತಹ ಸಂದರ್ಭಗಳಲ್ಲಿ ಕೆಲವು ಕಡೆ ಎಲ್ಲೆಲ್ಲಿ ಬಾರಿ ಪ್ರಮಾಣದಲ್ಲಿ ಪ್ರವಾಹವಾಗಿರುತ್ತದೆ ಅಲ್ಲಿಗೆ ಮಾಧ್ಯಮದವರು ಹೋಗುತ್ತಾರೆ. ಸಚಿವರುಗಳು ಹೋಗುತ್ತಾರೆ. ಅವರು ಹೋದಲ್ಲಿ ಅವರಿಗೆ ತಕ್ಷಣ ಸ್ಪಂದಿಸುಂತಹ ಕೆಲಸವಾಗುತ್ತದೆ. ನಮ್ಮ ಭೀಮಾ ನದಿ ಕಡೆ ಬಹಳಷ್ಟು ಮಳೆ ಬಂದಿದೆ. ಬೆಳೆಗೆ ಎಷ್ಟು ಬೇಕೋ ಅಷ್ಟೇ ಮಳೆ ಬಂದಿದೆ.

(ಮುಂದು...)

(169)11.10.2019,5.50,ಟಿಸಿಹೆಚ್–ಕೆಎಸ್

**(ಸಭಾಪತಿಯವರ ಉಪಸ್ಥಿತಿ)**

**ಶ್ರೀ ತಿಪ್ಪಣ್ಣ ಕಮಕನೂರ (ನಾಮನಿರ್ದೇಶಿತರು) (ಮುಂದು):–** ಕೆಲವು ಕಡೆಗಳಲ್ಲಿ ಮಳೆ ಬಂದಿದೆ. ಕೆಲವು ಕಡೆಗಳಲ್ಲಿ ಮಳೆ ಬಂದಿಲ್ಲ. ಬೋರ್‌ವೆಲ್‌ಗಳು ಬತ್ತಿ ಹೋಗಿವೆ, ಬತ್ತಿದಂತಹ ಬೋರ್‌ವೆಲ್‌ಗಳಲ್ಲಿ  ನೀರು ಕೂಡ ಬರುತ್ತಿಲ್ಲ. ಅದಕ್ಕಾಗಿ ನಮ್ಮ ಭಾಗದಲ್ಲಿ ಅತಿವೃಷ್ಟಿಯೂ ಇರುತ್ತದೆ, ಅನಾವೃಷ್ಟಿಯೂ ಕೂಡ ಇರುತ್ತದೆ. ಇದಕ್ಕೆ ಸಂಬಂಧಪಟ್ಟ ಜಿಲ್ಲಾ ಉಸ್ತುವಾರಿ ಸಚಿವರು ಗುಲ್ಬರ್ಗಾ ಜಿಲ್ಲೆಗೆ ಬರಬೇಕು, ಅಲ್ಲಿ ಸಭೆ ನಡೆಸಬೇಕು.  ಆ ಭಾಗದ ಜನರ ಕಷ್ಟ ನಷ್ಟಗಳನ್ನು ಅರಿತುಕೊಳ್ಳಬೇಕು. ಕೇವಲ ಕಲ್ಯಾಣ ಕರ್ನಾಟಕ ಎಂದು ಹೆಸರನ್ನು ಘೋಷಣೆ ಮಾಡಿ, ಅದರ ಹೆಸರಿನಲ್ಲಿ ರಾಜಕೀಯ ಮಾಡುವುದು ಎಷ್ಟರಮಟ್ಟಿಗೆ ಸರಿ ಎಂಬ ಮಾತನ್ನು ಕೂಡ ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಅಲ್ಲಿನ ಜನರು ಬಹಳ ಕಷ್ಟದಲ್ಲಿದ್ದಾರೆ. ಯಾರು ಬಡವರ ಕಣ್ಣೀರ ಒರೆಸುತ್ತಾರೊ ಅವರಿಗೆ ದೇವರು ಯಾವಾಗಲೂ ಅವರ ಜೊತೆ ಇರುತ್ತಾನೆ. ಅದಕ್ಕೆ ದಯವಿಟ್ಟು ಸರ್ಕಾರದವರು ಸಹಾನುಭೂತಿಯಿಂದ ಪರಿಶೀಲನೆ ಮಾಡಬೇಕು.  ಶ್ರೀ ಎನ್.ರವಿಕುಮಾರ್‌ರವರು ಕೂಡ ಆ ಭಾಗದ ಬಗ್ಗೆ ವಿಚಾರ ಮಾಡಬೇಕು.  ತಾವು ಸಚಿವರಾಗಬೇಕೆಂದು ನಮ್ಮದು ಕೂಡ ಒತ್ತಾಯ ಇದೆ.  ಮಾನ್ಯ ಸಚಿವರ

ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ರೀತಿಯಲ್ಲಿಯೇ ತಾವು reply ಅನ್ನು ಕೊಟ್ಟಿದ್ದೀರಿ. ಆದರೂ ಕೂಡ ಮುಂದಿನ ದಿನಗಳಲ್ಲಿ ತಾವು ಮುಂದೆ ಬರಬೇಕು. ನಾವೇನು ವಿರೋಧ ಪಕ್ಷದವರು ಕೇಳುತ್ತೇವೆಯೊ ಅದಕ್ಕೆ ಹೇಳಿಕೆ ಕೊಡಬೇಕಾದರೆ, ತಾವು ಸಚಿವರಾಗಿಯೇ ಉತ್ತರ ಕೊಡಬೇಕಾಗುತ್ತದೆ. ಈಗ ತಾವು ಎನ್.ರವಿಕುಮಾರ್ ಎಂದು ಇದ್ದೀರಿ, ಕರ್ನಾಟಕದ ಕಾಂಗ್ರೆಸ್ ಪಕ್ಷದಿಂದ ನಾವೇನು ವರದಿ ಕೊಡುತ್ತೇವೆ ಅದರ ಬಗ್ಗೆ ಸ್ವಲ್ಪ ಹಿಯಾಳಿಸಿ ಮಾತನಾಡದಂತೆ ಅದನ್ನು ತಾವು ಪುನರ್ ಪರಿಶೀಲನೆ ಮಾಡಿಕೊಂಡು ಅದಕ್ಕೂ ಕೂಡ ಸ್ಪಂದಿಸಬೇಕು ಹಾಗೂ ನಮ್ಮ ವರದಿಯನ್ನು ಸಂಪೂರ್ಣವಾಗಿ ಒಪ್ಪಿಕೊಂಡು, ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ಹಾಗೂ ಸಚಿವ ಸಂಪುಟದ ಗಮನಕ್ಕೆ ತಂದು ಅದನ್ನು ಯಥಾವತ್ತಾಗಿ ಜಾರಿಗೆ ತರಬೇಕೆಂಬ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

**ಶ್ರೀ ಮರಿತಿಬ್ಬೇಗೌಡ:–** ಮಾನ್ಯ ಸಭಾಪತಿಯವರೇ, ಈ ಸದನದಲ್ಲಿ ನೆರೆ ಸಂತ್ರಸ್ತರ ಸಂಬಂಧವಾಗಿ ಬಹಳ ಗಂಭೀರವಾದಂತಹ ಚರ್ಚೆ ನಡೆಯುತ್ತಿದೆ. ಮಾನ್ಯ ವಿರೋಧ ಪಕ್ಷದ ನಾಯಕರು, ಆಡಳಿತ ಪಕ್ಷದ ಮತ್ತು ವಿರೋಧ ಪಕ್ಷದ ಮಾನ್ಯ ಸದಸ್ಯರೆಲ್ಲರಿಗೂ ಕೂಡ ಬಹಳ ಸುಧೀರ್ಘವಾದಂತಹ ಚರ್ಚೆಗೆ ತಾವು ಅವಕಾಶ ಮಾಡಿಕೊಟ್ಟಿದ್ದೀರಿ. ಪ್ರತಿಯೊಬ್ಬ ಸದಸ್ಯರೂ ಕೂಡ ಅವರು ತಿಳಿದುಕೊಂಡಿರತಕ್ಕಂಥ ಬಹಳಷ್ಟು ವಿಚಾರವನ್ನು ಬಹಳ ಗಂಭೀರತೆಯಿಂದ ಸರ್ಕಾರದ ಮುಂದೆ ಇಡುವಂಥ ಕೆಲಸವನ್ನು ಮಾಡಿದ್ದಾರೆ. ಈ ವಿಷಯದಲ್ಲಿ ನಾನು ಯಾವುದೇ ಅಂಕಿಅಂಶಗಳನ್ನಾಗಲಿ ಮತ್ತು ಈಗ ಚರ್ಚೆ ಮಾಡಿರತಕ್ಕಂಥ ವಿಷಯಗಳ ಬಗ್ಗೆ ಆಗಲಿ ಚರ್ಚೆ ಮಾಡದೆ 10 ನಿಮಿಷ ತಮ್ಮ ಮೂಲಕ ಘನ ಸರ್ಕಾರದಲ್ಲಿ ವಿನಂತಿ ಮಾಡುವುದೇನೆಂದರೆ, ಇತ್ತೀಚೆಗೆ ಈ ನಾಡಿನಲ್ಲಿ ನೆರೆ, ಬರ ಈ ಎರಡೂ ಪರಿಸ್ಥಿತಿಗಳು ಕೂಡ ಪ್ರತಿ ವರ್ಷ ಕಾಡುತ್ತಿರತಕ್ಕಂಥ ದೊಡ್ಡ ಸಮಸ್ಯೆ. ಇವತ್ತು ಬರಕ್ಕಿಂತ ನೆರೆ ಎನ್ನತಕ್ಕಂಥದ್ದು ಬಹಳ ಸಂಕಷ್ಟ ಪರಿಸ್ಥಿತಿಗೆ ಬಡವರನ್ನು ದೂಡಿರತಕ್ಕಂಥದ್ದಾಗಿದೆ. ಒಬ್ಬ ವಿಜ್ಞಾನಿ 'ಬರಕ್ಕಿಂತ ನೆರೆ ಹಾವಳಿಯಿಂದ ಆಗತಕ್ಕಂಥ ಅನಾಹುತ ಬಹಳ ದೊಡ್ಡದು. ಈ ಅನಾಹುತಕ್ಕೆ ಬೆಲೆ ಕಟ್ಟುವುದಕ್ಕೆ ಆಗುವುದಿಲ್ಲ ಮತ್ತು ಯಾವುದೇ ಸರ್ಕಾರ ಕೂಡ ಸರಿಪ್ರಮಾಣದಲ್ಲಿ ಪರಿಹಾರವನ್ನು ಒದಗಿಸುವುದಕ್ಕೆ ಆಗುವುದಿಲ್ಲ' ಎಂದು ಹೇಳುತ್ತಾರೆ. ಅದರಲ್ಲೂ ಈ ಸಾಲಿನಲ್ಲಿ ಬಹಳಷ್ಟು ವರ್ಷಗಳ ನಂತರ ಕರ್ನಾಟಕ ರಾಜ್ಯದಲ್ಲಿ ಸುಮಾರು 15 ಜಿಲ್ಲೆಗಳಲ್ಲಿ ನೆರೆ ಬಂದು ಜನಜೀವನ ಬಹಳ ಅಸ್ತವ್ಯಸ್ತ ಆಗಿದೆ. ಸಾಹಿತಿಗಳಾದಂತಹ ಕುವೆಂಪುರವರು ಒಂದು ಕಡೆ 'ಪ್ರಕೃತಿ ಮುಂದೆ ಮಾನವನ ಆಟ ಏನು ನಡೆಯುವುದಿಲ್ಲ, ಮಾನವ ಪ್ರಕೃತಿ ಮುಂದೆ ತರಗಲೆ ಇದ್ದಂತೆ' ಎಂದು ಹೇಳಿದ್ದಾರೆ. ಅದನ್ನು ಇವತ್ತಿನ ದಿವಸ ನಾವು ನೋಡುತ್ತಿದ್ದೇವೆ. ಇಷ್ಟೆಲ್ಲಾ ವಿಜ್ಞಾನ ಮುಂದುವರೆದರೂ ಕೂಡ ನಾವು ಈ ನೆರೆ ಹಾವಳಿಯಿಂದ ತಪ್ಪಿಸಿಕೊಳ್ಳುವುದಕ್ಕೆ ಸಾಧ್ಯತೆ ಆಗುತ್ತಿಲ್ಲ. ಇಂತಹ ಪರಿಸ್ಥಿತಿಯಲ್ಲಿ ಈಗಾಗಲೇ ಘನ ಸರ್ಕಾರದಿಂದ ಮಾನ್ಯ ಮುಖ್ಯಮಂತ್ರಿಗಳು ಹಾಗೂ ಸಾಕಷ್ಟು ಸಚಿವರುಗಳು ಕೂಡ ಆ ಪ್ರದೇಶಕ್ಕೆ ಭೇಟಿ ನೀಡಿ ಆಗಿರತಕ್ಕಂಥ ಹಾನಿ ಬಗ್ಗೆ, ಅನಾಹುತದ ಬಗ್ಗೆ ಎಲ್ಲಾ ವಿಚಾರಗಳ ಬಗ್ಗೆ ವರದಿ ತರಿಸಿಕೊಂಡು, ಸುಮಾರು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

36 ಸಾವಿರ ಕೋಟಿ ನಷ್ಟ ಉಂಟಾಗಿದೆ. ಜನರ ಬದುಕು ಹಾಳಾಗಿದೆ. ಪ್ರಾಣಿಗಳು ಹಾಗೂ ಜಾನುವಾರುಗಳು ಬದುಕು ಹಾಳಾಗಿದೆ. ಸಾಮಾಜಿಕವಾಗಿ, ಶೈಕ್ಷಣಿಕವಾಗಿ ಮತ್ತು ರಾಜಕೀಯವಾಗಿ ಎಲ್ಲಾ ರೀತಿಯಿಂದಲೂ ಕೂಡ ಎಷ್ಟೋ ಮಂದಿ ತಮ್ಮ ಹಕ್ಕನ್ನೇ ಕಳೆದುಕೊಂಡಿದ್ದಾರೆ. ಇವತ್ತು ನೆರೆ ಹಾವಳಿಯಿಂದ ಗ್ರಾಮಗಳಿಂದ ಬಹಳಷ್ಟು ಜನ ಮನೆಮಠ ಬಿಟ್ಟು ತಮ್ಮೆಲ್ಲಾ ಬದುಕನ್ನು ಬಿಟ್ಟು ಬಂದಿದ್ದಾರೆ. ಮತ್ತೆ ಅವರು ಬದುಕನ್ನು ರೂಪಿಸಿಕೊಳ್ಳಬೇಕೆಂದರೆ ಬಹಳ ಸಂಕಷ್ಟ ಪರಿಸ್ಥಿತಿ ಇದೆ. ಆ ದಿಸೆಯಲ್ಲಿ ಇವತ್ತು ಗೌರವಾನ್ವಿತ ಸದಸ್ಯರೆಲ್ಲರೂ ಎಲ್ಲಾ ವಿಷಯಗಳ ಬಗ್ಗೆ ಬಹಳಷ್ಟು ಚರ್ಚೆಗಳನ್ನು ಮಾಡಿದ್ದಾರೆ. ಘನ ಸರ್ಕಾರದಲ್ಲಿ ನಾನು ವಿನಂತಿ ಮಾಡುವುದೇನೆಂದರೆ, ದಯಮಾಡಿ ಅವರಿಗೆ ಪರಿಹಾರವನ್ನು ಕೊಟ್ಟಿದ್ದೇವೆಂದು ಹೇಳುತ್ತಿದ್ದುದನ್ನು ನಾನು ಬೆಳಿಗ್ಗೆಯಿಂದಲೂ ನೋಡಿದ್ದೇನೆ. ಮಾನ್ಯ ಕೆಲವು ಸಚಿವರು, ಮಾನ್ಯ ಸದಸ್ಯರು ಅದರಲ್ಲೂ ಮಾನ್ಯ ಎನ್.ರವಿಕುಮಾರ್‌ರವರು ಹಾಗೂ ಮಾನ್ಯ ಪ್ರಾಣೇಶ್‌ಎಂ.ಕೆ ರವರು ಪದೇ ಪದೇ ನಮ್ಮ ವಿರೋಧ ಪಕ್ಷದ ಸದಸ್ಯರುಗಳು ಮಾತನಾಡುವಾಗ intervene ಆಗಿ ನಾವು ಇದನ್ನು ಮಾಡುತ್ತಿದ್ದೇವೆಂದು ಹೇಳುತ್ತಿದ್ದರು, ಅದನ್ನು ನಾನು ಗಮನಿಸುತ್ತಿದ್ದೆ. ಹಾಗಾಗಿ, ದಯವಿಟ್ಟು ಯಾವುದೇ ಸರ್ಕಾರ ಅಧಿಕಾರದಲ್ಲಿ ಇದ್ದರೂ ಕೂಡ ತಾವೇನಾದರೂ ಈ ಸಂದರ್ಭದಲ್ಲಿ ವಿರೋಧ ಪಕ್ಷದ ಸ್ಥಾನದಲ್ಲಿ ಇದ್ದಿದ್ದರೆ, ನೀವ್ಯಾರು ಕೂಡ ಕೂರುವುದಕ್ಕೆ ಬಿಡುತ್ತಿರಲಿಲ್ಲ. ಸದನವು ಕೂಡ ನಡೆಯುತ್ತಿರಲಿಲ್ಲ. ಅಷ್ಟೊಂದು ಗಟ್ಟಿ ಧ್ವನಿಯಲ್ಲಿ ಗಲಾಟೆ ಮಾಡುತ್ತಿದ್ರಿ. ಆದರೆ, ಆ ಕೆಲಸವನ್ನು ನಮ್ಮ ಈ ಭಾಗದಲ್ಲಿರತಕ್ಕಂಥವರು ಯಾರೂ ಕೂಡ ಮಾಡುತ್ತಿಲ್ಲ. ಏಕೆಂದರೆ, ನಿಮ್ಮ ಒಂದು ಕಳಕಳಿ ಇದೆಯಲ್ಲಾ, ನಮ್ಮ ಮಾನ್ಯ ಸದಸ್ಯರುಗಳು ಅದರ ಬಗ್ಗೆ ಮಾತನಾಡುವಾಗ ದಯವಿಟ್ಟು ಆಲಿಸಿಕೊಳ್ಳಿ, ಕೇಳಿಸಿಕೊಳ್ಳಿ. ಮಾನ್ಯ ಮಂತ್ರಿಗಳು ಕೂಡ ಮಧ್ಯೆ ಮಧ್ಯೆ ಎದ್ದು ಕೆಲವು ಉತ್ತರಗಳನ್ನು ಕೊಡುವಂಥ ಪ್ರಯತ್ನಗಳನ್ನು ಮಾಡುತ್ತಾರೆ. ಇದು ಬಹಳ ಗಂಭೀರವಾದಂತಹ ವಿಚಾರವಾಗಿದ್ದು, ನಮ್ಮ ನಾಡಿನ ಜನರ ಬದುಕೇ ಹೊರಟು ಹೋಗಿದೆ. ನಾವು ಆ ಬದುಕನ್ನು ಮತ್ತೆ ರೂಪಿಸುವುದಕ್ಕೆ ಯಾವ ಸರ್ಕಾರದಿಂದಲೂ ಸಾಧ್ಯವಿಲ್ಲ. ಇಂತಹ ಒಂದು ಗಂಭೀರವಾದಂಥ ಸಮಸ್ಯೆ ಬಗ್ಗೆ ಚಿಂತನೆ ಮಾಡಬೇಕಿದೆ. ಇವತ್ತು ಈ ನೆರೆ ಸಂತ್ರಸ್ತರಿಗೆ ಪರಿಹಾರ ದೊರಕಿಸಿಕೊಡಬೇಕಾಗಿರುತ್ತದೆ. ಇಂತಹ ಸಂದರ್ಭದಲ್ಲಿ ಸರ್ಕಾರ 3 ದಿನಗಳ ಕಾಲ ಸದನ ಕರೆದಿದೆ. ಇಂತಹ ಸಂದರ್ಭದಲ್ಲಿ ತಾವೆಲ್ಲರೂ ತಮ್ಮ ಪಕ್ಷದ ಸ್ವಾಭಿಮಾನ, ಪ್ರೀತಿ–ವಿಶ್ವಾಸದಿಂದ ಮೆಚ್ಚುಗೆಯನ್ನು ವ್ಯಕ್ತಪಡಿಸುತ್ತಿದ್ದೀರಿ. ಆದರೆ, ಮೂರು ದಿನಗಳ ಬದಲು 2 ವಾರಗಳ ಕಾಲ ಅಧಿವೇಶನ ನಡೆಸಬೇಕಾಗಿತ್ತು. ಆಗ ನಾನು ನಿಮ್ಮ ಮೆಚ್ಚುಗೆಯನ್ನು ಶ್ಲಾಘಿಸುತ್ತಿದ್ದೆನು.

**(ಈ ಹಂತದಲ್ಲಿ ಮಾನ್ಯ ವಿರೋಧ ಪಕ್ಷದ ನಾಯಕರು ಹಾಗೂ ವಿರೋಧಪಕ್ಷದ ಸದಸ್ಯರುಗಳು ಮೇಜು ಕುಟ್ಟುವ ಮೂಲಕ ತಮ್ಮ ಹರ್ಷವನ್ನು ವ್ಯಕ್ತಪಡಿಸಿದರು)**

ಇಂತಹ ಪರಿಸ್ಥಿತಿ ನಮ್ಮ ಕರ್ನಾಟಕ ರಾಜ್ಯಕ್ಕೆ ಎಂದೂ ಬಂದಿರಲಿಲ್ಲ. ಇಷ್ಟೊಂದು ಜನಜೀವನ, ಘೋರ ಅವ್ಯವಸ್ಥೆ ಉಂಟಾಗಿದೆ. ಇಂತಹ ಸಂದರ್ಭದಲ್ಲೂ ಕೂಡ ಈ ಸರ್ಕಾರ ಸದನ ನಡೆಸಬೇಕು. ತಮಗೆ ನಾನು

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"**

ಒಂದು ಉದಾಹರಣೆಯನ್ನು ಹೇಳುತ್ತೇನೆ, ಕಳೆದ ಒಂದು ವರ್ಷದಿಂದ ನಮ್ಮೆಲ್ಲರ ರಾಜಕೀಯ ಸಂಘರ್ಷದಿಂದ ಈ ಸದನ ಸರಿಯಾಗಿ ನಡೆಯುತ್ತಿಲ್ಲ. ಕನಿಷ್ಟ 60 ದಿನಗಳ ಕಾಲ ಸದನದ ಕಲಾಪ ನಡೆಯಬೇಕೆಂದು ನಾವೇ ನಿಯಮವನ್ನು ರೂಪಿಸಿಕೊಂಡಿದ್ದೇವೆ. ಆದರೆ, ಸರಿಯಾಗಿ ಒಂದು ದಿನ ಕಲಾಪ ನಡೆಯಲಿಲ್ಲ. ಇದನ್ನು ಯಾವುದೇ ಒಂದು ಪಕ್ಷಕ್ಕೆ ಸೀಮಿತವಾಗಿ ಹೇಳುತ್ತಿಲ್ಲ. ಮಾನ್ಯ ಸದಸ್ಯರೆಲ್ಲರೂ ಒಟ್ಟಾಗಿ ಸೇರಿ ಒಂದು ದಿನ ಕಲಾಪ ನಡೆಸುವುದಕ್ಕೆ ಆಗಲಿಲ್ಲ. ಅಧಿಕಾರಕ್ಕಾಗಿ ರಾಜಕೀಯ, ಜಿಜ್ಞಾಸೆ, ಹೋರಾಟ ಮಾಡಿಕೊಂಡು ಬಂದಿದ್ದೇವೆ. ಆದರೆ ಇವತ್ತು ಘನ ಸರ್ಕಾರ ಇಂತಹ ಒಂದು ನೆರೆ ಸಂತ್ರಸ್ತರಿಗೆ ಆಗಿರತಕ್ಕಂಥ ಅನ್ಯಾಯದ ಬಗ್ಗೆ, ಪರಿಹಾರದ ಬಗ್ಗೆ 2 ವಾರಗಳ ಕಾಲ ಬರೀ ಈ ಒಂದು ವಿಷಯದ ಬಗ್ಗೆ ಮುಕ್ತವಾದಂತಹ ಚರ್ಚೆ ಮಾಡುವುದಕ್ಕೆ ಕೇಂದ್ರ ಸರ್ಕಾರವನ್ನು ಒತ್ತಾಯ ಮಾಡುವುದಕ್ಕೆ ನೀವು ಅಧಿವೇಶನ ಕರೆದಿದ್ದರೆ, ನಾನು ಖಂಡಿತವಾಗಿಯೂ ಕೂಡ ಮೆಚ್ಚುತ್ತಿದ್ದೆ. ನಿಮಗೆ ಆ ನೆರೆ ಸಂತ್ರಸ್ತರ ಬಗ್ಗೆ ಬಹಳ ಅಭಿಮಾನ ಇದೆ, ಈ ಸರ್ಕಾರಕ್ಕೆ ಗಂಭೀರವಾದಂಥಹ ಚಿಂತನೆ ಇದೆ. ಬರೀ 3 ದಿನಗಳ ಕಾಲ ಅಧಿವೇಶನ ಕರೆದಿದ್ದೀರಿ. ಒಂದು ದಿನ ಸಂತಾಪ ಸೂಚನೆ, ಇವತ್ತು ನೆರೆ ಪರಿಹಾರದ ಬಗ್ಗೆ ಚರ್ಚೆ, ನಾಳೆ ಬೆಳಿಗ್ಗೆ ಬಿಲ್ ಪಾಸ್ ಮಾಡಿಕೊಂಡು ಮನೆಗೆ ಹೋಗುವುದು. ಇದು ನಮ್ಮ ಶಾಸಕರ ಜನಪ್ರತಿನಿಧಿಗಳ ಜವಾಬ್ದಾರಿ. ಆದ್ದರಿಂದ ನಾನು ಬಹಳ ನೊಂದು ಹೇಳುತ್ತಿದ್ದೇನೆ, ಇದಕ್ಕೆ ಹೆಚ್ಚಿನ ಅವಕಾಶವನ್ನು ಕೊಡಬೇಕಾಗಿತ್ತು. ಆದರೆ, ನಾನು ಈ ಸಂದರ್ಭದಲ್ಲಿ ಈಗಲೂ ಕೂಡ ನಾನು ಘನ ಸರ್ಕಾರಕ್ಕೆ ಒತ್ತಾಯ ಮಾಡುವುದೇನೆಂದರೆ, ದಯವಿಟ್ಟು ಇವತ್ತು ನಾಡಿನ ಜನರು ಏನು ತತ್ತರಿಸಿ ಹೋಗಿದ್ದಾರೆ, ಅವರಿಗೆ ಮುಂದಿನ ಜೀವನದ ಬಗ್ಗೆ ದಿಕ್ಕುಗುರಿಯೇ ತೋಚುತ್ತಿಲ್ಲ. ಅವರಿಗೆ ಆಶ್ರಯವೇ ಇಲ್ಲದೇ ಇರತಕ್ಕಂಥ ಪರಿಸ್ಥಿತಿ ನಿರ್ಮಾಣವಾಗಿದೆ.

**(ಮುಂದು...)**

**(170)11.10.2019/6.00/ಎಂ.ಎಂ–ಕೆ.ಎಸ್**

(ಸಭಾಪತಿಯವರ ಉಪಸ್ಥಿತಿ)

**ಶ್ರೀ ಮರಿತಿಬ್ಬೇಗೌಡ (ಮುಂದು):-**

ಈ ಸಂದರ್ಭದಲ್ಲಿ ಘನ ಸರ್ಕಾರವು ನಾವು ನಿಮ್ಮ ನೆರವಿಗೆ ಇದ್ದೇವೆ, ತಾತ್ಕಾಲಿಕವಾದ ಪರಿಹಾರಗಳನ್ನು ಇಂತಹ ದಿನಾಂಕಗಳಲ್ಲಿ ನಾವು ಈ ಪ್ರಮಾಣದಲ್ಲಿ ತಮ್ಮ ಮನೆ ಬಾಗಿಲಿಗೆ ಒದಗಿಸುತ್ತೇವೆ, ಸಾತ್ವಿಕವಾದಂತಹ ಪರಿಹಾರವನ್ನು ಇಷ್ಟು ದಿನದೊಳಗೆ ಕೊಡುತ್ತೇವೆ ಎನ್ನುವಂತಹ ದೃಢವಾದಂತಹ ನಂಬಿಕೆ, ವಿಶ್ವಾಸವನ್ನು ಈ ಸರ್ಕಾರ ಮತ್ತು ನಾವೆಲ್ಲಾ ಶಾಸಕರುಗಳು ಸೇರಿ ದಯಮಾಡಿ ಮಾಡಬೇಕಾಗಿದೆ. ಭಾರತ ದೇಶದಲ್ಲಿ ಸುಮಾರು 15 ರಾಜ್ಯಗಳಲ್ಲಿ ನೆರೆ ಬಂದಿದ್ದು, ಅದು ಎಲ್ಲರಿಗೂ ಅರ್ಥವಾಗಿರುವಂತಹ ವಿಚಾರವಾಗಿದೆ. ಆದರೂ ಕೂಡ ಕರ್ನಾಟಕ ರಾಜ್ಯದ ಬಗ್ಗೆ ಕೇಂದ್ರ ಸರ್ಕಾರ ಎಲ್ಲೋ ಒಂದು ಕಡೆ ಮಲತಾಯಿ ಧೋರಣೆ ತೋರುತ್ತಿದೆ. 1,200 ಕೋಟಿ ರೂಪಾಯಿಯನ್ನು ಕೂಡ ಬಹಳ ತಡವಾಗಿ ಕೊಟ್ಟಿದೆ ಎನ್ನುವುದು ಈ ನಾಡಿನ ಜನತೆಯ ಗಮನಕ್ಕೆ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಹಾಗೂ ಮಾಧ್ಯಮದ, ಪತ್ರಿಕಾ ವಲಯದಲ್ಲಿ ವ್ಯಾಪಕವಾಗಿ ಬಂದಿದೆ. 25 ಮಂದಿ ಬಿ.ಜೆ.ಪಿ ಸಂಸದರನ್ನು ಈ ನಾಡಿನ ಜನರು ಗೆಲ್ಲಿಸಿದ್ದಾರೆ. ಕೇಂದ್ರದಲ್ಲಿ ಬಿ.ಜೆ.ಪಿ ಸರ್ಕಾರ ಮತ್ತು ರಾಜ್ಯದಲ್ಲೂ ಬಿ.ಜೆ.ಪಿ ಸರ್ಕಾರವಿದೆ. ಯಾವಾಗಲೂ ಕೂಡ ಜನಸಾಮಾನ್ಯರು ಬಹಳ ನಿರೀಕ್ಷೆಯನ್ನಿಟ್ಟುಕೊಂಡಿರುತ್ತಾರೆ. ಎರಡೂ ಕಡೆ ಒಂದೇ ಪಕ್ಷದ ಸರ್ಕಾರ ಇದ್ದರೆ ನಮ್ಮ ನಾಡಿನ ಅಭಿವೃದ್ಧಿಯಾಗುತ್ತದೆ ಎನ್ನುವಂತಹ ಚಿಂತನೆಯಲ್ಲಿ, ಕಲ್ಪನೆಯಲ್ಲಿ ನಿಮಗೆಲ್ಲಾ ಆಶೀರ್ವಾದ ಮಾಡಿದ್ದಾರೆ, ಅದನ್ನು ನಾವು ತಪ್ಪಾಗಿ ಭಾವಿಸುವುದಿಲ್ಲ. ಆದರೆ ಇವತ್ತು ಇಂತಹ ಸಂಕಷ್ಟ ಪರಿಸ್ಥಿತಿಯಲ್ಲಿ ಕೇಂದ್ರ ಸರ್ಕಾರ ಇಂತಹ ಮಲತಾಯಿ ಧೋರಣೆಯನ್ನು ತೋರಬಾರದಿತ್ತು. ಇಷ್ಟೊಂದು ಕಡಿಮೆ ಮೊತ್ತವನ್ನು ಮಧ್ಯಂತರ ಪರಿಹಾರ ಎಂದು ಬಿಡುಗಡೆಗೊಳಿಸಿರುವುದಕ್ಕೆ ಬಹಳ ನೊಂದು ವಿಷಾದದಿಂದ ಈ ಮಾತನ್ನು ಹೇಳುತ್ತೇನೆ. ದಯಮಾಡಿ ಕೇಂದ್ರ ಸರ್ಕಾರ ತಕ್ಷಣವೇ ಮತ್ತೆ ಪರಿಹಾರವನ್ನು ಕೊಡಬೇಕು, ಪರಿಹಾರದ ಹಣವನ್ನು ಕೇಳುವುದಕ್ಕೆ ಸರ್ಕಾರವು ಕೇಂದ್ರ ಸರ್ಕಾರದ ಜೊತೆ ಎಲ್ಲಾ ಪ್ರಯತ್ನಗಳನ್ನು ಮಾಡುತ್ತಿದೆ. ಆದರೂ ಕೂಡ ವಿಳಂಬ ನೀತಿಯಿಂದ ಕೆಲವು ಸಂಸಾರಗಳ ಬದುಕು ಬಹಳ ಹೀನಾಯ ಸ್ಥಿತಿಗೆ ಬಂದಿದೆ. ಅವರಿಗೆ ಹೊಟ್ಟೆಗೆ ಊಟ ಇಲ್ಲ, ತೊಡುವುದಕ್ಕೆ ಬಟ್ಟೆ ಇಲ್ಲ, ಇರುವುದಕ್ಕೆ ಸೂರು ಇಲ್ಲ, ಎಷ್ಟು ದಿನ ಹೋರಾಟ ಮಾಡುತ್ತಾರೆ? ಜಾನುವಾರು, ಮನೆ ಮಠ, ಇದ್ದಂತಹ ಸಣ್ಣ ಪುಟ್ಟ ಒಡವೆ ವಸ್ತ್ರಗಳನ್ನು ಕಳೆದುಕೊಂಡರು, ಜಮೀನು ಕಳೆದುಕೊಂಡರು. ನಾವು ಏನು ಕೊಟ್ಟರೂ ಕೂಡ ಅದನ್ನು ನಾವು ಹಿಂದಿನ ವ್ಯವಸ್ಥೆಗೆ ತರುವುದಕ್ಕೆ ಆಗುವುದಿಲ್ಲ. ಇವತ್ತು ಊರು ಊರಿನ ನಡುವೆ ಸೇತುವೆಗಳು ಹಾಳಾಗಿ ಸಂಪರ್ಕವೇ ಕಡಿದು ಹೋಗಿದೆ. ಇಂತಹ ಪರಿಸ್ಥಿತಿಯಲ್ಲಿ ರಾಜ್ಯ ಸರ್ಕಾರ ಎಲ್ಲಾ ಪ್ರಯತ್ನಗಳನ್ನು ಮಾಡುತ್ತಿದೆ. ಇನ್ನೂ ಪರಿಣಾಮಕಾರಿಯಾಗಿ ಮಾಡುವುದಕ್ಕೆ ಅವಕಾಶಗಳಿದೆ. ಮಾನ್ಯ ಮುಖ್ಯಮಂತ್ರಿಗಳಿದ್ದಾರೆ, ಜಿಲ್ಲಾ ಉಸ್ತುವಾರಿ ಸಚಿವರಿದ್ದಾರೆ, ಜಿಲ್ಲಾಧಿಕಾರಿಗಳಿದ್ದಾರೆ, ಅವರೆಲ್ಲರೂ ಕೂಡ ಕುಳಿತು ಪ್ರತಿ ಜಿಲ್ಲೆಯಲ್ಲಿ ಸಮರೋಪಾದಿಯಲ್ಲಿ ತಾವು ಅವರಿಗೆ ಪರಿಹಾರ ಕೊಡಬೇಕಾಗುತ್ತದೆ. ತಾವು ಹೇಳಿದಿರಿ; ಐದು ಲಕ್ಷ, 25,000, 5000, ಮನೆ ಬಾಡಿಗೆ ಈ ರೀತಿ ಒಂದು ಹೆಕ್ಟೇರಿಗೆ ಎಲ್ಲ ಪರಿಹಾರಗಳನ್ನೂ ಕಂದಾಯ ಸಚಿವರು ಬೆಳಿಗ್ಗೆ ಹೇಳುತ್ತಿದ್ದರು. ಅದನ್ನು ನಾನು ಕೇಳಿಸಿಕೊಂಡಿದ್ದೇನೆ. ಪರಿಹಾರಗಳು ಆನ್‌ಲೈನ್‌ನಲ್ಲಿ ನೇರವಾಗಿ ಬರುವಂತಹ ವ್ಯವಸ್ಥೆ ಮಾಡಿದ್ದೇವೆ ಎಂದು ವಿಧಾನಮಂಡಲದಲ್ಲಿ ಹೇಳಿದಿರಿ. ಇದನ್ನೆಲ್ಲಾ ಸ್ವಾಗತ ಮಾಡುತ್ತೇವೆ. ಪರಿಹಾರಗಳು ಸಿಗುವಲ್ಲಿ ಕೂಡ ಮಧ್ಯವರ್ತಿಗಳಿಂದ ದೊಡ್ಡ ಕಿರುಕುಳವಾಗುತ್ತಿತ್ತು. ಅದನ್ನು ತಪ್ಪಿಸುವಂತಹ ಪ್ರಯತ್ನ ಮಾಡಿದ್ದೀರಿ. ಇನ್ನೂ ಕೂಡ ಇಂತಹ ವ್ಯವಸ್ಥೆಯನ್ನು ಗಟ್ಟಿಗೊಳಿಸುವಂತಹ ಪ್ರಯತ್ನಗಳನ್ನು ಮಾಡಿ, ಅದಕ್ಕೆಲ್ಲಾ ನಮ್ಮ ಸಹಕಾರ ಇದೆ. ಆದರೆ ದಯಮಾಡಿ ಜಿಲ್ಲಾ ಉಸ್ತುವಾರಿ ಸಚಿವರು ಮತ್ತು ಜಿಲ್ಲಾಧಿಕಾರಿಗಳೆಲ್ಲರೂ ಕೂಡ ಸ್ಥಳದಲ್ಲಿಯೇ ಮೊಕ್ಕಾಂ ಮಾಡಿ ಆ ಜಿಲ್ಲೆಯಲ್ಲಿ, ಹಳ್ಳಿಗಳಲ್ಲಿ ಏನೇನು ಅನಾಹುತಗಳಾಗಿವೆ ಅವೆಲ್ಲಾ ಪಟ್ಟಿಗಳು ಈಗಾಗಲೇ ಸಿದ್ಧವಾಗಿವೆ. ಅವರಿಗೆ ಯಾವ ರೀತಿಯ ತಾತ್ಕಾಲಿಕ ಪರಿಹಾರಗಳನ್ನು ಕೊಡಬೇಕೋ ಅವನ್ನು ಇಂತಹ ದಿನದೊಳಗೆ ಕೊಡುತ್ತೇವೆ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಎನ್ನುವುದನ್ನು ಅಲ್ಲೇ ಘೋಷಣೆ ಮಾಡಿ, ಅವರಿಗೆ ತಿಳುವಳಿಕೆ ಕೊಟ್ಟು ಅವರು ಮನೆಗೆ ಸೇರುವಂತಹ ಒಂದು ವ್ಯವಸ್ಥೆಯನ್ನು ಮಾಡುತ್ತೇವೆ ಎಂದಾಗ ಈ ಸದನದ ಮೂಲಕ ಆ ಸಂದೇಶ ನೆರೆ ಸಂತ್ರಸ್ತರಿಗೆ ಹೋದಾಗ ಅವರು ಸ್ವಲ್ಪ ಗಟ್ಟಿಯಾಗಿ ಉಸಿರಾಡುತ್ತಾರೆ. ಅವರೆಲ್ಲಾ ಈಗ ವೆಂಟಿಲೇಟರ್‌ನಲ್ಲಿದ್ದಾರೆ. ಸಾವು ಬದುಕಿನ ನಡುವೆ, ಬದುಕಿದ್ದು ಕೂಡ ಸತ್ತ ಹಾಗೆ ಅವರ ಜೀವನ ಆಗಿದೆ. ಅವರ ಜೀವನದ ಜೊತೆ ನಾವು ಚೆಲ್ಲಾಟವಾಡಬಾರದು. ಈ ಮೂರು ದಿನಗಳ ಅಧಿವೇಶನದಲ್ಲಿ ಸರ್ಕಾರ ನಿರ್ದಿಷ್ಟವಾಗಿ ಮಾನ್ಯ ಮುಖ್ಯಮಂತ್ರಿಯವರು ಇಂಥಿಂಥ ದಿನಗಳಲ್ಲಿ ಇಂಥಿಂಥ ಪರಿಹಾರಗಳನ್ನು ಘೋಷಣೆ ಮಾಡುತ್ತೇವೆ ಎಂದು ತಿಳಿಸಿದರೆ ಅವರೆಲ್ಲರಿಗೂ ಆತ್ಮಸ್ಥೈರ್ಯವನ್ನು ಅವರ ಬದುಕಿಗೆ ತಂದುಕೊಟ್ಟಂತಾಗುತ್ತದೆ. ಆ ಕೆಲಸ ಆಗಬೇಕಾಗಿದೆ. ಎಲ್ಲಾ ಸಂದರ್ಭಗಳಲ್ಲಿಯೂ ಕೇಂದ್ರ ಸರ್ಕಾರದ ಕಡೆಗೆ ಕೈ ತೋರಿಸುತ್ತಿದ್ದೇವೆ. ಇದು ಎಲ್ಲಾ ಪಕ್ಷಗಳೂ ಮಾಡುವಂತಹ ಕೆಲಸಗಳು. ಕೇಂದ್ರ ಸರ್ಕಾರದ ಜೊತೆಗೆ ಇನ್ನೂ ಹೆಚ್ಚಿನ ಪರಿಹಾರ ಕೇಳಲು ಸರ್ವ ಪಕ್ಷಗಳ ನಿಯೋಗ ಹೋಗೋಣ. ಮಾನ್ಯ ಪ್ರಧಾನಮಂತ್ರಿಯವರಲ್ಲಿ ಹೆಚ್ಚಿನ ಪರಿಹಾರ ಕೊಡಬೇಕೆಂದು ಒತ್ತಾಯ ಮಾಡೋಣ. ಇದರ ಜೊತೆಗೆ ಮಾನ್ಯ ಸಚಿವರೊಬ್ಬರು ರಾಜ್ಯ ವಿಪತ್ತು ನಿಧಿಯಲ್ಲಿ ಇಂತಿಂಥದ್ದಕ್ಕೆ ಇಂತಿಷ್ಟು ಪರಿಹಾರ ಕೊಡಬೇಕೆಂಬುದು ಬಹಳ ವರ್ಷಗಳಿಂದ ನಿಗದಿಯಾಗಿದೆ, ಅವುಗಳನ್ನು ಈಗ ಬದಲಾವಣೆ ಮಾಡುವುದಕ್ಕಾಗುವುದಿಲ್ಲ, ಅದೇ ರೀತಿ ಕೊಡಬೇಕೆಂದು ಹೇಳುತ್ತಿದ್ದರು. ಇದು ಗೊತ್ತಿರುವ ವಿಚಾರವಾಗಿದೆ. ಆದರೆ ನಮ್ಮ ರಾಜ್ಯ ಸರ್ಕಾರ ಇವತ್ತು ವಿಶೇಷವಾಗಿ ಇಂತಹ ನೆರೆ ಸಂತ್ರಸ್ತರಿಗೆ, ಹಾಳಾಗಿರುವ ಅವರ ಬದುಕಿಗೆ ತನ್ನ ಬೊಕ್ಕಸದಿಂದ ಏನಾದರೂ ನೆರವು ಕೊಟ್ಟು ಅವರ ಬದುಕಿಗೆ ಒಂದು ಆಸರೆ ಕೊಡುವುದನ್ನು ಮಾಡಬೇಕೆನ್ನುವುದು ನಮ್ಮೆಲ್ಲರ ಒತ್ತಾಯವಾಗಿದೆ. ತಾವು ವಿಶೇಷವಾಗಿ ರಾಜ್ಯ ಸರ್ಕಾರದಿಂದ 10,000 ರೂಪಾಯಿಗಳ ಪರಿಹಾರವನ್ನು ಕೊಡುತ್ತಿದ್ದೇವೆಂದು ಹೇಳಿದಿರಿ. ಒಂದು ಕುಟುಂಬಕ್ಕೆ 10,000 ರೂಪಾಯಿ ಎಷ್ಟು ದಿನ ಬರಬಹುದು, ಅಷ್ಟು ಹಣಕ್ಕೆ ಏನು ಬರಬಹುದು ಹೇಳಿ. ಇಂತಹ ಪರಿಹಾರಗಳಿಂದ ಅವರನ್ನು ಪರಿಪೂರ್ಣವಾಗಿ ಬದುಕಿಸುವುದಕ್ಕೆ ಸಾಧ್ಯವಿಲ್ಲ. ಆದರೆ ಇನ್ನು ಸ್ವಲ್ಪ ದಿನಗಳಾದರೂ ಅವರು ಎಲ್ಲಾ ಸವಲತ್ತುಗಳನ್ನು ರೂಢಿಸಿಕೊಳ್ಳುವವರೆಗಾದರೂ ಕೂಡ ಅವರು ಬದುಕುವ ವ್ಯವಸ್ಥೆಗೆ ಪರಿಹಾರವನ್ನು ಕೊಡಬೇಕು. ಇವತ್ತು ಉದಾಹರಣೆಗಳಿವೆ, ಕರ್ನಾಟಕ ರಾಜ್ಯದಲ್ಲಿ ಹಿಂದಿನ ಸರ್ಕಾರಗಳು, ಯಾವುದೇ ಸರ್ಕಾರ ಇರಬಹುದು ಅವರು ಸಂಕಷ್ಟಕ್ಕೆ ಬಂದಂತಹ ಸಂದರ್ಭದಲ್ಲಿ ಅಂದರೆ ಚುನಾವಣೆಯ ಸಂದರ್ಭದಲ್ಲಿ ಇರಬಹುದು ಅಥವಾ ಚುನಾವಣೆಗಿಂತ ಮೊದಲಿನ ಸಂದರ್ಭ ಇರಬಹುದು, ಇಂತಹ ಸಂದರ್ಭಗಳು ಬಂದಾಗ ವಿಶೇಷವಾದ ಪರಿಹಾರಗಳನ್ನು ಕೊಟ್ಟಿವೆ. ಎಷ್ಟೋ ಸಲ ಸಾಲ ಮನ್ನಾ ಮಾಡಿದ್ದೇವೆ. ಉದಾಹರಣೆಗೆ ಮೊನ್ನೆ ಇದ್ದಂತಹ ಮಾನ್ಯ ಹೆಚ್.ಡಿ.ಕುಮಾರಸ್ವಾಮಿ ಮತ್ತು ಮಾನ್ಯ ಡಾ: ಜಿ.ಪರಮೇಶ್ವರ್ ರವರು ಇದ್ದಂತಹ ಸರ್ಕಾರದಲ್ಲಿ ಸುಮಾರು 48,000 ಕೋಟಿ ರೂಪಾಯಿಗಳ ಸಾಲವನ್ನು ಇಡೀ ಭಾರತ ದೇಶದಲ್ಲಿ ಯಾವುದೇ ರಾಜ್ಯ ಸ್ವಾತಂತ್ರ್ಯಾ ನಂತರ

ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ರೈತರಿಗೋಸ್ಕರ ಕೊಡಲಿಲ್ಲ. ಅದು ಚುನಾವಣೆ ಸಂದರ್ಭದಲ್ಲಿ ಕೊಟ್ಟಂತಹ ಭರವಸೆ ಎಂದು ಹೇಳಿ ಸಮ್ಮಿಶ್ರ ಸರ್ಕಾರದಲ್ಲಿ ರೈತರ ಸುಮಾರು 48,000 ಕೋಟಿ ರೂಪಾಯಿಗಳ ಸಾಲವನ್ನು ಮನ್ನಾ ಮಾಡಿತು. ಇವತ್ತು ಅದಕ್ಕಿಂತ ದೊಡ್ಡ ಪ್ರಮಾಣದ ಹಾನಿ ಗ್ರಾಮೀಣ ಪ್ರದೇಶದಲ್ಲಿ ನೆರೆ ಹಾವಳಿಯಿಂದ ಆಗಿದೆ. ಆ ಜನರ ಸಂಕಷ್ಟಕ್ಕೆ ರಾಜ್ಯ ಸರ್ಕಾರ ವಿಶೇಷವಾಗಿ 25,000 ಕೋಟಿ ರೂಪಾಯಿಗಳನ್ನು ನೆರೆ ಸಂತ್ರಸ್ತರ ಬದುಕಿಗಾಗಿ ಕೊಡಬೇಕು. ಅದನ್ನು ಈ ಸದನದಲ್ಲಿ ತಾವು ಘೋಷಣೆ ಮಾಡಿ, ಆಗ ಈ ಸರ್ಕಾರ ಆ ಜನರ ರಕ್ಷಣೆಗಿದೆ ಎಂದು ಹೇಳಬಹುದು. ಈ ಸರ್ಕಾರದ ಬಗ್ಗೆ ಅಲ್ಲ, ಯಾವುದೇ ಸರ್ಕಾರ ಇರಲಿ, ಆ ಜನರನ್ನು ಉಳಿಸಬೇಕು, ರಕ್ಷಣೆ ಮಾಡಬೇಕು, ಅವರ ಬದುಕುಗಳನ್ನು ಕಟ್ಟಬೇಕು ಅದು ಸರ್ಕಾರದ ಜವಾಬ್ದಾರಿಯಾಗಿದೆ. ಅದಕ್ಕೋಸ್ಕರ ದಯಮಾಡಿ 25,000 ಕೋಟಿ ರೂಪಾಯಿಗಳನ್ನು ರಾಜ್ಯ ಸರ್ಕಾರ ಈ ನೆರೆ ಸಂತ್ರಸ್ತರಿಗೆ ಇಂಥಿಂಥ ಸಂಬಂಧವಾಗಿ ಕೊಡುತ್ತೇವೆ, ಘೋಷಣೆ ಮಾಡುತ್ತೇವೆ ಎಂದು ಹೇಳಿದರೆ ಅವರು ಬದುಕನ್ನು ಕಟ್ಟಿಕೊಳ್ಳುವುದಕ್ಕೆ ಅವಕಾಶವಾಗುತ್ತದೆ. ಇಂತಹ ಘೋಷಣೆಯನ್ನು ಮಾಡಿದ ಬಹಳಷ್ಟು ನಿದರ್ಶನಗಳಿವೆ, ನಾನು ಹೆಚ್ಚು ಚರ್ಚೆ ಮಾಡುವುದಕ್ಕೆ ಹೋಗುವುದಿಲ್ಲ. ದಯಮಾಡಿ ನಾಳೆ ಉತ್ತರ ಕೊಡುವಂತಹ ಸಂದರ್ಭದಲ್ಲಿ ಅಥವಾ ಈ ದಿನ ಉತ್ತರ ಕೊಡುವಂತಹ ಸಂದರ್ಭದಲ್ಲಿ ತಾವು ರಾಜ್ಯ ಸರ್ಕಾರದ ಪರಿಹಾರವನ್ನು ವಿಶೇಷವಾಗಿ ಈ ನೆರೆ ಸಂತ್ರಸ್ತರಿಗೆ 25,000 ಕೋಟಿ ರೂಪಾಯಿಗಳನ್ನು ಕೊಡಿ. ಈ ಸರ್ಕಾರ ಬಂದ ಮೇಲೆ ಇವತ್ತು ಬಹಳಷ್ಟು ಜಿಲ್ಲೆಗಳಲ್ಲಿ ಹಿಂದಿನ ಸರ್ಕಾರ ಮಂಜೂರಾತಿ ಮಾಡಿದೆ ಎಂದು ಎಲ್ಲಾ ಕಾಮಗಾರಿಗಳನ್ನು ತಡೆಗಟ್ಟಿದ್ದೀರಿ, ಕಾಮಗಾರಿಗಳನ್ನು ಮಾಡಬಾರದೆಂದು ನಿರ್ದೇಶನ ಕೊಟ್ಟಿದ್ದೀರಿ. ಅದರಿಂದ ಕೂಡ ಬೊಕ್ಕಸದಲ್ಲಿ ಸಾವಿರಾರು ಕೋಟಿ ಹಣ ಇದೆ. ಇವತ್ತು ದಯಮಾಡಿ ರಾಜ್ಯ ಸರ್ಕಾರದಿಂದ 25,000 ಕೋಟಿ ರೂಪಾಯಿಗಳನ್ನು ಕೊಡಿ. ಇಂತಹ ಗಟ್ಟಿತನದ ನಿಲುವನ್ನು ಈ ಸದನದಲ್ಲಿ ತಾವು ನೆರೆ ಸಂತ್ರಸ್ತರ ಬದುಕಿಗಾಗಿ ಘೋಷಣೆ ಮಾಡಿ. ಅದನ್ನು ನಿಗದಿತ ಸಮಯದೊಳಗಡೆ ಅವರಿಗೆ ಸರಿಯಾದ ಮಾರ್ಗದಲ್ಲಿ ತಲುಪುವಂತೆ ಮಾಡಿ ಎಂದು ಹೇಳುತ್ತಾ ಮಾನ್ಯ ಸಭಾಪತಿಗಳ ಮೂಲಕ ತಮ್ಮಲ್ಲಿ ವಿನಂತಿ ಮಾಡಿ ಇಷ್ಟು ಹೊತ್ತು ನನಗೆ ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ವಂದಿಸಿ ನನ್ನೆರಡು ಮಾತುಗಳಿಗೆ ವಿರಾಮ ಕೊಡುತ್ತೇನೆ.

(ಮುಂದು . . .

(171) 11-10-2019 /6-10/ಕೆಹೆಚ್-ಜಿಆರ್ 155

**(ಸಭಾಪತಿಯವರ ಉಪಸ್ಥಿತಿ)**

**ಶ್ರೀ ಸಿ.ಸಿ. ಪಾಟೀಲ್ (ಗಣಿ ಮತ್ತು ಭೂವಿಜ್ಞಾನ ಸಚಿವರು):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಹತ್ತು ಸಾವಿರ ರೂಪಾಯಿಗಳು ಪರಿಹಾರ ಎಂದು ಹೇಳಿದ್ದರಲ್ಲವೇ, ಆ ಹತ್ತು ಸಾವಿರ ರೂಪಾಯಿಗಳ

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮೊತ್ತ ಪರಿಹಾರ ಅಲ್ಲ, ಪ್ರವಾಹ ಪೀಡಿತ ಪ್ರದೇಶಗಳಲ್ಲಿರುವ ಮನೆಗಳಿಗೆ ನೀರು ಹೋಗಿ ಪಾತ್ರೆ, ಬಟ್ಟೆ–ಬರೆಗಳು ನಾಶವಾಗಿದ್ದು, ಅದನ್ನು ಕೊಂಡುಕೊಳ್ಳುವುದಕ್ಕೆ ಈ additional grant ಕೊಟ್ಟಿದ್ದೇವೆ. ಇದು ಪರಿಹಾರದ ಮೊತ್ತವಲ್ಲ. For the first time, we have introduced this in the State of Karnataka.

**ಶ್ರೀ ಕೆ.ಎ.ತಿಪ್ಪೇಸ್ವಾಮಿ (ನಾಮನಿರ್ದೇಶಿತರು):–** ಮಾನ್ಯ ಸಭಾಪತಿಯವರೇ, ಇದು one time ಪರಿಹಾರವಾಗಿದೆ. ಈ ರೀತಿ ಮೊದಲ ಬಾರಿ ಪರಿಹಾರ ಕೊಟ್ಟಿಲ್ಲ. ಇದೇ ರೀತಿ ಹಿಂದೆಯೂ ಸಹ ಪರಿಹಾರ ಕೊಟ್ಟಿದ್ದಾರೆ.

**ಶ್ರೀ ಸಿ.ಸಿ. ಪಾಟೀಲ್:–** ಮಾನ್ಯ ಸಭಾಪತಿಯವರೇ, ಪ್ರವಾಹ ಬಂದು ಮನೆಗಳಿಗೆ ನೀರು ಹೋಗಿರುವ ಸಂತ್ರಸ್ತರ ಪಾತ್ರೆ, ಬಟ್ಟೆ–ಬರೆಗಳನ್ನು ಕೊಂಡುಕೊಳ್ಳುವುದಕ್ಕೆ ಒಂದು ಬಾರಿಗೆ ಹತ್ತು ಸಾವಿರ ರೂಪಾಯಿಗಳ ಪರಿಹಾರವನ್ನು ಕೊಡಲಾಗಿದೆ.

**ಶ್ರೀ ಕೆ.ಎ.ತಿಪ್ಪೇಸ್ವಾಮಿ:–** ಮಾನ್ಯ ಸಭಾಪತಿಯವರೇ, ಇದನ್ನು one time relief ಎಂದು ಕರೆಯುತ್ತಾರೆ.

**(ಗೊಂದಲ)**

**ಶ್ರೀ ಐವನ್ ಡಿ'ಸೋಜಾ:–** ಮಾನ್ಯ ಸಭಾಪತಿಯವರೇ, ಕೊಡಗು ಜಿಲ್ಲೆಯಲ್ಲಿ ಪ್ರವಾಹ ಪೀಡಿತ ಪ್ರದೇಶದ ಜನರಿಗೆ 50 ಸಾವಿರ ರೂಪಾಯಿಗಳನ್ನು ಕೊಟ್ಟಿದ್ದಾರೆ.

**ಶ್ರೀ ಸಿ.ಸಿ. ಪಾಟೀಲ್:–** ಮಾನ್ಯ ಸಭಾಪತಿಯವರೇ, ಕೊಡಗು ಜಿಲ್ಲೆಯಲ್ಲಿಯೂ ಕೂಡ ಅಪಾರವಾದ ಹಾನಿಯುಂಟಾಗಿತ್ತು. ಆದರೆ ಈ ಬಾರಿ 30 ಜಿಲ್ಲೆಗಳ ಪೈಕಿ 16 ಜಿಲ್ಲೆಗಳಿಗಿಂತ ಹೆಚ್ಚು ಜಿಲ್ಲೆಗಳಲ್ಲಿ ಪ್ರವಾಹ ಉಂಟಾಗಿದೆ ಎಂಬ ಅಂಶವನ್ನು ತಾವೆಲ್ಲರೂ ಗಮನದಲ್ಲಿಟ್ಟುಕೊಳ್ಳಬೇಕು. ಒಟ್ಟು 22 ಜಿಲ್ಲೆಗಳು ಮತ್ತು ಮುಕ್ಕಾಲು ಭಾಗ ಭಾರತ, I repeat, ಮುಕ್ಕಾಲು ಭಾಗ ಭಾರತವು ಪ್ರವಾಹಕ್ಕೆ ಒಳಗಾಗಿದೆ.

**ಶ್ರೀ ಮರಿತಿಬ್ಬೇಗೌಡ:–** ಮಾನ್ಯ ಸಭಾಪತಿಯವರೇ, ನಾನು ಈ ವಿಷಯವನ್ನು ಅದಕ್ಕೆ ಹೇಳಿದ್ದೇನೆ. ಮಾನ್ಯ ಸಚಿವರೇ, ಪ್ರವಾಹದಿಂದ ಮನೆಗಳಿಗೆ ನೀರು ನುಗ್ಗಿ ಎಲ್ಲಾ ವಸ್ತುಗಳು ಕೊಚ್ಚಿಕೊಂಡು ಹೋಗಿರುವುದರಿಂದ, ಅವರಿಗೆ ಯಾವುದೇ ರೀತಿಯ ವಸ್ತುಗಳು ಇರುವುದಿಲ್ಲ. ಅವರು ತಟ್ಟೆ, ಚೆಂಬು ಮತ್ತು ಇನ್ನಿತರ ವಸ್ತುಗಳನ್ನು ತೆಗೆದುಕೊಳ್ಳುವುದಕ್ಕೆ ಹತ್ತು ಸಾವಿರ ರೂಪಾಯಿಗಳನ್ನು ನೀಡಲಾಗಿದೆ ಎಂದು ಮಾನ್ಯ ಸಚಿವರು ಹೇಳಿರುವುದು ನನಗೆ ಅರ್ಥವಾಯಿತು. ಈಗಿನ ಕಾಲದಲ್ಲಿ ಹತ್ತು ಸಾವಿರ ರೂಪಾಯಿಗಳಿಗೆ ಏನು ಬರುತ್ತದೆ? ಹಾಗೆಯೇ ನಾನು ಅವರಿಗೆ ಹತ್ತು ಲಕ್ಷ ರೂಪಾಯಿಗಳನ್ನು ಕೊಡಬೇಕೆಂದು ನಾನು ಹೇಳುವುದಿಲ್ಲ. ಅಷ್ಟು ಹಣವನ್ನು ಕೊಡುವುದಕ್ಕೆ ಸಾಧ್ಯವಿಲ್ಲ. ಆದರೆ ಹತ್ತು ಸಾವಿರ ರೂಪಾಯಿಗಳಲ್ಲಿ ಅವರು ಪರಿಪೂರ್ಣವಾಗಿ ಬದುಕು ಕಟ್ಟುವುದಕ್ಕೆ



" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಸಾಧ್ಯವಿಲ್ಲವೆಂದು ನಾನು ಪದೇ ಪದೇ ಹೇಳಿದ್ದೇನೆ. ಆದರೆ, ಇದನ್ನು ದಯಮಾಡಿ one time relief ಮಾತ್ರ . . .

**ಶ್ರೀ ಸಿ.ಸಿ. ಪಾಟೀಲ್:–** ಮಾನ್ಯ ಸಭಾಪತಿಯವರೇ, ಮಾನ್ಯ ಮರಿತಿಬ್ಬೇಗೌಡರವರ ಕಳಕಳಿಯನ್ನು ಸರ್ಕಾರವು ಅರ್ಥ ಮಾಡಿಕೊಳ್ಳುತ್ತದೆ. ಆದರೆ ಮಾನ್ಯ ಮುಖ್ಯಮಂತ್ರಿಯವರು ಇದರಲ್ಲಿ ಎ, ಬಿ, ಸಿ ಎಂದು ಕ್ಯಾಟಗರಿಗಳನ್ನು ಮಾಡುವ ನಿರ್ಧಾರವನ್ನು ತೆಗೆದುಕೊಂಡಿದ್ದಾರೆ. ಅದರಲ್ಲಿ 'ಎ' ಕ್ಯಾಟಗರಿಗೆ ಐದು ಲಕ್ಷ ರೂಪಾಯಿಗಳು, 'ಬಿ' ಕ್ಯಾಟಗರಿಗೆ ಒಂದು ಲಕ್ಷ ರೂಪಾಯಿಗಳು ಮತ್ತು 'ಸಿ' ಕ್ಯಾಟಗರಿಗೆ ಇಪ್ಪತ್ತೈದು ಸಾವಿರ ರೂಪಾಯಿಗಳೆಂದು ಹೇಳಿದ್ದಾರೆ. ಕೆಲವು ಜಿಲ್ಲೆಗಳಿಗೆ ಮಾನ್ಯ ಮುಖ್ಯಮಂತ್ರಿಗಳು ಪ್ರವಾಸ ಬಂದಂತಹ ಸಂದರ್ಭದಲ್ಲಿ ವಾಸ್ತವವಾಗಿ ಬಿದ್ದಿರುವಂತಹ 'ಎ' ಕ್ಯಾಟಗರಿ ಮನೆಗಳಿಗೆ ಮತ್ತು ವರದಿಯಲ್ಲಿ ಬಂದಿರುವ ಮಾಹಿತಿಯಲ್ಲಿ ವ್ಯತ್ಯಾಸ ಕಂಡು ಬಂದಿರುವುದನ್ನು ಗಮನಿಸಿ 'ಎ' ಮತ್ತು 'ಬಿ' ಕ್ಯಾಟಗರಿ ಮನೆಗಳಿಗೆ ಐದು ಲಕ್ಷ ರೂಪಾಯಿಗಳ ಪರಿಹಾರವನ್ನು ನೀಡಬೇಕೆಂಬ ದಿಟ್ಟವಾದ ನಿರ್ಧಾರವನ್ನು ಮಾನ್ಯ ಮುಖ್ಯಮಂತ್ರಿಯವರು ತೆಗೆದುಕೊಂಡಿದ್ದು, ಈ ಕ್ಯಾಟಗರಿಗಳಿಗೆ ಐದು ಲಕ್ಷ ರೂಪಾಯಿಗಳನ್ನು ಕೊಡುತ್ತಿದ್ದೇವೆ.

**ಶ್ರೀ ಮರಿತಿಬ್ಬೇಗೌಡ:–** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರೇ, ಕೇಂದ್ರ ಸರ್ಕಾರದ ಸಹಾಯ ಧನವನ್ನು ಹೊರತುಪಡಿಸಿ, ಅವರ ಸರ್ಕಾರದಿಂದ ಇಪ್ಪತ್ತೈದು ಸಾವಿರ ಕೋಟಿ ರೂಪಾಯಿಗಳನ್ನು ಪ್ರವಾಹ ಪೀಡಿತ ಪ್ರದೇಶಗಳಿಗೆ ಕೊಟ್ಟುಬಿಡಲಿ. ಆಗ ಅವರುಗಳ ಹೆಸರುಗಳು ಭಾರತ ದೇಶದ ಇತಿಹಾಸದಲ್ಲಿ ಉಳಿಯುತ್ತದೆ.

**ಶ್ರೀ ಶರಣಪ್ಪ ಮಟ್ಟೂರ:–** ಮಾನ್ಯ ಮರಿತಿಬ್ಬೇಗೌಡರವರೇ, ಒಂದು ನಿಮಿಷ.

**ಶ್ರೀ ಐವನ್ ಡಿ'ಸೋಜಾ:–** ಮಾನ್ಯ ಸಭಾಪತಿಯವರೇ, ಈ ವಿಷಯದ ಮೇಲೆ ಚರ್ಚೆ ಮಾಡುವುದಕ್ಕೆ ಮಹಿಳಾ ಸದಸ್ಯರು ಅವಕಾಶಕ್ಕಾಗಿ ಕಾಯುತ್ತಿದ್ದಾರೆ.

**ಶ್ರೀ ಶರಣಪ್ಪ ಮಟ್ಟೂರ:–** ಮಾನ್ಯ ಸಭಾಪತಿಯವರೇ, ಅವರು ಮಾನ್ಯ ಸಚಿವರಾದ ಮಾಧುಸ್ವಾಮಿಯವರು ಸದನಕ್ಕೆ ಬಂದಾಗ fair ಆಗಿ As per the NDRF norms as well as the SDRF norms ಪ್ರಕಾರ ಮೂರೂವರೆ ಸಾವಿರ ರೂಪಾಯಿಗಳನ್ನು ದಾಟುವುದಕ್ಕೆ ಆಗುವುದಿಲ್ಲವೆನ್ನುವ ಒಂದು ಮಾತನ್ನು ಹೇಳಿದರು. ಅದನ್ನು ಮಾನ್ಯ ಮರಿತಿಬ್ಬೇಗೌಡರವರು ಗಮನಿಸಿಲ್ಲವೆಂದು ನನಗನಿಸುತ್ತದೆ. ನಮ್ಮ ವರದಿಯ ಪ್ರಕಾರ ಮೂವತ್ತೆಂಟು ಸಾವಿರ ಕೋಟಿ ರೂಪಾಯಿಗಳ ಅಂದಾಜನ್ನು ಕೇಂದ್ರ ಸರ್ಕಾರಕ್ಕೆ ಕಳುಹಿಸಿಕೊಡಲಾಗಿತ್ತು. ಆದರೆ, ಅದನ್ನು re-appreciation ಮಾಡಿ ಮೂವತ್ತೈದು ಸಾವಿರ ಕೋಟಿ ರೂಪಾಯಿಗಳಿಗೆ ಕಡಿಮೆ ಮಾಡಿ ಕೇಂದ್ರ ಸರ್ಕಾರಕ್ಕೆ ಕಳುಹಿಸಿದ್ದಾರೆ. ಮಾನ್ಯ ಸಚಿವರಾದ ಮಾಧುಸ್ವಾಮಿ ಮತ್ತು ಮಾನ್ಯ ಕೋಟ ಶ್ರೀನಿವಾಸ ಪೂಜಾರಿಯವರು ಸಹ 3500 ಅಥವಾ 3700 ಕೋಟಿ ರೂಪಾಯಿಗಳಿಗಿಂತ ಅಂದರೆ ಶೇಕಡಾ 10ಕ್ಕಿಂತ ಜಾಸ್ತಿ ಕೊಡುವುದಕ್ಕೆ ಆಗುವುದಿಲ್ಲವೆನ್ನುವ ಮಾತನ್ನು ನೇರವಾಗಿ ಹೇಳಿದ್ದಾರೆ. ಬೇಡಿಕೆ ಶೇಕಡ 25 ರಷ್ಟು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಎಂದಿದ್ದರೂ ಅಷ್ಟರಮಟ್ಟಿಗೆ ಕೊಡುವುದಕ್ಕೆ ಆಗುವುದಿಲ್ಲ. ಆದರೆ ಈಗ ಶೇಕಡ 10ರಷ್ಟು ಎಂದರೆ 1200 ಕೋಟಿ ರೂಪಾಯಿಗಳನ್ನು ಕೊಟ್ಟರೂ ಪ್ರವಾಹ ಪೀಡಿತರಿಗೆ ಬಹಳ ಅನುಕೂಲವಾಗುತ್ತದೆ ಎಂದು ಹೇಳುವುದಕ್ಕೆ ಬಯಸುತ್ತೇನೆ.

**ಶ್ರೀ ಪ್ರಕಾಶ್ ಕೆ. ರಾಥೋಡ್:–** ಮಾನ್ಯ ಸಭಾಪತಿಯವರೇ, . . .

**ಶ್ರೀ ಶರಣಪ್ಪ ಮಟ್ಟೂರ:–** ಮಾನ್ಯ ಪ್ರಕಾಶ್ ಕೆ. ರಾಥೋಡ್‌ರವರೇ, ಒಂದು ನಿಮಿಷ.

**ಶ್ರೀ ಐವನ್ ಡಿ'ಸೋಜಾ:–** ಮಾನ್ಯ ಸಭಾಪತಿಯವರೇ, ವಿಶೇಷ ಪ್ಯಾಕೇಜ್‌ನಲ್ಲಿ ಕೊಡಲಿ.

**ಶ್ರೀ ಶರಣಪ್ಪ ಮಟ್ಟೂರ:–** ಮಾನ್ಯ ಸಭಾಪತಿಯವರೇ, ನೆನ್ನೆ ಮತ್ತು ಮೊನ್ನೆ ದಿವಸದಿಂದಲೂ ನಮ್ಮ ಪಕ್ಷದ ಕಡೆಯಿಂದ we are presenting the matter. ಅವರು national calamity ಎಂದು declare ಮಾಡುವುದಕ್ಕೂ ಅಲ್ಲೇ ಇರುತ್ತಾರೆ. ನಮ್ಮ ರಾಜ್ಯದಿಂದ ಇಂತಿಷ್ಟು contribution ಕೊಡುತ್ತೇವೆಂದು ಹೇಳುವುದಕ್ಕೂ ಸಹ ಸರ್ಕಾರ ಸಿದ್ಧವಿಲ್ಲ.

**ಘೋಟ್ನೆಕರ ಶ್ರೀಕಾಂತ ಲಕ್ಷ್ಮಣ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಅವಕಾಶಕ್ಕಾಗಿ ಧನ್ಯವಾದಗಳು. ನೆರೆ ಹಾವಳಿಯ ಬಗ್ಗೆ ಸಾಕಷ್ಟು ಮಾನ್ಯ ಸದಸ್ಯರು ಬೆಳಕನ್ನು ಚೆಲ್ಲಿದ್ದಾರೆ. ಅದರ ಬಗ್ಗೆ ನಾನು ಹೆಚ್ಚಾಗಿ ಮಾತನಾಡುವುದಕ್ಕೆ ಹೋಗುವುದಿಲ್ಲ. ನಾನು ಕೂಡ ಉತ್ತರ ಕನ್ನಡ ಜಿಲ್ಲೆಯಿಂದ ಬಂದವನಾಗಿದ್ದೇನೆ. ನಮ್ಮ ಜಿಲ್ಲೆಯಲ್ಲಿಯೂ ಕೂಡ ಕಾಳಿ ನದಿ ಇದೆ. ನಮ್ಮ ಭಾಗದಲ್ಲಿ ಅರಣ್ಯ ಪ್ರದೇಶವು ಶೇಕಡ 80 ರಷ್ಟು ಇದ್ದು, ಉಳಿದ ಶೇಕಡ 20 ರಷ್ಟರಲ್ಲಿ ಜನರು ವಾಸ ಮಾಡುವುದಕ್ಕಾಗಿ ಮತ್ತು ಒಕ್ಕಲುತನಕ್ಕಾಗಿ ಉಪಯೋಗಿಸಲಾಗುತ್ತಿದೆ. ಅರಣ್ಯ ಪ್ರದೇಶದಿಂದ ಎಲ್ಲಾ ನೀರು ಜನರು ವಾಸ ಮಾಡುವ ಸ್ಥಳಕ್ಕೆ ಬರುತ್ತದೆ. ಈ ಸೂಪ ಡ್ಯಾಂ ಏಷ್ಯಾದಲ್ಲಿಯೇ 1ನೇ ಅಥವಾ 2ನೇ ಸ್ಥಾನಕ್ಕೆ ಇದೆ. ಅಷ್ಟು ದೊಡ್ಡ catchment area ಬರುತ್ತದೆ. ಅದಕ್ಕೆ ಪೂರಕವಾಗಿ ಕದ್ರಾ ಮತ್ತು ಕಟ್ಯಾಲ ಡ್ಯಾಂಗಳು ಇವೆ. Hydel project ಗಾಗಿ ಈ ಮೂರು ಡ್ಯಾಂಗಳನ್ನು ಉಪಯೋಗ ಮಾಡಲಾಗುತ್ತದೆ. ಇವತ್ತು ಕರ್ನಾಟಕದ ಕರಾವಳಿ ಜಿಲ್ಲೆಯಲ್ಲಿ ಅತೀ ಕಡಿಮೆ ಬೆಲೆಯಲ್ಲಿ electricity ಯನ್ನು ಕೊಡಲಾಗುತ್ತಿದೆ. ಆದ್ದರಿಂದ ಕರಾವಳಿ ಜಿಲ್ಲೆಯಲ್ಲಿ ಎಷ್ಟೋ ದನ–ಕರುಗಳ ಜೊತೆಗೆ ಕಾಡು ಪ್ರಾಣಿಗಳು ಸಹ ಸತ್ತು ಹೋಗಿವೆ. ಅದರ ಜೊತೆಗೆ ಇತಿಹಾಸದಲ್ಲಿಯೇ 3 ಬಾರಿ ಕದ್ರಾ ಡ್ಯಾಂ ತುಂಬಿದೆ. ಸೂಪಾ ಡ್ಯಾಂನ ನೀರನ್ನು ಇಷ್ಟು ದೊಡ್ಡ ಏರಿಯಾಗೆ ಬಿಟ್ಟಾಗ ಒಮ್ಮೆಲ್ಲೇ ಹೊಲ–ಗದ್ದೆ, ಕಬ್ಬು, ತೇಗ. ಮೆಕ್ಕೆಜೋಳ, ಭತ್ತ, ಹತ್ತಿ ಮತ್ತು ಇನ್ನಿತರ ಬೆಳೆಗಳೆಲ್ಲಾ ನಾಶವಾಯಿತು. ಅದರ ಜೊತೆಗೆ ಹಳೆಯ ತಾಲ್ಲೂಕಿನಲ್ಲಿ ಉಸುಕು ಬಂದು ಜೋಳ ಮತ್ತು ಇನ್ನಿತರ ಬೆಳೆಗಳು ನಾಶವಾಗಿವೆ. ಅದೇ ರೀತಿ ನಮ್ಮ ರೈತರ ಜಮೀನಿನಲ್ಲಿ ಸಾಕಷ್ಟು ಉಸುಕು ಬಂದು

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಶೇಖರಣೆಯಾಗಿದೆ. ರೈತರಿಗೆ ಈ ಉಸುಕನ್ನು ತೆಗೆಯುವುದಕ್ಕೂ ಸಹ ಆಗುತ್ತಿಲ್ಲ. ಈ ಉಸುಕನ್ನು ತೆಗೆಯುವುದಕ್ಕೆ ಅನುಮತಿಯೂ ಸಹ ಇಲ್ಲ.

**ಶ್ರೀ ಸಿ.ಸಿ. ಪಾಟೀಲ್:–** ಮಾನ್ಯ ಘೋಟ್ನೆಕರ ಶ್ರೀಕಾಂತ ಲಕ್ಷಣರವರೇ, ಒಂದು ನಿಮಿಷ. ನಾನು ಆ ಇಲಾಖೆಯ ಸಚಿವನಾಗಿದ್ದೇನೆ.

**ಶ್ರೀ ಘೋಟ್ನೆಕರ ಶ್ರೀಕಾಂತ ಲಕ್ಷ್ಮಣ:–** ಮಾನ್ಯ ಸಭಾಪತಿಯವರೇ, ಇದರ ಬಗ್ಗೆ ಪತ್ರಿಕೆಯಲ್ಲಿ ಅತ್ಯುತ್ತಮವಾಗಿ ವರದಿ ಬಂದಿದೆ.

**ಶ್ರೀ ಸಿ.ಸಿ. ಪಾಟೀಲ್:–** ಮಾನ್ಯ ಸಭಾಪತಿಯವರೇ, ಗಣಿ ಸಚಿವರ ಹತ್ತಿರ ಉಸುಕು ಬಗ್ಗೆ ಮಾತನಾಡಿದರೆ ಏನು ಮಾಡುವುದು.

**ಶ್ರೀ ಐವನ್ ಡಿ'ಸೋಜಾ:–** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಪದೇ ಪದೇ ಎದ್ದು ನಿಂತು ಮಾತನಾಡುತ್ತಿರುವುದರಿಂದ ಮಾನ್ಯ ಸದಸ್ಯರಿಗೆ ಮಾತನಾಡುವುದಕ್ಕೆ ಅವಕಾಶವೇ ಕೊಡುವುದಿಲ್ಲ.

**ಶ್ರೀ ಸಿ.ಸಿ. ಪಾಟೀಲ್:–** ಮಾನ್ಯ ಸಭಾಪತಿಯವರೇ, ನಾನು ಈ ವಿಷಯಕ್ಕೆ ಪೂರಕವಾಗಿ ಮಾತನಾಡುತ್ತಿದ್ದೇನೆ. ಪ್ರವಾಹಕ್ಕೆ ಒಳಪಟ್ಟ ಭೂಮಿಯಲ್ಲಿ ಉಸುಕು ಶೇಖರಣೆಯಾಗಿದೆಯೋ ಹಾಗೂ ಯಾವ ರೈತರ ಹೊಲದಲ್ಲಿ ಉಸುಕು ಶೇಖರಣೆಯಾಗಿದೆಯೋ, ಆತನ ಮನೆಗೆ ಆ ರೀತಿಯ ಉಸುಕನ್ನು ಅವಶ್ಯವಿರುವವರು ಪುಕ್ಕಟೆಯಾಗಿ ತೆಗೆದುಕೊಂಡು ಹೋಗಬಹುದು. ಉಳಿದಂತಹ ಹಣವನ್ನು District Task Force ನಲ್ಲಿ royalty ತುಂಬಿ ಮಾರುವುದಕ್ಕೆ an order has already been issued to all the District Collectors. This is for your information, sir.

**ಶ್ರೀ ಘೋಟ್ನೆಕರ ಶ್ರೀಕಾಂತ ಲಕ್ಷ್ಮಣ:–** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರಿಗೆ ಧನ್ಯವಾದಗಳು, ಪತ್ರಿಕೆಯಲ್ಲಿ ಬಂದಿರುವ ಸ್ಟೇಟ್‌ಮೆಂಟ್‌ನ್ನು ಓದಿದ್ದೇನೆ. ಇವತ್ತಿನ ದಿವಸ ಉಸುಕಿಗೆ ಸಂಬಂಧಿಸಿದಂತೆ ಒಂದು royalty ತೆಗೆದುಕೊಳ್ಳಬೇಕು. ಆದರೆ ಆ ಉಸುಕಿನಿಂದ ಬರುವಂತಹ ಹಣ ಆ ಸಂಬಂಧಪಟ್ಟ ರೈತರಿಗೆ ಸಿಗುವಂತಹ ವ್ಯವಸ್ಥೆಯಾಗಬೇಕು. ಈ ರೀತಿ ಪಟ್ಟಾ ಭೂಮಿಯಲ್ಲಿ ಇರುತ್ತದೆ. ಇದನ್ನು ತೆಗೆಯುವುದಕ್ಕೂ ಸಹ ಆಗುವುದಿಲ್ಲ. ಇವರು royalty ತೆಗೆದುಕೊಂಡು ರೈತರಿಗೆ permit ನ್ನು ಕೊಡಬಹುದು. Royalty ಗೆ ಏನು ವೆಚ್ಚವಾಗುತ್ತದೆ ಅದನ್ನು ತೆಗೆದುಕೊಳ್ಳಿ. ಇದಕ್ಕೆ permit ಕೊಟ್ಟರೆ, ಇದರಿಂದ ರೈತರಿಗೆ ಸ್ವಲ್ಪ ಹಣ ಬರುತ್ತದೆ. ದೊಡ್ಡ ಪ್ರಮಾಣದಲ್ಲಿ ಉಸುಕು ಬಂದಿರುವ ಹಿನ್ನಲೆಯಲ್ಲಿ 10 ರಿಂದ 50 ಟ್ರಿಪ್‌ಗಳು ಸಿಗಬಹುದು. ಇದರ ಬಗ್ಗೆ ನಮ್ಮ ಜಿಲ್ಲೆಯ ಜಿಲ್ಲಾಧಿಕಾರಿಗಳಿಗೆ ಮಾನ್ಯ ಸಚಿವರು ಹೇಳಬೇಕು. ಅದೇ ರೀತಿಯಲ್ಲಿ ಇವತ್ತಿನ ದಿವಸ ಪೀಕು ನಾಶವಾಗಿವೆ. ಕಬ್ಬನ್ನು ಯಾರು ಸಹ ತಿನ್ನುವುದಕ್ಕೂ ಆಗದ ಸ್ಥಿತಿಯಲ್ಲಿ ಇದೆ. ಇದರ ಬಗ್ಗೆ ಅಧಿಕಾರಿಗಳೆಲ್ಲರೂ ಹೋಗಿ ಸರ್ವೆ ಮಾಡಿದ್ದಾರೆ. ಒಂದು ತಿಂಗಳು ಮಳೆ ಬಂದಿರುವುದರಿಂದ ಕಬ್ಬು ಹಸಿರಾಗಿಯೇ ಕಾಣುತ್ತಿದೆ. ಈ



" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಮಳೆ ನಿಂತು ಕೇವಲ 8 ದಿನಗಳಲ್ಲಿ ಕಬ್ಬು, ಮೆಕ್ಕೆಜೋಳ, ಹತ್ತಿ ಮತ್ತು ಇನ್ನಿತರ ಬೆಳೆಗಳು ಒಣಗಿ ಹೋಗಿವೆ. ಸಂಪೂರ್ಣವಾಗಿ ಒಣಗಿ ಹೋಗಿರುವ ಬೆಳೆಗಳನ್ನು ತೆಗೆಯುವಂತಹ ಪರಿಸ್ಥಿತಿಯಲ್ಲಿ ರೈತರು ಇದ್ದಾರೆ. ಈ ಬೆಳೆಗಳಿಗೆ ಉಸುಕು ಸೇರಿರುವುದರಿಂದ ಇದನ್ನು ದನಕರುಗಳು ಸಹ ತಿನ್ನದೇ ಇರುವಂತಹ ಪರಿಸ್ಥಿತಿಯಲ್ಲಿ ರೈತರು ಇದ್ದಾರೆ. ನಾನು ಇನ್ನು ಹೆಚ್ಚು ಮಾತನಾಡುವುದಕ್ಕೆ ಹೋಗುವುದಿಲ್ಲ. ಇನ್ನೊಂದು ವಿಷಯವೇನೆಂದರೆ, ಸಮ್ಮಿಶ್ರ ಸರ್ಕಾರ ಇದ್ದಾಗ ರೈತರ ಸಾಲವನ್ನು ಮನ್ನಾ ಮಾಡಿದ್ದಾರೆ. ಆದರೆ ನೆರೆ ಹಾವಳಿ ಪರಿಸ್ಥಿತಿ ಒಂದು ಕಡೆಯಾದರೆ, ಈ ಸಾಲ ಮನ್ನಾದ ಹಣ ಇನ್ನು ರೈತರಿಗೆ ಮುಟ್ಟಿರುವುದಿಲ್ಲ. ಕೆ.ಡಿ.ಸಿ.ಸಿ. ಬ್ಯಾಂಕ್‌ನಲ್ಲಿ ನಾನು ಅಧ್ಯಕ್ಷನಾಗಿದ್ದು, ನಮ್ಮ ಬ್ಯಾಂಕ್‌ಗೆ ಸಾಲ ಮನ್ನಾವಾದ ಹಣ 521 ಕೋಟಿ ರೂಪಾಯಿಗಳಷ್ಟು ಬರಬೇಕಾಗಿತ್ತು. ಅದರಲ್ಲಿ ಇನ್ನು 108 ಕೋಟಿ ರೂಪಾಯಿಗಳಷ್ಟು ಹಣ ಬರಬೇಕಾಗಿದೆ. ಈಗಲಾದರೂ ಮಂಜೂರಾಗಿರುವ ಹಣವನ್ನು ರೈತರಿಗೆ ಕೊಡಬೇಕೆಂದು ಹೇಳುತ್ತೇನೆ. ಅವರು ಈಗಾಗಲೇ ನೆರೆ ಹಾವಳಿ ಬಂದಿದೆ ಎಂದು ದುಃಖದಲ್ಲಿದ್ದಾರೆ. ಈಗ ಅವರಿಗೆ ಮತ್ತೊಮ್ಮೆ ಡಬಲ್ ನೆರೆ ಹಾವಳಿ ಬಂದಿರುವ ಹಾಗಾಗಿದೆ. ಈ ಹಣವನ್ನು ಯಾವಾಗ ಕೊಡುತ್ತಾರೆಂಬುದರ ಬಗ್ಗೆ ಮಾನ್ಯ ಸಚಿವರು ನಿಖರವಾಗಿ ಹೇಳಬೇಕು.

(ಮುಂದು)

**(172) 11/10/2019/6:20/ಎಸ್‌ಪಿಆರ್/ಜಿಆರ್**

**(ಸಭಾಪತಿಯವರ ಉಪಸ್ಥಿತಿ)**

**ಶ್ರೀ ಘೋಟ್ನೆಕರ ಶ್ರೀಕಾಂತ ಲಕ್ಷ್ಮಣ(ಮುಂದು):–**

ಉಳಿದ ಹಣವನ್ನು ಬ್ಯಾಂಕುಗಳಿಗೆ ಯಾವಾಗ ನೀಡುತ್ತೀರಿ? ಸಾಲ ಮನ್ನಾ ಹಣವು ಬ್ಯಾಂಕಿಗೆ ವಿಳಂಬವಾಗಿ ಬಂದಿರುವುದರಿಂದ ನಮಗೆ . . .

**ಡಾ॥ ವೈ.ಎ.ನಾರಾಯಣಸ್ವಾಮಿ(ಶಿಕ್ಷಕರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, 46 ಸಾವಿರ ಕೋಟಿ ರೂಪಾಯಿಗಳಷ್ಟು ರೈತರ ಸಾಲ ಮನ್ನಾ ಮಾಡಲಾಗಿದೆ ಎಂದು ಮಾನ್ಯ ಮರಿತಿಬ್ಬೇಗೌಡರವರು ಹೇಳಿದ್ದಾರೆ.

**ಶ್ರೀ ಘೋಟ್ನೆಕರ ಶ್ರೀಕಾಂತ ಲಕ್ಷ್ಮಣ(ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಆದರೆ ಬ್ಯಾಂಕುಗಳಿಗೆ ಇನ್ನೂ ಹಣ ಸಂದಾಯವಾಗಿಲ್ಲ.

**ಡಾ॥ ವೈ.ಎ.ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ಈ ಮಾತನ್ನು ಮಾನ್ಯ ಸದಸ್ಯರು ಮಾನ್ಯ ಮರಿತಿಬ್ಬೇಗೌಡರವರಿಗೆ ಕೇಳಬೇಕು. ಏಕೆಂದರೆ, ಅವರೇ ರೈತರ ಸಾಲ ಮನ್ನಾ ಮಾಡಿರುವ ಬಗ್ಗೆ ಹೇಳಿದ್ದಾರೆ.

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಐವನ್ ಡಿ'ಸೋಜಾ:–** ಮಾನ್ಯ ಸಭಾಪತಿಯವರೇ, ಇಲ್ಲಿ ಆರ್ಥಿಕ ವರ್ಷಾಂತ್ಯದ ಬಗ್ಗೆ ಪ್ರಸ್ತಾಪ ಮಾಡಲಾಗುತ್ತಿದೆ.

**ಡಾ॥ ವೈ.ಎ.ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಶ್ರೀ ಮರಿತಿಬ್ಬೇಗೌಡರವರು ತಮ್ಮ ಬೆನ್ನನ್ನು ತಾವೇ ತಟ್ಟಿಕೊಂಡು, ಮಾನ್ಯ ಕುಮಾರಸ್ವಾಮಿ ನೇತೃತ್ವದ ಸರ್ಕಾರವು 46 ಸಾವಿರ ಕೋಟಿ ರೂಪಾಯಿಗಳಷ್ಟು ರೈತರ ಸಾಲ ಮನ್ನಾ ಮಾಡಲಾಗಿದೆ ಎಂಬುದಾಗಿ ಹೇಳಿದ್ದಾರೆ. ಸ್ವಾತಂತ್ರ್ಯ ಬಂದ ನಂತರ, ಪ್ರಜಾತಂತ್ರ ವ್ಯವಸ್ಥೆಯಲ್ಲಿ ಯಾವುದೇ ಮುಖ್ಯ ಮಂತ್ರಿಗಳು ಮಾಡದೇ ಇರುವಂತಹ ಕೆಲಸವನ್ನು ಮಾನ್ಯ ಕುಮಾರಸ್ವಾಮಿ ರವರು ಮಾಡಿದ್ದಾರೆಂದು ಈಗ್ಗೆ 10 ನಿಮಿಷಗಳ ಮುಂಚೆ ಮಾನ್ಯ ಮರಿತಿಬ್ಬೇಗೌಡರು ಹೇಳಿದ್ದಾರೆ. ಆದರೆ ಅದೇ ಸರ್ಕಾರದ partner ಆದ ಶ್ರೀ ಘೋಟ್ನೇಕರ್ ಶ್ರೀಕಾಂತ ಲಕ್ಷ್ಮಣರವರು ಹಿಂದಿನ ಸರ್ಕಾರವು ರೈತರ ಸಾಲ ಮನ್ನಾ ಮಾಡಿಲ್ಲ ಎಂಬುದಾಗಿ ಹೇಳುತ್ತಿದ್ದಾರೆ. ಇದರಲ್ಲಿ ಯಾವುದು ಸರಿಯಾದುದು?

**ಶ್ರೀ ಘೋಟ್ನೆಕರ ಶ್ರೀಕಾಂತ ಲಕ್ಷ್ಮಣ:–** ಮಾನ್ಯ ಸಭಾಪತಿಯವರೇ, ಮಾನ್ಯ ವೈ.ಎ.ನಾರಾಯಣ ಸ್ವಾಮಿ ರವರು ಏನೇನೋ ಕೇಳುತ್ತಿದ್ದಾರೆ. ಹಿಂದಿನ ಸರ್ಕಾರವು ರೈತರ ಸಾಲ ಮನ್ನಾ ಮಾಡಿದೆ, ಆದರೆ ಸದರಿ ಮೊತ್ತವು ಇನ್ನೂ ಬ್ಯಾಂಕಿಗೆ ಸಂದಾಯವಾಗಿಲ್ಲ.

**(ಗೊಂದಲ)**

**ಶ್ರೀ ಟಿ.ಎ.ಶರವಣ:–** ಮಾನ್ಯ ಸಭಾಪತಿಯವರೇ, ಆಡಳಿತ ಪಕ್ಷದ ಮಾನ್ಯ ಸದಸ್ಯರು ಸದನವನ್ನು ತಪ್ಪು ದಾರಿಗೆ ತೆಗೆದುಕೊಂಡು ಹೋಗುತ್ತಿದ್ದಾರೆ.

**ಶ್ರೀ ಮರಿತಿಬ್ಬೇಗೌಡ(ಶಿಕ್ಷಕರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಶ್ರೀ ವೈ.ಎ.ನಾರಾಯಣ ಸ್ವಾಮಿಯವರು ಹೀಗೆ ಪದೇ ಪದೇ ಮಧ್ಯದಲ್ಲಿ ಎದ್ದು ನಿಂತುಕೊಂಡು ಮಾತನಾಡುತ್ತಾರೆಂದು ನಾನು ಈ ಮೊದಲೇ ಹೇಳಿದ್ದೆನು. ಮಾನ್ಯ ಘೋಟ್ನೆಕರ ಶ್ರೀಕಾಂತ ಲಕ್ಷ್ಮಣರವರು ತಮ್ಮ ಜಿಲ್ಲಾ ಸಹಕಾರ ಬ್ಯಾಂಕಿನಲ್ಲಿ 500 ಕೋಟಿ ರೂಪಾಯಿಗಳಷ್ಟು ಸಾಲ ಮನ್ನಾ ಆಗಿದ್ದು, ಆ ಪೈಕಿ ಈಗಾಗಲೇ 400 ಕೋಟಿ ರೂಪಾಯಿಗಳಷ್ಟು ಹಣ ಬ್ಯಾಂಕಿಗೆ ಸಂದಾಯವಾಗಿದೆ ಹಾಗೂ 100 ಕೋಟಿ ರೂಪಾಯಿ ಇನ್ನೂ ಬಾಕಿ

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಬರಬೇಕಾಗಿದೆ ಎಂಬುದಾಗಿ ಹೇಳಿದ್ದಾರೆ. ಕಳೆದ ಎರಡು ತಿಂಗಳುಗಳಿಂದ ನಿಯಮಾವಳಿಗಳ ಪ್ರಕಾರ ಯಾರು ಬಿಲ್ಲನ್ನು ಸಲ್ಲಿಸಿದ್ದಾರೆ ಅಂತಹವರಿಗೆ 100 ಕೋಟಿ ರೂಪಾಯಿಗಳನ್ನು ಸಂದಾಯ ಮಾಡುವುದು ಬಾಕಿ ಇದೆ ಎಂಬುದಾಗಿ ಮಾನ್ಯ ಸದಸ್ಯರು ಹೇಳಿದ್ದಾರೆ. ಆದರೆ, ಡಾ||ವೈ.ಎ.ನಾರಾಯಣಸ್ವಾಮಿಯವರು ಏನೇನೋ ಮಾತನಾಡುತ್ತಿದ್ದಾರೆ. ದಯಮಾಡಿ ಮಾನ್ಯ ನಾರಾಯಣಸ್ವಾಮಿಯವರು ಕುಳಿತುಕೊಳ್ಳಲಿ.

**(ಗೊಂದಲ)**

**ಶ್ರೀ ಟಿ.ಎ.ಶರವಣ:–** ಮಾನ್ಯ ಸಭಾಪತಿಯವರೇ, ಮಾನ್ಯ ಘೋಟ್ನೆಕರ ಶ್ರೀಕಾಂತ ಲಕ್ಷ್ಮಣರವರು ಹಾಗೂ ಮಾನ್ಯ ವೈ.ಎ.ನಾರಾಯಣಸ್ವಾಮಿಯವರು ಹೇಳುತ್ತಿರುವ ವಿಚಾರಗಳು ಬೇರೆಯಾಗಿವೆ.

**(ಗೊಂದಲ)**

**ಡಾ|| ವೈ.ಎ.ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ಮಾನ್ಯ ಘೋಟ್ನೆಕರ ಶ್ರೀಕಾಂತ ಲಕ್ಷ್ಮಣರವರು ಹೇಳಿದ ಮಾತನ್ನು ನಾನು ಒಪ್ಪಿಕೊಳ್ಳುತ್ತೇನೆ. ಆದರೆ ಮಾನ್ಯ ಮರಿತಿಬ್ಬೇಗೌಡರವರು ಹೇಳಿದ ಮಾತಿಗೆ ಉತ್ತರವೇನು?

**(ಗೊಂದಲ)**

**ಶ್ರೀ ಕೆ.ಟಿ.ಶ್ರೀಕಂಠೇಗೌಡ:–** ಮಾನ್ಯ ಸಭಾಪತಿಯವರೇ, ರೈತರ ಸಾಲ ಮನ್ನಾ ಮಾಡಲಾಗಿದೆ. ಆದರೆ, ಸದರಿ ಮೊತ್ತವನ್ನು ಬ್ಯಾಂಕಿಗೆ ಇನ್ನೂ ಸಂದಾಯ ಮಾಡಿಲ್ಲ.

**(ಗೊಂದಲ)**

**ಶ್ರೀ ಎಸ್.ಆರ್.ಪಾಟೀಲ್:–** ಮಾನ್ಯ ಸಭಾಪತಿಯವರೇ, ಹಿಂದಿನ ಸರ್ಕಾರವು ರೈತರ ಸಾಲ ಮನ್ನಾ ಮಾಡಿ, ಸ್ವಲ್ಪ ಮೊತ್ತವನ್ನು ಬ್ಯಾಂಕುಗಳಿಗೆ ಜಮೆ ಮಾಡಿದೆ. ಇನ್ನುಳಿದ ಬಾಕಿ ಮೊತ್ತವನ್ನು ಈಗ ಅಧಿಕಾರಕ್ಕೆ ಬಂದಿರುವ ಸರ್ಕಾರವು ಸಂದಾಯ ಮಾಡಲಿ.

**ಶ್ರೀ ಮರಿತಿಬ್ಬೇಗೌಡ(ಶಿಕ್ಷಕರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಈಗಾಗಲೇ 500 ಕೋಟಿ ರೂಪಾಯಿಗಳಷ್ಟು ಸಾಲ ಮನ್ನಾ ಮಾಡಿ, ಆ ಪೈಕಿ 400 ಕೋಟಿ ರೂಪಾಯಿಗಳನ್ನು ಬ್ಯಾಂಕಿಗೆ ಸಂದಾಯ ಮಾಡಲಾಗಿದ್ದು, ಇನ್ನುಳಿದ 100 ಕೋಟಿ ರೂಪಾಯಿಗಳನ್ನು ಬ್ಯಾಂಕುಗಳಿಗೆ ಸಂದಾಯ ಮಾಡುವಂತೆ ಕೇಳಲಾಗಿದೆ. ಈ 100 ಕೋಟಿ ರೂಪಾಯಿ ಕಳೆದ ಮೂರು ತಿಂಗಳಿನ ಬಾಬ್ತು ಆಗಿದೆ. ಸಾಲ ತೆಗೆದುಕೊಂಡಿರುವ ರೈತರ ಸಾಲ ಯಾವ ದಿನಾಂಕದಂದು ಅವಧಿ ಮುಕ್ತಾಯಗೊಳ್ಳುತ್ತದೆಯೋ, ನಂತರದಲ್ಲಿ ಸರ್ಕಾರವು ಆ ಬಿಲ್ಲನ್ನು ಪಾವತಿಸಬೇಕಾಗುತ್ತದೆ. ಈ ರೀತಿಯಂತೆ ಈ ಸರ್ಕಾರದಿಂದ ಕಳೆದ ಮೂರು ತಿಂಗಳಿನಿಂದ 100 ಕೋಟಿ

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ರೂಪಾಯಿಗಳನ್ನು ಮಾನ್ಯ ಸದಸ್ಯರ ಜಿಲ್ಲಾ ಸಹಕಾರ ಬ್ಯಾಂಕಿಗೆ ಸಂದಾಯ ಮಾಡಬೇಕು. ಈ ಜವಾಬ್ದಾರಿ ಪ್ರಸ್ತುತ ಅಧಿಕಾರದಲ್ಲಿರುವ ಸರ್ಕಾರದ ಮೇಲಿದೆ. ಮಾನ್ಯ ಸದಸ್ಯರು ಹೇಳುತ್ತಿರುವ ವಿಚಾರವನ್ನು ಆಡಳಿತ ಪಕ್ಷದವರು ಅರ್ಥ ಮಾಡಿಕೊಳ್ಳಬೇಕು.

**(ಗೊಂದಲ)**

**ಶ್ರೀ ಎಸ್.ಆರ್.ಪಾಟೀಲ್:–** ಮಾನ್ಯ ಸಭಾಪತಿಯವರೇ, ನಿಗದಿತ ಅವಧಿಯೊಳಗೆ ಸರ್ಕಾರವು ಬ್ಯಾಂಕುಗಳಿಗೆ ಹಣವನ್ನು ಸಂದಾಯ ಮಾಡದಿದ್ದರೆ, ಸಹಕಾರಿ ಬ್ಯಾಂಕುಗಳು ನಷ್ಟ ಅನುಭವಿಸಬೇಕಾಗುತ್ತದೆ. ಬ್ಯಾಂಕಿಗೆ ಸಂದಾಯ ಮಾಡುವ ಹಣಕ್ಕೆ ಬಡ್ಡಿ ಕೊಡುವವರು ಯಾರು? ಪ್ರಸ್ತುತ ಭಾರತೀಯ ಜನತಾ ಪಕ್ಷವು ಅಧಿಕಾರಕ್ಕೆ ಬಂದಿದೆ. ಈ ಹಿಂದೆ ಶ್ರೀ ಜಗದೀಶ್ ಶೆಟ್ಟರ್‌ರವರು ಮುಖ್ಯಮಂತ್ರಿಗಳಾಗಿದ್ದಾಗ ರೈತರ ಸಾಲವನ್ನು ಮನ್ನಾ ಮಾಡುವುದಾಗಿ ಘೋಷಣೆ ಮಾಡಿ, ಕೇವಲ 900 ಕೋಟಿ ರೂಪಾಯಿಗಳನ್ನು ಮಾತ್ರವೇ ಬಿಡುಗಡೆ ಮಾಡಿದ್ದರು. ನಂತರದಲ್ಲಿ ಅಧಿಕಾರಕ್ಕೆ ಬಂದ ಶ್ರೀ ಸಿದ್ದರಾಮಯ್ಯನವರ ಸರ್ಕಾರವು 3 ಸಾವಿರ ಕೋಟಿ ರೂಪಾಯಿಗಳಷ್ಟು ಹಣವನ್ನು ಸಹಕಾರಿ ಬ್ಯಾಂಕುಗಳಿಗೆ ಸಂದಾಯ ಮಾಡಿತು. ಹೀಗಾಗಿ ಇನ್ನುಳಿದ ಬಾಕಿ ಮೊತ್ತವನ್ನು ಪ್ರಸ್ತುತ ಅಧಿಕಾರದಲ್ಲಿರುವ ಸರ್ಕಾರವು ಸಂದಾಯ ಮಾಡಬೇಕು.

**ಡಾ|| ವೈ.ಎ.ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ಮಾನ್ಯ ಮರಿತಿಬ್ಬೇಗೌಡ ರವರು ತಮ್ಮ ಪಕ್ಷದ ಸರ್ಕಾರವು 46 ಸಾವಿರ ಕೋಟಿ ರೂಪಾಯಿಗಳಷ್ಟು ರೈತರ ಸಾಲ ಮನ್ನ ಮಾಡಿದೆ ಎಂಬುದಾಗಿ ಹೇಳಿದ್ದಾರೆ. ಈ ಬಗ್ಗೆ ಮಾನ್ಯ ಸದಸ್ಯರು ದಾಖಲೆಗಳನ್ನು ಒದಗಿಸಲಿ.

**(ಗೊಂದಲ)**

**ಶ್ರೀ ಕೆ.ಟಿ.ಶ್ರೀಕಂಠೇಗೌಡ:–** ಈ ಹಿಂದಿನ ಸರ್ಕಾರವು ಮಂಡನೆ ಮಾಡಿರುವ ಆಯವ್ಯಯದ ಪುಸ್ತಕವನ್ನು ಆಡಳಿತ ಪಕ್ಷದವರು ಪರಿಶೀಲಿಸಲಿ.

**(ಗೊಂದಲ)**

**ಶ್ರೀ ಮರಿತಿಬ್ಬೇಗೌಡ:–** ಮಾನ್ಯ ಸಭಾಪತಿಯವರೇ, ಆ ಒಂದು ಜಿಲ್ಲೆಗೆ 500 ಕೋಟಿ ರೂಪಾಯಿಗಳಷ್ಟು ರೈತರ ಸಾಲ ಮನ್ನಾ ಮಾಡಿದ್ದಾರೆ. ಆ ಪೈಕಿ ಈಗಾಗಲೇ 400 ಕೋಟಿ ರೂಪಾಯಿಗಳನ್ನು ಸಂದಾಯ ಮಾಡಲಾಗಿದೆ. ಇನ್ನುಳಿದ ಬಾಕಿ 100 ಕೋಟಿ ರೂಪಾಯಿಗಳನ್ನು ಪ್ರಸ್ತುತ ಅಧಿಕಾರದಲ್ಲಿರುವ ಸರ್ಕಾರವು ಸಂದಾಯ ಮಾಡಬೇಕೆಂದು ಹೇಳಿದರೆ, ಮಾನ್ಯ ವೈ.ಎ.ನಾರಾಯಣಸ್ವಾಮಿಯವರು ಏನೇನೋ ಮಾತನಾಡುತ್ತಾರೆ.

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾನ್ಯ ನಾರಾಯಣಸ್ವಾಮಿ ಯವರು ದಯಮಾಡಿ ಮಂತ್ರಿಗಳಾಗುವವರೆಗೆ ತಾಳ್ಮೆಯಿಂದ ವಿರೋಧ ಪಕ್ಷದ ಸದಸ್ಯರ ಮಾತುಗಳನ್ನು ಕೇಳಿಸಿಕೊಳ್ಳಲಿ.

**(ಗೊಂದಲ)**

ಮಾನ್ಯ ನಾರಾಯಣಸ್ವಾಮಿಯವರು ನಾಳೆಯ ದಿವಸ ಸದನದಲ್ಲಿ ರೈತರ ಸಾಲ ಮನ್ನಾ ವಿಷಯವನ್ನು ಪ್ರಸ್ತಾಪ ಮಾಡುವುದಕ್ಕೆ ಮಾನ್ಯ ಸಭಾಪತಿಯವರಿಂದ ಸಮಯಾವಕಾಶವನ್ನು ಕೊಡಿಸಲಿ. ಆಗ ನಾನು ರಾಜ್ಯದ ಪ್ರತಿಯೊಂದು ಜಿಲ್ಲೆ, ವಿಧಾನಸಭಾ ಕ್ಷೇತ್ರ, ಒಂದೊಂದು ಮನೆಗಳಿಗೆ ಹಾಗೂ ಎಷ್ಟು ಕುಟುಂಬಗಳಿಗೆ ಸಾಲ ಮನ್ನಾ ಯೋಜನೆಯ ನೆರವು ದೊರೆತಿದೆ ಎಂಬುದರ ಬಗ್ಗೆ ಸವಿಸ್ತಾರವಾಗಿ ಎಲ್ಲಾ ಸಂಗತಿಗಳನ್ನು ತಿಳಿಸುತ್ತೇನೆ.

**(ಗೊಂದಲ)**

**ಡಾ॥ ವೈ.ಎ.ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ಈ ಹಿಂದೆ ಅಧಿಕಾರದಲ್ಲಿದ್ದ ಸರ್ಕಾರವು 46 ಸಾವಿರ ಕೋಟಿ ರೂಪಾಯಿಗಳಷ್ಟು ಸಾಲ ಮನ್ನಾ ಮಾಡಲಾಗಿದೆ ಎಂಬುದಾಗಿ ವಿರೋಧ ಪಕ್ಷದ ಸದಸ್ಯರು ಹೇಳುತ್ತಿದ್ದಾರೆ. ಹೀಗಾಗಿ ಅವರು ಈ ಬಗ್ಗೆ ಅಂಕಿ–ಅಂಶವನ್ನು ಒದಗಿಸಲಿ. ಅದನ್ನು ನಾವು ನೋಡುತ್ತೇವೆ.

**ಶ್ರೀ ಘೋಟ್ನೆಕರ ಶ್ರೀಕಾಂತ ಲಕ್ಷ್ಮಣ:–** ಮಾನ್ಯ ಸಭಾಪತಿಯವರೇ, ರೈತರ ಸಾಲ ಮನ್ನಾ ಮಾಡಿರುವ ಮೊತ್ತವನ್ನು ಬ್ಯಾಂಕಿಗೆ ಸಂದಾಯ ಮಾಡುವಲ್ಲಿ ವಿಳಂಬವಾಗಿದೆ. ಆದರೆ ಸದರಿ ಮೊತ್ತಕ್ಕೆ ಬಡ್ಡಿಯನ್ನು ಯಾರು ನೀಡುತ್ತಾರೆ? 8 ಕೋಟಿ ರೂಪಾಯಿಗಳಷ್ಟು ಬಡ್ಡಿ ಮೊತ್ತವನ್ನು ನಮ್ಮ ಬ್ಯಾಂಕಿಗೆ ಸಂದಾಯ ಮಾಡಬೇಕಾಗಿದೆ. ಪ್ರಸ್ತುತ ನಮ್ಮ ಬ್ಯಾಂಕ್ ನಷ್ಟ ಅನುಭವಿಸುತ್ತಿದೆ. ಅಸಲು ಮತ್ತು ಬಡ್ಡಿ ಸೇರಿಸಿ, ಒಟ್ಟಾರೆಯಾಗಿ 108 ಕೋಟಿ ರೂಪಾಯಿಗಳನ್ನು ಸರ್ಕಾರವು ನಮ್ಮ ಸಹಕಾರ ಬ್ಯಾಂಕಿಗೆ ಸಂದಾಯ ಮಾಡಬೇಕು. ಇದನ್ನು ಸರ್ಕಾರ ಯಾವಾಗ ಮಾಡುತ್ತದೆ ಎಂಬುದನ್ನು ಬಹಳ ನಿಖರವಾಗಿ ತಿಳಿಸಬೇಕು. ಈ ಹಿಂದೆ ಸಮ್ಮಿಶ್ರ ಸರ್ಕಾರವು ಅಧಿಕಾರದಲ್ಲಿದ್ದಾಗ ಅಂಬೇಡ್ಕರ್, ಆಶ್ರಯ, ಬಸವ ವಸತಿ ಹಾಗೂ ಇನ್ನಿತರೆ ಯೋಜನೆಗಳಡಿ ಮನೆಯನ್ನು ನಿರ್ಮಿಸಿದವರಿಗೆ ಆಯಾಯ ಮನೆಗಳ ಪಟ್ಟಾವನ್ನು ನೀಡಿದ್ದರು. ಮೇಲ್ಕಂಡ ಯೋಜನೆಗಳಡಿ ಮನೆಯನ್ನು ನಿರ್ಮಿಸಿದವರಿಗೆ ಅನುದಾನವನ್ನೂ ಸಹ ಬಿಡುಗಡೆ ಮಾಡಿದರು. ಆಗ ಕೆಲವರು ಸಂಪೂರ್ಣವಾಗಿ ಮನೆಗಳನ್ನು ನಿರ್ಮಿಸಿದರು, ಮತ್ತೆ ಕೆಲವರು ಮನೆಗಳಿಗೆ ಪಾಯ ಹಾಕಿದರು. ಆದರೆ ಇದುವರೆವಿಗೂ ಸಹ ಮೊತ್ತವನ್ನು ಸಂದಾಯ ಮಾಡುವಂತೆ ಕೋರಿ ಒಂದೇ ಒಂದು ಬಿಲ್ಲೂ ಸಹ ಸಲ್ಲಿಕೆಯಾಗಿಲ್ಲ. ಪ್ರಸ್ತುತ ನೆರೆ ಹಾವಳಿಯಿಂದಾಗಿ ಮನೆ ನಿರ್ಮಾಣಕ್ಕಾಗಿ ಹಾಕಿದ್ದ ಪಾಯವೂ ಸಹ ಕೊಚ್ಚಿಕೊಂಡು ಹೋಗಿದೆ. ನಾನು ಅಲ್ಲಿನ ವಾಸ್ತವಾಂಶಗಳನ್ನು ಹೇಳುತ್ತಿದ್ದೇನೆ. ಇದನ್ನು ಸರ್ಕಾರವು ತಿಳಿದುಕೊಳ್ಳಬೇಕು. ನಮ್ಮ ಜಿಲ್ಲೆಗೆ 14 ಕೋಟಿ 90 ಲಕ್ಷ ರೂಪಾಯಿಗಳಷ್ಟು ಹಣ ಸಂದಾಯವಾಗಬೇಕು. ಈಗಾಗಲೇ ಕೆಲವರು ಮನೆಗಳನ್ನು ನಿರ್ಮಿಸಿದ್ದಾರೆ. ನಿರ್ಮಾಣ ಹಂತದಲ್ಲಿರುವ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಇನ್ನು ಕೆಲವು ಮನೆಗಳ ಇಟ್ಟಿಗೆ, ಉಸುಕು ಹಣವನ್ನು ಸರ್ಕಾರ ನೀಡಬೇಕು. ಸಾಲ ನೀಡಿದ್ದವರು ಸಾಲ ವಸೂಲಾತಿಗಾಗಿ ಪ್ರತಿನಿತ್ಯವೂ ಬಡ ಜನರ ಮನೆಯ ಮುಂದೆ ಬಂದು ನಿಂತುಕೊಳ್ಳುತ್ತಾರೆ. ಇಂತಹ ಪರಿಸ್ಥಿತಿ ಇರುವಾಗ, ಮನೆ ನಿರ್ಮಿಸುತ್ತಿರುವವರು ಅಳುತ್ತಿದ್ದಾರೆ. ಹಲವಾರು ಯೋಜನೆಗಳಡಿ ಮನೆ ನಿರ್ಮಿಸುವವರಿಗೆ ಹಣವನ್ನು ಕೊಡುವವರು ಯಾರು? ಇಂತಹ ಸಂಗತಿಗಳನ್ನು ಅವಲೋಕಿಸಿದರೆ, ಸರ್ಕಾರದ ಬೊಕ್ಕಸವು ಸಂಪೂರ್ಣವಾಗಿ ಬರಿದಾಗಿದೆ ಎಂದು ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ. ಈ ಕಾರಣಕ್ಕಾಗಿ ಫಲಾನುಭವಿಗಳಿಗೆ ಹಣ ಸಂದಾಯವಾಗುತ್ತಿಲ್ಲ. ಹಲವಾರು ನಿಗಮ ಮಂಡಳಿಗಳಿಂದ ಅರ್ಹ ಫಲಾನುಭವಿಗಳಿಗೆ ಯೋಜನೆಯ ಹಣ ಸಂದಾಯವಾಗಬೇಕು.

**(ಗೊಂದಲ)**

**ಶ್ರೀ ಎಂ.ಕೆ.ಪ್ರಾಣೇಶ್(ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಸಮಸ್ಯೆಗಳನ್ನು ಯಾವ ರೀತಿಯಾಗಿ ಬಗೆಹರಿಸಬೇಕೆಂಬುದರ ಬಗ್ಗೆ ನಾನು ವಿಚಾರವೊಂದನ್ನು ಪ್ರಸ್ತಾಪಿಸಬಯಸುತ್ತೇನೆ. ಹೀಗಾಗಿ ದಯಮಾಡಿ ಕಾಲಾವಕಾಶವನ್ನು ನೀಡಬೇಕು. ನಾನು ರಾಜಕೀಯ ವಿಷಯದ ಬಗ್ಗೆ ಮಾತನಾಡುವುದಿಲ್ಲ.

**(ಗೊಂದಲ)**

**ಶ್ರೀ ಘೋಟ್ನೆಕರ ಶ್ರೀಕಾಂತ ಲಕ್ಷ್ಮಣ:-** ಮಾನ್ಯ ಸಭಾಪತಿಯವರೇ, ಉತ್ತರ ಕರ್ನಾಟಕ ಭಾಗದಲ್ಲಿ ಬರಗಾಲ ಹಾಗೂ ನೆರೆ ಹಾವಳಿ ಪರಿಸ್ಥಿತಿಗಳುಂಟಾಗಿವೆ. ಕೇಂದ್ರ ಸರ್ಕಾರವು ಬರಗಾಲ ಹಾಗೂ ನೆರೆ ಹಾವಳಿಗಳಂತಹ ಪ್ರಕೃತಿ ವಿಕೋಪಗಳಿಗೆ ಬಲಿಯಾದ ಜನರಿಗೆ ಪರಿಹಾರ ನೀಡುವ ಪಟ್ಟಿಯಲ್ಲಿ ನಮ್ಮ ರಾಜ್ಯದ ಜನರು ಇದ್ದಾರೆಯೋ ಅಥವಾ ಇಲ್ಲವೋ ಎಂಬ ಬಗ್ಗೆ ನಾನು ಮಾನ್ಯ ಪ್ರಧಾನ ಮಂತ್ರಿಗಳನ್ನು ಕೇಳಬಯಸುತ್ತೇನೆ. ಮಾನ್ಯ ನರೇಂದ್ರ ಮೋದಿಯವರು ಬಹು ರಾಷ್ಟ್ರಗಳಿಗೆ ಪ್ರಧಾನ ಮಂತ್ರಿಗಳಾಗಲು ಹೊರಟಿದ್ದಾರೆ. ಅವರು ನಮ್ಮ ದೇಶದ ಪ್ರಧಾನ ಮಂತ್ರಿಗಳೇ ಎಂಬ ಸಂಶಯವು ನನಗೆ ಬರುತ್ತಿದೆ. ಅಮೇರಿಕಾ ದೇಶದ ಅಧ್ಯಕ್ಷರ ಜೊತೆಗೆ ನಮ್ಮ ದೇಶದ ಪ್ರಧಾನ ಮಂತ್ರಿಗಳು ಬಹಳವಾಗಿ ಮಾತನಾಡುತ್ತಾರೆ. ಆದರೆ, ನಮ್ಮ ರಾಜ್ಯದ ನೆರೆ ಹಾವಳಿ ಪರಿಸ್ಥಿತಿಯ ಬಗ್ಗೆ ಮಾನ್ಯ ಪ್ರಧಾನ ಮಂತ್ರಿಗಳು ಒಂದು ಮಾತನ್ನೂ ಸಹ ಮಾತನಾಡಿಲ್ಲ.

**ಡಾ|| ತೇಜಸ್ವಿನಿ ಗೌಡ:-** ಮಾನ್ಯ ಸಭಾಪತಿಯವರೇ, ಮಾನ್ಯ ಘೋಟ್ನೆಕರ ಶ್ರೀಕಾಂತ ಲಕ್ಷ್ಮಣರವರು ಹೇಳಿರುವ ಬಹು ರಾಷ್ಟ್ರಗಳಿಗೆ ಪ್ರಧಾನ ಮಂತ್ರಿ ಎನ್ನುವಂತಹ ಮಾತು derogatory ಅಲ್ಲವೇ? ಬಹುರಾಷ್ಟ್ರಗಳಿಗೆ ಹೇಗೆ ಪ್ರಧಾನ ಮಂತ್ರಿಯಾಗುವುದಕ್ಕೆ ಆಗುತ್ತದೆ?

**(ಗೊಂದಲ)**

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಕೆ.ಟಿ.ಶ್ರೀಕಂಠೇಗೌಡ:–** ಮಾನ್ಯ ಸಭಾಪತಿಯವರೇ, ಮಾನ್ಯ ನರೇಂದ್ರ ಮೋದಿ ರವರು ಬಹು ರಾಷ್ಟ್ರಗಳಿಗೆ ಪ್ರಧಾನ ಮಂತ್ರಿಗಳನ್ನು ಆಯ್ಕೆ ಮಾಡುವ ಮೂಲಕ ಬಹುರಾಷ್ಟ್ರೀಯ ಪ್ರಧಾನ ಮಂತ್ರಿಯಾಗುತ್ತಾರೆ.

**(ಗೊಂದಲ)**

**ಶ್ರೀ ಎಂ.ಕೆ.ಪ್ರಾಣೇಶ್:–** ಮಾನ್ಯ ಸಭಾಪತಿಯವರೇ, ಈ ಸಂದರ್ಭದಲ್ಲಿ ನಾನು ಕಥೆಯೊಂದನ್ನು ಹೇಳಬಯಸುತ್ತೇನೆ. ಒಮ್ಮೆ ಐದೂ ಬೆರಳುಗಳಿಗೆ "ನಾನು ದೊಡ್ಡವನು ನಾನು ದೊಡ್ಡವನು" ಎಂಬ ಅಹಂಕಾರದ ಮನೋಭಾವನೆ ಬಂತು. ಈ ವಿಷಯದ ಬಗ್ಗೆ ಚರ್ಚೆಯೂ ಸಹ ನಡೆಯಿತು. ಆಗ ಕೈಯ್ಯಲ್ಲಿನ ಹೆಬ್ಬೆರಳು, ತೋರ್ಬೆರಳು, ಮಧ್ಯದ ಬೆರಳು, ಉಂಗುರ ಬೆರಳು ಹಾಗೂ ಕಿರು ಬೆರಳುಗಳು ತಾವು ದೊಡ್ಡವು, ತಾವು ದೊಡ್ಡವು ಎಂದು ಹೇಳಿದವು. ಮೊದಲಿಗೆ ಹೆಬ್ಬೆಟ್ಟು ತಾನು ದೊಡ್ಡದೆಂದು ಹೇಳಿತು. ತೋರ್ಬೆರಳು ತಾನು ಎಲ್ಲವನ್ನೂ ತೋರಿಸುತ್ತಿರುವುದರಿಂದ ತಾನು ದೊಡ್ಡದು ಎಂದು ಹೇಳಿತು. ಮಧ್ಯದ ಬೆರಳು ತಾನು ಎಲ್ಲಾ ಬೆರಳುಗಳಿಗಿಂತ ಎತ್ತರವಾಗಿರುವುದರಿಂದ ನಾನೇ ದೊಡ್ಡದು ಎಂದು ಹೇಳಿತು. **(ಗೊಂದಲ)** ಉಂಗುರ ಬೆರಳು ತನಗೆ ಎಲ್ಲಾ ರೀತಿಯ ವಜ್ರ, ವೈಢೂರ್ಯಗಳನ್ನು ಹಾಕುವುದರಿಂದ ಹಾಗೂ ಸಂಬಂಧ ಬೆಸೆಯಲು ತನ್ನನ್ನು ಬಳಸುವುದರಿಂದ ನಾನೇ ದೊಡ್ಡದು ಎಂದು ಹೇಳಿತು. ಆಗ ಸಣ್ಣ ಬೆರಳು ಯಾರಾದರೂ ಮನೆಗೆ ಅತಿಥಿಗಳು ಹಾಗೂ ಹಿರಿಯರು ಬಂದಾಗ ಅವರಿಗೆ ನಮಸ್ಕರಿಸುವಾಗ ನಾನು ಮುಂದೆ ಇರುವುದರಿಂದ ನಾನೇ ದೊಡ್ಡವನು ಎಂದು ಹೇಳಿತು. ಆಗ ಬ್ರಹ್ಮ ದೇವರು ನಿಮ್ಮ ಬೆರಳುಗಳಲ್ಲಿಯೇ ಇಷ್ಟೊಂದು ಗೊಂದಲಗಳಿರುವಾಗ, ಯಾರು ದೊಡ್ಡವರು ಎಂದು ತೋರಿಸಲು ನಾನು ಪರೀಕ್ಷೆಯೊಂದನ್ನು ಇಡುತ್ತೇನೆ, ಅದರಲ್ಲಿ ಯಾರು ಗೆಲ್ಲುತ್ತಾರೆಯೋ ಅವರೇ ದೊಡ್ಡವರಾಗುತ್ತಾರೆಂದು ಹೇಳಿದರು. ಆಗ ಬ್ರಹ್ಮ ದೇವರು ತಂಬಿಗೆಯೊಂದನ್ನು ತೆಗೆದುಕೊಂಡು ಅದರಲ್ಲಿ ಹಾಲನ್ನು ತುಂಬಿಸಿದರು. ನಂತರದಲ್ಲಿ ಹೆಬ್ಬೆಟ್ಟಿಗೆ ನೀನು ಶಕ್ತಿವಂತ, ದಪ್ಪವಾಗಿರುವುದರಿಂದ ತುಂಬಿದ ತಂಬಿಗೆಯನ್ನು ಎತ್ತುವಂತೆ ಹೇಳಿದರು. ಆದರೆ ಎಷ್ಟೇ ಪ್ರಯತ್ನ ಮಾಡಿದರೂ ಸಹ ಹೆಬ್ಬೆಟ್ಟಿಗೆ ತಂಬಿಗೆಯನ್ನು ಎತ್ತಲಿಕ್ಕೆ ಆಗಲಿಲ್ಲ.

(ಮುಂದು)

(173)/11–10–2019/6–00/ಎಲ್ಎಂ/ಎಂಡಿ

**ಶ್ರೀ ಎಂ.ಕೆ.ಪ್ರಾಣೇಶ್(ಮುಂದು):–** ತೋರಬೆರಳು ನಾನೇ ದೊಡ್ಡವನು ಏಕೆಂದರೆ ಎಲ್ಲರಿಗೂ ನಾನು ತೋರಿಸುತ್ತೇನೆ. ಮಧ್ಯದ ಬೆರಳು ನಾನು ದೊಡ್ಡವನು ನಾನು ಉದ್ದವಾಗಿದ್ದೇನೆ.

**ಶ್ರೀ ಶ್ರೀಕಾಂತ ಲಕ್ಷ್ಮಣ ಘೋಟ್ನೆಕರ:–** ನೀವೆ ದೊಡ್ಡವರು ಬಿಡಿ, ಅದಕ್ಕೆ ಅವರು ಮಾತನಾಡಲು ನಾನು ಅವಕಾಶವನ್ನೆ ಕೊಡಲಿಲ್ಲ.

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಎಂ.ಕೆ.ಪ್ರಾಣೇಶ್:-** ಮಾನ್ಯ ಸಭಾಪತಿಗಳೆ, ನಾಲ್ಕನೆ ಬೆರಳು ನಾನು ದೊಡ್ಡವನು ಏಕೆಂದರೆ, ಪರಸ್ಪರ ಸಂಬಂಧವಾಗಬೇಕಾದರೆ ನನ್ನ ಬೆರಳಿಗೆ ವಜ್ರ-ವೈಡೂರ್ಯ, ಬಂಗಾರದ ಉಂಗುರಗಳನ್ನು ನನಗೆ ಹಾಕುತ್ತಾರೆ ಎಂದು ಹೇಳಿತು. ಇನ್ನು ಕಿರು ಬೆರಳನ್ನು ಕೇಳಿದರು, ಅದಕ್ಕೆ ಕಿರುಬೆರಳು, ಮನೆಗೆ ಅತಿಥಿಗಳು ಬಂದಾಗ ಮುಂದೆ ನಿಂತು ನಮಸ್ಕಾರ ಮಾಡುವವನು ನಾನೇ ಅದಕ್ಕೆ ನಾನು ದೊಡ್ಡವನು ಎಂದು ಹೇಳಿತು. ಅದಕ್ಕೆ ಬ್ರಹ್ಮ ಆಯಿತು ನಿಮ್ಮಲೆ ಇಷ್ಟು ಗೊಂದಲಗಳು ಇರಬೇಕಾದರೆ ನಿಮಗೆ ಒಂದು ಪರೀಕ್ಷೆಯನ್ನು ಇಡುತ್ತೇನೆ. ಪರೀಕ್ಷೆಯಲ್ಲಿ ಯಾರು ಗೆಲ್ಲುತ್ತೀರಿ ಅವರೇ ದೊಡ್ಡವರು ಎಂದು ಹೇಳಿದನು. ಆಗ ಒಂದು ಚೆಂಬಿನಲ್ಲಿ ತುಂಬ ಹಾಲನ್ನು ತುಂಬಿಸಿ ಹೆಬ್ಬೆಟಿಗೆ ನೀನು ದಪ್ಪವಾಗಿದೆಯಾ ಶಕ್ತಿವಂತ ನೀನು ಎತ್ತು ಎಂದು ಹೇಳಿದರು. ಆಗ ಹೆಬ್ಬೆಟ್ಟು ಪ್ರಯತ್ನ ಮಾಡಿತು ಚೆಂಬನ್ನು ಎತ್ತಲು ಆಗಲಿಲ್ಲ. ತೋರಬೆರಳಿಗೆ ಎಲ್ಲವನ್ನು ತೋರಿಸುವಂತಹ ಕೆಲಸವನ್ನು ನೀನು ಮಾಡುತ್ತಿಯಾ ನೀನು ಎತ್ತು ಎಂದರು, ತೋರಬೆರಳು ಪ್ರಯತ್ನ ಮಾಡಿತು, ಅದಕ್ಕೂ ಎತ್ತಲು ಆಗಲಿಲ್ಲ. ಮಧ್ಯದ ಬೆರಳಿಗೂ ಎತ್ತಲು ಆಗಲಿಲ್ಲ. ನಾಲ್ಕನೆ ಬೆರಳಿಗೆ ನಿನಗೆ ವಜ್ರ, ಬಂಗಾರದ ಉಂಗುರಗಳನ್ನು ಹಾಕುತ್ತಾರೆ ನೀನು ಎತ್ತು ಎಂದರು, ಅದು ಪ್ರಯತ್ನ ಮಾಡಿದರೂ ಎತ್ತಲು ಆಗಲಿಲ್ಲ. ಕಿರುಬೆರಳಿಗೂ ಎತ್ತಲು ಆಗಲಿಲ್ಲ. ಆಗ ಬ್ರಹ್ಮ ನೀವು ಐದು ಬೆರಳು ಸೇರಿ ಎತ್ತಿ ಎಂದು ಹೇಳಿದಾಗ, ಐದು ಬೆರಳುಗಳು ಸೇರಿ ಎತ್ತಿದಾಗ ಹೂವಿನಷ್ಟು ಸುಲಭವಾಗಿ ಚೆಂಬು ಮೇಲೆ ಬಂತು. ಚೆಂಬನ್ನು ಕೆಳಗೆ ಇಡಿಸಿ, ನಿಮ್ಮ ಕೈಯನ್ನು ತಿರುಗಿಸಿ ಎಂದು ಹೇಳಿದಾಗ, ಕೈ ತಿರುಗಿಸುತ್ತವೆ ಆಗ ನೋಡಿ ಯಾರು ಎತ್ತರ, ದಪ್ಪ, ಉದ್ದ ಅಲ್ಲ ನೀವು ಎಲ್ಲರೂ ಒಂದೇ ಸಮ ಎಂದು ಬ್ರಹ್ಮ ಹೇಳಿದರು. ಹೀಗಾಗಿ ವಿರೋಧ ಪಕ್ಷದವರು, ಆಡಳಿತ ಪಕ್ಷದವರು ಒಟ್ಟಾಗಿ ಸೇರಿದರೆ ಎಲ್ಲ ಸಮಸ್ಯೆಗಳನ್ನು ಬಗೆಹರಿಸಬಹುದು. ವಿರೋಧ ಪಕ್ಷದವರು ಬರಿ ವಿರೋಧವನ್ನೇ ಮಾಡದೆ, ಆಡಳಿತ ಪಕ್ಷಕ್ಕೆ ಸಹಕಾರವನ್ನು ಕೊಟ್ಟು ಎಲ್ಲರೂ ಸೇರಿ ಕೆಲಸ ಮಾಡೋಣ. ಎಲ್ಲ ಸಮಸ್ಯೆಗಳು ಬಗೆಹರಿಯುತ್ತವೆ.

**ಶ್ರೀ ಟಿ.ಎ.ಶರವಣ:-** ಮಾನ್ಯ ಸಭಾಪತಿಗಳೆ, ಮಾನ್ಯ ಯಡಿಯೂರಪ್ಪನವರು, ಮಾನ್ಯ ಈಶ್ವರಪ್ಪನವರು, ಮಾನ್ಯ ಜಗದೀಶ್ ಶೆಟ್ಟರ್‌ರವರು, ಮಾನ್ಯ ಸದಾನಂದಗೌಡರು, ಮಾನ್ಯ ಸಂತೋಷರವರು ಒಟ್ಟಾಗಿ ಹೋದರೆ ಎಲ್ಲ ಸಮಸ್ಯೆಗಳು ಬಗೆಹರಿಯುತ್ತವೆ.

(ಗೊಂದಲ)

**ಶ್ರೀ ಐವನ್ ಡಿ'ಸೋಜಾ:-** ಮಾನ್ಯ ಸಭಾಪತಿಗಳೆ, ಮಾನ್ಯ ಯತ್ನಾಳರವರು, ಇನ್ನು 15 ದಿವಸ ಬಿಟ್ಟಿದ್ದರೆ ಸರ್ಕಾರವೇ ಬಿದ್ದು ಹೋಗುತ್ತಿತ್ತು ಎಂದು ಹೇಳಿದ್ದಾರೆ.

**ಶ್ರೀ ಮರಿತಿಬ್ಬೇಗೌಡ:-** ಮಾನ್ಯ ಸಭಾಪತಿಗಳೆ, ಮಾನ್ಯ ಪ್ರಾಣೇಶ್‌ರವರು ಹೇಳಿರುವುದು ಹೇಗೆ ಇದೆ ಎಂದರೆ, ರಾವಣೇಶ್ವರ ಸೀತೆಯನ್ನು ಅಪಹರಿಸಿಕೊಂಡು ಹೋದಾಗ, ಅವರ ಹೆಂಡತಿ ಮಂಡೋದರಿ ನೀನು ಪರನಾರಿ ಚೋರ, ಪರನಾರಿಯನ್ನು ಅಪಹರಿಸಿ ಈ ರೀತಿ ಮಾಡುವುದು ಸರಿಯಲ್ಲ, ಅವಳನ್ನು ಬಿಟ್ಟುಬಿಡು ಎಂದು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಹೇಳುತ್ತಾಳೆ. ಸೀತೆಯು ಕೂಡಾ ಕೈಮುಗಿದು ನನ್ನನು ಬಿಟ್ಟುಬಿಡಿ ಎಂದು ಬೇಡಿಕೊಳ್ಳುತ್ತಾಳೆ, ಆಗ ರಾವಣೇಶ್ವರ ತನ್ನ ಪತ್ನಿಗೆ ಪರನಾರಿ ಚೋರ ಎಂದು ನೀನು ನನಗೆ ಹೇಳುತ್ತೀಯಾ ಅದನ್ನು ನಾನು ಒಪ್ಪುತ್ತೇನೆ. ಆದರೆ ನನ್ನದೊಂದು ಸಿದ್ಧಾಂತವಿದೆ, ನಾನು ವಿಚಾರದಲ್ಲಿ ಮಾತ್ರ, ಆಚಾರದಲ್ಲಿ ನೀನು ಹೇಳಿದ ಹಾಗೆ ಇಲ್ಲ ಎಂದು ಹೇಳುತ್ತಾನೆ. ಹಾಗೆ ಈ ಬಿಜೆಪಿ ಸರ್ಕಾರ. ವಿಚಾರದಲ್ಲಿ ಮಾತ್ರ ಆಚಾರದಲ್ಲಿ ಇಲ್ಲ.

**ಡಾ: ತೇಜಸ್ವಿನಿ ಗೌಡ:–** ಮಾನ್ಯ ಸಭಾಪತಿಗಳೆ, ಪರಸ್ತ್ರಿಯನ್ನು ಅಪಹರಿಸುವ ವಿಚಾರ ಒಳ್ಳೆಯದಾ ನಿಮ್ಮ ಅಭಿಪ್ರಾಯದಲ್ಲಿ?

**ಶ್ರೀ ಐವನ್ ಡಿ'ಸೋಜಾ:–** ಮಾನ್ಯ ಸಭಾಪತಿಗಳೆ, ಅವರು ಹೇಳುವ ಕಥೆಗಳನ್ನು ಕೇಳುತ್ತಾ ಕೂಡಲು ಇಲ್ಲಿ ಬಂದಿಲ್ಲ ನಾವು.

**ಶ್ರೀ ಎಸ್.ಆರ್.ಪಾಟೀಲ್(ವಿರೋಧ ಪಕ್ಷದ ನಾಯಕರು):–** ಮಾನ್ಯ ಸಭಾಪತಿಗಳೆ, ನೆರೆ ಪರಿಹಾರದ ಬಗ್ಗೆ ಇವತ್ತು ಎಲ್ಲ ಸದಸ್ಯರು ಮಾತನಾಡಬೇಕು. ಪ್ರಾಣೇಶ್‌ರವರು ಈ ರೀತಿ ಕಥೆ ಹೇಳುತ್ತಾ ಕುಳಿತರೆ ಹೇಗೆ? ಇವತ್ತು ಸದನ ಮುಗಿಯಲು 8–30 ರಿಂದ 9–00 ಗಂಟೆಯಾಗಬಹುದು.

**ಡಾ:ತೇಜಸ್ವಿನಿ ಗೌಡ:–** ಮಾನ್ಯ ಸಭಾಪತಿಗಳೆ, ಶ್ರೀರಾಮನ ಧರ್ಮಪತ್ನಿ ಸೀತಾದೇವಿಯ ಅಪಹರಣವನ್ನು ಸಮರ್ಥನೆ ಮಾಡುವ ರೀತಿಯನ್ನು ನಾನು ಖಂಡಿಸುತ್ತೇನೆ. ಪರಸ್ತ್ರೀಯನ್ನು ಅಪಹರಣ ಮಾಡುವ ಸಿದ್ಧಾಂತವನ್ನು ನಾನು ಖಂಡಿಸುತ್ತೇನೆ. ದಯಮಾಡಿ ಅದನ್ನು ಗುರುತಿಸಬೇಕು.

**ಶ್ರೀ ಎಚ್.ಎಂ.ರಮೇಶ್ ಗೌಡ (ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಗಳೆ, ಅವಕಾಶ ಕೊಟ್ಟಿದಕ್ಕಾಗಿ ಧನ್ಯವಾದಗಳು, 21 ಜಿಲ್ಲೆಗಳ ಜನರ ಇವತ್ತು ಸಂಕಷ್ಟದ ಸ್ಥಿತಿಯಲ್ಲಿ ಬದುಕುತ್ತಿದ್ದಾರೆ. ಇಡೀ ಸರ್ಕಾರ ಹೋಗಿ ಸಂತ್ರಸ್ಥರ ನೆರವಿಗೆ ನಿಲ್ಲಬೇಕಾಗಿತ್ತು. ಆದರೆ ಈ ಸರ್ಕಾರ ಮಾತಿಗೆ ಸಿಮೀತವಾಗಿದೆ. ಇಂದು ರಾಜ್ಯದ ಜನರು ಸಂಕಷ್ಟದಲ್ಲಿ ಕಣ್ಣೀರು ಹಾಕುತ್ತಿದ್ದಾರೆ. ಈ ಪ್ರವಾಹದ ಬಗ್ಗೆ ನಿನ್ನೆಯಿಂದ ಮಾನ್ಯ ಹಿರಿಯ ಸದಸ್ಯರು ಬಹಳ ಸವಿವರವಾಗಿ ಮಾತನಾಡಿ ಎಲ್ಲವನ್ನು ಸರ್ಕಾರದ ಗಮನಕ್ಕೆ ತಂದಿದ್ದಾರೆ. ಬೆಳಿಗ್ಗೆ ಕಂದಾಯ ಸಚಿವರು ಮಾತನಾಡುವಾಗ ಒಂದೆರಡು ವಿಚಾರಗಳನ್ನು ಹೇಳಿದರು. ಸಂಕಷ್ಟದಲ್ಲಿರುವವರಿಗೆ 5000 ದಿಂದ 10,000 ರೂ.ಗಳ ಬಾಡಿಗೆಯನ್ನು ಕೊಡಲಾಗುತ್ತಿದೆ ಎಂದು ಹೇಳಿದ್ದಾರೆ. ಸಂಕಷ್ಟ ಸ್ಥಿತಿಯಲ್ಲಿರುವ ಅಂಗನವಾಡಿ ಕೇಂದ್ರಗಳು ಎಲ್ಲವು ನಾಶವಾಗಿವೆ. ಇವತ್ತು ಸರ್ಕಾರ ಸದನದಲ್ಲಿ ಏನೇನೊ ಪರಿಹಾರ ಕಾರ್ಯಗಳನ್ನು ಮಾಡಿದ್ದೇವೆ ಎಂದು ಹೇಳುತ್ತಿದ್ದಾರೆ. ಆದರೆ ವಾಸ್ತವವಾಗಿ ಅಷ್ಟೊಂದು ಕೆಲಸಗಳು ಪ್ರಾಮಾಣಿಕವಾಗಿ ಆಗಿರುವುದಿಲ್ಲ. ಏಕೆಂದರೆ ನಾನು ಚಿಕ್ಕಮಗಳೂರು, ಬೆಳಗಾವಿ ಜಿಲ್ಲೆಗಳಿಗೆ ಹೋಗಿ ನೋಡಿದ್ದೇನೆ, ಅಲ್ಲಿಯ ಜನರು ಒಂದು ಊರಿನಿಂದ ಇನ್ನೊಂದು ಊರಿಗೆ ಹೋಗಬೇಕಾದರೆ ಸೇತುವೆ ಮುಖಾಂತರ ಹೋಗಬೇಕು. ಅಲ್ಲಿ ಸೇತುವೆಗಳು ಬಿದ್ದುಹೋಗಿವೆ. ಜನರು ಓಡಾಡಲು ಆಗುತ್ತಿಲ್ಲ. ಸರ್ಕಾರ ತತ್ಕಾಲಿಕವಾಗಿ ಅವರು ಒಂದು ಕಡೆಯಿಂದ ಇನ್ನೊಂದು ಕಡೆಗೆ ಹೋಗಲು

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ವ್ಯವಸ್ಥೆ ಮಾಡಿಕೊಡಬೇಕಾಗಿತ್ತು. ಆ ವ್ಯವಸ್ಥೆಯನ್ನು ಸಹ ಸರಿಯಾಗಿ ಮಾಡಲಿಲ್ಲ. ಅತ್ಯಂತ ಹೆಚ್ಚು ಶಾಸಕರು ಆ ಭಾಗದಿಂದಲೇ ಆಯ್ಕೆಯಾಗಿ ಬಂದಿದ್ದಾರೆ. ಬಿಜೆಪಿ ಶಾಸಕರು ಮತ್ತು ಅವರ ಮುಖಂಡರು ಪ್ರತಿ ಸಾರಿ ಕೇಂದ್ರದಲ್ಲಿ ಮತ್ತು ರಾಜ್ಯದಲ್ಲಿ ಒಂದೇ ಸರ್ಕಾರ ಇದ್ದರೆ ಎಲ್ಲ ಕೆಲಸಗಳು ಹೂವಿನಷ್ಟು ಹಗುರವಾಗುತ್ತವೆ ಎಂದು ಹೇಳುತ್ತಿದರು. ಆದರೆ ಈ ಸರ್ಕಾರ ಬಂದು ಮೂರು ತಿಂಗಳಾಗಿದೆ, ಕೇಂದ್ರದಲ್ಲಿ ಅವರ ಸರ್ಕಾರವೇ ಇದೆ. ಆದರೂ ಕೆಲಸಗಳು ಆಗುತ್ತಿಲ್ಲ. ಈ ವಿಚಾರವನ್ನು ನಾವೇನು ಕಣ್ಣಿಗೆ ಬಟ್ಟೆ ಕಟ್ಟಿಕೊಂಡು ಹೇಳುತ್ತಿಲ್ಲ. ಮಾನ್ಯ ಮುಖ್ಯಮಂತ್ರಿಗಳು ಮಾನ್ಯ ಪ್ರಧಾನ ಮಂತ್ರಿಗಳನ್ನು ಭೇಟಿ ಮಾಡಲು, ಮಾನ್ಯ ಕೇಂದ್ರ ಗೃಹ ಸಚಿವರನ್ನು ಭೇಟಿ ಮಾಡಬೇಕು ಎಂದರೆ ಅವರಿಗೆ ಅವಕಾಶವನ್ನೆ ಕೊಡುತ್ತಿಲ್ಲ. ರಾಜ್ಯದಲ್ಲಿ ಇಷ್ಟೊಂದು ಭೀಕರ ಪ್ರವಾಹ ಬಂದಿದೆ. ಇನ್ನು ಕೆಲವು ಭಾಗಗಳಲ್ಲಿ ಬರಗಾಲವಿದೆ. ಇದರ ಬಗ್ಗೆ ಮಾತನಾಡಬೇಕು ಎಂದರೆ ಮಾನ್ಯ ಪ್ರಧಾನ ಮಂತ್ರಿಗಳು ಮಾನ್ಯ ಮುಖ್ಯಮಂತ್ರಿಗಳಿಗೆ ಭೇಟಿ ಮಾಡಲು ಅವಕಾಶವನ್ನು ಕೊಡುವುದಿಲ್ಲ. ಮಾನ್ಯ ಕೇಂದ್ರ ಗೃಹ ಸಚಿವರು ಭೇಟಿಯಾಗಲು ಅವಕಾಶವನ್ನು ಕೊಡುತ್ತಿಲ್ಲ. ರಾಜ್ಯದಲ್ಲಿ ಮತ್ತು ಕೇಂದ್ರದಲ್ಲಿ ಇವರ ಸರ್ಕಾರವೆ ಇದೆ. ಈಗ ಕೇಂದ್ರದವರು ಯಾವ ರೀತಿ ಸ್ಪಂದಿಸುತ್ತಿದ್ದಾರೆ ಎನ್ನುವುದನ್ನು ಅವರೇ ಹೇಳಬೇಕಾಗುತ್ತದೆ. ಏನೋ ಸದನ ನಡೆಯುತ್ತಿದೆ, ವಿರೋಧ ಪಕ್ಷದವರು ಏನೊ ಹೇಳುತ್ತಾರೆ, ನಾವು ನಾಲ್ಕು ಜನ ಎದ್ದು ನಿಂತು ಕಿರಚಾಡಿ ಕೂಗಾಡಿ ಗೊಂದಲ ಎಬ್ಬಿಸಿ ವಿಷಯವನ್ನು divert ಮಾಡಬೇಕು ಎನ್ನುವ ಭಾವನೆಯಲ್ಲಿ ಮಾನ್ಯ ಆಡಳಿತ ಪಕ್ಷದ ಸದಸ್ಯರು ಇದ್ದಾರೆ. ಸಂಕಷ್ಟದಲ್ಲಿರುವ ಜನರಿಗೆ ಇವರು ಕೊಟ್ಟಿರುವ ಪರಿಹಾರ ಏನೇನೂ ಸಾಕಾಗುವುದಿಲ್ಲ. ಮನೆಗಳನ್ನು ಕಳೆದುಕೊಂಡವರ ಬಗ್ಗೆ ಬೆಳಿಗ್ಗೆ ಕಂದಾಯ ಸಚಿವರು ಒಂದು ಆರ್‌ಟಿಜಿಎಸ್ ಮಾಡುತ್ತಿದ್ದೇವೆ ಎಂದು ಹೇಳಿದರು. Village Accountants ಸರಿಯಾಗಿ ಕೆಲಸ ಮಾಡುತ್ತಿಲ್ಲ. ಸಂಕಷ್ಟದಲ್ಲಿರುವವರು ತಾಲ್ಲೂಕು ಕಛೇರಿಗಳಿಗೆ ಹೋಗಿ ಒಂದು ಅರ್ಜಿಯನ್ನು ಕೊಟ್ಟರೆ ಅಲ್ಲಿಯ ಅಧಿಕಾರಿಗಳು ಯಾವ ರೀತಿ ಸ್ಪಂದಿಸುತ್ತಿದ್ದಾರೆ ಎನ್ನುವುದನ್ನು ಸರ್ಕಾರ ಗಮನಿಸಬೇಕು. ಮಾನ್ಯ ಕಂದಾಯ ಸಚಿವರು ಈಗ ಇರಬೇಕಾಗಿತ್ತು. ಆದರೂ ಮಾನ್ಯ ಸಭಾನಾಯಕರು ಇದ್ದಾರೆ ಅವರು ಕಂದಾಯ ಸಚಿವರಿಗೆ ವಿಷಯವನ್ನು ತಿಳಿಸುತ್ತಾರೆ. ನಮಗೆ ಬಂದ ಮಾಹಿತಿ ಪ್ರಕಾರ ಇದು ಸತ್ಯವಾದ ವಿಚಾರ. ಇದರಲ್ಲಿ ಯಾವುದೆ ದುರುದ್ದೇಶವಿಲ್ಲ, ಕಟ್ಟುಕಥೆಯು ಅಲ್ಲ. ಅಲ್ಲಿಯ Revenue Inspectors ಇರಬಹುದು, Village Accountants ಇರಬಹುದು ಒಂದು ಹೊತ್ತು ಊಟಕ್ಕೂ ಸಂಕಷ್ಟ ಪಡುತ್ತಿರುವ ಜನರು ಒಂದು ಅರ್ಜಿಯನ್ನು ಹಿಡಿದುಕೊಂಡು ಹೋದರೆ, ಅವರಿಗೆ ಅಧಿಕಾರಿಗಳು ಸ್ಪಂದಿಸುತ್ತಿಲ್ಲ. ಹೋಗ್ರಿ, ಅಲ್ಲಿ ಅದಕ್ಕೆ ಎಂದು ಒಂದು counter ಇದೆ ಅಲ್ಲಿಗೆ ಹೋಗಿ ಅರ್ಜಿಯನ್ನು ಕೊಡಿ ಎಂದು ಹೇಳುತ್ತಿದ್ದಾರೆ.

**ಶ್ರೀ ಸಿ.ಸಿ.ಪಾಟೀಲ್(ಗಣಿ ಮತ್ತು ಭೂ ವಿಜ್ಞಾನ ಸಚಿವರು):–** ಏನು ಮಾಡಬೇಕು ಹೇಳಿ.

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಹೆಚ್.ಎಂ.ರಮೇಶ್ ಗೌಡ:–** ಮಾನ್ಯ ಸಭಾಪತಿಗಳೆ, ಮಾನ್ಯ ಜಿಲ್ಲಾಧಿಕಾರಿಗಳು ನಿರ್ದೇಶನಗಳನ್ನು ಕೊಟ್ಟು, ಆದೇಶಗಳನ್ನು ಕೊಟ್ಟಿರಬಹುದು. ಆದರೆ ಆ ಆದೇಶಗಳನ್ನು ಕೆಳಮಟ್ಟದ ಅಧಿಕಾರಿಗಳು ಪಾಲಿಸುತ್ತಿಲ್ಲ.

**(ಮುಂದು)**

(174) 11-10-2019 (06-40) ಬಿಎಸ್‌ಡಿ–ಎಜಿಡಿ
ಶ್ರೀ ಹೆಚ್.ಎಂ. ರಮೇಶ್‌ಗೌಡ (ಮುಂದು)
ಎಲ್ಲಾ ತಾಲ್ಲೂಕು ಕಚೇರಿಗಳಲ್ಲಿಯೂ ಸ್ಪಂದಿಸುತ್ತಿಲ್ಲ.

**ಶ್ರೀ ಚಂದ್ರಕಾಂತಗೌಡ ಚನ್ನಪ್ಪಗೌಡ ಪಾಟೀಲ್:–** ಮಾನ್ಯ ಸಭಾಪತಿಯವರೇ, ನಾನು ನೆರೆಪೀಡಿತ ಜಿಲ್ಲೆಯಿಂದ ಬಂದವನಾಗಿದ್ದು, ಇದು ಮಾನ್ಯ ಎಸ್.ಆರ್. ಪಾಟೀಲರಿಗೂ ಗೊತ್ತಿದೆ. ಎಲ್ಲಾ ಜಿಲ್ಲೆಗಳಲ್ಲಿಯೂ ಅಧಿಕಾರಿಗಳು ಸ್ಪಂದಿಸಿದ್ದಾರೆ. ಅವರು ಹಿಂದಿನ ಸರ್ಕಾರದ ಅಧಿಕಾರಿಗಳಾಗಿದ್ದು, ನಾವು ಹೊಸದಾಗಿ ತಂದ ಅಧಿಕಾರಿಗಳಲ್ಲ. ಎಲ್ಲಾ ಕಡೆಯೂ ಸ್ಪಂದಿಸಿದ್ದಾರೆ.

**ಶ್ರೀ ಹೆಚ್.ಎಂ. ರಮೇಶ್‌ಗೌಡ:–** ನಮಗೆ ಬಂದ ಮಾಹಿತಿಯಂತೆ ಅವರು ಸ್ಪಂದಿಸಿಲ್ಲ. ನಾನು ವಾಸ್ತವಾಂಶವನ್ನು ಸದನದ ಮುಂದೆ ಇಟ್ಟಿದ್ದೇನೆ.

**ಶ್ರೀ ಎಸ್.ಆರ್. ಪಾಟೀಲ್ (ವಿರೋಧ ಪಕ್ಷದ ನಾಯಕರು):–** ಮಾನ್ಯ ಸಭಾಪತಿಯವರೇ, ಮಧ್ಯೆ ಮಾತನಾಡುತ್ತಿರುವುದಕ್ಕೆ ದಯಮಾಡಿ ಕ್ಷಮಿಸಬೇಕು. ಬಹುತೇಕ ನಾನು ಬೇರೆ ಜಿಲ್ಲೆಗಳಲ್ಲಿ ತಿರುಗಾಡಿದ್ದೇನೆ. ನಾವು ಅನಗತ್ಯವಾಗಿ ಅಧಿಕಾರಶಾಹಿಗಳನ್ನು ಬೈಯ್ಯುವುದರಲ್ಲಿ ಅರ್ಥವಿಲ್ಲ. ಕೆಲವು ಕಡೆ ಮಾಡದೇ ಇರಬಹುದು. ಆದರೆ ಸಾಮಾನ್ಯವಾಗಿ ಅಧಿಕಾರಿಗಳು ನೆರೆಹಾವಳಿಯಲ್ಲಿ ಕ್ರಿಯಾಶೀಲತೆ, ಬದ್ಧತೆಯಿಂದ ಮನೆ ಬಿಟ್ಟು ರಾತ್ರಿ–ಹಗಲು ಸಂತ್ರಸ್ತರ ಜೊತೆ ಕೆಲಸ ಮಾಡಿದ್ದಾರೆ.

**ಶ್ರೀ ಹೆಚ್.ಎಂ. ರಮೇಶ್‌ಗೌಡ:–** ಮಾನ್ಯ ಸಭಾಪತಿಯವರೇ, ಕೆಲವರು ಸ್ಪಂದಿಸಿರಬಹುದು. ನಾನು ಬೆಳಗಾವಿಗೆ ಭೇಟಿ ನೀಡಿದಾಗ ನಮಗೆ ಹೇಳಿರುವ ವಿಚಾರವನ್ನು ಸದನದ ಮುಂದೆ ಇಡುತ್ತಿದ್ದೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು):–** ಮಾನ್ಯ ಸಭಾಪತಿಯವರೇ, ಮಾನ್ಯ ಎಸ್.ಆರ್. ಪಾಟೀಲರು ಹೇಳಿರುವುದನ್ನು ಗಮನಿಸಿದ್ದೇನೆ. ಇಡೀ 30 ಜಿಲ್ಲೆಗಳಲ್ಲಿ ಅಧಿಕಾರಿಗಳು ಪರಿಣಾಮಕಾರಿಯಾಗಿ ಕೆಲಸ ಮಾಡಿದ್ದಾರೆ. ಮಾನ್ಯ ಸದಸ್ಯರು ಹೇಳಿರುವಂತೆ ನಿರ್ದಿಷ್ಟ ಪ್ರಕರಣ ಇದ್ದರೆ ದಯಮಾಡಿ ತಿಳಿಸಬೇಕು.

**ಶ್ರೀ ಹೆಚ್.ಎಂ. ರಮೇಶ್‌ಗೌಡ:–** ಕೆಲವು ಪ್ರಕರಣಗಳಲ್ಲಿ ಸ್ಪಂದಿಸಿರಬಹುದು, ಕೆಲವು ಪ್ರಕರಣಗಳಲ್ಲಿ ಯಾವ ರೀತಿ ನಡೆದುಕೊಳ್ಳುತ್ತಾರೆ ಎಂದು ಅವರಿಗೂ ಗೊತ್ತಿದೆ. ಇದರಲ್ಲಿ ಮುಚ್ಚುಮರೆ ಇಲ್ಲ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ನಿರ್ದಿಷ್ಟ ಪ್ರಕರಣದ ಬಗ್ಗೆ ಮಾಹಿತಿ ನೀಡಿದರೆ ಸರ್ಕಾರ ತಕ್ಷಣ ಕ್ರಮ ಕೈಗೊಳ್ಳುತ್ತದೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಹೆಚ್.ಎಂ. ರಮೇಶ್‌ಗೌಡ:-** ಮಾಹಿತಿ ಕೊಡುತ್ತೇನೆ. ಇದಲ್ಲದೇ ಈಗ ಕೊಡುತ್ತಿರುವ ಪರಿಹಾರ ಸಾಕಾಗುವುದಿಲ್ಲ. ಒಂದು ಮನೆ ಕಟ್ಟಲು ರೂ.5 ರಿಂದ 10 ಲಕ್ಷ ಸಾಕಾಗುವುದಿಲ್ಲ. ಸಂಪೂರ್ಣವಾಗಿ ಮನೆ ಕಳೆದುಕೊಂಡವರಿಗೆ ಹೆಚ್ಚಿನ ಪರಿಹಾರ ಕೊಡಬೇಕಾಗುತ್ತದೆ. ಸದನವು ಇನ್ನೊಂದು ದಿವಸ ನಡೆಯುವುದಿದ್ದು, ಪರಿಹಾರದ ಮಾಹಿತಿಯನ್ನು ಸದನದ ಮುಂದೆ ಇಡಬೇಕೆಂದು ಮನವಿ ಮಾಡಿಕೊಳ್ಳುತ್ತೇನೆ. ನನಗೆ ಅವಕಾಶ ನೀಡಿದ್ದಕ್ಕಾಗಿ ತಮಗೆ ಧನ್ಯವಾದಗಳನ್ನರ್ಪಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

**12. ವಿಶೇಷ ಪ್ರಸ್ತಾವದ ಅಡಿಯಲ್ಲಿ ಪ್ರಸ್ತಾಪಿಸಲ್ಪಟ್ಟ ವಿಷಯಕ್ಕೆ ಸಂಬಂಧಪಟ್ಟ ಸಚಿವರ ಹೇಳಿಕೆ**

**ಮಂಗಳೂರು ಮಹಾನಗರ ಪಾಲಿಕೆಗೆ ಚುನಾವಣೆ ನಡೆಸುವ ಬಗ್ಗೆ**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು):-** ಮಾನ್ಯ ಸದಸ್ಯರಾದ ಐವನ್ ಡಿ'ಸೋಜಾ ರವರು ದಿನಾಂಕ 10-10-2019 ರಂದು ನಿಯಮ 330(ಎ) ಅಡಿಯಲ್ಲಿ ಮಂಡಿಸಿರುವ ಸೂಚನಾ ಪತ್ರಕ್ಕೆ ಮಾನ್ಯ ಕಂದಾಯ ಮಂತ್ರಿಗಳ ಪರವಾಗಿ ಈ ಕೆಳಕಂಡಂತೆ ಉತ್ತರವನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ.

(ಉತ್ತರದ ಪ್ರತಿ ಲಗತ್ತಿಸಿದೆ)

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

13. **ನಿಯಮ 68ರ ಮೇರೆಗೆ ಸಾರ್ವಜನಿಕ ಮಹತ್ವದ ವಿಷಯದ ಮೇಲಿನ ಮುಂದುವರೆದ ಚರ್ಚೆ**

**ರಾಜ್ಯದಲ್ಲಿ ಭಾರಿ ಮಳೆ ಮತ್ತು ಪ್ರವಾಹದಿಂದಾಗಿ ಉಂಟಾಗಿರುವ ಅನಾಹುತದಿಂದ ಸಂಕಷ್ಟಕ್ಕೀಡಾಗಿರುವ ಜನರಿಗೆ ಪರಿಹಾರ ಒದಗಿಸುವಲ್ಲಿ ಸರ್ಕಾರವು ವಿಫಲವಾಗಿರುವ ಬಗ್ಗೆ**

**ಶ್ರೀಮತಿ ವೀಣಾ ಅಚ್ಚಯ್ಯ (ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಬಹುಶ: ಇಡೀ ರಾಜ್ಯದಲ್ಲಿನ ಪ್ರವಾಹ ಪೀಡಿತರ ಬಗ್ಗೆ ಇಡೀ ಸದನದ ಸದಸ್ಯರು ಮಾತನಾಡಿದ್ದಾರೆ. ನಾನು ಕೊಡಗಿನ ಬಗ್ಗೆ ಕೆಲವು ವಿಚಾರಗಳನ್ನು ಸದನದ ಗಮನಕ್ಕೆ ತರಲು ಇಷ್ಟಪಡುತ್ತೇನೆ.

ಆಡಳಿತ ಪಕ್ಷದವರು ನಾವು ಕಳೆದ ಸರ್ಕಾರದಲ್ಲಿ ಏನೂ ಕೆಲಸ ಮಾಡಿಲ್ಲ ಎಂದು ಆರೋಪ ಮಾಡಿದ್ದು, ಅದಕ್ಕೆ ಕೆಲವು ವಿಚಾರಗಳನ್ನು ಉತ್ತರವಾಗಿ ಹೇಳುವುದಕ್ಕೆ ಬಯಸುತ್ತೇನೆ. 2018–19ನೇ ಸಾಲಿನಲ್ಲಿ ಮೊದಲ ಬಾರಿಗೆ ಕೊಡಗು ಜಿಲ್ಲೆಯಲ್ಲಿ ಕಂಡು ಕೇಳರಿಯದ ಜಲಸ್ಫೋಟ ಸಂಭವಿಸಿದಾಗ ಸಮ್ಮಿಶ್ರ ಸರ್ಕಾರ ಅಸ್ಥಿತ್ವದಲ್ಲಿದ್ದು, ಸರ್ಕಾರದ ಎಲ್ಲಾ ಮಂತ್ರಿಗಳು ಕೊಡಗು ಜಿಲ್ಲೆಗೆ ಭೇಟಿ ನೀಡಿದ್ದರು. ಆ ಸಂದರ್ಭದಲ್ಲಿ ಇಡೀ ರಾಜ್ಯದ ಜನತೆ ಕೊಡಗಿನ ಮೇಲೆ ಅಭಿಮಾನ ಇಟ್ಟು ಸ್ಪಂದಿಸಿದ್ದು, ಅದಕ್ಕಾಗಿ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಅಂದು ಮಾನ್ಯ ಕುಮಾರಸ್ವಾಮಿಯವರು ಮುಖ್ಯಮಂತ್ರಿಗಳಾಗಿದ್ದು, ಸಂಪುಟದ ಎಲ್ಲಾ ಸಹದ್ಯೋಗಿಗಳು ಕೊಡಗಿಗೆ ಆಗಿಂದ್ದಾಗ್ಗೆ ಭೇಟಿ ಕೊಡುತ್ತಿದ್ದರು. ಮಾನ್ಯ ಸಾ.ರಾ. ಮಹೇಶ್ ರವರು ಕೊಡಗಿನ ಉಸ್ತುವಾರಿ ಸಚಿವರಾಗಿದ್ದು, ನಿಜಕ್ಕೂ ಅವರನ್ನು ಹೆಮ್ಮೆಯಿಂದ ನೆನಸಿಕೊಳ್ಳಬೇಕಾಗಿದೆ. ಸುಮಾರು ಒಂದೂವರೆ ತಿಂಗಳ ಕಾಲ ಅವರು ನಮ್ಮ ಜೊತೆಯಲ್ಲಿದ್ದು, ಕೊಡಗಿನ ಸಂಕಷ್ಟಗಳಿಗೆ ಸ್ಪಂದನೆ ಮಾಡಿದ್ದಾರೆ. ಮೈಸೂರಿನ ಕಡೆ ಹೋಗದೇ ನಮ್ಮ ಜೊತೆ ಇದ್ದು ಸ್ಪಂದಿಸಿದ್ದಾರೆ. ಮಾನ್ಯ ಮುಖ್ಯಮಂತ್ರಿಗಳು ಸುಮಾರು 8 ಬಾರಿ ಕೊಡಗಿಗೆ ಭೇಟಿ ನೀಡಿದ್ದಾರೆ. ನಾನು ಒಂದು ಉದಾಹರಣೆಯನ್ನು ಹೇಳುವುದಕ್ಕೆ ಬಯಸುತ್ತೇನೆ. ನನ್ನ ಮನೆಗೆ ಹೋಗುವ ಸೋಮವಾರಪೇಟೆ ಮತ್ತು ಮಾದಾಪುರ ರಸ್ತೆಯಲ್ಲಿ ಸುಮಾರು 3 ಕಿಲೋಮೀಟರ್ ಸ್ಲೈಡ್‌ಲ್ಯಾಂಡ್ ಆಗಿ ಏನೂ ಕಾಣುತ್ತಿರಲಿಲ್ಲ. ಅದನ್ನು ನೋಡಿದಾಗ ಒಂದು ವರ್ಷದವರೆಗೆ ರಸ್ತೆ ಸರಿಪಡಿಸಲು ಆಗುವುದಿಲ್ಲ ಎಂದು ಅಂದಾಜು ಮಾಡಿದ್ದೆವು. ಆದರೆ ಕೇವಲ ಒಂದೂವರೆ ತಿಂಗಳಲ್ಲಿ ಬಸ್ಸುಗಳು ಸಂಚರಿಸುವ ರಸ್ತೆಯ ವ್ಯವಸ್ಥೆ ಮಾಡಿಕೊಟ್ಟರು. ಇವತ್ತು ಆಡಳಿತ ಪಕ್ಷದವರು ಆ ಸರ್ಕಾರ ಈ ಸರ್ಕಾರ ಎಂದು ಆರೋಪ ಮಾಡುತ್ತಿದ್ದಾರೆ. ಈ ರೀತಿ ಆಗಬಾರದು. ಕೆಲಸ ಮಾಡಿರುವುದನ್ನು ಮಾಡಿದ್ದಾರೆ ಎಂದು ಒಪ್ಪಿಕೊಳ್ಳುವ ಉದಾರತೆ ಇರಬೇಕೆಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಬಯಸುತ್ತೇನೆ. ಜೊತೆಗೆ ಗ್ರಾಮೀಣಾಭಿವೃದ್ಧಿ ಸಚಿವರಾದ ಶ್ರೀ ಕೃಷ್ಣ ಭೈರೇಗೌಡರು ಎಲ್ಲ ಗ್ರಾಮೀಣ ರಸ್ತೆಗಳನ್ನು ದುರಸ್ತಿ ಮಾಡಿದರು. ಮಾನ್ಯ ಸುನೀಲ್ ಸುಬ್ರಮಣ್ಯ ರವರು ಹೇಳಿದಂತೆ ಮೆಸ್ಕಾಂ ರವರು ಮಾಡಿದ ಕೆಲಸಗಳು ಶ್ಲಾಘನೀಯವಾದುದು. ಅದೇ ರೀತಿ ಸಣ್ಣ ನೀರಾವರಿ ಮಂತ್ರಿಯವರಾದ ಶ್ರೀ ಪುಟ್ಟರಾಜು ರವರು 8 ಗ್ರಾಮ ಪಂಚಾಯಿತಿಗಳ ವ್ಯಾಪ್ತಿಯಲ್ಲಿ ತೋಡು ಕಾಲುವೆಗಳು ಮುಚ್ಚಿದಂತಹ ಸಂದರ್ಭದಲ್ಲಿ ಕೇಳಿದಷ್ಟು ಹಣವನ್ನು

ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಬಿಡುಗಡೆ ಮಾಡಿ, ಗದ್ದೆಗಳ ತೋಡು ಕಾಲುವೆಗಳಿಗೆ ಕಟ್ಟೆ ಕಟ್ಟುವ ಕೆಲಸ ಮಾಡಿದರು. ಆ ನಿಟ್ಟಿನಲ್ಲಿ ಅವರಿಗೆ ಅಭಿನಂದನೆಗಳನ್ನು ಸಲ್ಲಿಸಬೇಕಾಗಿದೆ. ಕಳೆದ ಬಾರಿ ಸಮ್ಮಿಶ್ರ ಸರ್ಕಾರದ ಅವಧಿಯಲ್ಲಿ ಒಂದು ಮನೆಗೆ ಸುಮಾರು ರೂ.9.75 ಲಕ್ಷ ರೂಪಾಯಿಗಳನ್ನು ರಾಜೀವಗಾಂಧಿ ವಸತಿ ನಿಗಮದಿಂದ ಮನೆ ಕಟ್ಟಿಸಿಕೊಡಲು ಜಾಗವನ್ನು ಗುರುತು ಮಾಡಿದ್ದಾರೆ. ಮಡಿಕೇರಿಯಲ್ಲಿ 4 ಎಕರೆ, ಸಂಪಾಜೆಯಲ್ಲಿ 1.88 ಎಕರೆ, ಗಾಳಿಬೀಡಿನಲ್ಲಿ 9.5 ಎಕರೆ ಮತ್ತು ಜಂಬೂರಿನ ತೋಟಗಾರಿಕೆ ಇಲಾಖೆಗೆ ಸೇರಿದ 50 ಎಕರೆ ಜಾಗವನ್ನು ನಿರಾಶ್ರಿತರಿಗೆ ಮನೆ ಕಟ್ಟಲು ಮೀಸಲಾಗಿಟ್ಟಿದೆ. ಈಗಾಗಲೇ ನಿರ್ಮಾಣದ ಹಂತ ಕೊನೆಗೊಂಡು ಮೂಲಭೂತ ಸೌಕರ್ಯಗಳನ್ನು ಒದಗಿಸುವ ಕೆಲಸ ಬಾಕಿ ಇದೆ. ಇನ್ನೊಂದು ತಿಂಗಳಲ್ಲಿ ಮನೆಗಳ ಹಂಚಿಕೆ ಕಾರ್ಯ ನಡೆಯುತ್ತದೆ. ಕಳೆದ ಬಾರಿ ಮಡಿಕೇರಿ ತಾಲ್ಲೂಕಿನಲ್ಲಿ ಭೂಕುಸಿತ ಆಗಿದ್ದು, ಈ ಬಾರಿ ಸೋಮವಾರಪೇಟೆ ಮತ್ತು ವಿರಾಜಪೇಟೆ ತಾಲ್ಲೂಕುಗಳಲ್ಲಿ ಭೂಕುಸಿತ ಉಂಟಾಗಿದ್ದು, ಅನೇಕ ನಿರಾಶ್ರಿತರಿದ್ದಾರೆ. ತೋರಾ ಎಂಬ ಜಾಗದಲ್ಲಿ ಸುಮಾರು 13 ಜನರು ಮೃತಪಟ್ಟಿದ್ದು, ಇನ್ನೂ 2 ಶವಗಳು ಸಿಗದಂತಹ ಪರಿಸ್ಥಿತಿಯಲ್ಲಿದೆ. ಅಂತಹ ಜಾಗಕ್ಕೆ ಮಾನ್ಯ ಸಿದ್ದರಾಮಯ್ಯನವರು ಭೇಟಿ ನೀಡಿದ್ದರು. ಅಲ್ಲದೇ ಉಸ್ತುವಾರಿ ಸಚಿವರಾದ ಮಾನ್ಯ ಸುರೇಶ್‌ಕುಮಾರ್‌ರವರು ಆ ಜಾಗಕ್ಕೆ ಭೇಟಿ ನೀಡಿದ್ದು, ಅನೇಕ ಜನರು ಭೇಟಿ ನೀಡಿದ್ದಾರೆ. ಇವತ್ತು ನೆಲ್ಲುದಿಕೇರಿ, ಸಿದ್ದಾಪುರ, ಕರಡಿಗೋಡು, ನಾಪೋಕ್ಲು ಗಳಲ್ಲಿ ಪೈಸಾರಿ ಜಾಗಗಳು ಸಿಕ್ಕಿಲ್ಲ ಎಂದು ಹೇಳುತ್ತಿದ್ದಾರೆ. ಸರ್ಕಾರಿ ಜಾಗಗಳಲ್ಲಿ ಅತಿಕ್ರಮಿಸಿರುವ ಕಾಫಿ ಬೆಳೆಗಾರರಿಂದ ಭೂಮಿಯನ್ನು ವಶಪಡಿಸಿಕೊಳ್ಳಲು ಜಿಲ್ಲಾಡಳಿತ ಹೋದ ಸಂದರ್ಭದಲ್ಲಿ ತೋಟದ ಮಾಲೀಕರು ಕೋರ್ಟಿನಿಂದ ಸ್ಟೇ ತಂದಿದ್ದಾರೆ.

(ಮುಂದು)

(175) 11.10.2019 6.50 ಪಿಕೆ/ವಿಕೆ

**ಶ್ರೀ ಎಸ್.ವೀಣಾ ಅಚ್ಚಯ್ಯ (ಮುಂದುವರೆದಿದೆ)**

ನೆಲ್ಲಿಯದಿಕೇರಿ, ಕರಡಿಗೋಡು, ಸಿದ್ಧಾಪುರ ಈ ಭಾಗದಲ್ಲಿ ಸಾಕಷ್ಟು ಅರಣ್ಯದ ಜಾಗಗಳಿವೆ. ಯಾರು ನಿರಾಶ್ರಿತರಿದ್ದಾರೋ ಅಂಥವರಿಗೆ ಆ ಜಾಗವನ್ನು ಕೊಟ್ಟು, ಅವರ ಜಾಗವನ್ನು ಅರಣ್ಯದ ಉದ್ದೇಶಕ್ಕೆ ಉಪಯೋಗಿಸಿಕೊಳ್ಳುವ ನಿಟ್ಟಿನಲ್ಲಿ ಅವಕಾಶ ಮಾಡಿಕೊಡಬೇಕೆಂದು ನಾನು ಮನವಿ ಮಾಡಿಕೊಳ್ಳುತ್ತೇನೆ.

**ಶ್ರೀ ಸಿ.ಸಿ.ಪಾಟೀಲ್(ಗಣಿ ಮತ್ತು ಭೂವಿಜ್ಞಾನ ಹಾಗೂ ವಾಣಿಜ್ಯ ಮತ್ತು ಕೈಗಾರಿಕೆ ಸಚಿವರು):–** ಈ ಕುರಿತು ತಾವು ಒಂದು ಪತ್ರವನ್ನು ಕಳುಹಿಸಿ ಕೊಡಿ.

**ಶ್ರೀ ವೀಣಾ ಅಚ್ಚಯ್ಯ:– ಮಾನ್ಯ ಸಭಾಪತಿಯವರೇ,** ಖಂಡಿತಾ ಕಳುಹಿಸಿ ಕೊಡುತ್ತೇನೆ. ಸರ್ಕಾರದಲ್ಲಿ ನನ್ನದು ಇನ್ನೊಂದು ಮನವಿ ಏನೆಂದರೆ, ಕೊಡಗು ಜಿಲ್ಲೆಗೆ ತನ್ನದೇ ಆದ ಗಾಂಭೀರ್ಯ ಇದೆ. ಕೊಡಗಿನವರು ಯಾವತ್ತೂ ಬೇಡಿದವರಲ್ಲ, ಆದರೆ ಇವತ್ತು ಬೇಡುವ ಪರಿಸ್ಥಿತಿ ಬಂದಿದೆ. ಇದು ವಿಧಿ ಆಟ ಎಂದು ಹೇಳಿದರೆ

“ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

ತಪ್ಪಾಗಲಾರದು. ಸಮ್ಮಿಶ್ರ ಸರ್ಕಾರ ಇರುವಾಗ ಹೇಳಿದಂತೆ ಸುಸಜ್ಜಿತ ಮನೆಯನ್ನು ಕಟ್ಟುವುದಕ್ಕೆ ರೂ. 9 ಲಕ್ಷ 85 ಸಾವಿರಗಳನ್ನಾದರೂ ಕೊಡಬೇಕೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಒಂದು ಭಾಗಕ್ಕೆ ಒಂದು ಕಾನೂನು, ಇನ್ನೊಂದು ಭಾಗಕ್ಕೆ ಇನ್ನೊಂದು ಕಾನೂನು ಎಂದಾಗಬಾರದು. ಹೀಗೆ ಮಾಡಿದರೆ ಅದು ಸರ್ಕಾರದ ಮೇಲೆ ವಿಪರೀತ ಪರಿಣಾಮ ಬೀರುತ್ತದೆ. ಬೇರೆ ಜಿಲ್ಲೆಗಳ ಸಂಬಂಧ ನಾನು ಹೇಳುವುದಕ್ಕೆ ಹೋಗುವುದಿಲ್ಲ. ಈಗ ಹೊಸದಾಗಿ ಮಂತ್ರಿಗಳಾಗಿ ಬಂದಿದ್ದಾರೆ, ಅವರಿಗೆ ಸ್ವಾಗತ. ನಮ್ಮ ಭಾಗದಿಂದ ಕೇವಲ 4 ಜನ ಪ್ರತಿನಿಧಿಗಳಿದ್ದೇವೆ. ಸಚಿವರು ಕೊಡಗು ಜಿಲ್ಲೆಗೆ ಭೇಟಿ ಕೊಡುವಾಗ ಅದು ನಮ್ಮ ಯಾರ ಗಮನಕ್ಕೂ ಬರುವುದಿಲ್ಲ. ಈ ವಿಷಯವನ್ನು ನೇರವಾಗಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಸಚಿವರು ನಮ್ಮ ಜಿಲ್ಲೆಗೆ ಭೇಟಿ ನೀಡಿದಾಗ ನಮ್ಮ ಅಭಿಪ್ರಾಯಗಳನ್ನು ತೆಗೆದುಕೊಂಡ ನಂತರ ಅಧಿಕಾರಿಗಳ ಜೊತೆ ಸಭೆ ಮಾಡಬೇಕೆಂದು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಕೊಡಗನ್ನು ವಿಶೇಷವಾಗಿ ಪರಿಗಣಿಸಿ ವಿಶೇಷವಾದ ಪ್ಯಾಕೇಜ್ ಕೊಡಬೇಕೆಂದು ಪೀಠದ ಮುಖಾಂತರ ಕೇಳಿಕೊಂಡು ನನ್ನ ಮಾತನ್ನು ಮುಗಿಸುತ್ತೇನೆ.

**ಶ್ರೀ ಎನ್.ಅಪ್ಪಾಜಿ ಗೌಡ(ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ನೆರೆ, ಪ್ರವಾಹದ ಬಗ್ಗೆ ನಿನ್ನೆಯಿಂದಲೂ ಗಣನೀಯವಾಗಿ ಚರ್ಚೆ ನಡೆಯುತ್ತಿದೆ. ಇದು ಬಹಳ ಗಂಭೀರವಾದ ವಿಷಯವಾಗಿದೆ. ಶ್ರೀಮತಿ ವೀಣಾ ಅಚ್ಚಯ್ಯನವರು ಮಾತನಾಡುತ್ತಾ ಒಂದು ಮಾತು ಹೇಳಿದರು. ಯಾವುದೇ ಸರ್ಕಾರದ ಅವಧಿ ಇರಲಿ, ಮಂತ್ರಿಗಳು ಯಾರೇ ಇರಲಿ ಅವರು ಮಾಡುವ ಒಳ್ಳೆಯ ಕೆಲಸವನ್ನು ಯಾರಾದರೂ ಕೂಡ ನೆನೆಯಬೇಕಾದುದು ಮನುಷ್ಯನ ಗುಣ. ನಮ್ಮ ಭಾರತೀಯ ಪರಂಪರೆಯಲ್ಲಿ ಇಂತಹ ಒಂದು ಭಾವನೆ ಇದೆ. ಸರ್ಕಾರಗಳು, ಮುಖ್ಯಮಂತ್ರಿಗಳು, ಸಚಿವರು ಬರುತ್ತಾರೆ-ಹೋಗುತ್ತಾರೆ. ಆದರೆ ಇಂತಹ ಸಂಕಷ್ಟದ ಸಮಯದಲ್ಲಿ, ಜನ ಎದುರಿಸುತ್ತಿರುವ ಸಮಸ್ಯೆಗಳ ಬಗ್ಗೆ ಮಾನವೀಯತೆ ದೃಷ್ಟಿಯಿಂದ ಪರಿಹಾರ ನೀಡಬೇಕಾದುದು ಎಲ್ಲಾ ಸರ್ಕಾರಗಳ ಕರ್ತವ್ಯ. ಈ ಕುರಿತು ನಾನು ಹೆಚ್ಚು ಮಾತನಾಡದೇ, ಗ್ರಾಮಾಂತರ ಪ್ರದೇಶಗಳಲ್ಲಿ ಎದುರಿಸುತ್ತಿರುವ ಕುಡಿಯುವ ನೀರಿನ ಸಮಸ್ಯೆ ಬಗ್ಗೆ ಹೇಳಬಯಸುತ್ತೇನೆ. ಸುಮಾರು ಹಳ್ಳಿಗಳಲ್ಲಿ ಬೋರ್‌ವೆಲ್ ಕನೆಕ್ಷನ್ಸ್, overhead tanks ಏನಿವೆ ಇವೆಲ್ಲವೂ ನಾಶವಾಗಿದೆ. ಇದರ ಬಗ್ಗೆ ಸರ್ಕಾರ ತುರ್ತಾಗಿ ಕ್ರಮ ಕೈಗೊಳ್ಳಬೇಕು. ಮನುಷ್ಯನಿಗೆ ನೀರು ಸಿಗದೇ ಇದ್ದರೆ ಏನು ಮಾಡುವುದಕ್ಕಾಗುತ್ತದೆ? ಕುಡಿಯುವ ನೀರು ಬಹಳ ಅವಶ್ಯಕ. ಎನ್.ಡಿ.ಆರ್.ಎಫ್ ಮತ್ತು ಎಸ್.ಡಿ.ಆರ್.ಎಫ್.ನ ಗೈಡ್‌ಲೈನ್ಸ್ ಬಹಳ ಹಳೆಯದಾಗಿವೆ. ಆ ಎಲ್ಲ ಗೈಡ್‌ಲೈನ್‌ಗಳನ್ನು ಸದನದಲ್ಲಿ ತಿದ್ದುಪಡಿ ಮಾಡಿ ಕೇಂದ್ರ ಸರ್ಕಾರಕ್ಕೆ ಕಳುಹಿಸುವ ಅವಕಾಶವೇನಾದರೂ ಇದ್ದರೆ ಮೊದಲು ಆ ಕೆಲಸವನ್ನು ಮಾಡಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ. ಮಾನ್ಯ ಸಭಾಪತಿಯವರೇ, ಸುಮಾರು ಹಳ್ಳಿಗಳಲ್ಲಿ ವಿದ್ಯುತ್ ಸಂಪರ್ಕ ಹಾಳಾಗಿದೆ. ಇದರ ಬಗ್ಗೆ ಸರ್ಕಾರ ಕ್ರಮ ಕೈಗೊಂಡು ಈ ಸಮಸ್ಯೆಯನ್ನು ಪರಿಹರಿಸಬೇಕು. ನಾವು ಇಲ್ಲಿ 2 ಲಕ್ಷ ಮನೆಗಳು ಹಾಳಾಗಿವೆ ಎಂದು ಪ್ರಸ್ತಾಪ ಮಾಡುತ್ತಿದ್ದೇವೆ, ನಿಜ. ಈಗ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ವಸತಿ ನಿರ್ಮಾಣ ಮಾಡುವ ನಿಟ್ಟಿನಲ್ಲಿ ಹೊಸ ತಂತ್ರಜ್ಞಾನ ಬಂದಿದೆ. ಜಪಾನ್ ದೇಶದಲ್ಲಿ ಮತ್ತು ಗುಜರಾತ್ ರಾಜ್ಯದಲ್ಲಿ ಈ ಹೊಸ ತಂತ್ರಜ್ಞಾನವನ್ನು ಅಳವಡಿಸಿ ಮನೆಗಳನ್ನು ಕೇವಲ 3 ತಿಂಗಳಲ್ಲಿ ಕಟ್ಟಿ ಮುಗಿಸುತ್ತಾರೆ. ಮಾನ್ಯ ನಾರಾಯಣಸ್ವಾಮಿಯವರು M.Tech in Structural Engineering ಮಾಡಿದ್ದಾರೆ. ಗುಜರಾತ್ ರಾಜ್ಯದಲ್ಲಿ ಮತ್ತು ಜಪಾನ್ ದೇಶದಲ್ಲಿ ಈ prefabricated ತಂತ್ರಜ್ಞಾನ ಇದೆ. ಈಗ ಕರ್ನಾಟಕದಲ್ಲೂ ಕೂಡ ಕೆಲವು ಖಾಸಗಿ ಸಂಸ್ಥೆಗಳು ಇದನ್ನು ಪ್ರಾರಂಭ ಮಾಡುತ್ತಿವೆ. ವಸತಿ ಸಮಸ್ಯೆಯನ್ನು ಬಗೆಹರಿಸುವುದಕ್ಕೆ ಈ ತಂತ್ರಜ್ಞಾನವನ್ನು ಬಳಸಿಕೊಂಡರೆ ಅನುಕೂಲವಾಗುತ್ತದೆ. ಮಾನ್ಯ ಸಭಾಪತಿಯವರೇ, ಮಾನ್ಯ ಶ್ರೀಕಂಠೇಗೌಡರು ಮಾತನಾಡಿದ ಹಾಗೆ ನೆರೆ ಹಾವಳಿಯನ್ನು **"ರಾಷ್ಟ್ರೀಯ ವಿಪತ್ತು"** ಎಂದು ಘೋಷಣೆ ಮಾಡಿ, ಸದನದ ಮೂಲಕ ಆ ಪ್ರಸ್ತಾವವನ್ನು ಕಳುಹಿಸಿ ಕೊಟ್ಟರೆ ನಮಗೆ ಹೆಚ್ಚಿನ ಪರಿಹಾರ ಸಿಗುತ್ತದೆ ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

**ಶ್ರೀಮತಿ ಜಯಮ್ಮ(ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಉತ್ತರ ಕರ್ನಾಟಕದ ನೆರೆ ಸಂತ್ರಸ್ತರ ವಿಚಾರದ ಬಗ್ಗೆ ಈಗಾಗಲೇ ಸಾಕಷ್ಟು ಮಾತುಗಳನ್ನು ಹೇಳಿದ್ದಾರೆ. ನಮ್ಮ ಭಾರತ ದೇಶದಲ್ಲಿ ಪ್ರಥಮ ಸ್ಥಾನ ಮಹಿಳೆಯರಿಗೆ ಎಂದು ಹೇಳುತ್ತಾರೆ. ಆದರೆ, ಪರಿಸ್ಥಿತಿ ಇಲ್ಲಿ ಬೇರೆಯೇ ಇದೆ. ಮನೆಯಲ್ಲಿ ಮಹಿಳೆ ಕೊನೆಗೆ ಊಟ ಮಾಡಬೇಕು. ಸಭೆ, ಸಮಾರಂಭಗಳಲ್ಲಿ ಮತ್ತು ಸದನದಲ್ಲಿ ಕೊನೆಗೆ ಮಾತನಾಡುವುದಕ್ಕೆ ಅವಕಾಶ ಕೊಡುತ್ತಾರೆ. ಮಹಿಳೆಯರನ್ನು ಕೂಡ ಗಮನಿಸಬೇಕಾಗುತ್ತದೆ. ಮಹಿಳೆಯರು ಪ್ರತಿನಿಧಿಸುವ ಕ್ಷೇತ್ರಗಳಲ್ಲೂ ತುಂಬಾ ಸಮಸ್ಯೆಗಳಿರುತ್ತವೆ. ಮಹಿಳೆಯರು ಅಸಮರ್ಥರು ಎಂದು ಭಾವಿಸಬಾರದು ಎಂದು ತಮ್ಮಲ್ಲಿ ಹಾಗೂ ಸದಸ್ಯರಲ್ಲಿ ಮನವಿ ಮಾಡಿಕೊಳ್ಳುತ್ತೇನೆ. ಹಳ್ಳಿ ಕಡೆ **" ಮಳೆ ಬಂದರೆ ಸಾಕಮ್ಮ, ಮರದಡಿಯಲಿ ನಿಂತೇನು, ಮಳೆ ಬಿಟ್ಟರೂ ಮರದ ಹನಿ ಬಿಡದು; ಹಡೆದಮ್ಮ ನೀ ಬಿಟ್ಟರು ನಿನ್ನ ಮನೆ ಬಿಡದು"** ಎನ್ನುವ ಮಾತಿದೆ. ಉತ್ತರ ಕರ್ನಾಟಕದ ಬಂಧುಗಳಿಗೆ ಸಂಬಂಧಪಟ್ಟಂತೆ ಹೇಳುವುದಾದರೆ, ಮಳೆ ಬಿಟ್ಟಿದೆ, ಆದರೆ ಇನ್ನೂ ಪ್ರವಾಹ ಬರುತ್ತಿದೆ. ಆದರೂ ಆ ಸಂತ್ರಸ್ತರಿಗೆ ಅನುದಾನ ತಲುಪಿಲ್ಲ ಎಂಬ ಸಾಕಷ್ಟು ಮಾತುಗಳು ಕೇಳಿ ಬರುತ್ತಿದೆ. ಪದೇ ಪದೇ ಅದೇರಾಗ ಅದೇ ಹಾಡು ಎಂದಾಗಬಾರದು. ನಾನು ಹೆಚ್ಚು ಸಮಯ ತೆಗೆದುಕೊಳ್ಳುವುದಿಲ್ಲ. ಎಲ್ಲರಿಗೂ ಅವರವರ ಕ್ಷೇತ್ರದ ಸಮಸ್ಯೆಗಳು ಇರುತ್ತವೆ. ಇವತ್ತು ಕೇವಲ ಅತಿವೃಷ್ಟಿ ಬಗ್ಗೆ ಮಾತ್ರ ಚರ್ಚೆ ಮಾಡಬೇಕು ಎಂದಿದೆ, ಆದರೆ ಬೇರೆ ಸಮಯದಲ್ಲಿ ಮಾತನಾಡುವುದಕ್ಕೆ ಅವಕಾಶ ಸಿಗುವುದಿಲ್ಲ. ಹಾಗಾಗಿ ಇಲ್ಲಿ ಮಾತನಾಡುವುದಕ್ಕೆ ಅವಕಾಶ ಕೊಡಬೇಕಾಗುತ್ತದೆ. ಮಾನ್ಯ ಸಭಾಪತಿಯವರೇ, **"ನಡೆ, ನುಡಿ ಒಂದಾಗಿ ಜೋಡಿಸಿದ ಹಿರಿಯಣ್ಣ, ಕಲ್ಯಾಣ ಬಸವಣ್ಣ"** ಎಂದು ಹೇಳುತ್ತಾರೆ. ಬಿಜ್ಜಳನ ಆಸ್ಥಾನದಲ್ಲಿ ಮಂತ್ರಿಯಾದಂಥವರು ಮಾನ್ಯ ಬಸವಣ್ಣನವರು. ಮಾನ್ಯ ಬಸವಣ್ಣನವರ ಆಸ್ಥಾನದಲ್ಲಿ ಎಲ್ಲಾ ಸಮುದಾಯದವರಿದ್ದರು. ಅಲ್ಲಿ ಹಾಯಿಗಾರರೂ ಕೂಡ ಇದ್ದರು ಎಂದು ಹಿರಿಯರು ಹೇಳುತ್ತಿದ್ದರು.

ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

(ಮುಂದು . . .)

(176) 11-10-2019 7.00 ಡಿಎಸ್-ಎಕೆ

**ಶ್ರೀಮತಿ ಜಯಮ್ಮ (ಮುಂದು):-**

ಬಸವಣ್ಣನವರ ಕಾಲದಲ್ಲಿಯೇ ಅದು ಆದಂಥಾದ್ದು. ಕಷ್ಟ ಪಟ್ಟು ಕೆಲಸ ಮಾಡಿದ್ದಕ್ಕಾಗಿ ಅವರಿಗೆ ಕೂಲಯನ್ನು ಕೊಡಲಾಗುತ್ತಿತ್ತು. ಬಸವಣ್ಣನವರಿಗೆ ಎಷ್ಟು ಮಾನವೀಯತೆ ಇತ್ತೆಂದರೆ ತುಂಬು ಗರ್ಭವತಿಯಾದ ಹೆಣ್ಣಿಮಗಳು ಕೂಲಿ ಮಾಡಿದರೆ ಗರ್ಭದಲ್ಲಿರುವಂಥ ಮಗುವೂ ಸಹ ಶ್ರಮ ಪಟ್ಟಿದೆ, ಆ ಮಗುವಿಗೂ ಸಹ ಕೂಲಿಯನ್ನು ಕೊಡಬೇಕೆಂದು 'ಬಸಿರು ಪಟ್ಟು' ಎಂದು ಮಾಡಿದ್ದರು. ನಮ್ಮ ಕಡೆ ಕಟಾವು ಮಾಡುವಂಥ ಸಂದರ್ಭದಲ್ಲಿ ಗರ್ಭವತಿ ಮಹಿಳೆ ಅಲ್ಲಿಗೆ ಹೋದರೆ ಅವರಿಗೆ ಮತ್ತು ಗರ್ಭದಲ್ಲಿರುವ ಮಗುವೂ ಸಹ ಶ್ರಮ ಪಟ್ಟಿದೆ ಎಂದು ಅದಕ್ಕೂ ಸೇರಿಸಿ 'ಬಸಿರು ಪಟ್ಟು' ಎಂದು ಹೆಚ್ಚುವರಿಯಾಗಿ ಕೂಲಿಯನ್ನು ಕೊಡುತ್ತಿದ್ದರು. ಆ ರೀತಿಯಾಗಿ ಬಸವಣ್ಣನವರು ಬಾಳಿ, ಬದುಕಿ ಎಲ್ಲಾ ಸಮುದಾಯದವರಿಗೆ ಸಮಪಾಲು, ಸಮಬಾಳು ಎನ್ನುವ ರೀತಿಯಲ್ಲಿತ್ತು. ಅದರಲ್ಲಿಯೂ ಉತ್ತರ ಕರ್ನಾಟಕ ಮಹಿಳೆಯರಿಗೆ ವಿಶೇಷವಾದ ಆದ್ಯತೆಯನ್ನು ಕೊಟ್ಟಿದೆ. ಈಗಾಗಲೇ ಸಾಕಷ್ಟು ಜನ ಸದಸ್ಯರು ಅಲ್ಲಿನ ಕಷ್ಟ-ಸುಖ, ದುಃಖ-ದುಮ್ಮಾನಗಳನ್ನು ಹೇಳಿಕೊಂಡಿದ್ದಾರೆ.

ನಮ್ಮ ಭಾರತ ದೇಶ ಹಳ್ಳಿಗಳ ದೇಶ. ಮೊದಲು ಶೇಕಡ 90ರಷ್ಟು ಹಳ್ಳಿಗಳಿತ್ತು. ಈಗ ಸುಮಾರು 70 ರಿಂದ 80 ರಷ್ಟು ಹಳ್ಳಿಗಳಿವೆ. ಈ ನಮ್ಮ ಭಾರತ ದೇಶಕ್ಕೆ ಒಬ್ಬರು ಮಾತ್ರ ಪ್ರಧಾನ ಮಂತ್ರಿ ಇರುತ್ತಾರೆ. ಬಿಜೆಪಿಗೆ ಒಬ್ಬ ಪ್ರಧಾನಿ, ಕಾಂಗ್ರೆಸ್‌ಗೆ ಒಬ್ಬ ಪ್ರಧಾನಿ ಅಥವಾ ಜೆಡಿ(ಎಸ್)ಗೆ ಒಬ್ಬ ಪ್ರಧಾನಿ ಇರುವುದಿಲ್ಲ. ಚುನಾವಣೆ ನಡೆಯಬೇಕಾದರೆ ಮಾತ್ರ ಪಕ್ಷ ಇರುತ್ತದೆ. ಅದು ಯಾವುದೇ ಸರ್ಕಾರವಿರಲಿ ನಂತರ ಒಂದು ಸರ್ಕಾರ ರಚನೆಯಾಗುತ್ತದೆ. ಎಲ್ಲರೂ ಸೇರಿ ಆಯ್ಕೆ ಮಾಡಿದಂಥ ವ್ಯಕ್ತಿಯನ್ನು ನಮ್ಮ ಭಾರತ ದೇಶದ ಪ್ರಧಾನ ಮಂತ್ರಿ ಎಂದು ಹೇಳುತ್ತೇವೆ. ಚುನಾವಣೆಗಳು ಬಂದಾಗ ಜನ ಪ್ರತಿನಿಧಿಗಳು ಎಲ್ಲಾ ಕಡೆಗೂ ಸಹ ಭೇಟಿಯನ್ನು ನೀಡುತ್ತಾರೆ. ಪ್ರಧಾನ ಮಂತ್ರಿಗಳು ಕನ್ನಡ ಭಾಷೆಯಲ್ಲಷ್ಟೇ ಅಲ್ಲ, ಬಸವಣ್ಣನವರು ಹೇಳಿದಂಥ ಮಾತುಗಳನ್ನು ಸಹ ಆಡಿದರು. ಪ್ರಧಾನ ಮಂತ್ರಿಗಳು ಕನ್ನಡದಲ್ಲಿ ಮಾತನಾಡಿದಾಗ ಅವರಿಗೆ ಕನ್ನಡಿಗರ ಮೇಲೆ ಎಷ್ಟು ಅಭಿಮಾನವಿದೆ ಎಂದು ಹರ್ಷೋದ್ಗಾರ ವ್ಯಕ್ತ ಮಾಡಿದರು. ಆದರೆ ಇವತ್ತು ಅದೇ ಜನ ನಮ್ಮ ಭಾರತ ದೇಶ ಪ್ರಧಾನಿಗಳು ನಾವು ನೆರೆ ಹಾವಳಿಯಿಂದ ಇಷ್ಟು ಸಂಕಷ್ಟದಲ್ಲಿದ್ದರೂ ಸಹ ನಮಗೆ ಪರಿಹಾರ ಬಂದಿಲ್ಲ. ನಾವು ಯಾವ ರೀತಿ ಬದುಕಬೇಕು, ಯಾವ ರೀತಿ ಜೀವನವನ್ನು ನಡೆಸಬೇಕೆಂದು ಕೊರಗುತ್ತಿದ್ದಾರೆ. ಅಲ್ಲಿನ ಪರಿಸ್ಥಿತಿಯನ್ನು ನೋಡಿದರೆ ಕಣ್ಣಿನಲ್ಲಿ ನೀರು ಬರುತ್ತದೆ. ಏಕೆಂದರೆ ಮನುಷ್ಯನಿಗೆ ಕಷ್ಟ ಬಂದಾಗ ಮಾತ್ರ ನೋವಿನ ಅರಿವಾಗುತ್ತದೆ. ಒಬ್ಬ ಅಜ್ಜಿ ತನ್ನ ಮನೆಯಲ್ಲಿ ನೀರು ತುಂಬಿದ್ದಾಗ ಅವರನ್ನು ಪಾರು ಮಾಡಲು ಬಂದ

" ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾಧ್ಯಮದವರಿಗೆ ‘ಇದು ನಾನು ಬಾಳಿ ಬದುಕಿದಂಥ ಮನೆ, ನನ್ನ ಸಂಗಾತಿಗಳಾದ ನಾಯಿ, ಬೆಕ್ಕು, ದನ–ಕರುಗಳು, ಮಕ್ಕಳು–ಮೊಮ್ಮಕ್ಕಳು, ಅಳಿಯಂದಿರೂ ಎಲ್ಲರೂ ಇದ್ದಾರೆ. ಎಲ್ಲವೂ ಹಾಳಾಗಿ ಹೋದ ಮೇಲೆ ನನ್ನ ಜೀವ ಯಾವ ಲೆಕ್ಕ, ನನ್ನ ಜೀವ ಇಲ್ಲಿಯೇ ಹೋದರೂ ಪರವಾಗಿಲ್ಲ, ನಾನು ಬರುವುದಿಲ್ಲವೆಂದು ಆ ಅಜ್ಜಿ ಹೇಳುತ್ತಾಳೆ. ಅಂದರೆ ಒಬ್ಬ ಮಹಿಳೆಗೆ ತನ್ನ ಮನೆಯ ಮೇಲೆ ಎಷ್ಟು ಕಾಳಜಿ, ಕಳಕಳಿ ಇದೆ ಎಂಬುದನ್ನು ಇದು ತೋರಿಸುತ್ತದೆ. ಮಹಿಳೆ ಕರುಣಾಮಯಿಯಾಗಿರುತ್ತಾಳೆ. ಇನ್ನು ಸಾಕಷ್ಟು ಜನರು ಮಾತನಾಡುವವರು ಇದ್ದಾರೆ. ಕೇಂದ್ರದಲ್ಲಿರುವ ಬಿಜೆಪಿ ಪಕ್ಷವೇ ರಾಜ್ಯದಲ್ಲಿಯೂ ಸಹ ಅಧಿಕಾರದಲ್ಲಿದೆ.

**ಸಭಾಪತಿಯವರು:–** ಮಾನ್ಯ ಸದಸ್ಯರೆ, ನಿಮ್ಮ ಮಾತುಗಳು ಮುಗಿದಿದ್ದರೆ ನಂತರ ನಿರಾಣಿ ಹನುಮಂತಪ್ಪ ರುದ್ರಪ್ಪನವರು ಮಾತನಾಡುತ್ತಾರೆ.

**ಶ್ರೀಮತಿ ಜಯಮ್ಮ:–** ಮಾನ್ಯ ಸಭಾಪತಿಯವರೆ, ನಾನು ಸಂಕಷ್ಟದಲ್ಲಿರುವ ಜನರ ಬಗ್ಗೆ ಮಾತನಾಡುತ್ತಿರುವುದರಿಂದ ದಯಮಾಡಿ ನನಗೆ ಮಾತನಾಡಲು ಅವಕಾಶವನ್ನು ಮಾಡಿಕೊಡಿ. ಬೇರೆಯವರು ಮಾತನಾಡುವಾಗ ನಾನು ಮಧ್ಯದಲ್ಲಿ ಬಾಯಿ ಹಾಕುವುದಿಲ್ಲ, ಅವರ ಮಾತುಗಳನ್ನು ಕೇಳಿಸಿಕೊಳ್ಳುತ್ತೇನೆ. ಎಲ್ಲಾ ಮಾನ್ಯ ಸದಸ್ಯರು ಅತಿವೃಷ್ಟಿಯ ಬಗ್ಗೆ ಮಾತನಾಡಿದರು. ನಾನು ಸಹ ಗಮನಿಸುತ್ತಿದ್ದೆ. ಅನಾವೃಷ್ಟಿಯ ಬಗ್ಗೆ ನಾನು ಎಲ್ಲಾ ಜಿಲ್ಲೆಗಳ ಬಗ್ಗೆಯೂ ಮಾತನಾಡುತ್ತೇನೆ. ಅದರಲ್ಲಿ ಚಿತ್ರದುರ್ಗ ಜಿಲ್ಲೆಯಿಂದ ಶಿಕ್ಷಕರ ಕ್ಷೇತ್ರ, ಪದವೀಧರರ ಕ್ಷೇತ್ರದಿಂದ ಹಾಗೂ ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದಲೂ ಸಹ ವಿಧಾನ ಪರಿಷತ್ತಿಗೆ ಮಾನ್ಯ ಸದಸ್ಯರುಗಳು ಆಯ್ಕೆಯಾಗಿ ಬಂದಿದ್ದಾರೆ. ಆ ಚಿತ್ರದುರ್ಗ ಜಿಲ್ಲೆಯ ಜನತೆಯ ಪರಿಸ್ಥಿತಿ ಯಾವ ರೀತಿ ಇದೆ ಎಂದರೆ, ಅಲ್ಲಿ ಕುಡಿಯಲಿಕ್ಕೂ ಸಹ ನೀರಿಲ್ಲ. ಈಗಾಗಲೇ ನೆರೆ ಹಾವಳಿಯಿಂದ ಸಾಕಷ್ಟು ಹಾಳಾಗಿದೆ. ನಾನು ಈ ಹಿಂದೆಯೂ ಒಂದು ಬಾರಿ ಮಾತನಾಡಿದ್ದೇನೆ. ನಾನು ರೈತನ ಮಗಳಾಗಿ, ದೊಡ್ಡ ರೈತನ ಸೊಸೆಯಾಗಿ ರೈತರ ಕಷ್ಟ ಎಷ್ಟಿರುತ್ತದೆ ಎನ್ನುವ ಅರಿವು ನನಗಿದೆ. ನಮ್ಮ ಭಾರತ ದೇಶದ ಬೆನ್ನೆಲುಬು ಆಗಿರುವಂಥ ರೈತರು, ಅನ್ನ ನೀಡಿದಂಥ ಕೈಗಳು ಇವೊತ್ತು ಬೊಗಸೆ ಒಡ್ಡಿ ನಿಂತಿವೆ. ಇಂತಹ ಒಂದು ಪರಿಸ್ಥಿತಿ ಇವತ್ತು ರೈತರಿಗೆ ಮತ್ತು ಪ್ರವಾಹ ಭೀತಿಯನ್ನು ಎದುರಿಸುತ್ತಿರುವ ಸಂತ್ರಸ್ತರಿಗೆ ಬಂದಿದೆ. ಅವರು ಅಷ್ಟೊಂದು ಕಷ್ಟ ಕಾಲದಲ್ಲಿದ್ದಾರೆ. ಚಿತ್ರದುರ್ಗ ಜಿಲ್ಲೆಯಲ್ಲಿ ಕುಡಿಯಲಿಕ್ಕೆ ನೀರು ಸಹ ಇಲ್ಲ. ಬಿತ್ತನೆ ಕಾರ್ಯ ಅರ್ಧ ಆಗಿದೆ, ಇನ್ನರ್ಧ ಆಗಿಲ್ಲ. ಬಿತ್ತನೆ ಮಾಡಿದ್ದರೂ ಕೂಡ ಎರಡೂವರೆ ಮೂರು ತಿಂಗಳಾದರೂ ಮಳೆ ಬರದೇ ಬೆಳೆ ಎಲ್ಲಾ ಹಾಳಾಗಿವೆ. ಈ ಬಗ್ಗೆ ಕೇಂದ್ರದಿಂದ ಹಾಗೂ ರಾಜ್ಯದಿಂದ ಸರ್ವೆ ಕಾರ್ಯ ಮುಗಿದಿದೆ. ಆದರೆ ಅಲ್ಲಿನ ಪರಿಸ್ಥಿತಿ ಹೇಗಿವೆ ಎಂದರೆ ಅಲ್ಲಿನ ಜನರ ಜೀವ ಮಾತ್ರ ಉಳಿದಿದ್ದು, ಇನ್ನೇನೂ ಉಳಿದಿರುವುದಿಲ್ಲ. ನಾವುಗಳು ಚಿಕ್ಕವರಿರುವಾಗ ಮಳೆಯಿಂದಾಗಿ ಹಳ್ಳ–ಕೊಳ್ಳಗಳು ಉಂಟಾದಾಗ ಅದರಲ್ಲಿ ನಾವು ಈಜುವುದನ್ನು ಕಲಿತೆವು. ನನಗೆ ಈಜು ಬರುತ್ತಿತ್ತು, ಆದರೆ ನಾನು ಈಜುಪಟು ಅಲ್ಲ. ಅಲ್ಲಿನ ಪರಿಸ್ಥಿತಿಯನ್ನು ನೋಡಿದರೆ ಊರಿಗೆ ಹೋಗುವುದು ಬೇಡ,

“ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

ಅಲ್ಲಿನ ಸಂಕಷ್ಟವನ್ನು ನೋಡುವುದು ಬೇಡ ಎನಿಸುತ್ತದೆ. ಕೆಲವು ಪ್ರದೇಶಗಳಲ್ಲಿ ವಿಪರೀತವಾಗಿ ಬರಗಾಲವಿದೆ. ಕೆಲವು ಹಳ್ಳಿಗಳಲ್ಲಿ ಗೋಶಾಲೆಗಳ ಅವಶ್ಯಕತೆ ಕೂಡ ಇದೆ. ಅದೇ ರೀತಿ ದನ–ಕರುಗಳಿಗೆ ಮೇವಿನ ಕೊರತೆಯೂ ಸಹ ಇದೆ. ಕೆಲವು ಗೋಶಾಲೆಗಳು ಆಗಿವೆ, ಇನ್ನು ಕೆಲವು ಗೋಶಾಲೆಗಳನ್ನು ತೆರೆಯುವಂಥ ಅವಶ್ಯಕತೆ ಇದೆ. "ಉಪಕಾರ ಸ್ಮರಣೆಯಲ್ಲಿ, ಪ್ರೀತಿ, ದಯೆ, ಕರುಣೆಯಲ್ಲಿ ಪ್ರಾಣಿಗಳೇ ಬಲು ಮೇಲು, ಕುಲಜನರು ಬಲು ಕೀಳು" ಎಂದು ಸರ್ವಜ್ಞ ಹೇಳಿರುಂಥ ಮಾತು. ಹಾಗಾಗಿ ಚಿತ್ರದುರ್ಗ ಜಿಲ್ಲೆ ಪದೇ ಪದೇ ಬರಗಾಲಕ್ಕೆ ತುತ್ತಾಗುತ್ತಿರುವುದರಿಂದ ಈ ಬಗ್ಗೆ ಕೇಂದ್ರ ಹಾಗೂ ರಾಜ್ಯ ಸರ್ಕಾರಕ್ಕೆ ನಾನು ಮನವಿ ಮಾಡುವುದಿಷ್ಟೇ; ನಮ್ಮ ಮಾಜಿ ಮುಖ್ಯಮಂತ್ರಿಗಳಾಗಿದ್ದಂಥ ಸಿದ್ದರಾಮಯ್ಯನವರು ಕೆರೆಗೆ ನೀರು ತುಂಬಿಸುವ ಯೋಜನೆಯಾಗಿ ವಿಶ್ವೇಶ್ವರಯ್ಯ ಜಲ ನಿಗಮ ಎಂದು ಏನು ಮಾಡಿದ್ದರು, ಅದು ಇವತ್ತು ಕಾರ್ಯನಿರ್ವಹಿಸುತ್ತಿದೆ. ಈಗ ಚಿತ್ರದುರ್ಗ ಜಿಲ್ಲೆಯ ಮಾರಿ ಕಣಿವೆಗೆ ನೀರು ಬರುತ್ತಿದೆ ಎಂದು ಹೇಳುತ್ತಾರೆ. ಅದರಲ್ಲಿ ಚಿತ್ರದುರ್ಗ ಜಿಲ್ಲೆಯ ಮೊಣಕಾಲ್ಮೂರು, ಚಳ್ಳಕೆರೆ ತಾಲ್ಲೂಕುಗಳು ವಿಪರೀತ ಬರಗಾಲಕ್ಕೆ ತುತ್ತಾಗಿವೆ. ತೆರದ ಬಾವಿಗಳಲ್ಲಿ ಹಾಗೂ ಕೊಳವೆ ಬಾವಿಗಳಲ್ಲಿ ನೀರಿಲ್ಲ. ಪಂಪ್‌ಸೆಟ್‌ಗಳನ್ನು ಮನೆಗೆ ತಂದಿಟ್ಟುಕೊಂಡಿದ್ದಾರೆ. ಅಲ್ಲಿನ ಜನರ ಪರಿಸ್ಥಿತಿಯನ್ನು ಕೇಳುವವರೇ ಇಲ್ಲ. ಹೈದರಾಬಾದ್–ಕರ್ನಾಟಕ ಪ್ರದೇಶಕ್ಕೆ ಯಾವ ರೀತಿಯಾಗಿ ಸಂವಿಧಾನದ ಅನುಚ್ಛೇದ 371(ಜೆ) ಅನ್ವಯಿಸಲಾಗುತ್ತದೆಯೋ, ಅದೇ ರೀತಿಯಾಗಿ ನಮ್ಮ ಚಿತ್ರದುರ್ಗ ಜಿಲ್ಲೆಗೂ ಸಹ ಸಂವಿಧಾನದ ಅನುಚ್ಛೇದ 371(ಜೆ) ಅನ್ವಯಿಸಬೇಕೆಂದು ಕೇಂದ್ರ ಸರ್ಕಾರಕ್ಕೆ ಹಾಗೂ ರಾಜ್ಯ ಸರ್ಕಾರಕ್ಕೆ ಈ ಸಂದರ್ಭದಲ್ಲಿ ಮನವಿಯನ್ನು ಮಾಡುತ್ತಿದ್ದೇನೆ. ವಿಧಾನ ಪರಿಷತ್ ಸದನವನ್ನು ಬುದ್ಧಿವಂತರ ಮನೆ, ಚಿಂತಕರ ಛಾವಡಿ ಎಂದು ಹೇಳುತ್ತಿದ್ದರು. ಇಲ್ಲಿ ನಮ್ಮ ರಾಜ್ಯದ ಜನರ ಸಂಕಷ್ಟಗಳ ಬಗ್ಗೆ ಗಂಭೀರವಾದ ಚರ್ಚೆ ನಡೆಯಬೇಕು. ಮಹಿಳೆಯರ ಬಗ್ಗೆ ಮಾತನಾಡುವಾಗ ಮಹಿಳೆಯರು ಜಗಳಗಂಟಿಯರು ಇತ್ಯಾದಿ ಎಂದು ಹೇಳುತ್ತಿದ್ದರು. ಆದರೆ ನಾವು ಇಲ್ಲಿ ನೋಡುತ್ತಿರುವುದು ಸಹ ಕೇವಲ ಜಗಳವನ್ನೇ.

**ಶ್ರೀ ಎಂ.ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ಒನಕೆ ಓಬವ್ವನ ಬಗ್ಗೆ ನಾವೆಲ್ಲಾ ಆ ರೀತಿ ಮಾತನಾಡುವುದಕ್ಕಾಗುವುದಿಲ್ಲ.

(ಮುಂದು)

177/11-10-2019/7-10/bkp-rn

**ಶ್ರೀಮತಿ ಜಯಮ್ಮ(ಮುಂದು. . .)**
ಒನಕೆ ಓಬವ್ವ ಚಿತ್ರದುರ್ಗದ ಘನತೆಯನ್ನು ರಕ್ಷಣೆ ಮಾಡಿದ ವೀರ ಮಹಿಳೆ. ಪ್ರತಿ ವರ್ಷವೂ ಎಲ್ಲಾ ಜಯಂತಿಗಳನ್ನು ಮಾಡುತ್ತಾರೆ. ಆದರೆ, ಒನಕೆ ಓಬವ್ವನ ಜಯಂತಿಯನ್ನು ಮಾಡುತ್ತಿಲ್ಲ. ಏಕೋ ಏನೋ ಆ ವಿಷಯವಾಗಿ ಮಹಿಳೆಯಾದ ನನಗೆ ತುಂಬಾ ನೋವಾಗುತ್ತಿದೆ. ಹೀಗಾಗಿ "ಅಳಿಯ ಊಟ ಮಾಡಿ ಅಂಗಳದಲ್ಲಿ

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಹಾಕಿಕೊಂಡ" ಎಂದು ನಮ್ಮ ಕಡೆ ಏನು ಹೇಳುತ್ತಾರೆ, ಅದೇ ರೀತಿ ಚಿತ್ರದುರ್ಗದ ಅಳಿಯಂದಿರಾದ ಮಾನ್ಯ ಸದಸ್ಯರೊಬ್ಬರು (ಶ್ರೀ ಶರಣಪ್ಪ ಮಟ್ಟೂರ ರವರನ್ನು ಕುರಿತು) ಚಿತ್ರದುರ್ಗ ಜಿಲ್ಲೆಗೆ ಬರಗಾಲ ಬಂದಿದೆ ಎಂದು ಹೇಳಿ ಒಂದು ಚಕಾರವನ್ನೂ ಕೂಡ ಎತ್ತುವುದಿಲ್ಲ.

**ಶ್ರೀ ಆರ್.ಧರ್ಮಸೇನ:–** ಮಾನ್ಯ ಸಭಾಪತಿಯವರೇ, ಹಾಗಾದರೆ, ಇವರು ಅಳಿಯನನ್ನು ಸರಿಯಾಗಿ ನೋಡಿಕೊಳ್ಳುತ್ತಿಲ್ಲವೆಂದು ಕಾಣುತ್ತದೆ.

**(ಸದನದಲ್ಲಿ ನಗು)**

**ಶ್ರೀಮತಿ ಜಯಮ್ಮ:–** ಮಾನ್ಯ ಸಭಾಪತಿಯವರೇ, ಅವರು ಸಪೋರ್ಟ್ ಮಾಡಬೇಕೆನ್ನುವ ಪ್ರಶ್ನೆ ಇಲ್ಲ. ಅಳಿಯಂದಿರ ಬಗ್ಗೆ ನಮ್ಮಲ್ಲಿ ಹಾಸ್ಯಕ್ಕಾಗಿ, "ಉಂಡು ಹೋದ, ಕೊಂಡು ಹೋದ" ಎಂದು ಹೇಳುತ್ತಾರೆ. ನಮ್ಮ ಸದನವನ್ನು 'ಹಿರಿಯರ ಮನೆ' ಎಂದು ಹೇಳುತ್ತೇವೆ. ಹಿಂದೆ ನಮ್ಮ ಹಿರಿಯರು ಹೆಣ್ಣುಮಕ್ಕಳನ್ನು ಕುರಿತು–

**ನೆರೆಮನೆಯ ಸಿರಿದೇವಿ ನೀನಾಗು ಮಗಳೆ**
**ಮನೆಯಾಗ ಭೇದ ಬಗಿಬ್ಯಾಡ । ಮಗಳೆ**
**ತುಂಬಿದ ಮನೆಯ ಒಡಿಬ್ಯಾಡ ॥**

ಎಂದು ಹೇಳುತ್ತಿದ್ದರು. ಇದು ತುಂಬಿದ ಮನೆ. ಅರ್ಥಗರ್ಭಿತವಾದ ಚಿಂತಕರ ಛಾವಡಿ. ಯಾವಾಗಲೂ ನಮ್ಮ ರಾಜ್ಯದ ಜನತೆಯ ಬಗ್ಗೆ ಚಿಂತನೆ ಮಾಡಬೇಕಾಗುತ್ತದೆ. ನಾವು ಚಿಕ್ಕವರು ಆಗಿದ್ದಾಗ ನಮ್ಮ ತಾಯಿಯವರು ಸಂತೆ ಮಾಡಲಿಕ್ಕೆ ಹೋದರೆ ತಿನ್ನಲಿಕ್ಕೆ ನಮಗೆ ಏನು ತರುತ್ತಾರೆಂದು ನಾವು ಕಾಯುತ್ತಿದ್ದೆವು. ಹಾಗೆಯೇ ರಾಜ್ಯದ ಜನತೆಯೂ ಕೂಡ ನಮಗೆ ಏನೇನು ಪರಿಹಾರ ಸಿಕ್ಕುತ್ತದೆ, ನಮ್ಮ ಕ್ಷೇತ್ರದ ಜನಪ್ರತಿನಿಧಿಗಳು ಏನೇನು ಪರಿಹಾರವನ್ನು ತರುತ್ತಿದ್ದಾರೆ, ಏನು ಅನುದಾನವನ್ನು ತರುತ್ತಿದ್ದಾರೆ ಎಂದು ಕಾಯುತ್ತಿರುತ್ತಾರೆ. ಇದು ಅವರವರ ಕ್ಷೇತ್ರದ ಬಗ್ಗೆ ಚಿಂತನೆ ಮಾಡಿದ್ದಾಗ ಮಾತ್ರ ಸಾಧ್ಯವಾಗುತ್ತದೆ. ನಾವು ಅವರಿಂದ ಉಪಕಾರವನ್ನು ಪಡೆದುಕೊಂಡಿರುತ್ತೇವೆ. ನಾವು ಋಣಭಾರ ಆಗಬಾರದು. ನಾವು ಋಣಮುಕ್ತರಾಗಬೇಕು.

**ಸಭಾಪತಿಯವರು:–** ಮಾನ್ಯ ಸದಸ್ಯರೇ, ಇನ್ನು 13 ಜನ ಮಾತನಾಡಲಿಕ್ಕೆ ಬಾಕಿ ಇದ್ದಾರೆ.

**ಶ್ರೀಮತಿ ಜಯಮ್ಮ:–** ಮಾನ್ಯ ಸಭಾಪತಿಯವರೇ, ಆಗಲಿ. ನಾನು 6 ತಿಂಗಳಿಗೊಮ್ಮೆ ಒಂದು ದಿವಸ 10–20 ನಿಮಿಷಗಳ ಕಾಲ ಮಾತನಾಡುತ್ತೇನೆ ಅಷ್ಟೆ. ಏಕೆಂದರೆ, ನಾನು ಮಾತನಾಡುವುದೇ ಅಪರೂಪ. ನಮ್ಮ ಕ್ಷೇತ್ರದ ಬರಗಾಲದ ಬಗ್ಗೆ ಮಾತನಾಡಲಿಕ್ಕೆ ಅವಕಾಶ ಕೋರಿ ಕಾಯುತ್ತಾ ಕುಳಿತಿರುತ್ತೇನೆ. ಅಲ್ಲಿನ ಪರಿಸ್ಥಿತಿಯನ್ನು ನೋಡಬೇಕು. ತಾವು ಸಹ ಚಿತ್ರದುರ್ಗ ಜಿಲ್ಲೆಗೆ ಭೇಟಿ ಕೊಟ್ಟಾಗ ಅಲ್ಲಿನ ಪರಿಸ್ಥಿತಿಯನ್ನು ಗಮನಿಸಿದ್ದೀರಿ. ಅಲ್ಲಿನ ಪರಿಸ್ಥಿತಿಯನ್ನು ನೋಡಲಿಕ್ಕೆ ಎಲ್ಲರೂ ಬಂದು ಹೋಗಿದ್ದಾರೆ.

(ಗೊಂದಲ)

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಮತ್ತೆ ಇವತ್ತು ಅತಿಥಿ ಶಿಕ್ಷಕರ ಧರಣಿ ಇತ್ತು. ಅವರಿಗೆ ಸಮ್ಮಿಶ್ರ ಸರ್ಕಾರದಲ್ಲಿ ಅವಧಿಯಲ್ಲಿ ಅವರಿಗೆ ಹೆಚ್ಚುವರಿಯಾಗಿ 5 ಸಾವಿರ ರೂಪಾಯಿಗಳನ್ನು ಕೊಡುತ್ತೇವೆಂದು ಭರವಸೆ ನೀಡಿದ್ದರಂತೆ. ಆ ಹಣವನ್ನೂ ಅವರಿಗೆ ಕೊಟ್ಟಿಲ್ಲವೆಂದು ಹೇಳುತ್ತಿದ್ದಾರೆ. 10–12 ಸಾವಿರ ಜನ ಪದವಿಯನ್ನು ಮಾಡಿಕೊಂಡಿರುವವರು ಇದ್ದಾರೆ. ಅತಿಥಿ ಶಿಕ್ಷಕರುಗಳು ಸಹ ಅನಾವೃಷ್ಟಿಗೆ ಸೇರಿರುವವರೇ ಆಗಿದ್ದಾರೆ. ಹೀಗಾಗಿ, ನಮ್ಮ ರಾಜ್ಯದ ಬಗ್ಗೆ ಶಾಸಕ ಸಹೋದರರೆಲ್ಲರೂ ಶ್ರಮಿಸಬೇಕೆಂದು ಹೇಳಿ, ನನಗೆ ಮಾತನಾಡಲಿಕ್ಕೆ ಅವಕಾಶ ಕೊಟ್ಟ ಮಾನ್ಯ ಸಭಾಪತಿಯವರಿಗೆ ವಂದಿಸಿ, ನನ್ನ ಮಾತನ್ನು ಮುಗಿಸುತ್ತೇನೆ.

**ಶ್ರೀ ಅಲ್ಲಂ ವೀರಭದ್ರಪ್ಪ(ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಇಂದು ಬೆಳಿಗ್ಗೆಯಿಂದ ರಾಜ್ಯದಲ್ಲಿ ಭಾರಿ ಮಳೆ ಮತ್ತು ಪ್ರವಾಹದಿಂದ ಆಗಿರತಕ್ಕಂತಹ ಅನಾಹುತದ ಬಗ್ಗೆ ನಾವೆಲ್ಲರೂ ಮಾತನಾಡಿದ್ದೇವೆ. ಮಾನ್ಯ ಸದಸ್ಯರಾದ ಶ್ರೀ ಎನ್.ಎಸ್. ಬೋಸ್‌ರಾಜು ರವರಿಂದ ಹಿಡಿದು ಶ್ರೀ ಪ್ರಕಾಶ್ ಕೆ. ರಾಥೋಡ್ ರವರೆಗೆ ಮಾತನಾಡಿದ್ದಾರೆ. ಶ್ರೀ ಪ್ರಕಾಶ್ ಕೆ. ರಾಥೋಡ್‌ರವರು ತಮ್ಮ ಭಾಷಣದಲ್ಲಿ ನಾವು ಕೆ.ಪಿ.ಸಿ.ಸಿ. ವತಿಯಿಂದ ಈ ನೆರೆಹಾವಳಿಯ ಕುರಿತು ಒಂದು ರಿಪೋರ್ಟ್ ತಯಾರು ಮಾಡಿದ್ದೇವೆಂದು ಹೇಳಿದ್ದಾರೆ. ಈ ರಿಪೋರ್ಟ್ ಅನ್ನು ತಯಾರು ಮಾಡಿರುವುದು ಮೊದಲನೆಯ ಬಾರಿ ಅಲ್ಲ. ಯಾವುದೇ ಸರ್ಕಾರ ಇರಲಿ, ಕೆ.ಪಿ.ಸಿ.ಸಿ.ಯವರ ಒಂದು ನಿಯೋಗ ಕರೆಸಿ, ಅಲ್ಲಿನ ವಾಸ್ತವಾಂಶವನ್ನು ತಿಳಿದುಕೊಂಡು ಇಂತಹ ಒಂದು ರಿಪೋರ್ಟ್ ಅನ್ನು ತಯಾರು ಮಾಡುತ್ತಾರೆ. ಇವತ್ತು ಇಲ್ಲಿ ಒಂದು ಸಣ್ಣ ವಿಷಯ ಇದೆ. ಮಾನ್ಯ ಶಾಸಕರು ಕರ್ನಾಟಕ ರಾಜ್ಯದಲ್ಲಿ ಹಾನಿಯಾಗಿರತಕ್ಕಂತಹ ಪ್ರದೇಶದ ವಿಸ್ತೀರ್ಣದ ಬಗ್ಗೆ ಮಾತನಾಡಿದಾಗ ಸ್ವಲ್ಪ ವ್ಯತ್ಯಾಸವಾಗಿದೆ. ನಾವು ಹೇಳಿರುವಂತಹದ್ದು 7 ಲಕ್ಷ ಚಿಲ್ಲರೆ ಹೆಕ್ಟೇರ್ಸ್ ಆಗಿದೆ. ಆದರೆ, ಅವರು ಅದು ಸರಿಯಿಲ್ಲವೆಂದು ಹೇಳಿದರು. ಇವತ್ತು ಈ ಆಡಳಿತದ ಬಿಜೆಪಿ ಸರ್ಕಾರ ಕೇಂದ್ರಕ್ಕೆ ಸುಮಾರು 8 ಲಕ್ಷ ಹೆಕ್ಟೇರ್ ಹಾನಿಯಾಗಿದೆ ಎಂದು ಹೇಳಿ ವರದಿಯನ್ನು ಈಗಾಗಲೇ ಕೊಟ್ಟಿದ್ದಾರೆ. ಅಂದರೆ, ಈ ರಿಪೋರ್ಟ್‌ನಲ್ಲಿ ಏನು ಅಂಶಗಳಿವೆ, ಅದು almost correct and nearest to the facts ಎಂದು ಹೇಳಬಹುದು. ನಾವೇನೂ ಮುಖ್ಯ ಇಂಜಿನೀಯರ್ಸ್ ಅನ್ನು, ಕೃಷಿ ತಜ್ಞರನ್ನು ಕೇಳಿ ಈ ಒಂದು ಕೆಲಸ ಮಾಡಿಲ್ಲ. ನಮ್ಮ ಹಿರಿಯ ಕೆಪಿಸಿಸಿ ಸದಸ್ಯರುಗಳು ಇದ್ದಾರೆ, ಶಾಸಕರುಗಳು ಇದ್ದಾರೆ, ಮಾಜಿ ಮಂತ್ರಿಗಳಿದ್ದು, ಅವರು ಕೊಟ್ಟಂತಹ ವರದಿ ಇದಾಗಿದ್ದು, ಇದು ಸತ್ಯಾಂಶದಿಂದ ಕೂಡಿದೆ. ನಾವು ಇವತ್ತು ಸಂತ್ರಸ್ತರಿಗೆ, ಪ್ರವಾಹಕ್ಕೆ ತುತ್ತಾದ ರೈತರಿಗೆ ಪರಿಹಾರವನ್ನು ಕೊಡುವ ವಿಚಾರದಲ್ಲಿ ನಾವು ಮಾತನಾಡುತ್ತಿದ್ದೇವೆ. ಇವತ್ತು ರೈತರು ತುಂಬಾ ಸಂಕಷ್ಟದಲ್ಲಿದ್ದಾರೆಂದು ಮಾನ್ಯ ಸದಸ್ಯರಾದ ಶ್ರೀ ತಿಮ್ಮಾಪುರರವರು ಹೇಳಿದರು. ಇವತ್ತು ಅತಿ ವಿಶೇಷವಾಗಿ ಏನು ಚಿಂತನೆ ಮಾಡಬೇಕಾಗಿದೆ ಎಂದರೆ ಇನ್ನು ಒಂದು ವಾರದಲ್ಲಿ ಹಣ ಬಿಡುಗಡೆ ಮಾಡಿದರೆ ರೈತರು ಎರಡನೆ ಬಾರಿಗೆ ಬೆಳೆಯನ್ನು ಬೆಳೆಯಲಿಕ್ಕೆ ಅವಕಾಶ ಸಿಗಬಹುದು ಎಂದು ನಮ್ಮೆಲ್ಲಾ ಸದಸ್ಯರ ಚಿಂತನೆಯಾಗಿದೆ. ನೀವು ಕೊಡಬೇಕಾಗಿರುವ ಪರಿಹಾರಧನವನ್ನು ಎಷ್ಟೇ ಕೊಟ್ಟರೂ ಸಹ ಬೇಗ

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕೊಟ್ಟರೆ ಅವರುಗಳು ಎರಡನೆ ಬೆಳೆಯನ್ನು ಬೆಳೆಯಬಹುದಾಗಿದೆ. ಇವತ್ತು ಬಹುತೇಕವಾಗಿ ರೈತರಿದ್ದು, ಅವರ ಜಮೀನುಗಳನ್ನು ಸಮಗೊಳಿಸಲಿಕ್ಕೆ, ನೇರ ಮಾಡಲಿಕ್ಕೆ ಅನುಕೂಲವಾಗುತ್ತದೆ. ಈ ಪ್ರವಾಹದಿಂದ ಒಳ್ಳೆಯ ಗುಣ ಮಟ್ಟದ ಮಣ್ಣು ನೀರಿನಲ್ಲಿ ಕೊಚ್ಚಿಕೊಂಡು ಹೋಗಿದೆ. ಅವರು ಇವತ್ತು ಎರಡನೆಯ ಬೆಳೆಯನ್ನು ಬೆಳೆಯಬೇಕಾದರೆ, ಒಳ್ಳೆಯ ಗುಣಮಟ್ಟದ ಮಣ್ಣನ್ನು ತಂದು, ಭೂಮಿಯನ್ನು ಸಮತಟ್ಟು ಮಾಡುವುದಕ್ಕೆ ಕೊಡುವಂತಹ ಹಣ ಖರ್ಚಾಗುತ್ತದೆ. ನೀವು ಅವರಿಗೆ 50 ಸಾವಿರ, 1 ಲಕ್ಷ ಕೊಟ್ಟರೂ ಸಹ 50 ಸಾವಿರ ರೂಪಾಯಿಗಳು ಕೇವಲ ಆ ಭೂಮಿಯನ್ನು ಸಮ ಮಾಡಲಿಕ್ಕೆ ಆಗುತ್ತದೆ. ಮತ್ತೆ ಅದಕ್ಕೆ ಗೊಬ್ಬರ, ಬೀಜ ಮತ್ತು ಬೇರೆ ಕೆಲಸಕ್ಕೆ ಅವರ ಹತ್ತಿರ ಹಣ ಉಳಿಯುವುದಿಲ್ಲ. ಆದ್ದರಿಂದ, ಅವರಿಗೆ ಹೇಗೆ ಶಕ್ತಿ ಕೊಡಬೇಕೆಂದರೆ, ಭೂಮಿಯನ್ನು ಸಿದ್ಧತೆ ಮಾಡಿಕೊಳ್ಳುವುದಕ್ಕೆ ಶಕ್ತಿಯನ್ನು ಕೊಡುವುದರ ಜೊತೆಗೆ ರೈತರಿಗೆ ಉಚಿತವಾಗಿ ಬೀಜ ಮತ್ತು ಗೊಬ್ಬರ ಕೊಡುವಂತಹ ಕೆಲಸವನ್ನು ಸರ್ಕಾರ ಮಾಡಬೇಕು.

ಇನ್ನು, ನಮ್ಮ ಮಾನ್ಯ ಸದಸ್ಯರಾದ ಶ್ರೀ ಎನ್.ಎಸ್.ಬೋಸ್‌ರಾಜುರವರು ಮಾತನಾಡಿ, 2009 ರಲ್ಲಿ ನಮ್ಮ ರಾಜ್ಯಕ್ಕೆ ಅಂದಿನ ಪ್ರಧಾನ ಮಂತ್ರಿಗಳು ಬಂದು 1600 ಕೋಟಿ ರೂಪಾಯಿಗಳನ್ನು ಇಂತಹ ನೆರೆ ಪರಿಹಾರದ ಸಲುವಾಗಿ ಘೋಷಣೆ ಮಾಡಿದರು ಎಂದು ಹೇಳಿದರು. ಆ ಸಮಯದಲ್ಲಿ ನಮ್ಮ ರಾಜ್ಯದಲ್ಲಿ ಬಿಜೆಪಿ ಸರ್ಕಾರ ಇದ್ದರೂ ಸಹಿತ ನಮ್ಮ ಕಾಂಗ್ರೆಸ್ ಪಕ್ಷದ ಪ್ರಧಾನ ಮಂತ್ರಿಗಳು ಸಾಂಪ್ರದಾಯಕವಾಗಿ, ಮಾನವೀಯ ಚಿಂತನೆಯಿಂದ ಆ ಒಂದು ಹಣವನ್ನು ಬಿಡುಗಡೆ ಮಾಡಿದರು. ಆದರೆ, ನೀವು ಹಣ ಬಿಡುಗಡೆ ಮಾಡುತ್ತಿಲ್ಲವೆಂದು ನಾವು ಹೇಳುತ್ತಿಲ್ಲ. ಅದು ಬೇರೆ ಪ್ರಶ್ನೆ. ಆದರೆ, ಸಾಂಪ್ರದಾಯಿಕವಾಗಿ ಒಬ್ಬ ಪ್ರಧಾನ ಮಂತ್ರಿಯವರು ಇಂತಹ ಕೆಟ್ಟ ಪರಿಸ್ಥಿತಿಯಲ್ಲಿ ನಮ್ಮ ರಾಜ್ಯಕ್ಕೆ ಬಂದು, ನೊಂದ ಜನರಿಗೆ ನಂಬಿಕೆಯನ್ನು ಕೊಡಬೇಕಾಗಿತ್ತು ಎನ್ನುವುದು ಎಲ್ಲಾ ಜನರ ಅಭಿಪ್ರಾಯವಾಗಿದೆ.

ಮಾನ್ಯ ಸಭಾಪತಿಯವರೇ, ಇವತ್ತು ಬಿದ್ದು ಹೋಗಿರುವ ಮನೆಗಳ ಬಗ್ಗೆ, ರೈತರ ಬಗ್ಗೆ ಎಲ್ಲರೂ ಮಾತನಾಡಿದ್ದಾರೆ. ಆದ್ದರಿಂದ, ನಾನು ಹೆಚ್ಚಿಗೆ ಹೇಳಲಿಕ್ಕೆ ಹೋಗದೇ 2-3 ವಿಷಯಗಳನ್ನು ಹೇಳಲಿಕ್ಕೆ ಬಯಸುತ್ತೇನೆ. ಇವತ್ತು ನಮ್ಮ ಉತ್ತರ ಕರ್ನಾಟದ ಬಲಗಣ್ಣಾಗಿ ನಮ್ಮ ಆಲಮಟ್ಟಿ ಡ್ಯಾಮ್ ಇದೆ, ಇವತ್ತು ಸುಮಾರು 50 ಟಿಎಂಸಿ ನೀರನ್ನು ಉಳಿಸಿಕೊಳ್ಳಬೇಕಾಗಿದೆ. ಅದಕ್ಕೋಸ್ಕರ ಅದನ್ನು ಎತ್ತರಿಸಬೇಕಾಗಿದೆ. ಇವತ್ತು ಇನ್ನು 519 ಅಡಿ ಎತ್ತರ ಇದೆ, ಅದನ್ನು 524 ಅಡಿಯವರೆಗೆ ಎತ್ತರ ಮಾಡಿದರೆ 50 ರಿಂದ 60 ಟಿಎಂಸಿ ನೀರನ್ನು ಸಂಗ್ರಹಿಸಿಟ್ಟುಕೊಳ್ಳಬಹುದಾಗಿದೆ.

**ಶ್ರೀ ಎಸ್.ಆರ್.ಪಾಟೀಲ್:-** 130.09 ಟಿಎಂಸಿ ಹೆಚ್ಚುವರಿ ನೀರನ್ನು ಸಂಗ್ರಹ ಮಾಡಬಹುದಾಗಿದೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಸಿ.ಸಿ.ಪಾಟೀಲ್ (ಗಣಿ ಮತ್ತು ಭೂವಿಜ್ಞಾನ ಸಚಿವರು):-** ಮಾನ್ಯ ಸಭಾಪತಿಯವರೇ, ಈ ವಿಷಯವಾಗಿ ನ್ಯಾಯಾಲಯದಲ್ಲಿ ಕೆಲವೊಂದು ವಿಚಾರಗಳು ಇನ್ನು ಇತ್ಯರ್ಥವಾಗಿರುವುದಿಲ್ಲವೆನ್ನುವ ಮಾಹಿತಿಯಿದೆ. ಇಲ್ಲಿ ಚರ್ಚೆ ಮಾಡುವುದು ಸಮಂಜಸವಲ್ಲವೆಂದು ನನಗನಿಸುತ್ತದೆ

**(ಗೊಂದಲ)**

ಮುಂದು. .

**(178) 11.10.2019 07.20 ಎಸ್‌ವಿ-ಆರ್‌ಎನ್**

**(ಸಭಾಪತಿಯವರ ಉಪಸ್ಥಿತಿ)**

**ಶ್ರೀ ಎಸ್.ಆರ್.ಪಾಟೀಲ್ (ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, Court has cleared. ಅದರದ್ದೇನೂ ತೊಂದರೆ ಇಲ್ಲ.

**ಶ್ರೀ ಅಲ್ಲಂ ವೀರಭದ್ರಪ್ಪ (ವಿಧಾನ ಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಆ ರೀತಿ ಮಾಡುವುದರಿಂದ ಹೊಸ ನೀರು ಬರುತ್ತದೆ. The additional water we are saving is almost equivalent to the storage of water in K R S and Hemavathi dams . ಆದ್ದರಿಂದ ಇದಕ್ಕೆ ಬಹಳ importance ಅನ್ನು ಕೊಡಬೇಕು. ಅದರ ಜೊತೆಗೆ ತುಂಗಭದ್ರಾ ಅಣೆಕಟ್ಟಿನ ಬಗ್ಗೆ ಹೇಳುವುದಾದರೆ...

**ಶ್ರೀ ಸಿ.ಸಿ.ಪಾಟೀಲ್ (ಗಣಿ ಮತ್ತು ಭೂವಿಜ್ಞಾನ ಸಚಿವರು):-** ಮಾನ್ಯ ಸಭಾಪತಿಯವರೇ, ಈಗಾಗಲೇ ಈ ವಿಷಯವಾಗಿ R & R (Resettlement and Rehabilitation) ಗಾಗಿ ಮಾನ್ಯ ಮುಖ್ಯಮಂತ್ರಿಯವರು ಮುಂದಿನ ಬಜೆಟ್‌ನಲ್ಲಿ ಹಣವನ್ನು ಮೀಸಲಿಡುತ್ತೇವೆಂದು ಹೇಳಿರುವುದನ್ನು ನಾನು ಮಾನ್ಯ ಸದಸ್ಯರ ಗಮನಕ್ಕೆ ತರಬಯಸುತ್ತೇನೆ.

**ಶ್ರೀ ಅಲ್ಲಂ ವೀರಭದ್ರಪ್ಪ:-** ಮಾನ್ಯ ಸಭಾಪತಿಯವರೇ ಅದೇ ರೀತಿ ತುಂಗಭದ್ರಾ ಅಣೆಕಟ್ಟಿನಲ್ಲಿ ಬಹಳಷ್ಟು silt ಆಗಿದೆ. More than 30 tmc ಅಷ್ಟು ನೀರು ಸಂಗ್ರಹಿಸಲಿಕ್ಕಾಗದೇ ಹೊರಹೋಗುತ್ತದೆ. ಅದಕ್ಕೆ ಈಗಾಗಲೇ ಇಂಜಿನಿಯರ್‌ಗಳು alternative gravity ಮೂಲಕ ನೀರನ್ನು ಸಂಗ್ರಹಿಸುವಂತಹ ಪ್ಲಾನ್ ಅನ್ನು ಮಾಡಿದ್ದಾರೆ. ಅದಕ್ಕೂ ತಾವು ಮಾನ್ಯತೆಯನ್ನು ನೀಡಬೇಕೆಂದು ಕೋರುತ್ತೇನೆ.

ಇಂದು ನೆರೆ ಸಂತ್ರಸ್ತರಿಗೆ ಮನೆಗಳನ್ನು ಕಟ್ಟಿಸಿಕೊಡಬೇಕೆಂಬುದು ಎಲ್ಲರ ಅಭಿಪ್ರಾಯವಾಗಿದೆ. ಯಾವ ರೀತಿಯ ಮನೆಯನ್ನು ಕಟ್ಟಿಸಬೇಕು, ಎಷ್ಟು ಹಣವನ್ನು ಕೊಡಬೇಕು that is a different issue. I

" ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

don't want to discuss on that issue. ಮನೆಗಳನ್ನು ಕಟ್ಟಿಸುವಾಗ ಎತ್ತರವಾದ ಪ್ರದೇಶದಲ್ಲಿ ಶಾಶ್ವತವಾದ ರೀತಿಯಲ್ಲಿ ಕಟ್ಟಿಸುವಂತಹ ಯೋಚನೆಯನ್ನು ಮಾಡಬೇಕಾಗಿದೆ. ಪ್ರತಿವರ್ಷವೂ ಪ್ರವಾಹ ಬಂದಂತಹ ಸಂದರ್ಭದಲ್ಲಿ ನದಿಯ ಹತ್ತಿರವಿರುವ ಮನೆಗಳು ಮುಳುಗುವ ಪರಿಸ್ಥಿತಿ ಉಂಟಾಗುತ್ತವೆ. ಆರು ತಿಂಗಳು ತಡವಾದರೂ ಯೋಚನೆಯಿಲ್ಲ. ಇದಕ್ಕೆ ಆಲೋಚನೆಯನ್ನು ಮಾಡಿ, ಒಂದು ಶಾಶ್ವತವಾದ ಯೋಜನೆಯನ್ನು ರೂಪಿಸಬೇಕೆಂಬುದು ನನ್ನ ಒಂದು ಸಲಹೆಯಾಗಿದೆ.

ಮಾನ್ಯ ಪ್ರಕಾಶ್ ರಾಥೋಡ್ ಅವರು ಒಂದು ವಿಶೇಷ ಸಮಿತಿಯನ್ನು ರಚನೆ ಮಾಡಬೇಕೆಂದು ಹೇಳಿದರು. ಇಂದು National Environment balance ಇಲ್ಲದಿರುವುದರಿಂದ ಈ ರೀತಿಯ ಸನ್ನಿವೇಶಗಳುಂಟಾಗುತ್ತಿವೆ. ಇದಕ್ಕೆ ಏನಾದರೊಂದು scientific approach ಬೇಕೆಂದು ಈ ಸದನಕ್ಕೆ ಒಂದು ಸಲಹೆಯನ್ನು ಕೊಟ್ಟಿದ್ದಾರೆ. ಸಮಾಜ ಚಿಂತಕರಾದ ಶ್ರೀ ಜಗ್ಗಿ ವಾಸುದೇವ್ ಅವರು ಬೈಕ್ ಮೂಲಕ "ಕಾವೇರಿಗಾಗಿ ಕೂಗು" ಎಂಬ ಅಭಿಯಾನವನ್ನು ಪ್ರಾರಂಭಿಸಿದ್ದಾರೆ. ಅವರು ಮಾನ್ಯ ಮುಖ್ಯಮಂತ್ರಿಯವರನ್ನೂ ಸಹ ಭೇಟಿ ಮಾಡಿದ್ದಾರೆ. ಕಾವೇರಿ ನದಿ ಪ್ರದೇಶದಲ್ಲಿ ಗಿಡಗಳನ್ನು ಹಾಕಬೇಕೆಂದು ಅದರ ಉದ್ದೇಶ. ಕೇವಲ ಆ ಭಾಗದಲ್ಲಿ ಮಾಡಿದರೆ ಅರಣ್ಯ ಆಗುತ್ತದೆ ಎಂದು ಅಲ್ಲ. ಕರ್ನಾಟಕದಲ್ಲಿ ಮಾಡಿದರೆ ಒಂದು ಮಾದರಿಯಾಗುತ್ತದೆ ಎಂಬುದು ನನ್ನ ಅಭಿಪ್ರಾಯ. ಪ್ರತಿಯೊಬ್ಬ ಎಂ.ಪಿ. 10,000 ಗಿಡಗಳನ್ನು ಹಾಕಿಸಬೇಕು. ಪ್ರತಿಯೊಬ್ಬ ಎಂ.ಎಲ್.ಎ. 5,000 ಗಿಡಗಳನ್ನು ಹಾಕಿಸಬೇಕು. ಜಿಲ್ಲಾಪಂಚಾಯತ್ ಹಾಗೂ ಗ್ರಾಮ ಪಂಚಾಯತ್ ವತಿಯಿಂದ ಗಿಡಗಳನ್ನು ಹಾಕಿಸಬೇಕು. ಶಾಲಾ ವಿದ್ಯಾರ್ಥಿಗಳು ಗಿಡಗಳನ್ನು ಬೆಳೆಸಬೇಕು. ಈ ರೀತಿ ಬೆಳೆಸಲು ಜಿಲ್ಲಾ ಪಂಚಾಯತ್ ಮತ್ತು ಮುನಿಸಿಪಾಲಿಟಿಯವರು ನೀರನ್ನು ಒದಗಿಸಬೇಕು. ಇಲ್ಲದಿದ್ದರೆ ನೀರಿಲ್ಲದೆ ಒಣಗಿ ಹೋಗುತ್ತದೆ. ಹೀಗೆ ಮಾಡಿದ್ದರೆ ಇನ್ನು 10 ವರ್ಷಗಳಲ್ಲಿ we will be able to solve this problem. ಆಗ ಕರ್ನಾಟಕ ರಾಜ್ಯವನ್ನು ಇಡೀ ದೇಶದ ಮುಂದೆ ಮಾದರಿ ರಾಜ್ಯವನ್ನಾಗಿ ಮಾಡಲು ಸಾಧ್ಯವಾಗುತ್ತದೆ. ಇಷ್ಟು ಮಾತನಾಡಲು ಅವಕಾಶ ಕೊಟ್ಟಂತಹ ಮಾನ್ಯ ಸಭಾಪತಿಯವರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

**ಶ್ರೀ ನಿರಾಣಿ ಹಣಮಂತ್ ರುದ್ರಪ್ಪ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಅವಕಾಶಕ್ಕಾಗಿ ವಂದಿಸುತ್ತೇನೆ. ಕಳೆದ ಒಂದು ಶತಮಾನದಿಂದೀಚೆಗೆ ಕರ್ನಾಟಕ ಹಾಗೂ ಇತರ ರಾಜ್ಯಗಳಲ್ಲಿ ಎಂದೂ ಕಂಡರಿಯದಂತಹ ಪ್ರವಾಹವನ್ನು ನಾವು ಈಗ ಎದುರಿಸುತ್ತಿದ್ದೇವೆ. ಆಗಸ್ಟ್ 1 ರಿಂದ 10ನೇ ತಾರೀಖಿನ ಅವಧಿಯಲ್ಲಿ ಕರ್ನಾಟಕ ರಾಜ್ಯದಲ್ಲಿ ಭೀಕರ ಪ್ರವಾಹವುಂಟಾಯಿತು. ನಮ್ಮ ಭಾಗದಲ್ಲಿ ಆಗಿರುವ ಮಳೆಯ ಪ್ರಮಾಣವನ್ನು ಗಮನಿಸಿದರೆ ಕೇವಲ 10 ದಿನಗಳಲ್ಲಿ 224 ಮಿ.ಮೀ.ನಷ್ಟು ಸರಾಸರಿ ಮಳೆಯಾಗಿದೆ. ವಾಡಿಕೆ

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಳೆಗಿಂತ ಸುಮಾರು 279 ಮಿ.ಮೀ.ನಷ್ಟು ಅಧಿಕ ಮಳೆಯಾಗಿದೆ. ಸುಮಾರು 450 ಟಿ.ಎಂ.ಸಿ.ಯಷ್ಟು ಮಳೆ ನೀರು ಹರಿದಿದೆ. ಉತ್ತರ ಕರ್ನಾಟಕ ಭಾಗದ ನದಿಗಳಾದ ಕೃಷ್ಣಾ, ಮಲಪ್ರಭಾ, ಘಟಪ್ರಭಾ ಮತ್ತು ತುಂಗಭದ್ರಾ ನದಿಗಳು ತುಂಬಿ ಹರಿದು ಜನ–ಜಾನುವಾರುಗಳಿಗೆ ಸಾಕಷ್ಟು ಹಾನಿಯಾಗಿರುವ ವಿಚಾರವನ್ನು ಈಗಾಗಲೇ ಹಲವು ಸದಸ್ಯರು ಪ್ರಸ್ತಾಪ ಮಾಡಿದ್ದಾರೆ. ಇದು ಯಾರೂ ತಂದಿರುವ ನೋವಲ್ಲ, ಪ್ರಕೃತಿಯ ವಿಕೋಪ. ಪ್ರಕೃತಿಯ ಮುನಿಸಿನಿಂದಾಗಿ ರಾಜ್ಯದಲ್ಲಿ ಇಂತಹ ಭೀಕರವಾದ ಪ್ರವಾಹವನ್ನು ಎದುರಿಸಬೇಕಾಗಿದೆ. ಘಟಪ್ರಭಾ, ಮಲಪ್ರಭಾ ಮತ್ತು ಕೃಷ್ಣಾ ನದಿಗಳ ಆರು ಲಕ್ಷ ಕ್ಯೂಸೆಕ್ಸ್ ನೀರನ್ನು ಆಲಮಟ್ಟಿಯಿಂದ ಕೆಳಗೆ ಹರಿಸುವುದನ್ನು ನೋಡಿದರೆ ಸಮುದ್ರವೇ ಉಕ್ಕಿ ಹರಿಯುತ್ತಿರುವಂತಹ ಪ್ರವಾಹವನ್ನು ನಾವು ಕಾಣುತ್ತಿದ್ದೇವೆ. ಅದೇ ರೀತಿ ಭೀಮಾ ನದಿಯಿಂದಲೂ 3 ಲಕ್ಷ ಕ್ಯೂಸೆಕ್ಸ್ ನೀರು ಮಹಾರಾಷ್ಟ್ರದ ಕೊಯ್ನಾ ಅಣೆಕಟ್ಟಿನಿಂದ ಹರಿದು ಬಂದು ಸಾಕಷ್ಟು ಗ್ರಾಮಗಳು ಮುಳುಗಡೆಯಾದವು. ಪ್ರವಾಹ ಸಂತ್ರಸ್ತರ ನೆರವಿಗೆ ಸರ್ಕಾರ ಸ್ಪಂದಿಸಿದೆ ಎಂದು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಮುಳುಗಡೆಯಾದ ಗ್ರಾಮಗಳಿಂದ ಪುನರ್ವಸತಿ ಕೇಂದ್ರಗಳಿಗೆ ಸಂತ್ರಸ್ತರನ್ನು ಸ್ಥಳಾಂತರ ಮಾಡಿತು. ವಿಶೇಷವಾಗಿ ಅಧಿಕಾರಿ ವರ್ಗದವರೂ ಸಾಕಷ್ಟು ಕೆಲಸ ಕಾರ್ಯಗಳನ್ನು ಮಾಡಿದರು. ಅಧಿಕಾರಿ ವರ್ಗದವರನ್ನು ನಾನು ಈ ಸಂದರ್ಭದಲ್ಲಿ ಅಭಿನಂದಿಸಲಿಚ್ಛಿಸುತ್ತೇನೆ. ಹಲವು ಕಡೆಗಳಲ್ಲಿ ಗಂಜಿ ಕೇಂದ್ರಗಳನ್ನು ತೆರೆಯಲಾಯಿತು. ಆದರೆ ಅಲ್ಲಿ ಸಂತ್ರಸ್ತರಿಗೆ ಊಟವೂ ಸಿಗುವಂತಾಗಬೇಕೆಂಬ ಮನವಿಗೆ ಸರ್ಕಾರ ಸ್ಪಂದಿಸಿ ಅದನ್ನು ಕಾಳಜಿ ಕೇಂದ್ರಗಳಾಗಿ ಪರಿವರ್ತಿಸಲಾಯಿತು. ಎಲ್ಲವೂ ಸಮರ್ಪಕವಾಗಿದೆ ಎಂದು ನಾನು ಹೇಳುವುದಕ್ಕೆ ಬಯಸುವುದಿಲ್ಲ. ಸಾಧ್ಯವಾದಷ್ಟು ರೈತರ, ಸಂತ್ರಸ್ತರ ಕಣ್ಣೀರು ಒರೆಸುವ ಮತ್ತು ಅಗತ್ಯ ನೆರವನ್ನು ಒದಗಿಸುವ ಕೆಲಸವನ್ನು ಸರ್ಕಾರ ಮಾಡಿದೆ. ಸಂತ್ರಸ್ತ ಕುಟುಂಬಗಳ ಸುಮಾರು 1,02,000 ಮನೆಗಳು ಬಿದ್ದು ಹೋಗಿದ್ದು, ಇದಕ್ಕಾಗಿ ಸರ್ಕಾರವು ರೂ.50,000/– ದಿಂದ ರೂ.5,00,000/–ಗಳವರೆಗೆ ಪರಿಹಾರವನ್ನು ನೀಡಿರುವುದನ್ನು ನಾನು ಈ ಸಂದರ್ಭದಲ್ಲಿ ಶ್ಲಾಘಿಸಬಯಸುತ್ತೇನೆ. ಎನ್.ಡಿ.ಆರ್.ಎಫ್ ನಿಯಮಗಳ ಪ್ರಕಾರ ರೂ.92,500/– ಮಾತ್ರ ನೀಡಲು ಅವಕಾಶವಿದ್ದರೂ ಕರ್ನಾಟಕ ಸರ್ಕಾರವು ರೂ.5 ಲಕ್ಷಗಳವರೆಗೆ ಮನೆಗಳನ್ನು ಕಟ್ಟಿಕೊಳ್ಳಲು ಹಣವನ್ನು ನೀಡುತ್ತಿದ್ದು, ಆರ್.ಟಿ.ಜಿ.ಎಸ್. ಮೂಲಕ ನೇರವಾಗಿ ಸಂತ್ರಸ್ತರ ಜನ್ ಧನ್ ಖಾತೆಗೆ ಹಣವನ್ನು ಪಾವತಿಸುತ್ತಿರುವುದೂ ಸಹ ಶ್ಲಾಘನೀಯವಾದುದು. ಇದರ ಜೊತೆಯಲ್ಲಿ ಒಂದು ಪ್ಯಾಕೇಜ್ ಅನ್ನೂ ಸಹ ಮಾಡಲಾಗಿದೆ. ಗಂಜಿ ಕೇಂದ್ರದ ಅವಶ್ಯಕತೆ ಇಲ್ಲದೆ ಅದು ಮುಚ್ಚಲ್ಪಟ್ಟಾಗ ಸರ್ಕಾರ 10 ಕೆ.ಜಿ. ಅಕ್ಕಿ, 1 ಕೆ.ಜಿ. ಬೇಳೆ, 1 ಕೆ.ಜಿ. ಸಕ್ಕರೆ, 1 ಕೆ.ಜಿ. ಎಣ್ಣೆ ಮತ್ತು 5 ಲೀಟರ್ ಸೀಮೆ ಎಣ್ಣೆಯನ್ನು ಸರ್ಕಾರ ನೀಡಿದ್ದು, ಇದನ್ನು ಎಲ್ಲರೂ ಗಮನಿಸಬೇಕೆಂದು ಹೇಳಬಯಸುತ್ತೇನೆ.

**(...ಮುಂದು)**

(179 ) 11.10.2019 KG.VK 7.30

(ಸಭಾಪತಿಯವರ ಉಪಸ್ಥಿತಿ)

**ಶ್ರೀ ನಿರಾಣಿ ಹಣಮಂತ್ ರುದ್ರಪ್ಪ (ಮುಂದು.,):–** ಇಂತಹ ಭೀಕರ ಬರಗಾಲ ಆಗಿರಬಹುದು, ಭೀಕರ ಪ್ರವಾಹದಲ್ಲಿ ಪ್ರಕೃತಿ ವಿಕೋಪಗಳು ಆದಾಗ ಆಡಳಿತದಲ್ಲಿ ಯಾವುದೇ ಸರ್ಕಾರ ಇರಲಿ emergency fund ಎಂದು ಪ್ರತಿ ವರ್ಷ ಬಜೆಟ್‌ನಲ್ಲಿ ಇಡಬೇಕು ಎಂದು ನಾನು ಸರ್ಕಾರಕ್ಕೆ ಕಳಕಳಿಯ ವಿನಂತಿಯನ್ನು ಮಾಡಿಕೊಳ್ಳುವುದಕ್ಕೆ ಬಯಸುತ್ತಿದ್ದೇನೆ. ಯಾವುದೇ ಪ್ರಕೃತಿ ವಿಕೋಪ ಬಂದಾಗ ಸರ್ಕಾರದಲ್ಲಿ reserve fund ಎಂದು ಇದ್ದರೆ, ತಕ್ಷಣದಲ್ಲಿ ಸರ್ಕಾರ ಸ್ಪಂದಿಸುವುದಕ್ಕೆ ಸಾಧ್ಯವಾಗುತ್ತದೆ ಎಂಬ ಮಾತನ್ನು ಈ ಸಂದರ್ಭದಲ್ಲಿ ಹೇಳಲಿಕ್ಕೆ ಬಯಸುತ್ತೇನೆ. ಮಾನ್ಯ ಮುಖ್ಯಮಂತ್ರಿಯವರು ನಾಲ್ಕು ಬಾರಿ ಬಿಜಾಪುರ, ಬಾಗಲಕೋಟೆ ಮತ್ತು ಬೆಳಗಾವಿ ಜಿಲ್ಲೆಗಳಿಗೆ ಬಂದಿದ್ದರು. ಆ ಭಾಗದ ಸಂತ್ರಸ್ತರ ನೋವಿಗೆ ಸ್ಪಂದನೆ ಮಾಡುವುದರ ಜೊತೆಗೆ ಅವರಿಗೆ ಮಾನಸಿಕವಾಗಿ ಧೈರ್ಯವನ್ನು ತುಂಬುವಂತಹ ಕೆಲಸವನ್ನು ಮಾಡಿದ್ದಾರೆ ಎನ್ನುವಂತಹ ಮಾತನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಬಯಸುತ್ತೇನೆ. ಇದರ ಜೊತೆಯಲ್ಲಿ ನಾವು ಇಂತಹ ಪ್ರಸಂಗಗಳಲ್ಲಿ ಈಗಾಗಲೇ ನಮ್ಮ ಹಿರಿಯ ಸದಸ್ಯರಾದಂತಹ ಶ್ರೀ ಅಲ್ಲಂ ವೀರಭದ್ರಪ್ಪನವರು ಮಾತನಾಡಿದಂತೆ ಬಹಳ ದೊಡ್ಡದಾಗಿರುವಂತಹ ಕೃಷ್ಣಾ ನದಿಯ ದಡದಲ್ಲಿರುವ ಆಲಮಟ್ಟಿ ಡ್ಯಾಂನಲ್ಲಿ 519.6 ಮೀಟರ್‌ನಷ್ಟು ಇದೆ. ಆಲಮಟ್ಟಿ ಡ್ಯಾಂ ಅನ್ನು ಸುಮಾರು 524.12 ಮೀಟರ್‌ಗಳಷ್ಟು ಹೆಚ್ಚಿಸಿದರೆ, ಇನ್ನು 130 ಟಿ.ಎಂ.ಸಿ ನೀರನ್ನು ಹೆಚ್ಚಿಗೆ ಸಂಗ್ರಹಣೆ ಮಾಡಿಕೊಳ್ಳಲು ನಮಗೆ ಅವಕಾಶ ಇದೆ. ನಾವು ಮುಂದೆ ಒಂದು ದಿವಸ ನೀರಿಗಾಗಿ ಪರದಾಡಬೇಕಾಗುತ್ತದೆ. ನಾವು ಇವತ್ತಿನ ದಿವಸ ತುಪ್ಪ, ಹಾಲು, ಮೊಸರನ್ನು ಯಾವ ರೀತಿ ಬಳಸುತ್ತಿದ್ದೇವೆ, ಆ ರೀತಿ ನೀರನ್ನು ಬಳಸುವಂತಹ ಕಾಲ ಸಮೀಪಿಸುತ್ತದೆ ಎನ್ನುವಂತಹ ಮಾತನ್ನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಆ ಹಿನ್ನೆಲೆಯಲ್ಲಿ ಆಲಮಟ್ಟಿ ಡ್ಯಾಂ ಪೂರ್ತಿ ಕೆಲಸಕ್ಕೆ ನಾವೆಲ್ಲರೂ ಸಹ ಸಹಕಾರ ನೀಡಬೇಕು. ಆದಷ್ಟು ಬೇಗನೆ ಆಲಮಟ್ಟಿ ಡ್ಯಾಂ ಮಟ್ಟವನ್ನು ಹೆಚ್ಚಿಸುವುದರ ಮೂಲಕ ಬರಗಾಲದ ಪ್ರದೇಶಗಳಿಗೆ ನೀರನ್ನು ಒದಗಿಸುವಂತಹ ಕೆಲಸ ಸರ್ಕಾರದಿಂದ ಆಗಬೇಕಾಗಿದೆ ಎನ್ನುವಂತಹ ಮಾತನ್ನು ನಾನು ಸಂದರ್ಭದಲ್ಲಿ ಹೇಳುವುದಕ್ಕೆ ಬಯಸುತ್ತೇನೆ. ಬಹಳ ವಿಶೇಷವಾಗಿ ಆಲಮಟ್ಟಿ ಡ್ಯಾಂನಲ್ಲಿ ಇಷ್ಟು ನೀರು ಇದ್ದರೂ ಸಹ, ನಾವು ಕೃಷ್ಣಾ ನದಿ ದಡದಲ್ಲಿರುವಂತಹ ಜಮಖಂಡಿ, ತೇರದಾಳ ಮತ್ತು ಚಿಕ್ಕೋಡಿ ಭಾಗಗಳಲ್ಲಿ ಮಾರ್ಚ್, ಏಪ್ರಿಲ್ ಮತ್ತು ಮೇ ತಿಂಗಳುಗಳಲ್ಲಿ ನೀರು ಇಲ್ಲದೇ ಪರದಾಡುವಂತಹ ಪರಿಸ್ಥಿತಿ ಬರುತ್ತಿದೆ. ಈ ವರ್ಷ ಸಾಕಷ್ಟು ನೋವು ಆಗಿರುವಂತಹ ಸಂದರ್ಭದಲ್ಲಿ 4 ಟಿ.ಎಂ.ಸಿ ನೀರನ್ನು ಕೇಳಿದಾಗ, ನೀರಿಗೆ ಮುಂಚೆ ಹಣವನ್ನು ಕೊಟ್ಟು ತೆಗೆದುಕೊಳ್ಳುವಂತಹ ಪರಿಸ್ಥಿತಿ ಇತ್ತು. ಆ ಪದ್ಧತಿಯನ್ನು ನಿಲ್ಲಿಸಿ 'ನೀರಿಗಾಗಿ ನೀರನ್ನು' ಕೊಡಬೇಕು ಎನ್ನುವಂತಹ ಮಾತನ್ನು ಮಹಾರಾಷ್ಟ್ರ ಸರ್ಕಾರ ಹೇಳಿದಾಗ, ನಾವು ಮುಂದೆ ಶಾಶ್ವತವಾದಂತಹ ಒಂದು ಒಡಂಬಡಿಕೆಯನ್ನು ಇವತ್ತು ಮಹಾರಾಷ್ಟ್ರ ಸರ್ಕಾರ ಮತ್ತು ನಮ್ಮ ಸರ್ಕಾರ ಮಾಡಿಕೊಳ್ಳಬೇಕು. ಪ್ರತಿವರ್ಷ ಬೇಸಿಗೆ ಕಾಲದಲ್ಲಿ ನೀರಿನ ತೊಂದರೆ ಬರದಂತೆ ಹಾಗೂ ಕರ್ನಾಟಕ್ಕೆ ನೀರಿನ ಅವಶ್ಯಕತೆ ಇದ್ದಾಗ

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಮಹಾರಾಷ್ಟ್ರದಿಂದ ನೀರು ಕೊಡುವಂತಹ ವ್ಯವಸ್ಥೆ ಆಗಬೇಕು. ಮಹಾರಾಷ್ಟ್ರದ ಸೊಲ್ಲಾಪುರದ Akkalkot and Jat ಭಾಗದಲ್ಲಿ ಅವರಿಗೆ ತೊಂದರೆಯಾಗುತ್ತಿದೆ, ಅವರಿಗೆ ಆಲಮಟ್ಟಿ ಡ್ಯಾಂನಿಂದ ನೀರನ್ನು ಒದಗಿಸುವಂತಹ ನಿಟ್ಟಿನಲ್ಲಿ ನಾವು ಕೊಡ ಮಾಡಿದರೆ ಆ ಭಾಗದಲ್ಲಿನ ರೈತರಿಗೆ ಬರಗಾಲದ ಸಂದರ್ಭದಲ್ಲಿ ಅನುಕೂಲವಾಗುತ್ತದೆ ಎನ್ನುವಂತಹ ಮಾತನ್ನು ಸಹ ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಬಯಸುತ್ತೇನೆ

ಮಾನ್ಯ ಸಭಾಪತಿಯವರೇ, 2008-2009ನೇ ಸಾಲಿನಲ್ಲಿ ಇದೇ ರೀತಿಯಾದಂತಹ ಭೀಕರ ಪ್ರವಾಹ ಎನ್ನುವುದಕ್ಕಿಂತ ಹೆಚ್ಚು ಮಳೆಯಾಗಿರುವಂತಹ ಹಿನ್ನೆಲೆಯಲ್ಲಿ ಜನ- ಜಾನುವಾರುಗಳು ಮತ್ತು ಸಾಕಷ್ಟು ಗ್ರಾಮಗಳು ಮುಳುಗಡೆಯಾದವು. ಆ ಸಂದರ್ಭದಲ್ಲಿ ಬಾಗಲಕೋಟೆ ಜಿಲ್ಲೆಯಲ್ಲಿಯೇ ಆಸರೆ ಎನ್ನುವಂತಹ ಯೋಜನೆಯನ್ನು ಮಾನ್ಯ ಬಿ.ಎಸ್.ಯಡಿಯೂರಪ್ಪನವರು ಜಾರಿಗೆ ತಂದರು. 2008-2009 ರಲ್ಲಿ ನಾವು ಯಾರು ಊಹಿಸದಿರುವಂತಹ ನದಿ ತೀರದಲ್ಲಿರುವಂತಹ ಗ್ರಾಮಗಳನ್ನು ಸ್ಥಳಾಂತರ ಮಾಡುವಂತಹ ಕೆಲಸ ಮಾಡಿದರು. ಅವರು ಬಹಳ ದೊಡ್ಡ ಪ್ರಮಾಣದಲ್ಲಿ ಕೆಲಸ ಮಾಡಿದರು. ಸುಮಾರು 5,407 ಮನೆಗಳನ್ನು ಬಾಗಲಕೋಟೆ ಜಿಲ್ಲೆಯಲ್ಲಿ ನಿರ್ಮಾಣ ಮಾಡಿಕೊಟ್ಟರು. ಆಗ ಮೂರು ಲಕ್ಷ ರೂಪಾಯಿಗಳಿಗೆ ಜಮೀನನ್ನು consent award ಮೇಲೆ ತೆಗೆದುಕೊಂಡು ಸ್ಥಳಾಂತರ ಮಾಡುವಂತಹ ಕೆಲಸವನ್ನು ಮಾಡಿದರು. ಆದರೆ, ವಾಸ್ತವಿಕ ಸ್ಥಿತಿ ಏನಾಗಿತ್ತು ಎಂದರೆ, ಇವತ್ತಿಗೂ ಸಹ ಆ ಪುನರ್‌ವಸತಿ ಕೇಂದ್ರದಲ್ಲಿ ಅಥವಾ ಆಸರೆ ಯೋಜನೆಯ ಮನೆಗಳಿಗೆ ರೈತರು ಹೋಗಿ ವಾಸ ಮಾಡಲಿಲ್ಲ. ಇವತ್ತು ಆ ಮನೆಗಳು ಶೀಥಿಲ ವ್ಯವಸ್ಥೆಯಲ್ಲಿವೆ. ನಾವು ಯಾವುದೇ ಒಂದು flood ವಿಚಾರವನ್ನು ಇಟ್ಟುಕೊಂಡು ಗ್ರಾಮಗಳನ್ನು ಸ್ಥಳಾಂತರ ಮಾಡಬೇಕಾದರೆ, ಈ 'ಆಸರೆ ಮನೆ'ಗಳನ್ನು ಕಟ್ಟಿರುವಂಥದ್ದು, ಆ ಯೋಜನೆ ಏಕೆ ವಿಫಲವಾಯಿತು ಎಂಬುದನ್ನು ನಾವೆಲ್ಲರೂ ಗಮನಿಸಬೇಕು. ಅವತ್ತಿನ ದಿವಸ ಮಾನ್ಯ ಮುಖ್ಯ ಮಂತ್ರಿಗಳಾದ ಶ್ರೀ ಬಿ.ಎಸ್.ಯಡಿಯೂರಪ್ಪನವರು ಬಹಳ ಕಳಕಳಿಯಿಂದ ಮುಂದೆ ನಿಂತು ಅವರನ್ನು ಸ್ಥಳಾಂತರ ಮಾಡುವುದಕ್ಕೆ ಮನೆಗಳನ್ನು ಕಟ್ಟಿಕೊಟ್ಟರು. ಸುಮಾರು 30x50 ಅಳತೆಯ ನಿವೇಶನಗಳನ್ನು ಸಹ ಕೊಟ್ಟಿದ್ದಾರೆ. ಆದರೆ, ಆ ಪುನರ್‌ವಸತಿ ಕೇಂದ್ರಗಳಿಗೆ ಜನರು ವಾಸ ಮಾಡಲು ಹೋಗುತ್ತಿಲ್ಲ. ಹೀಗಾಗಿ ಮುಂದಿನ ದಿವಸಗಳಲ್ಲಿ 'ಪುನರ್‌ವಸತಿ' ಕೇಂದ್ರಗಳನ್ನು ನಿರ್ಮಾಣ ಮಾಡಬೇಕಾದರೆ, ಶಾಶ್ವತವಾಗಿ ಆ ಪುನರ್‌ವಸತಿ ಕೇಂದ್ರಗಳಿಗೆ ಸಂತ್ರಸ್ತರನ್ನು ಸ್ಥಳಾಂತರ ಮಾಡುವಂತಹ ನಿಟ್ಟಿನಲ್ಲಿ ಸರ್ಕಾರ ಚಿಂತನೆ ಮಾಡಬೇಕೆಂಬ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಬಯಸುತ್ತೇನೆ. ಮಾನ್ಯ ಮುಖ್ಯ ಮಂತ್ರಿಯವರು ಬಾಗಲಕೋಟೆ ಜಿಲ್ಲೆಗೆ ಬಂದಂತಹ ಸಂದರ್ಭದಲ್ಲಿ ಆ ಶಿಥಿಲ ವ್ಯವಸ್ಥೆಯಲ್ಲಿರುವಂತಹ ಆಸರೆ ಮನೆಗಳ..

**ಸಭಾಪತಿಯವರು:-** ಮಾನ್ಯ ಸದಸ್ಯರಾದ ಎಂ.ನಾರಾಯಣಸ್ವಾಮಿಯವರೇ ತಾವೀಗ ಮಾತನಾಡಿ.

**ಶ್ರೀ ನಿರಾಣಿ ಹಣಮಂತ್ ರುದ್ರಪ್ಪ (ಪದವೀಧರರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ನಾನು ಇನ್ನು ಎರಡು ನಿಮಿಷಗಳಲ್ಲಿ ಮಾತನಾಡಿ ಮುಗಿಸುತ್ತೇನೆ. ಆಸರೆ ಮನೆಗಳ ರಿಪೇರಿಗೂ ಸಹ ಹಣ ಕೊಡುವಂತಹ ವ್ಯವಸ್ಥೆಯಾಗಿದೆ. ಅದೇ ರೀತಿಯಾಗಿ Upper Krishna Project ನಲ್ಲಿ ಸಂತ್ರಸ್ತರಿಗೆ ಈಗಾಗಲೇ ಪೇಮೆಂಡ್ ಆಗಿರುವಂತಹ ಮನೆಗಳನ್ನು ಸಹ ಸ್ಥಳಾಂತರ ಮಾಡುವಂತಹ ಅವಶ್ಯಕತೆ ಇದೆ. ಆ ಹಿನ್ನೆಲೆಯಲ್ಲಿ ಪುನರ್‌ವಸತಿ ಕೇಂದ್ರಗಳನ್ನು ನಿರ್ಮಾಣ ಮಾಡುವಂತಹ ಸಂದರ್ಭದಲ್ಲಿ ನಾವೆಲ್ಲರೂ ಸಹ ಅಲೋಚನೆ ಮಾಡಬೇಕಾಗಿದೆ ಎನ್ನುವಂತಹ ಮಾತನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಬಯಸುತ್ತೇನೆ. ಆ ಭಾಗದಲ್ಲಿರುವಂತಹ ಆಲಮಟ್ಟಿ ಡ್ಯಾಂಗೆ ಒಂದು ಶ್ವಾಶತವಾದಂತಹ ನೆಲೆಯನ್ನು ಕಲ್ಪಿಸುವ ನಿಟ್ಟಿನಲ್ಲಿ ನಾವೆಲ್ಲರೂ ಸಹ ಸಹಮತವನ್ನು ಮಾಡಬೇಕಾಗಿದೆ ಎನ್ನುವಂತಹ ಮಾತನ್ನು ಈ ಸಂದರ್ಭದಲ್ಲಿ ಹೇಳಿ ನನಗೆ ಮಾತನಾಡಲು ಅವಕಾಶ ಕಲ್ಪಿಸಿಕೊಟ್ಟಿದ್ದಕ್ಕೆ ಮಾನ್ಯ ಸಭಾಪತಿಯವರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

**ಶ್ರೀ ಎಂ.ನಾರಾಯಣಸ್ವಾಮಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಕೊನೆಗಾದರೂ ಸಹ, ಕೊನೆಯ ಬೆಂಚ್‌ನಲ್ಲಿ ಕುಳಿತಿರುವ ನನಗೆ ಮಾತನಾಡಲು ಅವಕಾಶ ಕಲ್ಪಿಸಿಕೊಟ್ಟಿದಕ್ಕಾಗಿ ತಮಗೆ ಧನ್ಯವಾದಗಳನ್ನು ಸಲ್ಲಿಸುತ್ತೇನೆ. ಇವತ್ತಿನ ದಿವಸ ನಿಯಮಾವಳಿಗಳ ಮೇಲೆ ನಮ್ಮ ವಿರೋಧ ಪಕ್ಷದ ನಾಯಕರು ತಂದಂತಹ ನಿಲುವಳಿ ಸೂಚನೆ ಮೇಲೆ ನಿನ್ನೆಯಿಂದ ವಿರೋಧ ಪಕ್ಷದ ನಾಯಕರು ಪ್ರಮಾಣಿಕವಾಗಿ ಸರ್ಕಾರದ ಮೇಲೆ ಬೆಳಕು ಚೆಲ್ಲುವಂತಹ ಕೆಲಸವನ್ನು ಮಾಡಿದ್ದೇವೆ. ಇಲ್ಲಿ ಒಂದು ವಿಷಯ ನಮಗೆ ಅರ್ಥವಾಗುತ್ತಿಲ್ಲ. ನಾವು ಸರ್ಕಾರದ ಮೇಲೆ ಬೆಳಕು ಚೆಲ್ಲುವಂತಹ ಕೆಲಸವನ್ನು ಮಾಡುತ್ತಿದ್ದರೆ, ಆಡಳಿತ ಪಕ್ಷದ ನಾಯಕರು ಅದನ್ನು ಸ್ವೀಕಾರ ಮಾಡುವುದಕ್ಕೆ ತಯಾರಾಗಿಲ್ಲ. ಇದು ನಮ್ಮ ರಾಜ್ಯ ಕಂಡಂತಹ ಭೀಕರವಾದಂತಹ ಪರಿಸ್ಥಿತಿಯನ್ನು ಅವರು ಎಷ್ಟರ ಮಟ್ಟಿಗೆ ಗಂಭೀರತೆಯಿಂದ ತೆಗೆದುಕೊಂಡಿದ್ದಾರೆ ಎಂಬುದನ್ನು ನಾವು ಪ್ರಶ್ನೆ ಮಾಡಬೇಕಾಗುತ್ತದೆ. ನಾನು ಆಡಳಿತ ಪಕ್ಷದ ಮುಖಂಡರಲ್ಲಿ ಮನವಿ ಮಾಡುವುದೇನೆಂದರೆ, ನಾವು ಯಾರು ಇಲ್ಲಿ ರಾಜಕಾರಣ ಮಾಡಲು ಬಂದಿಲ್ಲ. ಇವತ್ತಿನ ದಿವಸ ನಮ್ಮ ರಾಜ್ಯ ಎದುರಿಸುತ್ತಿರುವಂತಹ ಈ ಪರಿಸ್ಥಿತಿಯನ್ನು ನಾವೆಲ್ಲರೂ ಸಹ ಪಕ್ಷಾತೀತವಾಗಿ ಗಂಭೀರವಾಗಿ ಅರ್ಥ ಮಾಡಿಕೊಳ್ಳಬೇಕಾಗುತ್ತದೆ. ಇವತ್ತು ಬಂದಿರುವಂತಹ ನೆರೆ ನಮ್ಮ ಇತಿಹಾಸದಲ್ಲಿ ಯಾವತ್ತು ಕಂಡು ಕೇಳಿರಲಿಲ್ಲ. ಅಂತಹ ವಿಕೋಪಕ್ಕೆ ನಾವು ಹೋಗಿದ್ದೇವೆ. ಇವತ್ತು ಜನ ಮನೆ-ಮಠಗಳನ್ನು ಕಳೆದುಕೊಂಡಿದ್ದಾರೆ. ಜಾನುವಾರಗಳನ್ನು ಕಳೆದುಕೊಂಡಿದ್ದಾರೆ. ಕುಡಿಯುವುದಕ್ಕೆ ನೀರಿಲ್ಲ. ತಿನ್ನಲು ಒಪ್ಪತ್ತು ಊಟ ಸಹ ಇಲ್ಲ. ಅವರು ಮನೆಗಳನ್ನು ಕಳೆದುಕೊಂಡು ರಸ್ತೆ ಬದಿಗಳಲ್ಲಿರುವ ಟೆಂಟ್‌ಗಳಲ್ಲಿ ಜೀವನ ಮಾಡುತ್ತಿದ್ದಾರೆ. ಟೆಂಟ್‌ಗಳು ಎಂದರೆ, ಯಾವುದೇ ರೀತಿಯ permanent tent ಗಳನ್ನು ಹಾಕಿಕೊಟ್ಟಿಲ್ಲ. ನಾಲ್ಕು ಗಿಡಗಳನ್ನು ನೆಟ್ಟು

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಅದಕ್ಕೆ ಅವರು ಸುತ್ತಲೂ ಸೀರೆಗಳನ್ನು ಸುತ್ತಿಕೊಂಡು ಜೀವನ ಮಾಡುತ್ತಿದ್ದಾರೆ. ಅವರಿಗೆ ಸರಿಯಾದ ರೀತಿಯಲ್ಲಿ ಪರಿಹಾರದ ಹಣವನ್ನು ಕೊಡುವುದಕ್ಕೆ ಆಗುತ್ತಿಲ್ಲ. ಇಷ್ಟೊಂದು ಗಂಭೀರವಾದಂತಹ ವಿಷಯವನ್ನು ಮಾತನಾಡುತ್ತಿದ್ದರೂ ಸಹ, ನಮ್ಮ ಆಡಳಿತ ಪಕ್ಷದವರು ನಾವು ಏನು ಮಾತನಾಡುತ್ತೇವೆ ಅದಕ್ಕೆ ಆಡಚಣೆ ಮಾಡುವುದರ ಜೊತೆಗೆ  ಕಾಲವನ್ನು ಕಳೆಯುತ್ತಿದ್ದಾರೆ. ಒಂದು ಮಾತನ್ನು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಇವತ್ತು ಈ  ಅಧಿವೇಶವನ್ನು ಕರೆದಿದ್ದಾರೆ, ಈ ಅಧಿವೇಶವನ್ನು ಸಂಪ್ರಾದಾಯಿಕವಾಗಿ ಬೆಳಗಾವಿಯಲ್ಲಿ ಕರೆಯಬೇಕಾಗಿತ್ತು. ಆದರೆ, ಆಡಳಿತ ಪಕ್ಷದ ಮುಖಂಡರು ವಿರೋಧ ಪಕ್ಷದಲ್ಲಿ ಇದ್ದಂತಹ ಸಂದರ್ಭದಲ್ಲಿ ಉತ್ತರ ಕರ್ನಾಟಕದ ಬಗ್ಗೆ ಮೊಸಳೆ ಕಣ್ಣೀರನ್ನು ಚೆಲ್ಲುತ್ತಿದ್ದರು. ಉತ್ತರ ಕರ್ನಾಟಕ ಬಗ್ಗೆ ಬಹಳಷ್ಟು ಕಾಳಜಿ ಇಟ್ಟುಕೊಂಡಿರುವಂತಹ ಮಾತುಗಳನ್ನು ಆಡುತ್ತಿದ್ದರು. ಇವತ್ತು ಅವರಿಗೆ ನಿಜವಾಗಿಯೂ ಉತ್ತರ ಕರ್ನಾಟಕದ ಬಗ್ಗೆ ಕಾಳಜಿ ಇದಿದ್ದರೆ, ಅಧಿವೇಶನವನ್ನು ಬೆಳಗಾವಿಯಲ್ಲಿ ಕರೆಯಬೇಕಾಗಿತ್ತು. ಅಲ್ಲಿನ ಜನರಿಗೆ ಭಯಪಟ್ಟು ಪಲಾನಯ ಮಾಡಿ, ಬೆಂಗಳೂರಿನಲ್ಲಿಯೇ ಅಧಿವೇಶನವನ್ನು ಕರೆದಿದ್ದಾರೆ. ಅವರು ದಯಮಾಡಿ ವಿರೋಧ ಪಕ್ಷದ ನಾಯಕರ ರೀತಿ ಮಾತನಾಡುವುದಕ್ಕೆ ಹೋಗಬಾರದು. ದಯಮಾಡಿ ಕೇಳಿ., ನಾನು ಅವರನ್ನು ದೂಷಣೆ ಮಾಡುತ್ತಿಲ್ಲ,,

(ಗೊಂದಲ)

**ಶ್ರೀ ಕೋಟ ಶ್ರೀನಿವಾಸ  ಪೂಜಾರಿ (ಸಭಾ ನಾಯಕರು):–** ಮಾನ್ಯ ಸಭಾಪತಿಯವರೇ, ವಿರೋಧ ಪಕ್ಷದವರು ಸರ್ಕಾರ ಮೇಲೆ ಆಪಾದನೆಗಳನ್ನು ಮಾಡಿದಂತಹ ಸಂದರ್ಭದಲ್ಲಿ ಸರ್ಕಾರ ಉತ್ತರ ಕೊಡಬೇಕಾಗುತ್ತದೆ. ವಿರೋಧ ಪಕ್ಷದವರು ಏನು ಹೇಳಿದರು ಆಡಳಿತ ಪಕ್ಷದವರು ಕೇಳಬೇಕೆಂದು ನಿಮಯಗಳಲ್ಲಿ ಅವಕಾಶ ಇಲ್ಲ. ಸರ್ಕಾರ ಪಲಾಯನ ಮಾಡುತ್ತದೆ ಎಂದು ಹೇಳುವಂತಹ ಸಂದರ್ಭದಲ್ಲಿ ನಾವು ಉತ್ತರ ಕೊಡಬೇಕಾಗುತ್ತದೆ.,

(ಗೊಂದಲ)

**ಶ್ರೀ ಎಂ.ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ನಾನು ಹೇಳುವುದನ್ನು ಸಭಾನಾಯಕರು ದಯಮಾಡಿ ಅರ್ಥ ಮಾಡಿಕೊಳ್ಳಬೇಕು. ನಾನು ಅವರನ್ನು ದೂಷಣೆ ಮಾಡುತ್ತಿಲ್ಲ. ನಾನು ಮಾತನಾಡಿದ ಮೇಲೆ ಅವರು react ಮಾಡಲಿ.

(ಗೊಂದಲ)

**ಶ್ರೀ ಕೋಟ ಶ್ರೀನಿವಾಸ  ಪೂಜಾರಿ (ಸಭಾ ನಾಯಕರು):–** ಮಾನ್ಯ ಸಭಾಪತಿಯವರೇ, ಸರ್ಕಾರವನ್ನು ಚುಚ್ಚುವುದು, ಸರ್ಕಾರವನ್ನು ಟೀಕಿಸುವುದು, ಸರ್ಕಾರವನ್ನು ಎಚ್ಚರಿಸುವಂತಹ ಕೆಲಸದಲ್ಲಿ ವಿರೋಧಪಕ್ಷದ ಪಾತ್ರ ಇದೆ. ಆದರೆ, ಸರ್ಕಾರ ಪಲಾನಯ ಮಾಡಿದೆ ಎಂದು ಹೇಳಿದಾಗ ನಾವು ಉತ್ತರ ಕೊಡಬೇಕಾಗುತ್ತದೆ.,

“ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

(ಗೊಂದಲ)

**ಶ್ರೀ ಎಂ.ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ಅವರು ಉತ್ತರ ಕೊಡುವುದಿದ್ದರೆ ಕೊಡಲಿ, ನಾನು ಬೇಡ ಅನ್ನುವುದಿಲ್ಲ. ಆಡಳಿತ ಪಕ್ಷದವರು ಇಷ್ಟೊಂದು ಮಾತನಾಡುತ್ತಿದ್ದಾರೆ. ಹಾಗಾದರೆ, ನಾನು ಯಾವ ಪುರುಷಾರ್ಥಕ್ಕೆ ಮಾತನಾಡಬೇಕು? ಎಷ್ಟು ಜನ ಶಾಸಕರು ಸದನದಲ್ಲಿದ್ದಾರೆ, ಇಷ್ಟು ಜನ ಸಚಿವರು ಇದ್ದಾರೆ, ಇದರ ಬಗ್ಗೆ ಎಷ್ಟು ಗಂಭೀರತೆ ಇದೆ ಅವರಿಗೆ..

(ಗೊಂದಲ)

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾ ನಾಯಕರು):–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಆರ್ಭಟ ಮಾಡಿ ಹೇಳಿದರೆ ನಾವು ಕೇಳಬೇಕೆಂದು ಏನಿಲ್ಲ. ಆರೋಗ್ಯಕರವಾಗಿ ಚರ್ಚೆ ಮಾಡಿದರೆ ಅದಕ್ಕೆ ನಾವು ಉತ್ತರ ಕೊಡುತ್ತೇವೆ. ಸದನದಲ್ಲಿ ಮೂರು ಜನ ಸಚಿವರು ಇದ್ದೇವೆ.,

**(ಮುಂದು .....)**

(180)11–10–2019(7–40)ಎಂವಿ–ವಿಕೆ

**(ಸಭಾಪತಿಯವರ ಉಪಸ್ಥಿತಿ)**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು) (ಮುಂದು...):–**
ಈಗ ಆಡಳಿತ ಪಕ್ಷದಲ್ಲಿ ಇರುವುದು 18 ಜನ. ಈಗ ಅದಕ್ಕಿಂತ ಜಾಸ್ತಿ ಮಾಡುವುದಕ್ಕೆ ಆಗುವುದಿಲ್ಲ. ಅದನ್ನು ಮುಂದೆ ನೋಡೋಣ. ಈಗ ಏನು ಎಂದು ಹೇಳಿ.

**ಶ್ರೀ ಎಂ.ನಾರಾಯಣಸ್ವಾಮಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಇವತ್ತು ಅವರು ಪಲಾಯನ ಮಾಡಿ ಅಧಿವೇಶನವನ್ನು ಬೆಂಗಳೂರಿನಲ್ಲಿ ಕರೆದಿದ್ದಾರೆ. ನಿಜವಾಗಿಯೂ ಅವರಿಗೆ ರೈತರ ಬಗ್ಗೆ ಮತ್ತು ಆಗಿರುವಂತಹ ಆಪಾದನೆಯ ಬಗ್ಗೆ ಗಂಭೀರತೆ ಇದ್ದಿದ್ದರೆ ಸದನವನ್ನು ಕಡಿಮೆ ಎಂದರೂ ಸುಮಾರು 15 ದಿನಗಳ ಕಾಲ ನಡೆಸಬೇಕಾಗಿತ್ತು ಮತ್ತು ಸುದೀರ್ಘವಾದ ಚರ್ಚೆ ಮಾಡಬೇಕಾಗಿತ್ತು. ಅವರು ಅಧಿವೇಶನವನ್ನು ಕೇವಲ ಮೂರು ದಿವಸ ಏತಕ್ಕೆ ಕರೆದಿದ್ದಾರೆ. ಈಗಾಗಲೇ ಅರ್ಧ ದಿವಸ ಸಂತಾಪ ಸೂಚನೆ ಮತ್ತು ಪತ್ರಗಳನ್ನು ಮಂಡನೆ ಮಾಡುವುದರಲ್ಲಿ ಮುಗಿದು ಹೋಗಿದೆ. ನಾವು ಇನ್ನು ಯಾವ ರೀತಿಯಾಗಿ ಚರ್ಚೆ ಮಾಡೋಣ. ನನಗೆ ಒಂದು ಸಂಶಯ ಬರುತ್ತದೆ. ಇವತ್ತು ಸದನವನ್ನು ಏಕೆ ಕರೆದಿದ್ದಾರೆಂದರೆ, ಮಾನ್ಯ ಹೆಚ್.ಡಿ.ಕುಮಾರಸ್ವಾಮಿಯವರು ಮುಖ್ಯಮಂತ್ರಿಗಳಾಗಿದ್ದಾಗ 2019–2020ನೇ ಸಾಲಿನ ಬಜೆಟ್‌ನಲ್ಲಿ ನಾಲ್ಕು ತಿಂಗಳಿಗೆ vote on account ಅನ್ನು ತೆಗೆದುಕೊಂಡಿದ್ದರು. ಅದು ಆದಮೇಲೆ ಮಾನ್ಯ ಬಿ.ಎಸ್.ಯಡಿಯೂರಪ್ಪನವರು ಮುಖ್ಯಮಂತ್ರಿಯಾದರು, ಅವರು ಮೂರು ತಿಂಗಳಿಗೆ vote on account ಅನ್ನು ತೆಗೆದುಕೊಂಡಿದ್ದಾರೆ. ಈಗ ಅದರ ಸಮಯ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮುಗಿಯುತ್ತಿದೆ. ಇನ್ನು ಐದು ತಿಂಗಳು ಮಾತ್ರ ಬಾಕಿ ಇದೆ. ಅದಕ್ಕೆ ಅನುಮತಿ ತೆಗೆದುಕೊಳ್ಳುವುದಕ್ಕೆ ಮಾತ್ರ ಈ ಅಧಿವೇಶನವನ್ನು ಕರೆದಿದ್ದಾರೆ. ಇದು ನೆರೆ ಹಾವಳಿಯ ಬಗ್ಗೆ ಮಾತನಾಡುವುದಕ್ಕೆ ಅಲ್ಲ. ನಿಜವಾಗಿಯೂ ಅವರಿಗೆ ಕಾಳಜಿ ಇದ್ದಿದ್ದರೆ 15 ದಿನಗಳ ಕಾಲ ಅಧಿವೇಶನವನ್ನು ನಡೆಸಬೇಕಾಗಿತ್ತು. ಆಗ ನಾವೆಲ್ಲರೂ ಸಹ ನೆರೆ ಹಾವಳಿಯ ಬಗ್ಗೆ ಸುದೀರ್ಘವಾಗಿ ಮಾತನಾಡುತ್ತಿದ್ದೆವು. ಆದರೆ, ಇವತ್ತಿನ ದಿವಸ ಅದು ಆಗಿಲ್ಲ. ಮಾನ್ಯ ಎನ್.ರವಿಕುಮಾರ್‌ರವರು ವಿರೋಧ ಪಕ್ಷದಲ್ಲಿ ಕುಳಿತಿದ್ದಾಗ ಬಹಳಷ್ಟು ವಿಷಯಗಳನ್ನು ಪ್ರಸ್ತಾಪ ಮಾಡುತ್ತಿದ್ದರು. ಆದರೆ ಅವರು ಆಡಳಿತ ಪಕ್ಷದ ಕಡೆಗೆ ಹೋದಾಗ ಸಪ್ಪೆಯಾಗಿ ಹೋಗಿದ್ದಾರೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ಸದಸ್ಯರಾದ ಮಾನ್ಯ ಎನ್.ರವಿಕುಮಾರ್‌ರವರನ್ನು ಮಾತನಾಡುವುದಕ್ಕೆ ಬಿಡಲಿಲ್ಲ.

**ಶ್ರೀ ಸಿ.ಸಿ.ಪಾಟೀಲ್ (ಗಣಿ ಮತ್ತು ಭೂ ವಿಜ್ಞಾನ, ವಾಣಿಜ್ಯ ಮತ್ತು ಕೈಗಾರಿಕೆ ಸಚಿವರು):-** ಮಾನ್ಯ ಸಭಾಪತಿಯವರೇ, ಇವತ್ತು ಸದಸ್ಯರು ಮಾನ್ಯ ಎನ್.ರವಿಕುಮಾರ್‌ರವರನ್ನು ಮಾತನಾಡುವುದಕ್ಕೆ ಬಿಟ್ಟಿಲ್ಲ.

**ಶ್ರೀ ಎಂ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ದಯಮಾಡಿ ಆಡಳಿತ ಪಕ್ಷದವರು ಅರ್ಥ ಮಾಡಿಕೊಳ್ಳಬೇಕು. ಇವತ್ತು ಕರ್ನಾಟಕ ರಾಜ್ಯದಲ್ಲಿ ಯಾವ ರೀತಿಯ ಹಾನಿಯಾಗಿದೆ ಎಂದರೆ, ಸುಮಾರು ಎರಡು ಲಕ್ಷ ಮನೆಗಳನ್ನು ಕಳೆದುಕೊಂಡು ಜನರು ನಿರಾಶ್ರಿತರಾಗಿದ್ದಾರೆ. ಸುಮಾರು 90 ಜನರು ಸತ್ತು ಹೋಗಿದ್ದಾರೆ. ಸುಮಾರು 10 ಜನ ಕೊಚ್ಚಿಕೊಂಡು ಹೋಗಿದ್ದಾರೆ, ಕೊಚ್ಚಿಕೊಂಡು ಹೋಗಿರುವವರ ಶವಗಳು ಇನ್ನು ಸಹ ದೊರೆತಿಲ್ಲ. ಅವರು ಬದುಕಿದ್ದಾರೋ ಇಲ್ಲವೋ ಇನ್ನು ಗೊತ್ತಿಲ್ಲ. ಸಚಿವರಾದ ಮಾನ್ಯ ಸಿ.ಟಿ.ರವಿಯವರು ಬೆಳಿಗ್ಗೆ ಮಾತನಾಡುವಂತಹ ಸಂದರ್ಭದಲ್ಲಿ 'ನಾವು precautionary measures ಅನ್ನು ತೆಗೆದುಕೊಂಡಿರುವುದಕ್ಕೋಸ್ಕರ ಸಾವು ನೋವುಗಳು ಕಡಿಮೆಯಾಗಿ ಕೇವಲ 90 ಸಾವು ಮಾತ್ರ ಸಂಭವಿಸಿದೆ, ಇಲ್ಲದೇ ಹೋಗಿದ್ದರೆ ಅದು 900 ಮುಟ್ಟುತ್ತಿತ್ತು' ಎಂದು ಹೇಳಿದರು. ಇವತ್ತು ನಾನು ಮಿಲಿಟರಿಯವರಿಗೆ ಮತ್ತು ವಿವಿಧ ಇಲಾಖೆಯವರಿಗೆ ನನ್ನ ಎರಡು ಕೈಗಳನ್ನು ಎತ್ತಿ ನಮಸ್ಕಾರ ಮಾಡುತ್ತೇನೆ. ಏಕೆಂದರೆ, ಅವರು precautionary measures ಅನ್ನು ತೆಗೆದುಕೊಂಡು ಜನರನ್ನು ಉಳಿಸಿದ್ದಾರೆ. ಆದರೆ, ಸರ್ಕಾರ ಪರಿಹಾರ ಕೊಡುವುದಕ್ಕೆ ವಿಳಂಬ ಮಾಡುತ್ತಿದೆ. ಈಗ ಸುಮಾರು 90 ಜನರು ಸತ್ತಿದ್ದಾರೆ. ಆದರೆ, ಸರ್ಕಾರ ಮಾಡುವಂತಹ ವಿಳಂಬದಿಂದ ರೈತರು ಮಾಡಿಕೊಳ್ಳುವ ಆತ್ಮಹತ್ಯೆಯಿಂದ ಅದು ಸುಮಾರು 900ರ ಸಂಖ್ಯೆಯನ್ನು ಮುಟ್ಟುತ್ತದೆ. ದಯಮಾಡಿ ನಾನು ಸರ್ಕಾರಕ್ಕೆ ಕೈ ಮುಗಿದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ನಾನು ಸರ್ಕಾರವನ್ನು ದೂಷಣೆ ಮಾಡುತ್ತಿಲ್ಲ. ನಾನು ನನ್ನ ಕಾಳಜಿಯನ್ನು ಹೇಳುತ್ತಿದ್ದೇನೆ ಅಷ್ಟೇ. ನನ್ನ ಕಾಳಜಿ ಏನೆಂದರೆ, ಸರ್ಕಾರ ಸಂತ್ರಸ್ತರಿಗೆ ಪರಿಹಾರ ಕೊಡಬೇಕು ಮತ್ತು ಹಣವನ್ನು ಬಿಡುಗಡೆ ಮಾಡಬೇಕೆಂದು ಇದೆ. ಆದರೆ, ಅದನ್ನು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸಮಯಕ್ಕೆ ಸರಿಯಾಗಿ ಕೊಡದೇ ಹೋದರೆ ಆ ರೈತರು ಆತ್ಮಹತ್ಯೆ ಮಾಡಿಕೊಳ್ಳುತ್ತಾರೆ. ಅವರು ಸತ್ತ ಮೇಲೆ ಪರಿಹಾರ ಕೊಟ್ಟರೆ ಏನು ಪ್ರಯೋಜನವಾಗುತ್ತದೆ.

**ಶ್ರೀ ಸಿ.ಸಿ.ಪಾಟೀಲ್:–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಹೇಳುತ್ತಿರುವುದು ಆತ್ಮಹತ್ಯೆಗೆ ಪ್ರಚೋದನೆ ಅಲ್ಲವೇ?

**ಡಾ॥ ತೇಜಸ್ವಿನಿ ಗೌಡ:–** ಮಾನ್ಯ ಸಭಾಪತಿಯವರೇ, ಅತೀ ಹೆಚ್ಚು ಆಗಿರುವುದು ಅವರ ಕಾಲದಲ್ಲಿ. ಮಾನ್ಯ ಸದಸ್ಯರು ಪ್ರಚೋದನೆ ಮಾಡುವುದು ಬೇಡ.

**ಶ್ರೀ ಎನ್.ರವಿಕುಮಾರ್:–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಹೇಳುತ್ತಿರುವುದು ರೈತರ ಆತ್ಮಹತ್ಯೆಗೆ ಪ್ರಚೋದನೆ ಆಗುವುದಿಲ್ಲವೆ ಎಂಬುದನ್ನು ತಾವೇ ಹೇಳಿ.

**ಶ್ರೀ ಎಂ.ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ಇವತ್ತು ಚಿಕ್ಕಮಗಳೂರಿನಲ್ಲಿ ಒಬ್ಬ ರೈತ ಗುಂಡಿಕ್ಕಿಕೊಂಡು ಸತ್ತಿದ್ದಾನೆ. ಅವನು ಏತಕ್ಕಾಗಿ ಸತ್ತಿದ್ದಾನೆಂದರೆ, ಅವನ ಜಮೀನು ಎಲ್ಲಾ ಹಾಳಾಗಿ ಹೋಗಿದೆ. ಅದಕ್ಕೆ ಪರಿಹಾರ ಬರುತ್ತದೆಯೋ ಇಲ್ಲವೋ ಎಂಬ ಆತಂಕದಿಂದ ಆತ್ಮಹತ್ಯೆ ಮಾಡಿಕೊಂಡಿದ್ದಾನೆ.

**ಶ್ರೀ ಸಿ.ಸಿ.ಪಾಟೀಲ್:–** ಮಾನ್ಯ ಸಭಾಪತಿಯವರೇ, ಈಗ ಹತ್ತು ಸಾವಿರ ರೂಪಾಯಿಗಳನ್ನು ಪ್ರಾರಂಭದ ಹಂತದಲ್ಲಿ ಕೊಡಬೇಕು ಎಂದು ಇತ್ತು. ನೀರು ನುಗ್ಗಿದಂತಹ ಮನೆಗಳಿಗೆ ಕೇವಲ ಒಂದು ವಾರದೊಳಗೆ ಆರ್.ಟಿ.ಜಿ.ಎಸ್. ಮೂಲಕ ಪರಿಹಾರ ತಲುಪಿಸಿದ್ದೇವೆ. There is no delay in that. ಮತ್ತೆ ಮಳೆ ಬಂದು ಸಂಪೂರ್ಣ ಬಿದ್ದಂತಹ ಮನೆಗಳಿಗೆ ಐದು ಲಕ್ಷ ರೂಪಾಯಿಗಳನ್ನು ಕೊಡುತ್ತೇವೆಂದು ಮಾನ್ಯ ಮುಖ್ಯಮಂತ್ರಿಗಳು ತಮ್ಮ ಭಾಷಣದಲ್ಲಿ ಹೇಳಿದ್ದರು. ಈಗಾಗಲೇ ಪೂರ್ತಿ ಬಿದ್ದಂತಹ ಮನೆಗಳಿಗೆ ಒಂದು ಲಕ್ಷ ರೂಪಾಯಿಗಳನ್ನು ಆರ್.ಟಿ.ಜಿ.ಎಸ್. ಮೂಲಕ ಸಂತ್ರಸ್ತರಿಗೆ ತಲುಪಿಸಲಾಗಿದೆ. ಅವರು ಮನೆ ಕಟ್ಟುವುದನ್ನು ಪ್ರಾರಂಭ ಮಾಡಿದರೆ ಎರಡನೆ ಹಂತದ ಹಣವನ್ನು ಬಿಡುಗಡೆ ಮಾಡಲಾಗುತ್ತದೆ. ಆದರೆ, ಪರಿಹಾರ ಕೊಡುವುದರಲ್ಲಿ ವಿಳಂಬವಾಗಿಲ್ಲ. This is for your kind information. ನಾವು ಕೆಲಸ ಮಾಡಿದರೂ ಸಹ ಸದನದ ಮುಖಾಂತರ ಜನರಿಗೆ ತಪ್ಪು ಮಾಹಿತಿ ಹೋಗಬಾರದು.

**ಶ್ರೀ ಎಂ.ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ನಾನು ಅದೇ ಮಾತನ್ನು ಹೇಳುತ್ತೇನೆ. ಪರಿಹಾರನ್ನು ತಲುಪಿಸಿದ್ದೇವೆಂದು ಹೇಳುತ್ತಿದ್ದಾರೆ, ಅದಕ್ಕೆ ನನಗೆ ತುಂಬಾ ಸಂತೋಷವಾಗಿದೆ. ಆದರೆ, ಅವರು ಒಂದು ಬಾರಿ practical ಆಗಿ ಯೋಚನೆ ಮಾಡಲಿ. ಪರಿಹಾರ ಕೊಡಬೇಕಾದರೆ ಅಧಿಕಾರಿಗಳು ಸಂಬಂಧಪಟ್ಟಂತಹ ದಾಖಲೆಗಳನ್ನು ತೆಗೆದುಕೊಂಡು ಬನ್ನಿ ಎನ್ನುತ್ತಾರೆ. ಆಧಾರ್ ಕಾರ್ಡ್ ತೆಗೆದುಕೊಂಡು ಬನ್ನಿ, ರೇಷನ್ ಕಾರ್ಡ್ ತೆಗೆದುಕೊಂಡು ಬನ್ನಿ, ನಿಮ್ಮ ಪಹಣಿ ತೆಗೆದುಕೊಂಡು ಬನ್ನಿ ಎಂದು ಈ ತರಹದ ದಾಖಲೆಗಳನ್ನು ಕೇಳುತ್ತಾರೆ. ನಾನು ಎಲ್ಲಾ ಅಧಿಕಾರಿಗಳನ್ನು ಸಹ ದೂಷಣೆ ಮಾಡುತ್ತಿಲ್ಲ. ಈ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ರೀತಿಯಾಗಿರುವುದರಿಂದ ಇನ್ನು ಶೇಕಡಾ 30ರಷ್ಟು ಜನರಿಗೆ ಹಣ ಬಿಡುಗಡೆಯಾಗಿಲ್ಲ. ಇದು ಸತ್ಯ, ಇದನ್ನು ಸದನಕ್ಕೆ ಮರೆ ಮಾಚದೆ ಹೇಳಲಿ. ಇದನ್ನು ಎಲ್ಲರಿಗೂ ಕೊಡಬೇಕು ಎನ್ನುವಂತಹ ಕಾಳಜಿ ಅವರಲ್ಲಿ ಇದೆ. ಆದರೆ, ಸಂಬಂಧಪಟ್ಟಂತಹ ದಾಖಲೆಗಳನ್ನು ತೋರಿಸಿ ಎಂದು ಅಧಿಕಾರಿಗಳು ಕೇಳುತ್ತಿದ್ದಾರೆ. ಆದುದರಿಂದ ಇನ್ನು ಅದರ ಬೆಳವಣಿಗೆ ಆಗಿಲ್ಲ.

**ಶ್ರೀ ಸಿ.ಸಿ.ಪಾಟೀಲ್:–** ಮಾನ್ಯ ಸಭಾಪತಿಯವರೇ, ಒಂದು ವಿಷಯವನ್ನು ಮಾನ್ಯ ಸದಸ್ಯರ ಗಮನಕ್ಕೆ ತರುತ್ತೇನೆ. ಈಗ ರಾಜೀವ್ ಗಾಂಧಿ ವಸತಿ ನಿಗಮದಲ್ಲಿ ಹಳೆಯ ಆ್ಯಪ್ ಇದೆ. ಮಾನ್ಯ ವಿರೋಧ ಪಕ್ಷದ ನಾಯಕರೇ ಸಂತ್ರಸ್ತರಿಗೆ ಹಣವನ್ನು ನಾವು ರಾಜೀವ್ ಗಾಂಧಿ ವಸತಿ ನಿಗಮದ ಮುಖಾಂತರ ಕೊಡಬೇಕು. ಪರಿಹಾರ ನೀಡುವುದಕ್ಕೆ ಯಾವ ದಾಖಲೆಗಳು ಬೇಕು ಎಂಬ ಒಂದು ಆ್ಯಪ್ ಇದೆ. ಆ ಆ್ಯಪ್ ಬದಲಾವಣೆಯಾಗಬೇಕು. ಅದು ಬದಲಾವಣೆಯಾಗದಿದ್ದರೆ upload ಆಗುವುದಿಲ್ಲ. ಈಗ ನಾವು ಅದನ್ನು ಬದಲಾಯಿಸುತ್ತಿದ್ದೇವೆ. This is the fact.

**ಶ್ರೀ ಎಂ.ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ನಾನು ಮಾನ್ಯ ಸಚಿವರು ಹೇಳಿರುವುದನ್ನು ಒಪ್ಪಿಕೊಳ್ಳುತ್ತೇನೆ. ಆದರೆ, ಮನೆಗಳಿಗೆ ನೀರು ತುಂಬಿಕೊಂಡು, ಸಂತ್ರಸ್ತರ ಆಧಾರ್ ಕಾರ್ಡ್‌ಗಳು ನೀರಿನಲ್ಲಿ ಕೊಚ್ಚಿಕೊಂಡು ಹೋಗಿವೆ.

**ಶ್ರೀ ಆರ್.ಧರ್ಮಸೇನ:–** ಮಾನ್ಯ ಸಭಾಪತಿಯವರೇ, ನಾನು ಒಂದು ನಿಮಿಷ ಮಾತನಾಡುತ್ತೇನೆ.

**ಶ್ರೀ ಸಿ.ಸಿ.ಪಾಟೀಲ್:–** ಮಾನ್ಯ ಸಭಾಪತಿಯವರೇ, ಈಗ ಆರ್.ಟಿ.ಜಿ.ಎಸ್. ಮಾಡುವುದರಿಂದ ಯಾವುದೇ ರೀತಿಯಲ್ಲೂ ಸಹ ಹಣ ದುರುಪಯೋಗವಾಗುವುದಿಲ್ಲ. ನಾವು ಆರ್.ಟಿ.ಜಿ.ಎಸ್. ಬಿಟ್ಟು ಚೆಕ್ ಕೊಡುವುದರಿಂದ ಅದಕ್ಕೆ ಏಜೆನ್ಸಿಗಳು ಮತ್ತು ಮಧ್ಯವರ್ತಿಗಳು ಹುಟ್ಟಿಕೊಳ್ಳುತ್ತಾರೆ. ಇದು ನನ್ನ ಅನುಭವ.

**ಶ್ರೀ ಕೆ.ಟಿ.ಶ್ರೀಕಂಠೇಗೌಡ:–** ಮಾನ್ಯ ಸಭಾಪತಿಯವರೇ, ನೆರೆ ಹಾವಳಿ ಸಂಭವಿಸಿ ಇಂದಿಗೆ ಸುಮಾರು 80 ದಿನಗಳಾಗಿವೆ. ಅದನ್ನು set right ಮಾಡುವುದಕ್ಕೆ ಸರ್ಕಾರಕ್ಕೆ ಇನ್ನು ಎಷ್ಟು ದಿನಗಳು ಬೇಕು?

**ಶ್ರೀ ಸಿ.ಸಿ.ಪಾಟೀಲ್:–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಎಷ್ಟು ಮನೆಗಳು ಹಾನಿಗೀಡಾಗಿವೆ ಎಂಬುದನ್ನು ತಿಳಿಸಲಿ, ಅವರು just for the sake of arguments ಮಾತನಾಡುತ್ತಿದ್ದಾರೆ. ಆದುದರಿಂದ ನಮಗೇನು ಅಭ್ಯಂತರವಿಲ್ಲ.

**(ಗೊಂದಲ)**

**ಶ್ರೀ ಕೆ.ಟಿ.ಶ್ರೀಕಂಠೇಗೌಡ:–** ಮಾನ್ಯ ಸಭಾಪತಿಯವರೇ, No, No. We are practically speaking.

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಸಿ.ಸಿ.ಪಾಟೀಲ್:–** ಮಾನ್ಯ ಸಭಾಪತಿಯವರೇ, ಮಾಡದೇ ಇರುವ ಕೆಲಸವನ್ನು ಮಾಡಿಲ್ಲವೆಂದು ತಿಳಿಸಲಿ.

**ಶ್ರೀ ಕೆ.ಟಿ.ಶ್ರೀಕಂಠೇಗೌಡ:–** ಮಾನ್ಯ ಸಭಾಪತಿಯವರೇ, we have crossed long time.

**(ಗೊಂದಲ)**

**ಶ್ರೀ ಸಿ.ಸಿ.ಪಾಟೀಲ್:–** ಮಾನ್ಯ ಸಭಾಪತಿಯವರೇ, ಮಾನ್ಯ ಕೆ.ಟಿ.ಶ್ರೀಕಂಠೇಗೌಡರು ಸರ್ಕಾರ ಮಾಡದೇ ಇರುವ ಕೆಲಸವನ್ನು ಮಾಡಿಲ್ಲವೆಂದು ಟೀಕೆ ಮಾಡಲಿ. ನಾವು ಸದಸ್ಯರ ಟೀಕೆಯನ್ನು ಸ್ವಾಗತ ಮಾಡುತ್ತೇವೆ. ನಾವು ಕೆಲಸವನ್ನು ಮಾಡಿದರೂ ಅದನ್ನು ಟೀಕೆ ಮಾಡಿದರೆ, ಸುಮ್ಮನೆ ಬಾಯಿ ಚಪಲಕ್ಕೆ ಮಾತನಾಡಿದ ಹಾಗೆ ಆಗುತ್ತದೆ.

**ಶ್ರೀ ಕೆ.ಟಿ.ಶ್ರೀಕಂಠೇಗೌಡ:–** ಮಾನ್ಯ ಸಭಾಪತಿಯವರೇ, 80 ದಿನಗಳ ಒಳಗಾದರೂ ಶೇಕಡಾ 34ರಷ್ಟು ಜನರಿಗಾದರೂ ಪರಿಹಾರ ತಲುಪಬೇಕಲ್ಲವೆ.

**ಶ್ರೀ ಸಿ.ಸಿ.ಪಾಟೀಲ್:–** ಮಾನ್ಯ ಸಭಾಪತಿಯವರೇ, ಈಗ specific ಆಗಿ ಯಾವುದಾದರೂ ಜಿಲ್ಲೆಯಲ್ಲಿ ಪರಿಹಾರ ಕೊಡುವಂತಹ ಐದು ಲಕ್ಷ ರೂಪಾಯಿಗಳಲ್ಲಿ ಒಂದು ಲಕ್ಷ ರೂಪಾಯಿಯ ಮೊದಲ ಕಂತು ಬಂದಿಲ್ಲವೆಂದರೆ ತಿಳಿಸಲಿ.

**ಶ್ರೀ ಎಂ.ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ,...

**ಶ್ರೀ ಸಿ.ಸಿ.ಪಾಟೀಲ್:–** ಮಾನ್ಯ ಸಭಾಪತಿಯವರೇ, ಮಾನ್ಯ ಎಂ.ನಾರಾಯಣಸ್ವಾಮಿಯವರು ನೆರೆಯನ್ನು ನೋಡಿಲ್ಲ ಮತ್ತು ಅವರಿಗೆ ನೆರೆಯೂ ಸಹ ಬಂದಿಲ್ಲ. ನಾನು ನೆರೆಯಲ್ಲಿ ಇದ್ದು, ನೆರೆಯಲ್ಲಿ ತೇಲಿ ಮುಳುಗಿ ಬಂದಿದ್ದೇನೆ.

**ಶ್ರೀ ಪ್ರಕಾಶ್ ಕೆ. ರಾಥೋಡ್:–** ಮಾನ್ಯ ಸಭಾಪತಿಯವರೇ, ನಾನು ಒಂದು ನಿಮಿಷ ಮಾತನಾಡುತ್ತೇನೆ.

**ಸಭಾಪತಿಯವರು:–** ಎಲ್ಲರೂ ಅರ್ಧ ಗಂಟೆ ಸಮಯ ಮಾತನಾಡಿದರೆ ಸಮಯ ಸಾಕಾಗುವುದಿಲ್ಲ. ಬೇರೆ ಸದಸ್ಯರು ಮಾತನಾಡುವುದಕ್ಕೆ ಅವಕಾಶ ಮಾಡಿ ಕೊಡಬೇಕು. ಈಗ ಮಾನ್ಯ ಎಂ.ನಾರಾಯಣಸ್ವಾಮಿಯವರು ಮಾತನಾಡುವುದನ್ನು ಮುಂದುವರೆಸಲಿ.

**ಶ್ರೀ ಎಂ.ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ನಾನು ಗಂಭೀರವಾದಂತಹ ಸತ್ಯವನ್ನು ಹೇಳುತ್ತಿದ್ದೇನೆ. ಮಾನ್ಯ ಮಂತ್ರಿಗಳು ಕೋಪ ಮಾಡಿಕೊಳ್ಳಬಾರದು. ಈ ಮೊದಲು ಸರ್ಕಾರದ ಮುಖ್ಯ ಸಚೇತಕರು ಮಾತನಾಡುತ್ತಾ, ಈ ರೀತಿ ಹೇಳಿದರು; ಮಾನ್ಯ ಪ್ರಧಾನ ಮಂತ್ರಿಗಳು ಜನಧನ ಖಾತೆಯನ್ನು ಪ್ರಾರಂಭ ಮಾಡಿದ ಮೇಲೆ ದೇಶದ ಎಲ್ಲಾ ಜನರು ಖಾತೆಯನ್ನು ತೆರೆದರು, ಅದು ಉಪಯೋಗವಾಗಿದೆ. ಆದುದರಿಂದ ಆರ್.ಟಿ.ಜಿ.ಎಸ್. ಮಾಡುತ್ತಿದ್ದೇವೆಂದು ಹೇಳಿದರು. ಹಳ್ಳಿಯಲ್ಲಿ ಜನರು ತಮ್ಮ ಖಾತೆಯನ್ನು ತೆರೆದಿದ್ದಾರೆ. ಆದರೆ ಆ ಖಾತೆಗಳ ನಂಬರ್ ತುಂಬಾ ದೊಡ್ಡದಾಗಿದೆ. ಅದು ಸುಮಾರು 12 ರಿಂದ 13 ಸಂಖ್ಯೆಗಳಿವೆ. ಅದು ಜನರಿಗೆ

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಬಾಯಿ ಪಾಠವಾಗಿಲ್ಲ. ಆದರೆ, ಇವತ್ತಿನ ದಿವಸ ಅವರ ಪಾಸ್ ಪುಸ್ತಕಗಳು ನೀರಿನಲ್ಲಿ ಕೊಚ್ಚಿಕೊಂಡು ಹೋಗಿವೆ. ಸಂತ್ರಸ್ತರು ಬಂದು ಅವರ ಖಾತೆಯ ನಂಬರ್ ಹೇಳಿದರೆ ಮಾತ್ರ ಅವರಿಗೆ ಆರ್.ಟಿ.ಜಿ.ಎಸ್. ಮಾಡುವುದು. ಅವರು ಎಲ್ಲಿಂದ ಖಾತೆಯ ನಂಬರ್ ಅನ್ನು ತರುತ್ತಾರೆ. ಸರ್ಕಾರ ಈ ನಿಜವನ್ನು ಒಪ್ಪಿಕೊಳ್ಳಬೇಕು. ಸರ್ಕಾರದವರು ಖಾತೆಗೆ ಹೇಗೆ ಹಣವನ್ನು ಕಳುಹಿಸುತ್ತಾರೆ. ಇದು ಸತ್ಯ. ಇನ್ನು ಶೇಕಡಾ 100ಕ್ಕೆ 40ರಷ್ಟು ಜನರ ಖಾತೆಗೆ ಆರ್.ಟಿ.ಜಿ.ಎಸ್. ಹೋಗಿಲ್ಲ. ಇದು ನನ್ನ ಕಾಳಜಿ.

**(ಗೊಂದಲ)**

**ಶ್ರೀ ಎನ್.ರವಿಕುಮಾರ್:–** ಮಾನ್ಯ ಸಭಾಪತಿಯವರೇ, ನಾನು ಬ್ಯಾಂಕ್ ಅಕೌಂಟ್‌ಗಳ ಬಗ್ಗೆ clarify ಮಾಡುತ್ತೇನೆ.

**ಶ್ರೀ ಎಂ.ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ನೋಡಿ ನಾನು ಸರ್ಕಾರದ ಗಮನವನು ಸೆಳೆಯುತ್ತಿದ್ದೇನೆ. ಸಂತ್ರಸ್ತರಿಗೆ ಪ್ರಾಮಾಣಿಕವಾಗಿ ಪರಿಹಾರ ಕೊಡಬೇಕೆಂದು ಅವರ ಮನಸ್ಸಿನಲ್ಲಿ ಇದೆ. ಆದರೆ, ನಾನು ಪರಿಹಾರ ತಲುಪಿಸುವಂತಹ ದಾರಿಯ ಬಗ್ಗೆ ಹೇಳುತ್ತಿದ್ದೇನೆ. ಅದನ್ನು ಸರಿಪಡಿಸಿ ಎಂದು ಹೇಳುತ್ತಿದ್ದೇನೆ.

**ಶ್ರೀ ಆರ್.ಧರ್ಮಸೇನ:–** ಮಾನ್ಯ ಸಭಾಪತಿಯವರೇ, ಆಡಳಿತ ಪಕ್ಷದವರು ನಾವು ಹೇಳುತ್ತಿರುವುದು ತಪ್ಪು ಎನ್ನುತ್ತಿದ್ದಾರೆ. ಈಗ ನಾವು ಹೇಳುತ್ತಿರುವುದು ಸುಳ್ಳು ಎನ್ನುವುದಾದರೆ, ನಾಳೆ ಅವರು ಉತ್ತರವನ್ನು ನೀಡಲಿ. ಅದು ಇಡೀ ರಾಜ್ಯದ ಎಲ್ಲಾ ಜನರಿಗೂ ಸಹ ಗೊತ್ತಾಗುತ್ತದೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು):–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಹೇಳುತ್ತಿರುವುದನ್ನು ನಾವು ಸುಳ್ಳು ಎಂದು ಹೇಳುತ್ತಿಲ್ಲ.

**ಸಭಾಪತಿಯವರು:–** ಮಾನ್ಯ ಸಭಾನಾಯಕರೇ ದಯಮಾಡಿ ಕುಳಿತುಕೊಳ್ಳಿ.

**ಶ್ರೀ ಎಂ.ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ಈಗ ಸುಮಾರು ಶಾಲೆ ಮತ್ತು ಅಂಗನವಾಡಿ ಕೇಂದ್ರಗಳು ನೀರಿನಲ್ಲಿ ಕೊಚ್ಚಿಕೊಂಡು ಹೋಗಿವೆ. ವಿದ್ಯಾರ್ಥಿಗಳಿಗೆ ಪಾಠ ಮಾಡುವುದಕ್ಕೆ ಪುಸ್ತಕಗಳಿಲ್ಲ ಮತ್ತು ಅವರಿಗೆ ಬ್ಯಾಗುಗಳಿಲ್ಲ. ಎಲ್ಲವೂ ಸಹ ನೀರಿನಲ್ಲಿ ಕೊಚ್ಚಿ ಹೋಗಿವೆ. ಅದಕ್ಕೆ ಮಾನ್ಯ ಎನ್.ರವಿಕುಮಾರ್‌ರವರು ಉತ್ತರವನ್ನು ಕೊಟ್ಟಿದ್ದಾರೆ. ಅದೇನೆಂದರೆ; ನಮ್ಮ ಸರ್ಕಾರ ಒಂದು ಕಾನೂನು ಮಾಡಿದೆ, ಅದಕ್ಕೆ ನಮ್ಮ ಶಿಕ್ಷಣ ಮಂತ್ರಿಗಳಿಗೆ ಧನ್ಯವಾದವನ್ನು ಹೇಳುತ್ತೇವೆಂದು ಹೇಳಿದ್ದಾರೆ. ಯಾವುದೇ ಒಬ್ಬ ವಿದ್ಯಾರ್ಥಿ ಬೇರೆ ಶಾಲೆಗಳಿಗೆ ಸೇರಿಕೊಳ್ಳುವ ಸಮಯದಲ್ಲಿ ಯಾರೂ ಸಹ ವರ್ಗಾವಣೆ ಪತ್ರಗಳನ್ನು ಕೇಳಬಾರದು ಎಂದು. ಸ್ವಾಮಿ, ಅಲ್ಲಿ ಶಾಲೆಗಳು ಇದ್ದರೆ ತಾನೇ ಅವರು ಬೇರೆ ಶಾಲೆಗಳಿಗೆ ಸೇರುವುದು. ಅವರು ಶಾಲೆಗಳಿಗೆ ಹೋಗಬೇಕಾದರೆ ಸುಮಾರು 10 ರಿಂದ 15 ಕಿಲೋಮೀಟರ್ ಹೋಗಬೇಕು. ಏಕೆಂದರೆ ನೆರೆಯಲ್ಲಿ ಶಾಲೆಗಳು ಕೊಚ್ಚಿಕೊಂಡು ಹೋಗಿವೆ. ಈಗ ವಿದ್ಯಾರ್ಥಿಗಳು ಯಾವ ಶಾಲೆಗೆ ಮತ್ತೆ ಮರು ದಾಖಲಾಗುತ್ತಾರೆ. ಮಾನ್ಯ ಸದಸ್ಯರು ಯಾವುದಕ್ಕೆ

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಉತ್ತರವನ್ನು ಕೊಡುತ್ತಾರೆ. ದಯಮಾಡಿ ಮಕ್ಕಳು ಯಾವ ಯಾವ ಗ್ರಾಮದ ಶಾಲೆಗಳಲ್ಲಿ ಓದುತ್ತಿದ್ದರು ಮತ್ತು ಯಾವ ಶಾಲೆಗಳು ಕೊಚ್ಚಿಕೊಂಡು ಹೋಗಿವೆ. ಅಲ್ಲಿಯೇ ಅವರಿಗೆ ಶಿಕ್ಷಣ ಕೊಡುವುದನ್ನು ಪ್ರಾರಂಭ ಮಾಡಬೇಕು. ಆ ರೀತಿಯ ವ್ಯವಸ್ಥೆ ಮಾಡಿದರೆ ಅವರು ಬೇರೆ ಶಾಲೆಗೆ ಹೋಗುವುದಕ್ಕೆ ವರ್ಗಾವಣೆ ಪತ್ರದ ಅಗತ್ಯತೆಯೇ ಬರುವುದಿಲ್ಲ. ಇದನ್ನು ಅವರು ಅರ್ಥ ಮಾಡಿಕೊಳ್ಳಲಿ.

**(ಮುಂದು. . .)**

(181) 11.10.2019-07.50-LL-BNS

ಸಭಾಪತಿಯವರ ಉಪಸ್ಥಿತಿ

ಶ್ರೀ ಎಂ. ನಾರಾಯಣಸ್ವಾಮಿ(ಮುಂದುವರೆದಿದ್ದು...)
ಆ ರೀತಿ ಉತ್ತರ ಕೊಡುವುದಕ್ಕೆ ಹೋಗಬೇಡಿ.

**ಶ್ರೀ ಎನ್. ರವಿಕುಮಾರ್:–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಹೇಳುತ್ತಿರುವಂತಹ ವಿದ್ಯಾರ್ಥಿಗಳ ಹೆಸರುಗಳನ್ನು ನಮಗೆ ಕೊಡಲಿ. ಅಂತಹ ವಿದ್ಯಾರ್ಥಿಗಳು ವರ್ಗಾವಣೆ ಪತ್ರ(ಟಿ.ಸಿ.) ಅಲ್ಲದೇ ಯಾವುದೇ ಶುಲ್ಕ ಕೂಡ ಕೊಡಬೇಕಾಗಿರುವುದಿಲ್ಲ.

**ಶ್ರೀ ಎಂ. ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ಆ ವಿದ್ಯಾರ್ಥಿ ಯಾವ ಶಾಲೆಗೆ ಹೋಗುತ್ತಾನೆ. ಏಕೆಂದರೆ, ಅಲ್ಲಿ ಶಾಲೆಗಳೇ ಇಲ್ಲ.

**ಶ್ರೀ ಎನ್. ರವಿಕುಮಾರ್:–** ಮಾನ್ಯ ಸಭಾಪತಿಯವರೇ, ಎಲ್ಲಿ ಶಾಲೆಗಳು ಇಲ್ಲವೆಂಬ ಮಾಹಿತಿಯನ್ನು ಮಾನ್ಯ ಸದಸ್ಯರು ಸರ್ಕಾರಕ್ಕೆ ಹೇಳಲಿ. ಸುಮ್ಮನೆ ಏನೇನೋ ಮಾತನಾಡುವುದು ಬೇಡ.

**ಶ್ರೀ ಎಂ. ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ನಾನು ಸುಮ್ಮನೆ ಏನೇನೋ ಮಾತನಾಡುತ್ತಿಲ್ಲ.

**(ಗೊಂದಲ)**

**ಶ್ರೀ ಆರ್. ಧರ್ಮಸೇನ:–** ಮಾನ್ಯ ಸಭಾಪತಿಯವರೇ...

**(ಗೊಂದಲ)**

**ಶ್ರೀ ಎಂ. ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ಕರ್ನಾಟಕ ರಾಜ್ಯ ಕಾಂಗ್ರೆಸ್ ಸಮಿತಿ ವತಿಯಿಂದ ಒಟ್ಟು 8 ಸಮಿತಿಗಳ ಮಾಡಿ, ಆ ಸಮಿತಿಗಳು ಖುದ್ದಾಗಿ ಪ್ರವಾಹ ಪೀಡಿತ ಪ್ರದೇಶಗಳಿಗೆ ಭೇಟಿ ನೀಡಿ ಪರಿಶೀಲನೆ ಮಾಡಿ ವರದಿ ಕೊಟ್ಟಿದ್ದೇವೆ.

**(ಗೊಂದಲ)**

**ಶ್ರೀ ಎನ್. ರವಿಕುಮಾರ್:–** ಮಾನ್ಯ ಸಭಾಪತಿಯವರೇ, ಆ ಶಾಲೆಗಳು ಪ್ರವಾಹದಿಂದ ಕೊಚ್ಚಿಕೊಂಡು ಹೋಗಿವೆ ಎಂಬ ಮಾತನ್ನು ಖಂಡಿತವಾಗಿ ಒಪ್ಪುವುದಕ್ಕೆ ಸಾಧ್ಯವಿಲ್ಲ.

**(ಗೊಂದಲ)**

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಶ್ರೀ ಎಂ. ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ಇಂತಹ ಒಂದು ಗಂಭೀರ ಪರಿಸ್ಥಿತಿಯಲ್ಲಿ ಸರ್ಕಾರ ಸ್ಪಂದನೆ ಮಾಡುವುದಕ್ಕಿಂತ ಮುಂಚಿತವಾಗಿ ಕರ್ನಾಟಕ ರಾಜ್ಯದ ಜನತೆ ಅಖಂಡ ಕರ್ನಾಟಕವೆಂದು ಯೋಚನೆ ಮಾಡಿದರು. ಉತ್ತರ ಕರ್ನಾಟಕ, ದಕ್ಷಿಣ ಕರ್ನಾಟಕ, ಕರಾವಳಿ ಕರ್ನಾಟಕ, ಬಾಂಬೆ–ಹೈದರಾಬಾದ್ ಕರ್ನಾಟಕವೆಂದು ಭೇದ–ಭಾವ ಮಾಡಲಿಲ್ಲ.

**ಶ್ರೀ ಸಿ.ಸಿ. ಪಾಟೀಲ್(ಗಣಿ ಮತ್ತು ಭೂವಿಜ್ಞಾನ ಸಚಿವರು):–** ಮಾನ್ಯ ಸಭಾಪತಿಯವರೇ, ಅವರಿಗೆ ಇದ್ದಂತಹ ದೊಡ್ಡ ಮನಸ್ಸು ಈ ಸದನದ ಸದಸ್ಯರಿಗಿಲ್ಲ.

**ಸಭಾಪತಿಯವರು:–** ಮಾನ್ಯ ಸಚಿವರೇ, ಇದು ಸರಿಯಲ್ಲ. ತಮಗೆ ಬೇಕಾದಾಗ ತಾವು ಮಾತನಾಡಲು ಆಗುವುದಿಲ್ಲ. ಮೊದಲು ಅವರು ಮಾತನಾಡಲಿ.

**ಶ್ರೀ ಎಂ. ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ರಾಜ್ಯದ ಜನ ನೆರೆ ಸಂತ್ರಸ್ತರಿಗೆ ತಮ್ಮ ಕೈಲಾದ ಮಟ್ಟಿಗೆ ಪರಿಹಾರ ಕೊಡಬೇಕೆಂದು, ನೂರಾರು ಲಾರಿಗಳಲ್ಲಿ ಲೋಡುಗಟ್ಟಲೆ ಪರಿಹಾರ ಸಾಮಗ್ರಿಗಳನ್ನು ತೆಗೆದುಕೊಂಡು ಹೋಗಿ ಕೊಟ್ಟರು. ಆ ರೀತಿ ಪರಿಹಾರ ಕೊಟ್ಟಂತಹ ಜನರಿಗೆ ಇವೊತ್ತಿನ ದಿವಸ ನಾನು ಕೋಟಿ ಕೋಟಿ ನಮಸ್ಕಾರ ಹೇಳುವುದಕ್ಕೆ ನಾನು ಇಚ್ಛೆಪಡುತ್ತೇನೆ.

**(ಗೊಂದಲ)**

**ಸಭಾಪತಿಯವರು:–** ಮಾನ್ಯ ಸಚಿವರೇ, ಸರ್ಕಾರದಿಂದ ಉತ್ತರ ಕೊಡುವಾಗ ತಾವು ತಮ್ಮ ಉತ್ತರವನ್ನು ಹೇಳಬಹುದಾಗಿರುತ್ತದೆ.

**ಶ್ರೀ ಎಂ. ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಈ ಗಂಭೀರವಾದ ವಿಷಯವನ್ನು ಕೇಳಿ ಅರ್ಥ ಮಾಡಿಕೊಳ್ಳಬೇಕು. ಇವೊತ್ತಿನ ದಿವಸ ಊರಿನ ಒಬ್ಬ ಪಟೇಲ, ಗೌಡ ತಮ್ಮ ಊರಿನಲ್ಲಿ ಉತ್ತಮವಾದ ಜೀವನವನ್ನು ಮಾಡುತ್ತಿದ್ದರು. ಆದರೆ, ಈ ನೆರೆಯಿಂದಾಗಿ ತಮ್ಮ ಜೀವನವನ್ನು ಕಳೆದುಕೊಂಡರು. ಇದರಿಂದಾಗಿ, ಅವರು ಗಂಜಿ ಕೇಂದ್ರದಲ್ಲಿ ಆಶ್ರಯ ಪಡೆದರು. ಆದರೆ, ಆ ಗಂಜಿ ಕೇಂದ್ರದಲ್ಲಿ ಮನೆಯ ಮಾಲೀಕ ಮತ್ತು ಆ ಮನೆಯಲ್ಲಿ ಕೂಲಿ ಮಾಡುವವನು ಸಹ ಆಶ್ರಯ ಪಡೆದಿದ್ದನು. ನಾವು ನೀಡುತ್ತಿದ್ದ ಪರಿಹಾರ ಸಾಮಗ್ರಿಗಳನ್ನು ಆ ಶ್ರೀಮಂತ ಭಿಕ್ಷೆ ಬೇಡುವ ರೀತಿಯಲ್ಲಿ ಪಡೆಯುತ್ತಿದ್ದನು. ಅವನ ಪಕ್ಕದಲ್ಲಿ ಆ ಶ್ರೀಮಂತನ ಮನೆಯ ಕೂಲಿಯವನು ಸಹ ಅದೇ ರೀತಿಯಲ್ಲಿ ಪರಿಹಾರ ಸಾಮಗ್ರಿ ಪಡೆಯುತ್ತಿದ್ದನು. ಕೂಲಿಯವನಿಗೂ, ಶ್ರೀಮಂತನಿಗೂ ಯಾವುದೇ ರೀತಿಯ ಬೇಧ–ಭಾವವಿಲ್ಲದೇ, ಎಲ್ಲವನ್ನೂ ಕಳೆದುಕೊಂಡು ಅವರೆಲ್ಲರೂ ಕೂಡ ಅದೇ ಗಂಜಿ ಕೇಂದ್ರದಲ್ಲಿ ಆಶ್ರಯ ಪಡೆದಿದ್ದರು. ಇದು ಪ್ರವಾಹ ಪೀಡಿತ ಪ್ರದೇಶದ ವಾಸ್ತವ ಪರಿಸ್ಥಿತಿಯಾಗಿದೆ. ಒಬ್ಬ ಹೆಣ್ಣುಮಗಳು ತನ್ನ ಮನೆ–ಮಠ ಕಳೆದುಕೊಂಡು ಗಂಜಿ ಕೇಂದ್ರಕ್ಕೆ ಬಂದಿದ್ದಾಳೆ. ಆದರೆ, ಅಲ್ಲಿ ಗಂಜಿ ಕೇಂದ್ರ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಇಲ್ಲ. ಅದರಿಂದಾಗಿ, ಆಕೆ ಯಾವುದೋ ರಸ್ತೆ ಪಕ್ಕದಲ್ಲಿರುವ ಒಂದು ಟೆಂಟ್‌ನಲ್ಲಿ ಇದ್ದಾಳೆ. ಆಕೆ ಸ್ನಾನ ಮಾಡಿ ಒಂದು ವಾರವಾಗಿದೆ. ಆಕೆ ಸ್ನಾನ ಮಾಡಬೇಕಾದರೆ, ಆಕೆ ಉಟ್ಟಿರುವಂತಹ ಬಟ್ಟೆಯನ್ನು ಬಿಚ್ಚಿ...

**ಸಭಾಪತಿಯವರು:–** ಮಾನ್ಯ ನಾರಾಯಣಸ್ವಾಮಿಯವರೇ, ತಾವು ಚೆನ್ನಾಗಿ ಮಾತನಾಡುತ್ತಿದ್ದೀರಿ. ಆದರೆ, ಇಲ್ಲಿ ಸಮಯ ಇಲ್ಲ.

**ಶ್ರೀ ಎಂ. ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ಸಮಯ ಇಲ್ಲವೆಂದು ಹೇಳಿದರೆ ನಾವು ಮಾತನಾಡುವುದರಲ್ಲಿ ಅರ್ಥವೇ ಇರುವುದಿಲ್ಲ.

**ಸಭಾಪತಿಯವರು:–** ಏಕೆಂದರೆ, ಇಲ್ಲಿ ಎಲ್ಲಾ ಸದಸ್ಯರೂ ಮಾತನಾಡಬೇಕು.

**ಶ್ರೀ ಎಂ. ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ಹೌದು. ಎಲ್ಲರೂ ಮಾತನಾಡಬೇಕು. ನಾನು ಬೇಡವೆಂದು ಹೇಳಲಿಲ್ಲ. ಏಕೆಂದರೆ, ನಾನು ಗಂಭೀರವಾದಂತಹ ಸಮಸ್ಯೆಗಳ ಬಗ್ಗೆ ನನ್ನ ನೋವನ್ನು ಹೇಳಿಕೊಳ್ಳುತ್ತಿದ್ದೇನೆ. ತಾವು ಒಂದು ವಿಷಯವನ್ನು ಅರ್ಥ ಮಾಡಿಕೊಳ್ಳಬೇಕು. ಆ ಹೆಣ್ಣುಮಗು ಸ್ನಾನ ಮಾಡಬೇಕಾದರೆ... ದಯಮಾಡಿ ಎಲ್ಲರೂ ಕೇಳಿಸಿಕೊಳ್ಳಬೇಕು. ಆ ಹೆಣ್ಣು ಸ್ನಾನ ಮಾಡಬೇಕಾದರೆ, ಉಟ್ಟಿರುವಂತಹ ಒಂದು ಸೀರೆಯನ್ನು ಬಿಚ್ಚಿ ಸ್ನಾನ ಮಾಡಿ, ಪುನಃ ಅದೇ ಬಟ್ಟೆಯನ್ನು ಒಗೆದು, ಒಣಗಿಸಿ ಹಾಕಿಕೊಳ್ಳಬೇಕು. ಪ್ರವಾಹ ಪೀಡಿತ ಪ್ರದೇಶಗಳಲ್ಲಿ ಇಂತಹ ಪರಿಸ್ಥಿತಿ ಇದೆ. ಅದಕ್ಕೆ ನಾವು ಇವೊತ್ತಿನ ದಿವಸ ಯಾವರೀತಿ ಸ್ಪಂದನೆ ಮಾಡುತ್ತಿದ್ದೇವೆ. ಕೇಂದ್ರ ಸರ್ಕಾರ ಮತ್ತು ಶ್ರೀ ನರೇಂದ್ರ ಮೋದಿಯವರ ಬಗ್ಗೆ ಮಾತನಾಡಿದರೆ ಸರ್ಕಾರದವರಿಗೆ ಕೋಪ ಬರುತ್ತದೆ. ಆದರೆ, ಅವರು ಪ್ರಾಮಾಣಿಕವಾಗಿ ಒಪ್ಪಿಕೊಳ್ಳಬೇಕು. ರಾಷ್ಟ್ರದ ಪ್ರಧಾನ ಮಂತ್ರಿಯವರು ಇಡೀ ರಾಷ್ಟ್ರದಲ್ಲಿ ನೆರೆಯಾಗುತ್ತಿದ್ದರೂ ಸಹ, ರಾಷ್ಟ್ರೀಯ ವಿಕೋಪವೆಂದು ಘೋಷಣೆ ಮಾಡುವುದಕ್ಕೆ ಆಗಲಿಲ್ಲ. ಆದರೆ, ಈ ಹಿಂದೆ ಯುಪಿಎ ಸರ್ಕಾರದ ಪ್ರಧಾನ ಮಂತ್ರಿಗಳು ನೆರೆ ಪೀಡಿತ ಪ್ರದೇಶಗಳಲ್ಲಿ ವೈಮಾನಿಕ ಸಮೀಕ್ಷೆ ಮಾಡಿ, 1600 ಕೋಟಿ ರೂಪಾಯಿ ಪರಿಹಾರ ಕೊಟ್ಟರು ಎಂದು ಹೇಳಿದರೆ ಸರ್ಕಾರದವರಿಗೆ ಕೋಪ ಬರುತ್ತದೆ.

ಇವೊತ್ತಿನ ದಿವಸ ನೆರೆ ಹಾವಳಿಯಾದ 65 ದಿವಸದ ನಂತರ ಕೇಂದ್ರ ಸಚಿವರಾದ ಶ್ರೀ ಅಮಿತ್ ಶಾರವರು ಮತ್ತು ಶ್ರೀಮತಿ ನಿರ್ಮಲಾ ಸೀತರಾಮನ್‌ರವರು ವೈಮಾನಿಕ ಸಮೀಕ್ಷೆ ಮಾಡಿಕೊಂಡು ಹೋದರು. ಆ ಹೆಣ್ಣುಮಗಳನ್ನು ಕರ್ನಾಟಕ ರಾಜ್ಯದಿಂದ ಸಂಸತ್ತಿಗೆ ಕಳುಹಿಸಿಕೊಟ್ಟಿದ್ದಾರೆ, ಆದರೆ, ಆಕೆಗೆ ಕರ್ನಾಟಕದ ಬಗ್ಗೆ ಕಿಂಚಿತ್ತು ಕಾಳಜಿ ಇಲ್ಲ. 65 ದಿನಗಳಾದ ನಂತರ 1200 ಕೋಟಿ ರೂಪಾಯಿ ಪರಿಹಾರವನ್ನು ಬಿಡುಗಡೆ ಮಾಡಿದ್ದಾರೆ. ಅದು ಎಲ್ಲಿಗೆ ಸಾಕಾಗುತ್ತದೆ. ಇವೊತ್ತಿನ ದಿವಸ 1 ಲಕ್ಷ ಕೋಟಿಗಿಂತಲೂ ಹೆಚ್ಚು ಹಾನಿಯಾಗಿದೆ. ಅದನ್ನು ಪ್ರಾಮಾಣಿಕವಾಗಿ ನಾವೆಲ್ಲರೂ ಒಪ್ಪಿಕೊಳ್ಳಲೇಬೇಕಾಗಿದೆ. ಆದರೆ, ಸರ್ಕಾರ 38.50 ಸಾವಿರ ಕೋಟಿ ರೂಪಾಯಿ ನೆರೆ ಹಾನಿಯಾಗಿದೆ ಎಂದು ವರದಿ ಕಳುಹಿಸಿಕೊಟ್ಟಿದೆ. ಅದರಲ್ಲಿ ಶೇಕಡ 3 ರಷ್ಟು ಅಂದರೆ 1200

“ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

ಕೋಟಿ ರೂಪಾಯಿ ಪರಿಹಾರ ಹಣವನ್ನು ಬಿಡುಗಡೆ ಮಾಡಿದ್ದಾರೆ. ಇದು ಸಾಕೇ? ಇದು ಸರ್ಕಾರಕ್ಕೆ ತೃಪ್ತಿಯಾಗಿದೆಯೇ?

**ಡಾ॥ ತೇಜಸ್ವಿನಿ ಗೌಡ:–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಶ್ರೀಮತಿ ನಿರ್ಮಲಾ ಸೀತರಾಮನ್‌ರವರ ಹೆಸರು ಉಲ್ಲೇಖ ಮಾಡಿದ್ದಾರೆ. ಆದರೆ, ಅವರು ಈ ಸದನದಲ್ಲಿ ಇಲ್ಲ. ದಯಮಾಡಿ, ತಾವು ಈ ವಿಷಯವನ್ನು ಮಾನ್ಯ ಸದಸ್ಯರಿಗೆ ತಿಳಿಸಬೇಕು.

**ಸಭಾಪತಿಯವರು:–** ಆಯಿತು.

**(ಗೊಂದಲ)**

**ಶ್ರೀ ಎಂ. ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ಇವೊತ್ತಿನ ದಿವಸ ಕೇಂದ್ರ ಸರ್ಕಾರ ಕೊಟ್ಟಿರುವುದು ಶೇಕಡ 3 ರಷ್ಟು ಪರಿಹಾರ. ಅದನ್ನು ದೊಡ್ಡದಾಗಿ ಬಿಂಬಿಸುವುದಕ್ಕೆ ಹೋಗಬಾರದು.

**(ಗೊಂದಲ)**

**ಡಾ॥ ತೇಜಸ್ವಿನಿ ಗೌಡ:–** ಮಾನ್ಯ ಸಭಾಪತಿಯವರೇ, ಶ್ರೀಮತಿ ನಿರ್ಮಲಾ ಸೀತಾರಾಮನ್‌ರವರ ಹೆಸರು ಉಲ್ಲೇಖ ಮಾಡಿರುವುದನ್ನು ಕಡತದಿಂದ ತೆಗೆದು ಹಾಕಬೇಕು. ಏಕೆಂದರೆ, ನಾವೆಲ್ಲರೂ ವಿದ್ಯಾವಂತರಿದ್ದೇವೆ.

**(ಗೊಂದಲ)**

**ಶ್ರೀ ಸಿ.ಸಿ. ಪಾಟೀಲ್:–** ಮಾನ್ಯ ಸಭಾಪತಿಯವರೇ, ತಾವು ನಾಳೆಗೆ ಅನುಮತಿ ನೀಡಿದರೆ, ಯಾವ್ಯಾವ ವರ್ಷದಲ್ಲಿ ಎಷ್ಟೆಷ್ಟು ನೆರೆ ಹಾನಿಯಾಗಿದೆ, ಆ ಸಂದರ್ಭದಲ್ಲಿ ಕೇಂದ್ರ ಸರ್ಕಾರದಿಂದ ಶೇಕಡ ಎಷ್ಟು ಪರಿಹಾರ ಹಣವನ್ನು ನೀಡಲಾಗಿದೆ ಎಂಬ ಸಂಪೂರ್ಣ ಇತಿಹಾಸವನ್ನು ಈ ಸದನದ ಮುಂದೆ ಇಡುತ್ತೇವೆ.

**(ಗೊಂದಲ)**

**ಶ್ರೀ ಎಂ. ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಆವೊತ್ತಿನ ದಿವಸ ಏನಾಯಿತು, ಇವೊತ್ತಿನ ದಿವಸ ಏನಾಯಿತು ಎಂಬುದನ್ನು ತುಲನೆ ಮಾಡಬಾರದು. ಆದರೆ, ಇವೊತ್ತಿನ ದಿವಸ ಆಗಿರುವಂತಹ ಪರಿಸ್ಥಿತಿಗೆ ಯಾವ ರೀತಿ ಸ್ಪಂದಿಸಿಬೇಕಾಗಿದೆ ಎಂಬ ಬಗ್ಗೆ ಯೋಚನೆ ಮಾಡಬೇಕು. ನನಗಿರುವಂತಹ ಮಾಹಿತಿ ಪ್ರಕಾರ ಮೊನ್ನೆಯ ದಿವಸ ನಡೆದಂತಹ ಸಚಿವ ಸಂಪುಟ ಸಭೆಯಲ್ಲಿ ಮುಖ್ಯಮಂತ್ರಿಗಳ ಆದಿಯಾಗಿ ಎಲ್ಲಾ ಮಂತ್ರಿಗಳು ಕೂಡ ಕೇಂದ್ರ ಸರ್ಕಾರದ ವಿರುದ್ಧ ಬೇಸರವನ್ನು ವ್ಯಕ್ತಪಡಿಸಿದ್ದಾರೆ. ಸಂಪುಟ ಸಭೆಯಲ್ಲಿ ಈ ರೀತಿ ...

**(ಗೊಂದಲ)**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಈ ರೀತಿ ಮಾತನಾಡಬಾರದು.

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**(ಗೊಂದಲ)**

**ಶ್ರೀ ಸಿ.ಸಿ. ಪಾಟೀಲ್:–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಇದನ್ನೆಲ್ಲಾ ಹೇಳಬಾರದು. ಈ ರೀತಿ ಹೇಳುವುದಕ್ಕೆ ಅವರು ಯಾರು?

**(ಗೊಂದಲ)**

**ಶ್ರೀ ಎಂ. ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ನಮ್ಮ ಮಾಹಿತಿ ಪ್ರಕಾರ...

**(ಗೊಂದಲ)**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ಸಚಿವ ಸಂಪುಟದಲ್ಲಿ ಈ ರೀತಿ ಆಯಿತೆಂದು ನಾವು ಇವರಿಗೆ ಹೇಳಿದ್ದೇವೆಯೇ?

**(ಗೊಂದಲ)**

**ಶ್ರೀ ಸಿ.ಸಿ. ಪಾಟೀಲ್:–** ಮಾನ್ಯ ಸಭಾಪತಿಯವರೇ, let the Member control his speech. ಆವೇಶದೊಳಗೆ ಏನೇನೋ ಮಾತನಾಡಿ ಸಂದೇಶ ತಪ್ಪು ಹೋಗಬಾರದು. ಇಲ್ಲಿ ಮಾಧ್ಯಮ ಇದೆ. ನಮ್ಮ ಸಚಿವ ಸಂಪುಟದಲ್ಲಿ ನಡೆದ ವಿಷಯ ಇವರಿಗೆ ಹೇಗೆ ಗೊತ್ತಾಗುತ್ತದೆ?

**ಶ್ರೀ ಎಂ. ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ನನ್ನ ಮಾಹಿತಿ ಪ್ರಕಾರ...

**(ಗೊಂದಲ)**

**ಶ್ರೀ ಸಿ.ಸಿ. ಪಾಟೀಲ್:–** ಮಾನ್ಯ ಸಭಾಪತಿಯವರೇ, ಏನು ಇವರ ಮಾಹಿತಿ?

**(ಗೊಂದಲ)**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ಇವರ ಮನಸ್ಸೇ ಇವರಿಗೆ ಮಾಹಿತಿಯೇ? ಆರೋಪ ಮಾಡುವುದಕ್ಕೆ ಏನು ಬೇಕಾದರೂ ಹೇಳಬಹುದೇ? ದಯಮಾಡಿ, ತಾವು ಅದನ್ನು ಕಡತದಿಂದ ತೆಗೆದು ಹಾಕಬೇಕು.

**(ಗೊಂದಲ)**

**ಶ್ರೀ ಸಿ.ಸಿ. ಪಾಟೀಲ್:–** ಮಾನ್ಯ ಸಭಾಪತಿಯವರೇ, ಇದನ್ನು ತಾವು ಕಡತದಿಂದ ತೆಗೆಸಬೇಕು.

**(ಗೊಂದಲ)**

**ಶ್ರೀ ಎಂ. ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ಸಚಿವ ಸಂಪುಟದಲ್ಲಿ ಈ ರೀತಿ ಆಗಿಲ್ಲವೆಂದು ಅವರು ಹೇಳಲಿ. ನಾನು ನನ್ನ ಮಾತನ್ನು ವಾಪಸ್ಸು ತೆಗೆದುಕೊಳ್ಳುತ್ತೇನೆ. ಇರುವಂತಹ ಸತ್ಯವನ್ನು ಒಪ್ಪಿಕೊಳ್ಳಬೇಕು.

**(ಗೊಂದಲ)**

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಈಗ ಆ ಮಾತನ್ನು ವಾಪಸ್ಸು ತೆಗೆದುಕೊಳ್ಳುವುದಲ್ಲ. ಏತಕ್ಕೆ ಆ ಮಾತನ್ನು ಹೇಳಿದರು?

**(ಗೊಂದಲ)**

**ಶ್ರೀ ಸಿ.ಸಿ. ಪಾಟೀಲ್:–** ಮಾನ್ಯ ಸಭಾಪತಿಯವರೇ, ಅದನ್ನು ಕಡತದಿಂದ ತೆಗೆದು ಹಾಕಿಸಬೇಕು.

**(ಗೊಂದಲ)**

**ಸಭಾಪತಿಯವರು:–** ನಾನು ನೋಡುತ್ತೇನೆ.

**(ಗೊಂದಲ)**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ಸಚಿವ ಸಂಪುಟದಲ್ಲಿ ಮಾನ್ಯ ಮುಖ್ಯಮಂತ್ರಿಗಳ ಆದಿಯಾಗಿ ಎಲ್ಲಾ ಸಚಿವರೂ ಕೇಂದ್ರ ಸರ್ಕಾರದ ವಿರುದ್ಧ ಆಕ್ರೋಶ ಮಾಡಿದರೆಂಬ ಮಾತನ್ನು ಕಡತದಿಂದ ತೆಗೆಸಬೇಕು.

**ಸಭಾಪತಿಯವರು:–** ಆಯಿತು ನಾನು ನೋಡುತ್ತೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ಆ ಮಾತನ್ನು ತೆಗೆಯಲೇಬೇಕಾಗುತ್ತದೆ. ಅದರಲ್ಲಿ ಮೊತ್ತ ಇದೆ.

**ಸಭಾಪತಿಯವರು:–** ಆಯಿತು ನಾನು ನೋಡುತ್ತೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ತಾವು ಆ ರೀತಿ ಹೇಳಬೇಕಾಗುತ್ತದೆ. ಏಕೆಂದರೆ...

**ಸಭಾಪತಿಯವರು:–** ನಾನು ಅದನ್ನು ನೋಡುತ್ತೇನೆಂದು ಹೇಳಿದ್ದೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ಸಚಿವ ಸಂಪುಟದಲ್ಲಿ ಕುಳಿತುಕೊಂಡು ಕೇಂದ್ರ ಸರ್ಕಾರದ ವಿರುದ್ಧ ಆಕ್ರೋಶ ಮಾಡಿದರೆಂಬ ಮಾತನ್ನು ಸದಸ್ಯರೊಬ್ಬರು ಸದನದಲ್ಲಿ ಹೇಳುವಾಗ ಅದು ಕಡತದಲ್ಲಿ ದಾಖಲಾದರೆ ಸರಿಹೋಗುತ್ತದೆಯೇ? ಆದುದರಿಂದ, ದಯಮಾಡಿ, ಅದನ್ನು ಕಡತದಿಂದ ತೆಗೆಸಬೇಕಾಗುತ್ತದೆ.

**(ಗೊಂದಲ)**

**ಶ್ರೀ ಎಂ. ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ನಾವು ಬಹಳಷ್ಟು ನೊಂದು, ನಿರಾಶ್ರಿತರ ಮೇಲಿನ ಕಾಳಜಿಯಿಂದ ಈ ಮಾತನ್ನು ಹೇಳುತ್ತಿದ್ದೇವೆ. ದಯಮಾಡಿ ಸರ್ಕಾರ ಇದನ್ನು ಅರ್ಥ ಮಾಡಿಕೊಳ್ಳಲಿ.

**(ಗೊಂದಲ)**

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಸಭಾಪತಿಯವರು:–** ಆ ಮಾತನ್ನು ಕಡತದಿಂದ ತೆಗೆಯಬೇಕಾದರೆ parliamentary words ಅನ್ನು ತೆಗೆಯುವುದಕ್ಕೆ ಆಗುವುದಿಲ್ಲ.

**ಶ್ರೀ ಎಂ. ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ಕರ್ನಾಟಕ ರಾಜ್ಯಕ್ಕೆ ಆಗಿರುವಂತಹ ತೊಂದರೆಗಳನ್ನು ನಾವೆಲ್ಲರೂ ಒಪ್ಪಿಕೊಳ್ಳಲೇಬೇಕಾಗುತ್ತದೆ. ಕೇಂದ್ರ ಸರ್ಕಾರ ಯಾವುದೇ ಇರಲಿ. ಆದರೆ, ಅಲ್ಲಿಂದ ಹಣವನ್ನು ಯಾವರೀತಿ ತರಬೇಕೆಂದು ನಾವು ಯೋಚನೆ ಮಾಡಬೇಕು.

**(ಗೊಂದಲ)**

**ಶ್ರೀ ಎಸ್.ಆರ್. ಪಾಟೀಲ್(ವಿರೋಧ ಪಕ್ಷದ ನಾಯಕರು):–** ಮಾನ್ಯ ಸಭಾಪತಿಯವರೇ, ದಿನಾಂಕ:04.10.2019ರಂದು ವಿಜಯ ಕರ್ನಾಟಕ ದಿನಪತ್ರಿಕೆಯಲ್ಲಿ ***"ನೆರೆ ಪರಿಹಾರ ವಿಳಂಬಕ್ಕೆ ಸಭೆಯಲ್ಲಿ ಸಚಿವರ ಆಕ್ರೋಶ, ಕೇಂದ್ರದ ವಿರುದ್ಧವೇ ಸಂಪುಟ ಸಿಟ್ಟು"*** ಈ ರೀತಿ ದಿನಪತ್ರಿಕೆಯಲ್ಲಿ ವರದಿಯಾಗಿದೆ. ಅದನ್ನು ಮಾನ್ಯ ಸದಸ್ಯರು ಹೇಳಿದ್ದಾರೆ. ಇದು ತಮಗೆ ಬಿಟ್ಟ ವಿಚಾರ.

**(ಗೊಂದಲ)**

**ಶ್ರೀ ಎಂ. ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ಇಷ್ಟು ಮಾಹಿತಿ ಸಾಕೇ? ಅಥವಾ ಇನ್ನೂ ಏನಾದರೂ ಮಾಹಿತಿ ಬೇಕೇ?

**(ಗೊಂದಲ)**

**ಶ್ರೀ ಸಿ.ಸಿ. ಪಾಟೀಲ್:–** ಮಾನ್ಯ ಸಭಾಪತಿಯವರೇ, ಒಂದು ನಿಮಿಷ...

**(ಗೊಂದಲ)**

**ಸಭಾಪತಿಯವರು:–** ಮಾನ್ಯ ಸಚಿವರೇ, ಮಾನ್ಯ ಸದಸ್ಯರು ತಮ್ಮ ಮಾತನ್ನು ಮುಗಿಸುವುದಕ್ಕೆ ಅವಕಾಶ ಕೊಡಿ. ಈಗಾಗಲೇ 8 ಗಂಟೆ ಆಯಿತು.

**(ಗೊಂದಲ)**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ಮಾಜಿ ಪ್ರಧಾನಿ ಶ್ರೀ ಮನಮೋಹನ್ ಸಿಂಗ್‌ರವರ ನೇತೃತ್ವದ ಯುಪಿಎ ಸರ್ಕಾರದ ಅವಧಿಯಲ್ಲಿ 1600 ಕೋಟಿ ಬಿಡುಗಡೆ ಮಾಡಿದ್ದೇವೆಂದು ಮಾನ್ಯ ಸದಸ್ಯರು ಆಗಲೇ ಹೇಳಿದರು. ಆ ಸಮಯದಲ್ಲಿ ಪ್ರಥಮ ಕೇವಲ 500 ಕೋಟಿ ರೂಪಾಯಿ ಹಣವನ್ನು ಬಿಡುಗಡೆ ಮಾಡಿದ್ದರು. ಆದರೆ, ಈಗ ಕೇಂದ್ರ ಸರ್ಕಾರ 1200 ಕೋಟಿ ರೂಪಾಯಿ ಪರಿಹಾರ ಹಣವನ್ನು ಬಿಡುಗಡೆ ಮಾಡಿದೆ.

**(ಗೊಂದಲ)**

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಡಾ॥ ತೇಜಸ್ವಿನಿ ಗೌಡ:–** ಮಾನ್ಯ ಸಭಾಪತಿಯವರೇ, ದಿನಪತ್ರಿಕೆಯ ವರದಿಯನ್ನು ಒಂದು ದಾಖಲೆಯೆಂದು ಪರಿಗಣಿಸುತ್ತಾರೆಯೇ ಹೊರತು, ಅದು ಸಾಕ್ಷಿ ಎಂದು ಪರಿಗಣಿಸುವುದಿಲ್ಲ.

**(ಗೊಂದಲ)**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ಯುಪಿಎ ಸರ್ಕಾರದ ಅವಧಿಯಲ್ಲಿ ಡಾ॥ ಮನಮೋಹನ್ ಸಿಂಗ್‌ರವರು ಪ್ರಥಮ ಕಂತಿನಲ್ಲಿ ಕೇವಲ 500 ಕೋಟಿ ರೂಪಾಯಿಗಳ ಪರಿಹಾರ ಹಣವನ್ನು ಮಾತ್ರ ಬಿಡುಗಡೆ ಮಾಡಿದ್ದಾರೆ.

**(ಗೊಂದಲ)**

**ಶ್ರೀ ಎಸ್.ಆರ್. ಪಾಟೀಲ್:–** ಮಾನ್ಯ ಸಭಾಪತಿಯವರೇ, "ನೆರೆ ಪರಿಹಾರ ವಿಳಂಬಕ್ಕೆ ಸಭೆಯಲ್ಲಿ ಸಚಿವರ ಆಕ್ರೋಶ, ಕೇಂದ್ರದ ವಿರುದ್ಧವೇ ಸಂಪುಟ ಸಿಟ್ಟು" ಎಂದು ವರದಿಯಾಗಿದೆ.

**(ಗೊಂದಲ)**

**ಶ್ರೀ ಸಿ.ಸಿ. ಪಾಟೀಲ್:–** ಮಾನ್ಯ ಸಭಾಪತಿಯವರೇ, ದಿನಪತ್ರಿಕೆಯಲ್ಲಿ ಬಂದಿರುವುದೆಲ್ಲಾ ಸತ್ಯವೇ?

**(ಗೊಂದಲ)**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ಆ ಮಾತನ್ನು ಕಡತದಿಂದ ತೆಗೆಸಬೇಕೆಂದು ಕೋರಿದ್ದೇನೆ.

**(ಗೊಂದಲ)**

**ಶ್ರೀ ಸಿ.ಸಿ. ಪಾಟೀಲ್:–** ಮಾನ್ಯ ಸಭಾಪತಿಯವರೇ, ಮಾಧ್ಯಮದವರು ಊಹೆ ಮಾಡಿ ಕೂಡ ಆ ವರದಿ ಮಾಡಿರಬಹುದು. ಅದು ನನಗೆ ಗೊತ್ತಿಲ್ಲ. ಆದುದರಿಂದ, ಮಾನ್ಯ ಸಭಾಪತಿಯವರೇ, ಆ ಮಾತನ್ನು ದಯಮಾಡಿ ಕಡತದಿಂದ ತೆಗೆಸಬೇಕು.

**(ಗೊಂದಲ)**

**ಶ್ರೀ ಎಸ್.ಆರ್. ಪಾಟೀಲ್:–** ಮಾನ್ಯ ಸಭಾಪತಿಯವರೇ, ಕುಂಬಳಕಾಯಿ ಕಳ್ಳ ಎಂದರೆ ಹೆಗಲು ಮುಟ್ಟಿ ನೋಡಿಕೊಂಡಂತೆ ಆಯಿತು ಇದು.

**(ಗೊಂದಲ)**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ಸಚಿವ ಸಂಪುಟದಲ್ಲಿ ಕೇಂದ್ರ ಸರ್ಕಾರದ ವಿರುದ್ಧ ಯಾವುದೇ ಪ್ರಸ್ತಾಪಗಳು ಬಂದಿರುವುದಿಲ್ಲ. ಆದರೆ, ಬೇಡಿಕೆ ಇಡುವುದು ನಮ್ಮ ಹಕ್ಕು.

**(ಗೊಂದಲ)**

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಶ್ರೀ ಎಸ್.ಆರ್. ಪಾಟೀಲ್:–** ಮಾನ್ಯ ಸಭಾಪತಿಯವರೇ, 'guilty mind always pricks' ಎನ್ನುತ್ತಾರೆ. ನಾನು ಏನು ಹೇಳುತ್ತೇನೆಂದರೆ, now, you refer to this. . . . .

**(ಗೊಂದಲ)**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ವಿರೋಧ ಪಕ್ಷದ ಎಲ್ಲಾ ಉದಾಹರಣೆಗಳು...

**(ಗೊಂದಲ)**

ಡಾ॥ ಮನಮೋಹನ್ ಸಿಂಗ್‌ರವರು ಪ್ರಧಾನಿಯಾಗಿದ್ದಾಗ ನಮ್ಮ ರಾಜ್ಯಕ್ಕೆ ಪ್ರಥಮ ಕಂತಿನಲ್ಲಿ ಕೇವಲ 500 ಕೋಟಿ ರೂಪಾಯಿ ಪರಿಹಾರ ಹಣವನ್ನು ಬಿಡುಗಡೆ ಮಾಡಿದ್ದಾರೆ.

**(ಗೊಂದಲ)**

**ಶ್ರೀ ಎಂ. ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ಹಾಗಾದರೆ ಪತ್ರಿಕೆಯಲ್ಲಿ ಸುಳ್ಳು ವರದಿಯಾಗಿದೆಯೇ?

**(ಗೊಂದಲ)**

**ಶ್ರೀ ಎಸ್.ಆರ್. ಪಾಟೀಲ್:–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಪತ್ರಿಕಾ ವರದಿಯನ್ನು ಉಲ್ಲೇಖ ಮಾಡಿ ಹೇಳಿದ್ದಾರೆ. ಒಂದು ವೇಳೆ ಅದು ತಪ್ಪಾಗಿದ್ದರೆ, ಇಲ್ಲವೆಂದು ಹೇಳಿ.

**(ಗೊಂದಲ)**

**ಶ್ರೀ ಮರಿತಿಬ್ಬೇಗೌಡ(ಶಿಕ್ಷಕರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಮಾನ್ಯ ವಿರೋಧ ಪಕ್ಷದ ನಾಯಕರು ಈಗ ತಾನೆ, "ಇಂತಹ ದಿನ, ಇಂತಹ ದಿನಪತ್ರಿಕೆಯಲ್ಲಿ, ಈ ರೀತಿ ವರದಿಯಾಗಿದೆ, ಅದನ್ನು ಮಾನ್ಯ ನಾರಾಯಣಸ್ವಾಮಿಯವರು ಪ್ರಸ್ತಾಪ ಮಾಡಿದ್ದಾರೆ" ಎಂದು ಹೇಳಿದರು.

**ಶ್ರೀ ಸಿ.ಸಿ. ಪಾಟೀಲ್:–** ಮಾನ್ಯ ಸಭಾಪತಿಯವರೇ, ಅವರು ಪ್ರಸ್ತಾಪ ಮಾಡಿರುವುದಿಲ್ಲ. ಬದಲಾಗಿ, ನನ್ನ ಮಾಹಿತಿ ಪ್ರಕಾರ ಎಂದು ಹೇಳಿದ್ದಾರೆ.

**ಶ್ರೀ ಮರಿತಿಬ್ಬೇಗೌಡ:–** ಮಾನ್ಯ ಸಭಾಪತಿಯವರೇ, ಸರ್ಕಾರದವರು ಆ ದಿನಪತ್ರಿಕೆಯಲ್ಲಿ ಬಂದಿರುವ ವರದಿ ಸುಳ್ಳು ಎಂದು ಹೇಳಿಕೊಳ್ಳಬಹುದು. ಆದರೆ, ಪತ್ರಿಕೆಯಲ್ಲಿ ಆ ರೀತಿ ಬರಬೇಕಾದರೆ ಅದು ಚರ್ಚೆಯಾಗಿರಲೇಬೇಕೆಂದು ನಾವು ಮತ್ತು ಜನಸಾಮಾನ್ಯರು ಅರ್ಥ ಮಾಡಿಕೊಳ್ಳುವುದು. ಅದನ್ನು ಗೌರವಾನ್ವಿತ ಸದಸ್ಯರು ಇಲ್ಲಿ ಪ್ರಸ್ತಾಪ ಮಾಡಿದ್ದಾರೆ. ಆದುದರಿಂದ, ಸರ್ಕಾರದವರು ಇದರ ಬಗ್ಗೆ ಮನಸ್ಸಿಗೆ ನೋವು ಮಾಡಿಕೊಳ್ಳಬಾರದು. ಹಾಗಾದರೆ, ಇದೆಲ್ಲಾ ನಡೆದಿರುವಂಥದ್ದೇ ಆಗಿರುತ್ತದೆ. ಹಾಗಾಗಿ, ಇದು unparliamentary ಅಲ್ಲ.

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

(ಗೊಂದಲ)

**ಡಾ॥ ತೇಜಸ್ವಿನಿ ಗೌಡ:–** ಮಾನ್ಯ ಸಭಾಪತಿಯವರೇ, cabinet secrecy, cabinet meeting proceedings ಗೌಪ್ಯತೆಯಲ್ಲಿ ಬರುತ್ತದೆ. ಅದು ಪತ್ರಿಕೆಯಲ್ಲಿ ಹೇಗೆ ಬರುತ್ತದೆ? ಇಲ್ಲವಾದರೆ, ಸಚಿವ ಸಂಪುಟದ ಗೌಪ್ಯತೆ ಎಲ್ಲಿ ಬರುತ್ತದೆ?

(ಮುಂದುವರೆದಿದೆ...)

(182)11.10.2019/8.00/ವೈಎಲ್–ಬಿಎನ್ಎಸ್ (ಸಭಾಪತಿಯವರ ಉಪಸ್ಥಿತಿ)

**ಶ್ರೀ ಎಂ.ನಾರಾಯಣಸ್ವಾಮಿ(ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ನಾನು ಹೇಳುತ್ತಿರುವುದು ಸತ್ಯ. ಆದರೆ, ಆಡಳಿತ ಪಕ್ಷದವರು ಸತ್ಯವನ್ನು ಮರೆ ಮಾಚಿಸುತ್ತಿದ್ದಾರೆ. ಆದರೆ, ಉತ್ತರ ನೀಡುವ ಸಂದರ್ಭದಲ್ಲಿ ಅವರು ಯಾವ ರೀತಿ ಬೇಕಾದರೂ ಉತ್ತರವನ್ನು ನೀಡಲಿ, ನಾನು ಬೇಡವೆಂದು ಹೇಳುವುದಿಲ್ಲ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು):–** ಮಾನ್ಯ ಸಭಾಪತಿಯವರೇ, ಉತ್ತರ ನೀಡುವಂಥ ಸಂದರ್ಭದಲ್ಲಿ ಯಾವ ರೀತಿ ಬೇಕಾದರೂ ಉತ್ತರ ನೀಡಲಿ ಎಂದು ಮಾನ್ಯ ಸದಸ್ಯರು ಹೇಳುತ್ತಿದ್ದಾರೆ. ಮನಸ್ಸಿಗೆ ಬಂದ ಹಾಗೆ ಮಾತನಾಡುತ್ತೇವೆ ಎಂದರೆ ಹೇಗೆ?

(ಗೊಂದಲ)

ಈ ಸದನದ ಜವಾಬ್ದಾರಿ.

(ಗೊಂದಲ)

**ಶ್ರೀ ಎಸ್.ಆರ್.ಪಾಟೀಲ್(ವಿರೋಧ ಪಕ್ಷದ ನಾಯಕರು):–** ಮಾನ್ಯ ಸಭಾಪತಿಯವರೇ, ಮಾನ್ಯ ವಿರೋಧ ಪಕ್ಷದ ನಾಯಕರು ನಮಗೆ ಇದೇ ರೀತಿ ಮಾತನಾಡಿ ಎಂದು ಹೇಳುವ ಹಾಗಿಲ್ಲ.

(ಗೊಂದಲ)

ವಿರೋಧ ಪಕ್ಷದಲ್ಲಿರುವ ನಾವು ಮಾತನಾಡುತ್ತೇವೆ. ಅವರು ಉತ್ತರವನ್ನು ನೀಡಲಿ. ಮಾನ್ಯ ಸದಸ್ಯರು ಪತ್ರಿಕೆಯಲ್ಲಿ ಬಂದಿರುವುದನ್ನು ರೆಫರ್ ಮಾಡಿ ಹೇಳುತ್ತಿದ್ದಾರೆ. ಅವರಿಗೆ ಬಂದ ಮಾಹಿತಿ ಬಗ್ಗೆ ಹೇಳುತ್ತಿದ್ದಾರೆ. What is wrong in it? He has simply referred to a paper statement.

(ಗೊಂದಲ)

**ಶ್ರೀ ಎಂ.ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ಹೌದು.

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಶ್ರೀ ಸಿ.ಸಿ.ಪಾಟೀಲ್(ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆ ಸಚಿವರು):-** ಅವರು ಪೇಪರ್ ಸ್ಟೇಟ್‌ಮೆಂಟ್ ಎಂದು ಹೇಳಲಿಲ್ಲ. ಅವರು, ನನಗೆ ಬಂದ ಮಾಹಿತಿ ಪ್ರಕಾರ ಎಂದು ಹೇಳಿದರು.

(ಗೊಂದಲ)

**ಶ್ರೀ ಎಂ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ನನಗೆ ಬಂದ ಮಾಹಿತಿಯೇ ಪತ್ರಿಕೆಯಲ್ಲಿಯೂ ವರದಿಯಾಗಿದೆ.

(ಗೊಂದಲ)

ಒಂದು ನಿಮಿಷ ನನ್ನ ಮಾತನ್ನು ಮುಗಿಸುತ್ತೇನೆ. ಇನ್ನೂ ಒಂದು ಹೆಜ್ಜೆ ಮುಂದೆ ಹೋಗುತ್ತೇನೆ. ಇವತ್ತು ಆ ರೀತಿ ಇಲ್ಲ ಎಂದು ಅವರು ಹೇಳುತ್ತಿದ್ದಾರೆ. ಆದರೆ, ಅವರ ಸಂಪುಟದ ಸಚಿವರೇ ಒಬ್ಬೊಬ್ಬರು ಒಂದೊಂದು ರೀತಿಯ ಹೇಳಿಕೆಯನ್ನು ನೀಡುತ್ತಾರೆ. ಮಾನ್ಯ ಗೌರವಾನ್ವಿತ ಸಚಿವರಾದ ಕೆ.ಎಸ್.ಈಶ್ವರಪ್ಪನವರು 10,000 ರೂಪಾಯಿಗಳನ್ನು ಕೊಟ್ಟಿರುವುದೇ ಜಾಸ್ತಿ ಎಂದು ಹೇಳಿರುವ ಮಾತು ಎಲ್ಲಾ ಮಾಧ್ಯಮದಲ್ಲಿಯೂ ಬಂತು. ಆದರೆ, ಆ ಮಾತು ಹೇಳಿಲ್ಲ ಎಂದು ಅವರು ಹೇಳುತ್ತಿದ್ದಾರೆ. ಮಾನ್ಯ ಸಚಿವರಾದ ಜೆ.ಸಿ.ಮಾಧುಸ್ವಾಮಿಯವರು ನಾವು ಪರಿಹಾರ ನೀಡಿದರೂ ಜನರೇ ಮುಂದೆ ಬರುತ್ತಿಲ್ಲ ಎಂಬ ಮಾತನ್ನು ಹೇಳುತ್ತಾರೆ. ಆದರೆ, ಇವರು ಎಲ್ಲರಿಗೂ ಪರಿಹಾರ ಕಲ್ಪಿಸಿದ್ದೇವೆ ಎಂದು ಹೇಳುತ್ತಿದ್ದಾರೆ. ನಾವು ಯಾರ ಮಾತನ್ನು ನಂಬಬೇಕು? ಅವರು ಜನರ ಮೇಲಿಟ್ಟಿರುವ ಕಾಳಜಿಯನ್ನು ಮೆಚ್ಚುತ್ತೇನೆ. ಆದರೆ, ಒಬ್ಬೊಬ್ಬ ಸಚಿವರು ಒಂದೊಂದು ರೀತಿ ಹೇಳಿಕೆಯನ್ನು ನೀಡಿದರೆ ಹೇಗೆ? ನಿಮ್ಮಲ್ಲಿ ಆಡಳಿತದ ಮೇಲೆ ಯಾವ ರೀತಿ ಹಿಡಿತವಿದೆ? ನಿಮ್ಮ ಪಕ್ಷವನ್ನು ಅಧಿಕಾರಕ್ಕೆ ತರುವುದಕ್ಕೆ ಸೂಲಿಬೆಲೆ ಚಕ್ರವರ್ತಿಯವರು ಭಾರಿ ದೊಂಬರಾಟ ಮಾಡಿದ್ದರು. ಅವರು ಇಷ್ಟು ವರ್ಷಗಳಲ್ಲಿ ಇವತ್ತೇ ಸತ್ಯವನ್ನು ಮಾತನಾಡಿರುವುದು. ಕೇಂದ್ರ ಸರ್ಕಾರ ಯಾವುದೇ ರೀತಿ ಪರಿಹಾರ ನೀಡದೇ ಸೋತಿದೆ. ಆದ್ದರಿಂದ ಈ ರಾಜ್ಯದಿಂದ ಆಯ್ಕೆಯಾಗಿರತಕ್ಕಂಥ 25 ಜನ ಭಾರತೀಯ ಜನತಾ ಪಕ್ಷದ ಸಂಸತ್ ಸದಸ್ಯರು ಪ್ರಧಾನ ಮಂತ್ರಿಗಳ ಹತ್ತಿರ ಮಾತನಾಡಿ ಪರಿಹಾರಕ್ಕೆ ಅನುದಾನ ತರುವುದಕ್ಕೆ ತಾಕತ್ತಿಲ್ಲ ಎನ್ನುವ ಮಾತನ್ನು ಹೇಳಿದ್ದಕ್ಕೆ ಅವರಿಗೆ ದೇಶದ್ರೋಹಿ ಎಂಬ ಪಟ್ಟವನ್ನು ಕಟ್ಟಿದರು. ನಿಮ್ಮ ಪಕ್ಷದ ಒಬ್ಬ ಶಾಸಕರು ನಿಮ್ಮ ಪಕ್ಷಕ್ಕೆ ಗೌರವ ತರದ ರೀತಿಯಲ್ಲಿ ಹೇಳಿಕೆ ನೀಡಿದರು. ಇವತ್ತು ಕೇಂದ್ರ ಸರ್ಕಾರ ಸಮಯಕ್ಕೆ ಸರಿಯಾಗಿ ಪರಿಹಾರ ನೀಡುತ್ತಿಲ್ಲ ಎಂದು ಹೇಳಿದ್ದಕ್ಕೆ, ಇವರು ಅವರಿಗೆ Show Cause Notice ನೀಡಿದರು.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ಚಕ್ರವರ್ತಿ ಸೂಲಿಬೆಲೆಯವರ ಇಡೀ ಬದುಕಿನ ಎಲ್ಲಾ ಹೇಳಿಕೆಗಳು ಏನಿವೆ, ಅದನ್ನು ವಿರೋಧ ಪಕ್ಷದವರು ಸಮರ್ಥಿಸುತ್ತಾರೆಯೇ? ಒಂದು ವಿಚಾರದಲ್ಲಿ ಸೂಲಿಬೆಲೆಯವರು ಮಾತನಾಡಿದಾಗ, ವಿರೋಧ ಪಕ್ಷದವರು, ಚಕ್ರವರ್ತಿ ಸೂಲಿಬೆಲೆಯವರನ್ನು ಮಹಾನಾಯಕ ಎಂದು ಹೇಳುವುದಾದರೆ, ಅವರನ್ನು ಗೌರವಿಸಲಿ ಅದಕ್ಕೆ ನಮ್ಮ ಸಹಾನುಭೂತಿ ಇದೆ.

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಶ್ರೀ ಧರ್ಮಸೇನ(ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಹಾಗಾದರೆ ರಾಜ್ಯದಲ್ಲಿ ಅಧಿಕಾರ ಪಡೆಯುವುದಕ್ಕಾಗಿ ಆಡಳಿತ ಪಕ್ಷದವರು ಚಕ್ರವರ್ತಿ ಸೂಲಿಬೆಲೆಯವರನ್ನು ಹೇಗೆಲ್ಲಾ ಉಪಯೋಗಿಸಿಕೊಂಡಿದ್ದಾರೆ.

(ಗೊಂದಲ)

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ಚಕ್ರವರ್ತಿ ಸೂಲಿಬೆಲೆಯವರು ಅತ್ಯಂತವಾಗಿ ನಾವು ಆಧರಿಸುವ, ಗೌರವಿಸುವಂಥ ಒಬ್ಬ ಒಳ್ಳೆಯ ಮುಖಂಡರು. ಆ ವಿಚಾರದಲ್ಲಿ ನಮಗೆ ಯಾವುದೇ ರೀತಿಯ ಗೊಂದಲ ಇಲ್ಲ. ನಾನು ಹೇಳುವುದನ್ನು ಕೇಳಲಿ .. (ಗೊಂದಲ)....... ನಮಗೆ ಚಕ್ರವರ್ತಿ ಸೂಲಿಬೆಲೆಯವರನ್ನು ವಿರೋಧ ಪಕ್ಷದವರು ಒಪ್ಪಿಕೊಂಡಿರುವುದಕ್ಕೆ ಖುಷಿಯಾಗುತ್ತಿದೆ.

(ಗೊಂದಲ)

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ(ಶಿಕ್ಷಕರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಸಭಾನಾಯಕರೆ, ನಾವು ಚಕ್ರವರ್ತಿ ಸೂಲಿಬೆಲೆಯವರನ್ನು ಒಪ್ಪಿಕೊಳ್ಳಲಿ ಅಥವಾ ಬಿಡಲಿ, ಆದರೆ ಅವರು ಚಕ್ರವರ್ತಿ ಸೂಲಿಬೆಲೆಯವರನ್ನು ಆಕಾಶದಲ್ಲಿ ಕೂರಿಸಿದ್ದರು. ಅವರು ಹೇಳಿದ ಮಾತೇ ವೇದವಾಕ್ಯ ಎಂದು ಹೇಳುತ್ತಿದ್ದರು. ಆದರೆ, ಚಕ್ರವರ್ತಿ ಸೂಲಿಬೆಲೆಯವರೆ ಆಡಳಿತ ಪಕ್ಷದವರ ಮೇಲೆ ಮಾತನಾಡಿದ ಮೇಲೆ ನಮ್ಮ ಮೇಲೆ ಏತಕ್ಕೆ ಆರೋಪ ತರುತ್ತಿದ್ದಾರೆ. ಮಾನ್ಯ ಬಸನಗೌಡ ಪಾಟೀಲ್ ಯತ್ನಾಳ್ ಮತ್ತು ಚಕ್ರವರ್ತಿ ಸೂಲಿಬೆಲೆಯವರು ಏನು ಹೇಳಿದ್ದಾರೆ, ಆ ಮಾತಿಗೆ ನಮ್ಮ ಮೇಲೆ ಏತಕ್ಕೆ ಆರೋಪ ತರುತ್ತಿದ್ದಾರೆ? ಅವರ ಕೈಯಲ್ಲಿಯೇ ಕನ್ನಡಿ ಇದೆ. ಅವರ ಕೈ ಸಹ ಅಲ್ಲಿಯೇ ಇದೆ, ಅವರ ಮುಖವೂ ಅಲ್ಲಿಯೇ ಇದೆ, ಅವರು ನೋಡಿಕೊಳ್ಳಲಿ. ನಮಗೆ ಏತಕ್ಕೆ ಹೇಳುತ್ತಾರೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ಒಂದು ನಿಮಿಷ ನಾನು ಹೇಳುವುದನ್ನು ಕೇಳಿ. ಮಾನ್ಯ ಬಸವರಾಜ ಶಿವಲಿಂಗಪ್ಪ ಹೊರಟ್ಟಿಯವರು ನಮಗಿಂತ ಹೆಚ್ಚು ರಾಜಕೀಯದಲ್ಲಿ ಅನುಭವ ಇರುವಂತಹವರು. ದೊಡ್ಡ ರಾಜಕೀಯ ಪಕ್ಷದಲ್ಲಿ ಇಂತಹ ಗುಡುಗು, ಸಿಡಿಲು ಬರುತ್ತಲೇ ಇರುತ್ತದೆ. ಅದೆಲ್ಲವನ್ನು ಸಹಿಸಿಕೊಂಡು ಮುಂದೆ ಹೋಗುವುದೇ ರಾಜಕೀಯ ಪಕ್ಷದ ಲಕ್ಷಣ.

(ಗೊಂದಲ)

ಈ ಮಧ್ಯೆ, ವಿರೋಧ ಪಕ್ಷದವರು ಚಕ್ರವರ್ತಿ ಸೂಲಿಬೆಲೆಯವರನ್ನು ಒಪ್ಪಿಕೊಂಡಿರುವುದಕ್ಕೆ ಅಭಿನಂದನೆ ಇದೆ ಎಂದು ನಾನು ಹೇಳಿದೆ. ನಮ್ಮಲ್ಲಿ ಏನೂ ವ್ಯತ್ಯಾಸವಾಗಿಲ್ಲ ಎಂದೇನು ಹೇಳಿಲ್ಲ.

(ಗೊಂದಲ)

ಒಂದು ದೊಡ್ಡ ರಾಜಕೀಯ ಪಕ್ಷದಲ್ಲಿ ಇಂತಹ ಸಮಸ್ಯೆಗಳು, ಚಟುವಟಿಕೆಗಳು ಗುಡುಗು, ಸಿಡಿಲು, ಮಳೆ, ಆರ್ಭಟಗಳು ಬಂದೇ ಬರುತ್ತದೆ.

(ಗೊಂದಲ)

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಎಸ್.ಆರ್.ಪಾಟೀಲ್:–** ಮಾನ್ಯ ಸಭಾಪತಿಯವರೇ, ಗುಡುಗು, ಸಿಡಿಲು, ಎಂದು ಅವರು ಏನು ಹೇಳುತ್ತಿದ್ದಾರೆ, ಸಿಡಿಲು ಬಡಿದರೂ ಸಂತೋಷವಾಗಿಯೇ ಇದ್ದಾರೆ.

(ಗೊಂದಲ)

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ,

(ಗೊಂದಲ)

ಇರುತ್ತದೆ, ಇರುವುದಿಲ್ಲ ಎಂದು ಹೇಳುತ್ತಿಲ್ಲ. ಒಂದೊಂದು ಸಲ ಆ ರೀತಿ ಆಗುತ್ತದೆ.

(ಗೊಂದಲ)

**ಶ್ರೀ ಎಂ.ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ನನ್ನ ಮಾತನ್ನು ಮಾತನಾಡಿ ಮುಕ್ತಾಯಗೊಳಿಸುತ್ತೇನೆ.

(ಗೊಂದಲ)

**ಶ್ರೀ ಎಂ.ಸಿ.ವೇಣುಗೋಪಾಲ್(ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಇಷ್ಟು ಗಂಭೀರವಾಗಿ ಚರ್ಚೆ ನಡೆಯುವಂಥ ಸಂದರ್ಭದಲ್ಲಿ ಮಾನ್ಯ ಗೌರವಾನ್ವಿತ ಸಚಿವರಾದ ಸಿ.ಸಿ.ಪಾಟೀಲ್‌ರವರು ಬಾಯಿ ಚಪಲಕ್ಕೆ ಮಾತನಾಡುತ್ತಿದ್ದಾರೆ ಎಂದು ಹೇಳುತ್ತಿದ್ದಾರಲ್ಲವೇ, ಅದು ಎಷ್ಟರ ಮಟ್ಟಿಗೆ ಸರಿ. ನೆರೆ ಹಾವಳಿಯಿಂದ ಜನ ಸಂಕಷ್ಟಕ್ಕೆ ಈಡಾದಂತಹ ಸಂದರ್ಭದಲ್ಲಿ . . . .

(ಗೊಂದಲ)

**ಸಭಾಪತಿಯವರು:–** ಆಯಿತು ಆ ವಿಚಾರ ಬಿಡಿ. ಮಾನ್ಯ ಎಂ.ನಾರಾಯಣಸ್ವಾಮಿಯವರೇ, ತಮ್ಮ ಮಾತನ್ನು ಮುಂದುವರೆಸಿ.

**ಶ್ರೀ ಎಂ.ಸಿ.ವೇಣುಗೋಪಾಲ್:–** ಮಾನ್ಯ ಸಭಾಪತಿಯವರೇ, ದಯವಿಟ್ಟು ಇದಕ್ಕೆ ಸಚಿವರು explanation ನೀಡಬೇಕು. ಬಾಯಿ ಚಪಲಕ್ಕೆ ಎಂದು ಹೇಳಿದ ಮಾತನ್ನು ಮಾನ್ಯ ಸಚಿವರು ವಾಪಸ್ಸು ತೆಗೆದುಕೊಳ್ಳಬೇಕು.

**ಶ್ರೀ ಸಿ.ಸಿ.ಪಾಟೀಲ್:–** ಮಾನ್ಯ ಸಭಾಪತಿಯವರೇ, ನಾನು ಹೇಳಿದ್ದು ಏತಕ್ಕಾಗಿ ಎಂದರೆ, ನಾವು ಮಾಡಿದಂಥ ಕೆಲಸವನ್ನು ಯಾರು ಮಾಡಿಲ್ಲ ಎಂದರು. ದಯವಿಟ್ಟು ಅದನ್ನು ಅವರು ಸ್ವೀಕಾರ ಮಾಡಿಕೊಳ್ಳಬೇಕು...

(ಗೊಂದಲ)

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಶ್ರೀ ಎಂ.ಸಿ.ವೇಣುಗೋಪಾಲ್:–** ಮಾನ್ಯ ಸಭಾಪತಿಯವರೇ, ದಯವಿಟ್ಟು ಬಾಯಿ ಚಪಲಕ್ಕೆ ಎಂದು ಹೇಳಿದ ಮಾತನ್ನು ವಾಪಸ್ಸು ತೆಗೆದುಕೊಳ್ಳಲಿ. ನಾವು ಗಂಭೀರವಾಗಿ ಕುಳಿತುಕೊಂಡು ಚರ್ಚೆ ಮಾಡುತ್ತಿರುವಾಗ . . .

**ಸಭಾಪತಿಯವರು:–** ಮಾನ್ಯ ಎಂ.ನಾರಾಯಣಸ್ವಾಮಿಯವರೇ, ಒಂದು ನಿಮಿಷದಲ್ಲಿ ನಿಮ್ಮ ಮಾತನ್ನು ಮುಗಿಸಿ.

**ಶ್ರೀ ಎಂ.ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ಮಾನ್ಯ ಸಭಾನಾಯಕರು, ಚಕ್ರವರ್ತಿ ಸೂಲಿಬೆಲೆಯವರು ಬಿಜೆಪಿ ಸರ್ಕಾರದ ಪರವಾಗಿ ಮಾತನಾಡಿದರೆ 'ಶಹಬ್ಬಾಸ್' ಎಂದು ಹೇಳುತ್ತಾರೆ. ಒಂದು ವೇಳೆ ವಿರುದ್ಧವಾಗಿ ಮಾತನಾಡಿದರೆ ಅವರನ್ನೇ ವಿರೋಧ ಮಾಡುತ್ತಾರೆ.

(ಗೊಂದಲ)

ನೋಡಿ ಎಲ್ಲವನ್ನೂ ಸ್ವೀಕಾರ ಮಾಡಬೇಕು. ಅವರು ಏನು ತಪ್ಪಾಗಿ ಹೇಳಿಲ್ಲ. ನಿಜವನ್ನೇ ಹೇಳಿದ್ದಾರೆ.

(ಗೊಂದಲ)

**ಶ್ರೀ ಸಿ.ಸಿ.ಪಾಟೀಲ್:–** ಮಾನ್ಯ ಎಂ.ನಾರಾಯಣಸ್ವಾಮಿಯವರೇ, ಅವರು ಒಪ್ಪಿಕೊಂಡಿದ್ದೇವೆ ಎಂದೇ ಹೇಳುತ್ತಿರುವುದು.

(ಗೊಂದಲ)

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಸಣ್ಣ–ಪುಟ್ಟ ಸಮಸ್ಯೆಗಳಿದ್ದರೆ ಅದನ್ನು ಒಟ್ಟಾಗಿ ಕುಳಿತುಕೊಂಡು ಸರಿಪಡಿಸಬೇಕೆಂದು ಹೇಳಿದೆ. ಅದರಲ್ಲಿ ತಪ್ಪೇನಿದೆ.

(ಗೊಂದಲ)

**ಶ್ರೀ ಎಸ್.ಆರ್.ಪಾಟೀಲ್:–** ಮಾನ್ಯ ಸಭಾಪತಿಯವರೇ, ಅವರು ಒಪ್ಪಿಕೊಂಡಿದ್ದ ಮೇಲೆ ಬೇರೆ ಪ್ರಶ್ನೆಯೇ ಇಲ್ಲ.

(ಗೊಂದಲ)

ಸಭಾನಾಯಕರು ಮಾನ್ಯ ಎಂ.ನಾರಾಯಣಸ್ವಾಮಿಯವರ ಮಾತಿಗೆ ಗೌರವ ನೀಡಿದ್ದಾರಲ್ಲವೇ ಅದಕ್ಕೆ ಧನ್ಯವಾದಗಳು.

(ಗೊಂದಲ)

**ಸಭಾಪತಿಯವರು:–** ಮಾನ್ಯ ಎಂ.ನಾರಾಯಣಸ್ವಾಮಿಯವರೇ, ತಮ್ಮ ಮಾತು ಮುಗಿಯಿತೇ?

**ಶ್ರೀ ಎಂ.ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ಒಂದು ನಿಮಿಷ. ನೋಡಿ ಅವರು ಮಾತನಾಡುವುದಕ್ಕೆ ಬಿಡುತ್ತಿಲ್ಲ.

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಸಭಾಪತಿಯವರು:–** ಒಂದು ನಿಮಿಷ ಎಂದು ಎಷ್ಟು ಸಮಯವಾಯಿತು. ಅವರ ಮಾತಿಗೆ ಕಿವಿ ನೀಡದೇ ನೀವು ಮಾತನಾಡಿ.

(ಗೊಂದಲ)

**ಶ್ರೀ ಎಂ.ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ಅವರನ್ನು ಕುಳ್ಳಿರಿಸಿ, ಒಂದು ನಿಮಿಷ ಮಾತನಾಡಿ ಮುಗಿಸುತ್ತೇನೆ.

(ಗೊಂದಲ)

**ಶ್ರೀ ಮರಿತಿಬ್ಬೇಗೌಡ(ಶಿಕ್ಷಕರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಭಾರತೀಯ ಜನತಾ ಪಕ್ಷ ಅಧಿಕಾರಕ್ಕೆ ಬರಬೇಕಾದರೆ ಈ ರಾಷ್ಟ್ರದಲ್ಲಿ ಜಗಜ್ಜಾಹೀರಾಯಿತು. ಎಲ್ಲಾ ಮಾಧ್ಯಮಗಳವರು, ಪತ್ರಿಕೆಗಳವರು ಬಿಜೆಪಿ ಪಕ್ಷವನ್ನು ಕೊಂಡಾಡಿ, ಎಲ್ಲಾ ಪಕ್ಷಗಳನ್ನು ವಿರೋಧಿಸಿದ್ದರು. ಇವತ್ತು ಅದೇ ಮಾಧ್ಯಮದವರನ್ನು ಕೆಳಮನೆಯ ಸದನದಿಂದ ಹೊರಗೆ ಇಟ್ಟಿದ್ದಾರೆ. ಇವತ್ತು ಆಡಳಿತ ಪಕ್ಷದವರು ಸಮರ್ಥಿಸಿಕೊಳ್ಳುತ್ತಿದ್ದಾರೆ. ಬಿ.ಜೆ.ಪಿ. ಪಕ್ಷದವರು ಮಾಧ್ಯಮದವರಿಗೆ ಸರಿಯಾಗಿ ಪಾಠ ಕಲಿಸಿದ್ದಾರೆ.

**ಸಭಾಪತಿಯವರು:–** ಮಾನ್ಯ ಮರಿತಿಬ್ಬೇಗೌಡರೇ, ಒಂದು ನಿಮಿಷ ಕುಳಿತುಕೊಳ್ಳಿ. ಮಾನ್ಯ ಎಂ.ನಾರಾಯಣಸ್ವಾಮಿಯವರೇ,

**ಶ್ರೀ ಎಂ.ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ,...

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ,..

**ಶ್ರೀ ಎಂ.ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ನೋಡಿ ಸಭಾನಾಯಕರು ಮಾತನಾಡುವುದಕ್ಕೆ ಬಿಡುತ್ತಿಲ್ಲ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ಅವರೇ ಆಡಳಿತ ಪಕ್ಷದಲ್ಲಿ ಕುಳಿತಿದ್ದರೆ ಏನು ಮಾತನಾಡುತ್ತಿದ್ದರು ಎಂಬುದು ನಮಗೆ ಗೊತ್ತಿಲ್ಲವೇ? ವಿರೋಧ ಪಕ್ಷದಲ್ಲಿ ಕುಳಿತಾಗ ಬೇರೆ ರೀತಿ ಮಾತನಾಡುತ್ತಾರೆ. ಆಡಳಿತ ಪಕ್ಷದಲ್ಲಿ ಕುಳಿತಾಗ ಬೇರೆ ರೀತಿ ಮಾತನಾಡುತ್ತಾರೆ.

(ಗೊಂದಲ)

**ಶ್ರೀ ಎಂ.ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ನೋಡಿ ಸತ್ಯವನ್ನು ಹೇಳಿದರೆ ಕೋಪ ಬರುತ್ತದೆ. ಎಷ್ಟು ಮಠಾಧೀಶರ ಬಗ್ಗೆ ಮಾತನಾಡಿದರು. ಒಬ್ಬ ನಿವೃತ್ತ ಪೊಲೀಸ್ ಅಧಿಕಾರಿಯಾದ ಶ್ರೀ ಶಂಕರ್ ಬಿದರಿಯವರು, ಬಿಜೆಪಿ ಪಕ್ಷವನ್ನು ಆಯ್ಕೆ ಮಾಡಿದ ತಪ್ಪಿಗೆ ನಮ್ಮ ಚಪ್ಪಲಿಯನ್ನು ತೆಗೆದುಕೊಂಡು ನಾವೇ ಹೊಡೆದುಕೊಳ್ಳಬೇಕು ಎಂದು ಹೇಳಿದ್ದರು. ಅದು ಸುಳ್ಳಾ! ಇವತ್ತು ಇರತಕ್ಕಂಥ ಸತ್ಯವನ್ನು ಅವರು ಅರ್ಥ ಮಾಡಿಕೊಳ್ಳಬೇಕು. ಅವರನ್ನು ದೂಷಣೆ ಮಾಡುವುದಕ್ಕೆ ಹೋಗುತ್ತಿಲ್ಲ.

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ಪಟ್ಟಿ ಬಗ್ಗೆ ಏನಾಗಿದೆ ಎಂಬುದರ ಬಗ್ಗೆ ಚರ್ಚೆ ಮಾಡಬೇಕು. ಅದನ್ನು ಬಿಟ್ಟು ಯಾರ್ಯಾರು ಏನೇನು ಮಾತನಾಡಿದ್ದಾರೆ ಎಂದು ಹೇಳುತ್ತಿದ್ದಾರಲ್ಲಾ?

(ಗೊಂದಲ)

ಅಜೆಂಡಾದಲ್ಲಿ ಈ ರೀತಿ ಇದೆ . . . ಮಳೆ ಬಂದು ಪ್ರವಾಹವಾಗಿದೆ. ಪ್ರವಾಹದಿಂದಾಗಿ ಬಡವರಿಗೆ ಸೌಲಭ್ಯ ಇಲ್ಲದೇ ಏನಾಗಿದೆ, ಏತಕ್ಕೆ ಪರಿಹಾರ ನೀಡಿಲ್ಲ ಎಂಬುದರ ಬಗ್ಗೆ ಚರ್ಚೆ ಮಾಡಲಿ. ಅದನ್ನು ಬಿಟ್ಟು ಚಕ್ರವರ್ತಿ ಸೂಲಿಬೆಲೆ ಏನು ಹೇಳಿದರು...

(ಗೊಂದಲ)

**ಸಭಾಪತಿಯವರು:–** ಆಯಿತು. ಮಾನ್ಯ ಸಭಾನಾಯಕರೇ,

**ಶ್ರೀ ಎಸ್.ಆರ್.ಪಾಟೀಲ್:–** ಮಾನ್ಯ ಸಭಾಪತಿಯವರೇ, ಮಾನ್ಯ ಸಭಾನಾಯಕರು ಅವರ ಬಗ್ಗೆ ಏಕೆ ಮಾತನಾಡುತ್ತಾರೆ, ಇವರ ಬಗ್ಗೆ ಏಕೆ ಮಾತನಾಡುತ್ತಾರೆ ಎಂದೆಲ್ಲಾ ಹೇಳಬಾರದು. ಪ್ರತಿಪಕ್ಷದಲ್ಲಿದ್ದು ಯಾವ ರೀತಿ ಮಾತನಾಡಬೇಕೋ, ಹಾಗೆ ಮಾತನಾಡುತ್ತೇವೆ.

(ಗೊಂದಲ)

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ಅವರು ಮಾತನಾಡುವುದನ್ನು ಈ ರಾಜ್ಯದ ಜನರು ಕೇಳುತ್ತಾರಲ್ಲವೇ? ನೊಂದವರಿಗೆ ಅವರ ಮಾತಿನಿಂದ ವಿಶ್ವಾಸ ಬರಬೇಕಲ್ಲವೇ? ಇವರು ಅದನ್ನು ಬಿಟ್ಟು ಉಳಿದದ್ದೆಲ್ಲಾ ಹೇಳುತ್ತಿದ್ದಾರೆ.

(ಗೊಂದಲ)

**ಶ್ರೀ ಎಸ್.ಆರ್.ಪಾಟೀಲ್:–** ಮಾನ್ಯ ಸಭಾಪತಿಯವರೇ, ನಿಯಮಕ್ಕೆ ವ್ಯತಿರಿಕ್ತವಾಗಿ ಮಾತನಾಡಿದರೆ ಅವರು ಹೇಳಲಿ. ಅದನ್ನು ಬಿಟ್ಟು ಅವರಿವರ ಸುದ್ದಿ ಮಾತನಾಡಬೇಡಿ, ಅವರ ಹೇಳಿಕೆಯ ಬಗ್ಗೆ ಮಾತನಾಡಬೇಡಿ ಎಂದು ಹೇಳುವುದು ಬೇಡ. ಕಲಾಪದ ನಿಯಮಕ್ಕೆ ವಿರುದ್ಧವಾಗಿ ಮಾತನಾಡಿದರೆ point out ಮಾಡಲಿ.

(ಗೊಂದಲ)

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ಹಾಗಲ್ಲ. ಅವರು ಮಾತನಾಡುವುದು ಬೇಡ ಎಂದು ಹೇಳುತ್ತಿಲ್ಲ. ಅವರ ಮಾತಿನಲ್ಲಿ ಸ್ಪಷ್ಟತೆ ಇರಲಿ. ಅವರು ಮಾತನಾಡುವಾಗ ಪ್ರವಾಹದ ಬಗ್ಗೆ ಮಾತನಾಡಲಿ ಎಂದು ಹೇಳಿದೆ.

(ಗೊಂದಲ)

(ಮುಂದು) . . .

(183)/11.10.2019/8.10/ಎಸ್‌ಕೆ-ಕೆಎಸ್

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**(ಸಭಾಪತಿಯವರ ಉಪಸ್ಥಿತಿ)**

**ಶ್ರೀ ಎಸ್. ಆರ್. ಪಾಟೀಲ್ (ವಿರೋಧ ಪಕ್ಷದ ನಾಯಕರು) (ಮುಂದು):-** ಆಡಳಿತ ಪಕ್ಷದವರು ಪ್ರವಾಹಕ್ಕೆ ಸಂಬಂಧಿಸಿದಂತಹ ಹೇಳಿಕೆಗಳನ್ನು ಕೊಟ್ಟಿರುವುದರ ಬಗ್ಗೆ ತಮ್ಮ ಮುಂದೆ ಹೇಳಿದ್ದೇನೆ. ಮಾನ್ಯ ಚಕ್ರವರ್ತಿ ಸೂಲಿಬೆಲೆಯವರನ್ನು ಬಹಳ ಗೌರವದಿಂದ ತಾವು ಕಾಣುತ್ತಿದ್ದೀರಾ. ಅವರು ಹೇಳಿರುವ ಮಾತನ್ನು ತಾವು ಈಗಲೂ ಒಪ್ಪಿಕೊಳ್ಳಬೇಕು. ಹಿಂದಿನ ಸಚಿವರು ಮತ್ತು ಹಾಲೀ ಶಾಸಕರಾದಂತಹ ಶ್ರೀ ಬಸನಗೌಡ ಪಾಟೀಲ್ ಯತ್ನಾಳ್‌ರವರು ಯಾವ ರೀತಿ ಮಾತನಾಡಿದ್ದಾರೆ. ಸ್ವಲ್ಪ.... ಪ್ರಶ್ನೆಯನ್ನು ಪರಿವರ್ತಿಸಿ.

**(ಗೊಂದಲ)**

**ಶ್ರೀ ಸಿ.ಸಿ. ಪಾಟೀಲ್ (ಗಣಿ ಮತ್ತು ಭೂ ವಿಜ್ಞಾನ ಸಚಿವರು):-** ಮಾನ್ಯ ಸಭಾಪತಿಯವರೇ, ನಾನು ಬೆಳಿಗ್ಗೆಯಿಂದ ಸಭೆಯಲ್ಲಿ ಪಾಲ್ಗೊಂಡಿದ್ದೇನೆ. ಪ್ರವಾಹದ ಬಗ್ಗೆ ಚರ್ಚೆ ನಡೆಯುತ್ತಿದೆ. ವಿರೋಧ ಪಕ್ಷದರಿಗೆ ಅವರ capital ಏನಿದೆ? They don't have any Capital. ಮಾನ್ಯ ಚಕ್ರವರ್ತಿ ಸೂಲಿಬೆಲೆಯ ಬಗ್ಗೆ ಹೇಳಿದರು ಮತ್ತು ಇವರು ಸಹ ಹೇಳುತ್ತಿದ್ದಾರೆ. This is only their capital. They don't have any other stuff.

**ಶ್ರೀ ಎಂ. ನಾರಯಣಸ್ವಾಮಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಇದು ಸತ್ಯ ಅಲ್ಲವೇ?

**ಶ್ರೀ ಎಸ್. ಆರ್. ಪಾಟೀಲ್:-** ಈ ಸದನದಲ್ಲಿ ಹೆಚ್ಚು ಜನ ಮಾನ್ಯ ಸದಸ್ಯರು ಅನೇಕ ವಿಚಾರದ ಬಗ್ಗೆ ಎಳೆ ಎಳೆಯಾಗಿ ಮಾತನಾಡಿದ್ದಾರೆ. ಇದರ ಬಗ್ಗೆ ಚರ್ಚೆ ಮಾಡಬೇಕಲ್ಲವೇ?

**ಶ್ರೀ ಐವನ್ ಡಿ'ಸೋಜಾ (ನಾಮ ನಿರ್ದೇಶಿತರು):-** ಮಾನ್ಯ ಸಚಿವರು ಪ್ರತಿಯೊಂದು sentence ಗೂ ಆಡಳಿತ ಪಕ್ಷದವರು ಸಮರ್ಥನೆಕವಾಗಿ ಮಾತನಾಡುವುದಾದರೆ, ವಿರೋಧ ಪಕ್ಷದವರು ಏನು ಮಾತನಾಡಬೇಕು?

**ಶ್ರೀ ಎಸ್. ಆರ್. ಪಾಟೀಲ್:-** ಮಾನ್ಯ ಸಭಾಪತಿಯವರೇ, Capital ಇಲ್ಲವೆಂದರೆ ಏನು? ನಾವು ಮಾತನಾಡಿದ್ದು, ಆಡಳಿತ ಪಕ್ಷದವರಿಗೆ ಇನ್ನೇನಾದರೂ ಕಡಿಮೆಯಾಗಿದೆಯೇ? ನಾವು ಇನ್ನುಷ್ಟು ಮಾತನಾಡುತ್ತೇವೆ. ನಾವು ನಾಳೆಯೂ ಇನ್ನು ಸ್ವಲ್ಪ ಚರ್ಚೆ ಮಾಡಬೇಕೆಂದು ಕೊಂಡಿದ್ದೇವೆ.

**ಸಭಾಪತಿಯವರು:-** ಮಾನ್ಯ ರಮೇಶ್‌ರವರೇ ಮಾತನಾಡಿ.

**ಶ್ರೀ ಎಂ. ನಾರಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ಒಂದು ನಿಮಿಷ. ನನಗೆ ಮಾತನಾಡಲು ಅವಕಾಶ ಕೊಡಿ. ಸರ್ಕಾರಕ್ಕೆ ಒಂದು ಮಾತನ್ನು ಹೇಳುತ್ತೇನೆ. ಕೇಂದ್ರ ಸರ್ಕಾರದ ಬಳಿ ಸರ್ವ ಪಕ್ಷಗಳ

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ನಿಯೋಗವನ್ನು ಕರೆದುಕೊಂಡು ಹೋಗಲಿ, ನಾವೆಲ್ಲರೂ ಮಾತನಾಡುತ್ತೇವೆ. ನನಗೆ ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ಧನ್ಯವಾದಗಳು.

**(ಗೊಂದಲ)**

**ಸಭಾಪತಿಯವರು:–** ಮಾನ್ಯ ಎಂ. ನಾರಯಣಸ್ವಾಮಿಯವರು ಏನೇ ಮಾತನಾಡಿದರೂ ರೆಕಾರ್ಡ್‌ಗೆ ಹೋಗುವುದಿಲ್ಲ.

**ಶ್ರೀ ಪಿ.ಆರ್. ರಮೇಶ್ (ನಾಮ ನಿರ್ದೇಶಿತರು) :–** ಮಾನ್ಯ ಸಭಾಪತಿಯವರೇ, ಪ್ರವಾಹದ ಬಗ್ಗೆ ಬಹಳ ಗಂಭೀರವಾದ ಚರ್ಚೆ ನಡೆಯುತ್ತಿದೆ. ಮಾನ್ಯ ಸದಸ್ಯರೆಲ್ಲರೂ ಮಾತನಾಡಿರುವಂಥದ್ದರ ಮೇಲೆ ನಾನು ಚರ್ಚೆಗೆ ಹೋಗುವುದಿಲ್ಲ. ಇವತ್ತು ಸರ್ಕಾರ ಪ್ರಪ್ರಥಮವಾಗಿ ಒಂದು ಅಧಿಸೂಚನೆಯನ್ನು ಹೊರಡಿಸಿದೆ. ದಿನಾಂಕ 10.08.2019ರಂದು ರಾಜ್ಯದಲ್ಲಿರುವ ಹದಿನೇಳು ಜಿಲ್ಲೆಗಳು ಮತ್ತು ಎಂಭತ್ತು ತಾಲ್ಲೂಕುಗಳು ಮಾತ್ರ ಎಂದು ಮೊದಲನೇ ಅಧಿಸೂಚನೆಯನ್ನು ಹೊರಡಿಸುತ್ತಾರೆ. ತದನಂತರ, ದಿನಾಂಕ 16.08.2019 ರಂದು ಹನ್ನೆರಡು ಜಿಲ್ಲೆ ಮತ್ತು ಇಪ್ಪತ್ಮೂರು ತಾಲ್ಲೂಕುಗಳು, ಕೆಲವು overlap ಆಗುವಂತಹ ಜಿಲ್ಲೆಗಳಾದರೂ ಸಹ ಒಟ್ಟು ಇಪ್ಪತ್ತೆರಡು ಜಿಲ್ಲೆಗಳು ಭೌಗೋಳಿಕವಾಗಿ ಬರುತ್ತದೆ ಮತ್ತು ನೂರ ಮೂರು ತಾಲ್ಲೂಕುಗಳು ಹಾನಿಯಾಗಿರುವುದರೊಳಗೆ ಒಳಪಡುತ್ತದೆ. ಇವತ್ತು NDRF (National Disaster Response Fund) ಮತ್ತು SDRF (State Disaster Response Fund)ನ ಅಧಿಸೂಚನೆಯ ಆಧಾರದ ಮೇಲೆ ಇದು ಕೊಡಬೇಕಾಗುತ್ತದೆ. ಮಾನ್ಯ ಸಭಾಪತಿಯವರೇ, 2005 ರಲ್ಲಿ *'Disaster Management Act'* (DM Act) ಬಂದಿರುತ್ತದೆ. ನಾನು ಕೇಳಿಕೊಳ್ಳುವುದೇನೆಂದರೆ, ಈ ಅಧಿಸೂಚನೆಯಾದ ಮೇಲೆ ಒಂದನೇ ತಾರೀಖು ಮಳೆ ಅಥವಾ ಪ್ರವಾಹ ಬಂದಂತಹ ಸಂದರ್ಭದಲ್ಲಿ ರಾಜ್ಯದಲ್ಲಿ ನೆರೆ ಹಾವಳಿಯಿಂದಾಗಿ ಸುಮಾರು ಜನರಿಗೆ ತೊಂದರೆಯಾಗುತ್ತದೆ. ಆದರೆ ಹದಿನೈದು ಅಥವಾ ಹದಿನಾರು ದಿನಗಳಾದ ಮೇಲೆ ಕೇಂದ್ರ ಸರ್ಕಾರದ ಮುಂದೆ ರಾಜ್ಯ ಸರ್ಕಾರ ಯಾವ ರೀತಿ ಅರ್ಜಿಗಳನ್ನು ಅಥವಾ ವ್ಯವಹಾರಗಳನ್ನು ಮಾಡಿದೆ ಎಂಬುದನ್ನು ಬಹಳ ಮುಖ್ಯ ತಿಳಿಯಬೇಕಾಗುತ್ತದೆ. ಇದಕ್ಕೆ ಕಾರಣವೇನೆಂದರೆ, ಇವತ್ತು ಯಾವುದೇ ಒಂದು ರಾಜ್ಯ ಸರ್ಕಾರ ಒಂದು ಒಕ್ಕೂಟ ವ್ಯವಸ್ಥೆಯಲ್ಲಿರುತ್ತದೆ. ಇವತ್ತು NDRF ಅಥವಾ SDRF ಇರಬಹುದು. ಆದರೆ SDRF ನಿಂದ ಇರುವಂತಹದ್ದು, ಪ್ರತಿ ವರ್ಷ ಕೇಂದ್ರ ಸರ್ಕಾರ ನಮಗೆ ಹಣ ಕೊಡುವಂತಹದ್ದು ಇರುತ್ತದೆ. ಪ್ರತಿ ವರ್ಷ ಕೊಡುವಂತಹ ಹಣವನ್ನು ಆಯಾಯ ವರ್ಷದಲ್ಲಿ ಏನೇನ್ನೆಲ್ಲಾಗುತ್ತದೆಯೋ, ಅವೆಲ್ಲವನ್ನು ನಾವು ಕೇಂದ್ರ ಸರ್ಕಾರಕ್ಕೆ ಲೆಕ್ಕವನ್ನು ಕೊಡಬೇಕಾಗುತ್ತದೆ. ಆದರೆ NDRF ನಲ್ಲಿ ಬರತಕ್ಕಂಥದ್ದು 'calamities of severe nature'. ನಾನು *'calamities of a severe nature'* ವಿಷಯವನ್ನು ತಿಳಿಸಬೇಕಾಗುತ್ತದೆ. ಇವತ್ತು

ತಾವೆಲ್ಲರೂ ಹೇಳಿದ್ದೀರಿ ಮತ್ತು ಸರ್ಕಾರವೇ ಹೇಳಿದೆ. ಸುಮಾರು 108 ವರ್ಷಗಳ ಹಿಂದೆ ಈ ರೀತಿ ಒಂದು ಹಾನಿಯಾಗಿರುವಂತಹದ್ದು ಆದಮೇಲೆ ಇವತ್ತು ಆಗಿದೆ ಎಂದರೆ, ಅವೊತ್ತಿನ ದಿನ ಜನಸಂಖ್ಯೆಯೂ ಇಲ್ಲ ಮತ್ತು ಅಭಿವೃದ್ಧಿ ಏನೂ ಆಗಿರಲಿಲ್ಲ. ಇವತ್ತಿನ ದಿನ ನಾವೇನೂ ನೋಡುತ್ತಿದ್ದೇವೆಯೆಲ್ಲಾ, 108 ವರ್ಷಗಳ ಹಿಂದೆ ಆಗಿರುವಂತಹದ್ದು ನೆರೆ ಅಂದಿನ ದಿನ ಜನಸಂಖ್ಯೆ ಇಲ್ಲ ಮತ್ತು ಯಾವುದೇ ಒಂದು ಅಭಿವೃದ್ಧಿಯೂ ಇಲ್ಲ. ನಾವು ಇವತ್ತಿನ ದಿನಗಳಲ್ಲಿ ಯಾವ ರೀತಿಯಾದ ತಂತ್ರಜ್ಞಾನವನ್ನು ಕಾಣುತ್ತಿದ್ದೇವೆಯೋ, ಅಂದಿನ ದಿನಗಳಲ್ಲಿ ಇವೆಲ್ಲವು ಇರಲ್ಲಿಲ. ಆದರೆ ಅವೊತ್ತಿನ ಒಂದು ರೀತಿಗೆ ಇವತ್ತು ಆಗಿರುವಂತಹದ್ದು, 108 ವರ್ಷಗಳಲ್ಲಿ ಹೆಚ್ಚಿಗೆ ಆಗಿರುವಂತಹದ್ದು ಇವತ್ತು ಆದ ಮೇಲೆ, Is it not a National Calamity? ಇದನ್ನು ಏತಕ್ಕೆ National Calamity ಎಂದು declare ಮಾಡಬಾರದು? ನಾನು ಒಂದು ವಿಚಾರವನ್ನು ಹೇಳಬಯಸುತ್ತೇನೆ;

> *“….extremely difficult to handle through a normal rescue and relief operation, the Central Government treats it as a calamity of severe nature…”*

ಇದಕ್ಕೆ Inter Ministerial Central Team (IMCT) ಎನ್ನುವಂತಹದ್ದು ಇರುತ್ತದೆ. IMCT ಇದನ್ನು ಪರಾಮರ್ಶೆ ಮತ್ತು ಸಂಪೂರ್ಣವಾಗಿ ಸರ್ವೇಕ್ಷಣೆ ಮಾಡಿ, ಈ ಒಂದು ರಾಜ್ಯದಲ್ಲಿ ಈ ರೀತಿ ಒಂದು ನೆರೆ ಹಾವಳಿಯಾಗಿರುವಂತಹದ್ದು, National Calamity ಎಂದು declare ಮಾಡಬೇಕು.

ಮಾನ್ಯ ಸಭಾಪತಿಯವರೇ, ಇವತ್ತು ನಮ್ಮ ರಾಜ್ಯದಲ್ಲಿ ಪ್ರಕೃತಿ ವಿಕೋಪದಿಂದಾಗಿರುವ ನೆರೆ ಹಾವಳಿಯನ್ನು ನಾವೇನೂ ನೋಡುತ್ತಿದ್ದೇವೆ, ಅದನ್ನು ನಾವು ಮೇ, 2019ರಲ್ಲಿ ಒರಿಸ್ಸಾ ಮತ್ತು ಭುವನೇಶ್ವರ ಪ್ರದೇಶಕ್ಕೆ ಹೋಲಿಸಿದರೆ, ನಮ್ಮ ರಾಜ್ಯದ್ದು ನೂರು ಪಟ್ಟು ಜಾಸ್ತಿಯಾಗಿದೆ. ಇವತ್ತು ಪುರಿ ಮತ್ತು ಭುವನೇಶ್ವರಕ್ಕೆ ಆಗಿರುವಂತಹದ್ದು, ಆ ದಿನ ಚುನಾವಣೆ ಇರುತ್ತದೆ. ಆ ಚುನಾವಣೆ ಸಂದರ್ಭದಲ್ಲಿ ಪ್ರಕೃತಿ ವಿಕೋಪಕ್ಕೆ ಸಂಬಂಧಪಟ್ಟಂತೆ ***‘Fani’*** ಎಂಬ ಚಂಡಮಾರುತ ಇತ್ತು. ಅವೊತ್ತಿನ ದಿವಸ ಆ ಚಂಡ ಮಾರುತವನ್ನು ‘extreme severe’ national calamity ಎಂದು declare ಮಾಡುತ್ತಾರೆ. ಅವೊತ್ತಿನ ದಿನ ಕೇಂದ್ರ ಸರ್ಕಾರವು ಕೇರಳ, ಜಮ್ಮು ಕಾಶ್ಮೀರ ಮತ್ತು ತಮಿಳುನಾಡು ರಾಜ್ಯಗಳಿಗೆ special flood relief fund ಅನ್ನು ಕೊಡುತ್ತಾರೆ. ಕರ್ನಾಟಕ ರಾಜ್ಯದಲ್ಲಿ ಹಾನಿಯಾಗಿರುವಂತಹದ್ದು ಗಂಭೀರವಾದ ವಿಷಯ ಎಂದು ಸರ್ಕಾರವೇ ಹೇಳುತ್ತಿದೆ. ಸಾಕಷ್ಟು ಮನೆಗಳು ಮತ್ತು ಬೆಳೆಗಳು ಹಾನಿಯಾಗಿವೆ ಎಂಬುದರ ಬಗ್ಗೆ ಅಧಿಸೂಚನೆಯಲ್ಲಿದೆ. ಇದು ನನ್ನದಲ್ಲ, ಸರ್ಕಾರದ ಅಧಿಸೂಚನೆ. ಸರ್ಕಾರದವರು ಇಲ್ಲವೆಂದು ಹೇಳಲಿ. ಮನೆ, ಬೆಳೆ ಮತ್ತು ಜೀವಕ್ಕೆ ಹಾನಿಯಾಗಿದೆ ಎಂಬುದರ ಬಗ್ಗೆ ಅಧಿಸೂಚನೆಯನ್ನು ಹೊರಡಿಸುತ್ತಾರೆ. ಆದಾದ ಮೇಲೆ

“ ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

ರಾಜ್ಯ ಸರ್ಕಾರ ಕೇಂದ್ರ ಸರ್ಕಾರಕ್ಕೆ communication ಮಾಡಿದೆ ಎಂಬುದು ಬಹಳ ಮುಖ್ಯ. ನಮ್ಮ ಪ್ರತಿಪಕ್ಷದ ನಾಯಕರನ್ನು ಕರೆದುಕೊಂಡು ಹೋಗಿ, ಕೇಂದ್ರ ಸರ್ಕಾರದ ಮೇಲೆ ಒತ್ತಡವನ್ನು ತಂದಿದ್ದಾರೆಯೇ ಅಥವಾ ಪಾರ್ಲಿಮೆಂಟಿನಲ್ಲಿ ಇಪ್ಪತ್ತೈದು ಜನ ಸದಸ್ಯರು ಇದರ ಬಗ್ಗೆ ಏನಾದರೂ ಮಾತನಾಡಿದ್ದಾರೆಯೇ, ಪ್ರಧಾನಿ ಮಂತ್ರಿ, ಗೃಹ ಮಂತ್ರಿ ಮತ್ತು ಹಣಕಾಸಿನ ಮಂತ್ರಿಯವರ ಹತ್ತಿರ ರಾಜ್ಯ ಸರ್ಕಾರ ಹೋಗಿ ಸಮಸ್ಯೆಯ ಬಗ್ಗೆ ಮಾತನಾಡಿರುವಂಥದ್ದು, ನಮ್ಮ ರಾಜ್ಯ ಸರ್ಕಾರದಿಂದ ಏನಾದರೂ correspondence ಆಗಿದೆಯೇ? ಇದು ಯಾವುದನ್ನು ಮಾಡದೇ, ಕೇವಲ ಈ ಸಮಸ್ಯೆಯಾಗಿ 60–70 ದಿನಗಳಾದ ಮೇಲೆ ರಾಜ್ಯ ಸರ್ಕಾರ ಸುಮಾರು ರೂ.38 ಸಾವಿರ ಕೋಟಿಗೆ ಪ್ರಸ್ತಾವನೆಯನ್ನು ಮಂಡಿಸುತ್ತಾರೆ. ಅಲ್ಲಿ ಅವರು ರಾಜ್ಯ ಸರ್ಕಾರಕ್ಕೆ ಒತ್ತಡ ಹಾಕುತ್ತಾರೆ. ಅದಕ್ಕೆ ಮುಂಚೆ ಗೃಹ ಸಚಿವರು ಹಾಗೂ ಆರ್ಥಿಕ ಸಚಿವರು ವೈಮಾನಿಕ ಸಮೀಕ್ಷೆ ಮಾಡುತ್ತಾರೆ. IMCT ನವರು ವೈಮಾನಿಕ ಸರ್ವೆ ಮಾಡುತ್ತದೆ. ಇವೆಲ್ಲವನ್ನೂ ಮಾಡಿದ ಮೇಲೆ, ರಾಜ್ಯ ಸರ್ಕಾರದವರು ರೂ. 38 ಸಾವಿರ ಕೋಟಿಗೆ ಪ್ರಸ್ತಾವನೆ ಇಡುತ್ತಾರೆ. ತದನಂತರ ಕೇಂದ್ರ ಸರ್ಕಾರದವರು ಈ ಪ್ರಸ್ತಾವನೆ ಜಾಸ್ತಿಯಾಯಿತು, ಈ ರೀತಿ ಕೊಡಬೇಡಿ ಎಂದು ರಾಜ್ಯ ಸರ್ಕಾರಕ್ಕೆ ಒತ್ತಡ ಹಾಕುತ್ತಾರೆ. ಆಗ ರಾಜ್ಯ ಸರ್ಕಾರದವರು ಏನು ಮಾಡುತ್ತಾರೆಂದರೆ ರೂ.35 ಸಾವಿರ ಕೋಟಿಗೆ ಪ್ರಸ್ತಾವನೆಯನ್ನು ಕಳುಹಿಸುತ್ತಾರೆ. ಇದೆಲ್ಲಾ ಆಗುವಷ್ಟರಲ್ಲಿ ಸಾಕಷ್ಟು ಹಾನಿಯಾಗಿರುತ್ತದೆ. ನಾವೇನೂ ಮಾಡುವುದಕ್ಕಾಗುತ್ತದೆ? ಅವರು ಕೊಟ್ಟಿಲ್ಲವೆಂದು ಕೇಂದ್ರ ಸರ್ಕಾರದ ಕೆಲವರು ಮಂತ್ರಿಗಳು ಹೇಳುತ್ತಾರೆ. ಅಲ್ಲಿಗೆ ಕೈಬಿಟ್ಟು ಬಿಡುತ್ತಾರೆ. ಇವತ್ತು 1200 ಕೋಟಿ ರೂಪಾಯಿಗಳು ಮಧ್ಯಾಂತರ ಪರಿಹಾರವಾಗಿ ಬಂದಿರುವಂತಹದ್ದು, ಕೇಂದ್ರ ಸರ್ಕಾರದಿಂದ ನಮಗೆ ಮಾಮೂಲಾಗಿ ಕಳುಹಿಸುವಂತಹ ಪ್ರತಿ ವರ್ಷ ಸುಮಾರು 303 ಕೋಟಿ ರೂಪಾಯಿಗಳು. 2015 ರಿಂದ 2020 ರವರೆಗೆ ಅಂದರೆ ಐದು ವರ್ಷಗಳ ಕಾಲ ಕೊಟ್ಟಿರುವಂತಹ ಒಂದು ಆದೇಶ.

(ಮುಂದು...)

(184)11.10.2019,8.20,ಟಿಸಿಹೆಚ್–ಕೆಎಸ್

**(ಸಭಾಪತಿಯವರ ಉಪಸ್ಥಿತಿ)**

**ಶ್ರೀ ಪಿ.ಆರ್.ರಮೇಶ್ (ನಾಮನಿರ್ದೇಶಿತರು) (ಮುಂದು):–** ಅದರ ಆದೇಶದ ಪ್ರಕಾರ SDRF (State Disaster Response Fund) ಮತ್ತು NDRF (National Disaster Response Fund) norms ಅನ್ನು ಫಿಕ್ಸ್ ಮಾಡುತ್ತಾರೆ. ಆ ಫಿಕ್ಸ್ ಮಾಡಿರತಕ್ಕಂಥ ನಾರ್ಮ್ಸ್ ಅನ್ನು ನಾನು ಓದುತ್ತೇನೆ, ಅದು ಕೆಳಕಂಡಂತಿದೆ;

*"....on financing of expenditure on immediate relief during natural disasters for the period 2015-2020 and the report of the Expert Group set up by this Ministry, the Government of India has revised*

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

*the items and norms for assistance from SDRF/NDRF. The approved list of items and norms for assistance from SDRF/NDRF in the wake of identified natural disasters is **Annexed....**"*

ಈ Annexed ಅನ್ನು ಮಾಡಿರುತ್ತಾರೆ. ಇದರಲ್ಲಿ ಹಲವಾರು items ಇದೆ. ನಾವು ಅನಪೇಕ್ಷಿತ ಪರಿಹಾರ ಎಂದು ಹೇಳುತ್ತೇವೆ. ಅಂದರೆ, 'Gratuitous Relief'. ಈ ರೀಲೀಫ್ ಫಂಡ್‌ನ್ನು ಕೊಡುವುದಕ್ಕೆ ಇಲ್ಲಿ ಒಂದು ನಾರ್ಮ್ಸ್ ಹಾಕಿದ್ದಾರೆ. ಈ ನಾರ್ಮ್ಸ್ ಬಹಳ ಮುಖ್ಯವಾದದ್ದು, ಇದರ ಆಧಾರದ ಮೇಲೆ ನಮ್ಮ ರಾಜ್ಯ ಸರ್ಕಾರ SDRF ಮೇಲೆ ಸರ್ವೇ ಮಾಡಿದೆಯೇ? ಇದು ಬಹಳ ಮುಖ್ಯವಾದುದು. ಇವತ್ತು ಕೇಂದ್ರ ಸರ್ಕಾರ Disaster Management Act (DM Act) ಅಡಿಯಲ್ಲಿ ನಿಮಗೆ ಕೊಟ್ಟಿರತಕ್ಕಂಥ ಅಧಿಕಾರವಾಗಿರುತ್ತದೆ. ನಮ್ಮ ರಾಜ್ಯದಲ್ಲೂ ಕೂಡ ಒಂದು ಇಲಾಖೆ ಇದೆ, ಆ ಇಲಾಖೆ ಅಡಿಯಲ್ಲಿ ನೀವು ಕೊಟ್ಟಂತಹ ಸಂಪೂರ್ಣ ಮಾಹಿತಿಯನ್ನು ಸರ್ವೇ ಮಾಡುವುದಕ್ಕೆ ತಹಸೀಲ್ದಾರರು ಇರಬಹುದು, ಜಿಲ್ಲಾಧಿಕಾರಿಗಳು ಇರಬಹುದು, 22 ಜಿಲ್ಲೆಗಳಲ್ಲಿ ಸರ್ಕಾರದವರು ಏನೆಲ್ಲಾ ಕ್ರಮ ತೆಗೆದುಕೊಂಡು ಸಂಪೂರ್ಣವಾಗಿ ಡೇಟಾವನ್ನು ಸಂಗ್ರಹಿಸಿದ್ದಾರೆಯೇ? ಇವತ್ತು GIS (Geographic Information System) ನಲ್ಲಿ ತಾಂತ್ರಿಕವಾಗಿ ದೊರೆಯುತ್ತದೆ. ಇವತ್ತು GIS ನಲ್ಲಿ ಕುಳಿತಲ್ಲಿಯೇ ಸಂಪೂರ್ಣವಾದ ಮಾಹಿತಿಯನ್ನು ಪಡೆದುಕೊಳ್ಳಬಹುದು. 2 ತಿಂಗಳ ಹಿಂದೆ ಆ ಜಾಗಗಳು ಯಾವ ರೀತಿ ಇದ್ದವು, ಇವತ್ತು ಯಾವ ರೀತಿ ಇವೆ; ಅಲ್ಲಿ ಯಾವ ರೀತಿ ಅನಾಹುತಗಳಾಗಿವೆ, ನೆರೆ ಹಾವಳಿಯಿಂದ ಯಾವ ರೀತಿ ಪ್ರಕೃತಿ ಹಾನಿಗೀಡಾಗಿದೆ ಎನ್ನುವುದರ ಬಗ್ಗೆ ಸಂಪೂರ್ಣವಾದ ಮಾಹಿತಿಯನ್ನು ತರಿಸಿಕೊಳ್ಳುವುದರಲ್ಲಿ ನೀವು ಏನಾದರೂ ಪ್ರಯತ್ನಪಟ್ಟಿದ್ದೀರಾ? ಇದು ಬಹಳ ಮುಖ್ಯವಾದಂಥದ್ದು. ಇವತ್ತು ನೆರೆ ಸಂತ್ರಸ್ತರಿಗೆ ತಲಾ 10,000/-ದಂತೆ ಪರಿಹಾರವನ್ನು ಕೊಟ್ಟಿದ್ದೇವೆಂದು ಹೇಳುತ್ತಿದ್ದಾರೆ. SDRF ನಲ್ಲಿ utensils ಕೊಡುವುದಕ್ಕೆ ಹಾಗೂ ಪ್ರತಿ ಪ್ರಾಣಿಗೂ ಪರಿಹಾರ ಕೊಡುವುದಕ್ಕೆ ಅವಕಾಶವಿದೆ. ನಾನು ಇದನ್ನೆಲ್ಲಾ ಸರಿಯಾಗಿ ಓದಿ ಹೇಳಬೇಕೆಂದರೆ, 10 ನಿಮಿಷ ಸಮಯ ಆಗುತ್ತದೆ. ಮಾನ್ಯ ಸಭಾಪತಿಯವರು ನನಗೆ ಹೆಚ್ಚು ಸಮಯ ಕೊಡುವುದಿಲ್ಲ. ಹಾಗಾಗಿ, ಇವತ್ತಿನವರೆಗೂ ನೀವು ಏನಾದರೂ SDRF ಮತ್ತು NDRF norms ಪ್ರಕಾರ ಸಂಪೂರ್ಣವಾಗಿ comply ಮಾಡಿದ್ದಾರಾ? ಕೇಂದ್ರ ಸರ್ಕಾರದ ಆದೇಶಗಳ ಮೇಲೆ ನಮಗೆ ಇರತಕ್ಕಂಥ ಗೈಡ್‌ಲೈನ್ಸ್ ಮೇಲೆ ನೆರೆ ಸಂತ್ರಸ್ತರಿಗೆ ಹಣವನ್ನು ಕೊಡಬೇಕು ಎಂದು ಹೇಳುತ್ತಿದ್ದಾರೆ. ಆ ರೀತಿ ಕೊಡತಕ್ಕಂಥದ್ದಕ್ಕೆ ಬೇಸಿಕ್ ಆಗಿ ನೀವೇನು ಕೆಲಸ ಮಾಡಿದ್ದೀರಿ? 38 ಸಾವಿರ ಕೋಟಿ ರೂಪಾಯಿಗಳಷ್ಟು ಹಾನಿ ಆಗಿದೆ ಎಂದು ಸರ್ಕಾರದವರು ಒಂದು ಬಾರಿ ಮಾಹಿತಿ ಕೊಡುತ್ತಾರೆ, ಇನ್ನೊಂದು ಬಾರಿ 35 ಸಾವಿರ ಕೋಟಿ ರೂಪಾಯಿಗಳಷ್ಟು ಹಾನಿಯಾಗಿದೆ ಎಂದು ಮಾಹಿತಿ ಕೊಟ್ಟಿದ್ದಾರೆ. ಆದರೆ, ಕೇಂದ್ರ ಸರ್ಕಾರದಿಂದ ಬರೀ 897 ಕೋಟಿ ರೂಪಾಯಿಗಳು ಮಾತ್ರ ಬರುತ್ತದೆ. ಇನ್ನು ಉಳಿದ 303 ಕೋಟಿ ರೂಪಾಯಿಗಳು SDRF ನ fund

ಆಗಿರುತ್ತದೆ. ಅದು ಪ್ರತಿ ವರ್ಷ ಬರುತ್ತದೆ. ಪ್ರತಿ ವರ್ಷ ಬರತಕ್ಕಂಥ ಫಂಡ್ ಬ್ಯಾಂಕ್‌ನಲ್ಲಿ ಇಡುತ್ತಾರೆ, ಅದಕ್ಕೆ ಅವರು ಬಡ್ಡಿ ಕೊಡುತ್ತಾರೆ. ಬರತಕ್ಕಂಥ ಬಡ್ಡಿ ಬಗ್ಗೆ ಪ್ರತಿ ವರ್ಷ ಕೇಂದ್ರ ಸರ್ಕಾರಕ್ಕೆ utilization report, ಲೆಕ್ಕ ಕೊಡಬೇಕು. ಐದು ವರ್ಷಗಳು ಕೊಡುತ್ತಾರೆ. ಅದು 2020 ರವರೆಗೆ ಇರತಕ್ಕಂಥ ಆದೇಶ. 2020 ನೇ ಸಾಲು ಮುಗಿದ ನಂತರ, cost escalation ಇರುತ್ತದೆ, ಅದರ ಮೇಲೆ ಆದೇಶ ಮಾಡುತ್ತಾರೆ.

ಇವತ್ತು ಕೇಂದ್ರ ಸರ್ಕಾರದವರು ಒರಿಸ್ಸಾ ರಾಜ್ಯಕ್ಕೆ ಕೊಟ್ಟಿರತಕ್ಕಂಥ ಆಧಾರದ ಮೇಲೆ, ರಾಷ್ಟ್ರೀಯ್ಯ ವಿಪತ್ತು ಎಂದು declare ಮಾಡಿದ ನಂತರ, ತಮಿಳುನಾಡಿಗೆ ಸ್ಪೆಷಲ್ ಪ್ಯಾಕೇಜ್ ಕೊಟ್ಟಿರುತ್ತಾರೆ. ಕೇರಳ ರಾಜ್ಯಕ್ಕೆ ಸ್ಪೆಷಲ್ ಪ್ಯಾಕೇಜ್ ಕೊಟ್ಟಿರುತ್ತಾರೆ, ಅದೇ ರೀತಿ ಜಮ್ಮು ಮತ್ತು ಕಾಶ್ಮೀರಕ್ಕೆ ಸ್ಪೆಷಲ್ ಪ್ಯಾಕೇಜ್ ಕೊಟ್ಟಿರುತ್ತಾರೆ. ಹೋದ ವರ್ಷ ನಮ್ಮ ಕರ್ನಾಟಕ ರಾಜ್ಯದಲ್ಲಿ ಮಡಿಕೇರಿಯ ಕೂರ್ಗ್‌ನಲ್ಲಿ ಮಳೆಯಿಂದ ಸಂಪೂರ್ಣವಾಗಿ ಹಾನಿಯಾಗಿದೆ. ಮತ್ತೆ ವಿರಾಜಪೇಟೆ ಮತ್ತು ಸುತ್ತಮುತ್ತಲಿನ ಪ್ರದೇಶದಲ್ಲಿ ಮಳೆಯಿಂದ ಹಾನಿ ಸಂಭವಿಸಿದೆ. ಈಗ ತಾನೆ ಮಾನ್ಯ ಸಚಿವರು ನಾವು ನೆರೆ ಸಂತ್ರಸ್ತರಿಗೆ ಪರಿಹಾರ ಕೊಡುವುದನ್ನು ತ್ವರಿತಗತಿಯಲ್ಲಿ ಮಾಡುತ್ತೇವೆಂದು ಹೇಳಿದರು. ಎಲ್ಲಿದೆ ತ್ವರಿತ ಗತಿ? Notification ಅನ್ನು ಹೊರಡಿಸಿರತಕ್ಕಂಥ ದಿನಾಂಕ ಇದೆಯಲ್ಲಾ, ಎಲ್ಲಿದೆ ತ್ವರಿತಗತಿ? ಕೇಂದ್ರ ಸರ್ಕಾರಕ್ಕೆ ಒತ್ತಡ ಹಾಕುವುದಕ್ಕೆ ಇವರಿಗೆ ಆಸಕ್ತಿ ಇಲ್ಲ. ಹಾಗಾಗಿ, ಇವತ್ತು ಈ notification ಗೆ ಸಂಬಂಧಪಟ್ಟ ಸಂಪೂರ್ಣ ಮಾಹಿತಿಯನ್ನು ಸರ್ಕಾರ ಕೊಡಬೇಕಾಗುತ್ತದೆ. ಅದರ ಜೊತೆಗೆ SDRF ಮತ್ತು NDRF norms ನ ಪ್ರಕಾರ ಇಲ್ಲಿಯವರೆಗೆ ಏನೆಲ್ಲಾ ಮಾಡಿದ್ದಾರೆ, ಅದರ ಬಗ್ಗೆ ಸಂಪೂರ್ಣ ಮಾಹಿತಿ ಕೊಡಬೇಕಾಗುತ್ತದೆ. ಇವೆಲ್ಲಾ ಕೊಟ್ಟಾಗ ಮಾತ್ರ ಕಂಡಿತವಾಗಿ ಸಾಕಷ್ಟು ವಿಷಯಗಳು ಸಾರ್ವಜನಿಕರಿಗೂ ಗೊತ್ತಾಗುತ್ತದೆ. ರಾಜ್ಯ ಸರ್ಕಾರ ಎಷ್ಟರಮಟ್ಟಿಗೆ ಆಮೆಗತಿಯಲ್ಲಿ ಈ ಕೆಲಸಗಳನ್ನು ಮಾಡುತ್ತಿದೆ ಎಂಬುದು ಪ್ರದರ್ಶನ ಆಗುತ್ತದೆ.

**ಶ್ರೀ ಯು.ಬಿ.ವೆಂಕಟೇಶ್ (ನಾಮನಿರ್ದೇಶಿತರು):-** ಮಾನ್ಯ ಸಭಾಪತಿಯವರೇ, ಅವಕಾಶ ಕೊಟ್ಟಿದ್ದಕ್ಕಾಗಿ ಧನ್ಯವಾದಗಳು. ಏಕೆಂದರೆ, ನಾವೆಲ್ಲಾ ಲಾಸ್ಟ್‌ಬೆಂಚ್ ವಿದ್ಯಾರ್ಥಿಗಳಿದ್ದಂತೆ. ಹಾಗೆಂದರೇನೆಂಬುದು ನಮಗೆಲ್ಲಾ ಗೊತ್ತಿದೆ. ಅಂತಿಮವಾಗಿ ನನಗೆ ಮಾತನಾಡಲು ಅವಕಾಶ ಸಿಕ್ಕಿದೆ, ಅದಕ್ಕಾಗಿ ನನಗೆ ಸಂತೋಷ!

**ಶ್ರೀ ಶರಣಪ್ಪ ಮಟ್ಟೂರ(ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಒಂದು ನಿಮಿಷ. ನನ್ನದು ಒಂದೇ ಒಂದು ಪಾಯಿಂಟ್ ಇದೆ. ನಾನು ಹೆಚ್ಚು ಮಾತನಾಡುವುದಿಲ್ಲ. ಮೊದಲನೆಯದಾಗಿ, ನಾನು ಈಗಾಗಲೇ ಹೇಳಿದಂತೆ, ಕೇಂದ್ರ ಸರ್ಕಾರದವರು ಇದನ್ನು 'ರಾಷ್ಟ್ರೀಯ ವಿಪತ್ತು' ಎಂದು declare ಮಾಡಬೇಕು ಎನ್ನತಕ್ಕಂಥದ್ದು ನನ್ನ ಆಗ್ರಹ. ಈಗಾಗಲೇ ಮಾನ್ಯ ಪಿ.ಆರ್.ರಮೇಶ್‌ರವರು ನಮ್ಮ ರಾಜ್ಯದ ನೆರೆಯ ಗಂಭೀರತೆಯನ್ನು ಅರಿತು ಒರಿಸ್ಸಾ ರಾಜ್ಯದಲ್ಲಿ ನೆರೆ ಬಂದಾಗ ಯಾವ ರೀತಿ 'ರಾಷ್ಟ್ರೀಯ ವಿಪತ್ತು' ಎಂದು

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಘೋಷಣೆ ಮಾಡಿದ್ದಾರೆ ಅದೇ ರೀತಿ ನಮ್ಮ ರಾಜ್ಯದಲ್ಲೂ ಘೋಷಣೆ ಮಾಡಬೇಕು. ಈ ವಿಚಾರ ಬಹಳ ಗಂಭೀರತೆಯಿಂದ ಕೂಡಿದೆ. ನಮ್ಮ ರಾಜ್ಯದಲ್ಲಿ 22 ಜಿಲ್ಲೆಗಳಲ್ಲಿ ಪ್ರವಾಹ ಬಂದಿದೆ. ಅದಕ್ಕೋಸ್ಕರ ಅದನ್ನು ಮಾಡಬೇಕು. Disaster Management Act ನ ಪ್ರಕಾರ National Disaster Management Authority (NDMA) is headed by the Hon'ble Prime Minister as ex-officio Chairman, ನಮ್ಮ ರಾಜ್ಯದಲ್ಲಿ ಮಾನ್ಯ ಮುಖ್ಯಮಂತ್ರಿಯವರ್ರು ಕೂಡ ಅದೇ ಪಕ್ಷದವರು, and the SDMA (State Disaster Management Authority) will be headed by the Hon'ble Chief Minister as ex-officio Chairman. ಅವರು ಇದನ್ನು ಮಾಡುವುದಕ್ಕೆ ತೊಂದರೆ ಆಗುವುದಿಲ್ಲ. ಎಂದು ನಮ್ಮ ಸಲಹೆಯನ್ನು ಕೊಡುವುದಕ್ಕೆ ಕೂಡ ಬಯಸುತ್ತೇನೆ ಮಾನ್ಯ ಸಿ.ಸಿ.ಪಾಟಿಲ್‌ರವರೇ. ಎರಡನೆಯದಾಗಿ, ಮಾನ್ಯ ಮಾಧುಸ್ವಾಮಿಯವರು ಶೇ.10ರಷ್ಟು ಎಂದು ಹೇಳಿದರಲ್ಲಾ, ಕೊನೆಗೆ ಅದನ್ನಾದರೂ ಆದಷ್ಟು ಬೇಗ 3500 ಕೋಟಿ ರೂಪಾಯಿಗಳನ್ನು ಕೊಡುವುದಕ್ಕೆ ನಾನು ಆಗ್ರಹ ಮಾಡಿ ನನ್ನ ಮಾತನ್ನು ಮುಗಿಸುತ್ತೇನೆ. ಧನ್ಯವಾದಗಳು.

**ಶ್ರೀ ಯು.ಬಿ.ವೆಂಕಟೇಶ್:–** ಮಾನ್ಯ ಸಭಾಪತಿಯವರೇ, ಅವಕಾಶ ಕೊಟ್ಟಿದ್ದಕ್ಕಾಗಿ ಧನ್ಯವಾದಗಳು. ಈ ಶತಮಾನದಲ್ಲಿ ಕಂಡು ಕೇಳರಿಯದಂತಹ ಪ್ರಕೃತಿ ವಿಕೋಪ ಸಂಭವಿಸಿದ್ದು, ನಮ್ಮ ರಾಜ್ಯದ ಜನರಿಗೆ ಇದು ಒಂದು ಶಾಪವಾಗಿದೆ. ಇದು ಈ ರಾಜ್ಯದ ಜನರ ದುರ್ದೈವವೋ ಏನೋ ಗೊತ್ತಿಲ್ಲ. ಆದರೆ, ಅದು ಬರಬಾರದಿತ್ತು, ಬಂದಿದೆ. ಸರ್ಕಾರ 38 ಸಾವಿರ ಕೋಟಿಯಷ್ಟು ನಷ್ಟ ಆಗಿದೆಯೆಂದು ಹೇಳುತ್ತಾರೆ. ಆದರೆ, ನಮ್ಮ ಪಕ್ಷದಿಂದ ಒಂದು ಲಕ್ಷ ಕೋಟಿ ನಷ್ಟ ಆಗಿದೆ ಎಂದು ಹೇಳಿದ್ದೇವೆ. 38 ಸಾವಿರ ಕೋಟಿ ನಷ್ಟ ಆಗಿರುವುದನ್ನು 35 ಸಾವಿರ ಕೋಟಿ ನಷ್ಟ ಆಗಿದೆ ಎಂದು ರಿವೈಸ್ ಮಾಡಿದ್ದಾರೆ, ಅದಕ್ಕೆ ಸಂತೋಷ. ಅದರಲ್ಲಿ ಕೇಂದ್ರ ಸರ್ಕಾರದಿಂದ 1,200 ಕೋಟಿ ರೂಪಾಯಿಗಳು ಬಂದಿದೆ. ಮಾನ್ಯ ಕಂದಾಯ ಸಚಿವರು 1,700 ಕೋಟಿ ರೂಪಾಯಿಗಳವರೆಗೆ ನಮ್ಮ ರಾಜ್ಯ ಸರ್ಕಾರದಿಂದ ಕೊಟ್ಟಿದ್ದೇವೆಂದು ಹೇಳಿದ್ದಾರೆ. ಅವರು ಯಾವುದನ್ನಾದರೂ ಕೊಡಲಿ, ದುಡ್ಡು ಕೊಟ್ಟಿದ್ದಾರೆ. ಇನ್ನು 32 ಸಾವಿರ ಕೋಟಿಯಷ್ಟು ದುಡ್ಡು ಕೊಡಬೇಕು. ಇದು ನಮ್ಮ ಡಿಮಾಂಡ್ ಎಂದು ಹೇಳುತ್ತೇನೆ. ಏಕೆಂದರೆ, ನಾನು ಬರದ ಬಗ್ಗೆ ಕೂಡ ಹೆಚ್ಚಿಗೆ ಹೇಳುವುದಿಲ್ಲ. ಈಗ ಸಮಯ ಕೂಡ ಆಗಿದೆ, ಎಲ್ಲಾ ಮಾನ್ಯ ಸದಸ್ಯರುಗಳು ಬೇಜಾರು ಮಾಡಿಕೊಳ್ಳುತ್ತಾರೆ. ಬೆಳಿಗ್ಗೆಯಿಂದ ಅದರ ಬಗ್ಗೆಯೇ ಎಲ್ಲರೂ ಹೇಳಿದ್ದಾರೆ. ಮಾನ್ಯ ಸಿ.ಸಿ.ಪಾಟೀಲ್‌ರವರು ಎಲ್ಲರೂ ಮಾತನಾಡಿದ್ದನ್ನು ಕೇಳಿಸಿಕೊಂಡಿದ್ದಾರೆ, ಅದಕ್ಕಾಗಿ ನಾನು ಅವರಿಗೆ ಅಭಿನಂದಿಸುತ್ತೇನೆ. ಅವರ ಹತ್ತಿರ ಅಷ್ಟು ತಾಳ್ಮೆ ಇದೆ. 35 ಸಾವಿರ ಕೋಟಿ ರೂಪಾಯಿಗಳಲ್ಲಿ 3,000 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದಾರೆ. ಇನ್ನು 32 ಸಾವಿರ ಕೋಟಿ ರೂಪಾಯಿಗಳನ್ನು ಯಾವ ರೀತಿ ಅಂದಾಜು ಮಾಡಿ ಎಷ್ಟು ದಿವಸದಲ್ಲಿ ಕೊಡಲಾಗುತ್ತದೆ ಎಂಬುದನ್ನು ತಿಳಿಸಬೇಕು. ಸರ್ಕಾರ ಬಜೆಟ್ ಮಂಡನೆ

ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಮಾಡಿದೆ ಇದನ್ನು ಪೂರಕ ಅಂದಾಜಿನಲ್ಲಿ ಮಾಡಿ. ಈ ರಾಜ್ಯದಲ್ಲಿ ಮಾಡತಕ್ಕಂಥ ಬಾಕಿ ಖರ್ಚುಗಳನ್ನೆಲ್ಲಾ ನಿಲ್ಲಿಸಿಬಿಡಿ. ಈ 32 ಸಾವಿರ ಕೋಟಿ ರೂಪಾಯಿಗಳನ್ನು ನಾವು ಇಂತಹ ದಿವಸದಂದು ಕೊಡುತ್ತೇವೆಂದು ಹೇಳಿ. ಅದು 30 ದಿವಸ ಇರಬಹದು ಅಥವಾ 60 ದಿವಸ ಇರಬಹುದು ಅಥವಾ 6 ತಿಂಗಳಿನಲ್ಲಿ ಬಿಡುಗಡೆ ಮಾಡುತ್ತೇವೆ ಎಂದು ರಾಜ್ಯ ಸರ್ಕಾರದಿಂದ ತಮ್ಮ ಮುಖಾಂತರ ಒಂದು ಅಧಿಸೂಚನೆ ಬರಬೇಕೆಂದು ನಾನು ಕೇಳಿಕೊಳ್ಳುತ್ತಿದ್ದೇನೆ. ಅಲ್ಲಿ 1,465 ಶೆಡ್‌ಗಳನ್ನು ನಿರ್ಮಿಸಲಾಗಿದೆ ಎಂದು ಹೇಳಿದ್ದಾರೆ. 4 ಲಕ್ಷದ 60 ಸಾವಿರ ಜನ ಇದ್ದಾರೆ, ಅಂದರೆ ಸರಾಸರಿ 313 ಜನ ಇದ್ದಾರೆ. ಆ ಶೆಡ್‌ನ ನಿವೇಶನ ಎಷ್ಟು, ಅದರ ಸುತ್ತಳತೆ ಎಷ್ಟು, ಅದರಲ್ಲಿ ಎಷ್ಟು ಜನ ಉಳಿದುಕೊಳ್ಳಬಹುದು? ಆ ಶೆಡ್‌ನಲ್ಲಿ ಒಬ್ಬರ ಮೇಲೆ ಒಬ್ಬರು ಮಲಗಿಕೊಂಡರೂ ಕೂಡ ಅಲ್ಲಿ 100 ಜನ ಉಳಿದುಕೊಳ್ಳುವುದಕ್ಕೆ ಆಗುವುದಿಲ್ಲ. ಅವರ ಪ್ರಕಾರ ಸರಾಸರಿ ಒಂದು ಶೆಡ್‌ನಲ್ಲಿ 350 ಜನ ಇರಬೇಕಾಗುತ್ತದೆ. ಅಲ್ಲಿ ಹುಟ್ಟಿದ್ದಕ್ಕೆ ಆ ಜನ ಏನು ಪಾಪ ಮಾಡಿದ್ದಾರೆ, ಮಾನ್ಯ ಸಭಾಪತಿಯವರೇ? ನಾವು ಬೆಳಗಾವಿಯ ಆ ಜಾಗಕ್ಕೆ ಹೋಗಿದ್ದೆವು. ಅಲ್ಲಿನ ಹೆಣ್ಣುಮಕ್ಕಳು ನಮ್ಮ ಹತ್ತಿರ ಅತ್ತುಕೊಂಡು ಬಂದು "ಸರ್, ನಾವು ಯಾಕಾದ್ರು ಬದುಕಿದೆವೋ, ಈ ನೀರಿನಲ್ಲಿ ಮುಳುಗಿ ಸತ್ತುಹೋಗಿದ್ದರೆ ಚೆನ್ನಾಗಿರುತ್ತಿತ್ತು" ಎಂದು ಹೇಳಿದರು. ಹಾಗಾಗಿ, ದಯವಿಟ್ಟು ಶೆಡ್‌ಗಳನ್ನು ಅಗತ್ಯಕ್ಕೆ ತಕ್ಕಂತೆ ಏನು ಮನೆಗಳನ್ನು ಕಟ್ಟಿಸಿಕೊಡುತ್ತಿರೋ ಅದನ್ನು ಆದಷ್ಟು ಬೇಗನೆ ಕೊಡಿ. ಈಗಾಗಲೇ ಬರ ಬಂದು ಎರಡು ತಿಂಗಳು ಕಳೆದಿದ್ದರೂ ಕೂಡ ಈ ಸರ್ಕಾರ ಎಚ್ಚೆತ್ತುಕೊಂಡಿಲ್ಲ. ಆದ್ದರಿಂದ ದಯವಿಟ್ಟು ಆದಷ್ಟು ಬೇಗ ಇದನ್ನು ಮಾಡಿಕೊಡಿ. 122 ತಾಲ್ಲೂಕುಗಳಲ್ಲಿ ಒಂದೊಂದು ಹೆಲ್ಪ್‌ಲೈನ್ ಸೆಂಟರ್ ಮಾಡಿ. Single Window Agency (SWA) ಮಾಡಿ. ಪ್ರತಿಯೊಬ್ಬರಿಗೂ ಬೇಕಾದಂತಹ ಐ.ಡಿ.ಕಾರ್ಡ್ ಇರಬಹುದು, ಆಧಾರ್‌ಕಾರ್ಡ್ ಇರಬಹುದು; ಅವರ ಜಮೀನಿಗೆ ಸಂಬಂಧಪಟ್ಟ ಪಟ್ಟಾ ಇರಬಹುದು; ಏನು ಬೇಕಾದರೂ ಇರಲಿ, ಅದೆಲ್ಲಾ ಒಂದೇ ಕಡೆ ಸಿಗುವಂತೆ ಮಾಡಿಕೊಡಿ. ಒಬ್ಬೊಬ್ಬ ಅಧಿಕಾರಿಗಳು ಒಂದೊಂದು ಕಡೆ ಇರುತ್ತಾರೆ. ಈಗ ಕಂದಾಯ ನಿರೀಕ್ಷಕರು ಒಂದು ಕಡೆ ಇರುತ್ತಾರೆ, ತಹಸೀಲ್ದಾರ್‌ರವರು ಮತ್ತೊಂದು ಕಡೆ ಇರುತ್ತಾರೆ. ಒಂದೊಂದಕ್ಕೆ ಒಂದೊಂದು ಕಡೆ ಹೋಗಬಾರದು. ಅದಕ್ಕಾಗಿ ಒಂದು SWA ಮಾಡಿ. ನೆರೆ ಸಂತ್ರಸ್ತರಿಗೆ ಏನೇನು ದಕ್ಕಬೇಕೋ ಅದನ್ನೆಲ್ಲಾ ಸಿಗುವಂತೆ ಮಾಡಿ. ನಮ್ಮ ಸರ್ಕಾರ ಹೇಗಿದೆ ಎಂದರೆ, ನೆರೆ ಮತ್ತು ಬರ ಇವೆರಡಕ್ಕೂ ಜನರ ಮೇಲೆ ಬಹಳ ಪ್ರೀತಿ ಇದೆ. ಆದರೆ ಮಾಡುವುದಕ್ಕೆ ಪ್ರೀತಿ ಇದೆ, ಪುರಸೊತ್ತು ಇಲ್ಲ. ಆ ರೀತಿ ಆಗಿದೆ.

**(ಮುಂದು...)**

**(185)11.10.2019/8.30/ಎಂ.ಎಂ-ಜಿ.ಆರ್**

(ಸಭಾಪತಿಯವರ ಉಪಸ್ಥಿತಿ)

**ಶ್ರೀ ಯು.ಬಿ. ವೆಂಕಟೇಶ್ (ಮುಂದು):-**

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾನ್ಯ ನಾರಾಯಣಸ್ವಾಮಿಯವರು ಮಕ್ಕಳನ್ನು ಶಾಲೆಗಳಿಗೆ ಸೇರಿಸಿ ಎಂದು ಹೇಳಿದರು. 10–15 ಕಿ.ಮೀ ಒಳಗೆ ಶಾಲೆ ಇಲ್ಲದಿದ್ದರೆ ಎಲ್ಲಿಗೆ ಸೇರಿಸುವುದು? ಏನನ್ನು ಓದುವುದಕ್ಕಾಗುತ್ತದೆ? ತಾತ್ಕಾಲಿಕವಾಗಿ ಏನಾದರೂ ಒಂದನ್ನು ಮಾಡಿ. ಶಾಲೆಗಳೆಲ್ಲಾ ಬಿದ್ದುಹೋಗಿವೆ. ಯಾವುದಾದರೂ ಒಂದು ಸರ್ಕಾರಿ ಕಟ್ಟಡದಲ್ಲಿ ಶಾಲೆ ನಡೆಸಲು ತಾತ್ಕಾಲಿಕವಾಗಿ ಅವಕಾಶ ಮಾಡಿಕೊಡಿ, ಇಲ್ಲದಿದ್ದರೆ ಷೆಡ್ ಒಂದನ್ನು ಹಾಕಿಕೊಡಿ. ಮಕ್ಕಳಿಗೆ ಆ ಊರಿನಲ್ಲಿ; ಮಕ್ಕಳು 1–2 ಕಿ.ಮೀ. ನಡೆಯುತ್ತಾರೆ. ನಾವು ಬೆಂಗಳೂರಿನಲ್ಲಿ ಓಡಾಡುವುದಕ್ಕೆ ಆಟೋ, ಓಲಾ, ಊಬರ್ ಹಿಡಿದುಕೊಳ್ಳುತ್ತೇವೆ. ಹಳ್ಳಿಗಳಲ್ಲಿ ರಸ್ತೆಗಳೇ ಇಲ್ಲದಿದ್ದರೆ ಮಕ್ಕಳು ಹೇಗೆ ಓದುತ್ತಾರೆ? ಊಟಕ್ಕೆ, ಜೀವನಕ್ಕೆ ಕಷ್ಟವಾಗಿದೆ, ಓದುವುದಕ್ಕೆ ತಾತ್ಕಾಲಿವಾಗಿಯಾದರೂ ಒಂದು ವ್ಯವಸ್ಥೆ ಮಾಡಿಕೊಡಿ. ಬೆಳಗಾವಿ ಮತ್ತು ಬಾಗಲಕೋಟ ಜಿಲ್ಲೆಯಲ್ಲಿ ನೇಕಾರರಿದ್ದಾರೆ. ಅವರ ವಿಚಾರವನ್ನು ಯಾರೂ ಪ್ರಸ್ತಾಪ ಮಾಡುತ್ತಿಲ್ಲ. ನೇಕಾರರೆಲ್ಲರ ಮಗ್ಗ, ಬಟ್ಟೆ ಮತ್ತು ಅವರ ಕಚ್ಚಾವಸ್ತುಗಳೇನಿತ್ತು ಎಲ್ಲವೂ ಪ್ರವಾಹದಲ್ಲಿ ಕೊಚ್ಚಿಹೋಗಿವೆ. ಈಗ ಅವರ ಜೀವನಕ್ಕೆ ಏನೂ ಇಲ್ಲ. ಮಾನ್ಯ ಯಡಿಯೂರಪ್ಪನವರು ವಿರೋಧಪಕ್ಷದಲ್ಲಿದ್ದಾಗ ನೇಕಾರರ ಸಾಲ ಮನ್ನ, ರೈತರ ಸಾಲ ಮನ್ನ ಮಾಡಬೇಕು, ಮೊದಲು ರೈತರಿಗೆ ಪರಿಹಾರ ಕೊಡುವವರೆಗೂ ಮುಂದೆ ಬರುವುದಿಲ್ಲ, ಮಾಧ್ಯಮಗಳನ್ನು ಬಹಿಷ್ಕಾರ ಮಾಡಿದರೆ ಧರಣಿ ಕುಳಿತುಕೊಳ್ಳುತ್ತೇನೆ ಎಂದು ಹೇಳುತ್ತಿದ್ದರು. ಈಗ ಎಲ್ಲವೂ ತದ್ವಿರುದ್ಧವಾಗಿವೆ. ಆಮೇಲೆ vengeance politics ನ್ನು ಬಿಡಿ. ತಾವು ಏನು ಹೇಳಿದಿರಿ ಎಂದರೆ, ನಾವು ಇನ್ನೇನಿದ್ದರೂ ಕಲ್ಯಾಣ ಮಾಡೋಣ ಎಂದು. ಏನನ್ನು ಕಲ್ಯಾಣ ಮಾಡಿದಿರಿ? 'ಕಲ್ಯಾಣ ಕರ್ನಾಟಕ' ಎಂದು ಗುಲ್ಬರ್ಗಾ ಜಿಲ್ಲೆಯಲ್ಲಿ ಮಾಡಿದಿರಿ. ನಮ್ಮ ನಾಯಕರುಗಳು ಭಾರತ ಸಂವಿಧಾನದ ಅನುಚ್ಛೇದ 371ಜೆ ಯನ್ನು ಜಾರಿಗೆ ತಂದರು. ತಾವು ಹೋಗಿ ಒಂದು ಹೆಸರನ್ನು ಇಟ್ಟಿರಿ. ಅಲ್ಲೊಂದು ಹೈದರಾಬಾದ್ ಕರ್ನಾಟಕ ಬೋರ್ಡ್ ಇದೆ. ಅದಕ್ಕೆ ಒಬ್ಬರನ್ನು ಛೇರ್ಮನ್ ಮಾಡಬೇಕು. ಕಾನೂನಿನ ಪ್ರಕಾರ ಅಲ್ಲಿಗೆ ಒಬ್ಬ ಸಚಿವರನ್ನು ಛೇರ್ಮನ್ ಆಗಬೇಕು. ಅದನ್ನೇಕೆ ತಾವು ಅನೌನ್ಸ್ ಮಾಡಿಲ್ಲ? 1500 ಕೋಟಿ ಹಣ ಇದೆ. ಆ ಹಣವನ್ನು ಅಲ್ಲಿನ ಜನರಿಗೆ ಕೆಲಸ ಮಾಡುವುದಕ್ಕೆ ಉಪಯೋಗಿಸುವುದಕ್ಕೆ ಪವರ್ ಇರುತ್ತದೆ. ಅದನ್ನು ಯಾವ ಶಾಸಕರಿಗೆ ಕೊಡಬೇಕು, ಅಮೆಂಡ್ ಮಾಡಬೇಕೋ ಮಾಡಿರಿ, ಏತಕ್ಕೆ ನಿಧಾನ ಮಾಡುತ್ತಿದ್ದೀರಿ? ಆ ಭಾಗಕ್ಕೆ 1500 ಕೋಟಿ ಹಣವಿದೆ. ಆ ಹಣವನ್ನು ಖರ್ಚು ಮಾಡುವ ಅಧಿಕಾರ ಹೈದರಾಬಾದ್ ಕರ್ನಾಟಕ ಬೋರ್ಡ್‌ನ ಅಧ್ಯಕ್ಷರಿಗಿದೆ. ಅಧ್ಯಕ್ಷರನ್ನು ನೇಮಕ ಮಾಡುವುದಕ್ಕೆ ನಿಮಗೆ ನಿಮ್ಮ ಭಾಗದವರ ಮೇಲೆ ನಂಬಿಕೆ ಇಲ್ಲವೇ? ಯಾರನ್ನು ಅಧ್ಯಕ್ಷರನ್ನಾಗಿ ಮಾಡುತ್ತೀರೋ ಮಾಡಿ, ಏನು ಅಮೆಂಡ್‌ಮೆಂಟ್ ಮಾಡಬೇಕೋ ಮಾಡಿ. ಈಗಾಗಲೇ ಎರಡೂವರೆ ತಿಂಗಳಾಯಿತು ಇನ್ನು ಯಾವಾಗ ಮಾಡುತ್ತೀರಿ? ಗುಲ್ಬರ್ಗಾ, ಯಾದಗಿರಿ ಎಲ್ಲಾ ಕಡೆ ಜನರು ಸಾಯುತ್ತಿದ್ದಾರೆ. ಈ ಕಡೆ ಏನೋ ಅನುಕೂಲ ಇದೆ ಓಡಾಡುತ್ತಾರೆ. ಅಲ್ಲಿನ ಪರಿಸ್ಥಿತಿಯನ್ನು ಹೋಗಿ ನೋಡಿ ಸ್ವಾಮೀ. ಅಲ್ಲಿಗೆ ಹೋಗಿ ಕಲ್ಯಾಣ ಕರ್ನಾಟಕ, ಬಂಗಾರ ಕರ್ನಾಟಕ ಎಂದು ಹೆಸರೊಂದನ್ನು ಚೇಂಜ್ ಮಾಡಿದರು. ಅಲ್ಲಿ

ಏನಾದರೂ ಮಾಡಿ ತೋರಿಸಿ. ಅಲ್ಲಿಗೆ ಒಬ್ಬ ಅಧ್ಯಕ್ಷರನ್ನು ಕೊಡಿ ಅವರು ನಿಮ್ಮ ಪಕ್ಷದವರಲ್ಲವೇ? ನಮ್ಮ ಪಕ್ಷದವರೇ? ಅವರೇನು 1500 ಕೋಟಿ ಹಣವನ್ನು ಎತ್ತಿಕೊಂಡು ಓಡಿ ಹೋಗುತ್ತಾರೆಯೇ? ಅವರೇನು ಅದನ್ನು ಖರ್ಚು ಮಾಡಬೇಕೇ, ಅದನ್ನು ಅವರು ಖರ್ಚು ಮಾಡುವುದಕ್ಕೆ ಅವರಿಗೆ ಅನುಮತಿ ಇಲ್ಲ. ಆ ಭಾಗದಲ್ಲೇ ಖರ್ಚು ಮಾಡಬೇಕು, ಆ ಜಿಲ್ಲೆಗಳೊಳಗೇ ಖರ್ಚು ಮಾಡಬೇಕು. ನನಗಿರುವ ಮಾಹಿತಿ ಪ್ರಕಾರ ಆ ಭಾಗದ ಮಂತ್ರಿನೇ ಆಗಬೇಕು, ಆದಷ್ಟು ಬೇಗ ಅಧ್ಯಕ್ಷರನ್ನು ನೇಮಕ ಮಾಡಿ ಆ ಹಣ ಖರ್ಚಾಗಬೇಕು. ಆ ಹಣಕ್ಕೆ ಖರ್ಚು ಬರಬೇಕು. ನಮ್ಮ ಕೋರಿಕೆ ಇಷ್ಟೇ. ಎಲ್ಲಾ ಕೆಲಸಗಳನ್ನು ನಿಲ್ಲಿಸಿ, ಎಸ್ಟಿಮೇಟ್ ಮಾಡಿರುವ 35,000 ಕೋಟಿ ಹಣವನ್ನು ಹೊಂದಿಸಿ ಈ ಕೆಲಸವನ್ನು ತಕ್ಷಣವೇ ಪೂರ್ಣಗೊಳಿಸಬೇಕು. ಒಂದು ಮತ ಕೊಟ್ಟರೆ ಪಾರ್ಲಿಮೆಂಟ್‌ನಲ್ಲಿ ಎರಡು ಎಂದು ಬಿ.ಜೆ.ಪಿ ಯವರು ಹೇಳಿದರು. ಒಂದು ರಾಜ್ಯ ಸರ್ಕಾರ ಮತ್ತೊಂದು ಕೇಂದ್ರ ಸರ್ಕಾರ. ನೀವು ಅನೈತಿಕವಾಗಿ ಸರ್ಕಾರವನ್ನು ಮಾಡಿಕೊಂಡಿರಿ. ಮಾಡಿಕೊಂಡ ಮೇಲೆ ಎರಡು ಸರ್ಕಾರ ನಿಮ್ಮದೇ ಬಂತು ಆದರೂ ಪ್ರಧಾನಮಂತ್ರಿಯವರಿಂದ 'national calamity' ಎಂದು ಘೋಷಣೆ ಮಾಡಿಸುವುದಕ್ಕೆ ನಿಮಗೇನು ಖಾಯಿಲೆ ಆಗಿದೆ? ಇಷ್ಟು ದಿನಗಳಾದರೂ ಇವರು ಒಂದು ಸರ್ವಪಕ್ಷಗಳ ಸಭೆ ಕರೆಯಲಿಲ್ಲ ಇವರಿಗೇನಾಗಿದೆ? ವಿರೋಧಪಕ್ಷದವರು ಯಾರೂ ನಾಯಕರಿಲ್ಲವೇ, ಸಲಹೆ ಕೊಡುವಂತಹವರು? ಅದನ್ನು ತೆಗೆದುಕೊಳ್ಳುವುದು, ಬಿಡುವುದು ನಿಮ್ಮ ಹಣೆಬರಹ. Atleast, ಸರ್ವಪಕ್ಷಗಳ ಸಭೆ ಮಾಡುವುದಕ್ಕೆ ನಿಮಗೇನಾಗಿದೆ? ಒಂದು All Party delegation ಕರೆದುಕೊಂಡು ಹೋಗುವುದಕ್ಕೆ ನಿಮಗೇನಾಗಿದೆ? ಇಷ್ಟೊಂದು ಅಹಂಕಾರ, ದುರಹಂಕಾರ ಈ ಸರ್ಕಾರಕ್ಕೆ ಒಳ್ಳೆಯದಲ್ಲ. ಜನರ ಶಾಪ ತಟ್ಟಿದರೆ ಯಾರೂ ಬದುಕುವುದಿಲ್ಲ, ನಾವು ಬದುಕುವುದಿಲ್ಲ. ಎಂತೆಂತಹವರು ಹೇಗಾಗಿದ್ದಾರೆ ಎಂಬುದನ್ನು ನಮ್ಮ ಸ್ನೇಹಿತರು ಹೇಳಿದರು. ಸಾಹುಕಾರನೂ ಭಿಕ್ಷೆ ಬೇಡುತ್ತಿದ್ದಾನೆ, ಪಕ್ಕದಲ್ಲಿ ಭಿಕ್ಷುಕನೂ ಭಿಕ್ಷೆ ಬೇಡುತ್ತಿದ್ದಾನೆ. ಅಂತಹ ಪರಿಸ್ಥಿತಿ ಬಂದಿದೆ. ದಯವಿಟ್ಟು ಇದನ್ನು ಅರ್ಥ ಮಾಡಿಕೊಂಡು 'national calamity' ಎಂದು ಡಿಕ್ಲೇರ್ ಮಾಡಿಸಿ. ಪ್ರಕೃತಿಗೆ ವಿರುದ್ಧವಾಗಿ ಹೋಗಬೇಡಿ, ಯಾರೂ ಉಳಿಯುವುದಿಲ್ಲ. ಈ ಪ್ರವಾಹದಲ್ಲಿ ನಾವೂ, ನೀವೂ ಉಳಿಯುವುದಿಲ್ಲ. ಆದ್ದರಿಂದ ಇದು ಎಲ್ಲರಿಗೂ ಒಂದೇ. ಅಲ್ಲಿ ಕಟ್ಟಿರುವ ಷೆಡ್‌ಗಳಲ್ಲಿ ಶೌಚಾಲಯವಿಲ್ಲ, ಕುಡಿಯಲು ನೀರಿಲ್ಲ.

**ಸಭಾಪತಿಯವರು:-** ನಿಮ್ಮದು ಮುಗಿಯಿತೇ?

**ಶ್ರೀ ಯು.ಬಿ. ವೆಂಕಟೇಶ್:-** ಮಾನ್ಯ ಸಭಾಪತಿಯವರೇ, ನನಗೆ ಇನ್ನೂ ಸಮಯಾವಕಾಶ ಕೊಡಿ.

**ಸಭಾಪತಿಯವರು:-** ಮಾನ್ಯ ಸದಸ್ಯರೇ, ಬೇಗ ನಿಮ್ಮ ಮಾತುಗಳನ್ನು ಮುಗಿಸಿ.

**ಶ್ರೀ ಯು.ಬಿ. ವೆಂಕಟೇಶ್:-** ಮಾನ್ಯ ಸಭಾಪತಿಯವರೇ, ತಾವು ನನಗೆ ಸಮಯವನ್ನೇ ಕೊಡುವುದಿಲ್ಲ. ಮೊದಲು ಅಲ್ಲಿ ಒಂದು ಸಹಾಯವಾಣಿಯನ್ನು ಪ್ರಾರಂಭ ಮಾಡಿಸಿ. ಆಮೇಲೆ ಎಲ್ಲೆಲ್ಲಿ ನೀರು ಜಾಸ್ತಿ ಬಂದಿದೆ

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಅಲ್ಲೆಲ್ಲಾ ಒಂದು ಶಾಶ್ವತವಾದ ಪರಿಹಾರವನ್ನು ಹುಡುಕಿ. ಪ್ರತಿ ಸಲವೂ ಇದೇ ರೀತಿ ಆಗುವುದರಿಂದ ತೊಂದರೆಯಾಗುತ್ತಿದೆ. ಇದಕ್ಕೆ ಶಾಶ್ವತವಾಗಿ ಏನು ಮಾಡಬಹುದು ಎಲ್ಲರೂ ಕುಳಿತುಕೊಂಡು ಪರಿಣಿತರನ್ನು ಕರೆಸಿ, ಕಮಿಟಿ ಮಾಡಿ ಇದಕ್ಕೊಂದು ಶಾಶ್ವತವಾದ ಪರಿಹಾರ ಕೊಡಿ. ಇವತ್ತು ಪ್ರವಾಹ ಬಂದಿದೆ, ಇನ್ನು ನೂರು ವರುಷಕ್ಕೆ ಬರುತ್ತದೆ ಎಂದಲ್ಲ, ಈ ತಿಂಗಳೆಲ್ಲಾ ಮಳೆ ಬರಬಹುದು ಎಂದು ಇದೆ. ನಮಗೂ ಸ್ವಲ್ಪ ಜ್ಞಾನ ಇದೆ, ನಾವೂ ಪತ್ರಿಕಾ ರಂಗದಲ್ಲಿದ್ದೇವೆ, ಪತ್ರಿಕೆಯೊಂದನ್ನು ನಡೆಸುತ್ತಿದ್ದೇವೆ. ಪ್ರವಾಹ ಪೀಡಿತರಿಗೆ ಎಲ್ಲಾ ಜಿಲ್ಲೆಗಳಿಂದ ಜನರು ಸಾಮಾನುಗಳನ್ನು ಕಳುಹಿಸುತ್ತಾರೆ. ಅದಕ್ಕೆ ಏನಾದರೂ ಆ ಜಿಲ್ಲೆಯಲ್ಲಾಗಲೀ ಅಥವಾ ತಾಲ್ಲೂಕಿನಲ್ಲಾಗಲೀ Government Coordination Committee ಮಾಡಿ. ಎಲ್ಲವೂ ಒಂದುಕಡೆ ಬಂದು ಎಲ್ಲರಿಗೂ ತಲುಪುವಂತೆ ಮಾಡಬೇಕು.

**ಶ್ರೀ ಸಿ.ಸಿ. ಪಾಟೀಲ್ (ಗಣಿ ಮತ್ತು ಭೂ ವಿಜ್ಞಾನ ಸಚಿವರು):–** ಮಾನ್ಯ ಸಭಾಪತಿಯವರೇ, ಸುಮಾರು ಜನರು ಸಾಮಾನುಗಳನ್ನು ಕೊಟ್ಟರು, ಅಲ್ಲಿಗೆ ಬಂದಿದ್ದರು, ಸಾಮಾನುಗಳನ್ನು ಕೊಟ್ಟು ಫೋಟೋ ತೆಗೆದುಕೊಳ್ಳಬೇಕೆಂಬ ಭಾವನೆಯಲ್ಲಿ ಇರುತ್ತಾರೆ.

**ಶ್ರೀ ಯು.ಬಿ. ವೆಂಕಟೇಶ್:–** ಮಾನ್ಯ ಸಚಿವರೇ, atleast ಯಾರು ನಿಮಗೆ ಕೊಡುತ್ತಾರೆ ಅದಕ್ಕೊಂದು ಕಮಿಟಿ ಮಾಡಿ ಅವರ ಮುಖಾಂತರ ಎಲ್ಲರಿಗೂ ಹಂಚುವ ವ್ಯವಸ್ಥೆ ಮಾಡಿ.

**ಶ್ರೀ ಸಿ.ಸಿ. ಪಾಟೀಲ್:–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ನೇಕಾರರ ಬಗ್ಗೆ ಹೇಳಿದರು, ನೇಕಾರರ ಮಗ್ಗಗಳಿಗೆ ಪರಿಹಾರಗಳನ್ನು ಘೋಷಣೆ ಮಾಡಲಾಗಿದೆ.

**ಶ್ರೀ ಯು.ಬಿ. ವೆಂಕಟೇಶ್:–** ಯಾವಾಗ ಘೋಷಣೆ ಮಾಡಿದ್ದಾರೆ?

**ಶ್ರೀ ಸಿ.ಸಿ. ಪಾಟೀಲ್:–** ಮಾನ್ಯ ಮುಖ್ಯಮಂತ್ರಿಯವರು ಮೊನ್ನೆ ಬಾಗಲಕೋಟೆ ಜಿಲ್ಲೆಯಲ್ಲಿ ಘೋಷಣೆ ಮಾಡಿದ್ದಾರೆ.

**ಶ್ರೀ ಯು.ಬಿ. ವೆಂಕಟೇಶ್:–** ನಮಗೆ ಅದರ ಕಾಪಿ ಬಂದಿಲ್ಲ. ನಾನು ಮಾತನಾಡುತ್ತಿದ್ದ ಸೀಕ್ವೆನ್ಸ್ ಎಲ್ಲಿಗೋ ಹೋಯಿತು. ನಾವು ಹೊಸಬರಾಗಿದ್ದು, ಅನುಭವ ಇಲ್ಲ, ಸ್ವಲ್ಪ ತಪ್ಪುಗಳಾಗುತ್ತವೆ. ಏನಾದರೂ ತಪ್ಪಿದ್ದರೆ ಕ್ಷಮಿಸಿ. ಪ್ರವಾಹ ಪೀಡಿತ ಪ್ರದೇಶಗಳಲ್ಲಿ ಕಟ್ಟಿರುವ ಷೆಡ್‌ಗಳಲ್ಲಿ ವಿಶೇಷವಾಗಿ ಹೆಣ್ಣುಮಕ್ಕಳಿಗೆ ಸ್ವಲ್ಪ ಸೌಲಭ್ಯಗಳನ್ನು ಮಾಡಿಕೊಡಿ. ಅಲ್ಲಿನ ಪರಿಸ್ಥಿತಿಯನ್ನು ಒಮ್ಮೆ ನೋಡಿ, ನಾನೇನಾದರೂ ಸುಳ್ಳು ಹೇಳುವುದಾದರೆ ಇಲ್ಲಿಂದ ಒಂದು ಕಮಿಟಿಯನ್ನು ಕರೆದುಕೊಂಡು ಹೋಗಿ ನೋಡಿ. ಅದಕ್ಕೇನೂ ಸರ್ಕಾರದಿಂದ ಹಣವನ್ನು ಖರ್ಚು ಮಾಡಬೇಡಿ, ನಮ್ಮ ಹಣವನ್ನೇ ಹಾಕಿಕೊಂಡು ಹೋಗುತ್ತೇವೆ. ನಾನು ಹೇಳುವುದು ಸುಳ್ಳಾಗಿದ್ದರೆ ತಾವು ಹೇಳುವ ಶಿಕ್ಷೆಗೆ ತಯಾರಿದ್ದೇವೆ. ದಯವಿಟ್ಟು ಇದನ್ನು ಮಾನವೀಯತೆಯ ದೃಷ್ಟಿಯಿಂದ ನೋಡಬೇಕೆಂದು ತಮ್ಮಲ್ಲಿ ಕಳಕಳಿಯಿಂದ ಕೇಳಿಕೊಳ್ಳುತ್ತೇನೆ. ನಮ್ಮದು ಒಂದೇ ಬೇಡಿಕೆ. ನಿಮ್ಮ ಪ್ರಕಾರ ಏನು 35,000 ಕೋಟಿ ರೂಪಾಯಿ ನಷ್ಟವಾಗಿದೆ;

“ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

ನಮ್ಮ ಪ್ರಕಾರ ಲಕ್ಷ ಕೋಟಿ ನಷ್ಟವಾಗಿದೆ. ಅದನ್ನು ಈಗ ತಾವೇನು ಒಪ್ಪಿಕೊಂಡಿದ್ದೀರಿ, ಅಸೆಸ್ ಮಾಡಿದ್ದೀರಿ ಅಷ್ಟು ಹಣವನ್ನು ತಕ್ಷಣವೇ ಈ ಬಜೆಟ್‌ನಲ್ಲಿ ನಾಳೆ ಸದನದಲ್ಲಿ ಮಂಡಿಸಬೇಕೆಂದಿರುವ; ಯಾವುದೇ ರೀತಿ ಹೊಂದಾಣಿಕೆ ಮಾಡಿ, ಬೇಕಾದರೆ ರಾಜ್ಯದಲ್ಲಿ ಆರು ತಿಂಗಳ ಕಾಲ ಅಭಿವೃದ್ಧಿ ಕಾರ್ಯಗಳನ್ನು ನಿಲ್ಲಿಸಿಬಿಡಿ. ಈ ಜನರಿಗೆ ಇಷ್ಟು ಮನೆಗಳು, ರಸ್ತೆ, ಸೇತುವೆ ಇಂಥಹವನ್ನು ಮಾಡುತ್ತೇವೆ, ಕೊಡುತ್ತೇವೆ ಎಂಬ ಒಂದು ಘೋಷಣೆ ಮಾಡಿ ಎಂದು ಹೇಳುತ್ತಾ ನನಗೆ ಮಾತನಾಡಲು ಅವಕಾಶ ಕೊಟ್ಟ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

**ಶ್ರೀ ಕೆ.ಸಿ. ಕೊಂಡಯ್ಯ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ನನಗೆ ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ಧನ್ಯವಾದಗಳು. ನಾನು ಹೆಚ್ಚು ಸಮಯವನ್ನು ತೆಗೆದುಕೊಳ್ಳುವುದಿಲ್ಲ. ಏಕೆಂದರೆ, ತಾವು ನಿನ್ನೆಯಿಂದ ನನ್ನನ್ನು ಪೀಠದ ಮೇಲೆ ಕೂರಿಸಿದ್ದಿರಿ. ನಾನು 4ನೇ ಭಾಷಣಕಾರನಾಗಿ ಲಿಸ್ಟ್‌ನಲ್ಲಿದ್ದೆ. ಆದರೂ ತಮ್ಮ ಕರ್ತವ್ಯವನ್ನು ನಿರ್ವಹಿಸುತ್ತಿದ್ದುದರಿಂದ ನನಗೆ ಮಾತನಾಡಲು ಸಾಧ್ಯವಾಗಲಿಲ್ಲ. ಆದರೆ ಎಲ್ಲಾ ಸುಮಾರು 30-35 ಜನ ಸದಸ್ಯರು ಕೇಳಿದ್ದರು ಅವರ ಭಾವನೆಗಳನ್ನೆಲ್ಲಾ ತಿಳಿಸಿದ್ದಾರೆ. ನನ್ನ ಒಂದೇ ಒಂದು ಕಳಕಳಿಯೇನೆಂದರೆ, ನಾವು ನೇಕಾರರ ಕುಟುಂಬದಿಂದ ಬಂದಾಗ ಬಾಗಲಕೋಟ ಮತ್ತು ಬೆಳಗಾವಿ ಈ ಎರಡು ಜಿಲ್ಲೆಗಳಲ್ಲಿ ನಮ್ಮ ಇಡೀ ಕರ್ನಾಟಕ ರಾಜ್ಯದ ನೇಕಾರರು ಹೆಚ್ಚಾಗಿ ವಾಸ ಮಾಡುತ್ತಾರೆ. ಅವರ ಸ್ಥಿತಿ ಗತಿಗಳು ತಮಗೆಲ್ಲಾ ಗೊತ್ತಿದೆ. ಸಣ್ಣದೊಂದು 10 ಅಡಿ x 10 ಅಡಿ ಮನೆಯಲ್ಲಿ ಮಗ್ಗವನ್ನಿಟ್ಟುಕೊಂಡು ಕೆಲಸ ಮಾಡುತ್ತಾರೆ. ದುರಾದೃಷ್ಟವಶಾತ್ ತಾವು ಕೇಂದ್ರ ಸರ್ಕಾರಕ್ಕೆ ರಿಪೋರ್ಟ್ ಕೊಡುವಾಗ ಬೇರೆ ಬೇರೆ heads ಅಡಿಯಲ್ಲಿ ಆಗಿರುವಂತಹ ನಷ್ಟದ ವಿವರಗಳನ್ನು ಕೊಟ್ಟಿರಿ. Agriculture crop loss, horticulture crop loss ಹಾಗೂ ದನಕರುಗಳ ನಷ್ಟವನ್ನೆಲ್ಲಾ ತೋರಿಸಲಾಗಿದೆ. ಆದರೆ ನೇಕಾರರಿಗೆ ಎಷ್ಟು ನಷ್ಟವಾಗಿದೆ ಎಂಬುದನ್ನು ಸೇರಿಸಿಲ್ಲ.

**ಶ್ರೀ ಸಿ.ಸಿ. ಪಾಟೀಲ್ (ಗಣಿ ಮತ್ತು ಭೂ ವಿಜ್ಞಾನ ಸಚಿವರು):-** ಮಾನ್ಯ ಸಭಾಪತಿಯವರೇ, ಗೈಡ್‌ಲೈನ್ಸ್ ಇರಲಿಲ್ಲ, ಮಾನ್ಯ ಮುಖ್ಯಮಂತ್ರಿಯವರು . . . .

**ಶ್ರೀ ಕೆ.ಸಿ. ಕೊಂಡಯ್ಯ:-** ಮಾನ್ಯ ಸಚಿವರೇ, ಮಾನ್ಯ ವಿರೋಧಪಕ್ಷದ ನಾಯಕರು ಹೇಳಿದರು.

**ಶ್ರೀ ಎಸ್.ಆರ್. ಪಾಟೀಲ್ (ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ಪಟ್ಟಿ ಕೊಟ್ಟಾಗ ನಾನು ಅವರಿಗೆ ಹೇಳಿದ್ದೆ, ಇಡೀ ರಾಜ್ಯದಲ್ಲಿ ಹೆಚ್ಚು ನೇಕಾರರು ನಮ್ಮ ಜಿಲ್ಲೆಯಲ್ಲಿದ್ದಾರೆ. ಈ ವಿಷಯವನ್ನು ಮಾನ್ಯ ಮುಖ್ಯಮಂತ್ರಿಯವರ ಗಮನಕ್ಕೆ ತಂದಾಗ ಪ್ರತಿ ಮಗ್ಗಕ್ಕೂ 25,000 ರೂಪಾಯಿಗಳನ್ನು ಕೊಡುತ್ತೇವೆಂದು ಹೇಳಿದ್ದಾರೆ, ಬೇಕಾದರೆ ಅದನ್ನು ಇನ್ನೊಮ್ಮೆ ವೆರಿಫೈ ಮಾಡಿಕೊಳ್ಳಿ. ನಾನು ಕೂಡ ಆ ಸಭೆಯಲ್ಲಿದ್ದೆ. ನನ್ನ ಜೊತೆ ಅನೇಕ ಶಾಸಕರು ಕೂಡ ಇದ್ದು, ನೇಕಾರರ ಬಗ್ಗೆ ವಿಶೇಷವಾದ ಕಾಳಜಿಯನ್ನು ವ್ಯಕ್ತ ಪಡಿಸಿದರು. ಏಕೆಂದರೆ, ನೇಕಾರರ ಮಗ್ಗಗಳು ತೇಲಿಕೊಂಡು ಹೋಗಿವೆ. ನಿಮ್ಮ ಎನ್.ಡಿ.ಆರ್.ಎಫ್ ನಾರ್ಮ್ಸ್ ಅಥವಾ

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಎಸ್.ಡಿ.ಆರ್.ಎಫ್ ನಾರ್ಮ್ಸ್‌ನಲ್ಲಿ ಇಲ್ಲವೆಂದು ಹೇಳಿದಾಗ ಒಂದು ಮಗ್ಗಕ್ಕೆ 25,000 ರೂಪಾಯಿಗಳನ್ನು ಕೊಡುತ್ತೇವೆಂದು ಹೇಳಿದರು.

**ಶ್ರೀ ಸಿ.ಸಿ. ಪಾಟೀಲ್:–** ಶೇ.100 ರಷ್ಟು ಕೊಡುತ್ತೇವೆ. ಸಣ್ಣ ಪುಟ್ಟ ಸಾಮಾನುಗಳು ಪ್ರವಾಹದಲ್ಲಿ ತೇಲಿಕೊಂಡು ಹೋಗಿರುವವರಿಗೂ 10,000 ರೂಪಾಯಿಗಳನ್ನು ಕೊಡುತ್ತೇವೆಂದು ಭರವಸೆ ಕೊಟ್ಟಿದ್ದಾರೆ.

**ಶ್ರೀ ಕೆ.ಸಿ. ಕೊಂಡಯ್ಯ:–** ಮಾನ್ಯ ಸಚಿವರಿಗೆ ಧನ್ಯವಾದಗಳು. ಮಾನ್ಯ ಯಡಿಯೂರಪ್ಪನವರು ಪ್ರಮಾಣ ವಚನ ಸ್ವೀಕಾರ ಮಾಡಿದ ಸಾಯಂಕಾಲವೇ ರೈತರ ಸಾಲ ಮನ್ನ ಮತ್ತು ನೇಕಾರರ ಸಾಲವನ್ನು ಮನ್ನ ಮಾಡಿದರು. ಇವರಿಬ್ಬರು ನನ್ನೆರಡು ಕಣ್ಣುಗಳಿದ್ದ ಹಾಗೆ. ಧನ್ಯವಾದಗಳು. ಅಂದೇ ನಾನು ಅವರಿಗೆ ಪತ್ರವನ್ನು ಬರೆದು ಅಭಿನಂದನೆಗಳನ್ನು ತಿಳಿಸಿದೆ. ಇವೆಲ್ಲಾ ಕೇಳಿದ ಮೇಲೆ ನನಗನಿಸುವುದೇನೆಂದರೆ, ಮಾನ್ಯ ಎಸ್.ಆರ್. ಪಾಟೀಲರು ನೇಕಾರರ ಬಗ್ಗೆ ಮಾತನಾಡುವಾಗ ನಾನು ತಮ್ಮ ಪೀಠದ ಮೇಲೆ ಕುಳಿತಿದ್ದೆ. ಅದು ತಮ್ಮ ಗಮನಕ್ಕೂ ಬಂತು. ಒಂದು ಮಗ್ಗಕ್ಕೆ 25,000 ರೂಪಾಯಿಗಳನ್ನು ಕೊಡುತ್ತಿದ್ದಾರೆಂದು ಹೇಳಿದರು.

(ಮುಂದು . . .

(186) 11–10–2019 /8–40/ಕೆಹೆಚ್–ಜಿಆರ್ 223

**(ಸಭಾಪತಿಯವರ ಉಪಸ್ಥಿತಿ)**

**ಶ್ರೀ ಕೆ.ಸಿ.ಕೊಂಡಯ್ಯ (ಮುಂದು):–** ಇವತ್ತಿನ ದಿವಸ ಒಂದು ಮಗ್ಗದ ಬೆಲೆ ಒಂದೂವರೆ ಲಕ್ಷ ಅಥವಾ ಎರಡು ಲಕ್ಷ ರೂಪಾಯಿಗಳು ಆಗುತ್ತದೆ. ಆ ಮಗ್ಗದ ಮೇಲೆ 6 ಸೀರೆಗಳಿಗೆ ಆಗುವಂತಹ warp ಇತ್ತು. ಆಕಸ್ಮಿಕವಾದ flood ಬಂದು ಮಗ್ಗಗಳು ಮತ್ತು ಮನೆಯ ಪಾತ್ರೆ, ಇನ್ನಿತರ ಸಾಮಾನುಗಳು ಸಹ ಮುಳುಗಿ ಹೋಯಿತು. ಆದಕಾರಣ, ತಾವು 25 ಸಾವಿರ ರೂಪಾಯಿಗಳನ್ನು ಕೊಟ್ಟರೆ ಸಾಕಾಗುವುದಿಲ್ಲ. ಪುನಃ rehabilitation ಆಗುವುದಕ್ಕಾಗುವುದಿಲ್ಲ. ಆದ್ದರಿಂದ, ಸರ್ಕಾರವು ಇದರ ಬಗ್ಗೆ ಹೆಚ್ಚಿನ ಗಮನಹರಿಸಬೇಕೆಂದು ಹೇಳುತ್ತೇನೆ. ಹಾಗೆಯೇ, ಮಾನ್ಯ ಸಚಿವರು ಮತ್ತು ಮಾನ್ಯ ಎಸ್.ಆರ್. ಪಾಟೀಲ್‌ರವರು ಸಹ ಅದೇ ಜಿಲ್ಲೆಯವರಾಗಿರುವುದರಿಂದ, ತಾವು ಒಂದು ಸಭೆಯನ್ನು ಮಾಡಿ. ಆ ಸಭೆಗೆ ನಾವು ಮತ್ತು ನೇಕಾರರ ಕುಟುಂಬದವರು ಸಹ ಬರುತ್ತೇವೆ. ಇನ್ನು ಹೆಚ್ಚಿನ ಪರಿಹಾರವನ್ನು ನೇಕಾರರ ಕುಟುಂಬಗಳಿಗೆ ಕೊಡಬೇಕು. ನೇಕಾರರು ಮಗ್ಗಗಳನ್ನು ಪುನರ್‌ನಿರ್ಮಾಣ ಮಾಡಲು ಹೆಚ್ಚಿನ ಒತ್ತು ಕೊಡಬೇಕೆಂದು ಹೇಳುತ್ತಾ ಧನ್ಯವಾದಗಳನ್ನು ತಿಳಿಸುತ್ತೇನೆ.

**ಶ್ರೀ ಸಿ.ಸಿ. ಪಾಟೀಲ್ (ಗಣಿ ಮತ್ತು ಭೂವಿಜ್ಞಾನ ಸಚಿವರು):–** ಮಾನ್ಯ ಸಭಾಪತಿಯವರೇ, ಇದರ ಬಗ್ಗೆ ಮಾನ್ಯ ಮುಖ್ಯಮಂತ್ರಿಯವರ ಗಮನಕ್ಕೆ ತರುತ್ತೇನೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಕೆ.ಸಿ.ಕೊಂಡಯ್ಯ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ಮಾನ್ಯ ಸಚಿವರೇ, ಇದನ್ನು ಮಾನ್ಯ ಮುಖ್ಯಮಂತ್ರಿಯವರ ಗಮನಕ್ಕೆ ತನ್ನಿ. ಧನ್ಯವಾದಗಳು.

**ಶ್ರೀ ಆರ್.ಬಿ.ತಿಮ್ಮಾಪೂರ:–** ಮಾನ್ಯ ಸಭಾಪತಿಯವರೇ, . . .

**ಸಭಾಪತಿಯವರು:–** ಮಾನ್ಯ ಸದಸ್ಯರೇ, ನಿಮಗೆ ನಾಳೆ ಮಾತನಾಡುವುದಕ್ಕೆ ಅವಕಾಶ ಕೊಡುತ್ತೇನೆ. ಕುಳಿತುಕೊಳ್ಳಿ.

**ಶ್ರೀ ಅರವಿಂದ ಕುಮಾರ್ ಅರಳಿ (ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಅವಕಾಶಕ್ಕಾಗಿ ಧನ್ಯವಾದಗಳು. ಉತ್ತರ ಕರ್ನಾಟಕ, ದಕ್ಷಿಣ ಕರ್ನಾಟಕ ಹಾಗೂ ಮುಂಬೈ ಕರ್ನಾಟಕ ಎಂದು ಯಾವುದನ್ನೂ ಭೇದ ಮಾಡದೇ ಎಲ್ಲವನ್ನು ಒಟ್ಟಾಗಿ ಅಖಂಡ ಕರ್ನಾಟಕವೆಂದು ಹೇಳುತ್ತೇವೆ. ಆದರೆ, ಈ ಕರ್ನಾಟಕದಲ್ಲಿ ಬಂದಿರುವ ನೆರೆ ಹಾವಳಿಯ ಬಗ್ಗೆ ಎಲ್ಲ ಮಾನ್ಯ ಸದಸ್ಯರು ಮಾತನಾಡಿದ್ದಾರೆ. ಆದರೆ ಕಲ್ಯಾಣ ಕರ್ನಾಟಕದಲ್ಲಿ ಬೀದರ್ ಮತ್ತು ಗುಲ್ಬರ್ಗಾ ಜಿಲ್ಲೆ ಇದೆ ಎಂಬುದು ಯಾರಿಗೂ ನೆನಪಿಗೆ ಬರುತ್ತಿಲ್ಲವೆಂಬ ಬಗ್ಗೆ ನನಗೂ ನೋವು ಇದೆ. ಏಕೆಂದರೆ, ಈ ಕಾವೇರಿ ಸಮಸ್ಯೆ, ಮಡಿಕೇರಿ ಸಮಸ್ಯೆ ಮತ್ತು ಶಿವಮೊಗ್ಗ ಸಮಸ್ಯೆಯ ಬಗ್ಗೆ ಎಲ್ಲ ಮಾನ್ಯ ಸದಸ್ಯರು ಮಾತನಾಡುತ್ತಾರೆ ಮತ್ತು ಸಹಕಾರ ಕೊಡುತ್ತಾರೆ. ಅದರ ಜೊತೆಯಲ್ಲಿ ನಾವು ಸಹ ಸಹಕಾರ ಕೊಡುತ್ತೇವೆ. ನಮ್ಮ ಬೀದರ್‌ನಲ್ಲಿ ಬರ ಪರಿಸ್ಥಿತಿ ಇದ್ದು, ನೆರೆ ಹಾವಳಿಯ ತೊಂದರೆಯಿಲ್ಲ. ಆದರೆ, ಗುಲ್ಬರ್ಗಾ ಜಿಲ್ಲೆಯಲ್ಲಿ ಕೆಲವು ಭಾಗದಲ್ಲಿ ನೆರೆ ಹಾವಳಿ ಇದೆ. ಇದರಲ್ಲಿ ಯಾದಗಿರಿ ಜಿಲ್ಲೆ ಕೂಡ ಒಂದಾಗಿದೆ. ಈ ಭಾಗದ ಸುಮಾರು ರೈತರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಇವರಿಗೆ ಇಲ್ಲಿಯವರೆಗೆ ಸರಿಯಾಗಿ ಪರಿಹಾರ ಸಿಕ್ಕಿಲ್ಲ. ಇದರಿಂದ ಬಹಳ ತೊಂದರೆಯನ್ನು ಅನುಭವಿಸುತ್ತಿದ್ದಾರೆ. ರೈತರ ಹತ್ತಿರ ಡಾಕ್ಯುಮೆಂಟ್‌ಗಳನ್ನು ಕೇಳುತ್ತಿದ್ದಾರೆ. ಏಕೆಂದರೆ, ಒಂದೇ ಕುಟುಂಬದಲ್ಲಿ ಎಲ್ಲರೂ ವಾಸವಾಗಿದ್ದರೆ, ಆ ಜಮೀನು ತಂದೆ–ತಾಯಿಗಳ ಹೆಸರಿನಲ್ಲಿ ಇರುತ್ತದೆ. ದಾಖಲೆಯ ಪ್ರಕಾರ ಪಹಣಿಯಲ್ಲಿ ಮಗನ ಹೆಸರು ಇರುವುದಿಲ್ಲ. ಇದೇ ರೀತಿ ಡಾಕ್ಯುಮೆಂಟ್‌ಗಳು ಸರಿಯಾಗಿ ಇರುವುದಿಲ್ಲವೆಂದು ಸುಮಾರು ರೈತರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಅವರಿಗೆ ಇನ್ನು ಪರಿಹಾರ ಸಿಗದೇ ಒದ್ದಾಡುತ್ತಿದ್ದಾರೆ. ಈ ರೈತರ ಮಕ್ಕಳು ಬೀದಿಗೆ ಬಂದಿದ್ದಾರೆ. ಆದರೆ, ಆ ನೋವಿಗೆ ಯಾರು ಸ್ಪಂದಿಸುತ್ತಿಲ್ಲ. ಇದರ ಬಗ್ಗೆ ಸರ್ಕಾರವು ಗಮನಹರಿಸಬೇಕು. ಅದೇ ರೀತಿ ಬೀದರ್ ಜಿಲ್ಲೆಯಲ್ಲಿ ಸುಮಾರು 10 ಜನ ರೈತರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಅದರಲ್ಲಿ ಕೆಲವು ರೈತರಿಗೆ ಪರಿಹಾರ ಸಿಕ್ಕಿದೆ.

**ಶ್ರೀ ಪ್ರಭು ಚೌಹಾಣ್ (ಪಶು ಸಂಗೋಪನೆ ಸಚಿವರು):–** ಮಾನ್ಯ ಸಭಾಪತಿಯವರೇ, 7 ಜನ ರೈತರಿಗೆ ಪರಿಹಾರ ಸಿಕ್ಕಿದೆ. ಇನ್ನು 3 ಜನ ರೈತರಿಗೆ ಪರಿಹಾರ ಬಾಕಿ ಇದ್ದು, ಆ ರೈತರ ಕಾಗದ ಪತ್ರಗಳನ್ನು ಪರಿಶೀಲನೆ ಮಾಡುವ ಹಂತದಲ್ಲಿದೆ.

**ಶ್ರೀ ಎಸ್.ಆರ್.ಪಾಟೀಲ್ (ವಿರೋಧ ಪಕ್ಷದ ನಾಯಕರು):–** ಮಾನ್ಯ ಸಭಾಪತಿಯವರೇ, ಮಾನ್ಯ ಪ್ರಭು ಚೌಹಾಣ್‌ರವರ ಪಕ್ಷವೇ ಅಧಿಕಾರದಲ್ಲಿದೆ, ಅವರೇ ಮಂತ್ರಿಗಳಾಗಿದ್ದಾರೆ. ಅದಕ್ಕೆ ಮಾನ್ಯ ಸಚಿವರಿಗೆ ಧನ್ಯವಾದಗಳನ್ನು ಹೇಳೋಣ.

**ಶ್ರೀ ಅರವಿಂದ ಕುಮಾರ್ ಅರಳಿ:–** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರಾದ ಸಿ.ಸಿ. ಪಾಟೀಲ್‌ರವರು ಪ್ರತಿಯೊಂದು ವಿಷಯಕ್ಕೂ ಸರ್ಕಾರದ ಪರವಾಗಿ ಸ್ಪಂದಿಸಿ ಉತ್ತರವನ್ನು ಕೊಡುತ್ತಿದ್ದಾರೆ. ಅವರಿಗೆ ಧನ್ಯವಾದಗಳನ್ನು ತಿಳಿಸುತ್ತೇನೆ. ಕಲ್ಯಾಣ ಕರ್ನಾಟಕದಲ್ಲಿ ಬೀದರ್ ಮತ್ತು ಗುಲ್ಬರ್ಗಾ ಜಿಲ್ಲೆ ಇದೆ, ಅದರ ಬಗ್ಗೆ ಗಮನಹರಿಸಿ ಎಂದು ಸರ್ಕಾರಕ್ಕೆ ಮನವಿ ಮಾಡುತ್ತೇನೆ. ಈಗಾಗಲೇ ಯಾದಗಿರಿ ಜಿಲ್ಲೆಯಲ್ಲಿ 15 ಜನ ರೈತರು ಆತ್ಮಹತ್ಯೆ ಮಾಡಿಕೊಂಡಿರುವ ಬಗ್ಗೆ ದಾಖಲೆಗಳಿವೆ. ಇದರ ಬಗ್ಗೆ 'ಕನ್ನಡ ಪ್ರಭ' ಪತ್ರಿಕೆಯಲ್ಲಿ ಸುಮಾರು 15 ಎಡಿಷನ್‌ಗಳನ್ನು ಮಾಡಿ ಪ್ರಕಟಣೆ ಮಾಡಿದ್ದಾರೆ. ಆದರೂ ಇದರ ಬಗ್ಗೆ ಯಾರು ಕೂಡ ಸ್ಪಂದನೆ ಮಾಡುವುದಕ್ಕೆ ತಯಾರಿಲ್ಲ.

**ಶ್ರೀ ಪ್ರಭು ಚೌಹಾಣ್:–** ಮಾನ್ಯ ಸಭಾಪತಿಯವರೇ, ಯಾದಗಿರಿ ಜಿಲ್ಲೆಯಲ್ಲಿ ನಾನು ಸಹ ಇದ್ದೆ.

**ಸಭಾಪತಿಯವರು:–** ಮಾನ್ಯ ಸಚಿವರೇ, ಮಾನ್ಯ ಸದಸ್ಯರು ಮಾತನಾಡುವುದನ್ನು ಮುಗಿಸಿದ ಮೇಲೆ ತಾವು ಉತ್ತರವನ್ನು ಕೊಡಿ.

**ಶ್ರೀ ಅರವಿಂದ ಕುಮಾರ್ ಅರಳಿ:–** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಹೊಸದಾಗಿ ಜಿಲ್ಲಾ ಉಸ್ತುವಾರಿ ಸಚಿವರಾಗಿದ್ದಾರೆ. ಆದರೆ, ಅದಕ್ಕಿಂತ ಮೊದಲು 15 ಎಪಿಸೋಡ್‌ಗಳು ಬಂದಿವೆ. ಆತ್ಮಹತ್ಯೆ ಮಾಡಿಕೊಂಡಿರುವ ರೈತರ ಕುಟುಂಬಗಳು ಗಂಭೀರವಾದ ಪರಿಸ್ಥಿತಿಯನ್ನು ಎದುರಿಸುತ್ತಿದ್ದಾರೆ. ಆ ರೈತರ ಮಕ್ಕಳು ಗುಡಿಸಲಿನಲ್ಲಿ ವಾಸ ಮಾಡುತ್ತಿದ್ದರೂ ಕೂಡ ಅವರಿಗೆ ಯಾವುದೇ ರೀತಿಯಲ್ಲಿ ಸ್ಪಂದಿಸುತ್ತಿಲ್ಲ. ಅಧಿಕಾರಿಗಳಿಂದ ತೊಂದರೆಯಾಗುತ್ತಿದೆ ಎಂಬ ಬಗ್ಗೆ ಪತ್ರಿಕೆಗಳಲ್ಲಿ ಪ್ರಕಟ ಮಾಡಿದ್ದು, ಇದರ ಬಗ್ಗೆ ಕೇಸ್ ಕೂಡ ದಾಖಲೆಯಾಗಿದೆ. ರೈತರಿಗೆ ಪರಿಹಾರ ಕೊಡುವುದಕ್ಕೆ ಅನೇಕ ಷರತ್ತುಗಳನ್ನು ಹಾಕಿದ್ದಾರೆ. ಈ ಷರತ್ತುಗಳು ಪರಿಹಾರ ಕೊಡುವುದಕ್ಕೆ ಅಡ್ಡಿಯಾಗಿವೆ.

**ಶ್ರೀ ಶರಣಪ್ಪ ಮಟ್ಟೂರ (ಶಿಕ್ಷಕರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಇದರ ಬಗ್ಗೆ ಈಗಾಗಲೇ ಬಹಳ fair ಆಗಿ ಹೇಳಿದ್ದಾರೆ. ಇದಕ್ಕೆ ನಿಜವಾಗಿಯೂ we will accept your submission before this House. ಇದರ ಬಗ್ಗೆ ನನ್ನ ಒಂದು ಸಲಹೆಯೇನೆಂದರೆ, we have got the Disaster Management Act, 2005. ಈ ಕಾನೂನು 2005 ರಲ್ಲಿ ಮಾಡಿರುವಂತಹದ್ದು ಆಗಿದೆ. There is an history of flood in the year 2005, 2009 and 2019. Is it not? We have faced such a dangerous situation in the State. 2005ನೇ ಇಸವಿ ಆದ

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮೇಲೆ, in conformity with the Disaster Management Act, 2005, Rules were framed in the year 2009. It is called 'National Policy on Disaster Management Act, 2009.' 2009ನೇ ಸಾಲಿನಲ್ಲಿ ಎನ್.ಡಿ.ಆರ್.ಎಫ್., ಅನ್ನು ತಂದಿದ್ದೇವೆ. ಇದರಲ್ಲಿ ಇರುವಂತಹ ಮಾನದಂಡಗಳು, stringent conditions ನಿಮ್ಮ ಕೈಗಳನ್ನು ಕಟ್ಟಿಹಾಕಿವೆ. We can understand that. ಇವತ್ತಿನ ದಿವಸ 38 ಸಾವಿರ ಚಿಲ್ಲರೆ ಕೋಟಿ ರೂಪಾಯಿಗಳಷ್ಟು ನಷ್ಟವಾಗಿದೆ ಎಂದು ಹೇಳುತ್ತಾರೆ. Reports indicate that there are lots of damages in the State. We are not able to meet the challenges and situations, because of these conditions. Is it not? That is why, I would like to suggest the Ruling Government as well as the Central Government, to request the Prime Minister for an amendment, since he is an ex-officio Chairman of the N.D.R.F., and our Chief Minister is the Chairman of the S.D.R.F., Is it not? ತಾವು ಇದರ ಬಗ್ಗೆ ಒಂದು ಅಮೆಂಡ್‌ಮೆಂಟ್‌ನ್ನು ಏಕೆ ಮೂವ್ ಮಾಡಬಾರದು ಎಂಬ ಸಲಹೆಯನ್ನು ಕೊಡುವುದಕ್ಕೆ ಇಚ್ಛಿಸುತ್ತೇನೆ. This is very important. Such an amendment will help you also. Is it not? You need not be put to any trouble. That is my point.

**ಶ್ರೀ ಅರವಿಂದ ಕುಮಾರ್ ಅರಳಿ:-** ಮಾನ್ಯ ಸಭಾಪತಿಯವರೇ, ಈಗಾಗಲೇ ಮಾನ್ಯ ಸದಸ್ಯರಾದ ಶರಣಪ್ಪ ಮಟ್ಟೂರರವರು ಸಲಹೆ ನೀಡಿರುವ ಹಾಗೆ ಇದರ ಬಗ್ಗೆ ಸರ್ಕಾರವು ಗಮನಹರಿಸಬೇಕು. ಮಾನ್ಯ ಸಿದ್ದರಾಮಯ್ಯನವರ ಸರ್ಕಾರದಲ್ಲಿ ಸಹಕಾರಿ ಕ್ಷೇತ್ರಕ್ಕೆ ಸಂಬಂಧಿಸಿದಂತೆ 50 ಸಾವಿರ ರೂಪಾಯಿಗಳಷ್ಟು ಸಾಲ ಮನ್ನಾ ಮಾಡಿದ್ದರು. ಹಾಗೆಯೇ 50 ಸಾವಿರ ಕೋಟಿ ರೂಪಾಯಿಗಳಷ್ಟು ಹಣವನ್ನು ಬಿಡುಗಡೆ ಮಾಡಿದ್ದರು. ಅದರಲ್ಲಿ ಯಾದಗಿರಿ ಜಿಲ್ಲೆಯಲ್ಲಿ 149 ಕೋಟಿ ರೂಪಾಯಿಗಳ ಹಣವನ್ನು ವಾಪಸ್ಸು ಮಾಡಿದ್ದಾರೆ. ಏಕೆಂದರೆ, norms ಪ್ರಕಾರ ಇವರಿಗೆ fit ಆಗುವುದಿಲ್ಲ ಮತ್ತು ಬರುವುದಿಲ್ಲವೆಂದು ರೈತರಿಗೆ ತೊಂದರೆ ಕೊಟ್ಟು, ಇದನ್ನು ತಿರಸ್ಕಾರ ಮಾಡಿದ್ದಾರೆ. ತಮ್ಮ ಮುಖಾಂತರ ಸರ್ಕಾರಕ್ಕೆ ನಾನು ಮನವಿ ಮಾಡುವುದೇನೆಂದರೆ, ಈ ರೈತರು ಆತ್ಮಹತ್ಯೆ ಮಾಡಿಕೊಂಡವರಿಗಾಗಲಿ ಅಥವಾ ಸಾಲ ಮನ್ನಾ ಮಾಡುವುದಕ್ಕಾಗಲಿ, norms ಏನು ಮಾಡಿದ್ದಾರೆ, ಈಗ ಮಾನ್ಯ ಸಚಿವರಾದ ಪಾಟೀಲ್‌ರವರು ಕೆಲವು ದಾಖಲೆಗಳು upload ಆಗುತ್ತಿಲ್ಲ, ಆ ದಾಖಲೆಗಳನ್ನು ತರಬೇಕು ಮತ್ತು ಆ ದಾಖಲೆಗಳ ಅವಶ್ಯಕತೆ ಇದೆ ಎಂದು ಹೇಳಿದರು. ಕೆಲವು ದಾಖಲೆಗಳಲ್ಲಿ ತಂದೆಯ

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಹೆಸರಿನಲ್ಲಿ ಹೊಲ ಇರುತ್ತದೆ. ಮಗನ ಹೆಸರಿನಲ್ಲಿ ಇರುವುದಿಲ್ಲ. ಮಗನ ಹೆಸರಿನಲ್ಲಿ ದಾಖಲೆಗಳನ್ನು ಕೊಡಿ ಎಂದರೆ ಕೊಡುವುದಕ್ಕಾಗುವುದಿಲ್ಲ. ಅಂತಹ ಸಮಯದಲ್ಲಿ ಈ ರೀತಿಯ ನ್ಯೂನತೆಗಳಿದ್ದು ರೈತರಿಗೆ ಪರಿಹಾರ ಸಿಗುತ್ತಿಲ್ಲ. ದಯಮಾಡಿ, ಈ ನಿಯಮಗಳನ್ನು ಸಡಿಲ ಮಾಡಿ ರೈತರಿಗೆ ಪರಿಹಾರವನ್ನು ಕೊಡಬೇಕು. ಅದೇ ರೀತಿ ಬೀದರ್ ಜಿಲ್ಲೆಯಲ್ಲಿ ಬರಗಾಲ ಇದ್ದು, ಈ 2-3 ದಿವಸಗಳಿಂದ ಮಳೆ ಬಂದಿದೆ. ಈಗ ಅಲ್ಲಿರುವ ಜನರಿಗೆ ಕುಡಿಯುವುದಕ್ಕೆ ನೀರು ಸಿಗುತ್ತಿದೆ. ಆದರೆ ಈ ಹಿಂದೆ ಅನೇಕ ತಾಲ್ಲೂಕುಗಳಲ್ಲಿ ಟ್ಯಾಂಕರ್‌ಗಳ ಮುಖಾಂತರ ನೀರಿನ ಹಂಚಿಕೆ ಮಾಡಲಾಗಿತ್ತು. ನಮ್ಮ ಜಿಲ್ಲೆಯಲ್ಲಿ ಗೋದಾವರಿ ಬೇಸಿನ್ ಇದ್ದು, ಅದರಲ್ಲಿ ಬಚಾವತ್ ಆಯೋಗದ ವತಿಯಿಂದ 22.47 ಟಿ.ಎಂ.ಸಿ ನೀರು ನೀಡಲಾಗಿತ್ತು.

**ಶ್ರೀ ಕೆ.ಸಿ.ಕೊಂಡಯ್ಯ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಮಾನ್ಯ ಮುಖ್ಯಮಂತ್ರಿಯವರು ಸದನಕ್ಕೆ ಬರುವುದು ನಿಧಾನವಾದರೆ, ನಾಳೆಯ ಸದನದಲ್ಲಿ Calling Attention Notice ಮತ್ತು ನಿಯಮ 330 ನ್ನು ಚರ್ಚೆಗೆ ತೆಗೆದುಕೊಳ್ಳಿ.

(ಮುಂದು)

**(187) 11/10/2019/8:50/ಎಸ್‌ಪಿಆರ್/ಎಂಡಿ**

**(ಸಭಾಪತಿಯವರ ಉಪಸ್ಥಿತಿ)**

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ಇವತ್ತಿನ ದಿನವೇ ಎಲ್ಲಾ ಸದಸ್ಯರುಗಳು ತಮ್ಮ ಭಾಷಣಗಳನ್ನು ಮುಕ್ತಾಯಗೊಳಿಸಲಿ.

**ಶ್ರೀ ಐವನ್ ಡಿ'ಸೋಜಾ:-** ಮಾನ್ಯ ಸದಸ್ಯರಾದ ಶ್ರೀ ಧರ್ಮಸೇನಾರವರು ಕೇವಲ ಎರಡ್ಮೂರು ನಿಮಿಷಗಳಲ್ಲಿ ತಮ್ಮ ಮಾತುಗಳನ್ನು ಮುಗಿಸುತ್ತಾರೆ. ನಾಳೆಯ ದಿನ ನಿಯಮ 330 ಮತ್ತು 72 ರಡಿ ವಿಷಯಗಳನ್ನು ಚರ್ಚೆಗೆ ತೆಗೆದುಕೊಳ್ಳಬಹುದು.

**ಶ್ರೀ ಕೆ.ಸಿ.ಕೊಂಡಯ್ಯ:-** ಮಾನ್ಯ ಸಭಾಪತಿಯವರೇ, ಹಲವಾರು ಮಾನ್ಯ ಸದಸ್ಯರುಗಳು ನೆರೆ ಹಾವಳಿ ವಿಚಾರವಾಗಿ ಮಾತನಾಡಲು ಕಷ್ಟಪಟ್ಟು ಪೂರ್ವ ತಯಾರಿ ನಡೆಸಿಕೊಂಡು, 15 ದಿನಗಳ ಮುಂಚಿತವಾಗಿಯೇ ತಮ್ಮ ತಮ್ಮ ಹೆಸರುಗಳನ್ನು ನೀಡಿದ್ದಾರೆ.

" ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಸಿ.ಸಿ.ಪಾಟೀಲ್(ಗಣಿ ಮತ್ತು ಭೂ ವಿಜ್ಞಾನ ಸಚಿವರು):-** ಮಾನ್ಯ ಸಭಾಪತಿಯವರೇ, ರೈತ ಆತ್ಮಹತ್ಯೆ ಪ್ರಕರಣಗಳಲ್ಲಿ ಯಾರಿಗೆ ಸರ್ಕಾರದ ವತಿಯಿಂದ ಪರಿಹಾರ ಧನ ಇನ್ನೂ ದೊರೆತಿಲ್ಲ ಅಂತಹ ಪ್ರಕರಣಗಳ ಮಾಹಿತಿಯನ್ನು ಮಾನ್ಯ ಸದಸ್ಯರು ನನಗೆ ನೀಡಲಿ. ಇದಕ್ಕೆ ಸಂಬಂಧಪಟ್ಟ ಸಚಿವರು ಸದನದಲ್ಲಿಯೇ ಉಪಸ್ಥಿತರಿದ್ದಾರೆ. ಸದರಿ ಪ್ರಕರಣಗಳು ರೈತ ಆತ್ಮಹತ್ಯೆ ಪ್ರಕರಣಗಳೇ ಆಗಿದ್ದರೆ, ಒಂದು ವಾರದೊಳಗಾಗಿ ಅವರ ಕುಟುಂಬ ಸದಸ್ಯರಿಗೆ ಪರಿಹಾರ ಧನವನ್ನು ಕೊಡಿಸಲಾಗುವುದು.

**ಶ್ರೀ ಅರವಿಂದ ಕುಮಾರ್ ಅರಳಿ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ನಮ್ಮ ಜಿಲ್ಲೆಯಲ್ಲಿ ಬರಗಾಲ ಪರಿಸ್ಥಿತಿ ಇರುವುದರಿಂದ ಮುಂದಿನ ದಿನಗಳಲ್ಲಿ ತೊಂದರೆಯಾಗಬಹುದು. ಗೋದಾವರಿ ನದಿ ಜಲಾನಯನ ಪ್ರದೇಶದಲ್ಲಿ 22.4 ಟಿ.ಎಂ.ಸಿ. ಪ್ರಮಾಣದಷ್ಟು ನೀರು ಬಳಕೆಯಾಗುತ್ತಿಲ್ಲವಾದ್ದರಿಂದ ಅದರ ಸದ್ಬಳಕೆ ಮಾಡುವುದರ ಮುಖಾಂತರ ಸರ್ಕಾರ ಮುಂದಿನ ದಿನಗಳಲ್ಲಾಗುವ ದುರಂತವನ್ನು ತಪ್ಪಿಸಬೇಕು. ಮಹಾರಾಷ್ಟ್ರ ರಾಜ್ಯದಿಂದ ಹರಿದು ಬರುವ ನದಿ ನೀರು ನಮ್ಮ ರಾಜ್ಯದ ಮುಖಾಂತರ ಪಕ್ಕದ ಆಂಧ್ರಪ್ರದೇಶ ರಾಜ್ಯಕ್ಕೆ ಹೋಗುತ್ತದೆ. ಆದರೆ ಇದರಿಂದ ಬೀದರ್ ಜಿಲ್ಲೆಗೆ ಯಾವುದೇ ರೀತಿಯ ಉಪಯೋಗವಾಗುತ್ತಿಲ್ಲ. ಹರಿಯುವ ನೀರನ್ನು ಹಿಡಿದಿಟ್ಟುಕೊಳ್ಳುವ ಕಾರಣಕ್ಕಾಗಿ ಬ್ಯಾರೇಜ್‌ಗಳನ್ನು ನಿರ್ಮಿಸುವಂತಹ ಪ್ರಯತ್ನಗಳಾಗಬೇಕು. ಹೀಗೆ ಮಾಡಿದ್ದಲ್ಲಿ ಮುಂದಿನ ದಿನಗಳಲ್ಲಿ ಪ್ರಕೃತಿ ವಿಕೋಪದಿಂದ ಎದುರಾಗುವ ಅನಾಹುತವನ್ನು ತಪ್ಪಿಸಲಿಕ್ಕೆ ಸಾಧ್ಯವಾಗುತ್ತದೆ ಎಂದು ಹೇಳುತ್ತಾ, ನನ್ನ ಮಾತುಗಳನ್ನು ಮುಕ್ತಾಯಗೊಳಿಸುತ್ತೇನೆ.

**ಶ್ರೀ ಆರ್.ಧರ್ಮಸೇನ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ರಾಜ್ಯದ ನೆರೆಯ ಪರಿಸ್ಥಿತಿ ಬಗ್ಗೆ ಈಗಾಗಲೇ ಎಲ್ಲಾ ಸದಸ್ಯರುಗಳು ಬಹಳ ಚೆನ್ನಾಗಿ ಈ ಸದನದಲ್ಲಿ ಸರ್ಕಾರದ ಗಮನವನ್ನು ಸೆಳೆದಿದ್ದಾರೆಂದು ನಾನು ಭಾವಿಸುತ್ತೇನೆ. ಆಡಳಿತ ಪಕ್ಷದವರು ಎಂಟು ವರ್ಷ ಎಂಬುದಾಗಿ ಹೇಳಿದ್ದಾರೆ. ಆಡಳಿತ ಪಕ್ಷದಲ್ಲಿದ್ದಾಗ ಒಂದು ರೀತಿಯಾಗಿ ಹಾಗೂ ವಿರೋಧ ಪಕ್ಷದಲ್ಲಿದ್ದಾಗ ಮತ್ತೊಂದು ರೀತಿಯಾಗಿ ಮಾತನಾಡಿರುವುದಾಗಿ ಕೆಲವು ಸದಸ್ಯರು ಹೇಳಿದ್ದಾರೆ. ನಾನು ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ಪಕ್ಷವನ್ನು ಪ್ರತಿನಿಧಿಸುತ್ತೇನೆ. ನಮ್ಮ ಪಕ್ಷವು ನೀಡಿರುವ ವರದಿಯು ಸುಳ್ಳು ಎಂಬುದಾಗಿ ಆಡಳಿತ ಪಕ್ಷದವರು ಹೇಳಿದ್ದಾರೆ. ಆದರೆ, ಅದನ್ನು ನಾವು ಒಪ್ಪಿಕೊಳ್ಳುತ್ತೇವೆ. ನಾವು ಜನರ ಪರವಾಗಿ ಹೇಳಿದ್ದೇವೆ. ಹೀಗಾಗಿ ಮುಂದಿನ ದಿನಗಳಲ್ಲಿ ಜನರು ತಮ್ಮ ತೀರ್ಮಾನವನ್ನು ತಿಳಿಸುತ್ತಾರೆ. ಜವಾಬ್ದಾರಿಯುತವಾದ ರಾಜ್ಯ ಸರ್ಕಾರವು ನೀಡಿರುವ ವರದಿಯನ್ನು ಕೇಂದ್ರದ NDRF (National Disaster Response Fund) ನವರು ಸುಳ್ಳು ಎಂದು ತಿರಸ್ಕಾರ ಮಾಡಿದ್ದಾರೆ. ರಾಜ್ಯ ಸರ್ಕಾರವು ಯಾವ ಕಾರಣಕ್ಕಾಗಿ ಸುಳ್ಳನ್ನು ಹೇಳಿದೆ ಎನ್ನುವುದು ನನ್ನ ಪ್ರಶ್ನೆಯಾಗಿದೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಇದನ್ನು ನೋಡಿದಾಗ, ರಾಜ್ಯ ಸರ್ಕಾರಕ್ಕೆ ಯಾವ ರೀತಿಯಾದ ಬದ್ಧತೆ ಇದೆ? ಯಾವ ಅಧಿಕಾರಿಯಿಂದಾಗಿ ತಪ್ಪು ಆಗಿದೆ? ತಪ್ಪಿತಸ್ಥರ ವಿರುದ್ಧ ಯಾವ ರೀತಿಯಾದ ಕ್ರಮಗಳನ್ನು ತೆಗೆದುಕೊಳ್ಳಲಾಗಿದೆ? ಸುಳ್ಳು ವರದಿ ತಯಾರಿಕೆಗೆ ಯಾರು ಕಾರಣಕರ್ತರು? ರಾಜ್ಯದ ಮಂತ್ರಿಗಳ ಅಥವಾ ವರದಿ ತಯಾರಿಸಿದ ಅಧಿಕಾರಿಗಳ ವಿರುದ್ಧ ಸರ್ಕಾರವು ಕ್ರಮ ತೆಗೆದುಕೊಳ್ಳುತ್ತದೆಯೇ? ಈ ತಪ್ಪಿನ ಹೊಣೆ ಹೊರುವವರು ಯಾರು? ಇವತ್ತಿನ ದಿವಸ ತಪ್ಪು ವರದಿ ಸಲ್ಲಿಕೆಯಿಂದಾಗಿ ರಾಜ್ಯದ ಗೌರವಕ್ಕೆ ಚ್ಯುತಿ ಬಂದಿದೆ. ವಿರೋಧ ಪಕ್ಷದವರು ವರದಿಯನ್ನು ನೀಡಿದರೆ, ಅದು ಸರಿಯಿಲ್ಲ ಎಂಬುದಾಗಿ ಆಡಳಿತ ಪಕ್ಷದವರು ಹೇಳುತ್ತಾರೆ. ಅದೇ ವರದಿಯನ್ನು ಒಂದು ಸಂಸ್ಥೆಯು ತಿರಸ್ಕರಿಸಿದರೆ, ರಾಜ್ಯ ಸರ್ಕಾರವು ಇದರ ಬಗ್ಗೆ ಯಾವುದೇ ಚಕಾರವನ್ನು ಎತ್ತದೇ ಸುಮ್ಮನೆ ಕುಳಿತುಕೊಂಡಿದೆ. ಆಡಳಿತ ಪಕ್ಷದವರು ಎಂತಹ ಆಸಾಮಿಗಳಾಗಿದ್ದಾರೆ. ಸಂಬಂಧಪಟ್ಟ ಅಧಿಕಾರಿಗಳು ಅಥವಾ ಅಧಿಕಾರದಲ್ಲಿರುವವರು ಈ ವಿಚಾರದಲ್ಲಿ ಏನು ಮಾಡುತ್ತಿದ್ದಾರೆ ಎಂಬ ನೈತಿಕ ಪ್ರಶ್ನೆಯನ್ನು ಸರ್ಕಾರವು ಹಾಕಿಕೊಳ್ಳಬೇಕಲ್ಲವೇ? ಈ ವಿಚಾರದಲ್ಲಿ ನಾನು ರಾಜ್ಯದ ಜನತೆಯ ಕ್ಷಮೆಯನ್ನು 2-3 ಬಾರಿ ಮಾಧ್ಯಮಗಳ ಮುಖಾಂತರ ಕೇಳಿದ್ದೇನೆ. ಕೇಂದ್ರದಿಂದ ನೆರೆ ಪರಿಹಾರ ತಂದುಕೊಳ್ಳುವಲ್ಲಿ ರಾಜ್ಯವು ವಿಫಲವಾಗಿರುವುದರಿಂದ ನಾನು ಈ ಸದನದ ಮುಖಾಂತರ ರಾಜ್ಯದ ಜನರ ಕ್ಷಮೆಯನ್ನು ಮತ್ತೊಂದು ಬಾರಿ ಕೇಳಲು ಇಚ್ಛಿಸುತ್ತೇನೆ. ವಿರೋಧ ಪಕ್ಷದವರು ಹೇಳಿದರೂ ಸಹ ಆಡಳಿತ ಪಕ್ಷದವರು ಕೇಳುವುದಿಲ್ಲ. ಕೇಂದ್ರದಲ್ಲಿ ಹಾಗೂ ರಾಜ್ಯದಲ್ಲಿ ಸರ್ಕಾರ ನಡೆಸಲು ಜನರು ಬಿ.ಜೆ.ಪಿ.ಗೆ ಅವಕಾಶ ನೀಡಿದ್ದಾರೆ. ಆದರೆ ಸರ್ಕಾರಕ್ಕೆ ಜನರ ಸಂಕಷ್ಟಕ್ಕೆ ಸ್ಪಂದಿಸುವ ಕರುಣೆ, ಹೃದಯವಂತಿಕೆ, ಕಣ್ಣು, ಕಿವಿಗಳಿಲ್ಲ. ನಾವು ಸರ್ಕಾರಕ್ಕೆ ಹೆಚ್ಚಿನ ಒತ್ತಡ ಹೇರುವುದಿಲ್ಲ. ಯಾವುದೇ ಪಕ್ಷ ಅಧಿಕಾರದಲ್ಲಿರಲಿ, ಜನರಿಗೆ ಅನುಕೂಲವಾಗುವ ಉತ್ತಮ ರೀತಿಯ ಕೆಲಸಗಳನ್ನು ಮಾಡಬೇಕೆಂದು ಅಪೇಕ್ಷೆ ಇರುತ್ತದೆ. ಯಾರಿಗೂ ಸಹ ಪಲಾಯನ ಮಾಡುವ ಉದ್ದೇಶವಿರುವುದಿಲ್ಲ. ಅಧಿಕಾರದಲ್ಲಿರುವ ಪಕ್ಷವು ಜನರ ಕಷ್ಟಗಳಿಗೆ ಯಾವ ರೀತಿಯಾಗಿ ಸ್ಪಂದಿಸಿ ನಡೆದುಕೊಳ್ಳುತ್ತದೆ ಎನ್ನುವುದು ಬಹಳ ಮುಖ್ಯವಾಗುತ್ತದೆ. ಬರಗಾಲ ಹಾಗೂ ನೆರೆ ಹಾವಳಿಗಳಂತಹ ಪರಿಸ್ಥಿತಿಗಳಲ್ಲಿ ಆಡಳಿತ ಪಕ್ಷದ ನಡೆಗಳನ್ನು ತಿದ್ದಿಕೊಳ್ಳಬೇಕೆಂದು ನಾನು ಹೇಳುತ್ತೇನೆ. ನೆರೆ ಹಾವಳಿಯ ಬಗ್ಗೆ ಕೇಂದ್ರಕ್ಕೆ ತಪ್ಪು ವರದಿಯನ್ನು ನೀಡುವುದರ ಮುಖಾಂತರ ರಾಜ್ಯ ಸರ್ಕಾರವನ್ನು ತಪ್ಪಿತಸ್ಥರನ್ನಾಗಿ ಮಾಡಿದ್ದಾರೆ ಅಂತಹವರ ವಿರುದ್ಧ ಸೂಕ್ತ ಕ್ರಮ ತೆಗೆದುಕೊಳ್ಳಬೇಕೆಂದು ನಾನು ಈ ಸದನದ ಮುಖಾಂತರ ಹೇಳುತ್ತೇನೆ. ಒಂದು ವೇಳೆ ಈ ಬಾರಿ ಸೂಕ್ತ ಕ್ರಮ ತೆಗೆದುಕೊಂಡಿಲ್ಲವೆಂದಾದರೆ, ಮುಂದಿನ ದಿನಗಳಲ್ಲಿ ಮತ್ತೂ ಹೆಚ್ಚಿನ ತಪ್ಪು ವರದಿಗಳು ಕೇಂದ್ರ ಸರ್ಕಾರಕ್ಕೆ ಹೋಗುತ್ತವೆ. ನನಗೆ ಮಾತನಾಡಲು ಅವಕಾಶ ನೀಡಿದ್ದಕ್ಕಾಗಿ ವಂದನೆಗಳನ್ನು ಸಲ್ಲಿಸುತ್ತಾ ನನ್ನ, ಮಾತುಗಳನ್ನು ಮುಗಿಸುತ್ತೇನೆ.

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಎಂ.ಸಿ.ವೇಣುಗೋಪಾಲ್(ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಮಾತನಾಡಲು ನನಗೆ ಕಡೆಯದಾಗಿ ಅವಕಾಶ ನೀಡಿದ್ದಕ್ಕಾಗಿ ಧನ್ಯವಾದಗಳನ್ನು ತಿಳಿಸುತ್ತೇನೆ. ನಾಳೆಯ ದಿನ ಮಾನ್ಯ ಸಭಾಪತಿಯವರು ನನಗೆ ಮಾತನಾಡಲು ಅವಕಾಶ ನೀಡಿದರೆ ನಾನು ನಾಳೆ ಮಾತನಾಡುತ್ತೇನೆ. ಏಕೆಂದರೆ, ಈಗ ನನ್ನ ಮಾತುಗಳನ್ನು ಕೇಳುವಂತಹ ಸ್ಥಿತಿಯಲ್ಲಿ ಯಾರೂ ಸಹ ಇಲ್ಲ. ಇವತ್ತು ನನಗೆ ಎರಡು ನಿಮಿಷಗಳ ಕಾಲಾವಕಾಶವನ್ನು ನೀಡಿದ್ದಾರೆ. ಆದರೆ ಅದು ನನಗೆ ಸಾಕಾಗುವುದಿಲ್ಲ. ನನಗೆ ನಾಳೆಯ ದಿನ 10 ನಿಮಿಷಗಳ ಕಾಲಾವಕಾಶವನ್ನು ನೀಡಬೇಕೆಂದು ಕೋರುತ್ತೇನೆ. ದಯಮಾಡಿ ನನಗೆ ನಾಳೆಯ ದಿನ ಮಾತನಾಡಲು ಅವಕಾಶವನ್ನು ನೀಡಿ. ಮಾನ್ಯ ಮಂತ್ರಿಗಳಾದ ಸಿ.ಸಿ.ಪಾಟೀಲ್‌ರವರು ವಿರೋಧ ಪಕ್ಷದವರು ಕೇವಲ ಬಾಯಿ ಚಪಲಕ್ಕಾಗಿ ಮಾತನಾಡುತ್ತಾರೆಂದು ಈಗಾಗಲೇ ಹೇಳಿದ್ದಾರೆ. ಆದರೆ ಕೇವಲ ಬಾಯಿ ಚಪಲಕ್ಕಾಗಿ ಅಲ್ಲ ನಾವು ನಿಜವಾಗಿಯೂ ಸಹ ನೆರೆ ಸಂತ್ರಸ್ತರ ಪರವಾಗಿ ಕಾಳಜಿಯನ್ನು ಹೊಂದಿದ್ದೇವೆ ಎನ್ನುವುದನ್ನು ತೋರಿಸಿ ಕೊಡಬೇಕಾಗಿದೆ. ಇವತ್ತಿನ ದಿವಸ ನಾನು ಕೇವಲ ಎರಡು ನಿಮಿಷಗಳ ಕಾಲ ಮಾತನಾಡಿದರೆ, ಮಾನ್ಯ ಮಂತ್ರಿಗಳು ಹೇಳಿದ್ದು ನಿಜವಾಗಿ ಬಿಡುತ್ತದೆ. ಮಾನವೀಯತೆ ದೃಷ್ಟಿಯಿಂದ ನೆರೆ ಸಂತ್ರಸ್ತರಿಗೆ ನಾವು ಗೌರವ ಕೊಡಬೇಕಾಗುತ್ತದೆ. ಈ ಎಲ್ಲಾ ಕಾರಣಗಳಿಗಾಗಿ ನನಗೆ ನಾಳೆಯ ದಿನ ಮಾತನಾಡಲು 10 ನಿಮಿಷಗಳ ಕಾಲಾವಕಾಶವನ್ನು ನೀಡಬೇಕೆಂದು ಕೋರುತ್ತೇನೆ.

**ಸಭಾಪತಿಯವರು:–** ಮಾನ್ಯ ವೇಣುಗೋಪಾಲ್‌ರವರೇ, ನೆರೆ ಹಾವಳಿಯ ವಿಚಾರದಲ್ಲಿ ಮಾತನಾಡಲು ನೀವು ಸಿದ್ಧರಿಲ್ಲವೇ?

**ಶ್ರೀ ಎಂ.ಸಿ.ವೇಣುಗೋಪಾಲ್:–** ಮಾನ್ಯ ಸಭಾಪತಿಯವರೇ, ನಾನು ತಯಾರಿದ್ದೇನೆ.

**ಸಭಾಪತಿಯವರು:–** ಹಾಗಿದ್ದಲ್ಲಿ ತಾವು ಮಾತನಾಡಲು ಪ್ರಾರಂಭಿಸಿ.

**ಶ್ರೀ ಎಂ.ಸಿ.ವೇಣುಗೋಪಾಲ್:–** ಮಾನ್ಯ ಸಭಾಪತಿಯವರೇ, ನನಗೆ ಈಗ ನೀಡಿರುವುದಕ್ಕಿಂತ ಹೆಚ್ಚು ಕಾಲಾವಕಾಶ ಬೇಕೆಂದು ಕೋರುತ್ತಿದ್ದೇನೆ. ಹೀಗಾಗಿ ನಾಳೆಯ ದಿನ ನನಗೆ ಮಾತನಾಡಲು ಅವಕಾಶ ನೀಡಿ.

**ಸಭಾಪತಿಯವರು:–** ಈಗ ಸದನವನ್ನು ನಾಳೆ ಬೆಳಿಗ್ಗೆ 11 ಗಂಟೆಯವರೆಗೆ ಮುಂದೂಡುತ್ತಿದ್ದೇನೆ.

**(ಸದನವು ರಾತ್ರಿ 8 ಗಂಟೆ 56 ನಿಮಿಷಕ್ಕೆ ಮುಕ್ತಾಯಗೊಂಡು**

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಪುನಃ ದಿನಾಂಕ 12 ನೇ ಅಕ್ಟೋಬರ್ ಮಾಹೆ 2019 ರ ಶನಿವಾರದಂದು ಬೆಳಿಗ್ಗೆ 11 ಗಂಟೆಗೆ ಸೇರಲು ನಿಶ್ಚಯಿಸಿತು)**

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "